ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ
ಸಂಖ್ಯೆ — ೪೨



ಶ್ರೀಮದಾದಿಕವಿವಾಲ್ಮೀಕಿ ವಿರಚಿತಂ

ಶ್ರೀ

ಆನಂದರಾಮಾಯಣಂ

ನಾಲ್ಕನೆಯ ಭಾಗ

(ಸಂಸ್ಕೃತ ಮೂಲ, ಕನ್ನಡದ ಅರ್ಥಾನುವಾದ ವಿವರಣೆಗಳೊಡನೆ)

ವಿವಾಹಕಾಂಡ (೧—೯ ಸರ್ಗಗಳು)

ರಾಜ್ಯಕಾಂಡ (ಪೂರ್ವಾರ್ಧ) (೧—೧೨ ಸರ್ಗಗಳು)

ಅನುವಾದಕ:
ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ
ಸಾಹಿತ್ಯ ವಿದ್ವಾನ್
ಕನ್ನಡ ಪಂಡಿತ (ಮೈಸೂರು) ಕನ್ನಡ ವಿದ್ವಾನ್ (ಮದ್ರಾಸು)

[illegible], ಮೈಸೂರು.

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ — ೪೨



ಶ್ರೀಮದಾದಿಕವಿವಾಲ್ಮೀಕಿ ವಿರಚಿತಂ

ಶ್ರೀ
ಆನಂದರಾಮಾಯಣಂ

ನಾಲ್ಕನೆಯ ಭಾಗ

(ಸಂಸ್ಕೃತ ಮೂಲ, ಕನ್ನಡದ ಅರ್ಥಾನುವಾದ ವಿವರಣೆಗಳೊಡನೆ)

ವಿವಾಹಕಾಂಡ (೧—೯ ಸರ್ಗಗಳು)

ರಾಜ್ಯಕಾಂಡ (ಪೂರ್ವಾರ್ಧ) (೧—೧೨ ಸರ್ಗಗಳು)

ಅನುವಾದಕ:

ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ

ಸಾಹಿತ್ಯ ವಿದ್ವಾನ್

ಕನ್ನಡ ಪಂಡಿತ (ಮೈಸೂರು) ಕನ್ನಡ ವಿದ್ವಾನ್ (ಮದ್ರಾಸು)

ಶ್ರೀ ಹನುಮಾನ್ ಪವರ್ ಪ್ರೆಸ್, ಮೈಸೂರು.

೧೯೪೮

॥ ಶ್ರೀರಸ್ತು ॥

ಮುನ್ನುಡಿ

ಈ ಆನಂದರಾಮಾಯಣದ ನಾಲ್ಕನೆಯ ಭಾಗವು ವಿವಾಹಕಾಂಡ, ರಾಜ್ಯ ಕಾಂಡದ ಪೂರ್ವಾರ್ಧಗಳನ್ನೊಳಗೊಂಡು ಪ್ರಕಾಶಿತವಾಗಿರುವುದು.

ಇದರಲ್ಲಿ ರಾಮನು ತನ್ನ ಮಕ್ಕಳಿಗೂ, ತಮ್ಮಂದಿರ ಮಕ್ಕಳಿಗೂ ವಿವಾಹ ಕಾರ್ಯಗಳನ್ನು ಅತ್ಯಂತ ವೈಭವದಿಂದ ನೆರವೇರಿಸಿದುದು ಬಹು ಸ್ವಾರಸ್ಯವಾಗಿ ವರ್ಣಿತವಾಗಿದೆ. ಈ ವರ್ಣನೆಯಲ್ಲಿ ಆ ಮಕ್ಕಳುಗಳು ಪರಾಕ್ರಮದಲ್ಲಿ ಯಾವ ಭಾಗದಲ್ಲಿ ಯಾರಿಗೂ ಕಡಿಮೆಯಾದವರಲ್ಲವೆಂಬುದು ಖಚಿತವಾಗಿ ತಿಳಿಯುತ್ತದೆ. ಅಲ್ಲದೆ ಆ ವಿವಾಹಗಳು ಅವರವರ ಅಂತಸ್ತುಗಳಿಗೂ ಅನುಗುಣವಾಗಿ ಇರುತ್ತವೆ ಎಂಬುದೂ ತಿಳಿಯಬರುತ್ತದೆ.

ರಾಮನೂ ಅವನ ತಮ್ಮಂದಿರೂ ಏಕಪತ್ನೀವ್ರತಸ್ಥರಾಗಿದ್ದರೂ ಅವರು ತಮ್ಮ ಮಕ್ಕಳುಗಳಿಗೆಲ್ಲಾ ನಾಲ್ಕಾರು ಮದುವೆಗಳನ್ನು ಮಾಡಿರುವುದು ಸ್ವಲ್ಪ ಗಮನಾರ್ಹವಾದುದು. ಅಣ್ಣತಮ್ಮಂದಿರು ನಾಲ್ಕು ಜನಗಳೂ ಒಟ್ಟಿಗಿರುತ್ತ ಆ ಮಕ್ಕಳನ್ನು ತಮ್ಮಗಳ ಬಳಿಯಲ್ಲಿಯೇ ಇಟ್ಟುಕೊಂಡಿರದೆ ಬೇರೆಬೇರೆಯಾಗಿ ಬೇರೆಬೇರೆ ರಾಜ್ಯಗಳಲ್ಲಿಟ್ಟಿರುವುದು ರಾಜ್ಯದೃಢೀಕರಣದೃಷ್ಟಿಯಿಂದ ನೋಡಿದರೆ ನೀತಿಶಾಸ್ತ್ರಕ್ಕನುಗುಣವಾಗಿದ್ದರೂ ಸಂಸಾರದಲ್ಲಿ ಒಡಕುಬಾರದಂತೆ ಮಾಡಲು ಹಾಗೆ ಬೇರೆಯಾಗಿಟ್ಟರೆಂಬ ಹೇಳಿಕೆಯಿಂದ ತಪ್ಪಿಸಿಕೊಳ್ಳುವಂತಿಲ್ಲ.

ರಾಜ್ಯಕಾಂಡದ ಪೂರ್ವಾರ್ಧದಲ್ಲಂತೂ ಜನಗಳನ್ನು ಕೃತಾರ್ಥರನ್ನಾಗಿ ಮಾಡಲು ರಾಮಸಹಸ್ರನಾಮವು ಉಕ್ತವಾಗಿರುವುದಲ್ಲದೆ ಕೃಷ್ಣಾವತಾರಕ್ಕೆ ಉಪಷ್ಟಂಭಕಗಳಾದ ಅನೇಕ ವಿಷಯಗಳು ವರ್ಣಿತವಾಗಿವೆ.

ಶ್ರೀರಾಮನು ತಾನು ಏಕಪತ್ನೀವ್ರತವನ್ನು ಕಾಪಾಡಿಕೊಳ್ಳಲು ಎಷ್ಟು ತೊಂದರೆಗಳು ಬಂದರೂ ನಿರ್ವಹಿಸಿದನೆಂಬುದು ಅವನ ಇಂದ್ರಿಯನಿಗ್ರಹದ ಬಲವನ್ನು ವ್ಯಕ್ತಪಡಿಸುತ್ತದೆ.

ಶ್ರೀ ರಾಮನು ಕೀಳುಪ್ರಾಣಿಗಳ ವಿಷಯದಲ್ಲಿಯೂ ಬಹು ದಕ್ಷತೆಯಿಂದ ನ್ಯಾಯವನ್ನು ನಿರ್ವಹಿಸುತ್ತಿದ್ದನೆಂಬುದಕ್ಕೆ ನಾಯಿ, ಕಾಗೆ, ಗೂಬೆ, ಹದ್ದುಗಳು ನಿದರ್ಶನವಾಗಿ ನಿಂತಿವೆ.

ರಾಮನು ತನ್ನ ಬಾಲ್ಯದಲ್ಲಿಯೇ ರಾಕ್ಷಸರನ್ನು ನಿಗ್ರಹಿಸಿ ನಾಶಪಡಿಸಿದ್ದರೂ ಕುಂಭಕರ್ಣನ ಮಕ್ಕಳು ಪ್ರಬಲರಾಗಿ ತೊಂದರೆ ಕೊಟ್ಟುದೂ, ಅವರನ್ನು ಸೀತೆಯು ನಿಗ್ರಹಿಸಿದುದೂ, ರಾಮನ ಪರಾಕ್ರಮಕ್ಕೆ ಹಾನಿಯನ್ನು ತರದಂತೆ ಆ ರಾಕ್ಷಸರು ರಾಮನನ್ನು ನಿಗ್ರಹಿಸಲು ಎಂತಹ ವರಗಳನ್ನು ಪಡೆದಿದ್ದರೆಂಬುದರ ವಿವರವು ಕಾರಣಗಳೊಡನೆ ಚಿತ್ತಾಕರ್ಷಣೀಯವಾಗಿ ವರ್ಣಿತವಾಗಿದೆ.

ವಿಷಯಗಳು ಬೇರೆ ಬೇರೆ ಭಾಷೆಗಳಲ್ಲಿ ಅನೇಕವಾಗಿದ್ದು ಅವು ಹಳೆಯವಾಗಿದ್ದರೂ ನಮಗೆ ತಿಳಿಯದವುಗಳಾಗಿವೆ. ಇಂತಹ ವಿಷಯಗಳನ್ನು ಕನ್ನಡಕ್ಕೆ ಪರಿವರ್ತನೆ ಮಾಡಿಸಿ ಮಾತೃಭಾಷೆಯಾದ ಕನ್ನಡಕ್ಕೆ ಪ್ರೋತ್ಸಾಹವನ್ನು ನೀಡುತ್ತ ಕನ್ನಡಿಗರಿಗೆ ಹೆಚ್ಚಾದ ಅರಿವು ಬೆಳಕನ್ನುಂಟುಮಾಡುತ್ತ ನಮ್ಮನ್ನಾಳುತ್ತಲಿರುವ ಶ್ರೀಮನ್ಮಹಾರಾಜ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ.** ಮಹಾಪ್ರಭುಗಳವರಿಗೆ ಶ್ರೀರಾಮಚಂದ್ರನು ಪುತ್ರಪೌತ್ರಾಭಿವೃದ್ಧಿಯನ್ನೂ ಆಯುರಾರೋಗ್ಯಾದಿ ಸಕಲ ಸನ್ಮಂಗಳವನ್ನೂ ದಯಪಾಲಿಸಿ ಕಾಪಾಡಲೆಂದು ಅನನ್ಯಮನಸ್ಕನಾಗಿ ಪ್ರಾರ್ಥಿಸುತ್ತೇನೆ.

ಮೈಸೂರು,
10—2—1948

ಅನುವಾದಕ,
ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದಲ್ಲಿ ವಿವಾಹಕಾಂಡದ ವಿಷಯಾನುಕ್ರಮಣಿಕೆ.

ಪುಟಸಂಖ್ಯೆ

ಒಂದನೆಯ ಸರ್ಗವು

ಎರಡನೆಯ ಸರ್ಗವು

ಮೂರನೆಯ ಸರ್ಗವು

|| ಶ್ರೀರಸ್ತು ||

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಪೂರ್ವಾರ್ಧದ ವಿಷಯಾನುಕ್ರಮಣಿಕೆ.

ಪುಟಸಂಖ್ಯೆ

ಒಂದನೆಯ ಸರ್ಗವು

ಪುಟಸಂಖ್ಯೆ

ಹನ್ನೆರಡನೆಯ ಸರ್ಗವು

|| ಶ್ರೀರಸ್ತು ||

ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀಮದಾನಂದ ರಾಮಾಯಣಂ

|| ವಿವಾಹಕಾಂಡಃ ಷಷ್ಠಃ ಪ್ರಾರಭ್ಯತೇ ||

ಪ್ರಥಮಃ ಸರ್ಗಃ

|| ಶ್ರೀರಾಮದಾಸ ಉವಾಚ ||

ಅಥ ರಾಮಸ್ಸಭಾಮಧ್ಯೇ ಮಂತ್ರಿಭಿಃ ಪರಿವೇಷ್ಟಿತಃ |
ತಸ್ಥೌ ಸಿಂಹಾಸನೇ ರಮ್ಯೇ ವರಚ್ಛತ್ರೋಪಶೋಭಿತಃ || ೧ ||

ಏತಸ್ಮಿನ್ನಂತರೇ ತತ್ರ ಕಶ್ಚಿದ್ದೂತಸ್ಸಮಾಯಯೌ |
ನತ್ವಾ ಸಭಾಯಾಂ ಶ್ರೀರಾಮಂ ಸ್ವಾಮಿವೃತ್ತಂ ನ್ಯವೇದಯತ್ || ೨ ||

ಶ್ರೀಮದಾನಂದರಾಮಾಯಣದ ಆರನೆಯದಾದ ವಿವಾಹಕಾಂಡದಲ್ಲಿ
ಮೊದಲನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು-ಒಂದುಸಾರಿ ಶ್ರೀರಾಮನು ಮಂತ್ರಿಗಳೊಡನೆ ಸಭೆಯಲ್ಲಿ ರಮ್ಯವಾದ ಛತ್ರಿಯಿಂದ ಕೂಡಿರುವ ಉತ್ತಮವಾದ ಸಿಂಹಾಸನದಲ್ಲಿ ಕುಳಿತಿದ್ದನು.

೨. ಆ ಸಂದರ್ಭದಲ್ಲಿ ಅಲ್ಲಿಗೆ ಒಬ್ಬ ದೂತನು ಬಂದನು. ಅವನು ಆ ಸಭೆಯಲ್ಲಿ ಶ್ರೀರಾಮನಿಗೆ ನಮಸ್ಕರಿಸಿ ತನ್ನ ಸ್ವಾಮಿಯ ವಿಷಯವನ್ನು ಇಂತೆಂದು ವಿಜ್ಞಾಪಿಸಿಕೊಂಡನು.

ಪೂರ್ವದೇಶಾಧಿಪತಿನಾ ರಾಜ್ಞಾ ಶ್ರೀಭೂರಿಕೀರ್ತಿನಾ ।
ಪ್ರೇಷಿತೋಽಸ್ಮಿ ಮಹಾರಾಜ ದ್ರಷ್ಟುಂ ತ್ವತ್ಪಾದಪಂಕಜಂ ॥ ೩ ॥

ಪತ್ರಂ ಪಠಿತ್ವಾ ಶ್ರೀರಾಮ ಕಾರ್ಯಂ ಮತ್ಸ್ವಾಮಿನೇ ಕೃಪಾ ।
ಇತ್ಯುಕ್ತ್ವಾ ರಾಮದೂತಸ್ಯ ಕರೇ ಪತ್ರಂ ನ್ಯವೇದಯತ್ ॥ ೪ ॥

ರಾಮದೂತೋಽಪಿ ಸೌಮಿತ್ರೇಃ ಪುರಸ್ತಾತ್ಪತ್ರಮಾದರಾತ್ ।
ಸ್ಥಾಪಯಾಮಾಸ ವೇಗೇನ ನತ್ವಾ ತಸ್ಥೌ ನಿಜಸ್ಥಲೇ ॥ ೫ ॥

ತತಸ್ತು ಲಕ್ಷ್ಮಣಃ ಪತ್ರಂ ಪರಬಂಧನವೇಷ್ಟಿತಂ ।
ಸಮುದ್ಘಾಟ್ಯ ರಾಘವಾಗ್ರೇ ಪಪಾಠ ಮಂಜುಲಸ್ವರಃ ॥ ೬ ॥

ಹೇಮಕೃತ್ರಿಮಪುಷ್ಪಾದ್ಯೈರಂಕಿತಂ ಕುಂಕುಮಾನ್ವಿತಂ ।
ದರ್ಶನಾದೇವ ಮಾಂಗಲ್ಯಸೂಚಕಂ ತೋಷಕಾರಕಂ ॥ ೭ ॥

---

೩. ಎಲೈ ಪ್ರಭುವೆ! ಪೂರ್ವದೇಶಾಧಿಪತಿಯಾದ ಭೂರಿಕೀರ್ತಿ ಎಂಬ ರಾಜನು ನಿನ್ನ ಪಾದಪಂಕಜವನ್ನು ನೋಡಿಕೊಂಡು ಬರಲು ನನ್ನನ್ನು ಕಳುಹಿಸಿದ್ದಾನೆ.

೪. ನನ್ನ ಸ್ವಾಮಿಯು ಪತ್ರವನ್ನು ಬರೆದುಕೊಟ್ಟಿದ್ದಾನೆ. ಅದನ್ನು ಓದಿಕೊಂಡನುಗ್ರಹಿಸಬೇಕು. ಎಂಬುದಾಗಿ ಹೇಳಿ ಆ ದೂತನು ರಾಮದೂತನ ಕೈಗೆ ಭೂರಿಕೀರ್ತಿಯ ಪತ್ರವನ್ನು ಕೊಟ್ಟನು.

೫. ಶ್ರೀರಾಮದೂತನು ಆ ಪತ್ರವನ್ನು ತೆಗೆದುಕೊಂಡು ಬೇಗನೆ ಅದನ್ನು ಲಕ್ಷ್ಮಣನ ಮುಂದಿಟ್ಟು ನಮಸ್ಕರಿಸಿ ತನ್ನ ಜಾಗಕ್ಕೆ ಹೋದನು.

೬. ಮುದ್ರೆ ಮುಂತಾದುವುಗಳಿಂದ ಮುದ್ರಿಸಿರುವ ಆ ಪತ್ರವನ್ನು ಸೌಮಿತ್ರಿಯು ಒಡೆದು ರಾಮನ ಎದುರಿಗೆ ಮಂಜುಳಸ್ವರದಿಂದ ಅದನ್ನು ಓದಿದನು.

೭. ಆ ಪತ್ರಕ್ಕೆ ಬಂಗಾರದ ಹೂವನ್ನು ಚಿತ್ರಿಸಿದ್ದಿತು. ಕುಂಕುಮವನ್ನು ಹಚ್ಚಿಸಿದ್ದಿತು. ಅದನ್ನು ನೋಡಿದಕೂಡಲೇ ಮಂಗಳವನ್ನು ಸೂಚಿಸುವಂತಿದ್ದು ಸಂತೋಷವನ್ನುಂಟುಮಾಡುತ್ತಿದ್ದಿತು.

ಉವಾಚ ಪತ್ರಲಿಖಿತೈರಕ್ಷರೈರ್ಲಕ್ಷ್ಮಣಶ್ಶನೈಃ ।
ಸ್ಥಿತಃ ಶ್ರೀರಾಮಪುರತೋ ವರಸಿಂಹಾಸನಾಂತಿಕೇ ॥ ೮ ॥

ಶ್ರೀವರ್ಗ ಶ್ರೀರಾಘವೇಂದ್ರೋ ಜಯತು
ದಶಶಿರಚ್ಛೇದನಾರ್ಥಂ ಜಗತ್ಯಾಂ ।
ಕೌಶಲ್ಯಾಯಾಂ ನೃಪೇಶೋ
ದಶರಥತನಯಶ್ಚೇತಿ ನಾಮ್ನಾವತೀರ್ಣಃ ॥
ತಸ್ಯಾಹಂ ಭೂರಿಕೀರ್ತಿಃ ಪದಜಲರುಹ
ಯೋರ್ಗಂಧಮಾಘ್ರಾತುಕಾಮಃ ।
ಕೃತ್ವಾ ಸ್ವೀಯಂ ಶಿರಸ್ತು ಭ್ರಮರ
ವದನಿಶಂ ಪ್ರಾರ್ಥನಾಂ ಪ್ರಾರ್ಥಯಾಮಿ ॥ ೯ ॥

ಮಮ ಪೌತ್ರ್ಯಾವುಭೇ ರಾಮ ಚಂಪಿಕಾ ಸುಮತೀತಿ ಚ ।
ತಯೋಸ್ಸ್ವಯಂ ವರಾರ್ಥಂ ಸಮಾಯಾಂತಿ ಬಹವೋ ನೃಪಾಃ ॥ ೧೦ ॥

---

೮. ಪತ್ರದಲ್ಲಿ ಬರೆದಿರುವ ಅಕ್ಷರಗಳನ್ನು ಲಕ್ಷ್ಮಣನು ರಾಮನ ಸಿಂಹಾಸನದ ಬಳಿಯಲ್ಲಿ ನಿಂತುಕೊಂಡು ಅವನೆದುರಿಗೆ ನಿಧಾನವಾಗಿ ಇಂತೆಂದು ಓದಿದನು.

೯. ದಶಶಿರನಾದ ರಾವಣನನ್ನು ಕೊಲ್ಲುವುದಕ್ಕೋಸ್ಕರವಾಗಿ ಜಗತ್ತಿನಲ್ಲಿ ಕೌಸಲ್ಯೆಯ ಹೊಟ್ಟೆಯಲ್ಲಿ ದಶರಥನ ಮಗನೆಂದು ಹುಟ್ಟಿದ ಶ್ರೀ ರಾಘವೇಂದ್ರನಿಗೆ ಜಯವಾಗಲಿ. ಅಂತಹ ಶ್ರೀರಾಮನ ಪಾದಪದ್ಮಗಳಲ್ಲಿನ ವಾಸನೆಯನ್ನು ಆಘ್ರಾಣಿಸಲು ಭೂರಿಕೀರ್ತಿಯಾದ ನಾನು ನನ್ನ ತಲೆಯನ್ನು ಭ್ರಮರದಂತೆ ಯಾವಾಗಲೂ ಇಡುತ್ತ ಒಂದು ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ.

೧೦. ಎಲೈ ರಾಮನೆ ನನಗೆ ಚಂಪಿಕೆ, ಸುಮತಿ ಎಂಬವರಿಬ್ಬರು ಮೊಮ್ಮಕ್ಕಳಿದ್ದಾರೆ. ಅವರಿಬ್ಬರಿಗೂ ಸ್ವಯಂವರವು ನಡೆಯತಕ್ಕದ್ದಾಗಿದೆ. ಅದಕ್ಕೋಸ್ಕರ ಬಹಳಜನ ರಾಜರು ಬರುತ್ತಿದ್ದಾರೆ.

ಬಂಧುಪುತ್ರೈರ್ಬಂಧುಭಿಸ್ತ್ವಂ ಸ್ವಸುತಾಭ್ಯಾಂ ಚ ಮಂತ್ರಿಭಿಃ ।
ಸುಹೃಜ್ಜನೈಸ್ತಥಾ ಪೌರೈಸ್ಸಾವರೋಧಸ್ಸ್ವಸೇನಯಾ ॥ ೧೧ ॥

ಆಗಚ್ಛಸ್ವ ಮಮ ಪುರಂ ಯದಿ ಕೃತ್ವಾ ಮಹತ್ಕೃಪಾಂ ।
ವಿಫಲಾಂ ಪ್ರಾರ್ಥನಾಂ ಮೇ ತ್ವಂ ಮಾ ಕುರುಷ್ವ ತ್ರಿಮಾಂ ಪ್ರಭೋ॥೧೨॥

ಇತಿ ಪತ್ರಾರ್ಥಮಾಕರ್ಣ್ಯ ಸ್ವಸ್ಥಚಿತ್ತೋ ರಘೂತ್ತಮಃ ।
ಸ್ವಯಂವರಂ ತತೋ ಗಂತುಂ ಗುರುಣಾ ನಿಶ್ಚಯಂ ವ್ಯಧಾತ್ ॥ ೧೩ ॥

ತತೋಽಬ್ರವೀತ್ಸ ಸೌಮಿತ್ರಿಮುದ್ಯಸೇನಾಂ ಪ್ರಚೋದಯ ।
ಶ್ವೋಽಹಂ ಗಚ್ಛಾಮಿ ಪುತ್ರಾಭ್ಯಾಂ ತ್ವಯಾ ಮಂತ್ರಿಜನೈಸ್ಸಹ ॥ ೧೪ ॥

ಭರತೇನಾಪಿ ಯುಷ್ಮಾಕಂ ಪುತ್ರೈಶ್ಶತ್ರುಘ್ನಸಂಯುತಃ ।
ಸ್ವಯಂವರಂ ಸಹಸ್ತ್ರೀಕಃ ಪೌರೈರ್ಜಾನಪದೈಸ್ಸಹ ॥ ೧೫ ॥

---

೧೧. ಆದ್ದರಿಂದ ನೀನೂ ಕೂಡ ನಿನ್ನ ತಮ್ಮಂದಿರೊಡನೆಯೂ ತಮ್ಮಂದಿರ ಮಕ್ಕಳೊಡನೆಯೂ ನಿನ್ನ ಮಕ್ಕಳೊಡನೆಯೂ ಮಂತ್ರಿಗಳೊಡನೆಯೂ ಸ್ನೇಹಿತರು ಪೌರರು ಮತ್ತು ಅಂತಃಪುರದವರೊಡನೆಯೂ ಸೇನೆಯೊಡನೆಯೂ ಬರಬೇಕು.

೧೨. ಬರತಕ್ಕ ಮಹಾಕೃಪೆಯನ್ನು ನೀನು ಮಾಡಬೇಕು. ಎಲೈ ಪ್ರಭುವೆ! ನನ್ನ ಈ ಪ್ರಾರ್ಥನೆಯನ್ನು ವಿಫಲವನ್ನಾಗಿ ಮಾಡಬೇಡ.

೧೩. ಎಂಬುದಾಗಿ ಲಕ್ಷ್ಮಣನು ಓದಲು ಪತ್ರದ ಅರ್ಥವನ್ನು ರಾಮನು ಕೇಳಿ ತಿಳಿದು ಸ್ವಸ್ಥವಾಗಿದ್ದು ಸ್ವಯಂವರಕ್ಕೆ ಹೋಗಲು ಗುರುವಿನೊಡನೆ ನಿಶ್ಚಯಿಸಿಕೊಂಡನು.

೧೪-೧೫. ಆಗ ಸೌಮಿತ್ರಿಯನ್ನು ಕುರಿತು ಎಲೈ ಸೌಮಿತ್ರಿಯೆ! ಈಗ ನೀನು ಸೇನೆಯನ್ನು ಸಿದ್ಧಪಡಿಸು. ನಾಳೆಯದಿನ ಮಕ್ಕಳೊಡನೆಯೂ, ನಿನ್ನೊಡನೆಯೂ, ಮಂತ್ರಿಜನರೊಡನೆಯೂ, ಭರತ ಶತ್ರುಘ್ನರೊಡನೆಯೂ, ಅವರ ಮಕ್ಕಳೊಡನೆಯೂ, ಪ್ರಯಾಣಮಾಡಬೇಕು. ಅಲ್ಲದೆ ಹೆಂಗಸರನ್ನು ಕರೆದುಕೊಂಡು ಪೌರರೊಡನೆಯೂ, ದೇಶದ ಮುಖ್ಯಸ್ಥರೊಡನೆಯೂ ಹೊರಡಬೇಕು.

ವಿಜಯೋ ನಗರೀಂ ರಾಜ್ಯಂ ಪಾಲಿತುಂ ಸ್ಥಾಪಿತೋ ಮಯಾ ।
ಅದ್ಯೈವ ವಸ್ತ್ರಗೇಹಾನಿ ಬಹಿರ್ನೇರ್ಯಂತಾನಿ ಲಕ್ಷ್ಮಣ ॥ ೨೬ ॥

ಪಂಥಾನಂ ಶೋಧಯಂತ್ವದ್ಯ ನಾನಾದೂತಾಸ್ತ್ವರಾನ್ವಿತಾಃ ।
ಗಚ್ಛಂತು ಸಕಲಾ ನಾರ್ಯಃ ಪುಷ್ಪಕೇಣ ವಿಹಾಯಸಾ ॥ ೨೭ ॥

ತಥೇತಿ ಲಕ್ಷ್ಮಣಶ್ಚೋಕ್ತ್ವಾ ಚಕಾರ ಸ ಯಥೋದಿತಂ ।
ರಾಘವೇಣ ಸಭಾಮಧ್ಯೇ ಪ್ರಬದ್ಧಕರಸಂಪುಟಃ ॥ ೨೮ ॥

ತತೋ ದ್ವಿತೀಯದಿವಸೇ ಪ್ರಭಾತೇ ರಘುನಂದನಃ ।
ಸ್ನಾತ್ವಾ ನಿತ್ಯವಿಧಿಂ ಕೃತ್ವಾ ನಿನಾಯಾಗ್ನೀನ್ ಸ ಪುಷ್ಪಕೇ ॥ ೨೯ ॥

ಸ್ಥಾಪಯಾಮಾಸ ಕುಂಡೇಷು ಭುಕ್ತ್ವಾ ಸುಹೃಜ್ಜನೈಸ್ಸಹ ।
ತತಸ್ಸೀತಾಂ ಸಮಾಹೂಯ ತ್ವರಯಾಮಾಸ ರಾಘವಃ ॥ ೩೦ ॥

---

೨೬. ಮಂತ್ರಿಯಾದ ಈ ವಿಜಯನು ರಾಜಧಾನಿಯನ್ನೂ ಅಂತೆಯೇ ರಾಜ್ಯವನ್ನೂ ನೋಡಿಕೊಳ್ಳುವಂತೆ ನಾನು ನಿಯಮಿಸಿದ್ದೇನೆ. ಈಗಲೇ ವಸ್ತ್ರದ ಮನೆಗಳು (ಡೇರೆಗಳು) ಹೊರಗೆ ಒಯ್ಯಲ್ಪಡಲಿ.

೨೭. ಮುಳ್ಳುಕಲ್ಲುಗಳನ್ನು ತೆಗೆದು ಹಳ್ಳಕೊಳ್ಳಗಳನ್ನೂ ದಾರಿಗಳನ್ನೂ ಶುದ್ಧಮಾಡಲಿ. ಬೇಗನೆ ದೂತರುಗಳು ಹೊರಡಲಿ. ಹೆಂಗಸರೆಲ್ಲರೂ ಪುಷ್ಪಕದಲ್ಲಿ ಆಕಾಶಮಾರ್ಗದಲ್ಲಿ ಹೊರಡ.

೨೮. ಎಂದು ರಾಮನು ಅಪ್ಪಣೆಮಾಡಲು ಲಕ್ಷ್ಮಣನು ಕೈಮುಗಿದುಕೊಂಡು ಹಾಗೆಯೇ ಆಗಲೆಂದು ಅವನು ಹೇಳಿದಂತೆಯೇ ಎಲ್ಲವನ್ನೂ ಮಾಡಿದನು.

೨೯–೩೦. ಅನಂತರ ಮಾರನೆಯ ದಿನದಲ್ಲಿ ರಾಮನು ಬೆಳಗ್ಗೆ ಎದ್ದು ಸ್ನಾನಮಾಡಿ ನಿತ್ಯವಿಧಿಯನ್ನು ಮುಗಿಸಿಕೊಂಡು ಪುಷ್ಪಕದಲ್ಲಿ ಔಪಾಸನಾಗ್ನಿಯನ್ನಿಟ್ಟನು. ಅನಂತರ ಸ್ನೇಹಿತರನ್ನು ಕರೆದುಕೊಂಡು ಅವರೊಡನೆ ಊಟಮಾಡಿ ಸೀತೆಯನ್ನು ಅವಸರಪಡಿಸಿದನು.

ತತಃ ಸ್ತ್ರಿಯಸ್ತದಾ ಸರ್ವಾ ಸೀತಾದ್ಯಾ ರುಕ್ಮಭೂಷಿತಾಃ |
ಯಾನಮಾರುರುಹುಶ್ಶೀಘ್ರಂ ದಿವ್ಯವಸ್ತ್ರಾದಿಮಂಡಿತಾಃ || ೨೧ ||

ತತೋ ರಾಮೋ ಗಜಾರೂಢೋ ವರಚ್ಛತ್ರೋಪಶೋಭಿತಃ |
ಯಯಾವಗ್ರೇ ಚಾಮರಾದ್ಯೈರ್ವೀಜಿತಶ್ಚ ಮುಹುರ್ಮುಹುಃ || ೨೨ ||

ರಾಮಾಗ್ರೇ ವಾರಣಾರೂಢೋ ಯಯೌ ಶೀಘ್ರಂ ಗುರುಸ್ತದಾ |
ರಾಘವಸ್ಯ ಪೃಷ್ಠಭಾಗೇ ಕರಿಸ್ಥೋ ಲಕ್ಷ್ಮಣೋ ಯಯೌ || ೨೩ ||

ತತಃ ಕುಶಾದ್ಯಾಸ್ತೇಷ್ಟೌ ಚ ಬಾಲಾ ಜಗ್ಮುರ್ಗಜಸ್ಥಿತಾಃ |
ತತೋ ಭರತಶತ್ರುಘ್ನೌ ಜಗ್ಮತುರ್ಗಜಸಂಸ್ಥಿತೌ || ೨೪ ||

ತತಸ್ಸರ್ವೇ ಮಂತ್ರಿಣಶ್ಚ ಪೌರಾ ಜಾನಪದಾದಯಃ |
ನಾನಾವಾಹನಸಂಸ್ಥಾಸ್ತೇ ಯಯುಸ್ಸರ್ವೇ ತ್ವರಾನ್ವಿತಾಃ || ೨೫ ||

---

೨೧. ಅನಂತರ ಸೀತೆಯೇ ಮುಂತಾದ ಸ್ತ್ರೀಯರು ಭೋಜನಮಾಡಿ ಒಡವೆಗಳನ್ನು ಧರಿಸಿಕೊಂಡು ದಿವ್ಯವಸ್ತ್ರವನ್ನುಟ್ಟುಕೊಂಡು ಪುಷ್ಪಕವನ್ನು ಹತ್ತಿದರು.

೨೨. ಅನಂತರ ರಾಮನು ಆನೆಯಮೇಲೆ ಅಂಬಾರಿಯಲ್ಲಿ ಕುಳಿತನು. ಅವನಿಗೆ ಶ್ವೇತಚ್ಛತ್ರಿಯನ್ನು ಹಿಡಿದಿದ್ದರು. ಚಾಮರಗಳಿಂದ ಆಳುಗಳು ಬೀಸುತ್ತಿದ್ದರು ಆ ಆನೆಯಮೇಲೆ ಕುಳಿತು ತಾನು ಮುಂದೆ ಹೊರಟನು.

೨೩. ವಸಿಷ್ಠನು ಆನೆಯಮೇಲೆ ಕುಳಿತು ರಾಮನ ಮುಂದುಗಡೆಯಲ್ಲಿ ಹೊರಟನು. ರಾಮನ ಹಿಂದೆ ಲಕ್ಷ್ಮಣನು ಆನೆಯಮೇಲೆ ಕುಳಿತು ಹೊರಟನು.

೨೪. ಅವನಹಿಂದೆ ಕುಶನೇ ಮುಂತಾದ ಎಂಟುಜನ ಬಾಲಕರೂ ಕೂಡ ಆನೆಯಮೇಲೆ ಕುಳಿತು ಹೊರಟರು. ಅವರ ಹಿಂದೆ ಭರತ ಶತ್ರುಘ್ನರು ಆನೆಯ ಮೇಲೆ ಕುಳಿತು ಹೊರಟರು.

೨೫. ಅವರಹಿಂದೆ ಪಟ್ಟಣಿಗರೂ ಮಂತ್ರಿಗಳೂ ದೇಶದ ಮುಖ್ಯಸ್ಥರೂ ಬಗೆ ಬಗೆಯ ವಾಹನಗಳಲ್ಲಿ ಕುಳಿತು ಅವಸರದಿಂದ ಹೊರಟರು.

ಚತುರ್ದಂತೇ ಶುಕ್ಲವರ್ಣೇ ವಾರಣೇ ರಾಘವೋಚಿತೇ ।
ಸಂಸ್ಥಿತೋ ರಾಘವೋ ರೇಜೇ ಮುಕ್ತಾಜಾಲವಿರಾಜಿತೇ ॥ ೨೬ ॥

ಏವಂ ರಾಮಶ್ಶನೈರ್ಮಾರ್ಗೇ ವಂಧಿಮಾಗಧಸಂಸ್ತುತಃ ।
ಶೃಣ್ವನ್ ವಾದ್ಯನಿನಾದಾಂಶ್ಚ ಯಯೌ ಪೂರ್ವದಿಶಂ ಶನೈಃ ॥ ೨೭ ॥

ವವರ್ಷುಸ್ಸಕಲಾ ನಾರ್ಯಃ ಪುಷ್ಪಕಸ್ಥಾ ರಘೂತ್ತಮಂ ।
ಪುಷ್ಪವೃಷ್ಟಿಭಿರಾನಂದಪೂರಿತಾ ರಾಘವೇಕ್ಷಣಾಃ ॥ ೨೮ ॥

ನಿನೇದುರ್ನವವಾದ್ಯಾನಿ ನನೃತುರ್ವಾರಯೋಷಿತಃ ।
ಜಗುರ್ಗೀತಾನಿ ರಮ್ಯಾಣಿ ಪುರತಸ್ತೇ ನಟಾದಯಃ ॥ ೨೯ ॥

ಏವಂ ರಾಮಶ್ಶನೈರ್ಗತ್ವಾ ಸಾಕೇತಾದ್ಯೋಜನೋಪರಿ ।
ಸೇನಾನಿವಾಸಸಂಸ್ಥಾನಂ ನಿರ್ಮಿತಂ ತದ್ದದರ್ಶ ಸಃ ॥ ೩೦ ॥

---

೨೬. ನಾಲ್ಕು ದಂತಗಳಿರುವ, ಬಿಳಿಯ ಬಣ್ಣದ, ರಾಜಯೋಗ್ಯವಾದ, ಮುತ್ತಿನ ಸರಗಳಿಂದ ಅಲಂಕರಿಸಿ ಪ್ರಕಾಶಿಸುತ್ತಿರುವ, ಆನೆಯಮೇಲೆ ಕುಳಿತು ಕೊಂಡು ಶ್ರೀರಾಮನು ಪ್ರಕಾಶಿಸಿದನು.

೨೭. ಈ ರೀತಿಯಾಗಿ ರಾಮನು ಮಾರ್ಗದಲ್ಲಿ ಹೋಗುತ್ತಿರಲು ಹೊಗಳು ಭಟರು ಹೊಗಳಿದರು. ಆಗ ಹಾಗೆ ವಾದ್ಯಗಳನ್ನೂ ಸಂಗೀತಗಳನ್ನೂ ಕೇಳುತ್ತ ಪೂರ್ವದಿಕ್ಕಿಗೆ ಮೆಲ್ಲಗೆ ಹೊರಟರು.

೨೮. ಪುಷ್ಪಕದಲ್ಲಿ ಕುಳಿತಿರುವ ಹೆಂಗಸರು ಬಹು ಸಂತೋಷದಿಂದ ರಾಮನನ್ನು ನೋಡುತ್ತ ಆ ರಾಮನಮೇಲೆ ಪುಷ್ಪವೃಷ್ಟಿಯನ್ನೂ ಆನಂದದಿಂದ ಸುರಿಸಿದರು.

೨೯. ವಾದ್ಯಗಳು ಮೊಳಗಿದುವು. ವೇಶ್ಯೆಯರು ನರ್ತನಮಾಡಿದರು. ನಟರು ರಾಮನ ಎದುರಿಗೆ ಇಂಪಾಗಿ ಗಾನಮಾಡಿದರು.

೩೦. ಈ ರೀತಿಯಾಗಿ ರಾಮನು ಅಯೋಧ್ಯೆಯಿಂದ ಒಂದು ಯೋಜನ ದವರೆಗೂ ನಿಧಾನವಾಗಿ ಹೋದನು. ಅಲ್ಲಿ ಸೇನೆಗಳು ನಿಂತಿಕೊಳ್ಳಲು ಶಿಬಿರವನ್ನು ಮಾಡಿದ್ದುದನ್ನು ನೋಡಿದನು.

ಅವರುಹ್ಯ ಗಜೇಂದ್ರಾತ್ಸ ವಿವೇಶ ವಸನಂ ಗೃಹಂ ।
ಏವಂ ರಾಮಶ್ಚ ನೈರ್ಮಾರ್ಗೇ ಪಶ್ಯನ್ ದೇಶಾನ್ ಮನೋರಮಾನ್ ॥ ೩೧ ॥

ತೀರ್ತ್ವಾ ಭಾಗೀರಥೀಂ ಗಂಗಾಂ ವಿಲಂಘ್ಯ ಕಟಿಕಾನ್ ಪ್ರಭುಃ ।
ಯಯೌ ವಿಂಶದ್ದಿನೈರ್ಭೂರಿಕೀರ್ತೇರ್ದೇಶಮನುತ್ತಮಂ ॥ ೩೨ ॥

ಭೂರಿಕೀರ್ತೇಸ್ತತೋ ದೂತೋ ಗತ್ವಾ ನಿಜವಿಭುಂ ಜವಾತ್ ।
ಕಥಯಾಮಾಸ ರಾಮಸ್ಯ ಮುದಾಗಮನಮಾದರಾತ್ ॥ ೩೩ ॥

ಭೂರಿಕೀರ್ತಿರ್ನೃಪಶ್ಶ್ರುತ್ವಾ ಗಮನಂ ರಾಘವಸ್ಯ ಸಃ ।
ತುತೋಷ ನಿತರಾಂ ಶ್ರೀಮಾನ್ ರಾಮಂ ಪ್ರತ್ಯುದ್ಯಯೌ ಜವಾತ್ ॥ ೩೪ ॥

ಸ್ವಪುರೀಂ ಶೋಭಯಾಮಾಸ ಪತಾಕಾಧ್ವಜತೋರಣೈಃ ।
ವಾರಣೇಂದ್ರಂ ಪುರಸ್ಕೃತ್ಯ ಸಮಾಯಾತೈಃ ನೃಪೈಸ್ಸಹ ॥ ೩೫ ॥

---

೩೧. ಅಲ್ಲಿ ಅವನು ಆನೆಯಿಂದ ಇಳಿದು ಪಟಗೃಹಕ್ಕೆ (ಡೇರೆಯೊಳಕ್ಕೆ) ಹೋದನು. ರಾಮನು ಇದೇ ರೀತಿಯಾಗಿ ನಾನಾಪ್ರದೇಶಗಳನ್ನು ನೋಡುತ್ತ ಉದ್ದಕ್ಕೂ ಹೊರಟನು.

೩೨ ಅಂತೆಯೇ ಪ್ರಯಾಣಮಾಡಿ ಭಾಗೀರಥಿಯನ್ನು ದಾಟಿ ಕಟಿಕ ದೇಶವನ್ನು ದಾಟಿದನು. ಈ ರೀತಿಯಾಗಿ ಇಪ್ಪತ್ತುದಿನಗಳವರೆಗೂ ಪ್ರಯಾಣ ಬೆಳಸಿ ಇಪ್ಪತ್ತನೆಯದಿನ ಭೂರಿಕೀರ್ತಿಯ ಆ ಉತ್ತಮವಾದ ದೇಶವನ್ನು ತಲಪಿದನು.

೩೩. ಅಲ್ಲಿದ್ದ ಭೂರಿಕೀರ್ತಿಯ ದೂತರು ಬೇಗನೆ ಹೋಗಿ ಭೂರಿಕೀರ್ತಿಗೆ ರಾಮನು ಬಂದುದನ್ನು ಸಂತೋಷದಿಂದ ತಿಳಿಸಿದರು.

೩೪. ಭೂರಿಕೀರ್ತಿಯು ರಾಮನು ಬಂದುದನ್ನು ಕೇಳಿ ಬಹುವಾಗಿ ಸಂತೋಷಪಟ್ಟು ಆ ರಾಮನನ್ನು ಬೇಗನೆ ಹೋಗಿ ಎದುರುಗೊಂಡನು.

೩೫. ಆಗ ಆ ಭೂರಿಕೀರ್ತಿಯು ತನ್ನ ರಾಜಧಾನಿಯನ್ನು ಪತಾಕೆಗಳಿಂದಲೂ, ಧ್ವಜಗಳಿಂದಲೂ, ತೋರಣಗಳಿಂದಲೂ, ಅಲಂಕರಿಸಿದನು. ರಾಮನನ್ನು ಎದುರುಗೊಳ್ಳಲು ರಾಜರುಗಳೊಡನೆ ಹೊರಟನು.

ಯೇ ಯೇ ಸಮಾಗತಾಸ್ತತ್ರ ಪಾರ್ಥಿವಾಶ್ಚ ಸ್ವಯಂವರೇ ।
ವಿಷಣ್ಣಾಸ್ಯಾ ಬಭೂವುಸ್ತೇ ವ್ಯಗ್ರಚಿತ್ತಾಸ್ತಥೈವ ಚ ॥ ೩೬ ॥

ಸ್ವಚಿತ್ತೇ ಮಂತ್ರಯಾಮಾಸುಃ ಕಥಮತ್ರ ಸ್ವಯಂವರೇ ।
ತ್ಯಕ್ತ್ವಾ ಶ್ರೀರಾಮಬಾಲಾನಿ ಕನ್ಯೇಸ್ಮಾಕಂ ವರಿಷ್ಯತಃ ॥ ೩೭ ॥

ಇತಿ ಚಿಂತಾವಿಷ್ಟಚಿತ್ತಾಃ ಪ್ರತ್ಯುಜ್ಜಗ್ಮೂ ರಘೂತ್ತಮಂ ।
ರಾಮಂ ದೂರಾದ್ದದೃಶುಸ್ತೇ ತತ್ಸೇನಾಂ ಚ ತ್ವರಾನ್ವಿತಾಂ ॥ ೩೮ ॥

ತತಸ್ತೇ ರಾಘವಂ ನತ್ವೋಪಾಯನಾನಿ ನ್ಯವೇದಯನ್ ।
ರಾಮೇಣಾಲಿಂಗಿತಾಸ್ಸರ್ವೇ ತತ್ಪಾರ್ಶ್ವೇ ಸಂಸ್ಥಿತಾಸ್ತದಾ ॥ ೩೯ ॥

ತತಸ್ಸ ಭೂರಿಕೀರ್ತಿಸ್ತು ಸ್ವಪುತ್ರಾಭ್ಯಾಂ ಸಮನ್ವಿತಃ ।
ನತ್ವಾ ರಾಮಾದಿಕಾನ್ ಪೂಜ್ಯ ವಸ್ತ್ರಾಭರಣವಾಹನೈಃ ॥ ೪೦ ॥

---

೩೬. ಆ ಸ್ವಯಂವರಕ್ಕೆ ಯಾವ ಯಾವ ರಾಜರು ಬಂದಿದ್ದರೋ ಅವರೆಲ್ಲರೂ ಕಾಂತಿಗೆಟ್ಟ ಮುಖವುಳ್ಳವರಾಗಿ ಮನಸ್ಸಿನಲ್ಲಿ ಚಿಂತೆಯನ್ನು ಹೊಂದಿದರು.

೩೭. ಈ ಸ್ವಯಂವರದಲ್ಲಿ ಕನ್ಯೆಯರು ಈ ಶ್ರೀರಾಮನ ಮಕ್ಕಳನ್ನು ವರಿಸದೆ ಬಿಟ್ಟುಬಿಟ್ಟು ನಮ್ಮನ್ನು ಹೇಗೆ ತಾನೆ ವರಿಸಿಯಾರು ? ಎಂಬುದಾಗಿ ತಮ್ಮ ತಮ್ಮ ಮನಸ್ಸಿನಲ್ಲಿಯೇ ಯೋಚಿಸತೊಡಗಿದರು.

೩೮. ಈ ರೀತಿಯಾದ ಚಿಂತೆಯಿಂದ ಕೂಡಿಕೊಂಡಿದ್ದರೂ ಅವರು ಆ ಶ್ರೀರಾಮನ ಎದುರಿಗೆ ಆ ಭೂರಿಕೀರ್ತಿಯ ಜೊತೆಯಲ್ಲಿ ಹೋಗಿ ದೂರದಿಂದಲೇ ರಾಮನನ್ನೂ ಅವನ ಸೇನೆಯನ್ನೂ ನೋಡಿದರು.

೩೯. ಅನಂತರ ಅವನನ್ನು ಎದುರುಗೊಂಡು ನಮಸ್ಕರಿಸಿ ಆ ರಾಮನಿಗೆ ತಾವು ತಂದಿದ್ದ ಕಾಣಿಕೆಗಳನ್ನು ಅರ್ಪಿಸಿದರು. ರಾಮನು ಅವರನ್ನು ಗೌರವಿಸಿ ಆಲಂಗಿಸಿಕೊಳ್ಳಲು ಅನಂತರ ಅವನ ಪಕ್ಕದಲ್ಲಿಯೇ ಅವರೆಲ್ಲರೂ ನಿಂತು ಕೊಂಡರು.

೪೦. ಭೂರಿಕೀರ್ತಿಯೂ ಕೂಡ ತನ್ನ ಮಕ್ಕಳೊಡನೆ ಕೂಡಿಕೊಂಡು ರಾಮನಿಗೆ ನಮಸ್ಕರಿಸಿ ಅವರಿಗೆ ವಸ್ತ್ರ ಆಭರಣ ವಾಹನಗಳನ್ನು ಕೊಟ್ಟು ಪೂಜಿಸಿದನು.

ನಿನಾಯ ನಗರೀಂ ಸ್ವೀಯಾಂ ಗೋಪುರಾಟ್ಟಾಲಮಂಡಿತಾಂ ।
ನರ್ತತ್ಸು ವಾರನಾರೀಷು ವಾದ್ಯೇಷು ನಿನದತ್ಸು ಚ ॥ ೪೧ ॥

ಸ್ತುವತ್ಸು ವಂದಿವೃಂದೇಷು ವಿವೇಶ ನಗರೀಂ ಪ್ರಭುಃ ।
ತದಾ ತತ್ಪುರನಾರ್ಯಸ್ತಾಃ ಶ್ರುತ್ವಾ ರಾಮಂ ಸಮಾಗತಂ ॥ ೪೨ ॥

ವಿಹಾಯ ನಿಜಕಾರ್ಯಾಣಿ ದುದ್ರುವುರ್ಗೋಪುರಾದಿಷು ।
ಶೀಘ್ರಮಾರುರುಹುಸ್ಸರ್ವಾ ದದೃಶುಸ್ತಾ ರಘೂತ್ತಮಂ ॥ ೪೩ ॥

ಕಾಚಿತ್ಸ್ವಬಾಲಕಂ ತ್ಯಕ್ತ್ವಾ ರುದಂತಂ ನಿಜಮಂಚಕೇ ।
ದುದ್ರಾವ ರಾಘವಂ ದ್ರಷ್ಟುಂ ವರಪ್ರಾಸಾದಮಸ್ತಕೇ ॥ ೪೪ ॥

ತಾಂಬೂಲವೀಟಿಕಾಂ ಕಾಚಿತ್ ಕೃತ್ವಾ ಯಾವತ್ಪತಿಂ ದದೌ ।
ತಾವಚ್ಛ್ರುತ್ವಾ ಸಮಾಯಾಂತಂ ರಾಮಂ ದುದ್ರಾವ ಸಾದರಂ ॥ ೪೫ ॥

---

೪೧. ಅನಂತರ ಉತ್ತಮವಾದ ಮನೆಗಳಿಂದಲೂ ಅಂಗಡಿಗಳಿಂದಲೂ ಗೋಪುರಗಳಿಂದಲೂ ಕೂಡಿದ ತನ್ನ ರಾಜಧಾನಿಗೆ ಕರೆದುಕೊಂಡು ಹೋದನು. ಆಗ ವಾದ್ಯಗಳು ಮೊಳಗುತ್ತಿದ್ದುವು. ವಾರನಾರಿಯರು ನರ್ತಿಸುತ್ತಿದ್ದರು.

೪೨. ಹೊಗಳುಭಟರು ಹೊಗಳುತ್ತಿದ್ದರು. ಈ ರೀತಿಯಾದ ವಿಜೃಂಭಣೆಯಿಂದ ರಾಮನು ಪಟ್ಟಣವನ್ನು ಪ್ರವೇಶಿಸಿದನು. ಈ ಸಮಯದಲ್ಲಿ ಆ ಪಟ್ಟಣದ ಸ್ತ್ರೀಯರಿಗೆಲ್ಲಾ ರಾಮನು ಬಂದುದು ತಿಳಿಯಿತು.

೪೩. ಆ ಕೂಡಲೇ ಅವರು ತಮ್ಮ ತಮ್ಮ ಕೆಲಸಗಳನ್ನು ಬಿಟ್ಟು ಬಿಟ್ಟು ಗೋಪುರವೇ ಮುಂತಾದ ಎತ್ತರವಾದ ಜಾಗಗಳಿಗೆ ಹೋಗಿ ಹತ್ತಿದರು. ಅಲ್ಲಿಂದ ಆ ರಾಮನನ್ನು ನೋಡುತ್ತಿದ್ದರು.

೪೪. ಒಬ್ಬಳು ಹೆಂಗಸು ತನ್ನ ಮಗುವು ಅಳುತ್ತಿದ್ದರೂ ಅದನ್ನು ತನ್ನ ಮಂಚದಮೇಲೆಯೇ ಬಿಟ್ಟು ಬಿಟ್ಟು ರಾಮನನ್ನು ನೋಡಲು ಅವಸರದಿಂದ ತನ್ನ ಮನೆಯ ಮಹಡಿಯ ಮೇಲುಭಾಗಕ್ಕೆ ಓಡಿಹೋದಳು.

೪೫. ಒಬ್ಬಳು ತಾಂಬೂಲದ ಬೀಡೆಯನ್ನು ಮಾಡಿ ಗಂಡನಿಗೆ ಕೊಡುತ್ತಿರುವಷ್ಟರಲ್ಲಿಯೇ ರಾಮನು ಬಂದುದನ್ನು ಕೇಳಿ ಬೇಗನೆ ಅಲ್ಲಿಗೆ ಓಡಿದಳು.

ಕಾಚಿತ್ತ್ಯಕ್ತ್ವಾ ಭೋಜನಂ ತು ಕಾಚಿತ್ಪಾಕಸ್ಯ ಸೇವನಂ ।
ಕಾಚಿತ್ಸ್ವ ಕಬರೀಹಸ್ತಾ ಮುಕ್ತಕೇಶಾ ಯಯೌ ಜವಾತ್ ॥ ೪೬ ॥

ಪತಿನಾಲಿಂಗಿತಾ ಕಾಚಿನ್ನಿಷ್ಕಾಸ್ಯ ಸ್ವಪತೇಃ ಕರಂ ।
ಯಯೌ ವೇಗೇನ ಲಲನಾ ವರಪ್ರಾಸಾದಮಸ್ತಕಂ ॥ ೪೭ ॥

ಕ್ಷಾಲಯಂತೀ ಪತೇಃ ಪಾದಮೇಕಂ ಪ್ರಕ್ಷಾಲ್ಯ ಕಾಮಿನೀ ।
ಯಾವಜ್ಜಗ್ರಾಹ ಸಾನ್ಯಂ ತು ರೌವಚ್ಛ್ರುತ್ವಾ ಸಮಾಗತಂ ॥ ೪೮ ॥

ಸೀತಯಾ ರಾಮಚಂದ್ರಂ ಹಿ ಶೀಘ್ರಂ ದುದ್ರಾವ ಕಾತರಾ ।
ಕಾಚಿದ್ಭರ್ತ್ರಾ ಚುಂಬಮಾನಾ ದೂರಂ ಕೃತ್ವಾ ಚ ತನ್ಮುಖಂ ॥ ೪೯ ॥

ದುದ್ರಾವ ರಾಘವಂ ದ್ರಷ್ಟುಂ ಪ್ರಾಸಾದೇ ಸ್ರಸ್ತಪಲ್ಲವಾ ।
ಕಾಚಿದ್ವಿನಿದ್ರಿತಾ ಭರ್ತ್ರಾ ತ್ಯಕ್ತ್ವಾ ನಿದ್ರಾಂ ತ್ವರಾನ್ವಿತಾ ॥ ೫೦ ॥

---

೪೬. ಒಬ್ಬಳು ಊಟಮಾಡುವುದನ್ನು ಬಿಟ್ಟೂ, ಮತ್ತೊಬ್ಬಳು ಅಡಿಗೆ ಮಾಡುವುದನ್ನು ಬಿಟ್ಟೂ, ಇನ್ನೊಬ್ಬಳು ಜಡೆ ಹಾಕಿಕೊಳ್ಳುತ್ತಿದ್ದಾಗ ಅರ್ಧಕ್ಕೆ ಅದನ್ನು ಬಿಟ್ಟೂ ತಲೆಯನ್ನು ಕೆದರಿಕೊಂಡೂ ರಾಮನನ್ನು ನೋಡಲು ಹೊರಟರು.

೪೭. ಒಬ್ಬಳನ್ನು ಪತಿಯು ಆಲಂಗಿಸಿಕೊಂಡಿರಲು ರಾಮನು ಬಂದುದನ್ನು ಕೇಳಿ ಆಕೆಯು ಗಂಡನ ಕೈಯ್ಯನ್ನು ತೆಗೆದು ಬಿಸುಟು ಮಹಡಿಯ ಮೇಲಕ್ಕೆ ರಾಮನನ್ನು ನೋಡಲು ಓಡಿಹೋದಳು.

೪೮. ಒಬ್ಬಳು ತನ್ನ ಗಂಡನ ಕಾಲನ್ನು ತೊಳೆಯುತ್ತಿರುವಾಗ ಒಂದು ಕಾಲನ್ನು ತೊಳೆದಿದ್ದಳು. ಮತ್ತೊಂದು ಕಾಲನ್ನು ತೊಳೆಯಲು ಹಿಡಿದು ಕೊಂಡಿದ್ದಳು. ಅಷ್ಟರಲ್ಲಿಯೇ ಶ್ರೀರಾಮನು ಬರುತ್ತಿದ್ದುದು ತಿಳಿಯಬಂದಿತು.

೪೯-೫೦. ಸೀತೆಯೊಡನೆ ಕೂಡಿದ ರಾಮಚಂದ್ರನನ್ನು ನೋಡಲು ಆ ಕಾಲನ್ನು ತೊಳೆಯದೆ ಹಾಗೆಯೇ ಬಿಟ್ಟು ಬಿಟ್ಟು ಆತುರದಿಂದ ಓಡಿಹೋದಳು. ಒಬ್ಬ ಕಾಮಿನಿಯನ್ನು ಗಂಡನು ಚುಂಬಿಸುತ್ತಿರಲು ರಾಮನು ಬಂದುದನ್ನು ಕೇಳಿ ಆ ಗಂಡನಮುಖವನ್ನು ದೂರಕ್ಕೆ ನೂಕಿ ರಾಮನನ್ನು ನೋಡಲು ಸೆರಗು ಬಿದ್ದು ಹೋಗುತ್ತಿದ್ದರೂ ಲಕ್ಷಿಸದೆ ಮಹಡಿಯ ಮೇಲಕ್ಕೆ ಹೋದಳು. ಒಬ್ಬಳು ಗಂಡನೊಡನೆ ನಿದ್ದೆಮಾಡುವುದಕ್ಕೆ ಮಲಗಿದ್ದಳು. ರಾಮನು ಬಂದುದು ತಿಳಿಯಲು ಒಡನೆಯೇ ಹಾಸಿಗೆಯಿಂದ ಮೇಲಕ್ಕೆದ್ದಳು.

ವಿಸ್ತೀರ್ಣಕಜ್ಜಲಾ ಮಂದನೇತ್ರಾ ನಿದ್ರಾಭರಾನ್ವಿತಾ ।
ನೇತ್ರಾಭ್ಯಾಂ ಕುಂಚಿತಾನ್ ಕೇಶಾನ್ ವಾರಯಂತೀ ಜವಾದ್ಯಯೌ ॥ ೫೧ ॥

ತ್ಯಕ್ತ್ವಾಭ್ಯಂಗಂ ಹಿ ಕಾಚಿತ್ಸಾ ಕುರ್ವತೀ ಕರಸನ್ನಿಧಿಂ ।
ಯಯೌ ವೇಗೇನ ಪ್ರಾಸಾದಂ ಶ್ರುತ್ವಾ ರಾಘವಮಾಗತಂ ॥ ೫೨ ॥

ಕಾಚಿದ್ಭುಜೇ ಕಂಚುಕೀಂ ಸಾ ಕೃತ್ವೈಕೇ ತ್ವಪರೇ ಭುಜೇ ।
ಕರ್ತುಕಾಮಾ ಯಯೌ ಶೀಘ್ರಂ ತದೈವ ಪ್ರಮದೋತ್ತಮಾ ॥ ೫೩ ॥

ಕಾಚಿದೇಕೇ ಪದೇ ಕೃತ್ವಾ ನೂಪುರಾದೀನಿ ಭಾಮಿನೀ ।
ಅಪರೇ ಕರ್ತುಕಾಮಾ ಸಾ ತಥೈವಾಟ್ಟಾಲಮಾಯಯೌ ॥ ೫೪ ॥

---

೫೧. ಕಣ್ಣಿಗೆ ಬಹುವಾಗಿ ಕಪ್ಪನ್ನೂ ಹಚ್ಚಿಕೊಂಡಿದ್ದಳು. ನಿದ್ರೆಯ ಭರದಲ್ಲಿ ಅದು ಕಣ್ಣಿಗೆಲ್ಲವೂ ಆಗಿದ್ದಿತು. ಆದ್ದರಿಂದ ಕಣ್ಣಿನರೆಪ್ಪೆಯ ಕೂದಲು ಅಂಟಿಕೊಂಡು ಇದ್ದುವು. ಅದನ್ನು ತಿಕ್ಕಿಕೊಂಡು ಸರಿಮಾಡಿಕೊಳ್ಳುತ್ತ ಓಡಿದಳು.

೫೨. ಅಭ್ಯಂಜನ ಮಾಡಿಕೊಳ್ಳಲು ಸಿದ್ಧಳಾಗಿದ್ದ ಒಬ್ಬಳು ಕೈಗೆ ಎಣ್ಣೆಯನ್ನು ಹಾಕಿಕೊಂಡಿರುವಾಗ ರಾಮನು ಬಂದುದು ತಿಳಿಯಲು ಆ ಎಣ್ಣೆಯನ್ನು ಕೈಗೆ ತಿಕ್ಕಿಕೊಳ್ಳುತ್ತ ರಾಮನನ್ನು ನೋಡಲು ಮಹಡಿಯಮೇಲಕ್ಕೆ ಓಡಿದಳು.

೫೩. ಒಬ್ಬಳು ರೌಕೆಯನ್ನು ಹಾಕಿಕೊಳ್ಳಲು ಪ್ರಾರಂಭಿಸಿ ಒಂದು ಕೈಗೆ ತೋಳನ್ನು ತೊಟ್ಟುಕೊಂಡಿದ್ದಳು. ಮತ್ತೊಂದನ್ನು ತೊಟ್ಟುಕೊಳ್ಳುವುದರೊಳಗೆ ರಾಮನು ಬಂದುದನ್ನು ಕೇಳಿ ಹಾಗೆಯೇ ಬೇಗನೆ ಓಡಿದಳು.

೫೪. ಒಬ್ಬಳು ಕಾಲಿಗೆ ಮಿಂಚನ್ನು ಇಟ್ಟುಕೊಳ್ಳುತ್ತಿದ್ದು ಒಂದು ಕಾಲಿಗೆ ಇಟ್ಟುಕೊಂಡಿದ್ದಳು. ಮತ್ತೊಂದಕ್ಕೆ ಇಟ್ಟುಕೊಳ್ಳುತ್ತಿರುವಷ್ಟರಲ್ಲಿಯೇ ರಾಮನು ಬಂದುದನ್ನು ಕೇಳಿ ಮಹಡಿಯಮೇಲಕ್ಕೆ ಓಡಿಹೋದಳು.

ಕಥಯಂತೀ ಶುಭಾಂ ವಾರ್ತಾಂ ಸ್ವಪತ್ಯುಃ ಪುರತಃ ಸ್ಥಿತಾ ।
ಶ್ರುತ್ವಾ ರಾಮಂ ಸಮಾಯಾಂತಂ ದುದ್ರಾವ ಗಜಗಾಮಿನೀ ॥ ೫೫ ॥

ಕಾಚಿನ್ನಿಜಪತಿಂ ಪಾತ್ರೇ ಕುರ್ವತೀ ಪರಿವೇಷಣಂ ।
ಭೂಮೌ ತ್ಯಕ್ತ್ವಾನ್ನಪಾತ್ರಂ ಸಾ ಯಯೌ ರಾಮಂ ನಿರೀಕ್ಷಿತುಂ ॥ ೫೬ ॥

ಕಾಚಿತ್ ಸ್ನಾತ್ವಾ ದಿವ್ಯವಸ್ತ್ರಾ ಕುರ್ವತೀ ಸಾ ಪ್ರದಕ್ಷಿಣಾಃ ।
ತುಲಸೀಂ ಚ ಮಹಾದೇವಂ ಶ್ರುತ್ವಾ ರಾಮಂ ಯಯೌ ಜವಾತ್॥ ೫೭ ॥

ಕಾಚಿದ್ರಜ್ಜುಘಟಂ ಕೂಪೇ ಕೃತ್ವಾ ತೋಯಾರ್ಥಮುದ್ಯತಾ ।
ತ್ಯಕ್ತ್ವಾ ರಜ್ಜುಘಟಂ ಕೂಪೇ ದುದ್ರಾವೇಂದುನಿಭಾನನಾ ॥ ೫೮ ॥

---

೫೫. ಒಬ್ಬಳು ಗಂಡನೆದುರಿಗೆ ನಿಂತುಕೊಂಡು ಶುಭವಾದ ಸಮಾಚಾರವನ್ನು ಹೇಳುತ್ತಿರುವಾಗ ರಾಮನು ಬಂದುದು ತಿಳಿಯಲು ಆ ಸಮಾಚಾರವನ್ನು ಅಲ್ಲಿಗೇ ಬಿಟ್ಟು ರಾಮನನ್ನು ನೋಡಲು ಓಡಿಹೋದಳು.

೫೬. ಒಬ್ಬಳು ಹೆಂಗಸು ತನ್ನ ಗಂಡನಿಗೆ ಬಡಿಸುವುದಕ್ಕೆ ಪಾತ್ರೆಯಲ್ಲಿ ಅನ್ನವನ್ನು ಹಾಕಿಕೊಂಡು ಬಡಿಸುತ್ತಿದ್ದಳು. ಅಷ್ಟರಲ್ಲಿಯೇ ರಾಮನು ಬಂದುದನ್ನು ಕೇಳಿ ಆ ಅನ್ನದ ಪಾತ್ರೆಯನ್ನು ಅಲ್ಲಿಯೇ ಇಟ್ಟುಬಿಟ್ಟು ಅವನನ್ನು ನೋಡಲು ಮಹಡಿಯಮೇಲಕ್ಕೆ ಓಡಿಹೋದಳು.

೫೭. ಒಬ್ಬಳು ಸ್ನಾನಮಾಡಿ ಮಡಿಬಟ್ಟೆಯನ್ನುಟ್ಟುಕೊಂಡು ತುಳಸಿಯನ್ನೂ ಮಹಾದೇವನಾದ ಶಿವನನ್ನೂ ಪ್ರದಕ್ಷಿಣೆಮಾಡುತ್ತಿದ್ದು ರಾಮನು ಬಂದುದನ್ನು ಕೇಳಿ ಅವನನ್ನು ನೋಡಲು ಬೇಗನೆ ಬಂದಳು.

೫೮. ಒಬ್ಬಳು ನೀರನ್ನು ಸೇದಲು ಹಗ್ಗವನ್ನು ಕಟ್ಟಿ ಬಾವಿಯೊಳಕ್ಕೆ ಬಿಂದಿಗೆಯನ್ನು ಬಿಟ್ಟಿದ್ದಳು. ರಾಮನು ಬಂದುದನ್ನು ಕೇಳಿ ಆ ಹಗ್ಗವನ್ನೂ ಬಿಂದಿಗೆಯನ್ನೂ ಬಾವಿಗೆ ಬಿಸುಟು ರಾಮನನ್ನು ನೋಡಲು ಬಂದಳು.

ಕಾಚಿತ್ಸ್ವಬಾಲಕಂ ಸ್ತನ್ಯಂ ರಹಃ ಪಾಯಯಂತೀ ವಧೂಃ ।
ಕುಚಯೋರ್ಬಾಲಕಂ ಧೃತ್ವಾ ತಥೈವ ಸಾ ಯಯೌ ಜವಾತ್ ॥ ೫೯ ॥

ಕಾಚಿತ್ಸಾ ಪರಿಧಾಯಾಥಾ ವಸ್ತ್ರಂ ಕಚ್ಛಂ ಕರೇಣ ಸಾ ।
ಕರ್ತುಕಾಮಾ ಯಯೌ ವೇಗಾತ್ತಥೈವಾಟ್ಟಾಲಮಸ್ತಕಂ ॥ ೬೦ ॥

ಏವಂ ಕರ್ಮಾಣ್ಯನೇಕಾನಿ ಕುರ್ವಂತ್ಯಸ್ತಾಃ ಪುರಸ್ತ್ರಿಯಃ ।
ವಿಹಾಯ ತಾನಿ ಸರ್ವಾಣಿ ಯಯೌ ರಾಮಂ ನಿರೀಕ್ಷಿತುಂ ॥ ೬೧ ॥

ದೃಷ್ಟ್ವಾ ರಾಮಂ ಗಜಸ್ಥಂ ತಾ ವವರ್ಷುಃ ಪುಷ್ಪವೃಷ್ಟಿಭಿಃ ।
ಊಚುಃ ಪರಸ್ಪರಂ ನಾರ್ಯಶ್ಚತಕೋಟ್ಟಾಲಸಂಸ್ಥಿತಾಃ ॥ ೬೨ ॥

---

೫೯. ಒಬ್ಬಳು ಒಬ್ಬರಿಗೂ ಕಾಣದಂತೆ ಮಗುವಿಗೆ ಎದೆಹಾಲನ್ನು ಕೊಡುತ್ತಿದ್ದಳು. ಆಗ ರಾಮನು ಬಂದುದನ್ನು ಕೇಳಿ ಆ ಮಗುವಿಗೆ ಹಾಗೆಯೇ ಎದೆಹಾಲನ್ನು ಕೊಡುತ್ತ ಎತ್ತಿಕೊಂಡು ಬೇಗನೆ ಓಡಿಬಂದಳು.

೬೦. ಒಬ್ಬಳು ಶೀರೆಯನ್ನುಟ್ಟುಕೊಂಡು ಕಚ್ಚೆಯನ್ನು ಹಾಕಿಕೊಳ್ಳುತ್ತಿದ್ದಳು. ರಾಮನು ಬಂದುದನ್ನು ಕೇಳಿ ಹಾಕಿಕೊಳ್ಳುತ್ತಿದ್ದ ಕಚ್ಚೆಯನ್ನು ಹಾಗೆಯೇ ಹಿಡಿದುಕೊಂಡು ಓಡಿಬಂದಳು.

೬೧. ಈ ರೀತಿಯಾಗಿ ಪಟ್ಟಣದ ಹೆಂಗಸರು ಅನೇಕ ಬಗೆಯಾದ ಕೆಲಸಗಳನ್ನು ಮಾಡುತ್ತಲಿದ್ದು ಮಧ್ಯದಲ್ಲಿಯೇ ಅವನ್ನು ಅಲ್ಲಲ್ಲಿಗೆ ಬಿಟ್ಟು ರಾಮನನ್ನು ನೋಡಲು ಓಡಿದರು.

೬೨. ಆನೆಯಮೇಲೆ ಕುಳಿತಿರುವ ಆ ಶ್ರೀರಾಮನನ್ನು ಅವರು ನೋಡಿ ಹೂಮಳೆಯನ್ನು ಸುರಿಸಿದರು. ಆಗ ಮಹಡಿಯಮೇಲಿದ್ದ ಆ ಹೆಂಗಸರೆಲ್ಲರೂ ಇಂತೆಂದು ಮಾತನಾಡಿಕೊಳ್ಳುತ್ತಿದ್ದರು.

ಧನ್ಯಾ ಸಾ ರಾಮಜನನೀ ಕೌಸಲ್ಯಾ ಯಾ ರಘೂತ್ತಮಂ ।
ಸುಷುವೇ ರಾಜರಾಜಾನಂ ಪರಿಪೂರ್ಣಮನೋರಥಾ ॥ ೬೩ ॥

ಕಾಶ್ಚಿದೂಚುಶ್ಚ ಸಾ ಧನ್ಯಾ ಸೀತಾ ಜನಕನಂದಿನೀ ।
ಯಸ್ಯಾ ಬಿಂಬಾಧರರಸಮಂಗೀಕರೋತಿ ರಾಘವಃ ॥ ೬೪ ॥

ಕಾಶ್ಚಿದೂಚುಸ್ತಯಾ ತಪ್ತಂ ಜಾನಕ್ಯಾ ದುಷ್ಕರಂ ತಪಃ ।
ಪೂರ್ವಜನ್ಮನಿ ಯತ್ಪುಣ್ಯಾದ್ರಾಜರಾಜಪ್ರಿಯಾಭವತ್ ॥ ೬೫ ॥

ಕಾಶ್ಚಿದೂಚುರ್ವಯಂ ಮಂದಭಾಗ್ಯಾಸ್ತು ಜಗತೀತಲೇ ।
ಸೀತಾದಾಸ್ಯೋ ನ ಜಾತಾಸ್ಸ್ಮ ರಾಮಸೇವನತತ್ಪರಾಃ ॥ ೬೬ ॥

---

೬೩. ಕೆಲವರು ರಾಜರಾಜನಾದ ಶ್ರೀರಾಮನನ್ನು ಹೆತ್ತ ಆ ಕೌಸಲ್ಯೆಯೇ ಧನ್ಯಳಾದವಳು. ಅವಳೇ ಪೂರ್ಣವಾದ ಮನೋರಥವುಳ್ಳವಳು. ಎನ್ನುತ್ತಿದ್ದರು.

೬೪. ಕೆಲವರು ಯಾವ ಸೀತೆಯು ತೊಂಡೆಯ ಹಣ್ಣಿನಂತಿರುವ ಕೆಳದುಟಿಯ ರಸವನ್ನು ರಾಮನು ಅಂಗೀಕರಿಸುವನೋ ಅಂತಹ ಸೀತೆಯೇ ಧನ್ಯಳು. ಎನ್ನುತ್ತಿದ್ದರು.

೬೫. ಕೆಲವರು ಆ ಜಾನಕಿಯು ಪೂರ್ವಜನ್ಮದಲ್ಲಿ ಬಹು ಉಗ್ರವಾದ ತಪಸ್ಸನ್ನು ಮಾಡಿರುವಳು. ಆ ಪುಣ್ಯದಿಂದಲೇ ರಾಜರಾಜನಾದ ರಾಮನು ಆವಳಿಗೆ ಗಂಡನಾದನು. ಎನ್ನುತ್ತಿದ್ದರು.

೬೬. ಕೆಲವರು ನಾವು ಈ ಪ್ರಪಂಚದಲ್ಲಿಯೇ ಮಂದಭಾಗ್ಯರು. ಸೀತೆಯ ದಾಸಿಯರಾಗಿಯಾದರೂ ರಾಮನ ಸೇವೆಯನ್ನು ಮಾಡಲಿಲ್ಲವಲ್ಲ ! ಎನ್ನುತ್ತಿದ್ದರು.

ಇತಿ ನಾನಾವಿಧಾ ವಾಚಸ್ತಾಸಾಂ ಶ್ರುಣ್ವನ್ರಘೂತ್ತಮಃ ।
ಯಯೌ ಸ ರಾಜಮಾರ್ಗೇಣ ನೃಪಕಲ್ಪಿತಮಂದಿರಂ ॥ ೬೭ ॥

ತತ್ರಾವರುಹ್ಯ ನಾಗೇಂದ್ರಾತ್ಪ್ರವಿವೇಶ ವರಮಂದಿರಂ ।
ತಸ್ಥೌ ಸುಖೇನ ಜಾನಕ್ಯಾ ಬಂಧುಭಿರ್ಬಾಲಕೈಃ ಪ್ರಭುಃ ॥ ೬೮ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ವಿವಾಹಕಾಂಡೇ ಸ್ವಯಂವರಾರ್ಥಂ ಭೂರಿಕೀರ್ತೇಃ
ಪುರಂಪ್ರತಿ ಶ್ರೀರಾಮಾಗಮನಂ ನಾಮ ಪ್ರಥಮಸ್ಸರ್ಗಃ

---

೬೭. ಆ ಹೆಂಗಸರ ಈ ರೀತಿಯಾದ ಬಗೆ ಬಗೆಯ ಮಾತುಗಳನ್ನು ಆ ರಾಮನು ಕೇಳುತ್ತ ಆ ರಾಜಮಾರ್ಗದಿಂದ ತನಗೆ ಏರ್ಪಡಿಸಿರುವ ಬೀಡಾರಕ್ಕೆ ಹೋದನು.

೬೮. ಆ ಮನೆಯ ಹತ್ತಿರ ಆನೆಯಿಂದ ಕೆಳಗಿಳಿದು ಆ ಉತ್ತಮವಾದ ಮನೆಗೆ ಹೊಕ್ಕನು. ಅವನು ಅಲ್ಲಿ ಜಾನಕಿಯೊಡನೆಯೂ ಬಾಲಕರೊಡನೆಯೂ ತಮ್ಮಂದಿರೊಡನೆಯೂ ಸುಖವಾಗಿದ್ದನು.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ ಸ್ವಯಂವರಕ್ಕೋಸ್ಕರ
ಭೂರಿಕೀರ್ತಿಯ ರಾಜಧಾನಿಗೆ ರಾಮಾಗಮನವೆಂಬ ಒಂದನೆಯ ಸರ್ಗವು

|| ಶ್ರೀರಸ್ತು ||

ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ

|| ಒಂದನೆಯ ಸರ್ಗದ ಸಾರಾಂಶವು ||

ಶ್ರೀರಾಮನು ಸಭೆಯಲ್ಲಿ ಕುಳಿತಿರುವಾಗ ಒಬ್ಬ ದೂತನು ಬಂದು ಅವನಿಗೆ ನಮಸ್ಕರಿಸಿ ಸ್ವಾಮಿ ! ಪೂರ್ವದೇಶಾಧಿಪತಿಯಾದ ಭೂರಿಕೀರ್ತಿಯು ತಮ್ಮ ಬಳಿಗೆ ನನ್ನನ್ನು ಕಳುಹಿಸಿಕೊಟ್ಟಿರುವನು. ಈ ಕಾಗದವನ್ನು ತಮಗೆ ಕೊಡುವಂತೆ ಕೊಟ್ಟಿರುವನು. ಎಂದು ಹೇಳಿ ಕಾಗದವನ್ನು ಕೊಟ್ಟನು. ಅದನ್ನು ಲಕ್ಷ್ಮಣನು ತೆಗೆದುಕೊಂಡು ನೋಡಿದ ಕೂಡಲೆ ಮಂಗಳಪ್ರದವಾದ ಲಗ್ನಪತ್ರಿಕೆಯಂತಿದ್ದುದರಿಂದ ಅದನ್ನು ಗಟ್ಟಿಯಾಗಿ ಓದಿದನು. ಅದರಲ್ಲಿ ಚಂಪಿಕೆ ಸುಮತಿಯರೆಂಬ ಇಬ್ಬರು ಹೆಣ್ಣುಮಕ್ಕಳು ತನ್ನ ಮಗನಿಗಿರುವಂತೆಯೂ ಅವರಿಗೆ ಸ್ವಯಂವರವು ನಡೆಯುವಂತೆಯೂ ಎಲ್ಲ ರಾಜರೂ ಬರುತ್ತಿರುವಂತೆಯೂ ನೀವೂ ಮಕ್ಕಳನ್ನೂ ಕರೆದುಕೊಂಡು ಬರಬೇಕೆಂದೂ ಇದ್ದಿತು.

ಇದನ್ನು ಕೇಳಿ ರಾಮನು ವಿಜಯನೆಂಬ ಮಂತ್ರಿಯನ್ನು ರಾಜ್ಯದಲ್ಲಿ ಪ್ರತಿನಿಧಿಯನ್ನಾಗಿರಿಸಿ ತಮ್ಮಂದಿರನ್ನೂ ಮಕ್ಕಳನ್ನೂ ಕರೆದುಕೊಂಡು ಹೊರಟನು. ಇಪ್ಪತ್ತುದಿನಗಳು ಪ್ರಯಾಣಮಾಡಿ ಆ ಭೂರಿಕೀರ್ತಿಯ ಪಟ್ಟಣವನ್ನು ಸೇರಿದನು. ರಾಮನೂ ಅವನ ತಮ್ಮಂದಿರೂ ಅವರವರ ಮಕ್ಕಳೊಡನೆ ಬಂದುದನ್ನು ನೋಡಿ ಇವರ ಮಕ್ಕಳನ್ನು ಬಿಟ್ಟು ನಮ್ಮನ್ನು ಈ ಹುಡುಗಿಯರು ವರಿಸುವುದಿಲ್ಲವೆಂದು ಮದುವೆಗೆ ಬಂದಿದ್ದ ರಾಜಪುತ್ರರು ಕಂಗೆಟ್ಟರು.

ಭೂರಿಕೀರ್ತಿಯು ರಾಮನೇ ಮುಂತಾದವರನ್ನು ಉತ್ಸವದೊಡನೆ ಪಟ್ಟಣಕ್ಕೆ ಕರೆತಂದನು. ಆಗ ಅಲ್ಲಿನ ಪ್ರಜೆಗಳು ರಾಮನನ್ನು ನೋಡಲು ತಮ್ಮ ತಮ್ಮ ಕೆಲಸಗಳನ್ನು ಅರ್ಧದಲ್ಲಿಯೇ ಬಿಟ್ಟುಬಂದು ನೋಡುತ್ತಿದ್ದರು. ಅವರೆಲ್ಲರೂ ಕೂಡ ಈ ರಾಮನು ಕೌಸಲ್ಯೆಗೆ ಮಗನಾದುದಕ್ಕೆ ಆಕೆಯ ತಪಸ್ಸನ್ನೂ ಸೀತೆಗೆ ಗಂಡನಾದುದಕ್ಕೆ ಆಕೆಯ ತಪಸ್ಸನ್ನೂ ಕೊಂಡಾಡುತ್ತಾ ತಾವೂ ಕೂಡ ಅರಮನೆಯಲ್ಲಿ ದಾಸರಾಗಿಯಾದರೂ ಶ್ರೀರಾಮನನ್ನು ಸೇವಿಸ ಬೇಕೆಂದು ಅಪೇಕ್ಷೆಪಡುತ್ತಲಿದ್ದರು. ವೈಭವದೊಡನೆ ಅವರನ್ನು ರಾಜಮಾರ್ಗದಲ್ಲಿ ಕರೆತಂದು ಅವರಿಗೋಸ್ಕರ ಏರ್ಪಡಿಸಲಾಗಿದ್ದ ಬಿಡಾರಕ್ಕೆ ತಲಪಿಸಿದನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ವಿವಾಹಕಾಂಡೇ

॥ ದ್ವಿತೀಯಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಅಥಾಪರೇ ದಿನೇ ರಾಮಂ ಭೂರಿಕೀರ್ತಿಸ್ಸಮಾಯಯೌ ।
ನತ್ವಾ ಪ್ರಾಹ ರಘುಶ್ರೇಷ್ಠಂ ಸಭಾಮಾಗಂತುಮರ್ಹಸಿ ॥ ೧ ॥

ತಥೇತಿ ರಾಘವಶ್ಚೋಕ್ತ್ವಾ ಬಾಲಕೈರುಕ್ತಭೂಷಿತೈಃ ।
ರುಕ್ಮತಂತೂದ್ಭವಶ್ರೇಷ್ಠ ಕಂಚುಕೋಷ್ಣೀಷಮಂಡಿತೈಃ ॥ ೨ ॥

ಖಡ್ಗೈಃ ಪಿಧಾನವಿಮುಖೈಃ ಕಟಿಬಂಧೋತ್ತರೀಯಯುಕ್ತೈಃ ।
ಭೂಷಿತೈರಷ್ಟಭಿಶ್ಶೀಘ್ರಂ ಶಿಬಿಕಾಸ್ಥೈಸ್ಸಮಾಯಯೌ ॥ ೩ ॥

ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ ಎರಡನೆಯ ಸರ್ಗವು

೧. ಮರುದಿವಸ ಭೂರಿಕೀರ್ತಿಯು ಶ್ರೀರಾಮನ ಬಳಿಗೆ ಬಂದನು. ಆಗ ಆ ರಾಮನಿಗೆ ನಮಸ್ಕರಿಸಿ ಸಭೆಗೆ ಬರಬೇಕೆಂಬುದಾಗಿ ಕೇಳಿಕೊಂಡನು.

೨-೩. ಅದನ್ನು ಕೇಳಿ ರಾಮನು ಹಾಗೆಯೇ ಆಗಲೆಂದು ಹೇಳಿ ತನ್ನ ಕಡೆಯ ಮಕ್ಕಳಿಗೆ ಒಡವೆಗಳನ್ನು ತೊಡಿಸಿ ಚಿನ್ನದ ಸರಿಗೆಯಿರುವ ಅಂಗಿಗಳನ್ನು ತೊಡಿಸಿ, ಚಿನ್ನದ ಸರಿಗೆಯ ರುಮಾಲುಗಳನ್ನು ಸುತ್ತಿ ಒರೆಗೆ ಹಾಕಿರುವ ಕತ್ತಿಗಳನ್ನು ಸೊಂಟಕ್ಕೆ ಕಟ್ಟಿ ಉತ್ತರೀಯವನ್ನು ಹಾಕಿಕೊಂಡು ಸುಂದರಾಂಗರಾಗಿರುವ ಆ ಎಂಟುಮಂದಿಮಕ್ಕಳನ್ನೂ ಆಲಂಕೃತವಾದ ಎಂಟುಪಲ್ಲಕ್ಕಿಗಳಲ್ಲಿ ಕೂರಿಸಿ ಕರೆದುಕೊಂಡು ಬಂದನು.

ಸಭಾಯಾಂ ಯೇ ನೃಪಾಃ ಪೂರ್ವಮಾಸನೇಷು ಚ ಸಂಸ್ಥಿತಾಃ ।
ಶ್ರುತ್ವಾ ರಾಮಂ ಸಮಾಯಾಂತಂ ಸಂಭ್ರಮಾತ್ತತ್ಪುರೋ ಯಯೌ ॥೪॥

ಚಕ್ರುಸ್ಸರ್ವೇ ರಾಘವಾಯ ಪ್ರಣಾಮಾನ್ ಪಾರ್ಥಿವೋತ್ತಮಾಃ ।
ತೇಷಾಂ ನಾಮಾನಿ ರಾಮಂ ತಂ ದೀರ್ಘಶಬ್ದೈಃ ಪೃಥಕ್ ಪೃಥಕ್ ॥ ೫ ॥

ಚಿತ್ರೋಷ್ಣೀಷಾ ರಾಮದೂತಾಃ ಪ್ರೋಚುರ್ವೈ ವೇತ್ರಪಾಣಯಃ ।
ವಸ್ತ್ರಾಲಂಕಾರಭೂಷಾದಿಭೂಷಿತಾ ಮುದಿತಾನನಾಃ ॥ ೬ ॥

ರಾಜರಾಜ ನೃಪಶ್ಚಾಯಂ ಕರ್ಣಾಟವಿಷಯೇ ಸ್ಥಿತಃ ।
ವಿಜಯಸ್ತೇ ಪ್ರಣಾಮಾಂಶ್ಚ ಕರೋತಿ ತ್ವಂ ವಿಲೋಕಯ ॥ ೭ ॥

ರಾಘವೇಂದ್ರ ನೃಪಶ್ಚಾಯಂ ಶ್ರೀಮಾನ್ ದ್ರವಿಡದೇಶಜಃ ।
ಕಂಬುಕಂಠೋ ಪ್ರಣಾಮಾಂಸ್ತೇ ಕರೋತಿ ತ್ವಂ ವಿಲೋಕಯ ॥ ೮ ॥

---

೪. ಸಭೆಗೆ ಮೊದಲೇ ಬಂದು ಕುಳಿತಿದ್ದ ರಾಜರೆಲ್ಲರೂ ರಾಮನು ಬರುತ್ತಿರುವನೆಂಬುದನ್ನು ಕೇಳಿದ ಕೂಡಲೇ ಅವನ ಎದುರಿಗೆ ಹೋದರು.

೫. ಆ ರಾಜರೆಲ್ಲರೂ ರಾಮನಿಗೆ ನಮಸ್ಕರಿಸಿದರು. ಆಗ ಅವರೆಲ್ಲರೂ ತಮ್ಮ ತಮ್ಮ ಹೆಸರುಗಳನ್ನು ಗಟ್ಟಿಯಾಗಿ ಹೇಳುತ್ತಿದ್ದರು.

೬. ಚಿತ್ರವಾದ ಪಾಗುಗಳನ್ನು ಧರಿಸಿ ಕೈಯ್ಯಲ್ಲಿ ಬೆತ್ತವನ್ನು ಹಿಡಿದು ವಸ್ತ್ರ ಭೂಷಣಗಳಿಂದ ಭೂಷಿತರಾದ ರಾಮನ ದೂತರು ಸಂತೋಷದಿಂದ ಇಂತೆಂದು ಹೇಳುತ್ತಿದ್ದರು.

೭. ಎಲೈ ಚಕ್ರವರ್ತಿಯೇ! ಈ ರಾಜನು ಕರ್ನಾಟಕದೇಶದವನು. ಇವನ ಹೆಸರು ವಿಜಯನು. ಇವನು ನಿನಗೆ ನಮಸ್ಕರಿಸುತ್ತಿರುವನು. ನೀನು ಇತ್ತ ನೋಡು.

೮–೯. ಎಲೈ ರಾಘವನೇ! ಈತನು ದ್ರವಿಡದೇಶದ ರಾಜನು. ಇವನ ಹೆಸರು ಕಂಬಕಂಠನೆಂದು. ಇವನು ನಮಸ್ಕರಿಸುತ್ತಿರುವನು. ನೀನು ಕೃಪೆಮಾಡಿ

ದೀನನಾಥ ನೃಪಶ್ಚಾಯಂ ವಿದರ್ಭವಿಷಯೇ ಸ್ಥಿತಃ ।
ದೀನನಾಥ ಪ್ರಣಾಮಾಂಸ್ತೇ ಕರೋತಿ ತ್ವಂ ವಿಲೋಕಯ ॥ ೯ ॥

ಮಹಾರಾಜ ನೃಪಶ್ಚಾಯಂ ಮಾಗಧೇ ವಿಷಯೇ ಸ್ಥಿತಃ ।
ಪರಂತಪಃ ಪ್ರಣಾಮಾಂಸ್ತೇ ಕರೋತಿ ತ್ವಂ ವಿಲೋಕಯ ॥ ೧೦ ॥

ಸೀತಾಕಾಂತ ನೃಪಶ್ಚಾಯಂ ಹ್ಯವಂತಿಸ್ಥಃ ಪ್ರತಾಪವಾನ್ ।
ಉಗ್ರಬಾಹುಃ ಪ್ರಣಾಮಾಂಸ್ತೇ ಕರೋತಿ ತ್ವಂ ವಿಲೋಕಯ ॥ ೧೧ ॥

ರಘುವೀರ ನೃಪಶ್ಚಾಯಂ ಸ್ಥಿತೋ ಹೈಹಯಪತ್ತನೇ ।
ಪ್ರದೀಪಸ್ತೇ ಪ್ರಣಾಮಾಂಶ್ಚ ಕರೋತಿ ತ್ವಂ ವಿಲೋಕಯ ॥ ೧೨ ॥

ಹೇ ರಾಮ ನೃಪತಿಶ್ಚಾಯಂ ಶೂರಸೇನೇ ಸ್ಥಿತೋ ಮಹಾನ್ ।
ಸುಷೇಣಸ್ತೇ ಪ್ರಣಾಮಾಂಶ್ಚ ಕರೋತಿ ತ್ವಂ ವಿಲೋಕಯ ॥ ೧೩ ॥

ನೋಡು. ಎಲೈ ದೀನನಾಥನೇ ! ಇವನು ವಿದರ್ಭದೇಶದ ರಾಜನು. ಇವನ ಹೆಸರು ಅಂಗನಾಥನು ಎಂದು. ಇವನು ನಿನಗೆ ನಮಸ್ಕರಿಸುತ್ತಿರುವನು. ಇವನನ್ನು ನೋಡು.

೧೦. ಮಹಾರಾಜನೇ ! ಇವನು. ಮಗಧದೇಶದ ರಾಜನು. ಇವನ ಹೆಸರು ಪರನ್ತಪನೆಂದು. ಇವನು ನಮಸ್ಕರಿಸುತ್ತಿರುವನು. ನೋಡು.

೧೧. ಎಲೈ ಸೀತಾಕಾಂತನೆ ! ಈತನು ಅವಂತಿಯರಾಜನು. ಪ್ರತಾಪ ಶಾಲಿಯು. ಇವನ ಹೆಸರು ಉಗ್ರಬಾಹುವೆಂದು. ಇವನು ನಮಸ್ಕರಿಸುತ್ತಿರುವನು. ನೋಡು.

೧೨. ರಘುವೀರನೇ ! ಈ ರಾಜನು ಹೈಹಯಾಧಿಪತಿಯು. ಇವನ ಹೆಸರು ಪ್ರದೀಪನೆಂದು. ನಮಸ್ಕರಿಸುತ್ತಿರುವನು. ನೋಡು.

೧೩. ಎಲೈ ರಾಮನೇ ! ಈ ರಾಜನು ಶೂರಸೇನದೇಶದವನು. ಇವನ ಹೆಸರು ಸುಷೇಣನೆಂದು. ನಮಸ್ಕರಿಸುತ್ತಿರುವನು. ಇತ್ತ ನೋಡು.

ಕೋಸಲೇಂದ್ರ ನೃಪಶ್ಚಾಯಂ ಹರಿದ್ವಾರಸ್ಥಿತೋ ಮಹಾನ್ ।
ನೀಪಾನ್ವಯೋ ಯಜ್ಞಕೀರ್ತಿಃ ಕರೋತಿ ನಮನಂ ತವ ॥ ೧೪ ॥

ಅಯೋಧ್ಯೇಶ ನೃಪಶ್ಚಾಯಂ ಕಲಿಂಗವಿಷಯೇ ಸ್ಥಿತಃ ।
ಹೇಮಾಂಗದಸ್ತಟೇಬ್ಧೇಶ್ಚ ಕರೋತಿ ನಮನಂ ತವ ॥ ೧೫ ॥

ರಾವಣಾರೇ ನೃಪಶ್ಚಾಯಂ ನಾಗಪತ್ತನಸಂಸ್ಥಿತಃ ।
ಪಾಂಡ್ಯೋಯಂ ಮತಿಮಾನ್ ಶೂರಃ ಕರೋತಿ ನಮನಂ ತವ ॥ ೧೬ ॥

ಏವಂ ತೇಷಾಂ ಪ್ರಣಾಮಾಂಶ್ಚ ಮಾನಯನ್ ಸ್ವೇಕ್ಷಣಾದಿಭಿಃ ।
ವಿವೇಶ ಬಂಧುಭಿರ್ಬಾಲೈಸ್ಸಭಾಯಾಂ ಮಂತ್ರಿಭಿಃ ಪ್ರಭುಃ ॥ ೧೭ ॥

---

೧೪. ಕೋಸಲೇಂದ್ರನೇ ! ಇವನು ಹರಿದ್ವಾರದ ರಾಜನು. ಇವನು ನೀಪನವಂಶದಲ್ಲಿ ಹುಟ್ಟಿದ ಯಜ್ಞಕೀರ್ತಿಯು. ನಿನಗೆ ನಮಸ್ಕರಿಸುವನು. ನೋಡು.

೧೫. ಅಯೋಧ್ಯೇಶನೆ ! ಈ ರಾಜನು ಕಳಿಂಗದೇಶದವನು. ಹೇಮಾಂಗದ ನೆಂದು ಇವನ ಹೆಸರು. ಇವನು ಸಮುದ್ರತೀರದವನು. ನಮಸ್ಕರಿಸುವನು. ನೋಡು.

೧೬. ರಾವಣಾರಿಯೇ ! ಈ ರಾಜನು ನಾಗಪತ್ತಣದಲ್ಲಿರುವವನು ಪಾಂಡ್ಯನು ಎಂದು ಇವನಿಗೆ ಹೆಸರಿರುವುದು. ಬುದ್ಧಿವಂತನು. ಮತ್ತು ಶೂರನು, ನಿನಗೆ ನಮಸ್ಕರಿಸುತ್ತಿರುವನು ನೋಡು.

೧೭. ಈ ರೀತಿಯಾದ ರಾಜರ ಪ್ರಣಾಮಗಳನ್ನು ರಾಮನು ಕಣ್ಣಿನಿಂದಲೇ ಸ್ವೀಕರಿಸುತ್ತಿದ್ದನು. ಮತ್ತು ಬಾಲರಿಂದಲೂ ತಮ್ಮಂದಿರಿಂದಲೂ, ಮಂತ್ರಿಗಳಿಂದಲೂ ಕೂಡಿಕೊಂಡು ಸಭೆಗೆ ಹೋದನು.

ತತ್ರ ಸಿಂಹಾಸನೇ ದಿವ್ಯೇ ಪಶ್ಚಿಮಾಯಾಂ ತತೋ ಹರಿಃ ।
ಉಪಾವಿಶಚ್ಚ ಪೂರ್ವಾಸ್ಯಶ್ಛತ್ರಚಾಮರಮಂಡಿತಃ ॥ ೧೮ ॥

ರಾಮಸ್ಯ ಸವ್ಯೇ ಸೌಮಿತ್ರಿಃ ಕೈಕೇಯೀಯೌ ಸ್ಥಿತೌ ತದಾ ।
ತಸ್ಥುಸ್ತದಾ ರಾಮವಾಮೇ ಕುಶಾದ್ಯಾ ಮಂತ್ರಿಬಾಲಕಾಃ ॥ ೧೯ ॥

ಶತ್ರುಘ್ನಸವ್ಯೇ ಸಂತಸ್ಥುಸ್ಸುಮಂತ್ರಾದ್ಯಾಸ್ಸುಮಂತ್ರಿಣಃ ।
ಸಭಾಯಾಮುತ್ತರೇ ಯಾಮ್ಯೇ ಪಙ್ಕ್ತ್ಯಾ ಸರ್ವೇ ನೃಪಾದಿಕಾಃ ॥ ೨೦ ॥

ನೇಮಿರೇಖೋಪಮಾಸ್ತಸ್ಥುಃ ಸ್ವಸುಹೃತ್ಪುತ್ರಮಂತ್ರಿಭಿಃ ।
ಪಶ್ಚಿಮಾಭಿಮುಖಾಃ ಪೂರ್ವೇ ನನೃತುರ್ವಾರಯೋಷಿತಃ ॥ ೨೧ ॥

---

೧೮. ಅಲ್ಲಿ ಪಶ್ಚಿಮದಕಡೆಯಲ್ಲಿ ಒಂದು ಸಿಂಹಾಸನವನ್ನು ಹಾಕಿದ್ದರು. ಅದು ಪೂರ್ವಕ್ಕೆ ಮುಖವುಳ್ಳದಾಗಿದ್ದಿತು. ಅದರಲ್ಲಿ ಪೂರ್ವದಕಡೆಗೆ ಮುಖವನ್ನು ಮಾಡಿಕೊಂಡು ಈ ರಾಮನು ಕುಳಿತನು. ಸೇವಕರು, ಛತ್ರ, ಚಾಮರಗಳನ್ನು ಹಿಡಿದಿದ್ದರು.

೧೯. ಈ ಸಭೆಯಲ್ಲಿ ರಾಮನ ಬಲಗಡೆಯಲ್ಲಿ ಲಕ್ಷ್ಮಣ, ಭರತ, ಶತ್ರುಘ್ನರೂ ಎಡದಲ್ಲಿ ಕುಶನೇ ಮುಂತಾದ ಬಾಲಕರೂ, ಮಂತ್ರಿಗಳ ಮಕ್ಕಳೂ ಕುಳಿತರು.

೨೦. ಶತ್ರುಘ್ನನ ಬಲಗಡೆಯಲ್ಲಿ ಸುಮಂತ್ರನೇ ಮುಂತಾದ ಮಂತ್ರಿಗಳು ಕುಳಿತಿದ್ದರು. ಆ ಸಭೆಯ ಉತ್ತರ ಮತ್ತು ದಕ್ಷಿಣದ ಪಂಕ್ತಿಗಳಲ್ಲಿ ಉಳಿದ ರಾಜರು ಕುಳಿತಿದ್ದರು.

೨೧. ಅವರೆಲ್ಲರೂ ಕೂಡ ಅವರವರ ಮಂತ್ರಿಗಳ ಮಕ್ಕಳು, ಸ್ನೇಹಿತರು ಮುಂತಾದವರೊಡನೆ ಸಾಲಾಗಿ ಕುಳಿತಿದ್ದರು. ಪೂರ್ವದಿಕ್ಕಿನಲ್ಲಿ ಪಶ್ಚಿಮಾಭಿಮುಖವಾಗಿ ನರ್ತಕಿಯರು ಕುಣಿಯುತ್ತಿದ್ದರು.

ಅಟ್ಟಾಲಸಂಸ್ಥಾ ವಿಪ್ರಾದ್ಯಾ ದದೃಶುಃ ಕೌತುಕಂ ಮಹತ್ ।
ತತೋ ನದತ್ಸು ವಾದ್ಯೇಷು ಧೂಪೇಷು ಪ್ರಜ್ವಲತ್ಸು ಚ ॥ ೨೨ ॥

ನರ್ತತ್ಸು ವಾರನಾರೀಷು ಗಾಯತ್ಸು ಮಾಗಧಾದಿಷು ।
ಸ್ತುವತ್ಸು ವಂದಿವೃಂದೇಷು ಸಭಾಯಾಂ ನೃಪಪೌತ್ರಿಕೇ ॥ ೨೩ ॥

ಶಿಬಿಕಾಸ್ಥೇ ದಿವ್ಯವಸ್ತ್ರದಿವ್ಯಾಲಂಕಾರಮಂಡಿತೇ ।
ನವರತ್ನಮಹಾಮಾಲಾಧೃತರಮ್ಯಕರೋತ್ಪಲೇ ॥ ೨೪ ॥

ತೇ ಸಮಾಜಗ್ಮತೂ ರಮ್ಯೇ ಸಭಾಗ್ರಸ್ಥೇ ವಿರೇಜತುಃ ।
ತಯೋರ್ನೇತ್ರಕಟಾಕ್ಷೈಶ್ಚ ಭಿನ್ನಮರ್ಮಸ್ಥಲಾ ನೃಪಾಃ ॥ ೨೫ ॥

---

೨೨. ಎತ್ತರವಾಗಿ ಕಲ್ಪಿಸಿದ್ದ ಪ್ರದೇಶಗಳಲ್ಲಿ ಬ್ರಾಹ್ಮಣರೇ ಮುಂತಾದವರು ಕುಳಿತುಕೊಂಡು ಈ ದೊಡ್ಡದಾದ ಕೌತುಕವನ್ನು ನೋಡುತ್ತಿದ್ದರು. ಆಗ ವಾದ್ಯಗಳು ಧ್ವನಿಮಾಡುತ್ತಿದ್ದುವು. ಎಲ್ಲ ಕಡೆಯಲ್ಲಿಯೂ ಧೂಪದ ವಾಸನೆಯು ಹರಡಿದ್ದಿತು.

೨೩. ನರ್ತಕಿಯರು ಕುಣಿಯುತ್ತಿದ್ದರು. ಗಾಯಕರು ಗಾನಮಾಡುತ್ತಿದ್ದರು. ಹೊಗಳುಭಟರು ಹೊಗಳುತ್ತಿದ್ದರು. ಆಗ ಸಭೆಯು ಈ ರೀತಿಯಾಗಿ ರಂಜಿತವಾಗಿದ್ದಿತು.

೨೪-೨೫. ಆಗ ದಿವ್ಯವಸ್ತ್ರಭೂಷಣಗಳಿಂದ ಅಲಂಕೃತರಾದ ಭೂರಿಕೀರ್ತಿಯ ಇಬ್ಬರು ಹೆಣ್ಣುಮಮ್ಮಕ್ಕಳೂ ಕಮಲದಂತಿರುವ ಕೈಗಳಲ್ಲಿ ನವರತ್ನದ ಮಾಲೆಯನ್ನು ಹಿಡಿದುಕೊಂಡು ಬಂದರು. ಅವರು ಆ ಸಭೆಯ ಮುಂಭಾಗದಲ್ಲಿ ನಿಂತುಕೊಂಡರು. ಆಗ ಬಹು ಮನೋಹರವಾಗಿದ್ದಿತು. ಆಗ ಆ ಕನ್ನಿಕೆಯರು ಕಡೆಗಣ್ಣಿನಿಂದ ಎಲ್ಲರನ್ನೂ ನೋಡುತ್ತಿರಲು ಆ ಕಡೆಗಣ್ಣುನೋಟದಿಂದಲೇ ರಾಜರುಗಳೆಲ್ಲರೂ ಮರ್ಮಸ್ಥಳದಲ್ಲಿ ನೊಂದವರಾದರು.

ಬಭೂವುರ್ವಿಕಲಾಸ್ಸರ್ವೇ ಕಾಮಬಾಣೈರ್ವಿಶೇಷತಃ ।
ನ ತದಾ ಲೇಭಿರೇ ಶರ್ಮ ಶುಷ್ಕಕಂಠೋಷ್ಠತಾಲುಕಾಃ ॥ ೨೬ ॥

ಸಭಾಂ ತಾಂ ಚಂಪಿಕಾನಾಮ್ನೀ ವಹ್ನಿಕೋಣಾದ್ವಿವೇಶ ಹ ।
ಈಶಕೋಣಾಚ್ಚ ಸುಮತಿಸ್ಸಭಾಂ ತಾಂ ಸಂವಿವೇಶ ಹ ॥ ೨೭ ॥

ಅಥೋಪಮಾತಾ ವೃದ್ಧಾ ಸಾ ಧೃತಹಸ್ತಾಗ್ರಯಷ್ಟಿಕಾ ।
ಸಭಾಯಾಂ ಚಂಪಿಕಾನಾಮ್ನ್ಯೈ ದಕ್ಷಿಣಸ್ಥಾನ್ ಪೃಥಕ್ ಪೃಥಕ್ ॥ ೨೮ ॥

ಕ್ರಮೇಣ ವರ್ಣಯಾಮಾಸ ನಂದಾ ನೃಪತಿಸತ್ತಮಾನ್ ।
ತಥಾನ್ಯಾ ಚ ಸಭಾಗ್ರಾಚ್ಚ ಧೃತಹಸ್ತಾಗ್ರಯಷ್ಟಿಕಾ ॥ ೨೯ ॥

---

೨೬. ಇದರಿಂದ ಅವರ ಮನಸ್ಸೆಲ್ಲವೂ ನೆಲೆಯಿಲ್ಲದಂತಾಗಿ ಚಲಿಸತೊಡಗಿತು. ಕಾಮಬಾಣದಿಂದ ಅವರೆಲ್ಲರೂ ಬಹುವಾಗಿ ಗಾಯಗೊಂಡರು. ಅವರೆಲ್ಲರಿಗೂ ಬಾಯಿ, ತುಟಿ, ಗಂಟಲುಗಳೆಲ್ಲವೂ ಒಣಗಿಹೋಗಿ ಶಾಂತಿಯೇ ಉಂಟಾಗಲಿಲ್ಲ. ಸೌಖ್ಯವಂತೂ ಇಲ್ಲವೇ ಇಲ್ಲದಂತಾಯಿತು.

೨೭. ಆಗ ಚಂಪಿಕೆಯೆಂಬ ಕನ್ನಿಕೆಯು ಆ ಸಭೆಗೆ ಆಗ್ನೇಯದಿಕ್ಕಿನಿಂದ ಪ್ರವೇಶಿಸಿದಳು. ಸುಮತಿ ಎಂಬುವಳು ಈಶಾನ್ಯದಿಂದ ಆ ಸಭೆಯನ್ನು ಪ್ರವೇಶಿಸಿದಳು.

೨೮. ಆಗ ಒಬ್ಬ ಮುದುಕಿಯಾದ ನಂದೆ ಎಂಬ ದಾದಿಯು ಕೈಯಲ್ಲಿ ದೊಣ್ಣೆಯನ್ನು ಹಿಡಿದುಕೊಂಡು ಆ ಸಭೆಯಲ್ಲಿ ಚಂಪಿಕೆಗೆ ದಕ್ಷಿಣದಿಕ್ಕಿನಲ್ಲಿ ಕುಳಿತಿರುವ ರಾಜರುಗಳನ್ನು ಒಬ್ಬೊಬ್ಬರನ್ನಾಗಿ ತೋರಿಸುತ್ತ ಬಂದಳು.

೨೯. ಆ ನಂದೆಯು ರಾಜರನ್ನೆಲ್ಲಾ ಕ್ರಮವಾಗಿ ವರ್ಣಿಸುತ್ತ ಬರುತ್ತಿರಲು ಇತ್ತ ಉತ್ತರದಿಕ್ಕಿನಲ್ಲಿ ಕುಳಿತಿದ್ದ ರಾಜರನ್ನು ಸುಮತಿಗೆ ಸುಮತಿಯ ದಾದಿಯು ವರ್ಣಿಸುತ್ತ ಬರುತ್ತಿದ್ದಳು.

ಸುನಂದಾಖ್ಯಾತಿಜರತಾ ಸುಮತ್ಯೈ ನೃಪತೀನ್ ಕ್ರಮಾತ್ ।
ವರ್ಣಯಾಮಾಸೋತ್ತರಸಾನುಪಮಾತಾ ಪೃಥಕ್ ಪೃಥಕ್ ॥ ೩೦ ॥

ಅಥ ಸಾ ಚಂಪಿಕಾಂ ಪ್ರಾಹ ನೀತ್ವಾ ತಾಂ ನೃಪತೇಃ ಪುರಃ ।
ಶಿಬಿಕಾಸ್ಥಾಂ ಚೋಪಮಾತಾ ನಂದಾ ಚಾಮರವೀಜಿತಾಂ ॥ ೩೧ ॥

ರಾಜಕನ್ಯೇ ಚಂಪಕೇತ್ರ ಶೃಣುಷ್ವ ವಚನಂ ಮಮ ।
ಏನಂ ನೃಪಂ ವರ್ಣಯಾಮಿ ಪಶ್ಯ ತ್ವಂ ಮದನೋಪಮಂ ॥ ೩೨ ॥

ಪಾಂಡ್ಯೋಯಂ ಮತಿಮಾನ್ನಾಮ್ನಾ ನಾಗಪತ್ತನಸಂಸ್ಥಿತಃ ।
ಶೂರೋ ರಥೀ ನೃಪಶ್ರೇಷ್ಠಃ ಪ್ರಜಾಪಾಲನತತ್ಪರಃ ॥ ೩೩ ॥

---

೩೦. ಆ ಸುಮತಿಯ ದಾದಿಯಾದ ಸುನಂದೆಯೆಂಬುವಳು ಕೈಯ್ಯಲ್ಲಿ ದೊಣ್ಣೆಯನ್ನು ಹಿಡಿದು ಪ್ರತ್ಯೇಕ ಪ್ರತ್ಯೇಕವಾಗಿ ತೋರಿಸುತ್ತ ಅವರನ್ನು ಅತಿಶಯದಿಂದ ವರ್ಣಿಸುತ್ತಿದ್ದಳು.

೩೧. ಚಂಪಿಕೆಯೆಂಬುವಳು ಮೇನದಲ್ಲಿ ಕುಳಿತು ಸೇವಕಿಯರಿಂದ ಚಾಮರವನ್ನು ಬೀಸಿಸಿಕೊಳ್ಳುತ್ತಿದ್ದಳು. ನಂದೆ ಎಂಬ ದಾದಿಯು ಆಯಾಯ ರಾಜರಮುಂದೆ ಆ ಪಲ್ಲಕ್ಕಿಯನ್ನು ನಿಲ್ಲಿಸಿಕೊಂಡು ಇಂತೆಂದು ಹೇಳುತ್ತಿದ್ದಳು.

೩೨. ರಾಜಪುತ್ರಿಯಾದ ಚಂಪಿಕೆಯೇ ! ನನ್ನ ಮಾತನ್ನು ಕೇಳು. ಈ ರಾಜನನ್ನು ವರ್ಣಿಸುತ್ತೇನೆ. ಮನ್ಮಥನಂತಿರುವ ಇವನನ್ನು ನೀನು ನೋಡು.

೩೩. ಇವನು ಪಾಂಡ್ಯದೇಶದ ದೊರೆಯು. ಇವನ ಹೆಸರು ಮತಿಮಂತನೆಂದು. ಇವನು ನಾಗಪಟ್ಟಣದಲ್ಲಿರುವನು. ಶೂರನು. ರಥಿಕನು. ನೃಪಶ್ರೇಷ್ಠನು. ಪ್ರಜಾಪಾಲನೆಯಲ್ಲಿ ಆಸಕ್ತನು.

ಯದಿ ತೇ ರೋಚತೇ ಚಿತ್ತೇ ವರಯೈನಮನುತ್ತಮಂ ।
ಅಸ್ಯ ತ್ವಂ ಮಹಿಷೀ ಭೂತ್ವಾ ನಾಗಪತ್ತಸಂಸ್ಥಿತಾ ॥ ೩೪ ॥

ಕ್ರೀಡಸ್ವ ಮುದಿತಾನೇನ ವರಪ್ರಾಸಾದರಾಜಿಷು ।
ನಂದೋಕ್ತಂ ಚಂಪಿಕಾ ಶ್ರುತ್ವಾ ವ್ಯರ್ಥಂ ವಾಕ್ಯಮನುತ್ತಮಂ ॥ ೩೫ ॥

ನ ಬಬಂಧ ಮನಸ್ತಸ್ಮಿನ್ನೃಪತೌ ಮತಿಮತ್ತರೀ ।
ಚೋದಯಾಮಾಸ ನಂದಾಂ ತಾಂ ಚಾಗ್ರೇ ಗಂತುಂ ನೃಪಾಂತರಂ ॥ ೩೬ ॥

ತದಾನ್ಯಂ ನೃಪತಿಂ ನಂದಾ ನೀತ್ವಾ ತಾಂ ಶಿಬಿಕಾಸ್ಥಿತಾಂ ।
ಚಂಪಿಕಾಂ ಪ್ರಾಹ ವೇಗೇನ ಪಶ್ಯೈನಂ ಬಾಲಿಕೇ ನೃಪಂ ॥ ೩೭ ॥

ಕಲಿಂಗವಿಷಯಸ್ಥೋಽಯಂ ನಾಮ್ನಾ ಹೇಮಾಂಗದೋ ಮಹಾನ್ ।
ಕೋಟಿಶೋ ವಾರಣೇಂದ್ರಾಣಾಂ ಯಸ್ಯ ಗಂಡಸ್ಥಲಾದಿಷು ॥ ೩೮ ॥

೩೪–೩೫. ನಿನ್ನ ಮನಸ್ಸಿಗೆ ಸರಿತೋರಿದರೆ ಈ ರಾಜಶ್ರೇಷ್ಠನನ್ನು ವರಿಸು. ಇವನಿಗೆ ನೀನು ಹೆಂಡತಿಯಾಗಿ ನಾಗಪಟ್ಟಣದಲ್ಲಿದ್ದುಕೊಂಡು ಮಹಡಿಯ ಮನೆಗಳಲ್ಲಿ ಇವನೊಡನೆ ಸಂತೋಷದಿಂದ ಕ್ರೀಡಿಸು. ನಂದೆಯು ಹೇಳಿದ ಈ ವ್ಯರ್ಥವಾದ ಮಾತನ್ನು ಚಂಪಿಕೆಯು ಕೇಳಿದಳು.

೩೬. ಬುದ್ಧಿವಂತೆಯಾದ ಈಕೆಗೆ ಅವನಲ್ಲಿ ಮನಸ್ಸು ಹಿಡಿಸಲಿಲ್ಲ. ಆದರಿಂದ ಆ ನಂದೆಯನ್ನು ಮುಂದಿರುವ ರಾಜನ ಬಳಿಗೆ ಹೋಗುವಂತೆ ಹೇಳಿದಳು.

೩೭. ನಂದೆಯು ಆಮೇಲೆ ವೇಗದೊಡನೆ ಚಂಪಿಕೆಯನ್ನು ಬೇರೆಯ ರಾಜನ ಬಳಿಗೆ ಕರೆದುಕೊಂಡು ಹೋಗಿ ಎಲೈ ಬಾಲಕಿಯೇ! ಈ ರಾಜನನ್ನು ನೋಡು ಎಂದು ಹೇಳಿದಳು.

೩೮. ಎಲೈ ಬಾಲಕಿಯೇ! ಇವನು ಕಳಿಂಗದೇಶದ ದೊರೆಯು. ಇವನ ಹೆಸರು ಹೇಮಾಂಗದನೆಂದು. ಇವನ ಬಳಿಯಲ್ಲಿ ಆನೆಗಳು ಕೋಟಿಗಟ್ಟಲೆಯಲ್ಲಿವೆ. ಇವುಗಳ ಗಂಡಸ್ಥಳದಲ್ಲಿ ಮುತ್ತಿನಗೊಂಚಲುಗಳು ಜೋಲಾಡುತ್ತಿರುವುವು.

ಮುಕ್ತಾಜಾಲಾತಿಗುಚ್ಛಾಶ್ಚ ರಾಜಂತೇ ಕಮಲಾನನೇ ।
ಅಸ್ಯ ತ್ವಂ ಮಹಿಷೀ ಭೂತ್ವಾ ಗವಾಕ್ಷೈಸ್ಸಾಗರಸ್ಯ ಚ ॥ ೩೯ ॥

ಪಶ್ಯಂತೀ ಕೌತುಕಂ ಬಾಲೇ ಕರೋಷಿ ಕ್ರೀಡನಾದಿಕಂ ।
ಅಸ್ಯ ಸ್ತ್ರೀವೃಂದಮಧ್ಯೇ ತ್ವಂ ಭವ ಮುಖ್ಯಾದ್ಯ ಕನ್ಯಕೇ ॥ ೪೦ ॥

ಇತ್ಯುಕ್ತಾಪಿ ತಯಾ ತನ್ವೀ ನಂದಯಾ ಚಂಪಿಕಾ ನೃಪೇ ।
ತಸ್ಮಿನ್ ಮನೋ ನ ಬಬಂಧಾನ್ಯಂ ಗಂತುಂ ತಾಮಚೋದಯತ್ ॥ ೪೧ ॥

ಸಪತ್ನೀಭಯಮಾಲಕ್ಷ್ಯ ಸಪತ್ನೀಕಸ್ತ್ಯಜಿಷ್ಯತಿ ।
ಅನುಹಾನಿತಿ ವಾಕ್ಯೇನ ನಂದಯಾ ಸೂಚಿತಾಪಿ ಸಾ ॥ ೪೨ ॥

ತತೋನ್ಯಂ ನೃಪತಿಂ ಗತ್ವಾ ನಂದಾ ಪ್ರೋವಾಚ ಚಂಪಿಕಾಂ ।
ಪಶ್ಯೈನಂ ನೃಪತಿಂ ಮುಗ್ಧೇ ಹರಿದ್ವಾರನಿವಾಸಿನಂ ॥ ೪೩ ॥

೩೯–೪೦. ಇವನಿಗೆ ನೀನು ಹೆಂಡತಿಯಾದರೆ ಮನೆಯ ಮಹಡಿಯ ಮೇಲಿರುವ ಗವಾಕ್ಷಗಳಿಂದಲೇ ಸಮುದ್ರವನ್ನು ನೋಡುತ್ತ ಸಂತೋಷಪಡುತ್ತಿರಬಹುದು. ಅಲ್ಲದೆ ಇವನನ್ನು ಮದುವೆಯಾದರೆ ಇವನ ಅಂತಃಪುರದ ಸ್ತ್ರೀಯರಿಗೆಲ್ಲಾ ನೀನೇ ಯಜಮಾನಿಯೂ ಆಗಬಹುದು.

೪೧. ನಂದೆಯು ಹೀಗೆ ಹೇಳಿದರೂ ಚಂಪಿಕೆಯು ಆತನಲ್ಲಿ ಮನಸ್ಸಿಡದೆ ದಾದಿಯನ್ನು ಮುಂದೆ ಹೋಗುವಂತೆ ಹೇಳಿದಳು.

೪೨. ಇವನು ಬಹಳಜನ ಹೆಂಡತಿಯುಳ್ಳವನು. ಇವನನ್ನು ನೀನು ಮದುವೆಯಾದರೆ ಕೆಲವುಕಾಲದಮೇಲೆ ಬೇರೆ ಹೆಂಡತಿಯರ ಭಯದಿಂದ ನಿನ್ನನ್ನು ಇವನು ಬಿಟ್ಟುಬಿಡಬಹುದು. ಇವನು ಯೋಗ್ಯನಲ್ಲ. ಎಂಬುದಾಗಿ ನಂದೆಯು ಸೂಚಿಸಿದಳು.

೪೩. ಅನಂತರ ನಂದೆಯು ಮತ್ತೊಬ್ಬರಾಜನ ಬಳಿಗೆ ಕರೆದುಕೊಂಡು ಹೋಗಿ ಚಂಪಿಕೆಯನ್ನು ಕುರಿತು ಇಂತೆಂದಳು. ಎಲೈ ಬಾಲಿಕೆಯೇ ! ಈ ರಾಜನನ್ನು ನೋಡು. ಇವನು ಹರಿದ್ವಾರದಲ್ಲಿರುವವನು.

ನೀಪಾನ್ವಯುಸಮುದ್ಭೂತಂ ಹ್ಯಬ್ಧಾವಿವ ನಿಶಾಕರಂ ।
ಯಜ್ಞಾನಾಂ ನೃಪತೇರಸ್ಯ ಕೀತ್ರ್ಯಾ ಜಗತಿಮಂಡಲೇ ॥ ೪೪ ॥

ಯಜ್ಞಕೀರ್ತಿರಿತಿಖ್ಯಾತಃ ಪೃಥ್ವೀಶಃ ಪ್ರಮದಾಪ್ರಿಯಃ ।
ವರಯೈನಂ ನೃಪಂ ಪುತ್ರಿ ರುಕ್ಮಭೂಷಣಭೂಷಿತಂ ॥ ೪೫ ॥

ಅಸ್ಯಾದ್ಯ ಮಹಿಷೀಭೂತ್ವಾ ಗಂಗಾವೀಚಿಪರಂಪರಾಃ ।
ನೌಕಾಸ್ಥಾ ಪಶ್ಯಸಿ ತ್ವಂ ಹಿ ವರಯೈನಂ ನೃಪೋತ್ತಮಂ ॥ ೪೬ ॥

ಅಸ್ಯ ಪತ್ನೀ ವರಿಷ್ಠಾ ತ್ವಂ ಭವ ಮಾಗ್ರೇ ವ್ರಜಾಬಲೇ ।
ಇತ್ಯುಕ್ತ್ವಾಪಿ ತಯಾ ತಸ್ಮಿನ್ನ ಬಬಂಧ ನಿಜಂ ಮನಃ ॥ ೪೭ ॥

೪೪–೪೫. ನೀಪನವಂಶದಲ್ಲಿ ಹುಟ್ಟಿದವನು. ಚಂದ್ರನು ಸಮುದ್ರದಲ್ಲಿ ಹುಟ್ಟಿದಂತೆ ಹುಟ್ಟಿರುವನು. ಇವನು ಅನೇಕವಾದ ಯಜ್ಞಗಳನ್ನು ಮಾಡಿ ಆ ಕೀರ್ತಿಯಿಂದಲೇ ಲೋಕದಲ್ಲಿ ಯಜ್ಞಕೀರ್ತಿಯೆಂಬದಾಗಿ ಹೆಸರನ್ನು ಪಡೆದಿದ್ದಾನೆ. ಈ ರಾಜನು ಕಾಮಿನಿಯರಿಗೆ ಬಹಳ ಪ್ರಿಯನು. ಭೂಷಣಗಳಿಂದ ಭೂಷಿತನಾದ ಈತನನ್ನು ನೀನು ವರಿಸು.

೪೬. ಇವನನ್ನು ಮದುವೆಯಾದರೆ ಇವನಿಗೆ ನೀನು ಮೊದಲನೆಯ ಹೆಂಡತಿಯಾಗಿ ಗಂಗೆಯಲ್ಲಿ ದೋಣಿಗಳಮೇಲೆ ಕ್ರೀಡಿಸುತ್ತ ಆ ಗಂಗೆಯ ಅಲೆಗಳ ಸೊಬಗುಗಳನ್ನು ನೋಡುತ್ತೀಯೆ. ಆದ್ದರಿಂದ ಈತನನ್ನು ವರಿಸು.

೪೭. ಇವನನ್ನು ನೀನು ಮದುವೆಯಾದರೆ ಇವನಿಗೆ ಉತ್ತಮಳಾದ ಹೆಂಡತಿಯಾಗುತ್ತೀಯೆ. ಆ ರೀತಿಯಾದ ಇವನನ್ನು ಮದುವೆಯಾಗು. ಎಲೈ ಬಾಲೆಯೇ ! ಮುಂದೆಹೋಗಬೇಡ ಎಂದಳು. ಆ ನಂದೆಯು ಇಂತೆಂದು ಹೇಳಿದರೂ ಆ ಚಂಪಿಕೆಗೆ ಈತನನ್ನು ವರಿಸಲು ಮನಸ್ಸು ಬರಲಿಲ್ಲ.

ತ್ವಂ ವರಿಷ್ಠಾ ಮಾ ಭವೇತಿ ನಂದಯಾಗ್ರೇ ಪ್ರಜೇರಿತಾ ।
ಚೋದಯಾಮಾಸ ಸಾ ನಂದಾಮಗ್ರೇ ಗಂತುಂ ನೃಪಾಂತರಂ ॥ ೪೮ ॥

ನಂದಾಪ್ಯನ್ಯಂ ನೃಪಂ ನೀತ್ವಾ ಚಂಪಿಕಾಂ ಪ್ರಾಹ ವೇಗತಃ ।
ಪಶ್ಯೈನಂ ನೃಪತಿಂ ಮುಗ್ಧೇ ಶೂರಸೇನಾಹ್ವಯೇ ವರೇ ॥ ೪೯ ॥

ದೇಶೇ ಕರೋತಿ ವೈ ರಾಜ್ಯಂ ಸುಷೇಣೋಽಯಮನುತ್ತಮಃ । ॥ ೫೦ ॥

ತುರಗಾ ವಾಯುವೇಗಾಶ್ಚ ಯಸ್ಯ ಪತ್ನ್ಯೋ ಮೃಗೀದೃಶಃ ।
ವರಯೈನಂ ಚಂಪಿಕೇದ್ಯ ತವಾನನವದಾನನಂ ॥ ೫೧ ॥

---

೪೮. ಆ ನಂದೆಯು ಆಡಿದ ಮಾತಿನಲ್ಲಿ ನೀನು ಅವಸರಪಡಬೇಡ. ಮುಂದಾಲೋಚನೆಯನ್ನು ಮಾಡಿ ಮುಂದೆ ಹೊರಡು ಎಂದು ಅರ್ಥವು ಬಂದುದರಿಂದ ಚಂಪಿಕೆಯು ನಂದೆಯನ್ನು ಮುಂದಿನ ರಾಜರಬಳಿಗೆ ಹೋಗುವಂತೆ ಹೇಳಿದಳು.

೪೯-೫೦. ಆ ನಂದೆಯು ಮತ್ತೊಬ್ಬ ರಾಜನಬಳಿಗೆ ಕರೆದುಕೊಂಡು ಹೋಗಿ ಈ ಚಂಪಿಕೆಯನ್ನು ಕುರಿತು ಎಲೈ ಸುಂದರಿಯೇ ! ಇವನು ಶೂರಸೇನ ದೇಶಕ್ಕೆ ರಾಜನು ಇವನ ಹೆಸರು ಸುಶೇಣನು. ಇವನು ಉತ್ತಮನು. ಇವನ ದೇಶವು ವಾಯುವೇಗವುಳ್ಳ ಕುದುರೆಗಳಿಗೆ ಉತ್ಪತ್ತಿಸ್ಥಾನವು. ಅಂತಹ ಕುದುರೆಗಳು ಇವನಲ್ಲಿ ಬಹುವಾಗಿ ಇವೆ. ಅನೇಕಜನ ಹರಿಣಾಕ್ಷಿಯರಿಗೆ ಗಂಡನು.

೫೧. ಇವನ ಮನೆಯ ಅಂಗಳದಲ್ಲಿ ನರ್ತಕಿಯರು ನಿತ್ಯವೂ ಹಗಲು ರಾತ್ರಿಗಳಲ್ಲಿಯೂ ಗಾನಮಾಡುತ್ತ ಕುಣಿಯುತ್ತಿರುವರು. ಎಲೈ ಚಂಪಿಕೆಯೇ ! ಈತನನ್ನು ವರಿಸು. ಈತನ ಮುಖವೂ ನಿನ್ನ ಮುಖವೂ ಒಂದೇ ರೀತಿಯಾಗಿವೆ.

ಅಸ್ಯ ತ್ವಂ ಮಹಿಷೀ ಭೂತ್ವಾ ಜನ್ಮಸಾಫಲ್ಯತಾಂ ಕುರು ।
ವಾರಸ್ತ್ರೀಲಂಪಟಂ ಶ್ರುತ್ವಾ ತಥಾ ವಾಕ್ಯಮನುತ್ತಮಂ ॥ ೫೨ ॥

ನ ಬಬಂಧ ಮನಸ್ತಸ್ಮಿನ್ನೃಪತೌ ತಾಂ ಪ್ರಚೋದಯತ್ ।
ಅಥ ಸಾ ಚೋದಿತಾ ನಂದಾ ತಯಾನ್ಯಂ ನೃಪತಿಂ ಕ್ಷಣಾತ್ ॥ ೫೩ ॥

ನಿನಾಯ ಶಿಬಿಕಾಸ್ಥಾಂ ತಾಂ ಚಂಪಿಕಾಮಾಹ ಸಾದರಂ ।
ಪಶ್ಯೈನಂ ನೃಪತಿಂ ಬಾಲೇ ಸ್ಥಿತಂ ಹೈಹಯಪತ್ತನೇ ॥ ೫೪ ॥

ಸಹಸ್ರಾರ್ಜುನವಂಶಸ್ಯ ಭೂಷಣಂ ಕಮಲೇಕ್ಷಣಂ ।
ಪ್ರತೀಪ ಇತಿ ನಾಮ್ನಾಯಂ ಖ್ಯಾತಶ್ಶೂರೋ ಮಹಾರಥೀ ॥ ೫೫ ॥

ವರಯೈನಂ ನೃಪಂ ಮಾನ್ಯಂ ಗಚ್ಛ ಹೇಮಸ್ವರೂಪಿಣಿ ।
ಅಸ್ಯ ತ್ವಂ ಮಹಿಷೀ ಭೂತ್ವಾ ರೇವಾಯಾಂ ಪತಿನಾ ಸಹ ॥ ೫೬ ॥

೫೨-೫೩. ಇವನಿಗೆ ನೀನು ಹೆಂಡತಿಯಾಗಿ ನಿನ್ನ ಜನ್ಮವನ್ನು ಸಫಲವನ್ನಾಗಿ ಮಾಡಿಕೋ. ಎಂದೆನ್ನಲು ಈತನು ಸೂಳೆಯರಲ್ಲಿ ಆಸಕ್ತನೆಂಬುದನ್ನು ಕೇಳಿ ಚಂಪಿಕೆಯು ಮನಸ್ಸು ಅವನಲ್ಲಿ ಒಡಂಬಡಲಿಲ್ಲ. ಆದ್ದರಿಂದ ನಂದೆಯನ್ನು ಮುಂದೆ ಹೋಗುವಂತೆ ಹೇಳಿದಳು. ಈ ಮಾತನ್ನು ಕೇಳಿ ನಂದೆಯು ಮುಂದಿನ ರಾಜನಲ್ಲಿಗೆ ಆಕೆಯನ್ನು ಕರೆದುಕೊಂಡು ಹೋದಳು.

೫೪-೫೫. ಅಲ್ಲಿಗೆ ಕರೆದುಕೊಂಡು ಹೋಗಿ ಚಂಪಿಕೆಯನ್ನು ಕುರಿತು ಎಲೈ ಬಾಲೆಯೇ! ಇವನು ಹೈಹಯಪಟ್ಟಣದಲ್ಲಿರುವನು. ಇವನು ಸಹಸ್ರಾರ್ಜನ ವಂಶಕ್ಕೆ ಭೂಷಣನು. ಇವನ ಹೆಸರು ಪ್ರತೀಪನೆಂದು. ಇವನು ಖ್ಯಾಂತಿವಂತನು. ಶೂರನು. ಮಹಾರಥಿಕನೂ ಆಗಿರುವನು.

೫೬. ಇವನು ಗೌರವಸ್ಥನು ಇವನನ್ನು ವರಿಸು. ಚಿನ್ನದಂತಿರುವ ಬಣ್ಣವುಳ್ಳವಳೇ! ಹೋಗಿ ಇವನನ್ನು ವರಿಸಿ ಇವನಿಗೆ ನೀನು ಹೆಂಡತಿಯಾಗು. ಅಲ್ಲಿರುವ ರೇವಾನದಿಯಲ್ಲಿ ಗಂಡನೊಡನೆ ಜಲಕ್ರೀಡೆಯನ್ನಾಡು.

ಕರಿಷ್ಯಸಿ ಜಲಕ್ರೀಡಾಂ ಚಂಪಿಕೇ ಶ್ರುಣು ಮದ್ವಚಃ ।
ಇತ್ಯುಕ್ತಾಪಿ ತಯಾ ತನ್ವೀ ನ ಬಬಂಧ ಮನೋ ನೃಪೇ ॥ ೫೭ ॥

ವರಯೈನಂ ನೃಪಂ ಮೇತಿ ನಂದಾಸ್ಯಾದಮಹಾರಥೀ ।
ನೃಪೋಯಂ ಚೇತಿ ವಾಕ್ಯೇ ದ್ವೇ ಶ್ರುತ್ವಾ ಹ್ಯರ್ಥವಿದುತ್ತಮಾ ॥ ೫೮ ॥

ಏವಂ ನಾನಾ ನೃಪಾಣಾಂ ಸಾ ವರ್ಣನಾನಿ ಪೃಥಕ್ ಪೃಥಕ್ ।
ಸ್ತುತಿರೂಪನಿಷೇಧಾನಿ ಶುಶ್ರೂಷಂತೀ ನೃಪಾತ್ಮಜಾ ॥ ೫೯ ॥

ಜಗಾಮ ಶಿಬಿಕಾಸಂಸ್ಥಾ ಸನಂದಾ ಭರತಾನುಜಂ ।
ಸುಮಂತ್ರಾದೀನತಿಕ್ರಮ್ಯ ಶ್ರುತ್ವಾ ಶ್ರೀರಾಮಮಂತ್ರಿಣಃ ॥ ೬೦ ॥

---

೫೭. ಎಲೈ ಚಂಪಿಕೆಯೇ! ನನ್ನ ಮಾತನ್ನು ಕೇಳು ಎಂದಳು. ಆಕೆಯು ಹೀಗೆ ಹೇಳಿದರೂ ಚಂಪಿಕೆಗೆ ಅವನಲ್ಲಿ ಇಷ್ಟಬರಲಿಲ್ಲ.

೫೮. ನಂದೆಯು ಜೋಡಿಸಿದ ಮಾತುಗಳಿಂದ ಇವನನ್ನು ನೀನು ಮದುವೆಯಾಗಬೇಡ. ಇವನು ಮಹಾರಥಿಯಲ್ಲ ಎಂದು ಎರಡು ವಾಕ್ಯಗಳನ್ನು ಈಕೆಯು ಬುದ್ಧಿವಂತಿಕೆಯಿಂದ ತಿಳಿದುಕೊಂಡಳು.

೫೯. ಇದೇ ರೀತಿಯಾಗಿ ಅನೇಕಜನ ರಾಜರುಗಳ ವರ್ಣನೆಯನ್ನು ಒಬ್ಬೊಬ್ಬರದನ್ನಾಗಿ ಕೇಳುತ್ತ ಹೊರಟಳು. ಅವು ನೋಡಲು ಸ್ತುತಿರೂಪವಾಗಿದ್ದರೂ ಒಳಗೆ ಬೇಡ ಎಂಬ ನಿಷೇಧದಿಂದ ಕೂಡಿದ್ದುವು. ಇವನ್ನು ಕೇಳುತ್ತ ಮುಂದಕ್ಕೆ ಹೋಗುತ್ತಿದ್ದಳು.

೬೦. ಹೀಗೆಯೇ ಹೋಗುತ್ತಲಿದ್ದ ನಂದೆಯು ರಾಜರನ್ನು ಒಬ್ಬೊಬ್ಬರನ್ನಾಗಿ ಬಿಟ್ಟು ಹೋಗುತ್ತ ಕೊನೆಗೆ ಎಲ್ಲರನ್ನೂ ಬಿಟ್ಟು ರಾಮನ ಮಂತ್ರಿಗಳಾದ ಸುಮಂತ್ರಾದಿಗಳು ಅಲ್ಲಿರಲು ಅವರು ರಾಮನ ಮಂತ್ರಿಗಳೆಂದು ತಿಳಿದು ಅವರನ್ನು ಬಿಟ್ಟು ಮುಂದೆ ಕುಳಿತಿರುವ ಭರತಾನುಜನಾದ ಶತ್ರುಘ್ನನ ಬಳಿಗೆ ಹೋದಳು.

ತತಃ ಪ್ರೋವಾಚ ಸಾ ನಂದಾ ಪಶ್ಯೈನಂ ಭರತಾನುಜಂ ।
ಕೋಸಲೇಂದ್ರಸ್ಯ ರಾಮಸ್ಯ ಬಂಧುಮೇಕೋದರೋಪಮಂ ॥ ೬೧ ॥

ಅಯೋಧ್ಯಾವಾಸಿನಂ ರಾಮರಾಜವಾಕ್ಯಾನುವರ್ತಿನಂ ।
ವರಯೈನಂ ಚಂಪಿಕೇದ್ಯ ಶ್ರುತಕೀರ್ತ್ಯಾಃ ಸ್ವಸಾ ಭವ ॥ ೬೨ ॥

ಇತ್ಯುಕ್ತ್ವಾಪಿ ತಯಾ ತನ್ವೀ ಶತ್ರುಘ್ನೇ ನಿಜಮಾನಸಂ ।
ನ ಬಬಂಧ ಭ್ರುವಾ ಸಂಜ್ಞಾಮಗ್ರೇ ಗಂತುಂ ಚಕಾರ ತಾರಿ ॥ ೬೩ ॥

ತತಸ್ತಾ ಭರತಂ ನೀತ್ವಾ ನಂದಾ ತಾಮಾಹ ಮಂಜುಲಂ ।
ಶತ್ರುಘ್ನಸ್ಯಾಗ್ರಜಂ ಚೈನಂ ಕೈಕೇಯ್ಯಾಜಠರೋದ್ಭವಂ ॥ ೬೪ ॥

---

೬೧. ಅಲ್ಲಿ ನಂದೆಯು ಚಂಪಿಕೆಯನ್ನು ಕುರಿತು ಎಲೈ ಚಂಪಿಕೆಯೇ ! ಭರತಾನುಜನಾದ ಶತ್ರುಘ್ನನನ್ನು ನೋಡು. ಇವನು ಕೋಸಲೇಂದ್ರನಾದ ರಾಮನಿಗೆ ತಮ್ಮನು. ಇವನು ರಾಮನಿಗೆ ಬೇರೆತಾಯಿಯ ಮಗನಾದರೂ ಒಬ್ಬ ತಾಯಿಯ ಹೊಟ್ಟೆಯಲ್ಲಿಯೇ ಹುಟ್ಟಿದಂತಿರುವನು.

೬೨. ಇವನು ಅಯೋಧ್ಯೆಯಲ್ಲಿದ್ದುಕೊಂಡು ಇರುವನು. ರಾಜನಾದ ರಾಮನ ಅಪ್ಪಣೆಯಂತೆ ನಡೆಯತಕ್ಕವನು. ಎಲೈ ಚಂಪಿಕೆಯೇ ! ಇವನನ್ನು ವರಿಸು. ಇವನ ಹೆಂಡತಿಯಾಗಿ ಶ್ರುತಕೀರ್ತಿಗೆ ತಂಗಿಯಾಗು.

೬೩. ನಂದೆಯು ಹೀಗೆ ಹೇಳಿದರೂ ಚಂಪಿಕೆಗೆ ಆತನಲ್ಲಿ ಮನಸ್ಸು ಬರಲಿಲ್ಲ ಆಗ ಹುಬ್ಬಿನ ಸನ್ನೆಯಿಂದಲೇ ನಂದೆಯು ಮುಂದೆ ಹೊರಡುವಂತೆ ಹೇಳಿದಳು.

೬೪–೬೫. ಮುಂದೆ ಭರತನು ಕುಳಿತಿರಲು ನಂದೆಯು ಅವನ ಬಳಿಯಲ್ಲಿ ನಿಂತುಕೊಂಡು ಮೃದುವಾಗಿ ಎಲೈ ಚಂಪಿಕೆಯೇ ! ಇವನು ಶತ್ರುಘ್ನನಿಗೆ ಅಣ್ಣನು.

ರಾಮಸೇವಾರತಂ ಶಾಂತಂ ಯುವಾನಂ ದಯಿತಾಪ್ರಿಯಂ ।
ವರಯೈನಂ ಬಾಲಿಕೇದ್ಯ ಮಾಂಡವ್ಯಾ ಸರಯೂಜಲೇ ॥ ೬೫ ॥

ಕರಿಷ್ಯಸಿ ಜಲಕ್ರೀಡಾಂ ನೌಕಾಸ್ಥಾ ಭರತೇನ ಹಿ ।
ತತಸ್ತತ್ಸಂಜ್ಞಯಾ ನಂದಾ ಲಕ್ಷ್ಮಣಂ ಚಂಪಿಕಾಂ ಜವಾತ್ ॥ ೬೬ ॥

ನೀತ್ವಾ ಸೌಮಿತ್ರಿಕೀರ್ತಿಂ ತಾಂ ವರ್ಣಯಾಮಾಸ ಸಾದರಂ ।
ಪಶ್ಯೈನಂ ಲಕ್ಷ್ಮಣಂ ಬಾಲೇ ಸುಮಿತ್ರಾಜಠರೋದ್ಭವಂ ॥ ೬೭ ॥

ಅಯೋಧ್ಯಾವಾಸಿನಂ ರಾಮಸೇವಾರಕ್ತಂ ಮನೋಹರಂ ।
ವರಯೈನಂ ಚಂಪಿಕೇದ್ಯ ಮೇಘನಾದಪ್ರಮರ್ದನಂ ॥
ಶೇಷಾಂಶಸಂಭವಂ ವೀರಂ ಚೋರ್ಮಿಲಾಯಾಃ ಸ್ವಸಾ ಭವ ॥ ೬೮ ॥

ಕೈಕೇಯಿಯ ಮಗನು. ರಾಮಸೇವೆಯಲ್ಲಿಯೇ ಆಸಕ್ತನು. ಶಾಂತನು. ಯುವಕನು. ಹೆಂಡತಿಯಲ್ಲಿ ಬಹುವಾದ ಪ್ರೀತಿಯುಳ್ಳವನು. ಇವನನ್ನು ವರಿಸು.

೬೬. ಇವನನ್ನು ನೀನು ಮದುವೆಯಾದರೆ ಇವನ ಹೆಂಡತಿಯಾದ ಮಾಂಡವಿಯೊಡನೆ ಸರಯೂನದಿಯ ನೀರಿನಲ್ಲಿ ನೌಕೆಯಲ್ಲಿ ಕುಳಿತು ಜಲಕ್ರೀಡೆ ಯಾಡುವೆಯಂತೆ. ಎಂದೆನ್ನಲು ಚಂಪಿಕೆಯು ಮುಂದೆ ಹೋಗುವಂತೆ ನಂದೆಗೆ ಸಂಜ್ಞೆಯನ್ನು ಮಾಡಿದಳು. ಅದರಂತೆ ನಂದೆಯು ಲಕ್ಷ್ಮಣನ ಬಳಿಗೆ ಈಕೆಯನ್ನು ಕರೆದುಕೊಂಡು ಹೋದಳು.

೬೭–೬೮. ನಂದೆಯು ಆ ಲಕ್ಷ್ಮಣನ ಬಳಿಗೆ ಹೋಗಿ ಅವನ ಕೀರ್ತಿಯನ್ನು ಹೊಗಳಿದಳು. ಎಲೈ ಚಂಪಿಕೆಯೇ! ಇವನು ಲಕ್ಷ್ಮಣನು. ಸುಮಿತ್ರೆಯ ಹೊಟ್ಟೆಯಲ್ಲಿ ಹುಟ್ಟಿದವನು. ಇವನು ಅಯೋಧ್ಯೆಯಲ್ಲಿರುವನು. ರಾಮಸೇವೆಯಲ್ಲಿ ಆಸಕ್ತನು. ಸುಂದರನು. ಮೇಘನಾದನನ್ನು ಸಂಹರಿಸಿದ ಇವನನ್ನು ನೀನು ವರಿಸು. ಇವನು ಆದಿಶೇಷನ ಅಂಶದಿಂದ ಹುಟ್ಟಿದವನು. ವೀರನು. ಇವನಿಗೆ ಊರ್ಮಿಲೆಯೆಂಬ ಹೆಂಡತಿಯಿರುವಳು. ಇವನನ್ನು ಮದುವೆಯಾದರೆ ಆ ಊರ್ಮಿಳೆಗೆ ತಂಗಿಯಾಗುತ್ತೀಯೆ.

ಸರ್ವಾನ್ ಶ್ರುತ್ವಾ ರಾಮಸೇವಾರಕ್ತಾನ್ ಪತ್ನೀಯುತಾನಪಿ |
ಛತ್ರಚಾಮರಹೀನಾಂಶ್ಚ ರೋಚಯಾಮಾಸ ತಾನ್ನ ಸಾ ॥ ೬೯ ॥

ತತಸ್ತತ್ಸಂಜ್ಞಯಾ ನಂದಾ ಶ್ರೀರಾಮಾಗ್ರೇ ಸ್ವಯಂವರಾಂ |
ನೀತ್ವಾ ತಾಮಾಹ ಮಧುರಂ ಸ್ತೋತುಂ ತಂ ರಘುನಂದನಂ ॥ ೭೦ ॥

ಮಹತ್ತೇ ಚಂಪಿಕೇ ದೈವಮೇನಂ ಪಶ್ಯಸಿ ರಾಘವಂ |
ಧನ್ಯಾಹಮಪಿ ಯಾ ರಾಮಂ ದೃಷ್ಟ್ವಾ ಸ್ತೋತುಂ ಪುರಃ ಸ್ಥಿತಾ ॥ ೭೧ ॥

ಕ್ವಾಹಂ ಮಂದಮತಿರ್ನಾರೀ ಕ್ವ ರಾಮೋ ಗುಣಸಾಗರಃ |
ನಾಹಂ ತತ್ ಸ್ತವನೇ ಶಕ್ತಾ ವಾಲ್ಮೀಕಿರ್ಯತ್ರ ಕುಂಠಿತಃ ॥ ೭೨ ॥

---

೬೯. ಆ ಚಂಪಿಕೆಯು ಇಂತೆಯೇ ರಾಮಸೇವಾಸಕ್ತರಾದವರೆಲ್ಲರನ್ನೂ ಕೇಳುತ್ತ ಬಂದಳು. ಅವರೆಲ್ಲರಿಗೂ ಮದುವೆಯಾಗಿ ಹೆಂಡತಿಯರಿದ್ದರು. ಛತ್ರಚಾಮರಗಳು ಅವರಿಗಿರಲಿಲ್ಲ. ಆದ್ದರಿಂದ ಅವರೊಬ್ಬರನ್ನೂ ಆಕೆಯು ಮೋಹಿಸಲಿಲ್ಲ.

೭೦. ಚಂಪಿಕೆಯ ಸಂಜ್ಞೆಯಂತೆ ನಂದೆಯು ಮುಂದೆ ಹೊರಟು ರಾಮನ ಎದುರಿನಲ್ಲಿ ನಿಂತಳು. ಅಲ್ಲಿ ಆ ರಘುವೀರನನ್ನು ವರ್ಣಿಸಲು ಮೊದಲು ಮಾಡಿದಳು.

೭೧. ಎಲೈ ಚಂಪಿಕೆಯೇ! ನಿನ್ನ ಭಾಗ್ಯವು ಬಹು ಉತ್ತಮವಾದುದು. ಈ ರಾಮನನ್ನು ನೋಡುತ್ತ ಅವನಮುಂದೆ ನಿಂತಿರುವೆಯಲ್ಲ! ನಾನೂ ಅವನ ಮುಂದೆ ನಿಂತು ಸ್ತುತಿಸುತ್ತಿರುವುದರಿಂದ ಈಗ ಧನ್ಯಳಾಗಿದ್ದೇನೆ.

೭೨. ರಾಮನನ್ನು ವರ್ಣಿಸಲು ದಡ್ಡಳೂ, ಹೆಂಗಸೂ ಆದ ನಾನೆಲ್ಲಿ? ಗುಣಸಾಗರನಾದ ಆ ರಾಮನೆಲ್ಲಿ? ಆ ರಾಮನನ್ನು ವರ್ಣಿಸಲು ವಾಲ್ಮೀಕಿಗೇ ಆಗದಿರುವಲ್ಲಿ ನನ್ನ ಕೈಯ್ಯಲ್ಲಿ ಸುತರಾಂ ಆಗುವುದೇ ಇಲ್ಲ.

ಶತಕೋಟಿಮಿತೈಃ ಶ್ಲೋಕೈಶ್ಚರಿತ್ರಂ ರಾಘವಸ್ಯ ಹಿ ।
ಮುನಿನಾ ವರ್ಣಿತಂ ತಚ್ಚ ಶತಕೋಟ್ಯಂಶವರ್ಣಿತಂ ॥ ೭೩ ॥

ತಸ್ಯಾಹಂ ವರ್ಣನಂ ಕಿಂಚಿತ್ಕರೋಮಿ ಯತ್ ಶೃಣುಷ್ವ ತತ್ ।
ಸೂರ್ಯವಂಶಭೂಷಣಂ ಶ್ರೀದಶರಥನೃಪಾತ್ಮಜಂ ॥ ೭೪ ॥

ಕೌಸಲ್ಯಾತನಯಂ ರಾಮಂ ಸಾಕ್ಷಾನ್ನಾರಾಯಣಂ ವಿಭುಂ ।
ತಾಟಿಕಾಂತಕರಂ ವೀರಂ ಗಾಧಿಜಾಧ್ವರಪಾಲಕಂ ॥ ೭೫ ॥

ಅಹಲ್ಯೋದ್ಧಾರಿಣಂ ಶ್ರೇಷ್ಠಂ ಶಿವಚಾಪೈಕಖಂಡನಂ ।
ಜಾನಕೀವಲ್ಲಭಂ ರಾಮಂ ಜಾಮದಗ್ನ್ಯದವಾನಲಂ ॥ ೭೬ ॥

---

೭೩. ಆ ರಾಘವನ ಚರಿತ್ರೆಯನ್ನು ವಾಲ್ಮೀಕಿಯು ನೂರುಕೋಟಿ ಶ್ಲೋಕಗಳಿಂದ ವರ್ಣಿಸಿರುವನು. ಆದರೂ ಕೂಡ ಅದು ಆ ರಾಮನ ಗುಣಗಳಲ್ಲಿ ನೂರಾರುಕೋಟಿಯಲ್ಲಿ ಒಂದಂಶವಾಗಿರುವುದೋ ಇಲ್ಲವೋ ತಿಳಿಯೆನು.

೭೪. ಆದರೂ ಕೂಡ ಅಂತಹ ರಾಮನ ಚರಿತ್ರೆಯನ್ನು ಸ್ವಲ್ಪ ವರ್ಣಿಸುತ್ತೇನೆ. ಅದನ್ನು ಕೇಳು. ಇವನು ಸೂರ್ಯವಂಶಕ್ಕೆ ಭೂಷಣನು ದಶರಥನ ಮಗನು.

೭೫. ಇವನು ಕೌಸಲ್ಯೆಯ ಮಗನು. ಇವನು ಸಾಕ್ಷಾತ್ ನಾರಾಯಣಾವತಾರದವನು. ತಾಟಕಿಯನ್ನು ಸಂಹರಿಸಿದವನು. ವೀರನು ವಿಶ್ವಾಮಿತ್ರನ ಯಾಗವನ್ನು ರಕ್ಷಿಸಿದವನು.

೭೬. ಅಹಲ್ಯೆಯನ್ನು ಉದ್ಧರಿಸಿದವನು. ಶ್ರೇಷ್ಠನು. ಶಿವಚಾಪವನ್ನು ಬಗ್ಗಿಸಿ ಮುರಿದಿರುವನು. ಜಾನಕಿಗೆ ವಲ್ಲಭನು. ಜಾಮದಗ್ನಿಯೆಂಬ ಕಾಡಿಗೆ ಕಾಳ್ಗಿಚ್ಚಿನರೂಪನು.

ನೃಪವೃಂದೈಕಜೇತಾರಂ ಭರತಪ್ರಾಣದಾಯಿನಂ ।
ತಾತಾಜ್ಞಾಪಾಲಕಂ ಭ್ರಾತ್ರಾ ಸೀತಯಾರಣ್ಯವಾಸಿನಂ ।
ವಿರಾಧಮರ್ದನಂ ಶ್ಯಾಮಂ ಖರದೂಷಣಮರ್ದನಂ ॥ ೭೭ ॥

ತ್ರಿಶಿರಾಮೃಗಮಾರೀಚಕಬಂಧವಾಲಿಮರ್ದನಂ ।
ಸಮುದ್ರಬಂಧನಂ ಲಂಕಾರಾಕ್ಷಸಾಂತಕರಂ ಪ್ರಭುಂ ॥ ೭೮ ॥

ರಾವಣಾಂತಪ್ರಕರ್ತಾರಂ ಸೀತಯಾ ರಾಜ್ಯಕಾರಿಣಂ ।
ತೀರ್ಥಯಜ್ಞಪ್ರಕರ್ತಾರಂ ಸೀತಾಕ್ರೀಡನತತ್ಪರಂ ॥ ೭೯ ॥

ಜಾನಕೀತ್ಯಾಗಕರ್ತಾರಂ ಸೀತಾಗ್ರಹಣತತ್ಪರಂ ।
ಕುಶಲವಾತ್ಮಜಾಭ್ಯಾಂ ಚ ವಾಜ್ಯರ್ಥಂ ಯುದ್ಧಕಾರಿಣಂ ॥ ೮೦ ॥

---

೭೭. ರಾಜರ ಗುಂಪನ್ನೇ ಗೆದ್ದವನು. ಭರತನಿಗೆ ಪ್ರಾಣವನ್ನು ಕೊಟ್ಟಿರುವವನು. ತಂದೆಯ ಅಪ್ಪಣೆಯನ್ನು ಪಾಲಿಸಿದವನು ಸೀತೆಯೊಡನೆಯೂ, ಲಕ್ಷ್ಮಣನೊಡನೆಯೂ ಅರಣ್ಯವಾಸ ಮಾಡಿದವನು.ವಿರಾಧನನ್ನು ಕೊಂದವನು. ಶ್ಯಾಮಲವರ್ಣದವನು. ಖರದೂಷಣ ಸಂಹಾರಕನು.

೭೮. ತ್ರಿಶಿರ, ಮೃಗರೂಪನಾದ ಮಾರೀಚ, ಕಬಂಧ ಇವರನ್ನು ಕೊಂದವನು. ಸಮುದ್ರವನ್ನು ಬಂಧಿಸಿದವನು. ಲಂಕೆಯಲ್ಲಿರುವ ರಾಕ್ಷಸರೆಲ್ಲರನ್ನೂ ಕೊಂದವನು.

೭೯. ರಾವಣನನ್ನು ಕೊಂದವನು. ಸೀತೆಯೊಡನೆ ರಾಜ್ಯವನ್ನಾಳತಕ್ಕವನು. ತೀರ್ಥಗಳನ್ನು ಕಟ್ಟಿಸಿದವನು. ಯಜ್ಞಗಳನ್ನು ಮಾಡಿದವನು. ಸೀತೆಯಲ್ಲಿ ರಮಿಸುವುದರಲ್ಲಿ ಆಸಕ್ತನು.

೮೦. ಜಾನಕಿಯನ್ನು ಬಿಟ್ಟಿದ್ದವನು. ಅನಂತರದಲ್ಲಿ ಅವಳನ್ನು ಪರಿಗ್ರಹಿಸಿದವನು. ಕುದುರೆಗೋಸ್ಕರ ಕುಶಲವರೊಡನೆ ಯುದ್ಧಮಾಡಿದವನು.

ಏಕಪತ್ನೀವ್ರತಂ ಶಾಂತಂ ಸತ್ಯಭಾಷಣತತ್ಪರಂ
ಏಕಬಾಣಮುಸಂಖ್ಯಾತನಾಮಾನಂ ಮಾರುತಿಧ್ವಜಂ ॥ ೮೧ ॥

ಕೋವಿದಾರಧ್ವಜಂ ಬಾಣಧ್ವಜಂ ವಜ್ರಧ್ವಜಂ ಶುಭಂ ।
ತಾರ್ಕ್ಷ್ಯಧ್ವಜಂ ಪುಷ್ಪಕಸ್ಥಂ ತಾರ್ಕ್ಷ್ಯವಾಯುಜವಾಹನಂ ॥ ೮೨ ॥

ನಾನಾರಾಜಾವತಂಸಸ್ಥಮುಕ್ತಾದೀಪ್ತ್ಯಂಘ್ರಿಶೋಭಿತಂ ।
ವರಸಿಂಹಾಸನಾಸೀನಂ ಛತ್ರಚಾಮರಮಂಡಿತಂ ॥ ೮೩ ॥

ವರಯೈನಂ ಚಂಪಿಕೇದ್ಯ ಸೀತಯಾ ಭಜ ರಾಘವಂ ।
ನವವರ್ಷೇಶ್ವರಶ್ಲಾಘ್ಯಂ ಸಪ್ತದ್ವೀಪಾಧಿಪೋಽಪಿ ಚ ॥ ೮೪ ॥

---

೮೧. ಏಕಪತ್ನೀವ್ರತದಲ್ಲಿರುವವನು. ಶಾಂತನು ಸತ್ಯವನ್ನೇ ಆಡುವುದರಲ್ಲಿ ಆಸಕ್ತನು. ಒಂದೇ ಬಾಣವನ್ನು ತೊಡುವುದರಲ್ಲಿ ಪ್ರಸಿದ್ಧನಾದವನು. ಮಾರುತಿಯನ್ನೇ ಧ್ವಜದಲ್ಲಿ ಉಳ್ಳವನು.

೮೨. ಕೋವಿದಾರ (ಕಂಚುವಾಳದಮರ) ಬಾಣ ವಜ್ರ ಇವುಗಳೊಂದಂದನ್ನೂ ಧ್ವಜದಲ್ಲಿ ಉಳ್ಳವನು. ಗರುಡಧ್ವಜನೂ ಆಗಿರುವನು. ಪುಷ್ಪಕದಲ್ಲಿ ಕುಳಿತಿರುವವನು. ಗರುಡ, ಹನುಮಂತರೇ ವಾಹನವಾಗಿಯೂ ಉಳ್ಳವನು.

೮೩. ರಾಜರುಗಳ ತಲೆಯಲ್ಲಿರುವ ಬಗೆ ಬಗೆಯ ಮುತ್ತೇ ಮುಂತಾದ ಮಣಿಗಳಿಂದ ಪ್ರಕಾಶಿತವಾದ ಪಾದಪದ್ಮವುಳ್ಳವನು. ಉತ್ತಮವಾದ ಸಿಂಹಾಸನದಲ್ಲಿ ಕುಳಿತಿರುವವನು. ಛತ್ರ ಚಾಮರಗಳಿಂದ ಶೋಭಿತನಾಗಿರುವವನು.

೮೪. ಎಲೈ ಚಂಪಿಕೆಯೇ ! ಇವನನ್ನು ಮದುವೆಯಾಗು ಸೀತೆಯೊಡನೆ ಈ ರಾಮುನನ್ನು ಸೇವಿಸು. ಈ ರಾಮನು ನವವರ್ಷಗಳಿಂದು ಹೆಸರುಪಡೆದಿರುವ ರಾಜ್ಯಕ್ಕೆಲ್ಲಾ ಒಡೆಯನು. ಏಳುದ್ವೀಪಗಳಿಗೂ ಆಧಿಪನು.

ಬಾಣಃ ಪತ್ನೀವಚೋ ಯಸ್ಯ ನಾನ್ಯಂ ಮಾ ಖೇದ ಮಾ ಚರ ।
ನವರತ್ನಮಾಲಿಕಾಸ್ಯ ಗ್ರೀವಾಯಾಃ ಕುರು ಮಾ ವ್ರಜ ॥ ೮೫ ॥

ಇತ್ಯುಕ್ತ್ವಾ ನಂದಯಾ ಬಾಲಾ ಸ್ವಲ್ಪಪುಣ್ಯಾ ವಿಧೇರ್ವಶಾತ್ ।
ನ ಬಬಂಧ ಮನೋ ರಾಮೇ ಸೀತಾಂ ಸಂಸ್ಮೃತ್ಯ ಚಂಪಿಕಾ ॥ ೮೬ ॥

ಏಕಪತ್ನೀವ್ರತಂ ರಾಮಂ ಸೀತಯಾ ಹ್ಯಭಜೇತಿ ಚ ।
ಖೇದಂ ಮಾ ಚರ ತತ್ಕಂಠೇ ಮಾಲಾಂ ಮಾ ಕುರು ಚೋದಿತಾ ॥ ೮೭ ॥

ತತಸ್ತತ್ಸಂಜ್ಞಯಾ ನಂದಾ ತಾಂ ನಿನಾಯ ಕುಶಂ ಪ್ರತಿ ।
ಪ್ರೋವಾಚ ಮಧುರಂ ವಾಕ್ಯಂ ಕುಶವರ್ಣನಹರ್ಷಿತಾ ॥ ೮೮ ॥

---

೮೫. ಯಾವ ರಾಮನಿಗೆ ಒಂದೇ ಬಾಣ, ಒಬ್ಬಳೇ ಹೆಂಡತಿ, ಒಂದೇ ಮಾತು, ಇವು ಹೊರತು ಬೇರೆ ಇಲ್ಲವೋ ಅಂತಹ ಇವನನ್ನು ಹೊಂದು. ದುಃಖಪಡಬೇಡ. ನಿನ್ನ ಕೈಯ್ಯಲ್ಲಿರುವ ನವರತ್ನ ಮಾಲಿಕೆಯನ್ನು ಇವನ ಕತ್ತಿಗೆ ಹಾಕು. ಮುಂದೆ ಹೋಗಬೇಡ.

೮೬. ನಂದೆಯು ಚಂಪಿಕೆಗೆ ಹೀಗೆ ಹೇಳಿದರೂ ಆ ಚಂಪಿಕೆಯು ಸೀತೆಯೆಂಬ ಹೆಂಡತಿಯೊಬ್ಬಳಿರುವಳೆಂದೂ, ಅವಳಿಗೆ ಬಂದ ಕಷ್ಟಗಳನ್ನೆಲ್ಲಾ ಸ್ಮರಿಸಿಕೊಂಡೂ ಸ್ವಲ್ಪವೇ ಪುಣ್ಯವನ್ನು ಮಾಡಿದ್ದುದರಿಂದ ವಿಧಿಬಲದಿಂದ ಆ ರಾಮನಲ್ಲಿ ಮನಸ್ಸನ್ನು ಇಡಲಿಲ್ಲ.

೮೭. ಅಲ್ಲದೆ ಆ ನಂದೆಯ ಮಾತಿನ ಜೋಡಣೆಯಲ್ಲಿ ಈ ರಾಮನು ಏಕಪತ್ನಿವ್ರತದವನು ಸೀತೆಯು ಹೆಂಡತಿಯಾಗಿರುವಳು. ಇವನನ್ನು ಹೊಂದಬೇಡ. ದುಃಖವನ್ನೂ ಪಡಬೇಡ. ಅವನ ಕತ್ತಿಗ ಮಾಲೆಯನ್ನು ಹಾಕಲೇಬೇಡ. ಎಂಬುದಾಗಿ ಅರ್ಥವು ಬಂದು ನಿಷೇಧಿಸಿದುದನ್ನು ತಿಳಿದುಕೊಂಡಳು.

೮೮. ಅನಂತರ ಚಂಪಿಕೆಯು ಮುಂದೆ ಹೋಗುವಂತೆ ಸಂಜ್ಞೆಮಾಡಲು ದಾದಿಯು ಕುಶನ ಬಳಿಗೆ ಕರೆದುಕೊಂಡು ಹೋದಳು. ಅಲ್ಲಿ ಆಕೆಯು ಕುಶನ ವರ್ಣನೆಯಲ್ಲಿ ಹರ್ಷಿತಳಾಗಿ ಇಂತೆಂದು ವರ್ಣಿಸಿದಳು.

ಏನಂ ಪಶ್ಯಾಲ್ಪವಯಸಂ ಶ್ರೀರಾಮತನಯಂ ಕುಶಂ ।
ಜಾನಕೀಜಠರೋದ್ಭೂತಂ ಜ್ಯೇಷ್ಠಂ ಭಾರ್ಯಾರ್ಥಿನಂ ಶಿಶುಂ ॥ ೮೯ ॥

ಲವಾಗ್ರಜಂ ಧನುರ್ವೇದನಿಪುಣಂ ವಿನಯಾನ್ವಿತಂ ।
ಪಿತ್ರಾ ಸಂಗ್ರಾಮಕರ್ತಾರಂ ವಾಲ್ಮೀಕಿಮುನಿಶಿಕ್ಷಿತಂ ॥ ೯೦ ॥

ಏನಂ ವೃಣೀಷ್ವ ಬಾಲೇ ತ್ವಂ ಸುರಮಾನವಸಂಸ್ತುತಂ ।
ನವರತ್ನಮಯೀಂ ಮಾಲಾಮಸ್ಯ ಕಂಠೇ ಸುಖಂ ಕುರು ॥ ೯೧ ॥

ಇತಿ ನಂದಾವಚಃ ಶ್ರುತ್ವಾ ಚಂಪಿಕಾ ಸಾ ಸ್ಮಿತಾನನಾ ।
ಮುಮೋಚ ಮಾಲಿಕಾಂ ಕಂಠೇ ಸ್ವಕರಾಭ್ಯಾಂ ಕುಶಸ್ಯ ಹಿ ॥ ೯೨ ॥

---

೮೯. ಎಲೈ ಚಂಪಿಕೆಯೆ! ಇವನನ್ನು ನೋಡು. ಇವನು ಶ್ರೀರಾಮನ ಮಗನಾದ ಕುಶನು. ಚಿಕ್ಕವಯಸ್ಸಿನವನು. ಜಾನಕಿಯ ಜಠರದಲ್ಲಿ ಹುಟ್ಟಿದವನು. ಇವನೇ ದೊಡ್ಡಮಗನು. ಇವನಿಗೆ ಈಗ ಹೆಂಡತಿಯು ಬೇಕಾಗಿದ್ದಾಳೆ. ಮಂಗಳವುಳ್ಳವನು.

೯೦. ಇವನು ಲವನಿಗೆ ದೊಡ್ಡವನು. ಧನುರ್ವೇದದಲ್ಲಿ ನಿಪುಣನು. ವಿನಯವಂತನು. ತಂದೆಯೊಡನೆಯೇ ಯುದ್ಧಮಾಡಿದವನು. ವಾಲ್ಮೀಕಿಯಿಂದ ವಿದ್ಯೆಗಳನ್ನು ಕಲಿತವನು.

೯೧. ಎಲೈ ಬಾಲೆಯೇ! ಇವನನ್ನು ವರಿಸು. ಇವನನ್ನು ದೇವತೆಗಳೂ, ಮಾನವರೂ ಹೊಗಳುತ್ತಾರೆ. ನವರತ್ನಮಯವಾದ ಮಾಲೆಯನ್ನು ಇವನ ಕತ್ತಿನಲ್ಲಿ ಹಾಕು.

೯೨. ನಂದೆಯು ಹೀಗೆ ಹೇಳಿದುದನ್ನು ಕೇಳಿ ಚಂಪಿಕೆಯು ನಗುತ್ತ ತನ್ನ ಕೈಗಳಲ್ಲಿದ್ದ ನವರತ್ನದ ಮಾಲೆಯನ್ನು ಕುಶನ ಕತ್ತಿಗೆ ಹಾಕಿದಳು.

ತದಾ ನಿನೇದುರ್ವಾದ್ಯಾನಿ ತುಷ್ಟುವುರ್ವಂದಿಮಾಗಧಾಃ |
ಲಜ್ಜಯಾಧೋಮುಖೋ ರೇಜೇ ಸಭಾಯಾಂ ಕುಶಬಾಲಕಃ || ೯೩ ||

ತದಾ ತುಷ್ಟೋ ಭೂರಿಕೀರ್ತಿಃ ಕುಶಾಂಕೇ ಚಂಪಿಕಾಂ ಶುಭಾಂ |
ಸ್ಥಾಪಯಾಮಾಸ ವೇಗೇನ ಪಶ್ಯತ್ಸು ನೃಪತೀಷು ಚ || ೯೪ ||

ದದರ್ಶ ಜಾಲರಂಧ್ರೈಃ ಸ್ತಂ ಪ್ರಾಸಾದಸ್ಥಾ ವಿದೇಹಜಾ |
ಮುಮೋದ ನಿತರಾಂ ಸ್ತ್ರೀಭಿರ್ಮುಮೋದ ರಾಘವೋಽಪಿ ಸಃ || ೯೫ ||

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ವಿವಾಹಕಾಂಡೇ ಸ್ವಯಂವರಾರ್ಥಂ ಭೂರಿಕೀರ್ತೇಃ ಪುರಂ ಪ್ರತಿ ಶ್ರೀರಾಮಾಗಮನಂ ನಾಮ ದ್ವಿತೀಯಸ್ಸರ್ಗಃ

---

೯೩. ಆಗ ವಾದ್ಯಗಳು ಮೊಳಗಿದುವು. ಸ್ತುತಿಪಾಠಕರು ಹೊಗಳಿದರು. ಆಗ ಆ ಕುಶನು ಲಜ್ಜೆಯಿಂದ ತಲೆಯನ್ನು ತಗ್ಗಿಸಿಕೊಂಡಿದ್ದರೂ ಆ ಸಭೆಯಲ್ಲಿ ಆದರಿಂದಲೇ ಅವನು ಸುಂದರವಾಗಿ ಕಾಣುತ್ತಿದ್ದನು.

೯೪. ಇದರಿಂದ ಆ ಭೂರಿಕೀರ್ತಿಗೂ ಬಹುವಾದ ಸಂತೋಷವಾಯಿತು. ಆಗ ಒಡನೆಯೇ ಆ ಭೂರಿಕೀರ್ತಿಯು ಚಂಪಿಕೆಯನ್ನು ಕುಶನ ತೊಡೆಯ ಮೇಲೆ ಆ ಸಭೆಯವರು ನೋಡುತ್ತಿದ್ದಂತೆಯೇ ಬೇಗನೆ ಕೂರಿಸಿದನು.

೯೫. ಇದನ್ನು ಮಹಡಿಯ ಮೇಲೆ ಕುಳಿತಿದ್ದ ಸೀತೆಯು ಕಿಟಕಿಯಿಂದ ನೋಡಿದಳು. ಅಲ್ಲಿರುವ ಹೆಂಗಸರೂ ಆಕೆಯೂ ಬಹುವಾಗಿ ಸಂತೋಷಪಟ್ಟರು. ರಾಮನೂ ಬಹುವಾಗಿ ಸಂತೋಷಪಟ್ಟನು.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ ಸ್ವಯಂವರಕ್ಕೋಸ್ಕರ ಭೂರಿಕೀರ್ತಿಯ ರಾಜಧಾನಿಗೆ ರಾಮಾಗಮನವೆಂಬ ಎರಡನೆಯ ಸರ್ಗವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ
॥ ಎರಡನೆಯ ಸರ್ಗದ ಸಾರಾಂಶವು ॥

ಶ್ರೀರಾಮನು ಮರುದಿನ ಭೂರಿಕೀರ್ತಿಯ ಪ್ರಾರ್ಥನೆಯಂತೆ ಸಭೆಗೆ ಹೊರಡಲು ಉದ್ಯುಕ್ತನಾಗಿ ಸಭಾಯೋಗ್ಯವೂ ವಿವಾಹಯೋಗ್ಯವೂ ಆದ ಉಡುಪುಗಳನ್ನು ಅಳವಡಿಸಿಕೊಂಡು ಮಕ್ಕಳಿಗೂ ಅಳವಡಿಸಿ ಸಭೆಗೆ ಹೊರಟನು.

ಸಭೆಯಲ್ಲಿ ಹೋಗುತ್ತಿರುವಾಗ ರಾಜರು ಬಂದು ನಮಸ್ಕರಿಸುತ್ತಿರಲು ಅವರವರ ಹೆಸರುಗಳನ್ನು ಭಟರು ಗಟ್ಟಿಯಾಗಿ ಹೇಳುತ್ತಿದ್ದರು.

ಸಭೆಯ ಅಂಗಳದಲ್ಲಿ ಪಶ್ಚಿಮದಲ್ಲಿ ಪೂರ್ವಮುಖವಾಗಿ ಹಾಕಿರುವ ಸಿಂಹಾಸನದಲ್ಲಿ ಈ ರಾಮನು ಕುಳಿತನು. ಬಲಗಡೆಯಲ್ಲಿ ತಮ್ಮಂದಿರೂ ಎಡಗಡೆಯಲ್ಲಿ ಕುಶನೇ ಮುಂತಾದ ಪುತ್ರರೂ ಕುಳಿತರು. ಆ ರಾಮನ ಎದುರಿಗೆ ಉತ್ತರ ಮತ್ತು ದಕ್ಷಿಣದ ಕಡೆಗೆ ರಾಜರೆಲ್ಲರೂ ಕುಳಿತರು. ಬ್ರಾಹ್ಮಣರೂ ಪ್ರೇಕ್ಷಕರೂ ಮಹಡಿಯಮೇಲೆ ಕುಳಿತರು. ಸಂಗೀತಗಾರರು ಹಾಡುತ್ತಿದ್ದರು. ವೇಶ್ಯೆಯರು ಕುಣಿಯುತ್ತಿದ್ದರು.

ಈ ಸಮಯದಲ್ಲಿ ರಾಜಪುತ್ರಿಯರು ಸಭೆಯ ಮುಂಭಾಗದಲ್ಲಿ ಬಂದು ನಿಂತರು. ಆಗ ಎಲ್ಲರೂ ಅವರ ಸೌಂದರ್ಯದಿಂದ ಮುಗ್ಧರಾದರು. ಆಗ ಚಂಪಿಕೆ ಎಂಬುವಳು ಆಗ್ನೇಯ ದಿಕ್ಕಿನಿಂದಲೂ ಸುಮತಿಯು ಈಶಾನ್ಯದಿಂದಲೂ ಆ ಸಭೆಯನ್ನು ಪಲ್ಲಕ್ಕಿಯಲ್ಲಿ ಕುಳಿತು ಹೊಕ್ಕರು. ಜೊತೆಯಲ್ಲಿ ಇಬ್ಬರಿಗೂ ಎಲ್ಲರ ವಿಷಯವನ್ನೂ ಬಲ್ಲ ಮುದುಕಿಯರಾದ ಒಬ್ಬೊಬ್ಬರು ದಾದಿಯರೂ ಇದ್ದರು.

ಆ ದಾದಿಯರು ಅವರಿಗೆ ಎಲ್ಲ ರಾಜರನ್ನೂ ವರ್ಣಿಸುತ್ತ ಅವರ ಗುಣಾವ ಗುಣಗಳನ್ನು ಹೇಳುತ್ತಾ ಬಂದರು. ಎಲ್ಲರನ್ನೂ ಬಿಟ್ಟುಬರುತ್ತಾ ಕೊನೆಗೆ ಕುಶನ ಬಳಿಗೆ ಬಂದು ಅವನ ಗುಣಗಳನ್ನು ಕೇಳಿ ಅವನ ಕೊರಳಿನಲ್ಲಿ ಆ ಚಂಪಿಕೆಯು ಮಾಲೆಯನ್ನು ಹಾಕಿದಳು. ಭೂರಿಕೀರ್ತಿಯು ಒಡನೆಯೇ ಬಂದು ಆ ಚಂಪಿಕೆಯನ್ನು ಕುಶನ ತೊಡೆಯ ಮೇಲೆ ಕೂರಿಸಿದನು. ಇದನ್ನು ನೋಡಿ ಸೀತೆಯೂ ರಾಮನೂ ಬಹುವಾಗಿ ಸಂತೋಷಪಟ್ಟರು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ವಿವಾಹಕಾಂಡೇ

॥ ತೃತೀಯಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಅಥಾನ್ಯಾ ಸಾ ಸಭಾಗ್ರಾಚ್ಚ ಸುಮತೀ ಮುತ್ತರಸ್ಥಿತಾನ್ ।
ನೃಪಾನೀಶಾನದಿಗ್ಭಾಗಾತ್ಸುನಂದಾ ಧೃತಯಷ್ಟಿಕಾ ॥ ೧ ॥

ಕ್ರಮೇಣ ವರ್ಣಯಾಮಾಸ ಶಿಬಿಕಾಸ್ಥಾಂ ಸುಲೋಚನಾಂ ।
ಬಾಲೇ ಶೃಣುಷ್ವ ಮೇ ವಾಕ್ಯಂ ಪಶ್ಯೈನಂ ತ್ವಂ ನೃಪೋತ್ತಮಂ ॥ ೨ ॥

ಅವಂತಿಸ್ಥಂ ಚೋಗ್ರಬಾಹುನಾಮಾನಂ ಚ ಹ್ಯನುತ್ತಮಂ ।
ನಾನೇನ ಸದೃಶಃ ಕಶ್ಚಿತ್ಪೃಥಿವ್ಯಾಂ ವರ್ತತೇ ನೃಪಃ ॥ ೩ ॥

ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ

ಮೂರನೆಯ ಸರ್ಗವು

೧. ಶ್ರೀ ರಾಮದಾಸನು ಹೇಳಿದನು—ಇತ್ತ ಮತ್ತೊಬ್ಬ ಸುನಂದೆಯೆಂಬ ದಾದಿಯು ಸುಮತಿಯನ್ನು ಕರೆದುಕೊಂಡು ಉತ್ತರದಿಕ್ಕಿನಲ್ಲಿರುವ ರಾಜರುಗಳನ್ನು ತೋರಿಸುತ್ತ ಬಂದಳು.

೨. ಆ ಸುನಂದೆಯು ಈಶಾನ್ಯದಿಕ್ಕಿನಿಂದ ಹೊರಟು ಮೇನದಲ್ಲಿ ಕುಳಿತಿರುವ ಆ ಸುಮತಿಗೆ ಈರೀತಿಯಾಗಿ ವರ್ಣಿಸುತ್ತ ಬಂದಳು. ಎಲೈ ಬಾಲಿಯೇ! ನನ್ನ ಮಾತನ್ನು ಕೇಳು. ಈ ರಾಜಶ್ರೇಷ್ಠನನ್ನು ನೋಡು.

೩. ಇವನು ಅವಂತಿದೇಶದವನಾದ ಉಗ್ರಬಾಹುವೆಂಬ ರಾಜನು. ಇವನಿಗಿಂತಲೂ ಉತ್ತಮರಾದ ರಾಜರು ಈ ಲೋಕದಲ್ಲಿಯೇ ಇಲ್ಲವು.

ವರಯೈನಂ ನೃಪಂ ಮಾಗ್ರೇ ಗಚ್ಛ ತ್ವಂ ಗಜಗಾಮಿನಿ ।
ಅಸ್ಯ ತ್ವಂ ಮಹಿಷೀ ಭೂತ್ವಾ ಕ್ಷಿಪ್ರಾನದ್ಯಾಶ್ಚ ಸೈಕತೇ ॥ ೪ ॥

ವಸ್ತ್ರಗೇಹಸ್ಥಿತಾನೇನ ಸುಖಂ ಕ್ರೀಡಸ್ವ ಭಾಮಿನಿ ।
ಅನುತ್ತಮಂ ಚೇತಿ ವಾಕ್ಯಂ ದ್ವ್ಯರ್ಥಂ ಸಾ ಸುಮತಿಃ ಪುರಾ ॥ ೫ ॥

ಶ್ರುತ್ವಾ ಮೈನಂ ವರಯೇತಿ ಸುನಂದಾಯಾ ವಚಃ ಪುನಃ ।
ಶುತ್ವಾ ತಾಂ ಚೋದಯಾಮಾಸ ಸಾ ತಾಂ ನೀತ್ವಾ ನೃಪಾಂತರಂ ॥ ೬ ॥

ಸುನಂದಾ ಸುಮತಿಂ ಪ್ರಾಹ ಪಶ್ಯೈನಂ ತ್ವಂ ನೃಪಂ ಪರಂ ।
ಅಂಗನಾಥಾಹ್ವಯಂ ಶ್ರೇಷ್ಠಂ ವಿದರ್ಭವಿಷಯಸ್ಥಿತಂ ॥ ೭ ॥

ಪೂರ್ವವತ್ತ್ಯಜ ಬಾಲೇ ಮಾ ವೃಣೀಷ್ವೈನಂ ನೃಪೋತ್ತಮಂ ।
ಸ್ತ್ರೀಕಾಮಂ ಸ್ವಲ್ಪವಯಸಂ ಭುಜಕೇಯೂರರಾಜಿತಂ ॥ ೮ ॥

೪-೫. ಎಲೈ ಗಜಗಮನೆಯೇ! ಇವನನ್ನು ನೀನು ವರಿಸು. ಮುಂದೆ ಹೋಗಬೇಡ. ಇವನಿಗೆ ಹೆಂಡತಿಯಾಗಿ ಶಿಪ್ರಾನದಿಯ ಮರಳಿನಲ್ಲಿ ಬಟ್ಟೆಯ ಗುಡಾರಗಳಲ್ಲಿದ್ದುಕೊಂಡು ಇವನೊಡನೆ ಕ್ರೀಡಿಸು. ಎನ್ನಲು ಮಾತಿನ ವೈಖರಿಯಿಂದ ಇವನು ಉತ್ತಮನಲ್ಲ. ಮುಂದೆ ಹೋಗು ಎಂಬ ವ್ಯಂಗ್ಯಾರ್ಥದ ಮಾತನ್ನು ತಿಳಿದುಕೊಂಡಳು.

೬-೭. ಮತ್ತು ಇವನನ್ನು ವರಿಸಬೇಡ ಎಂಬ ನಿಷೇಧದ ಮಾತನ್ನು ಹೇಳಿ ಆ ಸುನಂದೆಯನ್ನು ಮುಂದೆ ಹೋಗೆಂದು ಪ್ರೇರಿಸಲು ಆಕೆಯು ಅದರಂತೆಯೇ ಮುಂದೆ ಹೋದಳು. ಬೇರೆಯ ರಾಜನ ಬಳಿಗೆ ಕರೆದುಕೊಂಡು ಹೋಗಿ ಎಲೈ ಸುಮತಿಯೇ! ಈ ರಾಜನನ್ನು ನೋಡು. ಇವನ ಹೆಸರು ಅಂಗನಾಥನು. ಇವನು ಶ್ರೇಷ್ಠನು. ವಿದರ್ಭದೇಶವನ್ನು ಆಳುತ್ತಿರುವನು.

೮-೯. ಎಲೈ ಬಾಲೆಯೇ! ಇವನನ್ನು ಮೊದಲಿನವನಂತೆ ಬಿಟ್ಟುಬಿಡಬೇಡ. ಈ ನೃಪೋತ್ತಮನನ್ನು ವರಿಸು. ಸ್ತ್ರೀಯರಲ್ಲಿ ಬಹು ಆಸೆಯುಳ್ಳವನು. ವಯಸ್ಸು ಸ್ವಲ್ಪವಾಗಿಯೇ ಇರುವುದು. ಈ ಭುಜಕೀರ್ತಿಯನ್ನೂ ಧರಿಸಿರುವ

ಅಸ್ಯ ತ್ವಂ ಮಹಿಷೀ ಭೂತ್ವಾ ಪಯೋಷ್ಣೀಜಲವೀಚಿಷು ।
ಸುಖಂ ಕುರು ಜಲಕ್ರೀಡಾಂ ನೃಪೇಣಾನೇನ ಭಾಮಿನಿ ॥ ೯ ॥

ಏನಂ ವೃಣೀಷ್ವ ಮಾ ಚೇತಿ ಹ್ಯುಪಮಾತ್ರಾ ಸುಚೋದಿತಾ ।
ಅಗ್ರೇ ಗಂತುಂ ಸುನಂದಾಂ ಸಾ ಚೋದಯಾಮಾಸ ಸಂಜ್ಞಯಾ ॥ ೧೦ ॥

ತತೋಽನ್ಯಂ ನೃಪತಿಂ ನೀತ್ವಾ ಸುನಂದಾ ತಾಂ ವಚೋಽಬ್ರವೀತ್ ।
ಪಶ್ಯೈನಂ ನೃಪತಿಂ ಬಾಲೇ ದೇಶೇ ಮಾಗಧಸಂಜ್ಞಕೇ ॥ ೧೧ ॥

ರಾಜ್ಯಂ ಕರೋತ್ಯಯಂ ಶ್ರೀಮಾನ್ನಾಮ್ನಾ ಖ್ಯಾತಃ ಪರಂತಪಃ ।
ವರಯೈನಂ ನೃಪಂ ಮಾಗ್ರೇ ಗಚ್ಛಾನ್ಯಂ ಪಾರ್ಥಿವೋತ್ತಮಂ ॥ ೧೨ ॥

ಅಸ್ಯ ತ್ವಂ ಮಹಿಷೀ ಭೂತ್ವಾ ತಪ್ತನೀರಪ್ರಪೂರಿತೇ ।
ಬ್ರಹ್ಮತೀರ್ಥೇ ಸದಾ ಕ್ರೀಡಾಂ ಹೇಮಂತೇ ಭಜ ಭಾಮಿನಿ ॥ ೧೩ ॥

ಇವನನ್ನು ಮದುವೆಯಾಗು. ಇವನಿಗೆ ನೀನು ಹೆಂಡತಿಯಾಗಿ ಪಯೋಷ್ಣಿ ನದಿಯ ಅಲೆಗಳಲ್ಲಿ ಇವನೊಡನೆ ಸುಖವಾಗಿ ಜಲಕ್ರೀಡೆಯಾಡು. ಎಂದಳು.

೧೦. ಸುನಂದೆಯು ತನ್ನ ಮಾತಿನ ಜೋಡಣೆಯಿಂದ ಇವನನ್ನು ವರಿಸ ಬೇಡ. ಮುಂದೆ ಹೋಗೆಂದು ಸಂಜ್ಞೆಮಾಡಿ ಹೊರಡಿಸಿದಳು.

೧೧-೧೩. ಸುನಂದೆಯು ಮುಂದೆ ಮತ್ತೊಬ್ಬ ರಾಜನ ಬಳಿಗೆ ಕರೆದು ಕೊಂಡು ಹೋಗಿ ಇಂತೆಂದಳು. ಎಲೈ ಬಾಲೆಯೆ! ಇವನನ್ನು ನೋಡು. ಮಗಧದೇಶದಲ್ಲಿ ಇವನು ರಾಜನಾಗಿರುವನು. ಇವನ ಹೆಸರು ಪರಂತಪನು. ಇವನನ್ನು ವರಿಸು. ಮುಂದಿನ ರಾಜನ ಬಳಿಗೆ ಹೋಗಬೇಡ. ಇವನಿಗೆ ನೀನು ಹೆಂಡತಿಯಾಗಿ ಬಿಸಿನೀರಿನಿಂದ ಕೂಡಿದ ಬ್ರಹ್ಮತೀರ್ಥದಲ್ಲಿ ಹಿಮಂತಋತುವಿನಲ್ಲಿ ಯಾವಾಗಲೂ ಕ್ರೀಡಿಸು.

ನ್ಯೈನಂ ನೃಪಂ ವರಯೇತಿ ಶಿಕ್ಷಿತಾ ಸಾ ಸುನಂದಯಾ ।
ಚೋದಯಾಮಾಸ ತಾಂ ವೃದ್ಧಾಂ ಸಾ ತಾಂ ನಿನ್ಯೇ ನೃಪಾಂತರಂ ॥ ೧೪ ॥

ಸುನಂದಾ ಬಾಲಿಕಾಮಾಹ ಶೃಣುಷ್ವ ಮೃಗಲೋಚನೇ ।
ಪಶ್ಯೈನಂ ನೃಪತಿಂ ರಮ್ಯಂ ದ್ರಾವಿಡೇ ವಿಷಯೇ ಸ್ಥಿತಂ ॥ ೧೫ ॥

ಕಂಬುಕಂಠಾಹ್ವಯಂ ಶ್ರೇಷ್ಠಂ ಕಾಂತಿಪುರ್ಯಾಂ ನಿವಾಸಿನಂ ।
ಏನಂ ನೃಪಂ ವೃಣೀಷ್ವಾದ್ಯ ಮಾ ತ್ಯಜಾನ್ಯಂ ನೃಪೋತ್ತಮಂ ॥ ೧೬ ॥

ಕಾಂತಿಪುರ್ಯಾಮನೇನ ತ್ವಂ ಸರ್ವತೀರ್ಥೇ ಮನೋರಮೇ ।
ಕ್ರೀಡಾಂ ಭಜಸ್ವ ವಿಸ್ತೀರ್ಣೇ ಹೇಮಕಂಜವಿರಾಜಿತೇ ॥ ೧೭ ॥

ವಿಷ್ಣುಂ ವರದರಾಜಾಖ್ಯಂ ಶಿವಮೇಕಾಂಬರಾಹ್ವಯಂ ।
ಪೂಜಯಸ್ವ ಸದಾನೇನ ಕಂಬುಗ್ರೀವನೃಪೇಣ ಚ ॥ ೧೮ ॥

---

೧೪. ಮಾತಿನ ವೈಖರಿಯಿಂದ ಇವನನ್ನು ವರಿಸಬೇಡ ಎಂಬುದಾಗಿ ಸುನಂದೆಯಿಂದ ಹೇಳಲ್ಪಟ್ಟವಳಾಗಿ ಆ ದಾದಿಯನ್ನು ಮುಂದಿನ ರಾಜನ ಬಳಿಗೆ ಹೋಗೆಂದು ಈ ಸುಮತಿಯು ಹೇಳಲು ಆಕೆಯು ಬೇರೆಯವನ ಬಳಿಗೆ ಕರೆದು ಕೊಂಡು ಹೋದಳು.

೧೫-೧೭ ಆಗ ಸುನಂದೆಯು ಸುಮತಿಯನ್ನು ಕುರಿತು ಇಂತೆಂದಳು. ಎಲೈ ಮೃಗಲೋಚನೆಯೇ! ಕೇಳು. ದ್ರಾವಿಡದೇಶದವನಾದ ಈ ರಾಜನನ್ನು ನೋಡು. ಇವನ ಹೆಸರು ಕಂಬುಕಂಠನು. ಶ್ರೇಷ್ಠನು. ಇವನ ರಾಜಧಾನಿಯು ಕಾಂಚಿಪುರವು. ಇವನನ್ನು ವರಿಸಿ ಇವನೊಡನೆ ಸರ್ವತೀರ್ಥದಲ್ಲಿ ಕ್ರೀಡಿಸು.

೧೮-೧೯. ಅಲ್ಲಿ ವರದರಾಜನೆಂಬ ವಿಷ್ಣುವನ್ನೂ, ಏಕಾಂಬರನೆಂಬ ಶಿವನನ್ನೂ ಪೂಜೆಮಾಡುತ್ತ ಈ ರಾಜನೊಡನೆ ಕ್ರೀಡಿಸು. ಈ ರಾಜನನ್ನು ನೀನು ವರಿಸು. ಸಾಮಾನ್ಯ ರಾಜರಂತೆ ಇವನನ್ನು ನೀನು ಬಿಡಬೇಡ. ಎಂಬುದಾಗಿ

ವೃಣೀಷ್ವೈನಂ ನೃಪಂ ಮಾದ್ಯ ಸಾಮಾನ್ಯನೃಪವತ್ತ್ಯಜ ।
ಇತಿ ವೃದ್ಧಾವಚಶ್ಶ್ರುತ್ವಾ ಗ್ರೇ ತಾಂ ಗಂತುಂ ಪ್ರಚೋದಯತ್ ॥ ೧೯ ॥

ಸುನಂದಾನ್ಯಂ ನೃಪಂ ನೀತ್ವಾ ಸುಮತಿಂ ವಾಕ್ಯಮಬ್ರವೀತ್ ।
ಪಶ್ಯೈನಂ ನೃಪತಿಂ ಮುಗ್ಧೇ ಮತ್ತಮಾತಂಗಗಾಮಿನಿ ॥ ೨೦ ॥

ಕರ್ಣಾಟವಿಷಯಸ್ಥಂ ತ್ವಂ ವಿಜಯಂ ಪಾರ್ಥಿವೋತ್ತಮಂ ।
ಕಮಲಾಸ್ಯಂ ಕಂಜಹಸ್ತಂ ಕಮಲಾಂಘ್ರಿಣಮುಜ್ವಲಂ ॥ ೨೧ ॥

ಸ್ಮಿತಾಸ್ಯಂ ಕಂಜನಯನಂ ವಿಜಯಾಖ್ಯಂ ಪುರಃ ಸ್ಥಿತಂ ।
ಶೃಣುಷ್ವ ವಚನಂ ಮೇದ್ಯ ವೃಣೀಷ್ವೈನಂ ನೃಪೋತ್ತಮಂ ॥ ೨೨ ॥

ಅಸ್ಯ ತ್ವಂ ಮಹಿಷೀಭೂತ್ವಾ ವನೇ ಕೃಷ್ಣಾನದೀಜಲೇ ।
ಸುಖಂ ನೃಪೇಣ ಕ್ರೀಡಸ್ವ ಮದ್ವಾಕ್ಯಂ ಶೃಣು ಮಾ ವ್ರಜ ॥ ೨೩ ॥

ಹೇಳುವಾಗ ಮಾತಿನ ವೈಖರಿಯಿಂದ ಈತನನ್ನು ವರಿಸಬೇಡ ಮುಂದೆ ಹೋಗೆಂದು ಹೇಳಿದಂತಾಗಲು ಸುಮತಿಯು ಅದರಂತೆಯೇ ಸುನಂದೆಯನ್ನು ಪ್ರೇರಿಸಿದಳು.

೨೦–೨೩. ಆ ಸುನಂದೆಯು ಬೇರೆರಾಜನ ಬಳಿಗೆ ಆಕೆಯನ್ನು ಕರೆದು ಕೊಂಡು ಹೋಗಿ ಸುಮತಿಯನ್ನು ಕುರಿತು ಇಂತೆಂದಳು. ಎಲೈ ಮುಗ್ಧೆಯೇ! ಈ ರಾಜನನ್ನು ನೋಡು. ಈತನು ಕರ್ನಾಟಕ ದೇಶದವನು. ಇವನ ಹೆಸರು ವಿಜಯನೆಂದು. ಕಮಲದಂತೆ ಮುಖವುಳ್ಳವನು. ಪದ್ಮದಂತೆ ಕೈಯ್ಯುಳ್ಳವನು. ಕಮಲದಂತೆ ಪಾದಗಳುಳ್ಳವನು. ಯಾವಾಗಲೂ ಮುಗುಳುನಗೆಯಿಂದಲೇ ಇರುವನು. ಕಮಲದಂತೆ ಕಣ್ಣುಳ್ಳವನು. ವಿಜಯನಗರವೆಂಬ ರಾಜಧಾನಿ ಯಲ್ಲಿರುವನು. ಈಗ ನನ್ನ ಮಾತನ್ನು ಕೇಳು. ಇವನನ್ನು ಮದುವೆಯಾಗು. ಇವನಿಗೆ ಹೆಂಡತಿಯಾಗಿ ವನಗಳಲ್ಲಿಯೂ, ಕೃಷ್ಣಾನದಿಯ ನೀರಿನಲ್ಲಿಯೂ ಸುಖವಾಗಿ ಕ್ರೀಡಿಸು. ನನ್ನ ಮಾತನ್ನು ಮೀರಿ ಮುಂದೆ ಹೋಗಬೇಡ.

ಮದ್ವಾಕ್ಯಂ ಶೃಣು ಮೇತ್ಯುಕ್ತಾ ಶ್ರುತ್ವಾ ವಾಕ್ಯಮನುತ್ತಮಂ ।
ವ್ರಜೇತಿ ಸೂಚಿತಾ ಬಾಲಾ ಚೋದಯಾಮಾಸ ತಾಂ ಪುನಃ ॥ ೨೪ ॥

ಏವಂ ನಾನಾ ನೃಪಾಣಾಂ ಚ ವರ್ಣನಾನಿ ಪೃಥಕ್ ಪೃಥಕ್ ।
ಸ್ತುತಿರೂಪನಿಷೇಧಾನಿ ಶ್ರುತ್ವಾ ದ್ವ್ಯರ್ಥಾನಿ ಬಾಲಿಕಾ ॥ ೨೫ ॥

ನ ಬಬಂಧ ಮನಃ ಕಸ್ಮಿನ್ನೃಪತೌ ತೇಷು ಸಾ ತದಾ ।
ತತಸ್ತಾಂ ಶಿಬಿಕಾಸಂಸ್ಥಾಂ ಸುನಂದಾ ಸಾ ಶನೈಃ ಕ್ರಮಾತ್ ॥ ೨೬ ॥

ಅತಿಕ್ರಮ್ಯ ರಾಮಮಂತ್ರಿಬಾಲಕಾನಪಿ ಪೂರ್ವವತ್ ।
ಯೂಪಕೇತುಂ ಶಿಶುಂ ನೀತ್ವಾ ಬಾಲಿಕಾಂ ವಾಕ್ಯಮಬ್ರವೀತ್ ॥ ೨೭ ॥

ಶತ್ರುಘ್ನತನಯಂ ಬಾಲಂ ಯೂಪಕೇತುಂ ಮನೋಹರಂ ।
ಪಿತೃವ್ಯರಾಮತನಯದ್ವಯವಾಕ್ಯಾನುವರ್ತಿನಂ ॥ ೨೮ ॥

---

೨೪. ಆ ಸುನಂದೆಯು ಮಾತಿನ ವೈಖರಿಯಿಂದ ನನ್ನ ಮಾತನ್ನು ಕೇಳ ಬೇಡ ಹೊರಡು ಎಂದು ಸೂಚಿಸಿದುದನ್ನು ಕೇಳಿ ಆಕೆಗೆ ಮುಂದೆ ಹೋಗುವಂತೆ ಹೇಳಿದಳು.

೨೫-೨೭. ಇದೇ ರೀತಿಯಾಗಿ ಅನೇಕಜನ ರಾಜರುಗಳ ಬಳಿಗೆ ಹೋಗಿ ಆವರನ್ನು ಬೇರೆ ಬೇರೆಯಾಗಿ ವರ್ಣಿಸಿದಳು. ಅವೆಲ್ಲವೂ ಸ್ತುತಿರೂಪವಾಗಿದ್ದರೂ ನಿಷೇಧದಲ್ಲಿ ಪರ್ಯವಸಾನವಾಗುತ್ತಿದ್ದುವು. ಎರಡರ್ಥಗಳಿರುವ ಮಾತನ್ನು ಕೇಳಿ ಒಬ್ಬನಲ್ಲಿಯೂ ಆಕೆಯು ಮನಸ್ಸನ್ನು ಮಾಡಲಿಲ್ಲ. ಅನಂತರ ಪಲ್ಲಕ್ಕಿಯಲ್ಲಿ ಕುಳಿತಿರುವ ಆಕೆಯನ್ನು ಸುನಂದೆಯು ಮೆಲ್ಲನೆ ಮುಂದಕ್ಕೆ ಕರೆದುಕೊಂಡು ಹೋಗುತ್ತ ರಾಮನ ಮಂತ್ರಿಗಳನ್ನೂ, ಬಾಲಕರನ್ನೂ, ಅತಿಕ್ರಮಿಸಿ ಇನ್ನೂ ಮುಂದಕ್ಕೆ ಹೋದಳು. ಅಲ್ಲಿ ಶಿಶುವಾದ ಯೂಪಕೇತುವಿರಲು ಅವನ ಬಳಿಗೆ ಕರೆದುಕೊಂಡು ಹೋಗಿ ಇಂತೆಂದಳು.

೨೮. ಶತ್ರುಘ್ನನ ಮಗನೂ, ಬಾಲನೂ ಆದ ಯೂಪಕೇತುವನ್ನು ನೋಡು. ಇವನು ಬಾಲನು. ಇವನು ದೊಡ್ಡಪ್ಪಂದಿರ ಮಾತನ್ನೂ, ರಾಮನ ಇಬ್ಬರು ಮಕ್ಕಳ ಮಾತನ್ನೂ ಕೇಳಿಕೊಂಡಿರತಕ್ಕವನು.

ಏನಂ ಪಶ್ಯ ಬಾಲಿಕೇ ತ್ವಂ ಸಾವಧಾನಮನಾ ಭವ ।
ವರಯೈನಂ ಯೂಪಕೇತುಂ ಮಾಗ್ರೇ ಗಚ್ಛ ನೃಪಾತ್ಮಜೇ ॥ ೨೯ ॥
ಮೈನಂ ವರಯ ಗಚ್ಛಾಗ್ರೇ ವೃದ್ಧಯಾ ಸೇತಿ ಚೋದಿತಾ ।
ಸುನಂದಾಂ ಚೋದಯಮಾಸಾಗ್ರೇ ಗಂತುಂ ಸುಮತಿಃ ಪುನಃ ॥ ೩೦ ॥
ಸುಬಾಹುಂ ಪುಷ್ಕರಂ ತಕ್ಷಮೇವಂ ಸಾ ಸುಮತಿಶ್ಶನೈಃ ।
ಚಿತ್ರಕೇತುಮಂಗದಂ ಚ ತ್ಯಕ್ತ್ವಾ ಸಾ ತಂ ಲವಂ ಯಯೌ ॥ ೩೧ ॥
ಲವಾರ್ಪಿತೇಕ್ಷಣಾಂ ಬಾಲಾಂ ಸುನಂದಾ ವಾಕ್ಯಮಬ್ರವೀತ್ ।
ಪಶ್ಯೈನಂ ಬಾಲಿಕೇ ಬಾಲಂ ಲವಂ ಶ್ರೀರಾಘವಾತ್ಮಜಂ ॥ ೩೨ ॥
ಸ್ತ್ರೀಕಾಮಂ ಸ್ವಲ್ಪವಯಸಂ ಸೀತಾಲಾಲಿತಮುತ್ತಮಂ ।
ವಾಲ್ಮೀಕಿಕೃಪಯಾ ಲಬ್ಧವಿದ್ಯಂ ರಮ್ಯಂ ಕುಶಾನುಜಂ ॥ ೩೩ ॥

---

೨೯. ಎಲೈ ಬಾಲಕಿಯೇ ! ಇವನನ್ನು ನೋಡು. ಮನಸ್ಸನ್ನು ಸರಿಯಾಗಿಟ್ಟುಕೋ. ಈ ಯೂಪಕೇತುವನ್ನು ವರಿಸು. ಮುಂದೆ ಹೋಗಬೇಡ. ಎಂದಳು.

೩೦. ಇವನನ್ನು ವರಿಸಬೇಡ ಮುಂದೆ ಹೋಗು. ಎಂಬುದಾಗಿ ಮಾತಿನ ವೈಖರಿಯಿಂದ ಬೋಧಿತಳಾಗಿ ಸುಮತಿಯು ಸುನಂದೆಯನ್ನು ಮುಂದೆ ಹೋಗುವಂತೆ ಹೇಳಿದಳು.

೩೧. ಅಂತೆಯೇ ಮುಂದೆ ಹೋಗುತ್ತ ಸುಬಾಹು, ಪುಷ್ಕರ, ತಕ್ಷ, ಚಿತ್ರಕೇತು, ಅಂಗದ ಇವರನ್ನು ದಾಟಿಹೋದಳು. ಮುಂದಕ್ಕೆ ಹೋಗಲು ಲವನು ಸಿಕ್ಕಿದನು.

೩೨-೩೩. ಅಲ್ಲಿ ಸುಮತಿಯು ಲವನನ್ನು ನೋಡಲು ಸುನಂದೆಯು ಇಂತೆಂದಳು. ಎಲೈ ಬಾಲಕಿಯೇ ! ಬಾಲನಾದ, ರಾಮನ ಮಗನಾದ ಲವನನು ನೋಡು. ಇವನಿಗೆ ಈಗ ಮದುವೆಯ ಕಾಲವು. ವಯಸ್ಸು ಸ್ವಲ್ಪವೇ ಆಗಿರುವುದು. ಸೀತೆಯಿಂದ ಲಾಲಿತನಾಗಿರುವನು. ವಾಲ್ಮೀಕಿಯ ಅನುಗ್ರಹಕ್ಕೆ ಪಾತ್ರನಾಗಿ ಅವನಿಂದ ವಿದ್ಯೆಯನ್ನು ಕಲಿತಿರುವನು. ಕುಶನಿಗೆ ಈತನು ತಮ್ಮನು.

ವೃಣೀಷ್ವೈನಂ ಸುಖೇನೈವ ಕಂಠೇಸ್ಯ ಮಾಲಿಕಾಂ ಕುರು ।
ಕುಶಾಂಕೇ ಚಂಪಿಕೇಯಂ ತೇ ಸ್ವಸಾ ಯದ್ವತ್ ಸ್ಥಿತಾದ್ಯ ಹಿ || ೩೪ ||

ತಥಾ ತ್ವಮಪಿ ಭೋ ಮುಗ್ಧೇ ಲವಾಂಕೇ ಸಂಸ್ಥಿತಾ ಭವ ।
ಇತಿ ತಸ್ಯಾಃ ವಚಃ ಶ್ರುತ್ವಾ ಸುನಂದಾಯಾಃ ಸ್ಮಿತಾನನಾ || ೩೫ ||

ಲವಸ್ಯ ಕಂಠೇ ಹರ್ಷೇಣ ಲಜ್ಜಯಾವನತಾನನಾ ।
ಸುಮತಿರ್ನಿಜಬಾಹುಭ್ಯಾಮರ್ಪಯಾಮಾಸ ಮಾಲಿಕಾಂ || ೩೬ ||

ತದಾ ನಿನೇದುರ್ವಾದ್ಯಾನಿ ಜಗುಸ್ತೇ ಗಾಯಕಾಸ್ತದಾ ।
ನನೃತುರ್ವಾರನಾರ್ಯಶ್ಚ ತುಷ್ಟುವುರ್ವಂದಿಮಾಗಧಾಃ || ೩೭ ||

ಭೂರಿಕೀರ್ತಿಃ ನೃಪಸ್ತುಷ್ಟೋ ಲವಾಂಕೇ ಸುಮತಿಂ ತದಾ ।
ಶೀಘ್ರಂ ನ್ಯವೇಶಯಾಮಾಸ ಪರಿಪೂರ್ಣಮನೋರಥಃ || ೩೮ ||

೩೪–೩೫. ಇವನನ್ನು ಸುಖವಾಗಿ ವರಿಸು. ಇವನ ಕಂಠಕ್ಕೆ ಆ ಮಾಲಿಕೆಯನ್ನು ಹಾಕು. ಕುಶನ ತೊಡೆಯಮೇಲೆ ನಿನ್ನ ಸಹೋದರಿಯಾದ ಚಂಪಿಕೆಯು ಹೇಗೆ ಕುಳಿತಳೋ ಹಾಗೆ ನೀನು ಈ ಲವನ ತೊಡೆಯಮೇಲೆ ಕುಳಿತುಕೋ ಎಂದು ಸುನಂದೆಯು ಹೇಳಲು ಸುಮತಿಯು ಅದನ್ನು ಕೇಳಿ ನಕ್ಕಳು.

೩೬–೩೭. ಅನಂತರ ಆ ಸುಮತಿಯು ಲವನ ಕಂಠದಲ್ಲಿ ಮಾಲೆಯನ್ನು ಹಾಕಿ ಲಜ್ಜೆಯಿಂದ ತಲೆ ತಗ್ಗಿಸಿಕೊಂಡು ನಿಂತಳು. ಆಗ ವಾದ್ಯಗಳು ಮೊಳಗಿದುವು. ಗಾಯಕರು ಗಾನಮಾಡಿದರು. ವಾರಸ್ತ್ರೀಯರು ಕುಣಿದರು. ವಂದಿಗಳೂ, ಮಾಗಧರೂ ಹೊಗಳಿದರು.

೩೮–೩೯. ಭೂರಿಕೀರ್ತಿಯು ಸಂತೋಷಗೊಂಡು ಲವನ ತೊಡಯಮೇಲೆ ಸುಮತಿಯನ್ನು ಕೂರಿಸಿದನು. ಇದರಿಂದ ಪೂರ್ಣಮನೋರಥನಾದನು. ರಾಮನಿಗೂ ಸಂತೋಷವಾಯಿತು. ಮಹಡಿಯಮೇಲಿದ್ದ ಸೀತೆಯೂ

ತೋಷಮಾಪ ರಘುಶ್ರೇಷ್ಠಸ್ಸೀತಾ ಪ್ರಾಸಾದಸಂಸ್ಥಿತಾ ।
ಜಾಲರಂಧ್ರೈಸ್ಸಪತ್ನೀಕಂ ಲವಂ ದೃಷ್ಟ್ವಾ ತುತೋಷ ಸಾ ॥ ೩೯ ॥
ತತಸ್ಸರ್ವಾನ್ ನೃಪಾನ್ ಪೂಜ್ಯ ಭೂರಿಕೀರ್ತಿಃ ನೃಪೋತ್ತಮಃ ।
ಪ್ರಾರ್ಥಯಾಮಾಸ ವಿನಯವಚನೈಸ್ತತ್ಪುರಃ ಸ್ಥಿತಃ ॥ ೪೦ ॥
ವಿವಾಹಕೌತುಕಂ ದೃಷ್ಟ್ವಾ ಭವದ್ಭಿರ್ಗಮ್ಯತಾಮಿತಿ ।
ತಥೇತಿ ತೇ ನೃಪಾಃ ಪ್ರೋಚುರ್ಯಯುರ್ವಾಸಸ್ಥಲಾನಿ ಹಿ ॥ ೪೧ ॥
ರಾಮಾಗ್ರೇ ಸಂಗರಂ ಕರ್ತುಮಸಮರ್ಥಾ ಗತಶ್ರಿಯಃ ।
ಮ್ಲಾನಾನನಾ ಗತೋತ್ಸಾಹಾಃ ಕಾಮಬಾಣಪ್ರಪೀಡಿತಾಃ ॥ ೪೨ ॥
ರಾಮೋಽಪಿ ಬಂಧುಭಿರ್ಬಾಲೈರ್ಯಯೌ ವಾಸಸ್ಥಲಂ ಮುದಾ ।
ಅಥಾಪರೇ ದಿನೇ ರಾಮಂ ಭೂರಿಕೀರ್ತಿಸ್ಸಮಾಯಯೌ ॥ ೪೩ ॥

ಸಂತೋಷಗೊಂಡಳು. ಅನಂತರ ಕಿಟಕಿಯಿಂದ ಪತ್ನಿಯೊಡನೆ ಕೂಡಿದ ಲವನನ್ನು ನೋಡಿ ಇನ್ನೂ ಸಂತೋಷಗೊಂಡಳು.

೪೦. ಅನಂತರ ಈ ಭೂರಿಕೀರ್ತಿಯು ಎಲ್ಲಾ ರಾಜರನ್ನೂ ಯೋಗ್ಯತೆಗೆ ತಕ್ಕಂತೆ ಗೌರವಿಸಿ ಅವರೆದುರಿಗೆ ನಿಂತುಕೊಂಡು ವಿನಯದಿಂದ ಇಂತೆಂದು ಕೇಳಿಕೊಂಡನು.

೪೧. ತಾವೆಲ್ಲರೂ ಕೂಡ ಮದುವೆಯ ಸಂಭ್ರಮವನ್ನು ನೋಡಿಕೊಂಡು ದಯಮಾಡಿಸಬೇಕು. ಎಂದನು. ಆ ರಾಜರೆಲ್ಲರೂ ಹಾಗೆಯೇ ಆಗಲೆಂದು ಹೇಳಿ ತಮ್ಮ ತಮ್ಮ ವಾಸಸ್ಥಳಕ್ಕೆ ಹೋದರು.

೪೨. ಅವರೆಲ್ಲರಿಗೂ ಅಸಮಾಧಾನವಾಗಿದ್ದರೂ, ಅವರು ರಾಮನೆದುರಿಗೆ ನಿಂತು ಯುದ್ಧಮಾಡಲಾರದವರಾಗಿದ್ದರು. ಆದ್ದರಿಂದ ಕಾಂತಿಗೆಟ್ಟ ಮುಖವುಳ್ಳವರಾಗಿ, ಉತ್ಸಾಹವಿಲ್ಲದೆ ಕಾಮಬಾಣದಿಂದ ಪೀಡಿತರಾಗಿದ್ದರೂ ಸುಮ್ಮನಿದ್ದರು.

೪೩. ರಾಮನೂ ಕೂಡ ತಮ್ಮಂದಿರೊಡನೆಯೂ, ಮಕ್ಕಳೊಡನೆಯೂ ತನ್ನ ವಾಸಸ್ಥಾನಕ್ಕೆ ಹೋದನು. ಅನಂತರ ಮಾರನೆಯ ದಿನ ಭೂರಿಕೀರ್ತಿಯು ರಾಮನ ಬಳಿಗೆ ಬಂದನು.

ಪುರೋಧಸೋಪವಿಷ್ಟಸ್ಸನ್ನತ್ವಾ ರಾಮಂ ವಚೋಽಬ್ರವೀತ್ ।
ದ್ರಷ್ಟವ್ಯೋ ಲಗ್ನದಿವಸಸ್ಸುಮುಹೂರ್ತಸ್ಸುಖಾವಹಃ ॥ ೪೪ ॥

ಮಾಮಂಗೀಕುರು ರಾಮಾದ್ಯ ತ್ವತ್ಪಾದಾಶ್ರಯಕಾಮುಕಂ ।
ಉಭಯೋಸ್ತ್ವಂ ಮಂಟಪಯೋಃ ಕಾರ್ಯಮಾಜ್ಞಾಪಯ ಪ್ರಭೋ ॥ ೪೫ ॥

ತಥೇತಿ ರಾಘವಶ್ಚೋಕ್ತ್ವಾ ವಸಿಷ್ಠಂ ಚೋದಯತ್ತದಾ ।
ಸೋಽಪಿ ರಾಮಾಜ್ಞಯಾ ಜ್ಯೋತಿಶ್ಶಾಸ್ತ್ರಜ್ಞೈಃ ಪರಿವೇಷ್ಟಿತಃ ॥ ೪೬ ॥

ಮುಹೂರ್ತಂ ಕಥಯಾಮಾಸ ಪಂಚಮೇಽಹನಿ ರಾಘವಂ ।
ತತಸ್ತುಷ್ಟೋ ಭೂರಿಕೀರ್ತಿರ್ಗಣೇಶಂ ಲಗ್ನಪತ್ರಿಕಾಂ ॥ ೪೭ ॥

---

೪೪. ಜೊತೆಯಲ್ಲಿ ತನ್ನ ಪುರೋಹಿತನನ್ನೂ ಕರೆದುಕೊಂಡು ಬಂದನು. ರಾಮನಿಗೆ ನಮಸ್ಕರಿಸಿ ಇಂತೆಂದನು. ಸುಖಕರವೂ, ಸುಮುಹೂರ್ತವೂ ಆಗಿರುವ ಲಗ್ನವುಳ್ಳ ದಿವಸವನ್ನು ನೋಡಬೇಕು.

೪೫. ಎಲೈ ರಾಮನೇ! ನಿನ್ನ ಪಾದವನ್ನೇ ಆಶ್ರಯಿಸುವುದರಲ್ಲಿ ಆಸೆಯುಳ್ಳ ಈ ನನ್ನನ್ನು ನೀನು ಅಂಗೀಕರಿಸು. ಎರಡು ವಿವಾಹಗಳೂ ನಡೆಯುವುದಕ್ಕೆ ಮಂಟಪಗಳಿಗೂ ಅಲ್ಲಿ ಆಗಬೇಕಾದ ಕೆಲಸಗಳಿಗೂ ನೀನು ಅಪ್ಪಣೆಯನ್ನು ಮಾಡು.

೪೬. ಎಂದೆನಲು ರಾಮನು ಹಾಗೆಯೇ ಆಗಲೆಂದು ಹೇಳಿ ವಸಿಷ್ಠನನ್ನು ಪ್ರೇರಿಸಲು ಅವನು ರಾಮನ ಅಪ್ಪಣೆಯಂತೆ ಲಗ್ನವನ್ನು ನೋಡಲು ಜೋತಿಷ್ಕರೊಡನೆ ಕುಳಿತುಕೊಂಡನು.

೪೭. ಆ ವಸಿಷ್ಠನು ಅಂದಿನದಿನಕ್ಕೆ ಐದನೆಯ ದಿನದಲ್ಲಿಯೇ ಮುಹೂರ್ತವಿದೆಯೆಂದು ರಾಮನಿಗೆ ಹೇಳಿದನು. ಆದರಿಂದ ಭೂರಿಕೀರ್ತಿಯು ಸಂತೋಷಗೊಂಡು ಲಗ್ನಪತ್ರಿಕೆಯನ್ನು ಬರೆಸಿ ಗಣೇಶನನ್ನೂ, ಲಗ್ನಪತ್ರಿಕೆಯನ್ನೂ ಪೂಜಿಸಿದನು.

ಸಂಪೂಜ್ಯ ಗಣಕಾಂಶ್ಚೈವ ಪಂಡಿತಾನ್ ವೈದಿಕಾದಿಕಾನ್ ।
ಬಂಧುಪುತ್ರಾದಿಭಿಸ್ಸರ್ವೈಃ ಶ್ರೀರಾಮಂ ಪೂಜಯತ್ತದಾ ॥ ೪೮ ॥

ನತ್ವಾ ರಾಮಂ ಗೃಹಂ ಗತ್ವಾ ಚಕಾರ ಮಂಟಪಾದಿಕಂ ।
ರಾಮಾಜ್ಞಯಾ ಲಕ್ಷ್ಮಣೋಽಪಿ ಚಕಾರ ಮಂಟಪಾದಿಕಂ ॥ ೪೯ ॥

ತದಾ ವಟಪುರೀ ರಮ್ಯಾ ಪತಾಕಾಧ್ವಜತೋರಣೈಃ ।
ಪುರುಷೋತ್ತಮರಾಜಧಾನೀ ರೇಜೇ ಸಾಗರರೋಧಸಿ ॥ ೫೦ ॥

ತತೋ ಮುಹೂರ್ತಸಮಯೇ ವಧೂಚ್ಛೇಷ್ಟಾಂ ನಿಶಾಂ ಕುಶಂ ।
ಲವಂ ಚ ಲಿಪ್ಯ ತೈಲಾಕ್ತಾಂ ಸೀತಾದ್ಯಾ ಮಾತರಸ್ತದಾ ॥ ೫೧ ॥

---

೪೮. ಅನಂತರ ಅಲ್ಲಿದ್ದ ಜೋಯಿಸನಿಗೂ, ಪಂಡಿತರಿಗೂ, ವೈದಿಕರಿಗೂ, ಬಹುವಾಗಿ ಬಹುಮಾನಗಳನ್ನು ಕೊಟ್ಟು ಗೌರವಿಸಿದನು. ಅನಂತರ ರಾಮನನ್ನೂ ಅವನ ತಮ್ಮಂದಿರನ್ನೂ, ಮಕ್ಕಳನ್ನೂ ಗೌರವಿಸಿದನು.

೪೯. ಆಮೇಲೆ ಭೂರಿಕೀರ್ತಿಯು ರಾಮನಿಗೆ ನಮಸ್ಕರಿಸಿ ಮನೆಗೆ ಹೋಗಿ ಮಂಟಪ ಮತ್ತು ಅಲಂಕಾರ ಮುಂತಾದುವುಗಳ ಸಿದ್ಧತೆಗಳನ್ನು ಮಾಡಿದನು. ಇತ್ತ ರಾಮನ ಅಪ್ಪಣೆಯಂತೆ ಲಕ್ಷ್ಮಣನೂ ಮಂಟಪವನ್ನೂ ಅದಕ್ಕೆ ಬೇಕಾದ ಅಲಂಕಾರಗಳನ್ನೂ ಮಾಡಿಸಿದನು.

೫೦. ಆಗ ಸಮುದ್ರತೀರದಲ್ಲಿರುವ ವಟಪುರಿಯು ಪುರುಷೋತ್ತಮನಾದ ರಾಮನ ರಾಜಧಾನಿಯಾಗಿ ಮಂಟಪ, ತೋರಣ, ಧ್ವಜ, ಪತಾಕೆಗಳಿಂದ ಬಹು ರಮ್ಯವಾಗಿ ಶೋಭಿಸಿತು.

೫೧. ಅನಂತರ ಮುಹೂರ್ತಸಮಯವು ಬರುವಷ್ಟರಲ್ಲಿ ಸೀತಾದೇವಿಯೇ ಮುಂತಾದ ಮುತ್ತೈದೆಯರು, ಕುಶಲವರಿಗೆ ಸುವಾಸಿನೀ ಪೂಜೆಯಿಂದ ಶೇಷಿತವಾದ ಅರಿಸಿನ, ಎಣ್ಣೆ ಮುಂತಾದ ಮಂಗಳದ್ರವ್ಯಗಳನ್ನು ಲೇಪನ ಮಾಡಿದರು.

ಕರಕುಂಭಾಂಶ್ಚತುರ್ದಿಕ್ಷು ಜಲಪೂರ್ಣಾನ್ ಸದೀಪಕಾನ್ ।
ಸಂಸ್ಥಾಪ್ಯ ಸ್ಥಾಪಯಾಮಾಸುರ್ಮಹಾವಾದ್ಯಪುರಸ್ಸರಂ ॥ ೫೨ ॥

ತೈಲಾಭ್ಯಂಗಂ ನಿಶಾಯುಕ್ತಂ ಸೀತಾದ್ಯಾಃ ಸ್ವೀಯಬಾಲಕೈಃ ।
ಸಹೈವ ಚಕ್ರುರಾನಂದಪೂರಿತಾ ರುಕ್ಮಭೂಷಿತಾಃ ॥ ೫೩ ॥

ಅಭ್ಯಂಗಪೂರ್ವಕಂ ಸಸ್ನುಸ್ತೇ ರಾಮಾದ್ಯಾಸ್ತದಾ ಮುದಾ ।
ಸಮಾಹೂಯ ತತಸ್ಸೀತಾಂ ಮುಕ್ತಾನಾಂ ಸ್ವಸ್ತಿಕೋಪರಿ ॥ ೫೪ ॥

ವಸಿಷ್ಠೋ ಮುನಿಭಿರ್ಯುಕ್ತಶ್ಶಿಶುಭ್ಯಾಂ ರಾಘವೇಣ ಹಿ ।
ಗಣಪಾರ್ಚಾಂ ಕಾರಯಿತ್ವಾ ಪುಣ್ಯಾಹಾದಿತ್ರಯಂ ಕ್ರಮಾತ್ ॥ ೫೫ ॥

ದೇಶಾಚಾರಾನ್ ಕುಲಾಚಾರಾನಿಷ್ಟದೇವೀಂ ಪ್ರಪೂಜ್ಯ ಚ ।
ಕಾರಯಾಮಾಸ ವಿಧಿವತ್ಪ್ರತಿಷ್ಠಾಂ ದೇವಕಸ್ಯ ಚ ॥ ೫೬ ॥

---

೫೨. ನಾಲ್ಕುದಿಕ್ಕುಗಳಲ್ಲಿಯೂ, ನೀರನ್ನು ತುಂಬಿದ ಕಲಶಗಳನ್ನೂ, ದೀಪಗಳನ್ನೂ ವಾದ್ಯಗಳು ಮೊಳಗುತ್ತಿರುವಾಗ ಇಟ್ಟರು.

೫೩. ಸೀತೆಯೇ ಮುಂತಾದವರು ಅರಸಿನದೊಡನೆ ಎಣ್ಣೆಯನ್ನು ಹಚ್ಚಿ ಲವಕುಶರಿಗೆ ಅಭ್ಯಂಜನವನ್ನು ಮಾಡಿಸಿ ವಸ್ತ್ರ, ಭೂಷಣಗಳಿಂದ ಅಲಂಕರಿಸಿದರು.

೫೪. ಅನಂತರ ರಾಮಾದಿಗಳು ಅಭ್ಯಂಜನಸ್ನಾನವನ್ನು ಮಾಡಿದರು. ಸೀತೆಯೂ ಕೂಡ ಅಭ್ಯಂಜನಸ್ನಾನಮಾಡಲು, ವಸಿಷ್ಠನು ಅವರೆಲ್ಲರನ್ನೂ ಹಸೆಯಮೇಲಕ್ಕೆ ಕರೆಯಿಸಿದನು.

೫೫. ಅವರೆಲ್ಲರೂ ಬಂದು ಮುತ್ತಿನಿಂದ ನಿರ್ಮಿತವಾಗಿದ್ದ ಸ್ವಸ್ತಿಕ ಭದ್ರವೇ ಮುಂತಾದ ಮಂಡಲಗಳಮೇಲೆ ಕುಳಿತರು. ವಸಿಷ್ಠನು ಮುನಿಗಳಿಂದ ಕೂಡಿಕೊಂಡು ಶಿಶುಗಳೊಡನೆಯೂ, ರಾಮನೊಡನೆಯೂ, ಗಣಪತಿಯ ಪೂಜೆಯನ್ನು ಮಾಡಿಸಿ ಪುಣ್ಯಾಹ, ನಾಂದಿ, ನವಗ್ರಹಪೂಜೆಗಳನ್ನು ಮಾಡಿಸಿದನು.

೫೬. ದೇಶಾಚಾರ, ಕುಲಾಚಾರಗಳನ್ನು ಅನುಸರಿಸಿ ಇಷ್ಟದೇವತಾ ಪ್ರಾರ್ಥನೆಯನ್ನು ಮಾಡಿ, ಕುಲದೇವತೆಯನ್ನು ಪೂಜಿಸಿ, ವಿಧಿಯಂತೆ ಆ ಕುಲದೇವತೆಯನ್ನು ಪ್ರತಿಷ್ಠಿಸಿದನು.

ತದಾ ಜನಕನಂದಿನ್ಯಾ ರಜನೀಕುಂಕುಮಾನ್ವಿತೇ ।
ವಿರೇಜತುಃ ಸ್ತ್ರೀಕದಂಬಸ್ಥಿತಾಯಾಃ ಪದಪಂಕಜೇ ॥ ೫೭ ॥

ಸೀತಾದ್ಯಾಸ್ತಾಃ ಸ್ತ್ರಿಯಃ ಸರ್ವಾ ಹರಿತ್ಪೀತಾರುಣೈರ್ವರೈಃ ।
ಹೇಮತಂತ್ವಂಕಿತೈರ್ವಸ್ತ್ರೈರ್ವಿರೇಜುರ್ಮಂಟಪಾಂಗಣೇ ॥ ೫೮ ॥

ಸ್ವಯಂವರೋತ್ಸವೇ ಪೂರ್ವಂ ನಾಗತಾ ಯೇ ಸಹಸ್ರಶಃ ।
ಶೃತ್ವೋತ್ಸಾಹಂ ವಿವಾಹಸ್ಯ ಕುಶಸ್ಯ ಚ ಲವಸ್ಯ ಚ ॥ ೫೯ ॥

ತತಸ್ಸಮಾಯಯುಸ್ಸರ್ವೇ ಮುದಾ ತತ್ರ ಮುನೀಶ್ವರಾಃ ।
ತಾನ್ಸರ್ವಾನ್ ರಾಮಚಂದ್ರೋಽಪಿ ವಸ್ತ್ರಾಭರಣಧೇನುಭಿಃ ॥ ೬೦ ॥

ಪೂಜಯಾಮಾಸ ವಿಧಿವತ್ಸೀತಯಾ ಲಕ್ಷ್ಮಣಾದಿಭಿಃ ।
ಭೂರಿಕೀರ್ತಿಃ ನೃಪೈರ್ಯುಕ್ತೋ ಮಹಾವಾದ್ಯಪುರಸ್ಸರಂ ॥ ೬೧ ॥

---

೫೭. ಜನಕನಂದಿನಿಯಾದ ಸೀತೆಯು ಕಾಲಿಗೆ ಅರಸಿನ, ಕುಂಕುಮಗಳನ್ನು ಹಚ್ಚಿಕೊಂಡು ಆ ಮುನಿಯ ಪತ್ನಿಯರ ಗುಂಪಿನಲ್ಲಿ ಪ್ರಕಾಶಿಸುತ್ತಿದ್ದಳು.

೫೮. ಆಗ ಅಲ್ಲಿ ಆ ಸೀತೆಯೇ ಮುಂತಾದ ಮುತ್ತೈದೆಯರು ಹಸರು ಹಳದಿಯ ಸೀರೆಗಳನ್ನುಟ್ಟಿದ್ದರು. ಅವುಗಳು ಚಿನ್ನದ ಜರಿಗಳಿಂದ ಕಂಗೊಳಿಸುತ್ತಿರಲು ರಮ್ಯರಾಗಿ ಮಂಟಪದಲ್ಲಿ ಪ್ರಕಾಶಿಸುತ್ತಿದ್ದರು.

೫೯. ಮೊದಲು ಸ್ವಯಂವರಕಾಲದಲ್ಲಿ ಯಾರು ಯಾರು ಬಂದಿರಲಿಲ್ಲವೋ ಅವರೆಲ್ಲರೂ ಕುಶಲವರ ಈ ಮದುವೆಯ ಸಂಭ್ರಮವನ್ನು ಕೇಳಿ ಬರಲು ಮೊದಲು ಮಾಡಿದರು.

೬೦. ಈ ಕುಶಲವರ ವಿವಾಹವನ್ನು ಕೇಳಿ ಮುನೀಶ್ವರರೂ ಕೂಡ ಅಲ್ಲಿಗೆ ಬಂದರು. ರಾಮಚಂದ್ರನು ಅವರೆಲ್ಲರಿಗೂ ವಸ್ತ್ರ, ಆಭರಣ, ಧೇನುಗಳನ್ನು ಕೊಟ್ಟು ವಿಧಿಯಂತೆ ಪೂಜಿಸಿದನು.

೬೧–೬೨. ಸೀತೆಯೂ, ಲಕ್ಷ್ಮಣನೂ, ಕೂಡ ಅವರಿಗೆ ಇನ್ನೂ ಬೇಕಾದುವನ್ನು ಕೊಟ್ಟರು. ಇತ್ತ ಭೂರಿಕೀರ್ತಿಯು ವಾದ್ಯಗಳನ್ನು

ಸ್ವಯಂ ಕುಶಲವೌ ಗೇಹಂ ನೇತುಕಾಮುಸ್ಸಮಾಯಯೌ ।
ಮಂಟಪೇ ಪೂಜಯಾಮಾಸ ಭೂರಿಕೀರ್ತೇರ್ವರಸ್ಸುತಃ ॥ ೬೨ ॥

ಕುಶಂ ತಥಾ ಲವಂ ಚಾಪಿ ಕನೀಯರ್ಾ ಭೂರಿಕೀರ್ತಿಜಃ ।
ಹೇಮತಂತೂದ್ಭವೈರ್ದಿವ್ಯವಸ್ತ್ರೈರಾಭರಣಾದಿಭಿಃ ॥ ೬೩ ॥

ತದಾ ವಿರೇಜತುರ್ಬಾಲೌ ತಥಾ ತೇಽಪ್ಯಂಗದಾದಯಃ ।
ತತಸ್ತೌ ವಾರಣೇಂದ್ರಸ್ಥೌ ದಿವ್ಯಚಾಮರವೀಜಿತೌ ॥ ೬೪ ॥

ಪಶ್ಯಂತೌ ನರ್ತನಾನ್ಯಗ್ರೇ ವಾರಸ್ತ್ರೀಣಾಂ ಸ್ಮಿತಾನನೌ ।
ಶೃಣ್ವಂತೌ ವಾದ್ಯಘೋಷಾಂಶ್ಚ ವರ್ಣಿತೌ ಮಾಗಧಾದಿಭಿಃ ॥ ೬೫ ॥

ಮಾಡಿಸಿಕೊಂಡು ಜೊತೆಯಲ್ಲಿ ರಾಜರನ್ನೂ ಕರೆದುಕೊಂಡು ಲವಕುಶರನ್ನು ಮನೆಗೆ ಕರೆದುಕೊಂಡು ಹೋಗಲು ಬಂದನು. ಆಗ ಮಂಟಪದಲ್ಲಿ ಭೂರಿಕೀರ್ತಿಯ ಮಕ್ಕಳು ಆ ಕುಶಲವರನ್ನು ಪೂಜಿಸಲು ಬಂದಿದ್ದರು.

೬೩. ಭೂರಿಕೀರ್ತಿಯ ಹಿರಿಯಮಗನು ಕುಶನಿಗೂ, ಕಿರಿಯಮಗನು ಲವನಿಗೂ, ರಾಮನ ಮನೆಯ ವಿವಾಹಮಂಟಪದಲ್ಲಿ ವರಪೂಜೆಯನ್ನು ಮಾಡಿದರು. ಆಗ ಅನೇಕ ಆಭರಣಗಳನ್ನೂ ಜರಿಯವಸ್ತ್ರಗಳನ್ನೂ ವರರಿಗೆ ಕೊಟ್ಟರು.

೬೪. ಅಂಗದಾದಿಬಾಲಕರೂ ಉತ್ತಮವಾದ ಬಟ್ಟೆಗಳನ್ನೂ ಒಡವೆಗಳನ್ನೂ ಧರಿಸಿದ್ದರು. ಕುಶಲವರಾದರೋ ಉತ್ತಮವಾದ ಬಟ್ಟೆಗಳನ್ನೂ ಒಡವೆಗಳನ್ನೂ ಹಾಕಿಕೊಂಡು ಮನೋಹರವಾಗಿದ್ದರು. ಅವರನ್ನು ಮೆರವಣಿಗೆಗೋಸ್ಕರ ಆನೆಯಮೇಲೆ ಕೂರಿಸಿದರು. ದಿವ್ಯವಾದ ಚಾಮರಗಳನ್ನು ಬೀಸುತ್ತಿದ್ದರು.

೬೫. ಹಾಗೆ ಕೂರಿಸಿ ಮನೆಗೆ ಉತ್ಸವಗಳೊಡನೆ ಕರೆದುಕೊಂಡು ಹೊರಟನು. ಅವರಮುಂದೆ ನರ್ತಕಿಯರು ಕುಣಿಯುತ್ತಿದ್ದರು. ವಾದ್ಯಗಳನ್ನು ಉತ್ತಮವಾಗಿ ನುಡಿಸುತ್ತಿದ್ದರು. ಸ್ತುತಿಪಾಠಕರು ಹೊಗಳುತ್ತಿದ್ದರು. ಅವೆಲ್ಲವನ್ನೂ ನೋಡುತ್ತ ಬಾಲಕರು ಹೊರಟರು.

ಸೀತಾದಿಭಿರ್ವಾರಣೇಷು ಸಂಸ್ಥಿತಾಭಿಸ್ತಥಾ ಪಥಿ ।
ಪ್ರಾಸಾದೋಪರಿಸಂಸ್ಥಾಭಿರ್ನಾರೀಭಿಃ ಪುಷ್ಪವೃಷ್ಟಿಭಿಃ ॥ ೬೬ ॥

ಹರಿದ್ರಾಪೀತಧಾನ್ಯೈಶ್ಚ ಮಾಂಗಲ್ಯೈರ್ಮೌಕ್ತಿಕೈರಪಿ ।
ಲಾಜಾಭಿರ್ಹೇಮಪುಷ್ಪೈಶ್ಚ ವರ್ಷಿತಾವೀಕ್ಷಿತೌ ಮುಹುಃ ॥ ೬೭ ॥

ಜಗ್ಮತುರ್ಬಾಲಕಾವೇವಂ ಪಶ್ಯಂತೌ ಕೌತುಕಾನಿ ಹಿ ।
ದದರ್ಶತುರ್ವಾಟಿಕಾಶ್ಚ ಪುಷ್ಪವೃಕ್ಷವಿನಿರ್ಮಿತಾಃ ॥ ೬೮ ॥

ತಥಾ ಕೃತ್ರಿಮವೃಕ್ಷಾಂಶ್ಚ ಪತಾಕಾಂಶ್ಚ ಧ್ವಜಾಂಸ್ತಥಾ ।
ತಥೌಷಧಿಭವಾನ್ ವೃಕ್ಷಾನ್ ವಹ್ನಿಸ್ಪರ್ಶಾತಿದೀಪಿತಾನ್ ॥ ೬೯ ॥

---

೬೬. ಸೀತೆಯೂ ಅವಳ ವಾರಗಿತ್ತಿಯರೂ ಕೂಡ ಆನೆಯಮೇಲೆ ಕುಳಿತು ಹೊರಟರು. ದಾರಿಯುದ್ದಕ್ಕೂ ಮಹಡಿಯಮೇಲೆ ಮುತ್ತೈದೆಯರು ನಿಂತು ಕೊಂಡು ನೋಡುತ್ತ ಅವರಮೇಲೆ ಹೂಮಳೆಯನ್ನು ಸುರಿಸುತ್ತಿದ್ದರು.

೬೭. ಅಲ್ಲದೆ ಅರಶಿನವನ್ನು ಸವರಿದ ಅಕ್ಷತೆಯನ್ನೂ ಮುತ್ತುಗಳನ್ನೂ ಅರಳುಗಳನ್ನೂ ಚಿನ್ನದ ಹೂಗಳನ್ನೂ ಎರಚುತ್ತಿದ್ದರು. ಮತ್ತು ಎಲ್ಲವನ್ನೂ ಒಟ್ಟಿಗೆ ಸೇರಿಸಿಯೂ ಅವರಮೇಲೆ ಎರಚುತ್ತಿದ್ದರು.

೬೮ ಆ ಬಾಲಕರಿಬ್ಬರೂ ಈ ರೀತಿಯಾದ ಕೌತುಕಗಳನ್ನು ಮಾರ್ಗದಲ್ಲಿ ನೋಡುತ್ತ ಹೋದರು. ದಾರಿಯುದ್ದಕ್ಕೂ ಹೂವಿನ ಗಿಡಗಳನ್ನೂ, ಅಲ್ಲಲ್ಲೆ ನೆಟ್ಟು ಏರ್ಪಡಿಸಿರುವ ಹೂತೋಟಗಳನ್ನೂ ನೋಡುತ್ತ ಹೊರಟರು.

೬೯. ಇದಲ್ಲದೆ ಮದ್ದಿನಿಂದ ಮರಗಳನ್ನೂ ಧ್ವಜಗಳನ್ನೂ ಪತಾಕೆಗಳನ್ನೂ ನಿರ್ಮಿಸಿ ಅವಕ್ಕೆ ಬೆಂಕಿಯನ್ನು ಹತ್ತಿಸಿ ಮನೋಹರವಾಗಿ ಕಾಣುವಂತೆ ಮಾಡುತ್ತ ಇದ್ದುದನ್ನೂ ನೋಡುತ್ತ ಹೊರಟರು.

ಶಕಟೆಸ್ಥಾನೌಷಧೀಭಿಃ ಪೂರಿತಾನ್ ಕೃತ್ರಿಮಾನ್ ಜನಾನ್ ।
ತಥಾ ವ್ಯಾಘ್ರಾದಿಕಾನ್ ಹಿಂಸ್ರಾನೌಷಧೀಭಿಃ ಪ್ರಪೂರಿತಾನ್ ॥ ೭೦ ॥

ತಟಿತ್ಸಮಾನಾನ್ ಗಗನೇ ಪ್ರಾಕಾರಾನೌಷಧೀಭವಾನ್ ।
ಕೇಕಿಚಕ್ರೋಪಮಾದೀಂಶ್ಚ ಚಂದ್ರಜ್ಯೋತ್ಸ್ನಾಸ್ತು ಕೃತ್ರಿಮಾಃ ॥ ೭೧ ॥

ಏವಂ ದದರ್ಶತುರ್ನಾನಾಕೌತುಕಾನಿ ನೃಪಾತ್ಮಜೌ ।
ತತಸ್ತೌ ಭೂರಿಕೀರ್ತೇಶ್ಚ ಗತ್ವಾ ಮಂಟಪಮುತ್ತಮಂ ॥ ೭೨ ॥

ನಾನಾಮಹೋತ್ಸವೈರ್ಬಾಲೌ ಚಾಮರಚ್ಛತ್ರಮಂಡಿತೌ ।
ಅವರುಹ್ಯ ಗಜೇಂದ್ರಾಭ್ಯಾಂ ತಸ್ಥತುರ್ಮಂಟಪಾಂಗಣೇ ॥ ೭೩ ॥

---

೭೦. ಮನುಷ್ಯರ ನಾನಾವಿಧವಾದ ಪ್ರತಿಮೆಗಳನ್ನು ಮಾಡಿ ಅವನ್ನು ಗಾಡಿಯಮೇಲಿಟ್ಟು ಮೆರೆವಣಿಗೆಯಲ್ಲಿ ವಿನೋದಕ್ಕೋಸ್ಕರ ತೆಗೆದುಕೊಂಡು ಹೋಗುತ್ತಿದ್ದರು. ಅಂತೆಯೇ ಮದ್ದಿನಿಂದ ಹುಲಿ, ತೋಳ ಮುಂತಾದುವುಗಳಾಗುವಂತೆ ಮಾಡಿ ಅವನ್ನು ಹತ್ತಿಸುತ್ತಾ ಬಾಣಗಳನ್ನೂ ಹತ್ತಿಸುತ್ತ ಅವರನ್ನು ಕರೆದುಕೊಂಡು ಹೋಗುತ್ತಿದ್ದರು.

೭೧. ಆ ಮದ್ದಿನ ಬಾಣಗಳು ಆಕಾಶದಲ್ಲಿ ಮಿಂಚುಗಳಂತೆ ಕಾಣುತ್ತಿದ್ದುವು. ಕೆಲವು ಬಾಣಗಳನ್ನು ಹತ್ತಿಸಲು ಅವು ನವಿಲಿನ ಬಣ್ಣಕ್ಕೂ, ಆಕಾರಕ್ಕೂ ಕಾಣುತ್ತಿದ್ದುವು. ಕೆಲವು ಬಾಣಗಳು ಚಂದ್ರಿಕೆಯಂತೆ ಕಾಣುತ್ತಿದ್ದುವು.

೭೨-೭೩. ಈ ರೀತಿಯಾಗಿ ಅನೇಕ ಕೌತುಕಗಳನ್ನು ಅವರು ನೋಡುತ್ತ ಹೊರಟರು. ಹೀಗೆ ಹೋಗುತ್ತ ಕೊನೆಗೆ ಭೂರಿಕೀರ್ತಿಯ ಮನೆಯನ್ನು ಛತ್ರ ಚಾಮರಗಳೊಡನೆ ಭೂಷಿತರಾಗಿ ಹೊಕ್ಕರು. ಅನಂತರ ಆನೆಯಿಂದ ಇಳಿದು ಹೋಗಿ ಮಂಟಪದ ಅಂಗಳದಲ್ಲಿ ಕುಳಿತುಕೊಂಡರು.

ಮಧುಪರ್ಕವಿಧಾನಾನಿ ವಿಷ್ಟರಾದೀನಿ ವೈ ಕ್ರಮಾತ್ ।
ತಯೋರ್ಗುರೂಚಕ್ರತುಸ್ತೌ ಬ್ರಾಹ್ಮಣೈಃ ಪರಿವೇಷ್ಟಿತೌ ॥ ೭೪ ॥

ತತೋ ವಧ್ವೋಃ ಪೂಜನಾನಿ ಸೀತಯಾ ರಘುನಂದನಃ ।
ಚಕಾರ ಗುರುಣಾ ಯುಕ್ತಸ್ಸ ತದಾ ಮಂಟಪಾಂಗಣೇ ॥ ೭೫ ॥

ತತೋ ಲಗ್ನಮುಹೂರ್ತೇ ತಂ ಕುಶಂ ಚಂಪಿಕಯಾ ಗುರುಃ ।
ತಥಾ ಲವಂ ಸುಮತ್ಯಾಪಿ ಪೃಥಗ್ವೇದಿಕಯೋಸ್ತದಾ ॥ ೭೬ ॥

ಕೃತ್ವಾ ಸುಸಂಸ್ಥಿತೌ ಚೋಭೌ ದಂಪತ್ಯೋರಂತರೇ ಪಟೌ ।
ಧೃತ್ವೋಭಯೋಃ ಪೃಥಕ್ಚಿತ್ರೌ ನೂತನೌ ಹೇಮತಂತುಜೌ ॥ ೭೭ ॥

---

೭೪. ಅಲ್ಲಿ ಆ ಹುಡುಗರಿಗೆ ಮಧುಪರ್ಕವನ್ನೂ ಆಸನವನ್ನೂ, ಕೊಟ್ಟರು. ಇವೆಲ್ಲವನ್ನೂ ಬ್ರಾಹ್ಮಣರೊಡನೆ ಆ ರಾಮ ಭೂರಿಕೀರ್ತಿಯರ ಗುರುಗಳೇ ಮಾಡಿದರು.

೭೫. ಅನಂತರ ರಾಮನು ಸೀತೆಯೊಡನೆ ವಧುಗಳ ಪೂಜೆಯನ್ನು ಮಾಡಿದನು. ಗುರುವಾದ ವಸಿಷ್ಠನು ಅವೆಲ್ಲವನ್ನೂ ಕ್ರಮವಾಗಿ ಮಾಡಿಸಿದನು.

೭೬–೭೭. ಅನಂತರ ಮುಹೂರ್ತವು ಬರಲು ಕುಶನನ್ನು ಚಂಪಿಕೆಯೊಡನೆಯೂ, ಲವನನ್ನು ಸುಮತಿಯೊಡನೆಯೂ, ಗುರುವು ಬೇರೆ ಬೇರೆ ವೇದಿಕೆಗಳಲ್ಲಿ ಕೂರಿಸಿದನು. ಆಗ ದಂಪತಿಗಳ ಮಧ್ಯದಲ್ಲಿ ಅಂತರಪಟವನ್ನು ಹಿಡಿದರು. ಆ ಪಟಗಳು ಹೊಸದಾಗಿಯೂ ಚಿತ್ರಗಳಿಂದಲೂ ಜರಿಗಳಿಂದಲೂ ಕೂಡಿದ್ದುವು.

ನಾನಾಮಂಗಲಘೋಷಾಂಶ್ಚ ಮುನಿಭಿಶ್ಚಕ್ರೆತುರ್ಮುದಾ ।
ಆಸರ್ ಸರ್ವೇ ಜನಾಸ್ತೂಷ್ಣೀಂ ಶೃಣ್ವಂತೋ ಮಂಗಳಸ್ವನಾನ್ ॥ ೭೮ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ವಿವಾಹಕಾಂಡೇ ಚಂಪಿಕಾ ಸುಮತಿ ಸ್ವಯಂವರ ವರ್ಣನಂ ನಾಮ ತೃತೀಯಸ್ಸರ್ಗಃ

---

೭೮. ಆಗ ವಿಧವಿಧವಾದ ಮಂಗಳಘೋಷಗಳು ಮೊಳಗಿದುವು. ಮುನಿಗಳು ಮಂಗಳಪಾಠವನ್ನು ಪಠಿಸಿದರು. ಆಗ ಜನರೆಲ್ಲರೂ ಕೂಡ,ಮಂಗಳ ಧ್ವನಿಗಳನ್ನು ಕೇಳುತ್ತ ಸದ್ದುಮಾಡದೆ ಸುಮ್ಮನಿದ್ದರು.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ ಚಂಪಿಕಾ ಸುಮತಿ ಸ್ವಯಂವರ ವರ್ಣನವೆಂಬ ಮೂರನೆಯ ಸರ್ಗವು

ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ
॥ ಮೂರನೆಯ ಸರ್ಗದ ಸಾರಾಂಶವು ॥

ಇನ್ನೊಬ್ಬ ಮಮ್ಮಗಳಾದ ಸುಮತಿಯು ಈಶಾನ್ಯದಿಕ್ಕಿನಿಂದ ಹೊರಟು ಉತ್ತರದ ಕಡೆಯಲ್ಲಿ ಕುಳಿತಿರುವ ರಾಜರನ್ನು ನೋಡುತ್ತ ಬಂದಳು. ಅವಳ ಸೇವಕಳಾದ ಸುನಂದೆಯು ಎಲ್ಲರನ್ನೂ ವರ್ಣಿಸುತ್ತ ಬಂದಳು. ಎಲ್ಲರನ್ನೂ ಬಿಟ್ಟು ಕೊನೆಗೆ ಲವನ ಬಳಿಗೆ ಬಂದು ಆತನ ವರ್ಣನೆಯನ್ನು ಕೇಳಿ ಅವನಲ್ಲಿ ಮೋಹಗೊಂಡು ಮಾಲೆಯನ್ನು ಅವನ ಕಂಠದಲ್ಲಿ ಹಾಕಿದಳು.

ಇದನ್ನು ನೋಡಿ ಎಲ್ಲರೂ ಸಂತೋಷಗೊಂಡರು. ಭೂರಿಕೀರ್ತಿಯು ಅಲ್ಲಿನ ರಾಜರ ಮುಂದೆನಿಂತು ತಾವೆಲ್ಲರೂ ಮದುವೆಯ ಸಂಭ್ರಮವನ್ನು ನೋಡಿ ಕೊಂಡು ಹೋಗಬೇಕೆಂದು ಕೇಳಿಕೊಂಡನು. ಅಂತೆಯೇ ಕೆಲವರಿದ್ದರು. ಜೋಯಿಸರು ಐದನೆಯದಿವಸವೇ ಮದುವೆಯ ಮುಹೂರ್ತವನ್ನಿಟ್ಟರು.

ಭೂರಿಕೀರ್ತಿಯು ತನ್ನ ಮಕ್ಕಳ ಕೈಯ್ಯಲ್ಲಿ ವರಪೂಜೆಯನ್ನೂ ಮಾಡಿಸಿ ರಾಮನ ಬಿಡಾರದಿಂದ ತನ್ನ ಅರಮನೆಗೆ ಬಹುವಾದ ವಿಜೃಂಭಣೆಯಿಂದ ಕರೆದು ಕೊಂಡು ಹೋದನು. ಆಗ ಮಂಗಳವಾದ್ಯಗಳು ಮೊಳಗುತ್ತಿದ್ದವು. ಆಶ್ಚರ್ಯ ಕರವಾಗಿರುವಂತೆ ಬಾಣಬಿರುಸುಗಳನ್ನು ಹತ್ತಿಸಿದರು. ಮುತ್ತೈದೆಯರು ಆರತಿಯನ್ನೆತ್ತುತ್ತ ಮಹಡಿಯಿಂದ ಹೂಮಳೆಯನ್ನು ಸುರಿಸುತ್ತಿದ್ದರು.

ಕೊನೆಗೆ ಭೂರಿಕೀರ್ತಿಯ ಅರಮನೆಗೆ ಬಂದು ಅಲ್ಲಿ ಮಧುಪರ್ಕವನ್ನು ಸ್ವೀಕರಿಸಿದರು. ಅಲ್ಲಿ ವರಪೂಜೆಯೂ ನಡೆಯಿತು. ಅನಂತರ ವಧೂವರರ ನಡುವೆ ಕೆರೆತೆಯನ್ನು ಹಿಡಿದು ಮಂಗಳಾಷ್ಟಕಗಳನ್ನು ಹೇಳಲು ಮೊದಲು ಮಾಡಿದರು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ವಿವಾಹಕಾಂಡೇ

॥ ಚತುರ್ಥಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಶ್ರೀಸೀತಾರಘುನಾಯಕಶ್ಚ ಗಿರಿಜಾ ಶಂಭುರ್ಗಣೇಶಸ್ತಥಾ ।
ನಂದೀ ಷಣ್ಮುಖಲಕ್ಷ್ಮಣೌ ಚ ಭರತಃ ಕಂಜೋದ್ಭವಶ್ಶತ್ರುಹಾ ।
ಸರ್ವೇ ತೇ ಮುನಯಸ್ಸುರಾಶ್ಚ ದಿತಿಜಾಸ್ತೀರ್ಥಾನಿ ನದ್ಯೋ ನದಾ ।
ದಿಕ್ಪಾಲಾಶ್ಶಶಿಭಾಸ್ಕರೌ ಚ ಹನುಮಾನ್ ಕುರ್ವಂತು ವೋ ಮಂಗಲಂ ॥ ೧ ॥

ತದೇವ ಲಗ್ನಂ ಸುದಿನಂ ತದೇವ ತಾರಾಬಲಂ ಚಂದ್ರಬಲಂ ತದೇವ ।
ವಿದ್ಯಾಬಲಂ ದೈವಬಲಂ ತದೇವ ಸೀತಾಪತೇರ್ಯತ್ಸ್ಮರಣಂ ವಿಧೇಯಂ ॥೨॥

ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ
ನಾಲ್ಕನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು–ಶ್ರೀ ಸೀತೆ, ರಘುರಾಮ, ಗಿರಿಜೆ, ಶಂಭು, ಗಣೇಶ, ನಂದಿ, ಷಣ್ಮುಖ, ಲಕ್ಷ್ಮಣ, ಭರತ, ಬ್ರಹ್ಮ, ಶತ್ರುಘ್ನ, ಮುನಿಗಳು, ಸುರರು, ಅಸುರರು, ತೀರ್ಥಗಳು, ನದಿಗಳು, ನದಗಳು, ದಿಕ್ಪಾಲಕರು, ಸೂರ್ಯಚಂದ್ರರು, ಹನುಮಂತ. ಇವರೆಲ್ಲರೂ ಕೂಡ ನಿಮಗೆ ಮಂಗಳವನ್ನು ಉಂಟುಮಾಡಲಿ.

೨ ಸೀತಾಪತಿಯ ಸ್ಮರಣೆಯನ್ನು ಮಾಡಿದ ಲಗ್ನವೇ ಸುಲಗ್ನವು. ಸೀತಾಪತಿಯನ್ನು ಸ್ಮರಣೆಮಾಡಿದ ಬಲವೇ ತಾರಬಲ, ಚಂದ್ರಬಲಗಳು, ಸೀತಾಪತಿಯ ಸ್ಮರಣೆಯೇ ವಿದ್ಯಾಬಲ, ದೈವಬಲಗಳು.

ಏವಂ ಮಂಗಳಘೋಷೈಶ್ಚ ನಾನಾವಾದ್ಯಪುರಸ್ಸರಂ ।
ತತಸ್ತ್ವಂತಃಪಟೌ ಮುಕ್ತ್ವಾ ಓಂ ಪುಣ್ಯಾಹಮಿತಿ ಸ್ಮರ್ರ || ೩ ||

ತಯೋಸ್ತೇ ಪಾಣಿಗ್ರಹಣಂವಿಧಾನಂ ವಿಧಿಪೂರ್ವಕಂ ।
ಲಾಜಾಹೋಮಾದಿಕಂ ಸರ್ವಂ ಚಕ್ರುರ್ಮಂಗಳಪೂರ್ವಕಂ || ೪ ||

ತದಾಮಹಾವಾದ್ಯಘೋಷಾ ನಿನೇದುಮಂಟಪಾಂಗಣೇ ।
ನನೃತುಶ್ಚಾರನಾರ್ಯಶ್ಚ ತದಾಮಾಗಧವಂದಿನಃ || ೫ ||

ಜಗ್ಮುರ್ಮಂಗಳಗೀತಾನಿ ತುಷ್ಟುವುಸ್ತೇ ಮಹಾಸ್ವನೈಃ ।
ತದಾ ದಾನಾನ್ಯನೇಕಾನಿ ಚಕ್ರತುಸ್ತೌ ನೃಪೋತ್ತಮೌ || ೬ ||

---

೩. ಈ ರೀತಿಯಾಗಿ ಮಂಗಳಘೋಷವನ್ನು ಮಾಡಿಸುತ್ತ ಆ ದಂಪತಿಗಳಿಗೆ ಹಿಡಿದಿದ್ದ ಅಂತಃಪಟವನ್ನು ತೆಗೆದರು. ಅನಂತರ " ಓಂ ಪುಣ್ಯಾಹವು " ಎಂಬದಾಗಿ ಹೇಳಿದರು.

೪. ಅನಂತರ ಕುಶಲವರಿಂದ ಅವರುಗಳ ಪಾಣಿಗ್ರಹಣವನ್ನು ವಿಧಿಪೂರ್ವಕವಾಗಿ ಮಾಡಿಸಿ ಲಾಜಹೋಮ (ಅರಳನ್ನು ಹೋಮಮಾಡುವುದು) ವನ್ನು ಮಂಗಳಪುರಸ್ಸರವಾಗಿ ಮಾಡಿಸಿದರು.

೫. ಆಗ ಮಂಟಪದ ಪ್ರದೇಶದಲ್ಲಿ ದೊಡ್ಡದಾಗಿ ವಾದ್ಯಘೋಷಗಳು ನಡೆದವು. ವಾರನಾರಿಯರು ಕುಣಿದರು. ಮಾಗಧರೂ, ವಂದಿಗಳೂ ಹೊಗಳಿದರು.

೬. ಮುತ್ತೈದೆಯರು ಮಂಗಳಗೀತವನ್ನು ಹಾಡಿದರು. ಅಲ್ಲಿರುವವರೆಲ್ಲರೂ ದೊಡ್ಡದಾದ ಧ್ವನಿಯಿಂದ ಹೊಗಳಿದರು. ಆಗ ರಾಜಪುತ್ರರು ಅನೇಕ ದಾನಗಳನ್ನು ಮಾಡಿದರು.

ಭೂರಿಕೀರ್ತೀರಾಮಚಂದ್ರೌ ಮಹಾತೋಷಪ್ರಪೂರಿತೌ ।
ಅಥ ತೌ ಬಾಲಕೌ ವಧ್ವೌ ನಿಜಕಟ್ಯೋರ್ನಿವೇಶ್ಯ ವೈ ॥ ೭ ॥

ಸೀತೋರ್ಮಿಲಾದಿಭಿಃ ಸ್ತ್ರೀಭಿರ್ಜಗ್ಮತುರ್ಭೋಜನಂ ಗೃಹಂ ।
ತತ್ರ ಗೌರೀಹರೌ ಪೂಜ್ಯ ಚಕ್ರತುಶ್ಚಾಪ್ಯುಪಸಿಂಚನಂ ॥ ೮ ॥

ತತಃ ಕುಶಶ್ಚಂಪಿಕಯಾ ಸುಮತ್ಯಾ ಸ ಲವೋಪಿ ಚ ।
ಚಕ್ರತುರ್ಭೋಜನಂ ಚೋಭೌ ಸ್ತ್ರೀಭಿಸ್ಸರ್ವತ್ರ ವೇಷ್ಟಿತೌ ॥ ೯ ॥

ಮಾತ್ರಾ ಸಹೋಪನಯನೇ ವಿವಾಹೇ ಭಾರ್ಯಯಾ ಸಹ ।
ಅನ್ಯೇನ ನೈವ ಭೋಕ್ತವ್ಯಂ ಭುಕ್ತಂ ಚೇತ್ಪತಿತಃ ಸ್ಮೃತಃ ॥ ೧೦ ॥

ರಾಮೋಪಿ ಬಂಧುಭಿಃ ಪೌರೈಸ್ಸುಹೃದ್ಭಿಃ ಪಾರ್ಥಿವೋತ್ತಮೈಃ ।
ಚಕಾರ ಭೋಜನಂ ಭೂರಿಕೀರ್ತೇಸ್ಸದ್ಮನಿ ವೈ ಮುದಾ ॥ ೧೧ ॥

೭-೮. ಭೂರಿಕೀರ್ತಿಯೂ, ರಾಮಚಂದ್ರನೂ, ಬಹು ಸಂತೋಷ ಗೊಂಡರು. ಅನಂತರ ಆ ಕುಶಲವರು ಅವರವರ ಹೆಂಡಿರುಗಳನ್ನು ನಡುವಿನ ಮೇಲೆ ಕೂರಿಸಿ ಎತ್ತಿಕೊಂಡು ಸೀತೆ, ಊರ್ಮಿಳೆಯೇ ಮುಂತಾದ ಹೆಂಗಸರೊಡನೆ ಊಟಕ್ಕೋಸ್ಕರ ಊಟದಮನೆಗೆ ಹೋದರು. ಹೋದಮೇಲೆ ಪಾರ್ವತಿ ಪರಮೇಶ್ವರರನ್ನು ಪೂಜಿಸಿ ಅಮ್ರುಸೇಚನವೆಂಬ ಕರ್ಮವನ್ನು ಮಾಡಿದರು.

೯. ಆಮೇಲೆ ಕುಶನು ಚಂಪಿಕೆಯೊಡನೆಯೂ, ಲವನು ಸುಮತಿ ಯೊಡನೆಯೂ ಊಟವನ್ನು ಮಾಡಿದರು. ಹೆಂಗಸರೆಲ್ಲರೂ ಸುತ್ತುವರಿದಿದ್ದರು.

೧೦. ಉಪನಯನದಲ್ಲಿ ವಟುವು ತಾಯಿಯೊಡನೆಯೂ ವಿವಾಹದಲ್ಲಿ ಹೆಂಡತಿಯೊಡನೆಯೂ ಊಟಮಾಡಬೇಕು. ಮತ್ತೊಬ್ಬರೊಡನೆಯೂ ಊಟ ಮಾಡಕೂಡದು ಹಾಗೆ ಊಟಮಾಡಿದರೆ ಅವನು ಪತಿತನಾಗುವನು. ಎಂದು ಶಾಸ್ತ್ರವಿರುವುದು.

೧೧. ರಾಮನು ತಮ್ಮಂದಿರೊಡನೆಯೂ, ಪಟ್ಟಣಿಗರೊಡನೆಯೂ, ಸ್ನೇಹಿತರೊಡನೆಯೂ, ರಾಜರೊಡನೆಯೂ, ಕೂಡ ಆ ಭೂರಿಕೀರ್ತಿಯ ಮನೆಯಲ್ಲಿ ಊಟವನ್ನು ಮಾಡಿದನು.

ಏವಂ ಸೀತಾಪಿ ನಾರೀಭಿಶ್ಚಕಾರ ಭೋಜನಂ ತದಾ ।
ಭೂರಿಕೀರ್ತೇಃ ಸ್ನುಷಾಭಿಸ್ಸಾ ಪ್ರಾರ್ಥಿತಾ ವಂದಿತಾ ಮುಹುಃ ॥ ೧೨ ॥

ತತೋ ನಾನಾಸಮುತ್ಸಾಹಾನ್ ಭೂರಿಕೀರ್ತಿಶ್ಚಕಾರ ಸಃ ।
ಅಥ ತೌ ಬಾಲಕೌ ರಮ್ಯೌ ಸ್ತ್ರೀವಾಕ್ಯೈರ್ಮಾತೃಸನ್ನಿಧೌ ॥ ೧೩ ॥

ಸ್ವಶ್ವಶ್ರೂಸನ್ನಿಧೌ ಚಾಪಿ ಸ್ತ್ರೀಭಿಸ್ಸರ್ವತ್ರ ವೇಷ್ಟಿತೌ ।
ಸ್ವಸ್ವಪತ್ನ್ಯೋಃ ಪದಯೋಸ್ಸ್ವಶಿರೋಭ್ಯಾಂ ನಮನಂ ಮುಹುಃ ॥ ೧೪ ॥

ಚಕ್ರತುಸ್ತೋಷಸಂಪೂರ್ಣೌ ತೇ ತಾವಪಿ ಸ್ಮಿತಾನನೇ ।
ವಧೂವರಾಶ್ಚ ತೇ ಸರ್ವೇ ನಿಶೋಪಾಂತೇ ವಿರೇಜಿರೇ ॥ ೧೫ ॥

ಕುಂಕುಮಾಂಕಿತಪಾದೇ ತೇ ದದತುರ್ವಲ್ಲಭಾಂಕಯೋಃ ।
ಏವಂ ನಾನಾಸಮುತ್ಸಾಹೈರತಿಕ್ರಾಂತಂ ದಿನತ್ರಯಂ ॥ ೧೬ ॥

---

೧೨. ಸೀತೆಯೂ ಕೂಡ ಹೆಂಗಸರೊಡನೆ ಊಟಮಾಡಿದಳು. ಭೂರಿಕೀರ್ತಿಯ ಸೊಸೆಯರು ಆ ಸೀತೆಗೆ ನಮಸ್ಕರಿಸಿ ಭೋಜನಕ್ಕೆ ಪ್ರಾರ್ಥಿಸುತ್ತಿದ್ದರು.

೧೩–೧೪. ಅನಂತರ ಭೂರಿಕೀರ್ತಿಯು ಅನೇಕ ಬಗೆಯಾದ ಉತ್ಸಾಹಪೂರ್ವಕವಾದ ಆನಂದಕರವಾದ ಕೆಲಸಗಳನ್ನು ಮಾಡಿದನು. ಅನಂತರ ಆ ಸುಂದರರಾದ ಬಾಲಕರು ಹೆಂಗಸರ ಮಾತಿನಂತೆ ತಾಯಿಯರ ಎದುರಿಗೂ, ಅತ್ತೆಯರ ಎದುರಿಗೂ, ಹೆಂಗಸರ ಆ ಗುಂಪಿನಲ್ಲಿ ತಮ್ಮ ತಮ್ಮ ಹೆಂಡತಿಯರ ಕಾಲುಗಳಮೇಲೆ ತಮ್ಮ ತಮ್ಮ ತಲೆಯನ್ನಿಟ್ಟು ನಮಸ್ಕರಿಸಿದರು.

೧೫. ಆಗ ಅವರೆಲ್ಲರೂ ಸಂತೋಷದಿಂದ ನಗುತ್ತಿದ್ದರು. ಅನಂತರ ಆ ವಧೂವರರು ಸಾಯಂಕಾಲದಲ್ಲಿ ಬಹು ಕಾಂತಿಯುಳ್ಳವರಾಗಿ ಪ್ರಕಾಶಿಸಿದರು.

೧೬. ಅವರು ಕಾಲಿಗೆ ನಲುಂಗಿನ ಕುಂಕುಮವನ್ನಿಟ್ಟುಕೊಂಡಿದ್ದರು. ಆ ಕಾಲಿಗಿಟ್ಟುಕೊಂಡಿದ್ದ ಕುಂಕುಮವು ಗಂಡಂದಿರ ತೊಡೆಯಮೇಲೆ ಕುಳಿತಾಗ ಅದು ಆ ತೊಡೆಗೆಲ್ಲವೂ ಆಗಿದ್ದಿತು. ಈ ರೀತಿಯಾಗಿ ಬಹುವಾದ, ಬಗೆ ಬಗೆಯಾದ ಆನಂದದ ಕೆಲಸಗಳು ಮೂರುದಿನಗಳವರೆಗೂ ನಡೆದುವು.

ಚತುರ್ಥೇ ದಿವಸೇ ರಾತ್ರೌ ವಂಶಪಾತ್ರವಿರಾಜಿತೈಃ ।
ದೀಪೈರ್ನೀರಾಜಿತೌ ಶೋಭೌ ಬಾಲಕೌ ತೌ ವಿರೇಜತುಃ ॥ ೧೭ ॥

ತತಸ್ತೌ ಬಾಲಕೌ ಪತ್ನ್ಯೌ ಸ್ವಸ್ವಪೃಷ್ಠೇ ನಿವೇಶ್ಯ ಚ ।
ಚಕ್ರತುಸ್ತಾಂಡವಂ ನೃತ್ಯಕುಶಲೌ ಮಂಟಪಾಂಗಣೇ ॥ ೧೮ ॥

ಮಾತೃಶ್ವಶ್ರ್ವಾದ್ಯೇಷು ವಾದಕೇಷು ಪಶ್ಯತ್ಸು ಸಾದರಂ ।
ಪಾರಿಬರ್ಹಂ ಭೂರಿಕೀರ್ತಿಃ ಕುಶಾಯ ಚ ಲವಾಯ ಚ ॥ ೧೯ ॥

ದದೌ ತುಷ್ಟಮನಾಶ್ಶೀಘ್ರಂ ರಾಮಸಂಬಂಧಹರ್ಷಿತಃ ।
ನಿಯುತಾನ್ವಾರಣೇಂದ್ರಾಂಶ್ಚ ಶಿಬಿಕಾಶ್ಚಾಪಿ ತನ್ಮಿತಾಃ ॥ ೨೦ ॥

ತುರಂಗಾನ್ಪಂಚನಿಯುತಂ ನಿಯುತಾನ್ ಸ್ಯಂದನಾನ್ ದದೌ ।
ದ್ವಾಭ್ಯಾಂ ಪೃಥಕ್ ಪೃಥಕ್ ಪೌತ್ರೀಧವಾಭ್ಯಾಂ ದ್ರವ್ಯಪೂರಿತಾನ್ ॥ ೨೧ ॥

---

೧೭. ನಾಲ್ಕನೆಯ ದಿವಸ ರಾತ್ರಿಯಲ್ಲಿ ಬಿದಿರುಗೊಡೆಯಲ್ಲಿ ಅಥವಾ ವಂದರಿಯಲ್ಲಿ ದೀಪಗಳನ್ನಿಟ್ಟು ಆ ಬಾಲಕರಿಗೆ ಆರತಿಯನ್ನೆತ್ತಿದರು.

೧೮. ಅನಂತರ ಆ ಬಾಲಕರು ಹೆಂಡತಿಯರನ್ನು ತಮ್ಮ ತಮ್ಮ ನಡುವಿನ ಮೇಲೆತ್ತಿಕೊಂಡು ಆ ಮಂಟಪದ ಮಧ್ಯದಲ್ಲಿ ಚೆನ್ನಾಗಿ ಕುಣಿದಾಡಿದರು.

೧೯. ಅದನ್ನು ಅತ್ತೆಯರೂ, ತಾಯಿಯರೂ, ಮುಂತಾದವರೆಲ್ಲರೂ ನೋಡುತ್ತಿದ್ದರು. ಆಗ ಭೂರಿಕೀರ್ತಿಯು ಲವನಿಗೂ, ಕುಶನಿಗೂ ಬಳುವಳಿಗಳನ್ನು ಕೊಟ್ಟನು.

೨೦–೨೧. ಭೂರಿಕೀರ್ತಿಗೆ ರಾಮನ ಈ ಸಂಬಂಧವು ಸಿಕ್ಕಿದುದರಿಂದ ಬಹು ಸಂತೋಷವಾಯಿತು. ಆದರಿಂದ ಬಹು ಸಂತೋಷಗೊಂಡ ಅವನು ಒಂದುಲಕ್ಷ ಆನೆಗಳನ್ನೂ, ಒಂದುಲಕ್ಷ ಪಲ್ಲಕ್ಕಿಗಳನ್ನೂ, ಐದುಲಕ್ಷ ಕುದುರೆಗಳನ್ನೂ, ಒಂದುಲಕ್ಷ ರಥವನ್ನೂ, ಬಟ್ಟೆಗಳನ್ನೂ ಮೊಮ್ಮಕ್ಕಳ ಗಂಡಂದಿರಾದ

ನಾನಾಲಂಕಾರವಾಸಾಂಸಿ ಗಾ ದಾಸೀಸ್ಸೇವಕಾಂಸ್ತಥಾ ।
ದದೌ ತಾಭ್ಯಾಂ ಭೂರಿಕೀರ್ತಿರ್ಯೇಷಾಂ ಸಂಖ್ಯಾ ನ ವಿದ್ಯತೇ ॥ ೨೨ ॥

ಏವಂ ಸಂಮಾನಿತಸ್ತೇನ ಶ್ರೀರಾಮೋ ಭೂರಿಕೀರ್ತಿನಾ ।
ಸಪತ್ನೀಕಾಭ್ಯಾಂ ಪುತ್ರಾಭ್ಯಾಂ ಗಜಸ್ಥಾಭ್ಯಾಂ ಸಮನ್ವಿತಃ ॥ ೨೩ ॥

ಸೀತಯಾ ಬಂಧುಭಿಃ ಪೌರೈಸ್ಸುಹೃದ್ಭಿರ್ಭ್ರಾತೃಭಿರ್ನೃಪೈಃ ।
ಪೂರ್ವವದುತ್ಸವಾದ್ಯೈಶ್ಚ ಸ ಯಯೌ ಸ್ವೀಯಮಂಟಪಂ ॥ ೨೪ ॥

ವಟಿಪುರ್ಯಾಂ ತತೋ ರಾಮೋ ಮಾಸಮೇಕಂ ನಿನಾಯ ಸಃ ।
ಚಕಾರ ಸೀತಯಾ ಕ್ರೀಡಾಂ ನೌಕಾಸಂಸ್ಥೋ ಮಹೋದಧೌ ॥ ೨೫ ॥

ತತಃ ಸ್ನುಷಾಭ್ಯಾಂ ಶ್ರೀರಾಮೋ ಯಯೌ ನಿಜಪುರೀಂ ಸುಖಂ ।
ಅಯೋಧ್ಯಾಯಾಂ ವಿಜಯೋಪಿ ಶ್ರುತ್ವಾ ರಾಮಂ ಸಮಾಗತಂ ॥ ೨೬ ॥

ಲವಕುಶರಿಬ್ಬರಿಗೂ ಬೇರೆ ಬೇರೆಯಾಗಿ ಕೊಟ್ಟನು. ಇವಲ್ಲದೆ ಇನ್ನೂ ಅನೇಕವಾಗಿ ಬಹು ಸಂಖ್ಯಾತವಾದ ಗೋವುಗಳನ್ನೂ ದಾಸ ದಾಸಿಯರನ್ನೂ ಬಹುಮಾನ ಗಳನ್ನೂ ಕೊಟ್ಟನು.

೨೩-೨೪. ಭೂರಿಕೀರ್ತಿಯಿಂದ ರಾಮನು ಈ ರೀತಿಯಾಗಿ ಗೌರವಿತ ನಾದನು. ಅನಂತರ ರಾಮನು ಮಕ್ಕಳನ್ನೂ ಸೊಸೆಯರನ್ನೂ, ಆನೆಯಮೇಲೆ ಕೂರಿಸಿಕೊಂಡು ಹೊರಟನು. ಸೀತೆ, ಬಂಧುಗಳು, ಪೌರರು, ಸ್ನೇಹಿತರು, ಭ್ರಾತೃಗಳು, ಇವರೂ ಜೊತೆಯಲ್ಲಿ ಹೊರಟರು. ವಾದ್ಯಗಳು ಮೊಳಗುತ್ತಿರಲು ರಾಮನು ತನ್ನ ಮಂಟಪವನ್ನು ಕುರಿತು ಹೊರಟು ಅಲ್ಲಿಗೆ ಬಂದು ಸೇರಿದನು.

೨೫. ಆ ವಟಪುರಿಯಲ್ಲಿ ರಾಮನು ಒಂದು ತಿಂಗಳಕಾಲವಿದ್ದನು. ಆಗ ಆ ರಾಮನು ದೋಣಿಯಮೇಲೆ ಸೀತೆಯೊಡನೆ ಕುಳಿತು ಸಮುದ್ರದಲ್ಲಿ ವಿಹರಿಸುತ್ತಿದ್ದನು.

೨೬-೨೭. ಅನಂತರ ಆ ರಾಮನು ಸೊಸೆಯರನ್ನೂ ಕರೆದುಕೊಂಡು ತನ್ನ ರಾಜಧಾನಿಗೆ ಹೊರಟನು. ಇತ್ತ ವಿಜಯನು ರಾಮನು ಅಯೋಧ್ಯೆಗೆ ಬರುವ ವಿಚಾರವನ್ನು ತಿಳಿದುಕೊಂಡನು. ರಾಮನೇ ಅಯೋಧ್ಯೆಯನ್ನು

ಯಃ ಪುರ್ಯಾ ರಕ್ಷಣಾರ್ಥಂ ಹಿ ರಾಮೇಣಾಜ್ಞಾಪಿತಃ ಪುರಾ ।
ಸ ಪುರೀಂ ಶೋಭಯಾಮಾಸ ಪತಾಕಾಧ್ವಜತೋರಣೈಃ ॥ ೨೭ ॥

ವಾರಣೇಂದ್ರಂ ಪುರಸ್ಕೃತ್ಯ ತೂರ್ಯನೃತ್ಯಪುರಸ್ಸರಂ ।
ವಿಜಯೋ ನಾಮ ಸಚಿವೋ ರಾಮಂ ಪ್ರತ್ಯುದ್ಯಯೌ ಜವಾತ್ ॥ ೨೮ ॥

ಅಥೋ ನದತ್ಸು ವಾದ್ಯೇಷು ರಾಮೋ ಬಾಲೈಸ್ಸುಹೃಜ್ಜನೈಃ ।
ಸ್ನುಷಾಭ್ಯಾಂ ಸೀತಯಾ ಬಂಧುಪತ್ನೀಭಿರ್ಭ್ರಾತೃಭಿಃ ಪುರೀಂ ॥ ೨೯ ॥

ವಿವೇಶ ಸೇನಯಾ ಪೌರೈಃ ಪಶ್ಯನ್ನೃತ್ಯಾದಿಕಂ ಪಥಿ ।
ತದಾ ವೇಶ್ಯಾ ನನೃತುಸ್ತುಷ್ಟುವುರ್ವಂದಿಮಾಗಧಾಃ ॥ ೩೦ ॥

ಸ್ವಸ್ವಪತ್ನೀಯುತೌ ಬಾಲೌ ವರವಾರಣಯೋಃ ಸ್ಥಿತೌ ।
ತದಾ ವಿರೇಜತುರ್ಮಾರ್ಗೇ ಸ್ತ್ರೀಭಿಃ ಪುಷ್ಪೈಸ್ಸುವರ್ಷಿತೌ ॥ ೩೧ ॥

ರಕ್ಷಿಸುವುದಕ್ಕೋಸ್ಕರ ಅವನನ್ನು ಅಲ್ಲಿಟ್ಟಿದ್ದನು. ಆದ್ದರಿಂದ ಅವನು ಆ ಪಟ್ಟಣವನ್ನು ಪತಾಕೆ, ಧ್ವಜ, ತೋರಣಗಳಿಂದ ಅಲಂಕರಿಸಿದನು.

೨೮-೨೯. ಮತ್ತು ಆನೆಯ ಮೇಲೆ ಅಂಬಾರಿಯನ್ನು ಹಾಕಿಸಿಕೊಂಡು ಬಂದು ಆ ವಿಜಯನು ರಾಮನನ್ನು ಎದುರುಗೊಂಡನು. ವಾದ್ಯಗಳು ಮೊಳಗುತ್ತಿದ್ದುವು. ಆಗ ರಾಮನು ತಮ್ಮಂದಿರೊಡನೆಯೂ, ಬಾಲಕರೊಡನೆಯೂ, ಸೊಸೆಯರೊಡನೆಯೂ, ಸೀತೆಯೊಡನೆಯೂ, ತಮ್ಮಂದಿರ ಹೆಂಡತಿಯರೊಡನೆಯೂ ಅಯೋಧ್ಯೆಯೊಳಕ್ಕೆ ಹೊರಟನು.

೩೦. ಅವನ ಜೊತೆಯಲ್ಲಿ ಸೇನೆಗಳೂ, ಪಟ್ಟಣದ ಜನಗಳೂ ಹೊರಟರು. ದಾರಿಯಲ್ಲಿ ವೇಶ್ಯೆಯರು ನರ್ತನಮಾಡುತ್ತಿರಲು ಅದೆಲ್ಲವನ್ನೂ ನೋಡುತ್ತ ಹೊರಟನು. ವಂದಿಮಾಗಧರು ಹೊಗಳುತ್ತಿದ್ದರು.

೩೧. ಮದವಣಿಗರಿಬ್ಬರೂ ಅವರವರ ಹೆಂಡತಿಯರೊಡನೆ ಆನೆಯಮೇಲೆ ಕುಳಿತರು. ದಾರಿಯಲ್ಲಿ ಮೆರವಣಿಗೆಯಿಂದ ಹೋಗುತ್ತಿರಲು ಮಹಡಿಯಮೇಲೆ ನಿಂತಿದ್ದ ಆ ಪಟ್ಟಣದ ಮುತ್ತೈದೆಯರು ಹೂಮಳೆಯನ್ನು ಅವರಮೇಲೆ ಸುರಿಸುತ್ತಿದ್ದರು.

ಏವಂ ರಾಮೋ ಗೃಹಂ ಗತ್ವಾ ಬಾಲಾಭ್ಯಾಂ ಸ್ವೀಯಸದ್ಮನಿ ।
ಕಾರಯಿತ್ವಾ ರಮಾಚಾರ್ಚಾಂ ಸ ದದೌ ದಾನಾನ್ಯನೇಕಶಃ ॥ ೩೨ ॥

ತದಾಲಂಕಾರವಸ್ತ್ರಾದ್ಯೈಸ್ಸಂಪೂಜ್ಯ ರಘುನಂದನಃ ।
ಸುಹೃದಸ್ಸಕಲಾನ್ಪೌರಾನಿಷ್ಟಾನ್ ಜಾನಪದಾನ್ನೃಪಾನ್ ॥ ೩೩ ॥

ಆಚಂಡಾಲಾದಿಕಾನ್ ಸರ್ವಾನ್ ಸಂತುಷ್ಟಾನಕರೋನ್ಮುದಾ ।
ತತಸ್ಸಭೂರಿಕೀರ್ತೇಸ್ತಾನ್ ಮಂತ್ರಿಣಸ್ಸೈನ್ಯಸಂಯುತಾನ್ ॥ ೩೪ ॥

ಸಂಪೂಜ್ಯ ಪ್ರೇಷಯಾಮಾಸ ಸ್ವದೇಶಂ ರಘುನಂದನಃ ।
ತತಸ್ಸರ್ವಾನ್ ಜಾನಪದಾನ್ ಸುಹೃದಶ್ಚ ಪ್ಲವಂಗಮಾನ್ ॥ ೩೫ ॥

ವಿಭೀಷಣಾದಿಕಾನಾಜ್ಞಾಂ ಗಂತುಂ ಸ್ವಸ್ವಸ್ಥಲಂ ದದೌ ।
ತತಸ್ಸರ್ವೇ ರಾಘವಂ ತೇ ವಸ್ತ್ರಾಭರಣವಾಹನೈಃ ॥ ೩೬ ॥

---

೩೨. ಈ ರೀತಿಯಾದ ಉತ್ಸವದಿಂದ ರಾಮನು ಸೊಸೆಯರೊಡನೆಯೂ, ಮಕ್ಕಳೊಡನೆಯೂ, ಉಳಿದವರೊಡನೆಯೂ, ಮನೆಗೆ ಹೋಗಿ ಇಳಿದು ಅಲ್ಲಿ ಲಕ್ಷ್ಮೀಪೂಜೆಯನ್ನು ಮಾಡಿಸಿದನು. ಆಗ ಅನೇಕವಾದ ದಾನಗಳನ್ನು ಕೊಟ್ಟನು.

೩೩. ಅನಂತರ ರಾಮನು ಸ್ನೇಹಿತರಿಗೂ, ಪಟ್ಟಣಿಗರಿಗೂ, ತನಗೆ ಬೇಕಾದವರೆಲ್ಲರಿಗೂ, ಬಹುಮಾನಗಳನ್ನು ಕೊಟ್ಟು ಗೌರವಿಸಿದನು. ಅಲ್ಲದೆ ಅಲ್ಲಿಗೆ ಬಂದಿದ್ದವರಿಗೆ ಕೀಳುಮೇಲೆನ್ನದೆ ಎಲ್ಲರಿಗೂ ಬಹುಮಾನಗಳನ್ನು ಕೊಟ್ಟು ಗೌರವಿಸಿ ತೃಪ್ತಿಪಡಿಸಿದನು.

೩೪. ಅನಂತರ ಭೂರಿಕೀರ್ತಿಯ, ಮಂತ್ರಿಗಳಿಗೂ, ಸೈನ್ಯದವರಿಗೂ, ಬಹುಮಾನಗಳನ್ನು ಕೊಟ್ಟು ಗೌರವಿಸಿ ತೃಪ್ತಿಪಡಿಸಿದನು. ಅವರೆಲ್ಲರನ್ನೂ ಅವರವರ ದೇಶಕ್ಕೆ ಕಳುಹಿಸಿದನು.

೩೫-೩೬. ಅನಂತರ ದೇಶದವರನ್ನೂ, ಸ್ನೇಹಿತರನ್ನೂ, ವಾನರರನ್ನೂ, ವಿಭೀಷಣನನ್ನೂ, ಕುರಿತು ಅವರೆಲ್ಲರೂ ಅವರವರ ಸ್ಥಳಗಳಿಗೆ ಹೋಗುವಂತೆ ಅಪ್ಪಣೆಮಾಡಿದನು. ಅವರೂ ಕೂಡ ರಾಮನಿಗೆ ವಸ್ತ್ರಾಭರಣ, ವಾಹನಗಳನ್ನೂ

ಸ್ವಸ್ವಕೋಶೈಶ್ಚ ಸಂಪೂಜ್ಯ ನತ್ವಾ ರಾಮಂ ಯಯುರ್ಮುದಾ ।
ಸ್ವಂ ಸ್ವಂ ದೇಶಂ ನಿಜೈಸ್ಸೈನ್ಯೈಃ ಶ್ರೀರಾಮೇಣಾತಿಮಾನಿತಾಃ ॥ ೩೭ ॥

ಅಥ ರಾಮಃ ಸ್ನುಷಾಭ್ಯಾಂ ಚ ಪುತ್ರಾಭ್ಯಾಂ ಬಂಧುಭಿಃ ಸ್ತ್ರಿಯಾ ।
ಸುಖಂ ಚಕಾರ ರಾಜ್ಯಂ ಸ ಧರ್ಮೇಣಾಪ್ರತಿಮಂ ಚಿರಂ ॥ ೩೮ ॥

ತತಃ ಶ್ರಾವಣಮಾಸಸ್ಯ ದರ್ಶಮಾರಭ್ಯ ಷೋಡಶ ।
ಪ್ರಾಪ್ತಾನ್ಯಬ್ದೇ ಯಾನಿ ಯಾನಿ ಸಮುತ್ಸಾಹದಿನಾನಿ ಹಿ ॥ ೩೯ ॥

ತೇಷು ಸರ್ವೇಷು ತಂ ರಾಮಂ ಸಾವರೋಧಂ ಸಬಾಲಕಂ ।
ಸ್ವಪುರೀಂ ಭೂರಿಕೀರ್ತಿಸ್ಸ ನಿನಾಯ ಪರಮಾದರಾತ್ ॥ ೪೦ ॥

ಅನೇಕವಾದ ಧನವನ್ನೂ ಕೊಟ್ಟು ಗೌರವಿಸಿ ಆ ರಾಮುನಿಗೆ ನಮಸ್ಕರಿಸಿ ಸಂತೋಷದಿಂದ ತಮ್ಮ ತಮ್ಮ ಸೈನ್ಯಗಳೊಡನೆ ಹೊರಟು ಹೋದರು.

೩೮. ಅನಂತರ ರಾಮನು ಸೀತೆಯೊಡನೆಯೂ, ತಮ್ಮಂದಿರೊಡನೆಯೂ, ಅವರ ಹೆಂಡತಿಯರೊಡನೆಯೂ, ಮಕ್ಕಳೊಡನೆಯೂ, ಅವರ ಹೆಂಡತಿಯರೊಡನೆಯೂ ಕೂಡಿಕೊಂಡು ಉತ್ತಮೋತ್ತಮವಾದ ರಾಜ್ಯವನ್ನು ಧರ್ಮದಿಂದ ಬಹುಕಾಲದವರೆಗೆ ಆಳಿದನು.

೩೯. ಅನಂತರ ಶ್ರಾವಣಮಾಸವು ಬರಲು ಆಗಿನಿಂದ ಮೊದಲುಗೊಂಡು ಆ ವರ್ಷದಲ್ಲಿ ಬರುವ ಹದಿನಾರು ಬಗೆಯ ಹಬ್ಬದ ದಿನಗಳನ್ನು ಬಹು ಉತ್ಸಾಹದಿಂದ ನಡೆಯಿಸಿದನು.

೪೦. ಆ ಹಬ್ಬಗಳೆಲ್ಲದರಲ್ಲಿಯೂ, ಭೂರಿಕೀರ್ತಿಯು ರಾಮನನ್ನೂ ಅವನ ಮಕ್ಕಳನ್ನೂ, ಅಂತಃಪುರದವರನ್ನೂ, ತನ್ನ ಪಟ್ಟಣಕ್ಕೆ ವಿಶ್ವಾಸದಿಂದ ಕರೆದುಕೊಂಡು ಹೋಗುತ್ತಿದ್ದನು.

ಪೂಜಯಾಮಾಸ ವಿಧಿವದ್ವಸ್ತ್ರಾಲಂಕಾರವಾಹನೈಃ ।
ಕಿಯದ್ದಿನಾನಿ ಸಂಸ್ಥಾಪ್ಯ ದದಾವಾಜ್ಞಾಂ ಪುನಃ ಪುನಃ ॥ ೪೧ ॥

ಸಂವತ್ಸರಸಮುತ್ಸಾಹದಿನಾನಿ ಷೋಡಶಾಧುನಾ ।
ವಿಷ್ಣುದಾಸ ಮಯಾ ತೇಗ್ರೇ ಕಥ್ಯಂತೇ ತಾನಿ ವೈ ಶ್ರುಣು ॥ ೪೨ ॥

ಶ್ರಾವಣಸ್ಯಾಥ ಮಾಸಸ್ಯ ಕುಹೂಃ ಶ್ರೇಷ್ಠಾ ಪ್ರಕೀರ್ತಿತಾ ।
ಭಾದ್ರಶುಕ್ಲಚತುರ್ಥೀ ತು ವಿಜಯಾ ದಶಮೀ ತಥಾ ॥ ೪೩ ॥

ದೀಪಾವಲ್ಯಾಶ್ಚ ಚತ್ವಾರಿ ದಿನಾನ್ಯತಿಮಹಾಂತಿ ಚ ।
ಮಾರ್ಗಶೀರ್ಷೇ ಪಂಚಮೀ ಚ ಸೀತಾ ಷಷ್ಠೀ ತಥಾ ಪುನಃ ॥ ೪೪ ॥

---

೪೧. ಅಲ್ಲಿ ಅವರಿಗೆ ಆ ಕಾಲದಲೆಲ್ಲಾ ವಸ್ತ್ರಾಲಂಕಾರ ವಾಹನಗಳನ್ನು ಕೊಟ್ಟು ಪೂಜಿಸಿ ಕೆಲವು ದಿನಗಳವರೆಗೆ ಇಟ್ಟುಕೊಂಡಿದ್ದು ಮತ್ತೆ ಕಳುಹಿಸುತ್ತಿದ್ದನು.

೪೨. ಎಲೈ ವಿಷ್ಣುದಾಸನೇ! ಒಂದು ವರ್ಷದಲ್ಲಿ ಬರತಕ್ಕ ಹಬ್ಬದ ದಿನಗಳನ್ನು ಹೇಳುತ್ತೇನೆ. ಆ ಹಬ್ಬಗಳು ಹದಿನಾರು ಬರುತ್ತವೆ. ಅವುಗಳ ಹೆಸರನ್ನು ಹೇಳುತ್ತೇನೆ ಕೇಳು.

೪೩. ಶ್ರಾವಣಮಾಸದ ಅಮಾವಾಸ್ಯೆಯು ಬಹು ಶ್ರೇಷ್ಠವಾದುದೆಂದು ಹೆಸರನ್ನು ಪಡೆದಿದೆ. ಭಾದ್ರಪದ ಶುಕ್ಲಚತುರ್ಥಿ ವಿಜಯದಶಮಿ ಇವೂ ಶ್ರೇಷ್ಠವಾದುವು.

೪೪. ದೀಪಾವಳಿಯ ಹಬ್ಬದಲ್ಲಿ ನಾಲ್ಕುದಿನಗಳು ಬಹು ಉತ್ಕೃಷ್ಟವಾದುವು. ಮಾರ್ಗಶೀರ್ಷಮಾಸದಲ್ಲಿ ಪಂಚಮಿಯೂ, ಮತ್ತು ಸೀತಾಷಷ್ಠಿಯೂ ಮುಖ್ಯವಾದುವು.

ಸಂಕ್ರಾಂತಿರ್ಮಕರಾಖ್ಯಾ ತು ತಥಾ ಚ ರಥಸಪ್ತಮೀ ।
ಹುತಾಶನೀ ಚೈತ್ರಶುಕ್ಲಪ್ರತಿಪಚ್ಚಾಪಿ ಪುಣ್ಯದಾ ॥ ೪೫ ॥

ಅಕ್ಷಯ್ಯಾಖ್ಯಾ ತೃತೀಯಾ ಚ ತಥಾ ವೈ ಜ್ಯೇಷ್ಠಪೂರ್ಣಿಮಾ ।
ಪಂಚಮೀ ಶ್ರಾವಣೇ ಶುಕ್ಲಾ ಷೋಡಶೈವಂ ಸ್ಮೃತಾನಿ ಹಿ ॥ ೪೬ ॥

ಸಂವತ್ಸರಸಮುತ್ಸಾಹದಿನಾನ್ಯತಿಮಹಾಂತಿ ಚ
ಏತೇಷು ಭೂರಿಕೀರ್ತಿಸ್ಸ ರಾಮಂ ನೀತ್ವಾ ಪ್ರಪೂಜಯತ್ ॥ ೪೭ ॥

ಏವಂ ಕುಶಸ್ಯ ಚ ತಥಾ ಲವಸ್ಯಾಪಿ ಸವಿಸ್ತರಾತ್ ।
ವಿವಾಹೌ ವರ್ಣಿತೌ ಶಿಷ್ಯ ಯಥಾ ಪೂರ್ವಂ ಶ್ರುತೌ ಮಯಾ ॥ ೪೮ ॥

---

೪೫. ಮಕರಸಂಕ್ರಾಂತಿ, ರಥಸಪ್ತಮಿ, ಹುತಾಶನೀ ಎಂಬ ಫಾಲ್ಗುಣ ಶುದ್ಧಪೂರ್ಣಿಮೆ (ಕಾಮನ ಹುಣಿಮೆ) ಚೈತ್ರಶುದ್ಧಪಾಡ್ಯ ಇವುಗಳೂ ಮುಖ್ಯವಾದ ಹಬ್ಬಗಳು.

೪೬. ಅಕ್ಷತದಿಗೆ, ಜ್ಯೇಷ್ಠಮಾಸದ ಹುಣ್ಣಿಮೆ, ಶ್ರಾವಣಶುಕ್ಲ ಪಂಚಮಿ (ಗರುಡಪಂಚಮಿ) ಬಹು ಉತ್ತಮವಾದುವು. ಈ ರೀತಿಯಾಗಿ ಹದಿನಾರು ಹಬ್ಬಗಳು ವರ್ಷದಲ್ಲಿ ಬರುವ ಮುಖ್ಯ ಹಬ್ಬಗಳಾಗಿರುತ್ತವೆ.

೪೭. ಇವು ಸಂವತ್ಸರದಲ್ಲಿ ಬರುವ ಹಬ್ಬಗಳಲ್ಲಿ ಬಹು ಮಹತ್ವದಿಂದ ಕೂಡಿದ ಹಬ್ಬಗಳು. ಈ ಹಬ್ಬಗಳೆಲ್ಲದರಲ್ಲಿಯೂ ಭೂರಿಕೀರ್ತಿಯು ರಾಮನನ್ನೂ, ಬಾಲಕರನ್ನೂ ಕರೆದುಕೊಂಡು ಹೋಗಿ ಗೌರವಿಸುತ್ತಿದ್ದನು.

೪೮. ಎಲೈ ಶಿಷ್ಯನೇ! ಈ ರೀತಿಯಾಗಿ ಕುಶಲವರ ವಿವಾಹವನ್ನು ವಿಸ್ತಾರವಾಗಿ ವರ್ಣಿಸಿದೆನು. ನಾನು ಹಿಂದೆ ಹೇಗೆ ಕೇಳಿದ್ದೆನೋ ಅದೇ ರೀತಿಯಾಗಿ ಹೇಳಿದ್ದೇನೆ.

ಯದಾ ಶ್ರೀರಾಮಚಂದ್ರಸ್ಯ ವೈಕುಂಠಾರೋಹಣಂ ಶುಭಂ ।
ಭವಿಷ್ಯತಿ ತದಾಯೋಧ್ಯಾಪುರ್ಯಾಂ ವೈ ಸರಯೂಜಲೇ ॥ ೪೯ ॥

ಕುಶಃ ಸ್ತ್ರಿಯಾ ಚಂಪಿಕಯಾ ಜಲಕ್ರೀಡಾಂ ಕರಿಷ್ಯತಿ ।
ತಸ್ಯ ದಕ್ಷಿಣಹಸ್ತಸ್ಯ ಕಂಕಣಂ ರುಕ್ಮನಿರ್ಮಿತಂ ॥ ೫೦ ॥

ಸರಯೂಜಲಮಧ್ಯೇ ತು ಪತಿಷ್ಯತಿ ಮಹೋಜ್ಜ್ವಲಂ ।
ತತ್ರ ತೋಯೇ ಪನ್ನಗಸ್ಯ ಕುಮುದಸ್ಯ ಕುಮುದ್ವತೀ ॥ ೫೧ ॥

ಸ್ವಸಾ ದೃಷ್ಟ್ವಾ ಕಂಕಣಂ ತದ್ಗೃಹೀತ್ವಾ ಸದ್ಮ ಯಾಸ್ಯತಿ ।
ಕುಶೋಽಪಿ ಕಂಕಣಾರ್ಥಂ ಹಿ ಬಾಣಂ ಸಂಧಾರಯಿಷ್ಯತಿ ॥ ೫೨ ॥

ಸರಯೂಶೋಷಣಾರ್ಥಂ ಹಿ ಸನ್ನದ್ಧಶ್ಚ ಭವಿಷ್ಯತಿ ।
ತತಸ್ಸಾ ಕುಮುದಂ ಗತ್ವಾ ಸರಯೂಃ ಪ್ರಾರ್ಥಯಿಷ್ಯತಿ ॥ ೫೩ ॥

೪೯-೫೦. ಅನಂತರ ಶ್ರೀರಾಮನು ವೈಕುಂಠಾರೋಹಣವನ್ನು ಮಾಡುವ ಕಾಲದಲ್ಲಿ ಕುಶನು ಅಯೋಧ್ಯೆಯ ಸರಯೂ ನದಿಯ ನೀರಿನಲ್ಲಿ ಹೆಂಡತಿಯಾದ ಚಂಪಿಕೆಯೊಡನೆ ಜಲಕ್ರೀಡೆಯಾಡುವನು. ಅವನ ಬಲಗೈನ ಚಿನ್ನದಬಳೆಯು ಆ ನೀರಿನಲ್ಲಿ ಬಿದ್ದು ಹೋಗುವುದು.

೫೧-೫೨. ಆ ಕಂಕಣವನ್ನು (ಕೈಬಳೆಯನ್ನು) ಕುಮುದನೆಂಬ ಸರ್ಪನ ತಂಗಿಯಾದ ಕುಮುದ್ವತಿಯು ತೆಗೆದುಕೊಂಡು ತನ್ನ ಪಾತಾಳಲೋಕಕ್ಕೆ ಹೊರಟು ಹೋಗುವಳು. ಕುಶನಿಗೆ ಈ ಕಂಕಣವು ಹೋದುದು ತಿಳಿದು ಅದಕ್ಕೋಸ್ಕರವಾಗಿ ಬಾಣವನ್ನು ಹೂಡುವನು.

೫೩. ಬಾಣವನ್ನು ಕುಶನು ಹೂಡಿ ಸರಯೂನದಿಯ ನೀರನ್ನು ಶೋಷಿಸಲು ಉದ್ಯುಕ್ತನಾಗುವನು. ಆಗ ಆ ಸರಯೂ ನದಿಯು ಕುಮುದನ ಬಳಿಗೆ ಹೋಗಿ ಕೇಳಿಕೊಳ್ಳುವಳು.

ಸೋಽಪಿ ದೃಷ್ಟ್ವಾ ಕುಶಂ ಕ್ರುದ್ಧಂ ಸ್ವಸಾಮಾದಾಯ ಸಾದರಂ ।
ಕುಶಮಾಗತ್ಯ ತಂ ನತ್ವಾ ಸ್ವಸಾಂ ತಸ್ಮೈ ಪ್ರದಾಸ್ಯತಿ ॥ ೫೪ ॥

ರತ್ನಾನಿ ಕಂಕಣಂ ದತ್ವಾ ತೇನ ಸಖ್ಯಂ ಕರಿಷ್ಯತಿ ।
ಏವಂ ಕುಮುದ್ವತೀ ಭಾರ್ಯಾಗ್ರೇ ತಸ್ಯಾನ್ಯಾ ಭವಿಷ್ಯತಿ ॥ ೫೫ ॥

ತಸ್ಯಾಂ ಕುಶಾತ್ಸುತನಯೋಽತಿಥಿರ್ನಾಮ್ನಾ ಭವಿಷ್ಯತಿ ।
ಚಂಪಿಕಾಯಾ ದುಹಿತರಸ್ಸಂಭವಿಷ್ಯಂತಿ ನೋ ಸುತಾಃ ॥ ೫೬ ॥

ಅತಿಥೇಸ್ಸೂರ್ಯವಂಶೋಽಗ್ರೇ ಚಿರಂ ವಿಸ್ತಾರಮೇಷ್ಯತಿ ।
ಏವಂ ಕುಶಸ್ಯ ದ್ವೇ ಪತ್ನ್ಯೌ ವರ್ಣಿತೌ ಶಿಷ್ಯ ವೈ ಮಯಾ ॥ ೫೭ ॥

---

೫೪. ಆಗ ಆ ಕುಮುದನು ಕುಶನು ಕೋಪಗೊಂಡಿರುವುದನ್ನು ತಿಳಿದು ತನ್ನ ತಂಗಿಯನ್ನು ಕರೆದುಕೊಂಡು ಬಂದು ಕುಶನಿಗೆ ನಮಸ್ಕರಿಸಿ ಆ ತಂಗಿಯನ್ನೇ ಅವನಿಗೆ ಕೊಟ್ಟು ಮದುವೆಮಾಡುವನು.

೫೫. ಅಲ್ಲದೆ ಇನ್ನೂ ಅನೇಕ ಬಗೆಯಾದ ರತ್ನಗಳನ್ನೂ ಆ ಕುಮುದ್ವತಿಯ ಸಂಗಡ ಆ ಕುಶನಿಗೆ ಕೊಟ್ಟು ಅವನೊಡನೆ ಸ್ನೇಹವನ್ನು ಮಾಡಿಕೊಳ್ಳುವನು. ಈ ರೀತಿಯಾಗಿ ಆ ಕುಶನಿಗೆ ಕುಮುದ್ವತಿ ಎಂಬ ಹೆಂಡತಿಯು ಮತ್ತೊಬ್ಬಳು ಮುಂದಾಗುವಳು.

೫೬. ಆ ಕುಮುದ್ವತಿಯಲ್ಲಿ ಕುಶನಿಗೆ ಅತಿಥಿಯೆಂಬ ಮಗನು ಹುಟ್ಟುವನು. ಚಂಪಿಕೆಯಲ್ಲಿ ಕುಶನಿಗೆ ಗಂಡುಮಕ್ಕಳಾಗಲಿ, ಹೆಣ್ಣುಮಕ್ಕಳಾಗಲಿ, ಜನಿಸುವುದಿಲ್ಲ.

೫೭. ಈ ಅತಿಥಿಯೆಂಬ ಮಗನಿಂದಲೇ ಮುಂದೆ ಸೂರ್ಯವಂಶವು ವಿಸ್ತಾರವಾಗಿ ಬೆಳೆಯುತ್ತದೆ. ಈ ರೀತಿಯಾಗಿ ಕುಶನಿಗೆ ಇಬ್ಬರು ಹೆಂಡಿರಾಗುವುದನ್ನು ನಿನಗೆ ಹೇಳಿದ್ದೇನೆ.

ಅಥ ಸ್ವೀಯಗೃಹೇ ಪತ್ನ್ಯಾ ಕರೋತ್ಕ್ರೀಡಾಂ ಕುಶಸ್ಸುಖಂ ।
ತಥಾ ಸ್ವೀಯಗೃಹೇ ಪತ್ನ್ಯಾ ಕರೋತ್ಕ್ರೀಡಾಂ ಲವೋಪಿ ಚ ॥ ೫೮ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ
ವಾಲ್ಮೀಕೀಯೇ ವಿವಾಹಕಾಂಡೇ ಕುಶಲವಯೋರ್ವಿವಾಹ
ವರ್ಣನಂ ನಾಮ ಚತುರ್ಥಸ್ಸರ್ಗಸ್ಸಮಾಪ್ತಃ

---

೫೮. ಈ ರೀತಿಯಾಗಿ ಲವನೂ, ಕುಶನೂ, ಇಬ್ಬರೂ ತಮ್ಮ ತಮ್ಮ ಮನೆಯಲ್ಲಿ ಅವರವರ ಹೆಂಡತಿಯರೊಡನೆ ಸುಖವಾಗಿ ಕ್ರೀಡಿಸುತ್ತಿರುವರು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ ಕುಶಲವರ ವಿವಾಹ
ವರ್ಣನವೆಂಬ ನಾಲ್ಕನೆಯ ಸರ್ಗವು ಸಮಾಪ್ತವು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ
॥ ನಾಲ್ಕನೆಯ ಸರ್ಗದ ಸಾರಾಂಶವು ॥

ವಧೂವವರಿಗೆ ಮಧ್ಯದಲ್ಲಿ ತೆರೆಯನ್ನು ಹಿಡಿದು ಪುರೋಹಿತರು ಮಂಗಳ ಘೋಷವನ್ನು ಮಾಡಿದರು. ಅನಂತರ ಶಾಸ್ತ್ರೋಕ್ತವಾಗಿ ಪಾಣಿಗ್ರಹಣವನ್ನು ಮಾಡಿಸಿ ಲಾಜಾಹೋಮವನ್ನು ಮಾಡಿಸಿದರು. ಅನಂತರ ಭೋಜನಗೃಹಕ್ಕೆ ಹೋಗಿ ಪಾರ್ವತೀಪರಮೇಶ್ವರರನ್ನು ಪೂಜಿಸಿ ಆಮ್ರಸೇಚನವೆಂಬ ಕರ್ಮವನ್ನು ಮಾಡಿದರು. ಅನಂತರ ವಧೂವರರು ಒಟ್ಟಿಗೆ ಕುಳಿತು ಭೋಜನವನ್ನು ಮಾಡಿದರು. ಅನಂತರ ಉರಟಣೆ ಮುಂತಾದುವುಗಳನ್ನು ಮಾಡಿಕೊಂಡು ಸಂತೋಷದಿಂದಿದ್ದರು.

ಭೂರಿಕೀರ್ತಿಯು ಆ ಮದವಣಿಗರಿಗೆ ಅನೇಕವಾದ ಬಳುವಳಿಗಳನ್ನು ಕೊಟ್ಟನು. ಮತ್ತು ಉಳಿದವರನ್ನು ಯಥೋಚಿತವಾಗಿ ಗೌರವಿಸಿದನು. ಶ್ರೀರಾಮನು ಆ ವಟಪುರಿಯಲ್ಲಿಯೇ ಒಂದು ತಿಂಗಳಕಾಲವಿದ್ದು ಊರಿಗೆ ಉತ್ಸವದಿಂದ ಹೋದನು. ಊರಿನಲ್ಲಿ ತನ್ನಕಡೆಯುವರಿಗೂ ಬೀಗರಿಗೂ ಅನೇಕವಾಗಿ ಬಹುಮಾನಗಳನ್ನು ಕೊಟ್ಟನು. ಆ ವರ್ಷದಲ್ಲಿ ಬರತಕ್ಕ ಹಬ್ಬಗಳಲ್ಲಿ ಭೂರಿಕೀರ್ತಿಯು ಶ್ರೀರಾಮಾದಿಗಳನ್ನು ಬರಮಾಡಿಕೊಂಡು ಎಲ್ಲರನ್ನೂ ಗೌರವಿಸುತ್ತಿದ್ದನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ವಿವಾಹಕಾಂಡೇ

॥ ಪಂಚಮಸ್ಸರ್ಗಃ ॥

॥ ಶ್ರೀ ರಾಮದಾಸ ಉವಾಚ ॥

ಏಕದಾ ರಘುವೀರಸ್ಸ ಸೀತಯಾ ಬಾಲಬಂಧುಭಿಃ ।
ಪೌರೈರ್ಮಂತ್ರಿಜನೈರಿಷ್ಟೈಃ ಪುಷ್ಪಕಸ್ಥೋ ಯಯೌ ವನಂ ॥ ೧ ॥

ಪಶ್ಯನ್ನಾನಾಕೌತುಕಾನಿ ರಂಜಯನ್ ಜಾನಕೀಂ ಮುದಾ ।
ಯಯೌ ಸ ದಂಡಕಾರಣ್ಯಮಗಸ್ತ್ಯೇರಾಶ್ರಮಾಂತಿಕಂ ॥ ೨ ॥

ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ ಐದನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು–ಒಂದುಸಾರಿ ಶ್ರೀರಾಮನು ಮಕ್ಕಳೊಡನೆಯೂ, ಸೀತೆಯೊಡನೆಯೂ, ತಮ್ಮಂದಿರೊಡನೆಯೂ, ಪಟ್ಟಣಿಗರು, ಮಂತ್ರಿಗಳು ಇಷ್ಟಜನಗಳು ಇವರೊಡನೆಯೂ ಪುಷ್ಪಕದಲ್ಲಿ ಕುಳಿತುಕೊಂಡು ದಂಡಕಾರಣ್ಯಕ್ಕೆ ಹೋದನು.

೨. ಅವನು ಆ ಕಾಡಿನಲ್ಲಿ ಅನೇಕವಾದ ರಮ್ಯವಾದ ಪದಾರ್ಥಗಳನ್ನು ನೋಡುತ್ತ ಸೀತೆಗೂ ತೋರಿಸುತ್ತ ತನ್ನವರೊಡನೆ ಸಂತೋಷಪಡುತ್ತ ಆ ದಂಡಕಾರಣ್ಯದಲ್ಲಿರುವ ಆಗಸ್ತ್ಯನ ಆಶ್ರಮದ ಬಳಿಗೆ ಹೋದನು.

ರಾಮಮಾಗತಮಾಕರ್ಣ್ಯ ಕುಂಭಜನ್ಮಾ ಮುನೀಶ್ವರಃ ।
ಪ್ರತ್ಯುದ್ಗಮ್ಯ ರಘುಶ್ರೇಷ್ಠಂ ನಿನಾಯ ಸ್ವಾಶ್ರಮಂ ಪ್ರತಿ ॥ ೩ ॥

ತತಸ್ಸ ಮುನಿವರ್ಯಸ್ತು ಸ್ನಾತ್ವಾ ರಹಸಿ ಸಂಸ್ಥಿತಃ ।
ಅನ್ನಪೂರ್ಣಾಂ ಮಹಾಲಕ್ಷ್ಮೀಂ ಚಿಂತಯಾಮಾಸ ಚೇತಸಿ ॥ ೪ ॥

ತದಾ ತತ್ತಪಸಾ ತುಷ್ಟಾವಿರ್ಬಭೂವ ಸುರೇಶ್ವರೀ ।
ದದೌ ತಸ್ಮೈ ಪಾಯಸೇನ ಪೂರಿತಂ ಪಾತ್ರಮುತ್ತಮಂ ॥ ೫ ॥

ಅನ್ನಪೂರ್ಣಾ ಮುನಿಂ ಪ್ರಾಹ ಸ್ಥಾಲ್ಯಾಸ್ತು ವಿವಿಧಾನಿ ಹಿ ।
ಪಕ್ವಾನ್ನಾನಿ ಯಥೇಷ್ಟಾನಿ ನಿಷ್ಕಾಸ್ಯ ತವ ಭಾಮಿನೀ ॥ ೬ ॥

ಸರ್ವೇಷಾಮಗ್ರತಶ್ಶೀಘ್ರಂ ಕರೋತು ಪರಿವೇಷಣಂ ।
ಇತ್ಯುಕ್ತ್ವಾ ಸಾನ್ನಪೂರ್ಣಾ ತಂ ಮುನಿಮಂತರ್ದಧೇ ತದಾ ॥ ೭ ॥

---

೩. ರಾಮನು ತನ್ನ ಆಶ್ರಮದ ಬಳಿಗೆ ಬಂದಿರುವೆನೆಂಬುದನ್ನು ಅಗಸ್ತ್ಯನು ತಿಳಿದು ಬಂದು ಅವನನ್ನು ಎದುರುಗೊಂಡು ತನ್ನ ಆಶ್ರಮಕ್ಕೆ ಕರೆದುಕೊಂಡು ಹೋದನು.

೪–೫. ಅನಂತರ ಆ ಅಸಗಸ್ತ್ಯನು ಸ್ನಾನವನ್ನು ಮಾಡಿ ಏಕಾಂತದಲ್ಲಿ ಕುಳಿತು ಅನ್ನಪೂರ್ಣೇಶ್ವರಿಯನ್ನು ಧ್ಯಾನಿಸಿದನು. ಆಗ ಆ ಋಷಿಯ ತಪಸ್ಸಿಗೆ ಸಂತೋಷಗೊಂಡು ಅನ್ನಪೂರ್ಣೇಶ್ವರಿಯು ಎದುರಿಗೆ ಬಂದು ಕಾಣಿಸಿಕೊಂಡಳು. ಮತ್ತು ಪಾಯಸವನ್ನು ತುಂಬಿರುವ ಒಂದು ಉತ್ತಮವಾದ ಪಾತ್ರೆಯನ್ನು ಆ ಋಷಿಗೆ ಕೊಟ್ಟಳು.

೬–೭. ಆಗ ಅನ್ನಪೂರ್ಣೆಯು ಮುನಿಯನ್ನು ಕುರಿತು ಎಲೈ ಋಷಿಯೇ ! ಈ ಪಾತ್ರೆಯಲ್ಲಿ ವಿಧ ವಿಧವಾದ ಪಕ್ವಾನ್ನಗಳಿವೆ. ಇವನ್ನು ತೆಗೆದುಕೊಂಡು ನಿನ್ನ ಹೆಂಡತಿಯು ಎಲ್ಲರಿಗೂ ಬಡಿಸಲಿ. ಹೀಗೆಂದು ಹೇಳಿ ಆ ಅನ್ನಪೂರ್ಣೆಯು ಅಂತರ್ಧಾನಳಾದಳು.

ಲೋಪಾಮುದ್ರಾ ಮುನೇಃ ಪತ್ನೀ ಸ್ಥಾಲ್ಯಾ ನಿಷ್ಕಾಸ್ಯ ವೇಗತಃ ।
ದಿವ್ಯಾನ್ನಾನಿ ವಿಚಿತ್ರಾಣಿ ಸರ್ವೇಷಾಂ ಪುರತಸ್ತದಾ ॥ ೮ ॥

ರಾಮಾನ್ವಿತಾನಾಂ ಮುನೀನಾಂ ಚಕಾರ ಪರಿವೇಷಣಂ ।
ಅಥ ತುಷ್ಟಂ ರಘುಶ್ರೇಷ್ಠಂ ಕಂಕಣೇ ರತ್ನನಿರ್ಮಿತೇ ॥ ೯ ॥

ದದೌ ಮುದಾ ಕುಂಭಜನ್ಮಾ ಸೀತಾಯೈ ದಿವ್ಯಕುಂಡಲೇ ।
ಏವಂ ಸಂಪೂಜಿತಸ್ತೇನ ಮುನಿನಾ ರಘುನಂದನಃ ॥ ೧೦ ॥

ಸಹಿತೋಽಗಸ್ತಿನಾ ಸ್ಥಿತ್ವಾ ಪುಷ್ಪಕೇ ಪೂರ್ವವತ್ಪುನಃ ।
ಪಶ್ಯನ್ಸ ದಂಡಕಾರಣ್ಯೇ ಕೌತುಕಾನಿ ಸಮಂತತಃ ॥ ೧೧ ॥

ವಿಚಚಾರ ರಘುಶ್ರೇಷ್ಠೋ ದರ್ಶಯಾಮಾಸ ಮೈಥಿಲೀಂ ।
ನಾನಾವೃಕ್ಷಾನ್ ಪರ್ವತಾಂಶ್ಚ ನದೀಃ ಪಕ್ಷಿಕುಲಾನ್ ಮೃಗಾನ್ ॥ ೧೨ ॥

೮-೯. ಅನಂತರ ಮುನಿಪತ್ನಿಯಾದ ಲೋಪಾಮುದ್ರೆಯು ಆ ಪಾತ್ರೆಯ ಮುಚ್ಚಳವನ್ನು ತೆಗೆದು ಅದರಲ್ಲಿರುವ ದಿವ್ಯಾನ್ನವನ್ನು ಅವರ ಎದುರಿಗೆ ತೆಗೆದು ರಾಮನಿಗೂ ಅವನ ಜೊತೆಯಲ್ಲಿ ಕುಳಿತಿರುವವರಿಗೂ ಮತ್ತು ಮುನಿಗಳಿಗೂ ಬಡಿಸಿದಳು.

೧೦-೧೧. ರಾಮನು ಭೋಜನಮಾಡಿ ತೃಪ್ತನಾಗಲು ಮುನಿಯು ಅವನಿಗೆ ಚಿನ್ನದ ಎರಡು ಕಂಕಣಗಳನ್ನೂ ಸೀತೆಗೆ ದಿವ್ಯವಾದ ಓಲೆಗಳನ್ನೂ ಕೊಟ್ಟನು. ಅನಂತರ ರಾಮನು ಅಗಸ್ತ್ಯನನ್ನು ಪುಷ್ಪಕದಲ್ಲಿ ತಮ್ಮ ಜೊತೆಯಲ್ಲಿ ಕೂರಿಸಿಕೊಂಡು ಆ ದಂಡಕಾರಣ್ಯದ ರಮ್ಯತೆಯನ್ನು ಎಲ್ಲಕಡೆಯಲ್ಲಿಯೂ ನೋಡುತ್ತ ಹೊರಟನು.

೧೨. ಆ ರಾಮನು ಅಲ್ಲಿನ ಆಶ್ಚರ್ಯಗಳನ್ನೂ ಬಗೆ ಬಗೆಯ ಮರಗಳನ್ನೂ ಪರ್ವತಗಳನ್ನೂ ನದಿಗಳನ್ನೂ ಪಕ್ಷಿಗಳನ್ನೂ ಮೃಗಗಳನ್ನೂ ಜಾನಕಿಗೆ ತೋರಿಸುತ್ತ ಹೊರಟನು.

ಪಂಚಾಪ್ಸರಸರೋ ನಾಮ ದದರ್ಶಾಸೌ ಭ್ರಮರ್ಮ ಸರಃ ।
ತತ್ತಟೇ ರಾಘವೋ ರಾತ್ರೌ ನಿವಾಸಮಕರೋನ್ಮುದಾ ॥ ೧೩ ॥

ಏತಸ್ಮಿನ್ನಂತರೇ ರಾತ್ರೌ ನಿತ್ಯಮಪ್ಸರಸಾಂ ಶುಭಂ ।
ಶುಶ್ರಾವ ಮಧುರಂ ಗೀತಂ ಸೀತಯಾ ಮಂಚಕೇ ಪ್ರಭುಃ ॥ ೧೪ ॥

ತೇಽಪಿ ಸರ್ವೇ ಶುಶ್ರುವುಸ್ತನ್ನೃತ್ಯಂ ಗೀತಂ ಚ ಸುಸ್ವರಂ ।
ಅದೃಷ್ಟ್ವಾಪ್ಸರಸಸ್ತತ್ರ ತದಾ ಸ ರಘುನಂದನಃ ॥ ೧೫ ॥

ಪಪ್ರಚ್ಛ ಕುಂಭಜನ್ಮಾನಂ ಗೀತಂ ನೃತ್ತಂ ಕುತಸ್ತ್ವಿದಂ ।
ಶ್ರೂಯತೇ ಮುನಿಶಾರ್ದೂಲ ವದಸ್ವ ತ್ವಂ ಸವಿಸ್ತರಂ ॥ ೧೬ ॥

---

೧೩. ಹೀಗೆ ಆಶ್ಚರ್ಯವಾದ ಪದಾರ್ಥಗಳನ್ನು ನೋಡುತ್ತ ಸೀತೆಗೂ ತೋರಿಸುತ್ತ ಮುಂದೆ ಕಾಣುತ್ತಿದ್ದ ಪಂಚಾಪ್ಸರ ಸರಸ್ಸೆಂಬ ಸರೋವರವನ್ನು ನೋಡಿದನು. ಅಲ್ಲಿ ಇಳಿದು ಆ ಸರೋವರದ ತೀರದಲ್ಲಿಯೇ ಆ ರಾತ್ರಿಯಲ್ಲಿ ಸಂತೋಷದಿಂದ ನಿಂತನು.

೧೪. ಹೀಗೆ ರಾತ್ರಿಯಲ್ಲಿ ವಾಸಮಾಡುತ್ತಿರಲು ಆ ಸರಸ್ಸಿನ ಬಳಿಯಲ್ಲಿ ಆ ರಾತ್ರಿಯಲ್ಲಿ ಅಪ್ಸರಸ್ತ್ರೀಯರು ನರ್ತನ ಮಾಡುತ್ತ ಹಾಡುತ್ತಿರುವುದನ್ನು ಆ ರಾಮನು ಕೇಳಿದನು. ಮಂಚದಮೇಲೆ ಸೀತೆಯೊಡನೆ ಮಲಗಿಕೊಂಡು ಆ ಅಪ್ಸರಸ್ತ್ರೀಯರ ಗೀತವನ್ನು ಸೀತೆಯೊಡನೆ ಕೇಳುತ್ತ ಸುಖದಿಂದಿದ್ದನು.

೧೫. ಈ ಸೀತಾರಾಮರಲ್ಲದೆ ಅಲ್ಲಿ ಬಂದಿರುವವರೆಲ್ಲರೂ ಆ ನೃತ್ಯ ಗೀತಗಳನ್ನು ಕೇಳಿದರು. ಅಪ್ಸರಸ್ತ್ರೀಯರ ನರ್ತನದ ಧ್ವನಿಯೂ ಗೀತದ ಧ್ವನಿಯೂ ಕೇಳಿಬರುತ್ತಿದ್ದರೂ ಅವರನ್ನು ಮಾತ್ರ ಒಬ್ಬರೂ ಕಾಣಲಿಲ್ಲ.

೧೬. ಆಗ ರಾಮನು ಅಗಸ್ತ್ಯನನ್ನು ಕುರಿತು ಈ ಗೀತವೂ ನೃತ್ಯವೂ ಯಾವುದು? ಮತ್ತು ಎಲ್ಲಿ ನಡೆಯುತ್ತಿದೆ? ಕಣ್ಣಿಗೆ ಮಾತ್ರ ಯಾರೂ ಕಾಣು ತ್ತಿಲ್ಲವಲ್ಲ! ಕಿವಿಗೆ ಮಾತ್ರ ಕೇಳುತ್ತಿರುವುದಲ್ಲ! ನೀನು ಇದರ ವಿಷಯವನ್ನು ವಿಸ್ತಾರವಾಗಿ ತಿಳಿಸು ಎಂದು ಕೇಳಿದನು.

ಇತಿ ರಾಮವಚಃ ಶ್ರುತ್ವಾ ತಮಗಸ್ತಿರ್ವಚೋಽಬ್ರವೀತ್ ।
ರಾಮ ರಾಜೀವಪತ್ರಾಕ್ಷ ಕಿಂ ತ್ವಂ ವೇತ್ಸಿ ನ ವೈ ತ್ವಿದಂ ॥ ೧೭ ॥

ಸರ್ವಾನೇತಾನ್ಮನ್ಮುಖೇನ ವೃತ್ತಂ ಶ್ರಾವಯಿತುಂ ಮುದಾ ।
ಚೇನ್ಮಾಂ ಪೃಚ್ಛಸಿ ತರ್ಹ್ಯದ್ಯ ತವಾಗ್ರೇಽಪಿ ವದಾಮ್ಯಹಂ ॥ ೧೮ ॥

ಪುರಾ ಗಂಧರ್ವರಾಜಸ್ಯ ಪುತ್ರ್ಯಃ ಪಂಚ ಮನೋರಮಾಃ ।
ಅರಜಸ್ಕಾ ಮುದಾ ಕ್ರೀಡಾಂ ಚಕ್ರುರತ್ರ ಸರೋವರೇ ॥ ೧೯ ॥

ಏತಸ್ಮಿನ್ನಂತರೇ ರಾಮ ನಾಗಕನ್ಯಾಃ ಸರೋವರಾತ್ ।
ಕ್ರೀಡಾರ್ಥಂ ನಿರ್ಯಯುಸ್ಸಪ್ತ ಬಹಿರಪ್ರಾಪ್ತಯೌವನಾಃ ॥ ೨೦ ॥

---

೧೭. ರಾಮನು ಹೀಗೆ ಕೇಳಿದುದನ್ನು ಕೇಳಿ ಅಗಸ್ತ್ಯನು ಇಂತೆಂದನು. ಎಲೈ ರಾಜೀವಪತ್ರಾಕ್ಷನಾದ ರಾಮನೇ! ಏನು? ನಿನಗಿದು ತಿಳಿಯದೇ?

೧೮. ಆದರೆ ನನ್ನ ಬಾಯಿಂದ ಹೇಳಿಸಿ ಇವರೆಲ್ಲರೂ ಕೇಳುವಂತೆ ಮಾಡಬೇಕೆಂದು ನಿನಗೆ ಇಷ್ಟವಿರುವಂತೆ ಕಾಣುತ್ತದೆ. ಹಾಗಾದರೆ ನಿನ್ನೆದುರಿಗೆ ಹೇಳುತ್ತೇನೆ. ಕೇಳು.

೧೯. ಹಿಂದೆ ಒಬ್ಬ ಗಂಧರ್ವರಾಜನಿಗೆ ಸುಂದರಿಯರಾದ ಐದು ಮಂದಿ ಹೆಣ್ಣುಮಕ್ಕಳಿದ್ದರು. ಅವರು ಇನ್ನೂ ರಜಸ್ವಲೆಯರಾಗಿರಲಿಲ್ಲ. ಅವರುಗಳು ಈ ಸರೋವರದಲ್ಲಿ ಕ್ರೀಡಿಸುತ್ತಿದ್ದರು.

೨೦. ಇದರ ಮಧ್ಯದಲ್ಲಿ ಏಳುಜನ ನಾಗಕನ್ಯೆಯರು ಆ ಸರೋವರದಿಂದ ಕ್ರೀಡಿಸುವುದಕ್ಕೋಸ್ಕರ ಹೊರಗೆ ಬಂದರು. ಅವರಿಗಿನ್ನೂ ಯೌವನವು ಬಂದಿರಲಿಲ್ಲ.

ತಾಸಾಂ ಪರಸ್ಪರಂ ಮಂತ್ರೋ ಬಭೂವ ರಘುನಂದನ ।
ತತ್ರ ತೌ ನಾಗಕನ್ಯಾಶ್ಚ ತಥಾ ಗಂಧರ್ವಕನ್ಯಕಾಃ ॥ ೨೧ ॥

ಯಾತಾಯಾತಂ ಸದಾ ಚಕ್ರುಃ ಕ್ರೀಡಾರ್ಥಂ ಸರಸಸ್ತಟೇ ।
ತಪತಾ ಮುನಿನಾ ತತ್ರ ಮುಹುರ್ವಾಕ್ಯೈರ್ನಿವಾರಿತಾಃ ॥ ೨೨ ॥

ಮಾಗಚ್ಛಧ್ವಂ ಮನ್ನಿಕಟೇ ಚೇತಿ ತಾ ಬಾಲಭಾವತಃ ।
ಅಮಾನಯಂತಸ್ತದ್ವಾಕ್ಯಂ ಸಮಾಜಗ್ಮುರ್ನಿರಂತರಂ ॥ ೨೩ ॥

ಇಂದ್ರೇಣ ಬೋಧಿತಾಶ್ಚಾಪಿ ತತ್ತಪೋಧ್ವಂಸನಂ ಪ್ರತಿ ।
ಮುನಿಶ್ಚಾಪಿ ತಪೋನಾಶಂ ದೃಷ್ಟ್ವಾ ಶಾಪಾದಿನಾ ತದಾ ॥ ೨೪ ॥

೨೧-೨೨. ಆ ಸರೋವರದಲ್ಲಿ ಆ ಅಪ್ಸರಸ್ತ್ರೀಯರಿಗೂ ಈ ನಾಗಕನ್ಯೆಯರಿಗೂ ಪರಸ್ಪರ ಮಾತುಕಥೆಗಳು ನಡೆದುವು. ಮತ್ತು ಸ್ನೇಹವೂ ಆಯಿತು. ಅನಂತರ ಆ ನಾಗಕನ್ಯೆಯರೂ ಅಪ್ಸರಕನ್ಯೆಯರೂ ಆ ಸರೋವರದ ದಡಕ್ಕೆ ಕ್ರೀಡೆಗೋಸ್ಕರ ಹೋಗಿ ಬರಲು ಮೊದಲಿಟ್ಟರು. ಆ ಸರೋವರದ ತೀರದಲ್ಲಿ ಒಬ್ಬ ಮುನಿಯು ತಪಸ್ಸು ಮಾಡುತ್ತಿದ್ದನು. ಅವನು ಇದನ್ನು ನೋಡಿ ಇವರನ್ನು ಇಲ್ಲಿಗೆ ಬರಬೇಡಿರೆಂದು ಅನೇಕಬಾರಿ ಹೇಳಿದನು.

೨೩. ನನ್ನ ಬಳಿಗೆ ಬರಬೇಡಿರೆಂದು ಎಷ್ಟುಬಾರಿ ಹೇಳಿದರೂ ಅವರು ಆ ಹುಡುಗುತನದಿಂದ ಅವನ ಮಾತಿನಂತೆ ನಡೆಯದೆ ಯಾವಾಗಲೂ ಬರುತ್ತಲೇ ಇದ್ದರು.

೨೪. ಇದೂ ಅಲ್ಲದೆ ಇಂದ್ರನು ಈ ಋಷಿಯ ತಪಸ್ಸನ್ನು ನಾಶಪಡಿಸಬೇಕೆಂದು ಅವರಿಗೆ ಪ್ರೋತ್ಸಾಹವನ್ನೂ ಮಾಡಿದ್ದನು. ಆಗ ಈ ಮುನಿಯು ಇವರಿಗೆ ಶಾಪಕೊಟ್ಟರೆ ತನ್ನ ತಪಸ್ಸು ನಾಶವಾಗುತ್ತದೆ ಎಂಬದಾಗಿ ಯೋಚಿಸಿದನು.

ವಿನಾ ಶಾಪೇನ ತಾಸಾಂ ಸ ದಂಡಂ ಸಮ್ಮಂತ್ರ್ಯಯದ್ಧೃದಿ ।
ಆತ್ಮವಾಕ್ಯಗೌರವೇಣ ಜಲದೇವೀಃ ಪ್ರಚೋದಯತ್ ॥ ೨೫ ॥

ತದ್ವಾಕ್ಯಾಜ್ಜಲದೇವ್ಯಸ್ತಾ ಮಧ್ಯಾಹ್ನೇ ಸ್ವೀಯಮಂದಿರಂ ।
ನಿನ್ಯುರ್ಧೃತ್ವಾ ಬಲಾದೇವ ಯತ್ರ ಕೇಷಾಂ ಗತಿರ್ನ ಹಿ ॥ ೨೬ ॥

ಗಂಧರ್ವಾಃ ಪನ್ನಗಾ ಯತ್ರ ಗಂತುಂ ಶಕ್ತಾ ನ ಚಾಭವನ್ ।
ತಪೋಂತೇ ಸ ಮುನಿಃ ಸ್ವರ್ಗಂ ಗತಸ್ತಾ ಅತ್ರ ಸಂಸ್ಥಿತಾಃ ॥ ೨೭ ॥

ತಾಸ್ಸರ್ವಾ ಜಲದೇವೀನಾಂ ಗೇಹೇ ಸಂತ್ಯಧುನಾ ಪ್ರಭೋ ।
ಇದಂ ವೃತ್ತಮಾಧುನಿಕಂ ವಿದ್ಧಿ ರಾಮ ಸ್ಮಯಪ್ರದಂ ॥ ೨೮ ॥

---

೨೫. ಆಗ ಶಾಪ ಕೊಡದೇನೇ ಇವರಿಗೆ ಶಿಕ್ಷೆಯನ್ನು ವಿಧಿಸಬೇಕೆಂದು ಮನಸ್ಸಿನಲ್ಲಿಯೇ ಯೋಚಿಸಿದನು. ಜಲದೇವಿಯರಿಗೆ ತನ್ನ ಮಾತಿನಲ್ಲಿ ಗೌರವ ವಿದೆಯೆಂದು ತಿಳಿದು ಅವರನ್ನು ಕರೆದು ಇಲ್ಲಿಗೆ ಬರುತ್ತಿರುವ ಕನ್ಯೆಯರನ್ನು ಶಿಕ್ಷಿಸಬೇಕೆಂದು ಹೇಳಿದನು.

೨೬. ಅವನ ಮಾತಿನಂತೆ ಆ ಜಲದೇವಿಯರು ಒಂದು ದಿನ ಮಧ್ಯಾಹ್ನದಲ್ಲಿ ಅವರನ್ನು ತಮ್ಮ ಮನೆಗೆ ಬಲಾತ್ಕಾರದಿಂದ ಕರೆದುಕೊಂಡು ಹೋಗಿ ಒಂದು ಜಾಗದಲ್ಲಿ ನಿರ್ಬಂಧಿಸಿಟ್ಟರು. ಅವರು ಕರೆದುಕೊಂಡು ಹೋಗಿ ಆ ಕನ್ಯೆಯರನ್ನು ಇಟ್ಟ ಜಾಗಕ್ಕೆ ಯಾರೂ ಹೋಗಲು ಸಾಧ್ಯವೇ ಇರುವುದಿಲ್ಲ.

೨೭. ಆ ಕನ್ಯೆಯರನ್ನು ಕರೆತರಲು ಗಂಧರ್ವರಿಗಾಗಲಿ ಪನ್ನಗರಿಗಾಗಲಿ ಶಕ್ತಿಯೇ ಇಲ್ಲದೆ ಹೋಯಿತು. ತಪಸ್ಸನ್ನು ಮುಗಿಸಿಕೊಂಡು ಸಿದ್ಧಿಯನ್ನು ಹೊಂದಿ ಆ ಮುನಿಯು ಸ್ವರ್ಗವನ್ನು ಹೊಂದಿದನು. ಈ ನಾಗಕನ್ಯೆಯರೂ ಗಂಧರ್ವಕನ್ಯೆಯರೂ ಇಲ್ಲಿಯೇ ಇದ್ದುಕೊಂಡಿರುವರು.

೨೮. ಎಲೈ ಪ್ರಭುವೇ! ಅವರೆಲ್ಲರೂ ಈಗ ಜಲದೇವಿಯರ ಮನೆಯಲ್ಲಿ ದ್ದಾರೆ. ಈ ವಿಷಯವು ಈಗ ಸ್ವಲ್ಪವರ್ಷಗಳ ಹಿಂದೆ ನಡೆದುದೆಂದು ತಿಳಿ. ಇದು ಆಶ್ಚರ್ಯವನ್ನುಂಟುಮಾಡತಕ್ಕದ್ದಾಗಿದೆ.

ತಾ ಅತ್ರ ಜಲದೇವೀನಾಂ ಜಲಾಂತರ್ಗತಸದ್ಮನಿ ।
ಕುರ್ವಂತಿ ನೃತ್ಯಗೀತಾನಿ ತಾಸಾಂ ಸಂಶ್ರೂಯತೇ ಧ್ವನಿಃ ॥ ೨೯ ॥

ಏವಂ ರಾಮ ಯಥಾಪೃಷ್ಟಂ ತ್ವಯಾ ಸರ್ವಂ ಮಯಾ ತಥಾ ।
ವೃತ್ತಂ ತವಾಗ್ರೇ ಕಥಿತಂ ಕುರು ಯೇನ ಹಿತಂ ಭವೇತ್ ॥ ೩೦ ॥

ಸರ್ವಾಸಾಂ ನಾಗಕನ್ಯಾನಾಂ ಗಾಂಧರ್ವೀಣಾಂ ತಥಾ ವಿಭೋ ।
ಮುನಿನಾ ಚೋದಿತಶ್ಚೇತ್ಥಂ ತದಾ ಸೀತಾಪತಿರ್ಮುದಾ ॥ ೩೧ ॥

ಲಕ್ಷ್ಮಣಂ ಪ್ರಾಹ ಮೇ ಚಾಪಮಾನಯಾದ್ಯ ಕ್ಷಣಾದಿಹ ।
ಮುಕ್ತ್ವಾ ಬಾಣಂ ಮೋಚಯಾಮಿ ದಗ್ಧ್ವಾ ದೇವೀರ್ಜಲಸ್ಥಿತಾಃ ॥ ೩೨ ॥

---

೨೯. ಅವರೆಲ್ಲರೂ ಕೂಡ ಜಲದೇವಿಯರ ನೀರಿನೊಳಗಿರುವ ಮನೆಯಲ್ಲಿದ್ದುಕೊಂಡು ನೃತ್ಯ ಗೀತಗಳನ್ನು ಮಾಡುತ್ತಿದ್ದಾರೆ. ಆ ಧ್ವನಿಯು ಇಲ್ಲಿಗೆ ಕೇಳುತ್ತದೆ.

೩೦. ಎಲೈ ರಾಮನೇ! ನೀನು ಕೇಳಿದುದನ್ನು ಯಥಾರ್ಥವಾದ ರೀತಿಯಲ್ಲಿ ನಿನಗೆ ಹೇಳಿದ್ದೇನೆ. ಅವರಿಗೆ ಯಾವ ರೀತಿಯಲ್ಲಿ ಅನುಗ್ರಹಿಸಿದರೆ ಅನುಕೂಲವಾಗುವುದೋ ಆ ರೀತಿಯಾಗಿ ಮಾಡು.

೩೧. ಆ ಗಂಧರ್ವಕನ್ಯೆಯರಿಗೂ ಅನುಕೂಲವಾಗಬೇಕಾದುದು ಸರಿಯಾಗಿದೆ ಎಂದೆನಲು ಆ ಋಷಿಯು ಈ ರೀತಿಯಾಗಿ ಹೇಳಿದುದನ್ನು ಈ ಸೀತಾಪತಿಯು ಸಂತೋಷದಿಂದ ಕೇಳಿದನು.

೩೨. ಇದರಿಂದ ಅವರನ್ನು ಬಿಡಿಸಬೇಕೆಂದು ರಾಮನ ಮನಸ್ಸಿನಲ್ಲಿ ಬರಲು ಲಕ್ಷ್ಮಣನನ್ನು ನೋಡಿ ಎಲೈ ಲಕ್ಷ್ಮಣನೇ! ಬೇಗನೆ ಬಿಲ್ಲನ್ನೂ ಬತ್ತಳಿಕೆಯನ್ನೂ ಕೊಡು. ಈ ಜಲದಲ್ಲಿರುವ ಜಲದೇವಿಯರನ್ನು ಬಾಣವನ್ನು ಬಿಟ್ಟು ಸುಟ್ಟು ಅವರನ್ನು ಬಿಡಿಸುತ್ತೇನೆ.

ಕನ್ಯಕಾಃ ಪನ್ನಗಾನಾಂ ಚ ತಥಾ ಗಂಧರ್ವಕನ್ಯಕಾಃ ।
ಇತಿ ತದ್ರಾಮವಾಕ್ಯಂ ಸ ಶ್ರುತ್ವಾ ಸೌಮಿತ್ರಿರಾದರಾತ್ ॥ ೩೩ ॥

ಶೀಘ್ರಂ ಚಾಪಂ ಸತೂಣೀರಂ ದದೌ ಶ್ರೀರಾಘವಂ ಪ್ರತಿ ।
ತತಃ ಕೋದಂಡಮುದ್ಯಮ್ಯ ಠಣತ್ಕೃತ್ಯ ರಘೂದ್ವಹಃ ॥ ೩೪ ॥

ಶರಂ ಜಗ್ರಾಹ ತೂಣೀರಾನ್ನಿಜನಾಮಾಂಕಿತಂ ಶಿತಂ ।
ತದಾ ಚಚಾಲ ಧರಣೀ ಚುಕ್ಷುಭುಸ್ಸಪ್ತಸಾಗರಾಃ ॥ ೩೫ ॥

ವವೌ ಘೋರತರೋ ವಾಯೂ ರಜೋವ್ಯಾಪ್ತಾ ದಿಶೋಽಭವನ್ ।
ತಾರಾ ನಿಪೇತುರ್ಧರಣೀಂ ದುದ್ರುವುರ್ವನಚಾರಿಣಃ ॥ ೩೬ ॥

ಪರ್ವತಾಃ ಕಂಪಿತಾ ಆಸನ್ ವವರ್ಷುರ್ಲೋಹಿತಂ ಘನಾಃ ।
ತತ್ ಜ್ಞಾತ್ವಾ ಜಲದೇವ್ಯಸ್ತಾಃ ಶ್ರುತ್ವಾ ಚಾಪಧ್ವನಿಂ ತದಾ ॥ ೩೭ ॥

೩೩–೩೪ ಆ ಗಂಧರ್ವಕನ್ಯೆಯರೂ ಪನ್ನಗಕನ್ಯೆಯರೂ ಅವರವರ ಸ್ಥಳಗಳಿಗೆ ಹೋಗಲಿ. ಎಂದೆನಲು ಸೌಮಿತ್ರಿಯು ರಾಮನ ಮಾತಿನಂತೆ ಬೇಗನೆ ಬಿಲ್ಲನ್ನೂ ಬತ್ತಳಿಕೆಯನ್ನೂ ತಂದುಕೊಟ್ಟನು. ಒಡನೆಯೇ ಶ್ರೀರಾಮನು ಧನುಸ್ಸಿನ ಹೆದೆಯನ್ನು ಏರಿಸಿ ಠಂಕಾರವನ್ನು ಮಾಡಿದನು.

೩೫. ಮತ್ತು ತನ್ನ ಹೆಸರನ್ನು ಕೆತ್ತಿರುವ ಹರಿತವಾದ ಬಾಣವನ್ನು ಬತ್ತಳಿಕೆಯಿಂದ ತೆಗೆದನು. ಒಡನೆಯೇ ಭೂಮಿಯು ನಡುಗಿತು. ಏಳು ಸಮುದ್ರಗಳೂ ಅಲ್ಲೋಲಕಲ್ಲೋಲವಾದುವು.

೩೬. ಗಾಳಿಯು ಘೋರವಾಗಿ ಬೀಸಿತು. ದಿಕ್ಕುಗಳೆಲ್ಲವೂ ಧೂಳಿನಿಂದ ತುಂಬಿಕೊಂಡುವು. ಅಂತರಿಕ್ಷದಿಂದ ನಕ್ಷತ್ರಗಳು ಉರುಳಿದುವು. ಅಲ್ಲಿದ್ದ ವನಚರರು ಓಡಿಹೋದರು.

೩೭. ಪರ್ವತಗಳು ನಡುಗಿದುವು. ಮೇಘಗಳು ರಕ್ತದ ಮಳೆಯನ್ನು ಸುರಿಸಿದುವು. ಇವೆಲ್ಲವನ್ನೂ ಆ ಜಲದೇವಿಯರು ನೋಡಿದರು. ಅಲ್ಲದೆ ಚಾಪ ಧ್ವನಿಯನ್ನೂ ಕೇಳಿದರು.

ಭಯಭೀತಾಸ್ಸಮಾಜಗ್ಮುಸ್ತಾಭಿಸ್ಸರ್ವಾಭಿರಾದರಾತ್ ।
ಪ್ರಣೇಮುಸ್ತಾಸ್ತದಾ ರಾಮಂ ಬಾಲಿಕಾಸ್ತಾಸ್ತು ದ್ವಾದಶ ॥ ೩೮ ॥

ರಾಘವಾಯಾರ್ಪಯಾಮಾಸುರ್ದಿವ್ಯಭೂಷಣಭೂಷಿತಾಃ ।
ರಾಘವಂ ಜಲದೇವ್ಯಸ್ತಾಃ ಪ್ರಾರ್ಥಯಾಮಾಸುರಾದರಾತ್ ॥ ೩೯ ॥

ರಾಮ ರಾಮ ಮಹಾಬಾಹೋಽಸ್ಮಾಭಿರ್ಯದಪರಾಧಿತಂ ।
ತತ್ ಕ್ಷಮಸ್ವ ರಘುಶ್ರೇಷ್ಠ ಮಾ ಮುಂಚಸ್ವ ಪತತ್ರಿಣಂ ॥ ೪೦ ॥

ನ ಕಶ್ಚಿತ್ಸೂರ್ಯವಂಶೇಭೂತ್ ಸ್ತ್ರೀಷು ಶಸ್ತ್ರಪ್ರಹಾರಕಃ ।
ತ್ವಯಾಪಿ ರಕ್ಷಿತಾ ಪೂರ್ವಂ ಸ್ತ್ರೀತ್ವಾದ್ಭೂರ್ಜಾಹ್ನವೀತಟೇ ॥ ೪೧ ॥

---

೩೮. ಒಡನೆಯೇ ಭಯಪಟ್ಟುಕೊಂಡು ಆ ಜಲದೇವಿಯರು ಆ ಕನ್ಯೆಯರನ್ನೂ ಜೊತೆಯಲ್ಲಿ ಕರೆದುಕೊಂಡು ರಾಮನ ಬಳಿಗೆ ಓಡಿಬಂದರು. ಮತ್ತು ಆ ಜಲದೇವಿಯರೂ ಆ ಹನ್ನೆರಡು ಜನ ಕನ್ಯೆಯರೂ ರಾಘವನಿಗೆ ನಮಸ್ಕರಿಸಿದರು.

೩೯. ಮತ್ತು ಈ ಜಲದೇವಿಯರು ಅಲಂಕೃತರಾದ ಹನ್ನೆರಡುಜನ ಕನ್ನೆಯರನ್ನೂ ಈ ರಾಮನಿಗೆ ಒಪ್ಪಿಸಿದರು. ಅಲ್ಲದೆ ಆ ದೇವಿಯರು ರಾಮನನ್ನು ಇಂತೆಂದು ಪ್ರಾರ್ಥಿಸಿಕೊಂಡರು.

೪೦. ಮಹಾ ಬಾಹುವಾದ ರಾಮನೇ ! ನಾವು ಮಾಡಿದ ಅಪರಾಧವನ್ನು ಕ್ಷಮಿಸು. ಎಲೈ ರಘುಶ್ರೇಷ್ಠನೇ ! ನೀನು ಈ ನಿನ್ನ ಬಾಣವನ್ನು ನಮ್ಮಮೇಲೆ ಬಿಡಬೇಡ.

೪೧-೪೨. ಸೂರ್ಯವಂಶದಲ್ಲಿ ಹುಟ್ಟಿದ ಯಾವನೊಬ್ಬನೂ ಕೂಡ ಹೆಂಗಸರನ್ನು ಕೊಲ್ಲಲಿಲ್ಲ. ಅಲ್ಲದೆ ನೀನು ಜಾಹ್ನವಿಯ ದಡದಲ್ಲಿ ಯಜ್ಞ ಮಾಡುತ್ತಿದ್ದಾಗ ಈ ಜಾನಕಿಯು ಶಪಥವನ್ನು ಮಾಡಿದಾಗ ಭೂದೇವಿಯು

ಯದಾನಯಾ ತು ಶಪಥಃ ಕೃತೋ ಮೈಥಿಲಕನ್ಯಯಾ ।
ತಾಟಿಕಾದಿರಾಕ್ಷಸೀಷು ಯತ್ಕೃತಂ ಬಾಣಮೋಚನಂ ॥ ೪೨ ॥

ಬ್ರಹ್ಮಘ್ನೀಷು ತ್ವಯಾ ಪೂರ್ವಂ ತತ್ಸರ್ವೇಷಾಂ ಹಿತಾಯ ಚ ।
ಇತಿ ತಾಸಾಂ ವಚಃ ಶ್ರುತ್ವಾ ವಿಹಸ್ಯ ರಘುನಂದನಃ ॥ ೪೩ ॥

ಸ್ಥಾಪಯಾಮಾಸ ತೂಣೀರೇ ಪೂರ್ವವತ್ತಂ ಸ್ವಮಾರ್ಗಣಂ ।
ತತಸ್ತಾಭಿಃ ಪೂಜಿತಸ್ಸ ತದಾ ಹೃಷ್ಟೋ ರಘೂತ್ತಮಃ ॥ ೪೪ ॥

ಜಲದೇವೀರ್ದದಾವಾಜ್ಞಾಂ ಸ್ವಸ್ಥಲಂ ಗಮ್ಯತಾಮಿತಿ ।
ಏತಸ್ಮಿನ್ನಂತರೇ ತತ್ರ ಗಂಧರ್ವಾಶ್ಚಾಥ ಪನ್ನಗಾಃ ॥ ೪೫ ॥

ಮೈಥಿಲಿಯನ್ನು ಕರೆದುಕೊಂಡು ಹೋಗಲು ಬಂದಳು. ಅಂತೆಯೇ ಭೂಮಿಯು ಸೀತೆಯನ್ನು ಕರೆದುಕೊಂಡು ಹೋಗುತ್ತಿದ್ದಾಗ ಅವಳು ಹೆಂಗಸೆಂಬದಾಗಿ ಆಕೆಯನ್ನು ಕೊಲ್ಲದೆ ರಕ್ಷಿಸಲಿಲ್ಲವೆ! ಆದರೆ ತಾಟಕಿಯಮೇಲೆ ಬಾಣವನ್ನು ಬಿಟ್ಟು ಹೆಂಗಸಾದರೂ ಆಕೆಯನ್ನು ಹಿಂಸೆಪಡಿಸಿ ಕೊಂದಿದ್ದೀಯೆ.

೪೩. ಅವಳು ಬ್ರಹ್ಮಹತ್ಯೆಯನ್ನು ಮಾಡಿದವಳು. ಇತರರಿಗೆ ತೊಂದರೆ ಕೊಡುತ್ತಿದ್ದವಳು. ಹಾಗೆ ಆಕೆಯನ್ನು ನೀನು ಕೊಂದುದು ಇತರರ ಹಿತಕ್ಕೋಸ್ಕರವಾಗಿಯೇ ಅಲ್ಲದೆ ಬೇರೆಯಲ್ಲ ಹೆಂಗಸಾಗಲಿ ಗಂಡಸಾಗಲಿ ಬ್ರಹ್ಮಹತ್ಯೆಯನ್ನು ಮಾಡಿದವರನ್ನು ಕೊಂದರೆ ದೋಷವಿಲ್ಲ ಎಂದು ಹೇಳಿ ಪ್ರಾರ್ಥಿಸಿಕೊಂಡರು. ಅವರ ಈ ಮಾತನ್ನು ಕೇಳಿ ರಾಮನು ನಕ್ಕನು.

೪೪. ಒಡನೆಯೇ ಆ ಬಾಣವನ್ನು ಮೊದಲಿನಂತೆಯೇ ಬತ್ತಳಿಕೆಗೆ ಸೇರಿಸಿದನು. ಅನಂತರ ಅವರೆಲ್ಲರೂ ರಾಮನನ್ನು ಪೂಜಿಸಿದರು. ಅದರಿಂದ ರಾಮನಿಗೆ ಸಂತೋಷವಾಯಿತು.

೪೫-೪೬. ಆಗ ಜಲದೇವಿಯರಿಗೆ ನೀವು ನಿಮ್ಮ ಜಾಗಕ್ಕೆ ಹೋಗಿರಿ ಎಂದು ಅಪ್ಪಣೆ ಮಾಡಿದನು, ಇಷ್ಟರೊಳಗೆ ಆ ಕನ್ಯೆಯರ ರಕ್ಷಕರಾದ ಗಂಧರ್ವರೂ

ವಿದಿತ್ವಾ ಸಕಲಂ ರಾಮಕೃತಂ ರಾಮಾಂತಿಕಂ ಯಯುಃ ।
ನತ್ವಾ ರಾಮಂ ಸಸೀತಂ ಚ ತಥಾ ತಂ ಕುಂಭಸಂಭವಂ ॥ ೪೬ ॥

ಉಪಾಯನಾನ್ಯನೇಕಾನಿ ಸಮರ್ಪ್ಯ ರಘುನಂದನಂ ।
ಊಚುಸ್ತೇ ಮಂಜುಲಂ ವಾಕ್ಯಂ ಪ್ರಬದ್ಧಕರಸಂಪುಟಾಃ ॥ ೪೭ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ವಿವಾಹಕಾಂಡೇ ಜಲದೇವೀ ಜೀವದಾನಂ ಬಾಲಿಕಾ ವಿಮೋಚನಂ ನಾಮ ಪಂಚಮಸ್ಸರ್ಗಃ

ಪನ್ನಗರೂ, ಈ ವಿಷಯಗಳನ್ನು ತಿಳಿದು ರಾಮನ ಬಳಿಗೆ ಬಂದರು ಮತ್ತು ರಾಮನಿಗೂ, ಸೀತೆಗೂ, ಅಗಸ್ತ್ಯನಿಗೂ ನಮಸ್ಕರಿಸಿದರು.

೪೭. ಅನೇಕ ಬಗೆಯಾದ ಕಾಣಿಕೆಗಳನ್ನು ರಾಮನಿಗೆ ಕೊಟ್ಟರು. ಮತ್ತು ಕೈಮುಗಿದುಕೊಂಡು ಮೃದುವಾಗಿ ಇಂತೆಂದರು.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ ಜಲದೇವೀ ಜೀವದಾನ ಬಾಲಿಕಾ ವಿಮೋಚನವೆಂಬ ಐದನೆಯ ಸರ್ಗವು

|| ಶ್ರೀರಸ್ತು ||

ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ
|| ಐದನೆಯ ಸರ್ಗದ ಸಾರಾಂಶವು ||

ಒಂದುಸಾರಿ ರಾಮನು ಎಲ್ಲರನ್ನೂ ಪುಷ್ಪಕದಲ್ಲಿ ಕೂರಿಸಿಕೊಂಡು ದಂಡಕಾರಣ್ಯಕ್ಕೆ ಹೋದನು. ಈತನು ಬಂದುದನ್ನು ಅಗಸ್ತ್ಯನು ತಿಳಿದು ಗೌರವಿಸಿ ಆತಿಥ್ಯವನ್ನು ಮಾಡಿದನು. ಮತ್ತು ರಾಮನಿಗೆ ಎರಡು ಚಿನ್ನದ ಬಳೆಗಳನ್ನೂ ಸೀತೆಗೆ ಎರಡು ಓಲೆಗಳನ್ನೂ ಕೊಟ್ಟನು.

ರಾಮನು ಅಲ್ಲಿಂದ ಮುಂದೆ ಹೊರಟು ಪಂಚಾಪ್ಸರಸ್ಸೆಂಬ ಸರೋವರಕ್ಕೆ ಹೋದನು. ಅಲ್ಲಿ ಆ ರಾತ್ರಿಯಿರಲು ಉತ್ತಮವಾದ ಸಂಗೀತವು ಕೇಳಿಬಂದಿತು. ಇದರ ಐತಿಹ್ಯವನ್ನು ಅಗಸ್ತ್ಯನಿಂದ ತಿಳಿದುಕೊಂಡನು. ಗಂಧರ್ವರಾಜನ ಐದುಜನ ಕನ್ಯೆಯರೂ ಏಳುಜನ ನಾಗಕನ್ಯೆಯರೂ ಜಲದೇವಿಯರಿಂದ ಬಂಧಿತರಾಗಿದ್ದಾರೆ ಎಂಬುದನ್ನು ತಿಳಿದು ಬಾಣವನ್ನು ಬಿಡಲು ಯತ್ನಿಸಿದಾಗ ಜಲದೇವಿಯರು ಅವರನ್ನು ತಂದೊಪ್ಪಿಸಿದರು. ಇದನ್ನು ತಿಳಿದು ಆ ಕನ್ನಿಕೆಯರ ತಾಯಿತಂದೆಗಳು ಬಂದು ರಾಮನಿಂದ ಎಲ್ಲಾ ವಿಷಯವನ್ನೂ ತಿಳಿದುಕೊಂಡು ಅವನಿಗೆ ನಮಸ್ಕರಿಸಿದರು. ಮತ್ತು ಅನೇಕ ವಿಧವಾದ ಕಪ್ಪಕಾಣಿಕೆಗಳನ್ನೂ ಕೊಟ್ಟರು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ವಿವಾಹಕಾಂಡೇ

॥ ಷಷ್ಠಃ ಸರ್ಗಃ ॥

॥ ಗಂಧರ್ವಪನ್ನಗಾ ಊಚುಃ ॥

ರಾಮ ಕಂಜಾನಸ್ವಾಮಿನ್ಮೋಚಿತಾ ಬಾಲಿಕಾಸ್ತ್ವಯಾ ।
ವಿವಾಹಾನರಜಸ್ಕಾನಾಂ ಪುತ್ರೈಸ್ತ್ವಂ ಕರ್ತುಮರ್ಹಸಿ ॥ ೧ ॥

ಅದ್ಯ ಧನ್ಯಾ ವಯಂ ಸರ್ವೇ ನಃ ಕುಲಂ ಪಾವನಂ ಕೃತಂ ।
ತ್ವಯಾ ರಾಮ ಮಹಾಬಾಹೋ ತಾರಿತಾಃ ಸ್ಮೋ ನ ಸಂಶಯಃ ॥ ೨ ॥

ಸಪ್ತಜನ್ಮಸು ಯತ್ಪುಣ್ಯಂ ಕೃತೆ ಮಸ್ತಿ ರಘೂದ್ವಹ ।
ಅಸ್ಮಾಭಿಸ್ತೇನ ಸಂಬಂಧಸ್ತ್ವಯಾದ್ಯ ಭರತಪ್ರಭೋ ॥ ೩ ॥

ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ ಆರನೆಯ ಸರ್ಗವು

೧. ಪನ್ನಗ ಗಂಧರ್ವರು ಹೇಳಿದರು—ಕಮಲದಂತೆ ಕಣ್ಣುಗಳುಳ್ಳ ಸ್ವಾಮಿಯಾದ ರಾಮನೇ! ನಮ್ಮ ಬಾಲಿಕೆಯರನ್ನೆಲ್ಲಾ ನೀನು ಬಿಡಿಸಿದೆ. ಇವರೆಲ್ಲರೂ ಋತುಮತಿಯರಾಗದವರು. ಇವರನ್ನು ನಿಮ್ಮ ಬಾಲಕರಿಗೆ ವಿವಾಹಮಾಡಿಕೋ.

೨. ಈಗ ನಾವೆಲ್ಲರೂ ಧನ್ಯರು. ನಮ್ಮ ಕುಲವು ಪಾವನವಾಯಿತು. ಎಲೈ ರಾಮನೇ! ನಿನ್ನಿಂದ ನಾವು ಕೃತಾರ್ಥರಾಗಿದ್ದೇವೆ. ಸಂಶಯವಿಲ್ಲ.

೩. ಎಲೈ ಸ್ವಾಮಿಯೇ! ನಾವು ಮಾಡಿದ ಏಳು ಜನ್ಮಗಳ ಪುಣ್ಯದಿಂದ, ಅದರ ಫಲವಾಗಿಯೇ ಈಗ ನಿನ್ನೊಡನೆ ನಮಗೆ ಸಂಬಂಧವು ಉಂಟಾಗಲಿ.

॥ ಶ್ರೀರಾಮ ಉವಾಚ ॥

ಇತಿ ತೇಷಾಂ ವಚಃ ಶ್ರುತ್ವಾ ಸೀತಯಾ ಸ ರಘೂದ್ವಹಃ ।
ಅಂಗೀಕೃತ್ಯ ವಚಸ್ತೇಷಾಮಗಸ್ತಿಮವಲೋಕಯತ್ ॥ ೪ ॥

ತದಾ ಪ್ರಾಹ ಕುಂಭಜನ್ಮಾ ರಾಘವಂ ವಚನಂ ಮುನಿಃ ।
ರಾಮನಾಮ್ನಾಗ್ರೇ ಕುಮುದಸ್ಯ ಸ್ವಸಾ ನಾಮ್ನಾ ಕುಮುದ್ವತೀ ॥ ೫ ॥

ತ್ವಯಿ ಪ್ರಾಪ್ತೇ ಹಿ ವೈಕುಂಠಂ ಕುಶಪತ್ನೀ ಭವಿಷ್ಯತಿ ।
ಚಂಪಿಕಾಯೈ ನ ತನಯಾ ಭವಿಷ್ಯಂತಿ ರಘೂದ್ವಹ ॥ ೬ ॥

ಕುಶಾತ್ಪುತ್ರಃ ಕುಮುದ್ವತ್ಯಾಮತಿಥಿಸ್ತು ಭವಿಷ್ಯತಿ ।
ರಾಜ್ಯಕರ್ತಾ ವಂಶಕರ್ತಾ ಸ ಏವಾಗ್ರೇ ಭವಿಷ್ಯತಿ ॥ ೭ ॥

---

೪. ಶ್ರೀರಾಮನು ಹೇಳಿದನು—ಅವರು ಹೇಳಿದ ಈ ಮಾತನ್ನು ರಾಮನೂ, ಸೀತೆಯೂ ಕೇಳಿದರು. ಆಗ ಆ ಸೀತೆಯೂ, ರಾಮನೂ ಮಾತನಾಡಿ ಒಪ್ಪಿಕೊಂಡರು. ಅನಂತರ ರಾಮನು ಅಗಸ್ತ್ಯನ ಮುಖವನ್ನು ನೋಡಿದನು.

೫. ಆಗ ಅಗಸ್ತ್ಯಮುನಿಯು ರಾಘವನನ್ನು ಕುರಿತು ಇಂತೆಂದನು. ಎಲೈ ರಾಮನೇ! ಕುಮುದನೆಂಬ ನಾಗನಿಗೆ ಕುಮುದ್ವತಿಯೆಂಬ ತಂಗಿಯಾದ ನಾಗ ಕನ್ನಿಕೆಯಿರುವಳು.

೬. ನೀನು ವೈಕುಂಠವನ್ನು ಹೊಂದಿದಮೇಲೆ ಅವಳು ಕುಶನಿಗೆ ಹೆಂಡತಿ ಯಾಗುವಳು. ಕುಶನ ಪತ್ನಿಯಾದ ಚಂಪಿಕೆಗೆ ಗಂಡುಮಕ್ಕಳಾಗುವುದಿಲ್ಲ.

೭. ಕುಶನಿಗೆ ಆ ಕುಮುದ್ವತಿಯಲ್ಲಿ ಅತಿಥಿಯೆಂಬ ಮಗನಾಗುವನು. ಅವನೇ ಮುಂದೆ ರಾಜ್ಯಕರ್ತನೂ ವಂಶಕರ್ತನೂ ಆಗುವನು.

ಅತಸ್ತ್ವಮಧುನಾ ರಾಮ ನಾಗಕನ್ಯಾಃ ಕುಶಂ ವಿನಾ ।
ಸಪ್ತ ತಾಃ ಸಪ್ತಪುತ್ರೇಭ್ಯಃ ಪ್ರಯಚ್ಛ ವಿಧಿನಾ ದ್ವಿಜೈಃ ॥ ೮ ॥

ಪಂಚ ಗಂಧರ್ವಕನ್ಯಾಶ್ಚ ಯೂಪಕೇತುಂ ಕುಶಂ ಲವಂ ।
ವಿನಾಸ್ಯ ಪಂಚಪುತ್ರೇಭ್ಯಃ ಪ್ರಯಚ್ಛ ರಘುನಂದನ ॥ ೯ ॥

ರಾಕ್ಷಸೇನ ವಿವಾಹೇನ ಯೂಪಕೇತುಶ್ಶಿಶುಸ್ತವ ।
ಅಗ್ರೇ ಪತ್ನೀಂ ಮಹಾನೇಷ ಕರಿಷ್ಯತ್ಯಪರಾಂ ಶುಭಾಂ ॥ ೧೦ ॥

ಏವಂ ರಾಮ ಸುತಾಸ್ಸರ್ವೇ ಸ್ವಸ್ವಸ್ತ್ರೀಭ್ಯಾಂ ಯಥಾಸುಖಂ ।
ಕ್ರೀಡಯಿಷ್ಯಂತಿ ಪೌತ್ರಾಸ್ತ್ವರ್ಥ ಭವಿಷ್ಯಂತಿ ಪ್ರಪೌತ್ರಕಾಃ ॥ ೧೧ ॥

ಪ್ರಪೌತ್ರಸ್ಯ ಪ್ರಪೌತ್ರಂ ತ್ವಂ ದೃಷ್ಟ್ವಾ ಸೀತಾಸಮನ್ವಿತಃ ।
ಸುಖಂ ಗಚ್ಛಸಿ ವೈಕುಂಠಂ ಬಂಧುಭಿರ್ನಗರೀಸ್ಥಿತೈಃ ॥ ೧೨ ॥

---

೮. ಆದ್ದರಿಂದ ಈಗ ನೀನು ಕುಶನಿಗೆ ಇವರನ್ನು ಮದುವೆಯನ್ನು ಮಾಡಬೇಡ. ಏಳು ಜನ ಈ ನಾಗಕನ್ಯೆಯರನ್ನೂ ನಿನ್ನ ಏಳು ಜನ ಮಕ್ಕಳಿಗೆ ಶಾಸ್ತ್ರರೀತಿಯಿಂದ ಮದುವೆಯನ್ನು ಮಾಡಿಸು.

೯. ಈ ಐದು ಜನ ಗಂಧರ್ವ ಕನ್ಯೆಯರನ್ನೂ ಕೂಡ ಕುಶ ಲವ, ಯೂಪ ಕೇತುಗಳಿಗೆ ಮದುವೆಮಾಡದೆ ಉಳಿದಿರುವ ಐದು ಜನರಿಗೂ ಮದುವೆಮಾಡು.

೧೦. ನಿಮ್ಮ ಬಾಲಕನಾದ ಈ ಯೂಪಕೇತುವು ರಾಕ್ಷಸ ವಿವಾಹದ ರೀತಿಯಿಂದ ಮುಂದೆ ಉತ್ತಮಳಾದ ಹುಡುಗಿಯನ್ನು ಮದುವೆಯಾಗುವನು.

೧೧. ಈ ರೀತಿಯಾಗಿ ಮಾಡಿದರೆ ನಿನ್ನ ಮಕ್ಕಳೆಲ್ಲರೂ ಅವರವರ ಹೆಂಡತಿಯರಲ್ಲಿ ಸುಖವಾಗಿ ಕ್ರೀಡಿಸುತ್ತಾರೆ. ಅವರಿಗೆ ಮಕ್ಕಳೂ, ಮೊಮ್ಮೊಕ್ಕಳೂ ಕೂಡ ಆಗುತ್ತಾರೆ.

೧೨. ಮೊಮ್ಮೊಕ್ಕಳಿಗೆ ಮೊಮ್ಮೊಕ್ಕಳನ್ನೂ ನೀನು ನೋಡಿ ಅನಂತರ ಸೀತೆಯೊಡನೆಯೂ, ತಮ್ಮಂದಿರೊಡನೆಯೂ, ಪಟ್ಟಣದ ಜನಗಳೊಡನೆಯೂ ವೈಕುಂಠವನ್ನು ಹೊಂದುತ್ತೀಯೆ.

ಏವಂ ಶ್ರುತ್ವಾ ಮುನೇರ್ವಾಕ್ಯಮಂಗೀಕೃತ್ಯ ರಘೂದ್ವಹಃ ।
ತಾಸಾಂ ನಾಮಾನಿ ಪಪ್ರಚ್ಛ ಗಂಧರ್ವಾನ್ ಪನ್ನಗಾನಪಿ ॥ ೧೩ ॥

ತದಾಬ್ರವೀತ್ಸಗಂಧರ್ವಃ ಸ್ವಪುತ್ರೀಣಾಂ ಸವಿಸ್ತರಾತ್ ।
ತಾಸಾಂ ನಾಮಾನಿ ರಾಮಾಗ್ರೇ ಪಂಚಾನಾಂ ಸರಸಸ್ತಟೇ ॥ ೧೪ ॥

ಚಂದ್ರಿಕಾ ಚಂದ್ರವದನಾ ಚಂಚಲಾ ಚಪಲಾ ಚಲಾ ।
ಏವಂ ನಾಮಾನಿ ಪಂಚಾನಾಂ ಕ್ರಮೇಣ ರಘುನಂದನಃ ॥ ೧೫ ॥

ಶ್ರುತ್ವಾವಲೋಕಯಾಮಾಸ ಪನ್ನಗಾನ್ ತೇಪಿ ಜಾಬ್ರುವನ್ ।
ಕಂಜಾನನಾ ಕಂಜನೇತ್ರಾ ಕಂಜಾಂಘ್ರೀ ಚ ಕಲಾವತೀ ॥ ೧೬ ॥

ಕಲಿಕಾ ಕಮಲಾ ಚೈವ ಮಾಲತೀ ಸಪ್ತ ಕೀರ್ತಿತಾಃ ।
ಏವಂ ನಾಮಾನಿ ಸರ್ವಾಸಾಂ ಕ್ರಮೇಣ ರಘುನಂದನಃ ॥ ೧೭ ॥

---

೧೩. ಋಷಿಯು ಹೇಳಿದುದನ್ನು ಕೇಳಿ ರಾಮನು ಅವನ ಮಾತನ್ನು ಒಪ್ಪಿಕೊಂಡು ಅನಂತರ ಅಲ್ಲಿಗೆ ಬಂದಿದ್ದ ಆ ಗಂಧರ್ವರ ಮತ್ತು ನಾಗರ ಹೆಸರುಗಳನ್ನು ಕೇಳಿದನು.

೧೪. ಆಗ ಗಂಧರ್ವನು ತನ್ನ ಪುತ್ರಿಯರ ಹೆಸರನ್ನು ವಿಸ್ತಾರವಾಗಿ ಹೇಳಿದನು. ರಾಮನೂ ಕೂಡ ಆ ಸರೋವರದ ದಡದಲ್ಲಿ ಅವರ ಹೆಸರನ್ನು ವಿಸ್ತಾರವಾಗಿ ಕೇಳಿ ತಿಳಿದುಕೊಂಡನು.

೧೫. ಚಂದ್ರಿಕೆ, ಚಂದ್ರವದನೆ, ಚಂಚಲೆ, ಚಪಲೆ, ಚಲೆ ಎಂಬುದಾಗಿ ಕ್ರಮವಾಗಿ ಇವರುಗಳಿಗೆ ಹೆಸರುಗಳಿವೆ.

೧೬–೧೭. ಇವರ ಹೆಸರನ್ನು ಕೇಳಿದಮೇಲೆ ರಾಮನು ಆ ಪನ್ನಗರ ಕಡೆಗೆ ನೋಡಿದನು. ಅವರೂ ಕೂಡ ಕಂಜಾನನೆ, ಕಂಜನೇತ್ರೆ, ಕಂಜಾಂಘ್ರೀ, ಕಲಾವತಿ, ಕಲಿಕೆ, ಕಮಲೆ, ಮಾಲತಿ ಎಂಬುದಾಗಿ ನಮ್ಮ ಏಳು ಜನ ಮಕ್ಕಳ ಹೆಸರುಗಳು ಎಂಬುದಾಗಿ ಹೇಳಿದರು.

ಶ್ರುತ್ವಾ ತಾಃ ಪುಷ್ಪಕೇ ಸ್ಥಾಪ್ಯ ತೈರ್ನಿದ್ರಾಮಕರೋನ್ನಿಶಿ ।
ಅಥ ಪ್ರಭಾತೇ ಶ್ರೀರಾಮಃ ಸ್ನಾತ್ವಾ ಹುತ್ವಾ ಯಥಾವಿಧಿ ॥ ೧೮ ॥

ಗಂಧರ್ವಪನ್ನಗಾಂಶ್ಚಾಪಿ ತದಾ ವಚನಮಬ್ರವೀತ್ ।
ಏಭಿರ್ಜನೈರ್ಮಯಾ ನಾಕಂ ವಿವಾಹಾರ್ಥಂ ರಸಾತಲಂ ॥ ೧೯ ॥

ನೈವ ಯೋಗ್ಯಂ ಸಮಾಗಂತುಂ ಮರ್ತ್ಯಲೋಕನಿವಾಸಿನಾ ।
ತಸ್ಮಾಚ್ಛೃಣುಧ್ವಂ ಮದ್ವಾಕ್ಯಂ ಸುಹೃದಸ್ಸಕಲಾಶ್ಶುಭಂ ॥ ೨೦ ॥

ಯೂಯಂ ಗತ್ವಾ ನಿಜಸ್ಥಾನಂ ಸ್ವಸ್ತ್ರೀಭಿಶ್ಚ ಸುಹೃಜ್ಜನೈಃ ।
ಆಗಂತವ್ಯಂ ವಿವಾಹಾರ್ಥಮಯೋಧ್ಯಾಂ ಮೇ ಯಥಾಸುಖಂ ॥ ೨೧ ॥

ಅಧುನಾಹಂ ತು ಗಚ್ಛಾಮಿ ಪುರೀಮಗ್ರೇ ಕ್ಷಣೇನ ಹಿ ।
ವಿಹಾಯಸಾ ವಿಮಾನೇನ ಪತಾಕಾಧ್ವಜಮಾಲಿನಾ ॥ ೨೨ ॥

---

೧೮. ಅವರ ಈ ಮಾತುಗಳನ್ನೂ, ಹೆಸರನ್ನೂ ಕೇಳಿ ಅವರನ್ನೆಲ್ಲಾ ಪುಷ್ಪಕವಿಮಾನದಲ್ಲಿ ಕೂರಿಸಿಕೊಂಡು ಆ ದಿನ ಅಲ್ಲಿಯೇ ರಾತ್ರಿಯಲ್ಲಿ ನಿದ್ರಿಸಿದನು. ಬೆಳಗ್ಗೆ ಎದ್ದು ಸ್ನಾನಮಾಡಿ ಅಗ್ನಿಹೋತ್ರವನ್ನು ಮಾಡಿದನು.

೧೯-೨೦. ಅನಂತರ ಗಂಧರ್ವರನ್ನೂ, ಪನ್ನಗರನ್ನೂ ಕುರಿತು ಇಂತೆಂದನು. ನಾನು ಮರ್ತ್ಯಲೋಕನಿವಾಸಿಯು. ಆದ್ದರಿಂದ ಇವರನ್ನು ಮದುವೆಯಾಗಲು ಗಂಧರ್ವಲೋಕಕ್ಕಾಗಲೀ, ಪಾತಾಳಲೋಕಕ್ಕಾಗಲೀ, ಸ್ವರ್ಗಲೋಕಕ್ಕಾಗಲೀ ಬರುವುದು ಯುಕ್ತವಲ್ಲ. ಆದ್ದರಿಂದ ಸ್ನೇಹಿತರಾದ ನೀವೆಲ್ಲರೂ ಹಿತವಾದ, ಶುಭವಾದ ನನ್ನ ಮಾತನ್ನು ಕೇಳಿರಿ.

೨೧. ನೀವೆಲ್ಲರೂ ನಿಮ್ಮ ನಿಮ್ಮ ಸ್ಥಳಗಳಿಗೆ ಈಗ ಹೋಗಿ ಅಲ್ಲಿಂದ ನಿಮ್ಮ ಬಂಧುಗಳನ್ನೂ, ಸ್ನೇಹಿತರನ್ನೂ ಕರೆದುಕೊಂಡು ಮದುವೆಗೋಸ್ಕರ ಸುಖವಾಗಿ ಅಯೋಧ್ಯೆಗೆ ಅನಂತರ ಬನ್ನಿರಿ.

೨೨. ನಾನು ಈಗಲೇ ಬೇಗನೆ ಅಯೋಧ್ಯೆಗೆ ಈ ಉತ್ತಮವಾದ ಪುಷ್ಪಕದಲ್ಲಿಯೇ ಕುಳಿತು ಹೋಗುತ್ತೇನೆ. ಎಂದು ರಾಮನು ಹೇಳಿದನು.

ತಥೇತಿ ರಾಮವಚನಾತ್ತೇ ಗತಾಃ ಸ್ವಸ್ಥಲಾನಿ ಹಿ ।
ರಾಮೋಽಪಿ ಮುನಿನಾ ತಾಭಿರ್ಬಾಲಿಕಾಭಿಸ್ಸುತೈಃ ಸ್ತ್ರಿಯಾ ॥ ೨೩ ॥

ವಿಹಾಯಸಾ ಪುಷ್ಪಕಸ್ಥೋ ಯಯೌ ಪಶ್ಯನ್ ವನಾನಿ ಸಃ ।
ಅಯೋಧ್ಯಾಂ ಪ್ರಹರೇಣೈವ ಮುದಾ ಪ್ರಾಪ ರಘೂದ್ವಹಃ ॥ ೨೪ ॥

ನೀರಾಜಿತಃ ಪುರಸ್ತ್ರೀಭಿರ್ವಿವೇಶ ರಾಜಮಂದಿರಂ ।
ವಸಿಷ್ಠಗೇಹೇ ತಾಸ್ಸರ್ವಾಃ ಪ್ರೇಷಯಾಮಾಸ ರಾಘವಃ ॥ ೨೫ ॥

ಅಥ ರಾಮಸ್ಸಭಾಮಧ್ಯೇ ಸೌಮಿತ್ರಿಮಿದಮಬ್ರವೀತ್ ।
ಆಕಾರಣೀಯಾ ರಾಜಾನಃ ಸುಹೃದಶ್ಚ ಮುನೀಶ್ವರಾಃ ॥ ೨೬ ॥

ಸಾಂತಃಪುರಾಸ್ಸಪೌರಾಶ್ಚ ಸ್ವಸ್ವಜಾನಪದೈಸ್ಸಹ ।
ಶೃಂಗಾರಣೀಯಾಽಯೋಧ್ಯೇಯಂ ಪರಿಘಾಸ್ಸಪ್ತ ಸಾದರಂ ॥ ೨೭ ॥

---

೨೩ ೨೪. ಅವರೆಲ್ಲರೂ ಹಾಗೆಯೇ ಆಗಲೆಂದು ಹೇಳಿ ರಾಮನ ಮಾತಿನಂತೆ ಅವರವರ ಸ್ಥಳಗಳಿಗೆ ಹೋದರು. ರಾಮನು ಮುನಿಯೊಡನೆಯೂ, ಕನ್ನಿಕೆಯರೊಡನೆಯೂ, ಮಕ್ಕಳೊಡನೆಯೂ, ಸೀತೆಯೊಡನೆಯೂ ಪುಷ್ಪಕದಲ್ಲಿ ಕುಳಿತು ವನವನ್ನೆಲ್ಲಾ ನೋಡುತ್ತಾ ಆಕಾಶಮಾರ್ಗದಿಂದ ಕ್ಷಣಕಾಲದಲ್ಲಿಯೇ ಅಯೋಧ್ಯೆಗೆ ಹೋದನು.

೨೫. ಅರಮನೆಯ ಒಳಗೆ ಹೋಗುತ್ತಲೂ ಮುತ್ತೈದೆಯರು ಬಂದು ಆರತಿಯನ್ನು ಬೆಳಗಿದರು. ಅನಂತರ ಇವರೆಲ್ಲರೂ ಒಳಗೆ ಹೋದರು. ಆಗ ಈ ಕನ್ನಿಕೆಯರನ್ನೆಲ್ಲಾ ವಸಿಷ್ಠನ ಮನೆಗೆ ಕಳುಹಿಸಿದನು.

೨೬ ೨೭. ಅನಂತರ ರಾಮನು ಸಭೆಯನ್ನು ಸೇರಿಸಿ ಆ ಸಭೆಯ ಮಧ್ಯದಲ್ಲಿ ಸೌಮಿತ್ರಿಯನ್ನು ಕುರಿತು ಇಂತೆಂದನು. ರಾಜರನ್ನೂ, ಸ್ನೇಹಿತರನ್ನೂ, ಮುನಿಗಳನ್ನೂ ಕರೆಸು. ಅವರೆಲ್ಲರೂ ಅವರವರ ಅಂತಃಪುರದವರೊಡನೆಯೂ, ಸ್ನೇಹಿತರೊಡನೆಯೂ, ಪಟ್ಟಣದವರೊಡನೆಯೂ ಬರಲಿ. ಅಯೋಧ್ಯೆಯೆಲ್ಲವನ್ನೂ ಶೃಂಗಾರಮಾಡಿಸು, ಏಳು ಅಗಳುಗಳನ್ನೂ ಶೋಧಿಸು.

ಶೋಧನೀಯಾಸ್ತಥಾ ಸೌಧಸಮೂಹೇಷು ಸುಧಾ ಶುಭಾ ।
ದೇಯಾ ಚಿತ್ರಾಣಿ ಲೇಖ್ಯಾನಿ ಪ್ರಾಸಾದೇಷು ಸಮಂತತಃ ॥ ೨೮ ॥

ದೇವಾಲಯೇಷು ಸರ್ವೇಷು ಸುಧಾ ದೇಯಾ ಮನೋರಮಾ ।
ಲೇಖನೀಯಾನಿ ಚಿತ್ರಾಣಿ ಬಲಯಃ ಸ್ಥಾಪ್ಯತಾಂ ಪೃಥಕ್ ॥ ೨೯ ॥

ಬಂಧನೀಯಾಃ ಪತಾಕಾಶ್ಚ ರೋಪಣೀಯಾ ಧ್ವಜಾ ಅಪಿ ।
ಸಮಂತತಸ್ತೋರಣಾನಿ ಬಂಧನೀಯಾನಿ ಲಕ್ಷ್ಮಣ ॥ ೩೦ ॥

ವೇದ್ಯಃ ಕಾರ್ಯಾ ರುಕ್ಮಮಯ್ಯೋ ಬಂಧನೀಯಾಶ್ಚ ಮಂಟಪಾಃ ।
ಶೃಂಗಾರಣೀಯಾ ಹಸ್ತ್ಯಶ್ವಶಿಬಿಕಾಶ್ಚ ಸಹಸ್ರಶಃ ॥ ೩೧ ॥

ಗಂಧರ್ವೇಭ್ಯಃ ಪನ್ನಗೇಭ್ಯೋ ವಸ್ತುಂ ಗೇಹಾನಿ ವೈ ಪೃಥಕ್ ।
ಕುರುಷ್ವ ನೂತನಾನ್ಯನ್ನವಸ್ತ್ರಾದ್ಯೈಃ ಪೂರಿತಾನಿ ಚ ॥ ೩೨ ॥

೨೮-೨೯. ಅಂತೆಯೇ ಮಹಡಿ ಮನೆಗಳಿಗೆಲ್ಲಾ ಸುಣ್ಣವನ್ನು ಬಳಿಸು. ದೇವಸ್ಥಾನಗಳಿಗೆಲ್ಲಾ ಸುಣ್ಣವನ್ನು ತೊಡಿಸು. ಮಹಡಿಯಮೇಲೆ ಚಿತ್ರಗಳನ್ನು ನಾನಾ ವಿಧದಲ್ಲಿ ಬರೆಸು. ದೇವಸ್ಥಾನಗಳಲ್ಲಿಯೂ ಚಿತ್ರಗಳನ್ನು ಬರೆಸು. ಅಲ್ಲಲ್ಲಿ ಪೂಜಾ ಸಾಮಗ್ರಿಗಳನ್ನು ಬೇರೆ ಬೇರೆಯಾಗಿ ಇಡಿಸು.

೩೦. ಎಲ್ಲಾ ಕಡೆಯಲ್ಲಿಯೂ ಪತಾಕೆಗಳನ್ನು ಕಟ್ಟಿಸು. ಧ್ವಜಗಳನ್ನು ಎತ್ತಿ ನಿಲ್ಲಿಸು. ಎಲ್ಲಾ ಕಡೆಯಲ್ಲಿಯೂ ತೋರಣಗಳನ್ನು ಕಟ್ಟಿಸು.

೩೧. ಮದುವೆಗೋಸ್ಕರ ಚಿನ್ನದ ವೇದಿಕೆಗಳನ್ನು ಮಾಡಿಸು. ಆನೆ, ಕುದುರೆ, ಪಲ್ಲಕ್ಕಿಗಳನ್ನು ಸಾವಿರ ಗಟ್ಟಲೆಯಲ್ಲಿ ಅಲಂಕರಿಸು.

೩೨. ಗಂಧರ್ವರಿಗೂ, ಪನ್ನಗರಿಗೂ ವಾಸಿಸುವುದಕ್ಕೆ ಮನೆಗಳನ್ನು ಬೇರೆ ಬೇರೆಯಾಗಿ ಮಾಡಿಸು. ಅವೆಲ್ಲವೂ ಹೊಸತರಹೆಯಲ್ಲಿಯೂ, ಹೊಸದಾಗಿಯೂ ಇರಲಿ. ಅವೆಲ್ಲದರಲ್ಲಿಯೂ ಅನ್ನವಸ್ತ್ರಗಳು ಕೊರತೆಯಿಲ್ಲದಂತೆ ತುಂಬಿರಲಿ.

ಅನ್ಯಚ್ಚಾಪಿ ಯಥಾಯೋಗ್ಯಂ ಯದ್ಯಜ್ಞಾನಾಸಿ ಲಕ್ಷ್ಮಣ ।
ತತ್ತತ್ಕುರುಷ್ವ ಯನ್ನೋಕ್ತಂ ಮಯಾ ತವ ರಘೂದ್ವಹ ॥ ೩೩ ॥

ತದ್ರಾಮವಚನಂ ಶ್ರುತ್ವಾ ತಥೇತ್ಯುಕ್ತ್ವಾ ಸ ಲಕ್ಷ್ಮಣಃ ।
ತಥಾ ಚಕಾರ ತತ್ಸರ್ವಂ ಯಥಾ ರಾಮೇಣ ಶಿಕ್ಷಿತಃ ॥ ೩೪ ॥

ಅಥ ಗಂಧರ್ವರಾಜಸ್ತು ತಥಾ ವೈ ಸಪ್ತ ಪನ್ನಗಾಃ ।
ಸುಹೃದ್ಭಿಸ್ಸಾವರೋಧಾಸ್ತೇ ಯಯುಶ್ಶೀಘ್ರಂ ಮುದಾನ್ವಿತಾಃ ॥ ೩೫ ॥

ಸರ್ವಾ ಮಾನವರೂಪೇಣ ಹಸ್ತ್ಯಶ್ವರಥಸಂಸ್ಥಿತಾಃ ।
ಗಂಧರ್ವಾಶ್ಚಾಪಿ ಸೈನ್ಯೈಸ್ತೇ ಸಾಕೇತೋಪವನಂ ಯಯುಃ ॥ ೩೬ ॥

ತತಸ್ತಾನಾಗತಾನ್ ಶ್ರುತ್ವಾ ಪ್ರತ್ಯುದ್ಗಮ್ಯ ರಘೂದ್ವಹಃ ।
ನಾನಾವಾದ್ಯನಿನಾದೈಶ್ಚ ನೃತ್ಯೈರಪ್ಸರಸಾಂ ಪುರೀ ॥ ೩೭ ॥

---

೩೩. ಎಲೈ ಲಕ್ಷ್ಮಣನೇ! ನಾನು ಹೇಳಿದುದಲ್ಲದೆ ನಿನಗೆ ಯುಕ್ತವಾಗಿ ಯಾವುದು ತೋರುತ್ತದೆಯೋ ಅವೆಲ್ಲವನ್ನೂ ನಾನು ಹೇಳದಿದ್ದರೂ ಮಾಡಿಸು. ಎಂದನು.

೩೪. ರಾಮನ ಈ ಮಾತನ್ನು ಕೇಳಿ ಲಕ್ಷ್ಮಣನು ಹಾಗೆಯೇ ಆಗಲೆಂದು ಹೇಳಿ ರಾಮನು ಹೇಳಿದಂತೆಯೇ ಎಲ್ಲವನ್ನೂ ಒಂದನ್ನೂ ಬಿಡದಂತೆ ಮಾಡಿಸಿದನು.

೩೫. ಅನಂತರ ಗಂಧರ್ವರಾಜನೂ, ಏಳುಜನ ಪನ್ನಗರೂ, ಸ್ನೇಹಿತ ರೊಡನೆಯೂ, ಅಂತಃಪುರಜನರೊಡನೆಯೂ ಸಂತೋಷದಿಂದ ಅಯೋಧ್ಯೆಗೆ ಬಂದರು.

೩೬. ಅವರೆಲ್ಲರೂ ಮನುಷ್ಯರೂಪವನ್ನು ತಾಳಿ ಆನೆ, ಕುದುರೆ, ರಥಗಳಲ್ಲಿ ಕುಳಿತು ತಮ್ಮ ತಮ್ಮ ಸೈನ್ಯವನ್ನು ತೆಗೆದುಕೊಂಡು ಅಯೋಧ್ಯೆಗೆ ಬಂದರು.

೩೭. ಅವರು ಬಂದುದನ್ನು ರಾಮನು ಕೇಳಿ ಬೇಗನೆ ಹೋಗಿ ನಾನಾ ವಾದ್ಯಗಳೊಡನೆಯೂ, ಅಪ್ಸರಸ್ತ್ರೀಯರ ನರ್ತನದೊಡನೆಯೂ ಅವರನ್ನು ಪಟ್ಟಣಕ್ಕೆ ಕರೆತಂದನು.

ನೀತ್ವಾ ಸಂಸ್ಥಾಪಯಾಮಾಸ ವಿಸ್ತೀರ್ಣೇಷು ಗೃಹೇಷು ಸಃ ।
ಅಥ ತೈರೇಕದಾ ರಾಮಸ್ಸಭಾಯಾಂ ಸಂಸ್ಥಿತಸ್ಸುಖಂ ॥ ೩೮ ॥

ಜ್ಯೋತಿರ್ವಿದಸ್ಸಮಾಹೂಯ ವಸಿಷ್ಠಂ ತತ್ಪುರೋಧಸಃ ।
ಪೃಥಗ್ವಿವಾಹಾನ್ಕರ್ತುಂ ಸ ಮುಹೂರ್ತಾನತಿಮಂಗಳಾನ್ ॥ ೩೯ ॥

ಸಮ್ಯಗ್ವಿಚಾರಯಾಮಾಸ ವರ್ಷಮಧ್ಯೇ ಸವಿಸ್ತರಂ ।
ಜ್ಯೋತಿರ್ವಿದಸ್ತದಾ ಪ್ರೋಚುರ್ಮುಹೂರ್ತಾನತಿಸೌಖ್ಯದಾನ್ ॥ ೪೦ ॥

ಪಕ್ಷಾಂತರೇಣ ವೈಶಾಖೇ ದ್ವೌ ಮುಹೂರ್ತೌ ಶುಭಾವಹೌ ।
ತಥಾ ದದುರ್ಮುಹೂರ್ತೌ ದ್ವೌ ಜ್ಯೇಷ್ಠೇ ಪಕ್ಷಾಂತರೇಣ ತೇ ॥ ೪೧ ॥

ದ್ವಾವೇವ ಮಾರ್ಗಶೀರ್ಷೇಽಪಿ ತ್ರೀನ್ಮಾಘೇ ಫಾಲ್ಗುನೇಽಪಿ ಚ ।
ಏವಂ ದ್ವಾದಶ ನಾರೀಣಾಂ ಚಕ್ರುರ್ಲಗ್ನವಿನಿಶ್ಚಯಂ ॥ ೪೨ ॥

---

೩೮. ಕರೆದುಕೊಂಡು ಬಂದು ಅವರವರಿಗೆ ಕಟ್ಟಿಸಿದ್ದ ದೊಡ್ಡದೊಡ್ಡದಾದ ಮನೆಗಳಲ್ಲಿ ಇಳಿಸಿದನು ಅನಂತರ ಅವರೊಡನೆ ರಾಮನು ಸಭೆಯಲ್ಲಿ ಕುಳಿತುಕೊಂಡನು.

೩೯-೪೦. ಆಗ ಜೋಯಿಸರನ್ನೂ ಕರೆಸಿದನು. ಪುರೋಹಿತನಾದ ವಸಿಷ್ಠನನ್ನೂ ಕರೆಸಿದನು. ಮಕ್ಕಳಿಗೆಲ್ಲಾ ಬೇರೆಬೇರೆಯಾಗಿ ಮದುವೆ ಮಾಡಲು ಮುಹೂರ್ತಗಳನ್ನು ಬೇರೆಬೇರೆಯಾಗಿಡಬೇಕೆಂದೂ ಅವೆಲ್ಲವೂ ಒಂದು ವರ್ಷದೊಳಗೆ ಆಗುವಂತೆ ಇರಬೇಕೆಂದೂ ಹೇಳಿದನು. ಆ ಜೋಯಿಸರು ಶಾಸ್ತ್ರವನ್ನು ನೋಡಿ ಸರಿಯಾದ ಮುಹೂರ್ತಗಳನ್ನು ಬೇರೆಬೇರೆಯಾಗಿಯೇ ಹೇಳಿದರು.

೪೧. ವೈಶಾಖಮಾಸದ ಶುಕ್ಲಪಕ್ಷದಲ್ಲಿ ಒಂದು ಲಗ್ನವೂ, ಕೃಷ್ಣಪಕ್ಷದಲ್ಲಿ ಒಂದುಲಗ್ನವೂ, ಶುಭವಾಗಿರುವುದೆಂದು ಹೇಳಿದರು. ಅಂತೆಯೇ ಜೇಷ್ಠ ಮಾಸದ ಶುಕ್ಲಪಕ್ಷದಲ್ಲಿ ಒಂದನ್ನೂ, ಕೃಷ್ಣಪಕ್ಷದಲ್ಲಿ ಒಂದನ್ನೂ ನಿಶ್ಚಯಿಸಿದರು.

೪೨. ಮತ್ತೆ ಎರಡು ಮುಹೂರ್ತಗಳನ್ನು ಮಾರ್ಗಶೀರ್ಷ ಮಾಸದಲ್ಲಿಯೂ, ಮೂರನ್ನು ಮಾಘ ಮಾಸದಲ್ಲಿಯೂ ಮತ್ತೂ ಮೂರನ್ನು ಫಾಲ್ಗುನ ಮಾಸದಲ್ಲಿಯೂ ಇರಿಸಿದರು. ಈ ರೀತಿಯಾಗಿ ಹನ್ನೆರಡು ಕನ್ಯೆಯರಿಗೂ ಹನ್ನೆರಡು ಮುಹೂರ್ತಗಳನ್ನು ನಿಶ್ಚಯಿಸಿದರು.

ಲವಸ್ಯಾಥಾಂಗದಸ್ಯಾಪಿ ವಿವಾಹೌ ತೈರ್ವಿನಿಶ್ಚಿತೌ ।
ಜ್ಯೋತಿರ್ವಿದ್ಭಿರ್ವಸಿಷ್ಠೇನ ವೈಶಾಖೇ ರಾಘವಾಗ್ರತಃ ॥ ೪೩ ॥

ಚಿತ್ರಕೇತೋಃ ಪುಷ್ಕರಸ್ಯ ವಿವಾಹೌ ತೈರ್ವಿನಿಶ್ಚಿತೌ ।
ಜ್ಯೇಷ್ಠೇ ಮಾಸಿ ಕ್ರಮೇಣೈವ ಶುಕ್ಲಪಕ್ಷೇ ಪೃಥಕ್ ಪೃಥಕ್ ॥ ೪೪ ॥

ತಕ್ಷಸ್ಯಾಥ ಸುಬಾಹೋಶ್ಚ ವಿವಾಹೌ ಮಾರ್ಗಶೀರ್ಷಕೇ ।
ಪಕ್ಷಾಂತರೇಣ ರಾಮಾಗ್ರೇ ಜ್ಯೋತಿರ್ವಿದ್ಭಿರ್ವಿನಿಶ್ಚಿತೌ ॥ ೪೫ ॥

ಯೂಪಕೇತೋರಂಗದಸ್ಯ ಚಿತ್ರಕೇತೋರ್ವಿನಿಶ್ಚಿತಾಃ ।
ಮಾಘಮಾಸೇ ವಿವಾಹಾಶ್ಚ ಜ್ಯೋತಿಶ್ಶಾಸ್ತ್ರವಿಶಾರದೈಃ ॥ ೪೬ ॥

ಪುಷ್ಕರಸ್ಯಾಥ ತಕ್ಷಸ್ಯ ಸುಬಾಹೋಃ ಫಾಲ್ಗುನೇ ಶುಭೇ ।
ವಿವಾಹಾ ನಿಶ್ಚಿತಾಶ್ಶಿಷ್ಯ ರಾಮಾಗ್ರೇ ಗಣಕೈಸ್ತದಾ ॥ ೪೭ ॥

---

೪೩. ಲವನಿಗೂ, ಅಂಗದನಿಗೂ ವಿವಾಹವನ್ನು ವೈಶಾಖ ಮಾಸದಲ್ಲಿ ವಸಿಷ್ಠನ ಎದುರಿಗೆ ಆ ಜೋಯಿಸನು ನಿಷ್ಕರ್ಷೆ ಮಾಡಿದನು.

೪೪–೪೭. ಚಿತ್ರಕೇತುವಿಗೂ, ಪುಷ್ಕರನಿಗೂ ಜೇಷ್ಠ ಮಾಸದಲ್ಲಿ ಬೇರೆಬೇರೆಯಾಗಿ ನಿಶ್ಚಯಿಸಿದರು. ತಕ್ಷಕನಿಗೂ, ಸುಬಾಹುವಿಗೂ ಮಾರ್ಗಶೀರ್ಷ ಮಾಸದಲ್ಲಿ ಪಕ್ಷಾಂತರಗಳಿಂದ ಮುಹೂರ್ತವು ನಿಶ್ಚಿತವಾಯಿತು. ಯೂಪಕೇತುವಿಗೂ, ಅಂಗದನಿಗೂ, ಚಿತ್ರಕೇತುವಿಗೂ ಮಾಘಮಾಸದಲ್ಲಿ ಲಗ್ನಗಳು ನಿಷ್ಕರ್ಷೆಯಾದುವು. ಪುಷ್ಕರ, ತಕ್ಷ, ಸುಬಾಹು ಇವರಿಗೆ ಪಾಲ್ಗುನ ಮಾಸದಲ್ಲಿ ಲಗ್ನಗಳು ನಿಶ್ಚಿತವಾದುವು. ಇವೆಲ್ಲವೂ ಕೂಡ ಆ ರಾಮನ ಎದುರಿಗೇ ನಿಶ್ಚಿತವಾದುವು.

ಏವಂವಿನಿಶ್ಚಿತಾಸ್ಸರ್ವೇ ವಿವಾಹಾ ದ್ವಾದಶ ಕ್ರಮಾತ್ ।
ಜ್ಯೋತಿರ್ವಿದ್ಭಿಶ್ಚ ತಾನ್ಸೃತ್ವಾ ಗಣಕಾನರ್ಚಯದ್ವಿಭುಃ ॥ ೪೮ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ ವಾಲ್ಮೀಕೀಯೇ ವಿವಾಹಕಾಂಡೇ ದ್ವಾದಶವಿವಾಹ ವಿನಿಶ್ಚಯೋ ನಾಮ ಷಷ್ಠಸ್ಸರ್ಗಃ

---

೪೮. ಈ ರೀತಿಯಾಗಿ ಜೋಯಿಸರು ಹನ್ನೆರಡು ಮುಹೂರ್ತಗಳನ್ನೂ ಕ್ರಮವಾಗಿ ರಾಮನ ಎದುರಿಗೇನೇ ನಿಶ್ಚಯಮಾಡಿದರು. ಜೋಯಿಸರು ಈ ರೀತಿಯಾಗಿ ನಿಶ್ಚಯಿಸಿದಮೇಲೆ ರಾಮನು ಅವರಿಗೆ ಬಹುಮಾನಗಳನ್ನು ಕೊಟ್ಟು ಗೌರವಿಸಿ ಪೂಜಿಸಿದನು.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ ದ್ವಾದಶವಿವಾಹ ನಿಶ್ಚಯವೆಂಬ ಆರನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ ಆರನೆಯ ಸರ್ಗದ ಸಾರಾಂಶವು

ಆ ಗಂಧರ್ವರೂ ನಾಗರೂ ಅವರವರ ಕನ್ಯಿಕೆಯರನ್ನು ರಾಮನ ಮಕ್ಕಳಿಗೆ ಕೊಡಬೇಕೆಂದು ಯೋಚಿಸಿ ರಾಮನನ್ನು ಕೇಳಿದರು. ರಾಮನು ಸೀತೆಯೊಡನೆಯೂ ಅಗಸ್ತ್ಯನೊಡನೆಯೂ ಆಲೋಚಿಸಿ ಒಪ್ಪಿಕೊಂಡನು. ಅಂತೆಯೇ ಅವರೆಲ್ಲರೂ ತಕ್ಕಸಿದ್ಧತೆಯನ್ನು ಮಾಡಿಕೊಂಡು ಬರಲು ಅವರವರ ಸ್ಥಾನಗಳಿಗೆ ಹೋದರು. ಅಯೋಧ್ಯೆಯಲ್ಲಿಯೇ ವಿವಾಹವು ನಿಶ್ಚಿತವಾಯಿತು.

ಶ್ರೀರಾಮನು ಲಕ್ಷ್ಮಣನಿಗೆ ಹೇಳಿ ರಾಜಧಾನಿಯನ್ನು ಅಲಂಕರಿಸಿದನ್ನು ಬರತಕ್ಕವರಿಗೆಲ್ಲಾ ಬೇಕಾಗುವ ಅನುಕೂಲ್ಯಗಳನ್ನು ಕಲ್ಪಿಸಿದನು. ಇತ್ತ ನಾಗರೂ ಗಂಧರ್ವರೂ ಸಿದ್ಧರಾಗಿ ಬಂದರು. ರಾಮನು ಮುಹೂರ್ತವನ್ನು ನಿಶ್ಚಯಿಸಿ ತನ್ನ ಮಕ್ಕಳ ಮತ್ತು ತಮ್ಮಂದಿರಮಕ್ಕಳ ಜಾತಕಗಳು ಆ ಕನ್ನಿಕೆಯರ ಜಾತಕಗಳಲ್ಲಿ ಯಾವ ಯಾವುದಕ್ಕೆ ಸರಿಹೋಗುವುವೋ ಅದನ್ನು ಅನುಸರಿಸಿ ಲಗ್ನಗಳನ್ನಿಟ್ಟು ಪಕ್ಷ, ಮಾಸಗಳ ಹತ್ತಿರವಾಗಿಯೇ ಒಂದೇ ವರ್ಷದಲ್ಲಿ ಆ ಹನ್ನೆರಡು ವಿವಾಹಗಳನ್ನೂ ನೆರವೇರಿಸಿದನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ವಿವಾಹಕಾಂಡೇ

॥ ಸಪ್ತಮಸ್ಸರ್ಗಃ ॥

॥ ಶ್ರೀ ರಾಮದಾಸ ಉವಾಚ ॥

ಅಥ ತೇ ಗಣಕಾಸ್ಸರ್ವೇ ವಸಿಷ್ಠಸ್ತತ್ಪುರೋಧಸಃ ।
ಕುಮಾರೀಣಾಂ ವಿಭಾಗಾಂಶ್ಚ ಚಕ್ರುಃ ಶ್ರೀರಾಘವಾಗ್ರತಃ ॥ ೧ ॥

ಕಂಜಾನನಾಂ ಲವಾಯಾಥ ಕಂಜಾಕ್ಷೀಮಂಗದಾಯ ಚ ।
ಗಣಕಾ ನಿಶ್ಚಯಂ ಚಕ್ರುಃ ಕಂಜಾಂಘ್ರೀಂ ಚಿತ್ರಕೇತವೇ ॥ ೨ ॥

ಕಲಾವತೀಂ ಪುಷ್ಕರಾಯ ತಥಾ ತಕ್ಷಾಯ ಕಾಲಿಕಾಂ ।
ಸುಬಾಹವೇ ಚ ಕಮಲಾಂ ಮಾಲತೀಂ ಯೂಪಕೇತವೇ ॥ ೩ ॥

ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ ಏಳನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು–ಆಗ ರಾಮನ ಎದುರಿಗೆ ಜೋತಿಷ್ಕರೂ ವಸಿಷ್ಠನೂ, ಯಾವ ಯಾವ ಕನ್ಯೆಯರನ್ನು ಯಾರು ಯಾರಿಗೆ ಕೊಟ್ಟು ವಿವಾಹಮಾಡಬೇಕೆಂಬ ವಿಭಾಗವನ್ನು ಇಂತೆಂದು ಮಾಡಿದರು.

೨–೫. ಕಂಜಾನನೆಯನ್ನು ಲವನಿಗೂ, ಕಂಜಾಕ್ಷಿಯನ್ನು ಅಂಗದನಿಗೂ ಕಂಜಾಂಘ್ರಿಯನ್ನು ಚಿತ್ರಕೇತುವಿಗೂ, ಕಲಾವತಿಯನ್ನು ಪುಷ್ಕರನಿಗೂ ಕಾಲಿಕೆಯನ್ನು ತಕ್ಷಕನಿಗೂ, ಕಮಲೆಯನ್ನು ಸುಬಾಹುವಿಗೂ, ಮಾಲತಿಯನ್ನು

ಗಣಕೈಸ್ಸಪ್ತ ತಾ ಏವಂ ನಾಗಕನ್ಯಾ ವಿನಿಶ್ಚಿತಾಃ ।
ಚಂದ್ರಿಕಾಮಂಗದಾಯಾಥ ಚಂದ್ರಾಸ್ಯಾಂ ಚಿತ್ರಕೇತವೇ ॥ ೪ ॥

ಚಂಚಲಾಖ್ಯಾಂ ಪುಷ್ಕರಾಯ ತಕ್ಷಾಯ ಚಪಲಾಂ ತಥಾ ।
ಸುಬಾಹವೇ ತು ಹ್ಯಚಲಾಂ ಪ್ರೋಚುಸ್ತೇ ಗಣಕಾದಯಃ ॥ ೫ ॥

ಏವಂ ಗಂಧರ್ವಕನ್ಯಾಸ್ತಾಃ ಪಂಚವಿಪ್ರೈರ್ವಿನಿಶ್ಚಿತಾಃ ।
ಏವಂ ವಿನಿಶ್ಚಯಂ ಕೃತ್ವಾ ಗಣಕಾದೀನ್ ರಘೂತ್ತಮಃ ॥ ೬ ॥

ವಿಸೃಜ್ಯ ಮೈಥಿಲೀಂ ಗತ್ವಾ ಸರ್ವಂ ವೃತ್ತಂ ನ್ಯವೇದಯತ್ ।
ತತೋ ಯಯುಃ ಕೋಟಿಶಸ್ತೇ ಪಾರ್ಥಿವಾಶ್ಚ ಮುನೀಶ್ವರಾಃ ॥ ೭ ॥

ಸಪ್ತದ್ವೀಪಾಂತರಸ್ಥಾಶ್ಚ ಸಾವರೋಧಾಸ್ಸಬಾಲಕಾಃ ।
ನಾನಾವಾಹನ ಸಂಸ್ಥಾಶ್ಚ ಪೌರೈರ್ಜಾನಪದೈರ್ನಿಜೈಃ ॥ ೮ ॥

ಯೂಪಕೇತುವಿಗೂ, ಚಂದ್ರಿಕೆಯನ್ನು ಅಂಗದನಿಗೂ, ಚಂದ್ರಾಸ್ಯೆಯನ್ನು ಚಿತ್ರಕೇತುವಿಗೂ, ಚಂಚಲೆಯನ್ನು ಪುಷ್ಕರನಿಗೂ, ಚಪಲೆಯನ್ನು ತಕ್ಷಕನಿಗೂ, ಅಚಲೆಯನ್ನು ಸುಬಾಹುವಿಗೂ ಕೊಡಬಹುದೆಂದು ಆ ಗಣಕರು ದೈವಬಲವನ್ನು ನೋಡಿ ನಿಶ್ಚಯಿಸಿದರು.

೬-೭. ಆ ಜೋಯಿಸರು ಹಾಗೆ ಐದುಜನ ಗಂಧರ್ವಕನ್ಯೆಯರನ್ನೂ ಏಳುಜನ ನಾಗಕನ್ಯೆಯರನ್ನೂ ನಿಷ್ಕರ್ಷೆಮಾಡಿದರು. ಈ ರೀತಿಯಾಗಿ ನಿಷ್ಕರ್ಷಿಸಿದಮೇಲೆ ತಾನು ಆ ಜೋಯಿಸರನ್ನು ಕಳುಹಿಸಿ ಸೀತೆಯ ಬಳಿಗೆ ಬಂದು ಅಲ್ಲಿ ತಾನು ನಡೆಸಿದ ವಿಷಯಗಳೆಲ್ಲವನ್ನೂ ತಿಳಿಸಿದನು. ಅನಂತರ ಕೋಟಿಗಟ್ಟಲೆಯಲ್ಲಿ ರಾಜರೂ, ಋಷಿಗಳೂ, ಆ ಅಯೋಧ್ಯೆಗೆ ಬರುವುದಕ್ಕೆ ಮೊದಲು ಮಾಡಿದರು.

೮. ಸಪ್ತದ್ವೀಪಗಳಲ್ಲಿದ್ದ ರಾಜರೆಲ್ಲರೂ ತಮ್ಮ ಅಂತಃಪುರದವರೊಡನೆಯೂ, ಬಾಲಕರೊಡನೆಯೂ, ಪಟ್ಟಣಿಗರು, ದೇಶದವರು, ಸ್ನೇಹಿತರು ಇವರೊಡನೆಯೂ, ಅಯೋಧ್ಯೆಗೆ ಬಂದರು.

ತೈಸ್ಸಾಯೋಧ್ಯಾ ಪುರೀ ವ್ಯಾಪ್ತಾ ವಿರೇಜೇ ನಿತರಾಂ ತದಾ ।
ಯಯೌ ವಿಭೀಷಣಶ್ಚಾಥ ಸುಗ್ರೀವೋಪಿ ಪ್ಲವಂಗಮೈಃ ॥ ೯ ॥

ಯಯೌ ಸ ಭೂರಿಕೀರ್ತಿಶ್ಚ ಪುತ್ರಾಭ್ಯಾಂ ಶೀಘ್ರಮಾದರಾತ್ ।
ಯಯೌ ಸ ಜನಕಶ್ಚಾಪಿ ಯುಧಾಜಿತ್ಸ ಯಯೌ ತದಾ ॥ ೧೦ ॥

ಕೌಸಲ್ಯಾಯಾಸ್ಸುಮಿತ್ರಾಯಾ ಬಾಂಧವಾದ್ಯಾಸಮಾಯಯುಃ ।
ಅಥ ರಾಮಸ್ತು ವೈಶಾಖಶುಕ್ಲೇ ದ್ವಿಜವರೈಸ್ಸಹ ॥ ೧೧ ॥

ಪುರೋಧಸಾ ಸುಹೃದ್ಭಿಶ್ಚ ಸ್ನಾನಮಭ್ಯಂಗಪೂರ್ವಕಂ ।
ಕೃತ್ವಾ ಲವಾಯ ಮಾಂಗಲ್ಯಸ್ನಾನಾರ್ಥಂ ಸ್ತ್ರೀಃ ಪ್ರಚೋದಯತ್ ॥ ೧೨ ॥

ತತೋ ಮುಹೂರ್ತಸಮಯೇ ವಧೂಚ್ಛಿಷ್ಟಾಂ ನಿಶಾಂ ಲವಂ ।
ಸಮ್ಯಕ್ ಲಿಪ್ಯ ಸುತೈಲಾದ್ರಾಂ ಸೀತಾದ್ಯಾ ಮಾತರಸ್ತದಾ ॥ ೧೩ ॥

೯–೧೦. ಅವರಿಂದ ಅಯೋಧ್ಯೆಯು ತುಂಬಿ ಬಹುವಾಗಿ ಪ್ರಕಾಶಿಸಿತು. ವಿಭೀಷಣನೂ, ಸುಗ್ರೀವನೂ ಅವರವರ ಸಂಗಡಿಗರೊಡನೆ ಬಂದರು. ಭೂರಿಕೀರ್ತಿಯು ತನ್ನ ಮಕ್ಕಳೊಂದಿಗೆ ಬೇಗನೆ ಬಂದನು. ಜನಕನೂ, ಯುಧಾಜಿತ್ತುವೂ ಬಂದರು.

೧೧–೧೨. ಕೌಸಲ್ಯೆ ಸುಮಿತ್ರೆಯರ ಬಂಧುಗಳೂ ಬಂದರು. ರಾಮನು ವೈಶಾಖಮಾಸದಲ್ಲಿ ಪುರೋಹಿತರೊಡನೆಯೂ ಬ್ರಾಹ್ಮಣರೊಡನೆಯೂ ಅಭ್ಯಂಜನ ಸ್ನಾನವನ್ನು ಮಾಡಿ ಲವನಿಗೆ ಮಂಗಳಸ್ನಾನವನ್ನು ಮಾಡಿಸಲು ಮುತ್ತೈದೆಯರಿಗೆ ಹೇಳಿದನು.

೧೩. ಅನಂತರ ಲವನು ಸುವಾಸಿನಿಯರ ಪ್ರಾರ್ಥನೆಯಾದಮೇಲೆ ಶೇಷವಾದ ಮಂಗಳಕರವಾದ, ಅರಿಸಿನವನ್ನು ತೊಡೆದುಕೊಂಡು ಎಣ್ಣೆಯನ್ನು ಲೇಪಿಸಿಕೊಂಡು ಸ್ನಾನವನ್ನು ಮಾಡಿದನು. ಸೀತೆಯೇ ಮುಂತಾದ ತಾಯಿಯರೂ ಅಭ್ಯಂಜನ ಸ್ನಾನವನ್ನು ಮಾಡಿದರು.

ಸ್ವಯಂ ಸಸ್ನುರ್ಮುದಾ ಸರ್ವಾಸ್ತೂರ್ಯನಾದೈಸ್ಸಬಾಲಕಾಃ ।
ಅಥ ರಾಮೋದೇವಕಸ್ಯ ಪ್ರತಿಷ್ಠಾಂ ಬ್ರಾಹ್ಮಣೈಸ್ಸಹ ॥ ೧೪ ॥

ಆದೌ ಕೃತ್ವಾ ಗಣಪತೇಃ ಪೂಜಾಂ ಸಮ್ಯಗ್ಯಥಾವಿಧಿ ।
ಪುಣ್ಯಾಹಾದಿತ್ರಯಂ ಚಾಪಿ ಕೃತ್ವಾ ಪೂರ್ವಂ ಸವಿಸ್ತರಂ ॥ ೧೫ ॥

ಚಕಾರ ವಿಧಿವತ್ತುಷ್ಟಃ ಪೂಜಯಾಮಾಸ ವೈ ಮುನೀನ್ ।
ತತೋ ಮುಹೂರ್ತಸಮಯೇ ಗತ್ವಾ ಪನ್ನಗಮಂದಿರಂ ॥ ೧೬ ॥

ಲವಸ್ಯ ಕಂಜನಯನಾ ವಿವಾಹಂ ವಿನಿವರ್ತಯತ್ ।
ಚತುರ್ಥೇ ದಿವಸೇ ವಂಶಪಾತ್ರಸ್ಥೈ ರತ್ನದೀಪಕೈಃ ॥ ೧೭ ॥

ನೀರಾಜಿತಸ್ತದಾ ಲವೋ ವಿರೇಜೇ ಮಂಟಪೇ ಸ್ತ್ರಿಯಾ ।
ತತೋ ನಿಜಗೃಹಂ ಗತ್ವಾ ಪೂರ್ವೋಕ್ತೈರುತ್ಸವಾದಿಭಿಃ ॥ ೧೮ ॥

---

೧೪. ಆವಾಗ ಮಂಗಳವಾದ್ಯಗಳು ಮೊಳಗುತ್ತಿದ್ದುವು. ಅನಂತರ ರಾಮನು ಬ್ರಾಹ್ಮಣರೊಡನೆಯೂ, ಪುರೋಹಿತರೊಡನೆಯೂ ಮನೆ ದೇವರ ಪ್ರತಿಷ್ಠೆಯನ್ನು ಮಾಡಿದನು.

೧೫. ಮೊದಲು ಶಾಸ್ತ್ರದ ರೀತಿಯಾಗಿ ಗಣಪತಿಯ ಪೂಜೆಯನ್ನು ಮಾಡಿದನು. ಅನಂತರ ಪುಣ್ಯಾಹ, ನಾಂದಿ, ನವಗ್ರಹಪೂಜೆಗಳನ್ನೂ ಮಾಡಿದನು.

೧೬. ಅನಂತರ ಮುನಿಗಳಿಗೂ ಪೂಜೆಯನ್ನು ಮಾಡಿದನು. ಎಂದರೆ ಸಭಾಪೂಜೆಯನ್ನು ಮಾಡಿದನು. ಅನಂತರ ಮುಹೂರ್ತಸಮಯವು ಬರಲು ಆ ಪನ್ನಗರ ಮನೆಗೆ ಹೋದನು.

೧೭–೧೮. ಲವನಿಗೆ ಕಂಜನಯನೆಯೊಡನೆ ವಿವಾಹವನ್ನು ನೆರವೇರಿಸಿದನು. ನಾಲ್ಕನೆಯ ದಿವಸ ಬಿದರಿನ ಪಾತ್ರೆಯಲ್ಲಿ ರತ್ನದ ದೀಪಗಳನ್ನಿಟ್ಟು ಆರತಿಯನ್ನು ಮಾಡುತ್ತಿರಲು ಮಂಟಪದಲ್ಲಿ ಲವನು ಹೆಂಡತಿಯೊಡನೆ ರಮ್ಯವಾಗಿ ಕಾಣಿಸುತ್ತಿದ್ದನು. ಅನಂತರ ರಾಮನು ಲವನನ್ನು ಅವನ ನೂತನವಧುವಿನೊಡನೆ ಉತ್ಸವದಿಂದ ಮನೆಗೆ ಕರೆದುಕೊಂಡು ಹೋದನು.

ಲವೇನ ಕಾರಯಾಮಾಸ ಲಕ್ಷ್ಮೀಪೂಜನಮುತ್ತಮಂ ।
ತತೋ ದಾನಾನ್ಯನೇಕಾನಿ ದದೌ ಸ ರಘುನಂದನಃ ॥ ೧೯ ॥

ತತಸ್ತೇ ಪಾರ್ಥಿವಾಸ್ಸರ್ವೇ ತಥಾ ತೇ ಪನ್ನಗಾ ಅಪಿ ।
ಸುಹೃದಶ್ಚಾಥ ಗಂಧರ್ವಾಃ ಪೌರಾ ಜನಪದಾದಯಃ ॥ ೨೦ ॥

ಪೂಜಯಾಮಾಸುಃ ಶ್ರೀರಾಮಂ ವಸ್ತ್ರೈರಾಭರಣಾದಿಭಿಃ ।
ತಥಾ ತಾನ್ ಲಕ್ಷ್ಮಣಾದೀಂಶ್ಚ ಕುಶಾದ್ಯಾಂಶ್ಚಾಪಿ ಬಾಲಕಾನ್ ॥ ೨೧ ॥

ತತಸ್ತಾ ನೃಪಪತ್ನ್ಯಶ್ಚ ಸುಹೃತ್ಪತ್ನ್ಯಃ ಪೃಥಕ್ ಪೃಥಕ್ ।
ನಾಗಪತ್ನ್ಯಶ್ಚ ಗಂಧರ್ವಪತ್ನ್ಯಶ್ಚಾನ್ಯಾಸ್ತಥಾ ಸ್ತ್ರಿಯಃ ॥ ೨೨ ॥

ಸೀತಾದ್ಯಾಃ ಪೂಜಯಾಮಾಸುಃ ವಸ್ತ್ರೈರಾಭರಣಾದಿಭಿಃ ।
ಸೀತಾಪಿ ತಾಸ್ಸುಹೃತ್ಪತ್ನೀಸ್ತಥಾ ಪಾರ್ಥಿವಕಾಮಿನೀಃ ॥ ೨೩ ॥

---

೧೯. ಆ ಮನೆಯಲ್ಲಿ ಲವನ ಕೈಯಿಂದ ಉತ್ತಮವಾದ ಲಕ್ಷ್ಮೀ ಪೂಜೆಯನ್ನು ಮಾಡಿಸಿದನು ಅನಂತರ ಆ ರಘುನಂದನನು ಅನೇಕ ಬಗೆಯಾದ ದಾನಗಳನ್ನು ಎಲ್ಲರಿಗೂ ಕೊಟ್ಟನು.

೨೦–೨೧. ಅನಂತರ ರಾಜರೂ, ಸ್ನೇಹಿತರೂ ಪಟ್ಟಣಿಗರೂ, ಪನ್ನಗರೂ, ಗಂಧರ್ವರೂ, ಎಲ್ಲರೂ ಕೂಡ ವಸ್ತ್ರಭೂಷಣಗಳನ್ನು ಕೊಟ್ಟು ರಾಮನನ್ನು ಗೌರವಿಸಿದರು. ಅಂತೆಯೇ ಲಕ್ಷ್ಮಣ ಭರತ ಶತ್ರುಘ್ನರಿಗೂ, ಕುಶನೇ ಮುಂತಾದವರಿಗೂ ವಸ್ತ್ರಾಭರಣಗಳನ್ನು ಕೊಟ್ಟು ಗೌರವಿಸಿದರು.

೨೨–೨೩. ಅನಂತರ ರಾಜಪತ್ನಿಯರೂ ಸ್ನೇಹಿತರ ಪತ್ನಿಯರೂ, ನಾಗಪತ್ನಿಯರೂ, ಗಂಧರ್ವಪತ್ನಿಯರೂ, ಪೌರಸ್ತ್ರೀಯರೂ ಎಲ್ಲರೂ ಸೀತೆಯೇ ಮುಂತಾದವರಿಗೆ ವಸ್ತ್ರಾಭರಣಗಳನ್ನು ಕೊಟ್ಟು ಪೂಜಿಸಿದರು. ಸೀತೆಯೂ ಕೂಡ ಆದಕ್ಕೆ ಪ್ರತಿಯಾಗಿ ಅವರಿಗೆ ವಸ್ತ್ರಾಭರಣಗಳನ್ನು ಕೊಟ್ಟು ಪೂಜಿಸಿದಳು.

ಪೂಜಯಾಮಾಸ ವಿಧಿವದ್ವಸ್ತ್ರೈರಾಭರಣಾದಿಭಿಃ ।
ರಾಮೋಽಪಿ ಸುಹೃದಃ ಪೌರಾನ್ ಗಂಧರ್ವಾನ್ ಪನ್ನಗಾನ್ನೃಪಾನ್ ॥ ೨೪ ॥

ವಸ್ತ್ರೈರಾಭರಣಾದ್ಯೈರ್ಯಾನೈಃ ಪೂಜಯಾಮಾಸ ಸಾದರಂ ।
ಏವಂ ವೈಶಾಖಮಾಸೇ ತು ಸಿತೇ ಪಕ್ಷೇ ಲವಸ್ಯ ಚ ॥ ೨೫ ॥

ಕೃತ್ವಾ ವಿವಾಹಂ ರಾಮಸ್ಸ ಕೃಷ್ಣಪಕ್ಷೇತು ಮಾಧವೇ ।
ಚಕಾರ ಪೂರ್ವವದ್ಧರ್ಷಾದ್ವಿವಾಹಂ ಹ್ಯಂಗದಸ್ಯ ಚ ॥ ೨೬ ॥

ಚಿತ್ರಕೇತೋಃ ಪುಷ್ಕರಸ್ಯ ವಿವಾಹೌ ರಘುನಂದನಃ ।
ಜೇಷ್ಠಮಾಸೇ ಶುಕ್ಲಕೃಷ್ಣಪಕ್ಷಯೋರಕರೋನ್ಮುದಾ ॥ ೨೭ ॥

ತತಸ್ಸರ್ವಾನ್ ನೃಪಾದೀಂಶ್ಚ ದದಾವಾಜ್ಞಾಂ ಸುಪೂಜಿತಾನ್ ।
ತತಃ ಪುನಸ್ತಾನಾಹೂಯ ಪೂರ್ವವನ್ಮಾರ್ಗಶೀರ್ಷಕೇ ॥ ೨೮ ॥

೨೪–೨೫. ರಾಮನೂ ಕೂಡ ಸ್ನೇಹಿತರನ್ನೂ, ಗಂಧರ್ವರನ್ನೂ, ಪನ್ನಗರನ್ನೂ, ರಾಜರನ್ನೂ ಗೌರವಿಸಿ ವಸ್ತ್ರ, ಆಭರಣದಾನಗಳನ್ನು ಅವರಿಗೆ ಕೊಟ್ಟನು. ಈ ರೀತಿಯಾಗಿ ವೈಶಾಖಮಾಸದ ಶುಕ್ಲಪಕ್ಷದಲ್ಲಿ ಲವನಿಗೆ ವಿವಾಹವನ್ನು ಮಾಡಿದನು.

೨೬–೨೭. ಅನಂತರ ಆ ವೈಶಾಖಮಾಸದ ಕೃಷ್ಣಪಕ್ಷದಲ್ಲಿ ಬಹುವಾದ ಉತ್ಸಾಹದಿಂದ ಅಂಗದನಿಗೆ ವಿವಾಹವನ್ನು ಮಾಡಿದನು. ಅಂತೆಯೇ ರಾಮನು ಜ್ಯೇಷ್ಠಶುಕ್ಲಪಕ್ಷದಲ್ಲಿ ಚಿತ್ರಕೇತುವಿಗೂ ಬಹುಳವಲ್ಲಿ ಪುಷ್ಕರನಿಗೂ ಸಂತೋಷದಿಂದ ವಿವಾಹಕಾರ್ಯವನ್ನು ನೆರವೇರಿಸಿದನು.

೨೮. ಅನಂತರ ರಾಜರೆಲ್ಲರಿಗೂ ಅವರವರ ಸ್ಥಳಕ್ಕೆ ಹೊರಟು ಹೋಗುವಂತೆ ಅಪ್ಪಣೆಮಾಡಿದನು. ಮತ್ತೆ ಅವರೆಲ್ಲರನ್ನೂ ಮಾರ್ಗಶೀರ್ಷಮಾಸದಲ್ಲಿ ಕರೆಸಿದನು.

ತಕ್ಷಸ್ಯಾಥ ಸುಬಾಹೋಶ್ಚ ವಿವಾಹಾವಕರೋತ್ಪ್ರಭುಃ ।
ತತಸ್ಸರ್ವಾನ್ ನೃಪಾನ್ ರಾಮೋ ದದಾವಾಜ್ಞಾಂ ಸುಹೃಜ್ಜನಾನ್ ॥ ೨೯ ॥

ತತಃ ಪುನಸ್ತಾನಾಹೂಯ ಮಾಘಮಾಸೇ ಸುಹೃನ್ನೃಪಾನ್ ।
ಯೂಪಕೇತೋರಂಗದಸ್ಯ ಚಿತ್ರಕೇತೋರ್ಮಹೋತ್ಸವೈಃ ॥ ೩೦ ॥

ವಿವಾಹಾನಕರೋದ್ರಾಮಃ ಪಾರ್ಥಿವಾನ್ನ ವಿಸರ್ಜಯೇತ್ ।
ಪುಷ್ಕರಸ್ಯಾಥ ತಕ್ಷಸ್ಯ ಸುಬಾಹೋಶ್ಚ ಮಹೋತ್ಸವೈಃ ॥ ೩೧ ॥

ಚಕಾರ ಫಾಲ್ಗುನೇ ಮಾಸಿ ವಿವಾಹಾನ್ ಜಾನಕೀಧವಃ ।
ಏವಂ ಕೃತ್ವಾ ವಿವಾಹಾಂಶ್ಚ ರಾಮೋ ದ್ವಾದಶ ಸಾದರಂ ॥ ೩೨ ॥

ನೃಪೈಸ್ಸಂಪೂಜಿತಸ್ಸರ್ವಾನ್ ಪೂಜ್ಯಾಜ್ಞಾಂ ನೃಪತೀನ್ ದದೌ ।
ಪೂಜಯಿತ್ವಾ ಮುನೀಂಶ್ಚಾಪಿ ವಿಸಸರ್ಜ ರಘೂದ್ವಹಃ ॥ ೩೩ ॥

---

೨೯. ಆ ಮಾರ್ಗಶಿರಮಾಸದಲ್ಲಿ ತಕ್ಷ, ಸುಬಾಹುಗಳಿಗೆ ವಿವಾಹವು ನಡೆಯಿತು. ಅನಂತರ ರಾಜರನ್ನು ಮತ್ತೆ ಅವರವರ ಸ್ಥಳಗಳಿಗೆ ಕಳುಹಿಸಿಬಿಟ್ಟನು.

೩೦. ಅನಂತರ ಅವರೆಲ್ಲರನ್ನೂ ಮಾಘಮಾಸದಲ್ಲಿ ಮತ್ತೆ ಕರೆಸಿದನು. ಆಗ ಯೂಪಕೇತುವಿಗೂ, ಅಂಗದನಿಗೂ, ಚಿತ್ರಕೇತುವಿಗೂ, ಅಟ್ಟಹಾಸದಿಂದ ವಿವಾಹವನ್ನು ನೆರವೇರಿಸಿದನು.

೩೧-೩೨. ಆಗ ಒಬ್ಬರನ್ನೂ ಅವರವರ ಸ್ಥಳಕ್ಕೆ ಕಳುಹಿಸಲಿಲ್ಲ. ಅನಂತರ ಫಾಲ್ಗುಣಮಾಸದಲ್ಲಿ ಪುಷ್ಕರನಿಗೂ, ತಕ್ಷಕನಿಗೂ, ಸುಬಾಹುವಿಗೂ, ವಿವಾಹವನ್ನು ಮಾಡಿದನು. ಈ ರೀತಿಯಾಗಿ ರಾಮನು ಹನ್ನೆರಡು ವಿವಾಹಗಳನ್ನೂ ಆದರದಿಂದ ಮಾಡಿದನು.

೩೩. ಆಗ ಆ ರಾಜರೇ ಮುಂತಾದವರು ರಾಮನಿಗೆ ವಸ್ತ್ರಾಭರಣಾದಿಗಳನ್ನು ಕೊಟ್ಟು ಗೌರವಿಸಿದರು. ಅಂತೆಯೇ ತಾನೂ ಅವರನ್ನು ಗೌರವಿಸಿದನು. ಅಂತೆಯೇ ಅವರೆಲ್ಲರಿಗೂ ಹೋಗುವಂತೆ ಅಪ್ಪಣೆಯನ್ನು ಕೊಟ್ಟನು. ಅಲ್ಲಿಗೆ ಬಂದಿದ್ದ ಮುನಿಗಳನ್ನು ಪೂಜಿಸಿ ಕಳುಹಿಸಿಕೊಟ್ಟನು.

ಗಂಧರ್ವಪನ್ನಗಾಸ್ಸಪ್ತ ತೇ ಸಾಕೇತೇ ತ್ರ ಸಂಸ್ಥಿತಾಃ ।
ರಾಮಂ ಮುಕ್ತ್ವಾ ನ ತೇ ನೈಜಂ ಸ್ಥಲಂ ಜಗ್ಮುರ್ಮುದಾನ್ವಿತಾಃ ॥ ೩೪ ॥

ಮಂತ್ರಿಣಃ ಪ್ರೇಷಯಾಮಾಸುಃ ಸ್ವಸ್ವರಾಜ್ಯೇಷು ತೇ ಪೃಥಕ್ ।
ಯದಾರಾಮಸ್ಸ ವೈಕುಂಠಮಗ್ರೇ ಗಚ್ಛತಿ ಕಾಲತಃ ॥ ೩೫ ॥

ತದಾ ಸಾಂತಾನಿಕಾನ್ ಲೋಕಾಂಸ್ತೇ ಗಚ್ಛಂತಿ ನ ಸಂಶಯಃ ।
ಅಥ ರಾಮಃ ಪನ್ನಗಾನಾಂ ಗಂಧರ್ವಸ್ಯಾಥ ಸದ್ಮಸು ॥ ೩೬ ॥

ವಾರ್ಷಿಕೇಷೂತ್ಸವೇಷ್ವತ್ರ ಸಾವರೋಧಸ್ಸುಹೃಜ್ಜನೈಃ ।
ಪೌರೈಸ್ಸ್ವೀಯೈರ್ಭೋಜನಾದಿ ಗತ್ವಾ ಹ್ಯಂಗೀಕರೋತ್ಸದಾ ॥ ೩೭ ॥

ಸದಾಮಹೋತ್ಸವಾಶ್ಚಾಸನ್ನಯೋಧ್ಯಾಯಾಂ ಗೃಹೇ ಗೃಹೇ ।
ಆನಂದಸ್ಸರ್ವದೈವಾಸೀನ್ನಾಸೀತ್ಕುತ್ರಾಪ್ಯಮಂಗಲಂ ॥ ೩೮ ॥

---

೩೪. ಗಂಧರ್ವರೂ, ಪನ್ನಗರೂ ಈ ಅಯೋಧ್ಯೆಯಲ್ಲಿಯೇ ನಿಂತರು. ಈ ರಾಮನನ್ನು ಬಿಟ್ಟು ಅವರು ತಮ್ಮ ತಮ್ಮ ಸ್ಥಳಗಳಿಗೆ ಹೋಗಲು ಇಷ್ಟಪಡಲಿಲ್ಲ.

೩೫–೩೬. ಆಗ ಅವರೆಲ್ಲರೂ ತಮ್ಮ ರಾಜ್ಯಗಳಿಗೆ ಅವರವರ ಮಂತ್ರಿಗಳನ್ನು ಕಳುಹಿಸಿಕೊಟ್ಟರು. ಮುಂದೆ ರಾಮನು ವೈಕುಂಠಕ್ಕೆ ಹೋಗುವಾಗ ಅವರು ಉತ್ತಮವಾದ ತಮ್ಮ ತಮ್ಮ ಸಂತಾನಿಕಲೋಕಗಳಿಗೆ ಹೋಗುವರು. ಸಂಶಯವಿಲ್ಲ

೩೭. ಅನಂತರ ರಾಮನು ಆ ಗಂಧರ್ವರ ಮತ್ತು ಪನ್ನಗರ ಮನೆಗಳಿಗೆ ಆಯಾಕಾಲದಲ್ಲಿ ಉತ್ಸವಗಳಿಗೆ ಅಂತಃಪುರದವರೊಡನೆಯೂ, ಸ್ನೇಹಿತರೊಡನೆಯೂ, ಪಟ್ಟಣಿಗರೊಡನೆಯೂ ಹೋಗುತ್ತ ಭೋಜನಾದಿಗಳನ್ನು ಮಾಡುತ್ತಿದ್ದನು.

೩೮. ಆಗ ಅಯೋಧ್ಯೆಯಲ್ಲಿ ಮನೆ ಮನೆಯಲ್ಲಿಯೂ ಯಾವಾಗಲೂ ಮಹೋತ್ಸವವೇ ನಡೆಯುತ್ತಿದ್ದಿತು. ಎಲ್ಲಾ ಕಡೆಯಲ್ಲಿಯೂ ಯಾವಾಗಲೂ ಆನಂದವಾಗಿಯೇ ಇರುತ್ತಿದ್ದಿತು. ಅಮಂಗಳವೆಂಬುದು ಎಲ್ಲಿಯೂ ಇರಲೇ ಇರಲಿಲ್ಲ.

ಅಥ ತೇಷಾಂ ರಾಘವೇಣ ಪುತ್ರಾಣಾಂ ಚ ಪೃಥಕ್ ಪೃಥಕ್ ।
ಅಷ್ಟ ಕೃತ್ವಾ ತು ಗೇಹಾನಿ ಪೃಥಕ್ಕೃತ್ವಾಥ ಶಾಂತಯಃ ॥ ೩೯ ॥

ತೇಷು ತೇ ಸ್ಥಾಪಿತಾಸ್ಸರ್ವೇ ಸ್ವಸ್ವಸ್ತ್ರೀಭ್ಯಾಂ ಪೃಥಕ್ ಸುಖಂ ।
ತಥಾ ತೇ ಲಕ್ಷ್ಮಣಾದ್ಯಾಶ್ಚ ಪೃಥಗ್ಗೇಹೇಷು ಬಾಂಧವಾಃ ॥ ೪೦ ॥

ಪೂರ್ವಮೇವ ಸ್ಥಾಪಿತಾಶ್ಚ ಸ್ವಸ್ವಪತ್ನ್ಯಾ ಮುದಾನ್ವಿತಾಃ ।
ಸುಮಿತ್ರಾ ಸಾ ತು ಸೌಮಿತ್ರೇಃ ಸ್ವೀಯಗೇಹೇವಸತ್ಸುಖಂ ॥ ೪೧ ॥

ಕೈಕೇಯೀ ಭರತಸ್ಯಾಥ ಗೇಹೇ ಮಾಸಮುವಾಸ ಸಾ ।
ತಸ್ಥೌ ಶತ್ರುಘ್ನಗೇಹೇಪಿ ಮಾಸಮೇಕಂ ಯಥಾಸುಖಂ ॥ ೪೨ ॥

ಏವಂ ಸಾ ಪುತ್ರಯೋರ್ಗೇಹೇಽಕರೋದ್ವಾಸಂ ಮುದಾನ್ವಿತಾ ।
ಕೌಸಲ್ಯಾ ಸಾ ರಾಮಗೇಹೇ ತಸ್ಥೌ ಸೀತಾತಿಸೇವಿತಾ ॥ ೪೩ ॥

---

೩೯. ಅನಂತರ ರಾಮನು ಎಂಟುಜನ ಮಕ್ಕಳಿಗೂ ಬೇರೆ ಬೇರೆಯಾಗಿ ಮನೆಗಳನ್ನು ಕಟ್ಟಿಸಿಕೊಟ್ಟನು. ಆವರುಗಳಿಗೆಲ್ಲಾ ಬೇರೆ ಬೇರೆಯಾಗಿ ಶಾಂತಿಪ್ರಸ್ತವನ್ನು ಮಾಡಿಸಿದನು.

೪೦. ಆ ಮನೆಗಳಲ್ಲಿ ಆ ಮಕ್ಕಳನ್ನು ಅವರವರ ಹೆಂಡತಿಯರೊಡನೆ ಬೇರೆ ಬೇರೆಯಾಗಿ ಸುಖವಾಗಿರುವಂತೆ ಇಟ್ಟನು. ಅಂತೆಯೇ ಲಕ್ಷ್ಮಣ, ಭರತ, ಶತ್ರುಘ್ನರೂ ಬೇರೆ ಬೇರೆ ಮನೆಯಲ್ಲಿಯೇ ಇದ್ದರು.

೪೧. ಅವರೆಲ್ಲರೂ ತಮ್ಮ ತಮ್ಮ ಮಕ್ಕಳು ಹೆಂಡತಿಯರೊಡನೆ ಸುಖವಾಗಿದ್ದರು. ಸುಮಿತ್ರೆಯು ಲಕ್ಷ್ಮಣನ ಮನೆಯಲ್ಲಿಯೂ ರಾಮನ ಮನೆಯಲ್ಲಿಯೂ ಇರುತ್ತಿದ್ದಳು.

೪೨-೪೩. ಕೈಕೇಯಿಯು ಭರತನ ಮನೆಯಲ್ಲಿ ಒಂದು ತಿಂಗಳೂ ಶತ್ರುಘ್ನನಮನೆಯಲ್ಲಿ ಒಂದು ತಿಂಗಳೂ ಇರುತ್ತ ಈ ರೀತಿಯಾಗಿ ಮಕ್ಕಳ ಮನೆಯಲ್ಲಿ ಸುಖಪಡುತ್ತಿದ್ದಳು ಕೌಸಲ್ಯೆಯು ಸೀತೆಯಿಂದ ಸೇವಿಸಲ್ಪಡುತ್ತಾ ರಾಮನ ಮನೆಯಲ್ಲಿಯೇ ಇರುತ್ತಿದ್ದಳು.

ತೇ ಸರ್ವೇ ಬಾಂಧವಾಃ ಪುತ್ರಾ ನಿಜಯಾನ್ಯೈಶ್ಚ ಸೇವಕೈಃ ।
ಸ್ವದಾಸೀಗೋಧನಾದ್ಯೈಶ್ಚ ಸುಖಮಾಪುಃ ಪೃಥಕ್ ಪೃಥಕ್ ॥ ೪೪ ॥

ಅಥ ತೇ ಲಕ್ಷ್ಮಣಾದ್ಯಾಶ್ಚ ಕುಶಾದ್ಯಾ ಬಾಲಕಾ ಅಪಿ ।
ಸ್ವಸ್ವಗೇಹೇಷು ವೈ ಪ್ರಾತಃ ಸ್ನಾತ್ವಾ ಹೋಮಾರ್ಶಿವಾರ್ಚನಂ ॥ ೪೫ ॥

ಗೋದ್ವಿಜಾರ್ಚಾದಿ ಸಂಪಾದ್ಯ ತತಸ್ತೇ ರಾಘವಂ ಯಯುಃ ।
ನತ್ವಾ ರಾಮಂ ಜಾನಕೀಂ ತೇ ತಸ್ಥುಃ ದಿವ್ಯಾಸನೋಪರಿ ॥ ೪೬ ॥

ತೇಷಾಂ ಸರ್ವಾಃ ಸ್ತ್ರಿಯಶ್ಚಾಪಿ ಸ್ನಾತ್ವಾ ದುರ್ಗಾಂ ಪ್ರಪೂಜ್ಯ ಚ ।
ಗತ್ವಾ ಸೀತಾಂ ಪ್ರಣೇಮುಸ್ತಾಸ್ತಸ್ಥುಸ್ಸೀತಾಜ್ಞಯಾಸನೇ ॥ ೪೭ ॥

---

೪೪. ಆ ತಮ್ಮಂದಿರೂ, ಮಕ್ಕಳೂ, ತಮ್ಮಂದಿರಮಕ್ಕಳೂ ಎಲ್ಲರೂ ಕೂಡ ತಮಗೆ ಬೇರೆ ಬೇರೆಯಾದ ಸೇವಕರು, ದಾಸಿಯರು, ಗೋವು, ಧನ, ಮುಂತಾದುವನ್ನು ಇಟ್ಟುಕೊಂಡು ಸುಖವಾಗಿದ್ದರು.

೪೫-೪೬. ಲಕ್ಷ್ಮಣನೇ ಮುಂತಾದ ತಮ್ಮಂದಿರೂ ಕುಶನೇ ಮುಂತಾದ ಮಕ್ಕಳೂ ಕೂಡ ತಮ್ಮ ತಮ್ಮ ಮನೆಗಳಲ್ಲಿ ಬೆಳಗ್ಗೆ ಎದ್ದು ಸ್ನಾನ ಹೋಮಗಳನ್ನು ಮಾಡಿಕೊಂಡು, ಶಿವಾರ್ಚನೆಯನ್ನು ಮಾಡಿಕೊಂಡು ಗೋವು ಬ್ರಾಹ್ಮಣರನ್ನು ಪೂಜಿಸುತ್ತ ಅನಂತರ ರಾಮನ ಬಳಿಗೆ ಹೋಗುತ್ತಿದ್ದರು. ಅಲ್ಲಿ ರಾಮನಿಗೂ ಜಾನಕಿಗೂ ನಮಸ್ಕರಿಸಿ ದಿವ್ಯವಾದ ಆಸನದಲ್ಲಿ ಕುಳಿತಿರುತ್ತಿದ್ದರು.

೪೭. ಅವರವರ ಹೆಂಡತಿಯರೂ ಕೂಡ ಬೆಳಗ್ಗೆ ಸ್ನಾನಮಾಡಿ ಗೌರೀಪೂಜೆಯನ್ನು ಮಾಡಿ ಸೀತೆಯ ಬಳಿಗೆ ಹೋಗಿ ನಮಸ್ಕರಿಸಿ ಸೀತೆಯ ಅಪ್ಪಣೆಯನ್ನು ಪಡೆದು ಅನಂತರ ಆಸನದಮೇಲೆ ಕುಳಿತುಕೊಳ್ಳುತ್ತಿದ್ದರು.

ತತಸ್ತೇ ಲಕ್ಷ್ಮಣಾದ್ಯಾಶ್ಚ ಕುಶಾದ್ಯಾಃ ಸ್ವಗುರೋರ್ಮುಖಾತ್ ।
ಕಥಾಂ ಪೌರಾಣಿಕೀಂ ಶ್ರುತ್ವಾ ಜಗ್ಮುಃ ಸ್ವಂ ಸ್ವಂ ಗೃಹಂ ಪ್ರತಿ ॥ ೪೮ ॥

ತತಸ್ಸರ್ವೇ ರಾಮಗೇಹೇ ಸಮಾಹೂತಾ ಮುದಾನ್ವಿತಾಃ ।
ಉಪಹಾರಾನ್ಪೃಥಕ್ ಚಕ್ರುರ್ಮಧ್ಯಾಹ್ನೇ ಭೋಜನಾನ್ಯಪಿ ॥ ೪೯ ॥

ಏವಂ ತೇಷಾಂ ಸ್ತ್ರಿಯಶ್ಚಾಪಿ ಸಮಾಹೂತಾಸ್ತು ಸೀತಯಾ ।
ಉಪಹಾರಾ‌ನ್ ಭೋಜನಾನಿ ಚಕ್ರುಸ್ಸೀತಾಗೃಹೇ ಸದಾ ॥ ೫೦ ॥

ಕದಾ ಮುದಾ ಸ್ವೀಯಗೇಹೇ ರಾಘವೇಣಾಥ ಸೀತಯಾ ।
ಉಪಹಾರಾನ್ ಭೋಜನಾನಿ ಚಕ್ರುಸ್ತೇ ಬ್ರಾಹ್ಮಣಾದಿಭಿಃ ॥ ೫೧ ॥

---

೪೮. ಅಲ್ಲಿ ಲಕ್ಷ್ಮಣ, ಭರತ, ಶತ್ರುಘ್ನರೂ ಕುಶನೇ ಮುಂತಾದ ಮಕ್ಕಳೂ ಗುರುವಾದ ವಸಿಷ್ಠನ ಮುಖದಿಂದ ಪುರಾಣದ ಕಥೆಗಳನ್ನು ಕೇಳಿ ಅನಂತರ ತಮ್ಮ ತಮ್ಮ ಮನೆಗೆ ಹೋಗುತ್ತಿದ್ದರು.

೪೯-೫೦. ಹಾಗೆಯೇ ಅವರೆಲ್ಲರೂ ರಾಮನು ಕರೆದಾಗ ಬೆಳಗ್ಗೆ ಉಪಹಾರವನ್ನೂ ಮಧ್ಯಾಹ್ನ ಭೋಜನವನ್ನೂ ಮಾಡುತ್ತಿದ್ದರು. ಅಂತೆಯೇ ಸೀತೆಯು ಆ ಮಕ್ಕಳ ಹೆಂಡತಿಯರನ್ನು ಕರೆದಾಗ ಅವರೂ ಉಪಹಾರ ಭೋಜನಗಳನ್ನು ಮಾಡುತ್ತಿದ್ದರು.

೫೧. ಒಂದೊಂದುಸಾರಿ ಅವರು ರಾಮನನ್ನೂ ಸೀತೆಯನ್ನೂ ತಮ್ಮ ತಮ್ಮ ಮನೆಗಳಿಗೆ ಕರಸಿಕೊಂಡು ಅವರೊಡನೆಯೂ ಬ್ರಾಹ್ಮಣರೊಡನೆಯೂ ಸಂತೋಷದಿಂದ ಭೋಜನವನ್ನೂ ಉಪಹಾರವನ್ನೂ ಮಾಡುತ್ತಿದ್ದರು.

ಏವಂ ತೈರ್ಬಂಧುಭಿರ್ಬಾಲೈಃ ಪ್ರಾಪತುರ್ನಿತರಾಂ ಸುಖಂ ।
ಸೀತಾರಾಮೌ ಕದಾ ನಾಸೀ ತ್ಕಲಹಃ ಕ್ವಾಪಿ ಕಸ್ಯ ಹಿ ॥ ೫೨ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ವಿವಾಹಕಾಂಡೇ ದ್ವಾದಶವಿವಾಹ
ವರ್ಣನಂ ನಾಮ ಸಪ್ತಮಸ್ಸರ್ಗಃ

---

೫೨. ರಾಮನು ಈ ರೀತಿಯಾಗಿ ತಮ್ಮಂದಿರೊಡನೆಯೂ ಮಕ್ಕಳೊಡನೆಯೂ ಬಹುವಾದ ಸುಖವನ್ನು ಹೊಂದಿದನು. ಸೀತೆಯಾಗಲಿ, ರಾಮನಾಗಲಿ, ಒಬ್ಬರೊಡನೆಯೂ ಯಾವಾಗಲೂ ಕಲಹವನ್ನು ಮಾಡಲೇ ಇಲ್ಲ.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ ದ್ವಾದಶವಿವಾಹ
ವರ್ಣನವೆಂಬ ಏಳನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ

॥ ಏಳನೆಯ ಸರ್ಗದ ಸಾರಾಂಶವು ॥

ಆಗ ಜೋಯಿಸರೂ ಕುಳಿತು ಲಗ್ನಗಳನ್ನು ಗೊತ್ತುಮಾಡಿದರು. ಯಾರು ಯಾರಿಗೆ ಯಾರ ಯಾರ ಜಾತಕವು ಸರಿಬರುವುದೋ ಆದರಂತೆ ಸೇರಿಸಿದರು.

ಈ ವಿವಾಹಗಳೆಲ್ಲವೂ ಒಂದಾಗುತ್ತಲೊಂದು ಒಂದು ವರ್ಷದವರೆಗೂ ನಡೆದುವು. ಎಲ್ಲಾ ಮದುವೆಗಳಿಗೂ ರಾಜರೆಲ್ಲರೂ ಬಂದಿದ್ದರು.

ರಾಮನು ಮಕ್ಕಳಿಗೆಲ್ಲರಿಗೂ ಬೇರೆ ಬೇರೆಯಾಗಿ ಮನೆಗಳನ್ನು ಕಟ್ಟಿಸಿಕೊಟ್ಟು ಅವುಗಳಲ್ಲಿ ಅವರನ್ನು ಬೇರೆ ಬೇರೆಯಾಗಿಟ್ಟು ಸೌಕರ್ಯಗಳೆಲ್ಲವನ್ನೂ ಕಲ್ಪಿಸಿ ಕೊಟ್ಟನು. ತಮ್ಮಂದಿರಿಗೂ ಮೊದಲೇನೇ ಬೇರೆ ಬೇರೆ ಮನೆಗಳನ್ನು ಕಟ್ಟಿಸಿ ಇರಿಸಿದ್ದನು. ಅವರವರ ತಾಯಿಯರು ಅವರವರ ಮಕ್ಕಳಿದ್ದಲ್ಲಿ ಇದ್ದುಕೊಂಡಿದ್ದರು. ಒಟ್ಟಿನಲ್ಲಿ ಎಲ್ಲರೂ ಸುಖದಿಂದಿರುತ್ತಿದ್ದರು. ತಮ್ಮಂದಿರೂ ಮಕ್ಕಳೂ ಬೆಳಗ್ಗೆ ಸ್ನಾನಮಾಡಿ ಪೂಜೆಗಳನ್ನು ಮಾಡಿಕೊಂಡು ರಾಮನ ಬಳಿಗೆ ಹೋಗಿ ಅವನಿಗೆ ನಮುಸ್ಕರಿಸಿ, ಸೀತೆಗೂ ವಂದಿಸಿ ಆಸನಗಳಲ್ಲಿ ಕುಳಿತುಕೊಳ್ಳುತ್ತಿದ್ದರು. ಹೆಂಗಸರೂ ಕೂಡ ಸ್ನಾನಮಾಡಿ ಗೌರೀಪೂಜೆಯನ್ನು ಮಾಡಿಕೊಂಡು ಸೀತೆಯ ಬಳಿಗೆ ಹೋಗಿ ನಮುಸ್ಕರಿಸಿ ಕುಳಿತುಕೊಳ್ಳುತ್ತಿದ್ದರು.

ಅಲ್ಲಿ ಗುರುವಿನ ಮುಖದಿಂದ ಪುರಾಣವನ್ನು ಕೇಳಿ ಅವರವರ ಮನೆಗೆ ಹೋಗುತ್ತಿದ್ದರು. ಕಾಲದೇಶಾನುಗುಣವಾಗಿ ರಾಮಲಕ್ಷ್ಮಣಾದಿಗಳು ಅನ್ಯೋನ್ಯವಾಗಿ ಒಬ್ಬ ಮನೆಗೊಬ್ಬರು ಹೋಗಿ ಬರುತ್ತಾ ಭೋಜನಾದಿಗಳನ್ನು ಮಾಡುತ್ತಿದ್ದರು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ವಿವಾಹಕಾಂಡೇ

॥ ಅಷ್ಟಮಃ ಸರ್ಗಃ ॥

॥ ಶ್ರೀ ರಾಮದಾಸ ಉವಾಚ ॥

ಅಥೈಕದಾ ದಕ್ಷಿಣೇ ಹಿ ಶಿವಕಾಂತ್ಯಾಂ ಮಹಾರಿಪುಃ ।
ಕಂಬುಕಂಠೋ ನೃಪಶ್ಚಕ್ರೇ ವರ್ಯಾ ನಿಜಕನ್ಯಾಸ್ವಯಂವರಂ ॥ ೧ ॥

ಕರ್ತುಕಾಮೋ ನೃಪಾನ್ಸರ್ವಾನಾಹ್ವಯಾಮಾಸ ಸಾದರಂ ।
ತದಾ ತೇ ಪಾರ್ಥಿವಾಸ್ಸರ್ವೇ ಪತ್ರಾಣಿ ಹಿ ಪೃಥಕ್ ಪೃಥಕ್ ॥ ೨ ॥

ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ

ಎಂಟನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು—ದಕ್ಷಿಣ ದೇಶದಲ್ಲಿ ಶಿವಕಾಂತಿ ಪುರದಲ್ಲಿ ಕಂಬುಕಂಠನೆಂಬ ಒಬ್ಬ ರಾಜನಿದ್ದನು. ಅವನು ರಾಮನಿಗೆ ಮಹಾ ಶತ್ರುವು. ಒಂದುಸಾರಿ ತನ್ನ ಮಗಳಿಗೆ ಸ್ವಯಂವರ ವಿವಾಹವನ್ನು ಮಾಡಬೇಕೆಂದು ನಿಶ್ಚಯಿಸಿದನು.

೨. ಆಗ ಎಲ್ಲಾ ರಾಜರನ್ನೂ ಪ್ರೀತಿಯಿಂದ ಕರೆಸಿದನು. ಎಲ್ಲಾ ರಾಜರೂ ರಾಮನಮೇಲಿನ ಹಿಂದಿನ ವೈರವನ್ನು ಜ್ಞಾಪಿಸಿಕೊಂಡು ಬೇರೆಬೇರೆಯಾಗಿ ಕಾಗದವನ್ನು ಕಂಬುಕಂಠನಿಗೆ ಬರೆದರು.

ಪೂರ್ವವೈರಮನುಸ್ಮೃತ್ಯ ಕುಶಸ್ಯಾಪಿ ಲವಸ್ಯ ಚ |
ಸ್ವಯಂವರೇ ಸ್ವೀಯಮಾನಭಂಗನೋದ್ಭೂತಹೃತ್ ಸ್ಥಿತಂ || ೩ ||

ಪ್ರೇಷಯಾಮಾಸುರ್ನೃಪತಿಂ ನ ಯಯುಶ್ಚ ಸ್ವಯಂವರಂ |
ತೇಷಾಂ ಪತ್ರಾಣಿ ಸರ್ವಾಣಿ ಕಂಬುಕಂಠೋ ದದರ್ಶ ಸಃ || ೪ ||

ಸರ್ವೇಷು ಲಿಖಿತಸ್ತ್ವೇಕ ಏವಾರ್ಥಸ್ತಂ ವದಾಮ್ಯಹಂ |
ಯದಿ ನಾಯಾಂತಿ ರಾಮಸ್ಯ ಬಾಲಕಾಸ್ತೇ ಸ್ವಯಂವರೇ || ೫ ||

ವಯಂ ಸರ್ವೇ ತರ್ಹಿ ಯಾಮೋ ಜಂಬುದ್ವೀಪಾಂತರಸ್ಥಿತಾಃ |
ಇತಿ ತೇಷಾಮಭಿಪ್ರಾಯಂ ಜ್ಞಾತ್ವಾ ಸ ನೃಪತಿಸ್ತದಾ || ೬ ||

---

೩. ಕುಶಲವರ ಸ್ವಯಂವರದಲ್ಲಿ ತಮಗಾದ ಅವಮಾನವು ಮನಸ್ಸಿನಲ್ಲಿಯೇ ಇರಲು ಅದೆಲ್ಲವನ್ನೂ ಜ್ಞಾಪಿಸಿಕೊಂಡು ಕಾಗದದಲ್ಲಿ ಒಕ್ಕಣಿಸಿ ಬರೆದರು.

೪. ಹಾಗೆ ಕಾಗದವನ್ನು ಬರೆದುದಲ್ಲದೆ ಅವರೂ ಕೂಡ ಸ್ವಯಂವರಕ್ಕೆ ಬರಲೇ ಇಲ್ಲ. ಅವರು ಬರೆದಿದ್ದ ಕಾಗದಗಳೆಲ್ಲವನ್ನೂ ಆ ಕಂಬುಕಂಠನು ನೋಡಿದನು.

೫. ಅವೆಲ್ಲದರಲ್ಲಿಯೂ ಒಂದೇ ರೀತಿಯಾದ ಅಭಿಪ್ರಾಯವು ಉಲ್ಲಿಖಿತವಾಗಿದ್ದಿತು. ಅದೇನೆಂದರೆ ಅದನ್ನು ಹೇಳುತ್ತೇನೆ ಕೇಳು. ರಾಮನ ಮಕ್ಕಳೊಬ್ಬರೂ ಸ್ವಯಂವರಕ್ಕೆ ಬರಕೂಡದು.

೬. ಹಾಗೆ ಅವರೊಬ್ಬರೂ ಬಾರದಿದ್ದಲ್ಲಿ ಜಂಬೂದ್ವೀಪದ ಒಳಗಿರುವ ನಾವೆಲ್ಲರೂ ನಿನ್ನ ಮನೆಯ ಸ್ವಯಂವರಕ್ಕೆ ಬರುತ್ತೇವೆ. ಎಂದು ಬರೆದಿದ್ದಿತು. ಈ ರೀತಿಯಾಗಿ ಬರೆದಿದ್ದ ಅವರ ಅಭಿಪ್ರಾಯಗಳನ್ನು ಆ ರಾಜನು ತಿಳಿದುಕೊಂಡನು.

ನ ಸಮಾಹೂಯ ಶ್ರೀರಾಮಮಾಹ್ವಯಾಮಾಸ ಪಾರ್ಥಿವಾನ್ ।
ಸ್ವಯಂ ಚಾಪಿ ಸ್ಮರನ್ ವೈರಂ ತದೇವಂ ರಾಮಪುತ್ರಯೋಃ ॥ ೭ ॥

ಚಂಪಿಕಾಸುಮತೇಃ ಪಾಣಿಗ್ರಹಣೇಯಂ ಪುರಾತನಂ ।
ತತಸ್ತೇ ಪಾರ್ಥಿವಾಸ್ಸರ್ವೇ ಶ್ರುತ್ವಾ ರಾಮಂ ಹಿ ನಾಗತಂ ॥ ೮ ॥

ಸಪ್ತದ್ವೀಪಾಂತರಸ್ಥಾಶ್ಚ ಯಯುಃ ಕಾಂತಿಪುರೀಂ ಪ್ರತಿ ।
ಅಥ ತಾಂ ಕಂಬುಕಂತಸ್ಯ ಕನ್ಯಾಂ ಮದನಸುಂದರೀಂ ॥ ೯ ॥

ಪ್ರಾಸಾದಸಂಸ್ಥಿತಾಂ ದೃಷ್ಟ್ವಾ ನಾರದಃ ಖಾತ್ಸಮಾಯಯೌ ।
ಸಖೀಭಿಸ್ಸಾ ಮುನಿಂ ಪೂಜ್ಯ ವಿನಯಾತ್ಪುರತಃ ಸ್ಥಿತಾ ॥ ೧೦ ॥

---

೭ ಆದ್ದರಿಂದ ಶ್ರೀರಾಮನಿಗೆ ಸ್ವಯಂವರ ಪತ್ರಿಕೆಯನ್ನು ಕಳುಹಿಸಲೇ ಇಲ್ಲ. ಉಳಿದ ಎಲ್ಲಾ ರಾಜರನ್ನೂ ಕರೆಸಿದನು. ರಾಮನಿಗೆ ಕಾಗದವನ್ನು ಬರೆಯದಿರಲು ರಾಜರ ಕಾಗದವೂ ಕಾರಣವಾಗಿದ್ದುದಲ್ಲದೆ ತಾನೂ ಕೂಡ ಆ ರಾಮ ಪುತ್ರರಾದ ಕುಶಲವರಮೇಲಿನ ವೈರವನ್ನು ಸ್ಮರಿಸಿಕೊಂಡಿದ್ದನು.

೮. ಚಂಪಿಕಾಸುಮತಿಯರ ಪಾಣಿಗ್ರಹಣದಲ್ಲಿ ಈ ಇಬ್ಬರನ್ನೂ ರಾಮನು ತನ್ನ ಮಕ್ಕಳಿಗೆ ಮದುವೆ ಮಾಡಿಕೊಂಡಿದ್ದುದು ಅವರಿಗೆ ಸಹಿಸಲಿಲ್ಲ. ಅಂತೂ ಕೊನೆಗೆ ರಾಮನು ಸ್ವಯಂವರಕ್ಕೆ ಬರಲಿಲ್ಲ ವೆಂಬುದೂ ಅವನಿಗೆ ಆಹ್ವಾನ ಪತ್ರಿಕೆಯು ಹೋಗಿಲ್ಲವೆಂಬುದೂ ಎಲ್ಲಾ ರಾಜರಿಗೂ ತಿಳಿಯಿತು.

೯–೧೦. ಆ ರಾಮನೂ ಅವನಮಕ್ಕಳೂ ಬರದೆ ಇದ್ದುದರಿಂದ ಸಪ್ತದ್ವೀಪದ ಒಳಗಿದ್ದ ರಾಜರೆಲ್ಲರೂ ಆ ಶಿವಕಾಂತಿಪುರಕ್ಕೆ ಬಂದರು. ಇತ್ತ ಒಂದು ದಿನ ಕಂಬುಕಂತನ ಮಗಳಾದ ಮದನಸುಂರಿಯು ಮಹಡಿಯಮೇಲಿರಲು ಅದನ್ನು ನೋಡಿ ನಾರದನು ಅಂತರಿಕ್ಷದಿಂದಲೇ ಅಲ್ಲಿಗೆ ಇಳಿದು ಬಂದನು. ಆಗ ಆ ಮದನಸುಂದರಿಯು ಸಖಿಯರೊಡನೆ ಆ ನಾರದನನ್ನು ಪೂಜಿಸಿ ಅವನ ಎದುರಿಗೆ ವಿನಯದಿಂದ ನಿಂತುಕೊಂಡಳು.

ಪಪ್ರಚ್ಛ ನಾರದಂ ಭಕ್ತ್ಯಾ ವಿನಯಾವನತಾ ಶನೈಃ ।
ಕುತಸ್ಸಮಾಗತಂ ಸ್ವಾಮಿನ್ ಗಮ್ಯತೇ ಕ್ವಾಧುನಾ ವದ ॥ ೧೧ ॥

ಭವತಾಂ ದರ್ಶನೇನಾದ್ಯ ಪಾವಿತ್ರ್ಯಂ ಪರಮಂ ಗತಾ ।
ಇತಿ ತಸ್ಯಾ ವಚಃ ಶ್ರುತ್ವಾ ಕಿಂಚಿತ್ ಸ್ಮಿತ್ವಾ ಮುನಿಸ್ತದಾ ॥ ೧೨ ॥

ತಾಮಾಹ ಬಾಲೇ ಸ್ವರ್ಲೋಕಾದಾಗತೋಽಸ್ಮ್ಯಧುನಾ ತ್ವಹಂ ।
ಅಯೋಧ್ಯಾಯಾಂ ರಾಘವಸ್ಯ ಪುತ್ರಾಣಾಂ ತು ಪೃಥಕ್ ಪೃಥಕ್ ॥೧೩॥

ಗೇಹೇ ಸಂಭೋಕ್ತುಕಾಮೋದ್ಯ ನಿರ್ಗತೋಽಸ್ಮಿ ವಿಹಾಯಸಾ ।
ಏತಸ್ಮಿನ್ನಂತರೇ ಕಾಂತಿಪುರ್ಯಾಸ್ಸೈನ್ಯಾನಿ ವೈ ಬಹಿಃ ॥ ೧೪ ॥

ದೃಷ್ಟ್ವಾ ಕೇಷಾಂ ಹಿ ಸೈನ್ಯಾನಿ ಸಂತೀತಿ ಹೃದಿ ಚಿಂತಿತಂ ।
ತತಃ ಪಾಂಥಮುಖಾಚ್ಛ್ರುತ್ವಾ ತವ ಚಾತ್ರ ಸ್ವಯಂವರಂ ॥ ೧೫ ॥

---

೧೧. ವಿನಯದಿಂದ ತಲೆಯನ್ನು ತಗ್ಗಿಸಿಕೊಂಡು ಸ್ವಾಮಿ ನಾರದರೆ! ತಾವು ಎಲ್ಲಿಂದ ಬಂದಿರಿ? ಎಲ್ಲಿಗೆ ಈಗ ಹೋಗುತ್ತೀರಿ? ಅದನ್ನು ಹೇಳಿ ಎಂಬುದಾಗಿ ಕೇಳಿದಳು.

೧೨. ಮತ್ತು ತಮ್ಮ ದರ್ಶನದಿಂದಲೇ ಈಗ ನಾನು ಬಹು ಪವಿತ್ರಳಾದೆನು. ಎಂದೆನಲು ಆ ಮಾತನ್ನು ಮುನಿಯು ಕೇಳಿ ಸ್ವಲ್ಪ ನಕ್ಕನು.

೧೩–೧೪. ಮತ್ತು ಆಕೆಯನ್ನು ಕುರಿತು ಎಲೈ ಬಾಲೆಯೇ! ಈಗ ನಾನು ಸ್ವರ್ಗಲೋಕದಿಂದ ಬಂದೆನು. ರಾಮನೂ ಅವನ ಮಕ್ಕಳೂ ತಮ್ಮಂದಿರೂ ಅಯೋಧ್ಯೆಯಲ್ಲಿ ಬೇರೆಬೇರೆ ಮನೆಗಳಲ್ಲಿದ್ದುಕೊಂಡಿರುತ್ತಾರೆ. ಅವರವರ ಮನೆಗಳಲ್ಲಿ ಬೇರೆಬೇರೆ ಯಾಗಿ ಭೋಜನಾದಿಗಳನ್ನು ಮಾಡಬೇಕೆಂದು ಅಂತರಿಕ್ಷ ಮಾರ್ಗದಲ್ಲಿ ಹೊರಟೆನು. ಹೋಗುತ್ತಿರುವಾಗ ಶಿವಕಾಂತಿಪುರಿಯ ಹೊರಗಡೆಯಲ್ಲಿ ಸೈನ್ಯಗಳು ನಿಂತಿರುವುದನ್ನು ನೋಡಿದೆನು.

೧೫. ಅದನ್ನು ನೋಡಿ ಯಾರ ಸೈನ್ಯಗಳು ಇಲ್ಲಿರುವುವು? ಎಂದು ಯೋಚಿಸಿದೆನು. ಅನಂತರ ದಾರಿಗರು ಇಲ್ಲಿ ನಿನ್ನ ಸ್ವಯಂವರವು ನಡೆಯುವುದೆಂದು ಹೇಳಿದರು.

ತದಾ ವಿನಿಶ್ಚಿತಂ ಚಿತ್ತೇ ಮಯಾ ರಾಮಃ ಸ್ವಯಂವರೇ ।
ಅತ್ರೈವಾಸ್ತಿ ಹ್ಯಾಗತಶ್ಚೇತ್ತಂ ಪಶ್ಯಾಮಿ ಸಬಾಲಕಂ ॥ ೧೬ ॥

ನೈವಾಸ್ತಿ ಹ್ಯಾಗತಶ್ಚೇದ್ವೈ ತರ್ಹಿ ಯಾಸ್ಯಾಮ್ಯತಃ ಪರಂ ।
ಸ್ವಯಂವರೋ ವಿನಾ ರಾಮಂ ನ ಭವಿಷ್ಯತಿ ಸಾತ್ಮಜಂ ॥ ೧೭ ॥

ಪಶ್ಯಾಮ್ಯತ್ರೈವ ತಂ ರಾಮಂ ವೃಥಾಗ್ರೇ ಗಮನಂ ಮಮ ।
ನಿಶ್ಚಿತ್ಯೇತ್ಥಂ ಸಮಾಯಾತಸ್ತತೋ ದೃಷ್ಟ್ವಾ ರಘೂತ್ತಮಂ ॥ ೧೮ ॥

ಕಥಂ ರಾಮೋ ನಾಗತೋತ್ರ ಚೇತಿ ಪೃಷ್ಟಾ ನೃಪಾ ಮಯಾ ।
ನೃಪಾಭಿಪ್ರಾಯಮಾಕರ್ಣ್ಯ ತದಾ ಖಿನ್ನಂ ಮನೋ ಮಮ ॥ ೧೯ ॥

---

೧೬ ಆಗ ಈ ಸ್ವಯಂವರಕ್ಕೆ ರಾಮನು ಇಲ್ಲಿಗೇ ಬಂದಿರಬಹುದು. ಹಾಗೆ ಬಂದಿದ್ದರೆ ಇಲ್ಲಿಯೇ ಅವನನ್ನು ನೋಡುತ್ತೇನೆ. ಅವನ ಮಕ್ಕಳೂ ಇಲ್ಲಿಗೆ ಬಂದಿರಬಹುದು. ಅವರನ್ನೂ ನೋಡುತ್ತೇನೆ. ಎಂಬುದಾಗಿ ನಿಶ್ಚಯಿಸಿಕೊಂಡು ಇಲ್ಲಿಗೆ ನಾನು ಬಂದೆನು.

೧೭. ಅವನು ಇಲ್ಲಿಗೆ ಬಂದಿಲ್ಲದ ಪಕ್ಷದಲ್ಲಿ ನಾನು ಅಯೋಧ್ಯೆಗೆ ಹೋಗುವೆನು. ಆದರೆ ರಾಮನೂ ಅವನ ಮಕ್ಕಳೂ ಇಲ್ಲದಿದ್ದಲ್ಲಿ ಸ್ವಯಂವರವೂ ಕೂಡ ನಡೆಯುವುದೇ ಇಲ್ಲ.

೧೮. ಆದ್ದರಿಂದ ರಾಮನನ್ನು ಇಲ್ಲಿಯೇ ಖಂಡಿತವಾಗಿ ನೋಡಬಹುದು. ನಾನು ಮುಂದೆ ಹೋಗುವುದು ವ್ಯರ್ಥವಾಗುವುದು. ಎಂಬುದಾಗಿ ನಿಶ್ಚಯಿಸಿಕೊಂಡು ಇಲ್ಲಿಗೆ ಬಂದೆನು. ಅನಂತರ ಇಲ್ಲಿ ರಾಮನನ್ನು ಹುಡುಕಿದೆನು.

೧೯, ರಾಮನು ಬಂದಿರಲಿಲ್ಲ. ರಾಮನೇಕೆ ಇಲ್ಲಿಗೆ ಬಂದಿಲ್ಲವೆಂದು ರಾಜರನ್ನು ಕೇಳಿದೆನು. ಆ ರಾಜರ ಹೇಳಿಕೆಯಿಂದ ಅವರ ಅಭಿಪ್ರಾಯವನ್ನು ತಿಳಿದು ನನ್ನ ಮನಸ್ಸು ಖೇದಗೊಂಡಿತು.

ಸಪ್ತದ್ವೀಪಪತಿಂ ರಾಮಂ ಬಂಧುಬಾಲಕಸಂಯುತಂ |
ಸ್ವಯಂವರಮನಾಹೂಯ ತ್ವತ್ಪಿತ್ರಾ ನಿಶ್ಚಿತಂ ನೃಪೈಃ ॥ ೨೦ ॥

ಅಧುನಾಹಂ ಪ್ರಗಚ್ಛಾಮಿ ಸಾಕೇತಸ್ಥಂ ರಘೂತ್ತಮಂ |
ಮಂದಭಾಗ್ಯಾಸಿ ಬಾಲೇ ತ್ವಂ ಸ್ನುಷಾ ರಾಘವಸತ್ಪತೇಃ ॥ ೨೧ ॥

ಯತೋ ಜಾತಾಸಿ ನೈವಾತ್ರ ವಿಚಿತ್ರಾ ಕರ್ಮಣೋ ಗತಿಃ |
ಇತ್ಯುಕ್ತ್ವಾ ಬಾಲಿಕಾಂ ಪೃಷ್ಟ್ವಾ ನಾರದೋ ಗಂತುಮುದ್ಯತಃ ॥ ೨೨ ॥

ತತಸ್ಸಂಪ್ರಾರ್ಥಯಾಮಾಸ ನಾರದಂ ಬಾಲಿಕಾ ಮುಹುಃ |
ಖಿನ್ನಚಿತ್ತಾಶ್ರುಪೂರ್ಣಾಕ್ಷೀ ಮ್ಲಾನಾಸ್ಯಾ ಸ್ಫುರಿತಾಧರಾ ॥ ೨೩ ॥

---

೨೦. ರಾಮನು ಸಪ್ತದ್ವೀಪಗಳಿಗೂ ಚಕ್ರವರ್ತಿಯು. ಅವನನ್ನು ನಿನ್ನ ತಂದೆಯು ಮಕ್ಕಳೊಡನೆ ಕರೆಸಬೇಕಾಗಿದ್ದಿತು. ಅವರನ್ನು ಸ್ವಯಂವರಕ್ಕೆ ಕರೆಸದೆ ಉಳಿದ ರಾಜರನ್ನು ಕರೆಸಿ ಅವರೊಡನೆ ಸ್ವಯಂವರ ಮಾಡಬೇಕೆಂದು ನಿಶ್ಚಯಿಸಿರುವನು.

೨೧. ಈಗ ನಾನು ಆ ಅಯೋಧ್ಯೆಯಲ್ಲಿರುವ ರಾಮನ ಬಳಿಗೆ ಹೋಗುತ್ತೇನೆ. ಎಲೈ ಬಾಲೆಯೇ ! ನೀನು ಮಂದಭಾಗ್ಯಳು. ನಿನ್ನ ಅದೃಷ್ಟವು ಸರಿಯಾಗಿಲ್ಲ.

೨೨. ಏತಕ್ಕೆಂದರೆ ನೀನು ಆ ರಾಘವನ ಸೊಸೆಯಾಗಿ ಆಗಲಿಲ್ಲವಲ್ಲ ! ಕರ್ಮಗತಿಯು ಬಹು ವಿಚಿತ್ರತರವಾದುದು. ಏನುಮಾಡುವುದು ? ಎಂಬುದಾಗಿ ಹೇಳಿ ಆ ಬಾಲಿಕೆಯ ಅನುಮತಿಯನ್ನು ಹೊಂದಿ ನಾರದನು ಹೊರಡಲು ಉದ್ಯುಕ್ತನಾದನು.

೨೩–೨೫. ಆಗ ಆ ಬಾಲಿಕೆಯು ನಾರದನನ್ನು ಕುರಿತು ಮನಸ್ಸಿನಲ್ಲಿ ಖೇದಗೊಂಡು ಕಣ್ಣಿನಲ್ಲಿ ನೀರನ್ನು ಸುರಿಸುತ್ತ ಮುಖವನ್ನು ಸಪ್ಪಗೆಮಾಡಿ

ರೋಮಾಂಚಿತತನುರ್ಮುಗ್ಧಾ ಗತಶ್ರೀರ್ಗದ್ಗದಸ್ವರಾ ।
ಯೇನಾಹಂ ಮುನಿವರ್ಯಾತ್ರ ಸ್ನುಷಾ ಶ್ರೀರಾಘವಸ್ಯ ಚ ॥ ೨೪ ॥

ಭವಿಷ್ಯಾಮಿ ತಥಾ ಕಾರ್ಯಂ ತ್ವಯಾ ತ್ವಾಂ ಶರಣಂ ಗತಾ ।
ಇತ್ಯುಕ್ತ್ವಾ ಮುನಿವರ್ಯಸ್ಯ ಪಾದಯೋಃ ಸ್ಥಾಪ್ಯ ಸಾ ಶಿರಃ ॥ ೨೫ ॥

ಚಕಾರ ಕರುಣಾಂ ಬಾಲಾಂ ತದಾ ತಾಂ ಮುನಿರಬ್ರವೀತ್ ।
ಮಾ ಚಿಂತಾಂ ಕುರು ರಂಭೋರು ತ್ವಮುತ್ತಿಷ್ಠಸ್ವ ಬಾಲಿಕೇ ॥ ೨೬ ॥

ಭವಿಷ್ಯಸಿ ತ್ವಂ ರಾಮಸ್ಯ ಸ್ನುಷಾ ಯತ್ನಂ ಕರೋಮ್ಯಹಂ ।
ಇತ್ಯುಕ್ತ್ವಾ ತಾಂ ಸಮಾಶ್ವಾಸ್ಯ ಸ್ವಮಾರ್ಗೇಣ ಮುನಿರ್ಯಯೌ ॥ ೨೭ ॥

ಏತಸ್ಮಿನ್ನಂತರೇ ಯೋಧ್ಯಾ ಪುರ್ಯಾಃ ಸ್ಯಂದನಸಂಸ್ಥಿತಃ ।
ಯೂಪಕೇತುರ್ವನಂ ಪಶ್ಯಂಸ್ತಮಸಾತೀರಮಾಯಯೌ ॥ ೨೮ ॥

ಕೊಂಡು ತುಟಿಗಳನ್ನು ನಡುಗಿಸುತ್ತ ಮೈಯೆಲ್ಲವೂ ರೋಮಾಂಚನವಾಗಿರಲು ಕಾಂತಿಗೆಟ್ಟು ಗದ್ಗದಸ್ವರದಿಂದ ಎಲೈ ಮುನಿವರ್ಯನೇ! ನಾನು ಯಾವ ರೀತಿಯಾಗಿ ರಾಮನಿಗೆ ಸೊಸೆಯಾಗುವೆನೋ ಆ ರೀತಿಯಾಗಿ ನೀನು ಮಾಡು. ನಿನ್ನನ್ನು ಶರಣುಹೊಂದಿದ್ದೇನೆ. ಎಂಬುದಾಗಿ ಪ್ರಾರ್ಥಿಸಿಕೊಳ್ಳುತ್ತ ಆ ಋಷಿಯ ಪಾದಗಳಮೇಲೆ ತನ್ನ ತಲೆಯನ್ನು ಇಟ್ಟು ಬೇಡಿಕೊಂಡಳು.

೨೬–೨೭. ಆಗ ಆ ಮುನಿಗೆ ಆ ಬಾಲಿಕೆಯಮೇಲೆ ಕರುಣೆಯು ಬಂದು ಆಗ ಆ ಮುನಿಯು ಎಲೈ ರಂಭೋರುವೆ! ಚಿಂತಿಸಬೇಡ. ನೀನು ಮೇಲಕ್ಕೇಳು. ರಾಮನಿಗೆ ಸೊಸೆಯಾಗಿ ಆಗುತ್ತೀಯೆ. ನಾನು ಆ ರೀತಿಯಾಗಿ ಪ್ರಯತ್ನಿಸುತ್ತೇನೆ. ಎಂಬುದಾಗಿ ಹೇಳಿ ಆ ಮುನಿಯು ಆಕಾಶಮಾರ್ಗವಾಗಿ ತನ್ನ ದಾರಿಯನ್ನು ಹಿಡಿದು ಹೊರಟನು.

೨೮. ಇಷ್ಟರಲ್ಲಿ ಯೂಪಕೇತುವು ರಥದಲ್ಲಿ ಕುಳಿತು ಅಯೋಧ್ಯೆಯಿಂದ ಹೊರಟು ವನವನ್ನು ನೋಡುತ್ತ ತಮಸಾನದಿಯ ತೀರಕ್ಕೆ ಬಂದನು.

ಕಿಂಚಿತ್ಸೈನ್ಯಯುತೋ ಬಾಲಸ್ತಮಸಾಯಾಂ ವಿಗಾಹ್ಯ ಸಃ ।
ಯಾವತ್ಸಂಧ್ಯಾದಿಕಂ ಕರ್ತುಮುಪವಿಷ್ಟಸ್ತದಾ ಮುನಿಂ ॥ ೨೯ ॥

ದದರ್ಶ ನಾರದಂ ನತ್ವಾ ಪೂಜಯಾಮಾಸ ಸಾದರಂ ।
ತತಃ ಪಪ್ರಚ್ಛ ಮುನಯೇ ಯೂಪಕೇತುಃ ಪುರಃ ಸ್ಥಿತಃ ॥ ೩೦ ॥

ಕುತಸ್ಸಮಾಗತಂ ಚೇತಿ ತಚ್ಛ್ರುತ್ವಾ ನಾರದೋ ಮುನಿಃ ।
ಸರ್ವಂ ವೃತ್ತಂ ಸವಿಸ್ತಾರಂ ಕಥಯಾಮಾಸ ಬಾಲಕಂ ॥ ೩೧ ॥

ತಚ್ಛ್ರುತ್ವಾ ಸಕಲಂ ವೃತ್ತಂ ನತ್ವಾ ತಂ ನಾರದಂ ಮುನಿಂ ।
ಅಬ್ರವೀದ್ಬಾಲಕೋ ವಾಕ್ಯಂ ಸಕ್ರೋಧಂ ಸಂಭ್ರಮಾನ್ವಿತಃ ॥ ೩೨ ॥

---

೨೯. ಇವನು ತನ್ನ ಜೊತೆಯಲ್ಲಿ ಮಿತವಾಗಿ ಸೈನ್ಯವನ್ನು ಕರೆದುಕೊಂಡು ಬಂದಿದ್ದನು. ಅವರೊಡನೆ ತಾನು ತಮಸಾನದಿಯಲ್ಲಿ ಸ್ನಾನಮಾಡಿ ಸಂಧ್ಯಾವಂದನಾದಿಗಳನ್ನು ಮಾಡಲು ಕುಳಿತನು. ಒಡನೆಯೇ ಆ ನಾರದಮುನಿಯು ಬರುತ್ತಿರುವುದನ್ನು ಕಂಡನು.

೩೦. ಬೇಗನೆ ಎದ್ದುಹೋಗಿ ಅವನನ್ನು ಎದುರುಗೊಂಡು ಭಕ್ತಿಯಿಂದ ಪೂಜಿಸಿದನು. ಅನಂತರ ಆ ಯೂಪಕೇತುವು ಅವನ ಎದುರಿಗೆ ನಿಂತುಕೊಂಡು ತಾವು ಎಲ್ಲಿಂದ ಬಂದಿರಿ ? ಎಂದು ಕೇಳಿದನು.

೩೧. ಅದನ್ನು ಕೇಳಿ ನಾರದಮುನಿಯು ಅವನಿಗೆ ಮದನಸುಂದರಿಯ ವೃತ್ತಾಂತವನ್ನೂ, ಅವಳ ತಂದೆಯ ವಿಷಯವನ್ನೂ ವಿಸ್ತಾರವಾಗಿ ಹೇಳಿದನು.

೩೨. ಆ ಬಾಲಕನು ನಾರದನು ಹೇಳಿದ ವಿಷಯಗಳೆಲ್ಲವನ್ನೂ ಕೇಳಿ ಅವನಿಗೆ ನಮಸ್ಕರಿಸಿ ಅವನನ್ನು ಕುರಿತು ಕೋಪದಿಂದಲೂ, ಅವಸರದಿಂದಲೂ ಇಂತೆಂದು ಹೇಳಿದನು.

ಮುನೇ ನೃಪಾಣಾಂ ಸರ್ವೇಷಾಂ ದ್ವೇಷಬುದ್ಧಿಶ್ಚ ರಾಘವೇ ।
ಯಾ ಜಾತಾ ಸಾದ್ಯ ಸರ್ವೇಷಾಂ ಜ್ಞೇಯಾನರ್ಥಕರೀ ಜವಾತ್ ॥ ೩೩ ॥

ಕಂಬುಕಂಠಾದಿಭೂಪಾನಾಂ ಸಾರಂ ಪಶ್ಯಾಮಹೇ ರಣೇ ।
ಮುನೇ ತ್ವತ್ಕೃಪಯಾ ಸರ್ವಾನ್ ಜಿತ್ವಾ ತಾಮಾನಯಾಮ್ಯಹಂ ॥ ೩೪ ॥

ಇತ್ಯುಕ್ತ್ವಾ ಸ ಯಯೌ ಕಾಂತಿಂ ಪಂಚಮೇಽಹನಿ ಸೇನಯಾ ।
ನಾರದೋಽಪಿ ಯಯೌ ರಾಮಂ ದ್ರಷ್ಟುಂ ಪ್ರೀತಮನಾಸ್ತದಾ ॥ ೩೫ ॥

ರಾಮೇಣ ಪೂಜಿತಃ ಪ್ರೇಮ್ಣಾ ಭೋಜನಾರ್ಥಂ ನಿಮಂತ್ರಿತಃ ।
ಅಥ ಭೋಜನವೇಲಾಯಾಂ ಯೂಪಕೇತುಂ ರಘೂತ್ತಮಃ ॥ ೩೬ ॥

---

೩೩. ಎಲೈ ಮುನಿಯೇ! ಎಲ್ಲಾ ರಾಜರಿಗೂ ರಾಘವನಲ್ಲಿ ದ್ವೇಷ ಹುಟ್ಟಿರುವುದನ್ನು ನೋಡಿದರೆ ಅದು ಎಲ್ಲರಿಗೂ ಬೇಗನೆ ಅನರ್ಥವನ್ನು ಉಂಟು ಮಾಡುತ್ತದೆ ಎಂದು ಕಾಣುತ್ತದೆ.

೩೪. ನಾನು ಆ ಕಂಬುಕಂಠನೇ ಮುಂತಾದವರ ಶಕ್ತಿಯನ್ನು ಯುದ್ಧದಲ್ಲಿ ಈಗ ನೋಡುತ್ತೇನೆ. ಎಲೈ ಮುನಿಯೇ! ಆ ರಾಜರೆಲ್ಲರನ್ನೂ ಜಯಿಸಿ ಮದನಸುಂದರಿಯನ್ನು ಕರೆದುಕೊಂಡು ಬರುತ್ತೇನೆ. ನೋಡು.

೩೫. ಹೀಗೆಂದು ಹೇಳಿ ಆ ಯೂಪಕೇತುವು ಶಿವಕಾಂತಿಪುರಕ್ಕೆ ಐದನೆಯ ದಿನವೇ ಸೇನೆಯೊಡನೆ ಹೊರಟನು ಅನಂತರ ನಾರದನು ರಾಮನನ್ನು ನೋಡಲು ಹೊರಟು ಹೋದನು.

೩೬. ಆ ರಾಮನ ಬಳಿಗೆ ಹೋಗಲು ರಾಮನು ಆ ನಾರದನನ್ನು ಪೂಜಿಸಿ ಭೋಜನಕ್ಕೆ ಕರೆದು ಕೂರಿಸಿದನು. ಎಲ್ಲರೂ ಬಂದಿದ್ದರು. ಆಗ ಆ ಭೋಜನದ ವೇಳೆಯಲ್ಲಿ ಯೂಪಕೇತುವು ಭೋಜನಕ್ಕೆ ಬರದಿರುವುದನ್ನು ರಾಮನು ನೋಡಿದನು.

ಅದೃಷ್ಟ್ವಾ ಲಕ್ಷ್ಮಣಂ ಪ್ರಾಹ ಯೂಪಕೇತುರ್ನ ದೃಶ್ಯತೇ ।
ಬಾಲೇಷು ತಂ ಭೋಜನಾರ್ಥಂ ಲಕ್ಷ್ಮಣಾತ್ರ ಸಮಾಹ್ವಯ ॥ ೩೭ ॥

ತದಾ ಸ ಮಾಲತೀಂ ಗತ್ವಾ ಪಪ್ರಚ್ಛ ಲಕ್ಷ್ಮಣೋ ಜವಾತ್ ।
ಸಾ ಪ್ರಾಹ ವನಮಧ್ಯೇದ್ಯ ಕಿಂಚಿತ್ಸೈನ್ಯಯುತೋ ಗತಃ ॥ ೩೮ ॥

ತಚ್ಛ್ರುತ್ವಾ ಲಕ್ಷ್ಮಣೋ ವೃತ್ತಂ ಕಥಯಾಮಾಸ ರಾಘವಂ ।
ಅಥ ರಾಮೋ ಭೋಜನಾದಿ ಸಂಪಾದ್ಯ ಮುನಿನಾ ಸಹ ॥ ೩೯ ॥

ಯಯೌ ಸಭಾಯಾಮಾಸೀನಸ್ತಂ ಮುನಿಂ ವಾಕ್ಯಮಬ್ರವೀತ್ ।
ಪಂಚಸಪ್ತದಿನಾನ್ಯತ್ರ ಸ್ಥೇಯಂ ಮದ್ವಚನಾತ್ತ್ವಯಾ ॥ ೪೦ ॥

---

೩೭. ಆಗ ಲಕ್ಷ್ಮಣನನ್ನು ಕುರಿತು ಎಲೈ ಲಕ್ಷ್ಮಣನೇ ! ಯೂಪಕೇತುವು ಕಾಣುತ್ತಿಲ್ಲವಲ್ಲ ? ಬಾಲಕರೆಲ್ಲರೂ ಬಂದು ಅವನು ಮಾತ್ರ ಬರದಿರಲು ಕಾರಣವೇನು ? ಬೇಗನೆ ಕರೆಸು ಎಂದನು.

೩೮. ಲಕ್ಷ್ಮಣನು ಒಡನೆಯೇ ಮಾಲತಿಯ ಬಳಿಗೆ ಹೋಗಿ ಅವಳನ್ನು ಕುರಿತು ಯೂಪಕೇತುವು ಎಲ್ಲಿಗೆ ಹೋಗಿರುವನು? ಎಂದನು. ಅದಕ್ಕೆ ಆಕೆಯು ಆತನು ಸ್ವಲ್ಪಸೈನ್ಯವನ್ನು ತೆಗೆದುಕೊಂಡು ಕಾಡಿನ ಮಧ್ಯಕ್ಕೆ ಹೋದನು ಎಂದಳು.

೩೯. ಅದನ್ನು ಕೇಳಿ ಲಕ್ಷ್ಮಣನು ಬಂದು ರಾಮನಿಗೆ ಅದೇ ರೀತಿಯಾಗಿ ಹೇಳಿದನು. ಅನಂತರ ರಾಮನು ಇದರಿಂದ ಸ್ವಲ್ಪ ಸಮಾಧಾನಹೊಂದಿ ಆ ಮುನಿಯೊಡನೆ ಭೋಜನವನ್ನು ಮಾಡಿದನು.

೪೦. ಊಟವಾದನಂತರ ಸಭೆಯಲ್ಲಿ ಕುಳಿತುಕೊಂಡು ಆ ರಾಮನು ನಾರದನನ್ನು ಕುರಿತು ತಾವು ಐದಾರು ದಿನಗಳು ಅಂದರೆ ಕೊಂಚದಿನಗಳವರೆಗೆ ಇಲ್ಲಿ ಇರಬೇಕೆಂದು ಹೇಳಿದನು.

ತಥೇತಿ ನಾರದಃ ಪ್ರಾಹ ಸಭಾಯಾಂ ಸಂಸ್ಥಿತಸ್ಸುಖಂ ।
ಅಥ ರಾತ್ರೌ ಯೂಪಕೇತುಮದೃಷ್ಟ್ವಾ ರಘುನಂದನಃ ॥ ೪೧ ॥

ಉಪಹಾರಂ ಕರ್ತುಕಾಮಃ ಪುನರ್ಲಕ್ಷ್ಮಣಮಬ್ರವೀತ್ ।
ಆಕಾರಯ ಯೂಪಕೇತುಂ ನಾಯಂ ದೃಷ್ಟೋ ಮಯಾ ಶಿಶುಃ ॥ ೪೨ ॥

ತಥೇತಿ ರಾಮವಚನಾತ್ಪುನರ್ಗತ್ವಾ ತು ಮಾಲತೀಂ ।
ಪಪ್ರಚ್ಛ ಯೂಪಕೇತುಂ ಸ ಸಾ ಪ್ರಾಹ ನಾಗತಸ್ತ್ವಿತಿ ॥ ೪೩ ॥

ತತಸ್ಸ ವಿಹ್ವಲೋ ಭೂತ್ವಾ ರಾಮಂ ವೃತ್ತಂ ನ್ಯವೇದಯತ್ ।
ರಾಮೋಽಪಿ ನಾಗತಂ ಶ್ರುತ್ವಾ ಬಂಧುಭ್ಯಾಂ ವಿಹ್ವಲೋಽಭವತ್ ॥ ೪೪ ॥

ತತಸ್ಸಾ ಜಾನಕೀ ಶ್ರುತ್ವಾ ವಿಹ್ವಲಾ ಖಿನ್ನಮಾನಸಾ ।
ದುದ್ರಾವ ರಾಘವಾಗ್ರೇ ಸಾ ಸರ್ವೇ ತೂಷ್ಣೀಂ ಕಥಂ ಸ್ಥಿತಾಃ ॥ ೪೫ ॥

---

೪೧. ನಾರದನು ಹಾಗೆಯೇ ಆಗಲೆಂದು ಹೇಳಿ ಆ ಸಭೆಯಲ್ಲಿ ಸುಖವಾಗಿ ಕುಳಿತಿದ್ದನು. ಮತ್ತೆ ರಾತ್ರಿಯ ಉಪಹಾರದ ಸಮಯದಲ್ಲಿಯೂ ಆ ಯೂಪಕೇತುವನ್ನು ಕಾಣಲಿಲ್ಲ.

೪೨-೪೩. ಆಗ ಲಕ್ಷ್ಮಣನನ್ನು ಕುರಿತು ಯೂಪಕೇತುವನ್ನು ನೋಡಲೇ ಇಲ್ಲ. ಅವನನ್ನು ಕರೆಸು ಎಂದನು. ಲಕ್ಷ್ಮಣನು ಹಾಗೆಯೇ ಆಗಲೆಂದು ಮತ್ತೆ ಮಾಲತಿಯ ಬಳಿಗೆ ಹೋದನು. ಅವಳನ್ನು ಕುರಿತು ಯೂಪಕೇತುವೆಲ್ಲೆಂದು ಕೇಳಲು ಆಕೆಯು ಅವನು ಇನ್ನೂ ಬರಲಿಲ್ಲವೆಂದಳು.

೪೪. ಆಗ ಲಕ್ಷ್ಮಣನ ಮನಸ್ಸಿನಲ್ಲಿ ಕಳವಳವುಂಟಾಗಿ ರಾಮನಿಗೆ ಆ ವಿಷಯವನ್ನು ತಿಳಿಸಿದನು. ರಾಮನೂ ಕೂಡ ಆ ಯೂಪಕೇತುವು ಬರದಿದ್ದುದನ್ನು ಕೇಳಿ ಕಳವಳಗೊಂಡು ಖಿನ್ನನಾದನು.

೪೫. ಈ ವಿಷಯವನ್ನು ಜಾನಕಿಯೂ ಕೇಳಿ ಸೊಸೆಯರೊಂದಿಗೆ ಕಳವಳಗೊಂಡು ರಾಮನ ಬಳಿಗೆ ಓಡಿಬಂದು ಇದೇನು? ಯೂಪಕೇತುವು ಬಂದಿಲ್ಲವಲ್ಲ? ಎಲ್ಲರೂ ಸುಮ್ಮನೆ ಕುಳಿತುಕೊಂಡಿರುವಿರಲ್ಲ? ಎಂದಳು.

ಇತಿ ತಾನ್ ಪ್ರಾಹ ವೈದೇಹೀ ತದಾ ಸರ್ವೇತಿವಿಹ್ವಲಾಃ ।
ತ್ಯಕ್ತ್ವೋಪಹಾರಾನ್ ವೇಗೇನ ತಚ್ಛೋಧಾರ್ಥಂ ಸಮುದ್ಯತಾಃ ॥ ೪೬ ॥

ತದಾ ತಾನ್ವಿಹ್ವಲಾನ್ ದೃಷ್ಟ್ವಾ ನಾರದಃ ಪ್ರಾಹ ರಾಘವಂ ।
ಕಾಂತಿವೃತ್ತಂ ಯೂಪಕೇತೋಃ ಪ್ರಯಾಣಾದಿಕಮಾದರಾತ್ ॥ ೪೭ ॥

ತತ್ಸರ್ವಂ ರಾಘವಃ ಶ್ರುತ್ವಾ ಕಿಂಚಿತ್ತುಷ್ಟಮನಾಸ್ತದಾ ।
ಲಕ್ಷ್ಮಣಂ ಪ್ರಾಹ ವೇಗೇನ ಶತ್ರುಘ್ನೋ ದ್ಯೈವ ಗಚ್ಛತು ॥ ೪೮ ॥

ಸೇನಯಾ ಚತುರಂಗಿಣ್ಯಾ ಜವಾತ್ಕಾಂತಿಂ ಕುಶಾದಿಭಿಃ ।
ತಥೇತಿ ಲಕ್ಷ್ಮಣಶ್ಚೋಕ್ತ್ವಾ ಚೋಪಹಾರಾನ್ ವಿಧಾಯ ಸಃ ॥ ೪೯ ॥

ಸೇನಯಾ ಬಾಲಕೈರ್ವೇಗಾಚ್ಛತ್ರುಘ್ನಂ ಪ್ರೇಷಯನ್ನಿಶಿ ।
ರಾಮಂ ನತ್ವಾಥ ಶತ್ರುಘ್ನಃ ಶೀಘ್ರಂ ಸ್ಯಂದನಸಂಸ್ಥಿತಃ ॥ ೫೦ ॥

---

೪೬. ವೈದೇಹಿಯು ಹೀಗೆಂದೆನ್ನಲು ಆಗ ಎಲ್ಲರೂ ಬಹುವಾಗಿ ಕಳವಳಗೊಂಡರು. ಮತ್ತು ಕೂಡಲೇ ತಮ್ಮ ಉಪಹಾರಗಳನ್ನು ಬಿಟ್ಟು ಬೇಗನೆ ಎದ್ದು ಅವನನ್ನು ಹುಡುಕಲು ಹೊರಟರು.

೪೭. ಅವರೆಲ್ಲರೂ ಇಂತು ಕಳವಳಗೊಂಡಿರುವುದನ್ನು ನೋಡಿ ನಾರದನು ರಾಮನನ್ನು ಕುರಿತು ಆ ಶಿವಕಾಂತಿಯ ವಿಷಯವನ್ನೂ, ಅಲ್ಲಿಗೆ ಯೂಪಕೇತುವಿನ ಪ್ರಯಾಣವನ್ನೂ ಎಲ್ಲವನ್ನೂ ವಿಸ್ತಾರವಾಗಿ ತಿಳಿಸಿದನು.

೪೮. ರಾಮನು ಅದೆಲ್ಲವನ್ನೂ ಕೇಳಿ ಸ್ವಲ್ಪಸಂತೋಷಗೊಂಡನು. ಲಕ್ಷ್ಮಣನನ್ನು ಕುರಿತು ಶತ್ರುಘ್ನನು ಈಗಲೇ ಶಿವಕಾಂತಿಗೆ ಹೊರಡಲಿ ಹೇಳು. ಎಂದನು.

೪೯–೫೦. ಚತುರಂಗಸೇನೆಯೂ ಅವನೊಡನೆ ಹೋಗಲಿ. ಕುಶನೇ ಮುಂತಾದ ಬಾಲಕರೂ ಅವನೊಡನೆ ಹೋಗಲಿ ಎನ್ನಲು ಲಕ್ಷ್ಮಣನು ಹಾಗೆಯೇ ಆಗಲಿ ಎಂದು ಹೇಳಿ ಅನಂತರ ಉಪಹಾರವನ್ನು ಮಾಡಿ ಶತ್ರುಘ್ನನನ್ನೂ ಆ ರಾತ್ರಿಯಲ್ಲಿಯೇ ಸೇನೆಯನ್ನು ಕೊಟ್ಟು ಕುಶಾದಿಗಳೊಡನೆ ಕಳುಹಿಸಿದನು. ಆ ಶತ್ರುಘ್ನನು ರಾಮನಿಗೆ ನಮಸ್ಕರಿಸಿ ಒಡನೆಯೇ ರಥದಲ್ಲಿ ಕುಳಿತನು.

ಯಯೌ ಕಾಂತಿಸಮೀಪಂ ಸ ಷಷ್ಠೇಽಹನಿ ಮುದಾನ್ವಿತಃ ।
ಏತಸ್ಮಿನ್ನಂತರೇ ಕಾಂತಿಪುರ್ಯಾಂ ತತ್ರ ಸ್ವಯಂವರೇ ॥ ೫೧ ॥
ಸಭಾಯಾಂ ರಾಜಶಾರ್ದೂಲಾಸ್ಸಂಸ್ಥಿತಾಸ್ತೇ ಮುದಾನ್ವಿತಾಃ ।
ಅಥ ಸಾ ಶಿಬಿಕಾರೂಢಾ ಯಯೌ ಮದನಸುಂದರೀ ॥ ೫೨ ॥
ಕಿಂಚಿತ್ ಮ್ಲಾನಮುಖೀ ದುಃಖಾತ್ ಸ್ಮರಂತೀ ನಾರದೇರಿತಂ ।
ವೃದ್ಧೋಪಮಾತಾ ತಾನ್ ಸರ್ವಾನ್ ದರ್ಶಯಾಮಾಸ ಪಾರ್ಥಿವಾನ್ ॥ ೫೩ ॥
ಯೂಪಕೇತುಸ್ತದಾವೇಗಾದ್ಗತ್ವಾ ತೂಷ್ಣೀಂ ಸಭಾಂಗಣಂ ।
ಮೋಹನಾಸ್ತ್ರಂ ವಿಸೃಜ್ಯಾಥ ಮೋಹಯಾಮಾಸ ತಾಂ ಸಭಾಂ ॥ ೫೪ ॥
ಮೋಹಿತೈರ್ಮೋಹನಾಸ್ತ್ರೇಣ ನ್ಯಸ್ತಾಂ ತದ್ವಾಹಕೈರ್ಭುವಿ ।
ರಥೇನ ಶಿಬಿಕಾಂ ಗತ್ವಾ ಧೃತ್ವಾ ಮದನಸುಂದರೀಂ ॥ ೫೫ ॥

---

೫೧. ಆ ಶತ್ರುಘ್ನನು ಆರನೆಯ ದಿನದಲ್ಲಿ ಸಂತೋಷದಿಂದ ಆ ಶಿವಕಾಂತಿಪುರದ ಹತ್ತಿರಕ್ಕೆ ಹೋದನು. ಇಷ್ಟರ ವೇಳೆಗೆ ಆ ಶಿವಕಾಂತಿಯಲ್ಲಿ ಸ್ವಯಂವರವು ನಡೆಯಲು ಮೊದಲಾಗಿದ್ದಿತು.

೫೨. ರಾಜರೆಲ್ಲರೂ ಆ ಸ್ವಯಂವರದ ಸಭೆಯಲ್ಲಿ ಸಂತೋಷದಿಂದ ಕುಳಿತಿದ್ದರು. ಆಗ ಮದನಸುಂದರಿಯು ಪಲ್ಲಕ್ಕಿಯಲ್ಲಿ ಕುಳಿತು ಸಭೆಗೆ ಬಂದಳು.

೫೩. ನಾರದನು ಹೇಳಿದುದನ್ನು ಸ್ಮರಿಸಿಕೊಳುತ್ತ ಸ್ವಲ್ಪಕಳೆಗುಂದಿದವಳಾಗಿದ್ದಳು. ಮುದುಕಿಯಾದ ಒಬ್ಬ ದಾದಿಯು ಆ ರಾಜರೆಲ್ಲರನ್ನೂ ತೋರಿಸುತ್ತ ಬಂದಳು.

೫೪. ಯೂಪಕೇತುವು ಅಷ್ಟರೊಳಗೆ ಆ ಸಭೆಗೆ ಬೇಗನೆ ಹೋಗಿ ಕುಳಿತು ಮೋಹನಾಸ್ತ್ರವನ್ನು ಬಿಟ್ಟು ಆ ಸಭೆಯನ್ನು ಪ್ರಜ್ಞೆಯಿಲ್ಲದಂತೆ ಮಾಡಿದನು.

೫೫. ಮೋಹನಾಸ್ತ್ರದಿಂದ ಮೋಹಿತರಾದ ಪಲ್ಲಕ್ಕಿಯನ್ನು ಹೊರುವವರು ಆ ಪಲ್ಲಕ್ಕಿಯನ್ನು ಹಾಗೆಯೇ ಅಲ್ಲಿಯೇ ಇಟ್ಟುಬಿಟ್ಟರು. ಆಗ ಯೂಪಕೇತುವು ಆ ಪಲ್ಲಕ್ಕಿಯ ಬಳಿಗೆ ಹೋಗಿ ಮದನ ಸುಂದರಿಯ ಬಳಿಯಲ್ಲಿ ನಿಂತುಕೊಂಡನು.

ನಿಜಾಭಿಧಾನಂ ಸಂಶ್ರಾವ್ಯ ತಾಂ ತುಷ್ಟಾವುಕರೋತ್ತದಾ ।
ಅಥ ಸಾ ವರಯಾಮಾಸ ವೀರಂ ಮದನಸುಂದರೀ ॥ ೫೬ ॥

ಮಾಲೋ ಚ ಮಾಲಾಂ ತತ್ಕಂಠೇ ನವರತ್ನಮಯೀಂ ಶುಭಾಂ ।
ತತಸ್ಸ ಯೂಪಕೇತುರ್ಹಿ ರಥೇ ಮದನಸುಂದರೀಂ ॥ ೫೭ ॥

ನಿವೇಶ್ಯ ಕಾಂತಿಪುರ್ಯಾ ಸ ಬಹಿರ್ಗತ್ವಾ ಸ್ಥಿರೋಽಭವತ್ ।
ತಾಮಾಹ ದಯಿತಾಂ ವೀರಸ್ತ್ವಿದಾನೀಂ ತ್ವಂ ಭಯಂ ತ್ಯಜ ॥ ೫೮ ॥

ಜಿತ್ವಾ ಸರ್ವಾನ್ ನೃಪಾನದ್ಯ ತ್ವಯಾ ಗಚ್ಛಾಮ್ಯಹಂ ಪುರೀಂ ।
ತತ್ತಸ್ಯ ವಚನಂ ಶ್ರುತ್ವಾ ಸಾ ಪ್ರಾಹ ವಚನಂ ತದಾ ॥ ೫೯ ॥

---

೫೬. ಅವಳಿಗೆ ತನ್ನ ಹೆಸರನ್ನೂ, ತಾನಾರೆಂಬುದನ್ನೂ ತಿಳಿಸಲು ಆಕೆಯು ಸಂತೋಷಗೊಂಡಳು. ಆ ಮದನಸುಂದರಿಯು ಇದನ್ನು ತಿಳಿದು ವೀರನಾದ ಆ ಯೂಪಕೇತುವನ್ನು ವರಿಸಿದಳು.

೫೭. ಆ ಮದನಸುಂದರಿಯು ತನ್ನ ಕೈಯಲ್ಲಿದ್ದ ನವರತ್ನಮಾಲೆಯನ್ನು ಆತನ ಕತ್ತಿಗೆ ಹಾಕಿದಳು. ಅನಂತರ ಯೂಪಕೇತುವು ಆ ಮದನ ಸುಂದರಿಯನ್ನು ಕರೆತಂದು ರಥದಲ್ಲಿ ಕೂರಿಸಿದನು.

೫೮. ಅನಂತರ ರಥವನ್ನು ಶಿವಕಾಂತಿಪುರಿಯಿಂದ ಹೊರಗಡೆಗೆ ತೆಗೆದು ಕೊಂಡು ಹೋಗಿ ನಿಲ್ಲಿಸಿದನು. ಆಗ ಆಕೆಯನ್ನು ಕುರಿತು ವೀರನಾದ ಯೂಪಕೇತುವು ಇನ್ನುಮೇಲೆ ನೀನು ಭಯಪಡಬೇಡ.

೫೯. ಈಗಲೇ ನಾನು ಎಲ್ಲಾ ರಾಜರನ್ನೂ ಗೆದ್ದು ನಿನ್ನನ್ನು ಕರೆದು ಕೊಂಡು ಅಯೋಧ್ಯಾಪಟ್ಟಣಕ್ಕೆ ಹೋಗುತ್ತೇನೆ. ಎನ್ನಲು ಆಕೆಯು ಅವನ ಮಾತನ್ನು ಕೇಳಿ ಇಂತೆಂದಳು.

ಬಹವಸ್ಸಂತಿ ರಾಜಾನಸ್ತ್ವನೇಕಃ ಸ್ವಲ್ಪಸೇನಯಾ ।
ಅಸಂಖ್ಯಾತಾನಿ ಸೈನ್ಯಾನಿ ತೇಷಾಂ ಪಶ್ಯ ಸಮಂತತಃ ॥ ೬೦ ॥

ಕಥಂ ಯುದ್ಧಂ ಘಟೇದತ್ರ ಮಾ ಕುರುಷ್ವಾದ್ಯ ಸಂಗರಂ ।
ಶೀಘ್ರಂ ಮಾಂ ನಯ ಸಾಕೇತಂ ತತೋ ರಾಮೇಣ ಸೇನಯಾ ॥ ೬೧ ॥

ಯುದ್ಧಂ ಕುರು ನೃಪೈರ್ಘೋರಂ ಶೃಣು ಮದ್ವಚನಂ ಪ್ರಭೋ ।
ಮಾ ಸಾಹಸಂ ಕುರುಷ್ವಾತ್ರ ಪ್ರಾರ್ಥಯಾಮೀತಿ ತೇ ಮುಹುಃ ॥ ೬೨ ॥

ಇತಿ ತಸ್ಯಾಃ ವಚಃ ಶ್ರುತ್ವಾ ತಾಮಾಶ್ವಾಸ್ಯ ಪುನಃ ಪುನಃ ।
ಉಪಸಂಹಾರಯಾಮಾಸ ಮೋಹನಾಸ್ತ್ರಂ ಸ ಲೀಲಯಾ ॥ ೬೩ ॥

---

೬೦. ಎಲೈ ವೀರನೇ ! ಬಹು ಮಂದಿರಾಜರು ನಿನಗೆ ಎದುರಾಳಿಗಳಾಗಿರುವರು. ನೀನಾದರೋ ಒಬ್ಬನು ನಿನ್ನ ಸೈನ್ಯವೂ ಕೂಡ ಬಹು ಅಲ್ಪವಾಗಿದೆ. ಅವರೂ ಅವರ ಸೈನ್ಯಗಳೂ ಅಸಂಖ್ಯಾತವಾಗಿವೆ. ಇಗೋ ಸುತ್ತಲೂ ನೋಡು.

೬೧. ಈ ಸಮಯದಲ್ಲಿ ಯುದ್ಧವು ಯೋಗ್ಯವಲ್ಲ. ಯುದ್ಧವನ್ನು ಮಾಡಬೇಡ. ನನ್ನನ್ನು ಬೇಗನೆ ಅಯೋಧ್ಯೆಗೆ ಕರೆದುಕೊಂಡು ಹೋಗು. ಅನಂತರ ಸೇನೆಯನ್ನು ತೆಗೆದುಕೊಂಡು ರಾಮನನ್ನು ಜೊತೆಮಾಡಿಕೊಂಡು ಬಂದು ಆ ರಾಜರೊಡನೆ ಯುದ್ಧವನ್ನು ಮಾಡು.

೬೨. ಎಲೈ ಪ್ರಭುವೇ ! ನನ್ನ ಮಾತನ್ನು ಕೇಳು. ಈಗ ನೀನು ಸಾಹಸದ ಕಾರ್ಯವನ್ನು ಮಾಡಬೇಡ. ಹೀಗೆಂದು ನಾನು ನಿನ್ನನ್ನು ಬಹುವಾಗಿ ಕೇಳಿಕೊಳ್ಳುತ್ತೇನೆ.

೬೩. ಆ ಮದನಸುಂದರಿಯು ಹೀಗೆ ಹೇಳಿದುದನ್ನು ಕೇಳಿ ಆಕೆಗೆ ಬಹುವಾಗಿ ಸಮಾಧಾನವನ್ನು ಹೇಳಿ ಒಡನೆಯೇ ಲೀಲೆಯಿಂದಲೇ ಆ ಮೋಹನಾಸ್ತ್ರವನ್ನು ಉಪಸಂಹಾರಮಾಡಿದನು.

ತದಾ ತೇ ಪಾರ್ಥಿವಾಸ್ಸರ್ವೇ ಶ್ರುತ್ವಾ ನೀತಾಂ ವಧೂಂ ಬಲಾತ್ ।
ಶತ್ರುಘ್ನತನಯೇನೇತಿ ಸ್ತ್ರೀವಾಕ್ಯೈಸ್ಸ್ವಯಂವರೇ ಸ್ಥಿತಾಃ ॥ ೬೪ ॥

ನಿರ್ಯಯುಃ ಕೋಟಿಶೋ ಯೋದ್ಧುಂ ಸ್ವಸ್ವಸೇನಾವೃತಾ ಜವಾತ್ ।
ಚಂಪಿಕಾಯಾಸ್ಸುಮತ್ಯಾಶ್ಚ ಪೂರ್ವವೈರೇಣ ದರ್ಪಿತಾಃ ॥ ೬೫ ॥

ದುದ್ರುವುರ್ನೇಮಿಮಾರ್ಗೇಣ ದದೃಶುಸ್ತಂ ರಥಸ್ಥಿತಂ ।
ಯುಕ್ತಂ ಮದನಸುಂದರ್ಯಾ ಬಿಭ್ರಂತಂ ಮಾಲಿಕಾಂ ಹೃದಿ ॥ ೬೬ ॥

ತತಸ್ತಂ ಮುಮುಚುಸ್ಸರ್ವೇ ನಾನಾಶಸ್ತ್ರಾಣಿ ಸೈನಿಕಾಃ ।
ಯೂಪಕೇತುಸ್ತದಾ ವೇಗಾತ್ ಠಣತ್ಕೃತ್ಯ ಮಹದ್ಧನುಃ ॥ ೬೭ ॥

---

೬೪. ಆಗ ಆ ರಾಜರೆಲ್ಲರೂ ಶತ್ರುಘ್ನನ ಮಗನಾದ ಯೂಪಕೇತುವು ವಧುವನ್ನು ಬಲಾತ್ಕಾರದಿಂದ ಕರೆದುಕೊಂಡು ಹೋದನೆಂದು ಹೆಂಗಸರು ಹೇಳಿದುದನ್ನು ಕೇಳಿದರು.

೬೫. ಒಡನೆಯೇ ರಥದಲ್ಲಿ ಎಲ್ಲರೂ ಕುಳಿತರು. ತಮ್ಮ ತಮ್ಮ ಸೈನ್ಯದಿಂದ ಕೂಡಿಕೊಂಡು ಕೋಟಿಗಟ್ಟಲೆಯಲ್ಲಿ ವೇಗದಲ್ಲಿ ಯುದ್ಧಕ್ಕೆ ಹೊರಟರು. ಚಂಪಿಕೆ ಸುಮತಿಯರ ಸಂಬಂಧವಾದ ಪೂರ್ವವೈರವು ಇವರಿಗೆ ಮತ್ತೂ ದರ್ಪವನ್ನುಂಟುಮಾಡಿದ್ದಿತು.

೬೬. ಅವರೆಲ್ಲರೂ ರಥದ ಚಕ್ರದ ಪಟ್ಟಿಯ ಗುರುತನ್ನು ನೋಡಿಕೊಂಡು ಅದನ್ನು ಅನುಸರಿಸಿ ಹೊರಟು ರಥದಲ್ಲಿ ಕುಳಿತಿದ್ದ ಯೂಪಕೇತುವನ್ನು ನೋಡಿದರು. ಅವನ ಬಳಿಯಲ್ಲಿ ಆ ಮದನಸುಂದರಿಯು ಇದ್ದಳು. ಸ್ವಯಂವರ ಮಾಲಿಕೆಯು ಆತನ ಕತ್ತಿನಲ್ಲಿ ಜೋಲಾಡುತ್ತಿದ್ದಿತು.

೬೭. ಆ ಸೈನಿಕರೆಲ್ಲರೂ ಅವನಮೇಲೆ ಶಸ್ತ್ರಾಸ್ತ್ರಗಳನ್ನು ಬಿಟ್ಟರು. ಇದನ್ನು ನೋಡಿ ಯೂಪಕೇತುವು ತನ್ನ ದೊಡ್ಡ ಧನುಸ್ಸನ್ನು ತೆಗೆದುಕೊಂಡು ಹೆದೆಯೇರಿಸಿ ಠಣ್ ಎನಿಸಿ ಸದ್ದನ್ನು ಮಾಡಿದನು.

ವಾಯವ್ಯಾಸ್ತ್ರೇಣ ತಾನ್ಸರ್ವಾನುದ್ಧೂಯ ದಶದಿಕ್ಷು ಸಃ ।
ಪ್ರಾಕ್ಷಿಪತ್ಪಾರ್ಥಿವಾನ್ ಸೈನ್ಯೈಃ ನಾನಾವಾಹನಸಂಸ್ಥಿತಾನ್ ॥ ೭೮ ॥

ತದಾ ಸ ಕಂಬುಕಂಠೋಽಪಿ ಪೂರ್ವವೈರಮನುಸ್ಮರನ್ ।
ಚಂಪಿಕಾಯಾಸ್ಸುಮತ್ಯಾಶ್ಚ ಸ್ವಯಂವರಸಮುದ್ಭವಂ ॥ ೭೯ ॥

ವಿಶೇಷಾನ್ನಿಜಕನ್ಯಾಯಾ ವೈರತೋ ಹರಣಂ ಬಲಾತ್ ।
ಮಹಾಕ್ರೋಧಾನ್ನಿರ್ಯಯೌ ಸ್ವಸೈನ್ಯೇನ ಮಹತಾ ವೃತಃ ॥ ೮೦ ॥

ಕುರ್ವನ್ ದುಂದುಭಿಘೋಷಾಂಶ್ಚ ಯುದ್ಧಾರ್ಥಂ ಯೂಪಕೇತುನಾ ।
ಯೂಪಕೇತುರಪಿ ಶ್ರುತ್ವಾ ದುಂದುಭೀನಾಂ ಮಹತ್ಸ್ವನಂ ॥ ೮೧ ॥

---

೭೮. ವಾಯುವ್ಯಾಸ್ತ್ರದಿಂದ ಅವರೆಲ್ಲರನ್ನೂ ಯೂಪಕೇತುವು ಹತ್ತುದಿಕ್ಕುಗಳಿಗೂ ಹಾರಿಸಿದನು. ನಾನಾ ವಾಹನಗಳಲ್ಲಿ ಕುಳಿತಿದ್ದ ರಾಜರನ್ನೂ, ಅವರ ಸೈನ್ಯಗಳನ್ನೂ ಕೂಡಲೇ ಒಟ್ಟೊಟ್ಟಿಗೇ ಎಸೆದನು.

೭೯–೮೦. ಆಗ ಕಂಬುಕಂಠನೂ ಕೂಡ ಚಂಪಿಕೆ ಸುಮತಿಯರ ಸಂಬಂಧವಾದ ಹಿಂದಿನ ವೈರವನ್ನು ಸ್ಮರಿಸಿಕೊಂಡನು. ಅದೂ ಅಲ್ಲದೆ ತನ್ನ ಮಗಳನ್ನು ವೈರದಿಂದ ಹರಣಮಾಡಿರುವುದನ್ನೂ ನೆನಸಿಕೊಂಡನು. ಆದರಿಂದ ಬಹು ಸೈನ್ಯವನ್ನು ಕೂಡಿಸಿ ಆ ಸೈನ್ಯದೊಡನೆ ಯೂಪಕೇತುವಿನಮೇಲೆ ಯುದ್ಧಕ್ಕೆ ಹೊರಟನು.

೮೧. ಯೂಪಕೇತುವಿನೊಡನೆ ಯುದ್ಧಕ್ಕೆ ಹೊರಡಲು ದುಂದುಭಿಧ್ವನಿಯನ್ನು ಮಾಡಿಸಿದನು. ಯೂಪಕೇತುವೂ ಕೂಡ ದುಂದುಭಿಯ ಘೋರವಾದ ಆ ಧ್ವನಿಯನ್ನು ಕೇಳಿದನು.

ಕಾಂತಿಪುರ್ಯುತ್ತರದ್ವಾರಪುರತಸ್ಸಂಸ್ಥಿತೋ ರಥೀ ।
ಠಣತ್ಕೃತ್ಯಮಹಚ್ಚಾಪಂ ಸಂದಧೇ ಶಸ್ತ್ರಮುತ್ತಮಂ ॥ ೭೨ ॥

ಯೇ ಯೇ ವೀರಾಃ ಪುರದ್ವಾರಾನ್ನಿರ್ಗತಾಶ್ಚ ಬಹಿಃ ಶರೈಃ ।
ತಾನ್ ಜಘಾನ ಕ್ಷಣಾದೇವ ಪ್ರೇತೈರ್ದ್ವಾರಂ ರುರೋಧ ಸಃ ॥ ೭೩ ॥

ತಂ ದೃಷ್ಟ್ವಾ ಯೂಪಕೇತೋಶ್ಚ ಕಂಬುಕಂಠಃ ಪರಾಕ್ರಮಂ ।
ಯಯೌ ಸ್ವಯಂ ಸ್ಯಂದನೇನ ಪ್ರೇತಸಂಘಂ ವಿದಾರ್ಯ ಚ ॥ ೭೪ ॥

ಶೇಷಸೈನ್ಯೇನ ಸಂಯುಕ್ತೋ ಯೂಪಕೇತುಂ ಕ್ರುಧಾ ಜವಾತ್ ।
ತದಾಹ ಯೂಪಕೇತುಂ ಸ ಮಯಾ ತ್ವಂ ಸಂಗರಂ ಕುರು ॥ ೭೫ ॥

---

೭೨. ಒಡನೆಯೇ ಆ ಕಾಂತಿಪುರಿಯ ಉತ್ತರದ್ವಾರದಲ್ಲಿ ರಥದಲ್ಲಿ ಸಿದ್ಧನಾಗಿ ನಿಂತನು. ಮತ್ತು ತನ್ನ ಚಾಪವನ್ನು ಟ್ಠ ಎಂದೆನ್ನಿಸುತ್ತ ಉತ್ತಮೋತ್ತಮವಾದ ಬಾಣವನ್ನು ಹೂಡಿದನು.

೭೩. ಆ ಉತ್ತರದ ಬಾಗಿಲಿನಿಂದ ಯಾರು ಯಾರು ಹೊರಕ್ಕೆ ಹೊರಡುವರೋ ಅವರೆಲ್ಲರನ್ನೂ ಬಾಣದಿಂದ ಕೊಲ್ಲುತ್ತ ಬಂದನು. ಯೂಪಕೇತುವು ಕೊಂದ ರಾಜರಿಂದ ಈ ಕಾಂತಿಮತಿಯ ಉತ್ತರದ್ವಾರವು ತಿರುಗಾಡದಂತೆ ಹೆಣಗಳಿಂದ ಅಡ್ಡಗಟ್ಟ ಹೋಯಿತು.

೭೪ ಈ ಕಂಬುಕಂಠನು ಯೂಪಕೇತುವಿನ ಪರಾಕ್ರಮವನ್ನು ನೋಡಿ ತಾನು ಆ ಹೆಣಗಳನ್ನು ಭೇದಿಸಿಕೊಂಡು ರಥವನ್ನು ಬಿಟ್ಟುಕೊಂಡು ಯೂಪಕೇತುವಿನ ಬಳಿಗೆ ಬಂದನು.

೭೫. ಕಳೆದುಳಿದ ಸೈನ್ಯವನ್ನು ಜೊತೆಯಲ್ಲಿ ಕರೆದುಕೊಂಡು ಬಂದಿದ್ದನು. ಆ ಸೈನ್ಯವನ್ನು ಸೇರಿಸಿಕೊಂಡು ಯೂಪಕೇತುವಿನಮೇಲೆ ಕೋಪದಿಂದ ಬಿದ್ದನು. ಎಲೈ ಯೂಪಕೇತುವೇ ! ನನ್ನೊಡನೆ ನೀನು ಯುದ್ಧವನ್ನು ಮಾಡು.

ಕಿಮೇತಾನ್ನೃಶಕಾನ್ ಹತ್ವಾ ಪೌರುಷಂ ಮನ್ಯಸೇ ಜಡ ।
ಇತ್ಯುಕ್ತ್ವಾ ಸಪ್ತಭಿರ್ಬಾಣೈರ್ಯೂಪಕೇತುಂ ಜಘಾನ ಸಃ ॥ ೭೬ ॥

ತಾನ್ಬಾಣಾನಾಗತಾನ್ ದೃಷ್ಟ್ವಾ ಯೂಪಕೇತುರ್ನಿಜೈಃಶ್ಶರೈಃ ।
ತಾನ್ ಛಿತ್ವಾ ನವಬಾಣೈಸ್ತಚ್ಚಾಪಂ ಸಾರಥಿನಂ ಧ್ವಜಂ ॥ ೭೭ ॥

ಕವಚಂ ಮುಕುಟಂ ಛಿತ್ವಾ ಜಘಾನ ತುರಗಾನಪಿ ।
ಪದ್ಭ್ಯಾಂ ತದಾ ಕಂಬುಕಂಠೋ ಗದಾಮಾದಾಯ ದುದ್ರುವೇ ॥ ೭೮ ॥

ತಾವತ್ಸಹಸ್ರಧಾ ಬಾಣೈರ್ಯೂಪಕೇತುಶ್ಚಕಾರ ತಾಂ ।
ತತೋ ಬಧ್ವಾ ದೃಢಾಂ ಮುಷ್ಟಿಂ ಕಂಬುಕಂಠಸ್ತ್ವರಾನ್ವಿತಃ ॥ ೭೯ ॥

---

೭೬. ಎಲೈ ಜಡನೇ! ಈ ಸೊಳ್ಳೆಗಳನ್ನು ಕೊಂದು ನಾನು ಪರಾಕ್ರಮಿಯೆಂಬುದಾಗಿ ಏತಕ್ಕೆ ಭಾವಿಸಿಕೊಳ್ಳುತ್ತೀಯೆ. ಹೀಗೆಂದು ಹೇಳಿ ಏಳು ಬಾಣಗಳನ್ನು ಬಿಟ್ಟು ಆ ಯೂಪಕೇತುವನ್ನು ಹೊಡೆದನು.

೭೭. ಆ ಬಾಣಗಳು ಬರುತ್ತಿರುವುದನ್ನು ನೋಡಿ ಯೂಪಕೇತುವು ತನ್ನ ಬಾಣಗಳನ್ನು ಬಿಟ್ಟು ಅವನ್ನು ಕತ್ತರಿಸಿ ಹೊಸಬಾಣಗಳನ್ನು ಆ ಎದುರಾಳಿಯ ಮೇಲೆ ಬಿಟ್ಟನು.

೭೮. ಆ ಬಾಣಗಳಿಂದ ಕಂಬುಕಂಠನ ಬಿಲ್ಲನ್ನೂ, ಸಾರಥಿಯನ್ನೂ, ಧ್ವಜವನ್ನೂ, ಕವಚವನ್ನೂ, ಕಿರೀಟವನ್ನೂ ನಾಶಪಡಿಸಿ ಕುದುರೆಗಳನ್ನೂ ಕೊಂದನು. ಅನಂತರ ಆ ಕಂಬುಕಂಠನು ಗದೆಯನ್ನು ತೆಗೆದುಕೊಂಡು ಕಾಲಿನಿಂದಲೇ ಹೋಗಿ ಆ ಯೂಪಕೇತುವಿನಮೇಲೆ ಬಿದ್ದನು.

೭೯. ಆಗ ಯೂಪಕೇತುವು ಬಾಣವನ್ನು ಬಿಟ್ಟು ಆ ಗದೆಯನ್ನು ಸಾವಿರ ಪಾಲಾಗಿ ಖಂಡಿಸಿದನು. ಅನಂತರ ಕಂಬುಕಂಠನು ವಜ್ರಮುಷ್ಟಿಯನ್ನು ಹಿಡಿದು ಮೇಲೆಬೀಳಲು ಬಂದನು.

ಹೃದಯೇ ಯೂಕೇತೋಸ್ತಾಂ ಜಘಾನಾಚಲಸನ್ನಿಭಾಂ ।
ತದಾ ಸ ಯೂಪಕೇತುಸ್ತಂ ಶ್ವಶುರಂ ಸ್ಯಂದನೋಪರಿ ॥ ೮೦ ॥

ಧ್ವಜೇ ಬಬಂಧ ವೇಗೇನ ಖಡ್ಗಂ ಜಗ್ರಾಹ ಸಂಭ್ರಮಾತ್ ।
ಕಂಬುಕಂಠಶಿರಚ್ಛೇದಂ ಕರ್ತುಂ ತಂ ಸಮುಪಸ್ಥಿತಂ ॥ ೮೧ ॥

ದೃಷ್ಟ್ವಾ ಧೃತ್ವಾ ಕರಂ ತಸ್ಯ ಸಖಡ್ಗಂ ಸಂಭ್ರಮಾನ್ವಿತಾ ।
ತಮಾಹ ನತ್ವಾ ಸಾ ವೀರಂ ತದಾ ಮದನಸುಂದರೀ ॥ ೮೨ ॥

ವಿಹ್ವಲಾ ವಿಗತೋತ್ಸಾಹಾ ವೇಪಂತೀ ಹ್ಯಶ್ರುಲೋಚನಾ ।
ಮಮ ತಾತಂ ಕಂಬುಕಂಠಮೇನಂ ಹಂಸಿ ಕಥಂ ಪ್ರಭೋ ॥ ೮೩ ॥

---

೮೦. ಬಂದು ಒಡನೆಯೇ ಆ ಯೂಪಕೇತುವಿನ ಎದೆಗೆ ಹೊಡೆದನು. ಆಗ ಆ ಯೂಪಕೇತುವು ಅದನ್ನು ಸಹಿಸಿಕೊಂಡು ಅವನನ್ನು ಹೊಡೆಯದೆ ಮೇಲಕ್ಕೆತ್ತಿ ರಥಕ್ಕೆ ಹಾಕಿಕೊಂಡು ಧ್ವಜದ ಕಂಬಕ್ಕೆ ಕಟ್ಟಿದನು.

೮೧. ಮತ್ತು ಅವಸರಪಡುತ್ತ ಖಡ್ಗವನ್ನು ತೆಗೆದುಕೊಂಡನು. ಆ ಕಂಬುಕಂಠನ ತಲೆಯನ್ನು ಕತ್ತರಿಸಲು ಪ್ರಯತ್ನಪಟ್ಟನು.

೮೨. ಆಗ ಮದನಸುಂದರಿಯು ಇದನ್ನು ನೋಡಿ ಖಡ್ಗಸಹಿತವಾಗಿಯೇ ಆ ಯೂಪಕೇತುವಿನ ಕೈಯ್ಯನ್ನು ಹಿಡಿದುಕೊಂಡು ನಮಸ್ಕರಿಸಿ ಇಂತೆಂದು ಕೇಳಿಕೊಂಡಳು.

೮೩. ಕಳವಳಪಡುತ್ತಾ, ಉತ್ಸಾಹಶೂನ್ಯಳಾಗಿ ನಡುಗುತ್ತಾ ಕಣ್ಣೀರನ್ನು ಸುರಿಸುತ್ತಾ ಎಲೈ ಪ್ರಭುವೇ! ನನ್ನತಂದೆಯಾದ ಈ ಕಂಬುಕಂಠನನ್ನು ಕೊಲ್ಲಬೇಡ.

ಮಕ್ಷಿಕಾಪತನಂ ಪೂರ್ವಂ ಗ್ರಾಸೇ ಯದ್ವತ್ತಥಾ ತ್ವಯಾ ।
ಸುಖಾರಂಭೇ ಪೂರ್ವಮೇವ ದುಃಖಕರ್ಮಾವಲಂಬಿತಂ ॥ ೮೪ ॥

ಮದ್ವಾಕ್ಯಾನ್ನೈವ ಹಂತವ್ಯಸ್ತಸ್ಮಾತ್ತ್ವಾಂ ಪ್ರಾರ್ಥಯಾಮ್ಯಹಂ ।
ಏವಂ ಮದನಸುಂದರ್ಯಾ ವಚಃ ಶ್ರುತ್ವಾ ವಿಹಸ್ಯ ಸಃ ॥ ೮೫ ॥

ಕರಾದ್ವಿಸೃಜ್ಯ ತಂ ಖಡ್ಗಂ ಸ್ವಸೂತಂ ಚೋದಯನ್ಮುದಾ ।
ಸೇನಯಾ ಸ ಯಯೌ ಯಾವತ್ಪಥಾಯೋಧ್ಯಾಂ ಪುರೀಂ ಪ್ರತಿ ॥ ೮೬ ॥

ತಾವದ್ದುಂದುಭಿನಿರ್ಘೋಷಾನಗ್ರೇ ಶುಶ್ರಾವ ಸೇನಯಾ ।
ಪುನಶ್ಚಾಪಂ ದೃಢೀಕೃತ್ಯ ಯೂಪಕೇತುಸ್ತದಾ ಪಥಿ ॥ ೮೭ ॥

---

೮೪. ಊಟಮಾಡುವಾಗ ಮೊದಲನೆಯ ತುತ್ತಿನಲ್ಲಿಯೇ ನೊಣವು ಬಿದ್ದಂತೆ ನೀನು ಸುಖವನ್ನು ಅನುಭವಿಸುವುದಕ್ಕಿಂತಲೂ ಮೊದಲೇನೇ ದುಃಖದ ಕೆಲಸವನ್ನು ಅವಲಂಬಿಸಿದೆಯಲ್ಲಾ !

೮೫. ನಿನ್ನನ್ನು ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ. ನನ್ನ ಮಾತಿನಂತೆ ಈತನನ್ನು ಕೊಲ್ಲಬೇಡ. ಇದೇ ನನ್ನ ಪ್ರಾರ್ಥನೆಯು. ಎಂಬುದಾಗಿ ಮದನ ಸುಂದರಿಯು ಕೇಳಿಕೊಳ್ಳಲು ಅವಳ ಮಾತನ್ನು ಕೇಳಿ ನಕ್ಕನು.

೮೬. ಆಗ ಒಡನೆಯೇ ಯೂಪಕೇತುವು ತನ್ನ ಕೈಯ್ಯಲ್ಲಿದ್ದ ಕತ್ತಿಯನ್ನು ಕೆಳಗೆ ಇಟ್ಟುಬಿಟ್ಟನು. ಮತ್ತು ಸಾರಥಿಗೆ ರಥವನ್ನು ನಡೆಸು ಎಂದು ಹೇಳಿ ಸೇನೆಯೊಡನೆ ಅಯೋಧ್ಯೆಗೆ ಹೊರಟನು.

೮೭. ಊರಿನ ಕಡೆಗೆ ಹಿಂದಕ್ಕೆ ಹೊರಡಲು ಒಡನೆಯೇ ಸೇನೆಯು ದುಂದುಭಿಯ ಶಬ್ದವನ್ನು ಮತ್ತೆ ಕೇಳಿದನು. ಇದಾರೋ ಯುದ್ಧಕ್ಕೆ ಎದುರಿಗೆ ಬರುತ್ತಿರುವರೆಂದು ತಿಳಿದು ಮತ್ತೆ ಬಿಲ್ಲನ್ನು ಸರಿಪಡಿಸಿಕೊಂಡನು.

ಕಸ್ಯಾಗ್ರೇ ವಾಹಿನೀಚೇತಿ ಚಿಂತಯಾಮಾಸ ಚೇತಸಿ ।
ತತಶ್ಶರಂ ಮುಮೋಚೈಕಂ ನಿಜನಾಮಾಂಕಿತಂ ಜವಾತ್ ॥ ೮೮ ॥

ಯೋಜನಾಂತರಸೇನಾಯಾಂ ಶರಶ್ಶತ್ರುಘ್ನಸನ್ನಿಧೌ ।
ಪಪಾತ ತತ್ಪದಾಗ್ರೇ ತಂ ದೃಷ್ಟ್ವಾ ಸ ಚಕಿತಸ್ತದಾ ॥ ೮೯ ॥

ಶರಪುಚ್ಛೇ ಯೂಪಕೇತೋರ್ನಾಮ ದೃಷ್ಟ್ವಾಥ ಶತ್ರುಹಾ ।
ನಿಶ್ಚಿತವಾನ್ಯೂಪಕೇತುರ್ಮಾರ್ಗೇಽಗ್ರೇ ವರ್ತತೇ ಧ್ರುವಂ ॥ ೯೦ ॥

ತತಶ್ಚಾಪೇ ಸ ಶತ್ರುಘ್ನಃ ಸ್ವನಾಮಾಂಕಿತಮುತ್ತಮಂ ।
ಶರಂ ಸಂಧಾಯ ವಿಮುಖಂ ಯೂಪಕೇತುಂ ಮುಮೋಚ ಹ ॥ ೯೧ ॥

---

೮೮. ಆಗ ಮನಸ್ಸಿನಲ್ಲಿ ಇದು ಯಾರ ಸೇನೆಯು ? ಈ ಕಡೆಯಿಂದ ನನ್ನ ಎದುರಿಗೆ ಬರುತ್ತಿದೆಯಲ್ಲಾ ! ಎಂದು ಯೋಚಿಸಿದನು. ಒಡನೆಯೇ ತನ್ನ ಹೆಸರನ್ನು ಕೆತ್ತಿರುವ ಒಂದು ಬಾಣವನ್ನು ಬೇಗನೆ ಅವರ ಕಡೆಗೆ ಬಿಟ್ಟನು.

೮೯. ಆ ಬಾಣವು ಒಂದು ಯೋಜನದಷ್ಟು ದೂರದಲ್ಲಿ ಬರುತ್ತಿದ್ದ ಶತ್ರುಘ್ನನ ಪಾದಗಳಮೇಲೆ ಬಿದ್ದಿತು. ಅದನ್ನು ನೋಡಿ ಶತ್ರುಘ್ನನು ಗಾಬರಿಪಟ್ಟನು.

೯೦. ಆ ಬಾಣವನ್ನು ತೆಗೆದುಕೊಂಡು ನೋಡಲು ಅದರ ಬುಡದಲ್ಲಿ ಯೂಪಕೇತುವಿನ ಹೆಸರಿದ್ದಿತು. ಅದನ್ನು ನೋಡಿ ಯೂಪಕೇತುವು ನಮ್ಮ ಎದುರಿಗೆ ಬರುತ್ತಿರುವನು ಎಂಬುದಾಗಿ ನಿಶ್ಚಯಿಸಿಕೊಂಡನು.

೯೧-೯೨. ಆಗ ಶತ್ರುಘ್ನನು ತನ್ನ ಹೆಸರಿರುವ ಬಾಣವನ್ನು ಧನುಸ್ಸಿಗೆ ಹೂಡಿ ಆಕಾಶಮಾರ್ಗವಾಗಿ ಯೂಪಕೇತುವಿನ ಕಡೆಗೆ ಬಿಟ್ಟನು. ಆ ಬಾಣವು

ಸ ಶರೋ ಯೂಪಕೇತೋಶ್ಚ ಮಸ್ತಕಾದೂರ್ಧ್ವತಸ್ತದಾ |
ಅಪತತ್ಪೃಷ್ಠಭಾಗೇನ ತಂ ದದರ್ಶ ಪಿತುಶ್ಶರಂ || ೯೨ ||

ತದಾ ಹೃಷ್ಟೋ ಯೂಪಕೇತುಃ ಕುರ್ವ‌ನ್ ದುಂದುಭಿನಿಸ್ವನಾನ್ |
ಗತ್ವಾ ವೇಗೇನ ಶತ್ರುಘ್ನಂ ದೃಷ್ಟ್ವೋ ತ್ಪ್ಲುತ್ಯ ರಥಾದಧಃ || ೯೩ ||

ನನಾಮ ಪಿತರಂ ಪತ್ನ್ಯಾ ಕಂಬುಕಂಠಂ ಪ್ರದರ್ಶಯತ್ |
ತದಾ ತಂ ಸುಹೃದಂ ಜ್ಞಾತ್ವಾ ಮೋಚಯಾಮಾಸ ಶತ್ರುಹಾ || ೯೪ ||

ಕಂಬುಕಂಠಮುಖಾಚ್ಛ್ರುತ್ವಾ ಸರ್ವಂ ವೃತ್ತಂ ಸವಿಸ್ತರಂ |
ಶತ್ರುಘ್ನಃ ಪ್ರಾರ್ಥಿತಸ್ತೇನ ಸುಹೃದಾ ತತ್ಪುರೀಂ ಯಯೌ || ೯೫ ||

ಯೂಪಕೇತುವಿನ ತಲೆಯಮೇಲೆ ಹೋಗಿ ಅವನ ಹಿಂಭಾಗದಲ್ಲಿ ಬಿದ್ದಿತು. ಆ ಬಾಣವನ್ನು ತೆಗೆದುಕೊಂಡು ಯೂಪಕೇತುವು ನೋಡಲು ಅದು ತಂದೆಯ ಬಾಣವಾಗಿದ್ದಿತು.

೯೩. ಆಗ ಯೂಪಕೇತುವು ಬಹು ಸಂತೋಷಗೊಂಡನು. ಒಡನೆಯೇ ದುಂದುಭಿಗಳನ್ನು ಬಡಿಸುತ್ತ ಎದುರಿಗೆ ಬೇಗನೆ ಹೋಗಿ ಅವನನ್ನು ಕಂಡೊಡನೆಯೇ ರಥದದಿಂದ ಬೇಗನೇ ಕೆಳಕ್ಕೆ ಧುಮುಕಿದನು.

೯೪. ಆಗ ಹೆಂಡತಿಯೊಡನೆ ತಂದೆಗೆ ನಮಸ್ಕರಿಸಿ ಕಂಬುಕಂಠನನ್ನು ತೋರಿಸಿದನು. ಆಗ ಆ ಕಂಬುಕಂಠನನ್ನು ಸ್ನೇಹಿತನೆಂಬುದಾಗಿ ತಿಳಿದು, ಶತ್ರುಘ್ನನು ಅವನನ್ನು ಬಿಡಿಸಿದನು.

೯೫. ಅನಂತರ ಕಂಬುಕಂಠನಬಾಯಿಂದಲೇ ಎಲ್ಲಾ ವಿಷಯವನ್ನೂ ತಿಳಿದುಕೊಂಡನು. ಮತ್ತು ಕಂಬುಕಂಠನು ಶತ್ರುಘ್ನನನ್ನು ಪ್ರಾರ್ಥಿಸಿಕೊಳ್ಳಲು ಶತ್ರುಘ್ನನು ಕಂಬುಕಂಠನ ಪಟ್ಟಣಕ್ಕೆ ಹೋದನು.

ಕಾಂತಿಪುರ್ಯಾಂ ಬಹಿಃ ಸ್ಥಿತ್ವಾ ಕಂಬುಕಂಠಮತೇನ ಸಃ ।
ಆಕಾರಣಾರ್ಥಂ ಲಗ್ನಾಯ ರಾಮಂ ದೂತಾನ್ಪ್ರಚೋದಯತ್ ॥ ೯೬ ॥

ತದಾ ತೇ ಕಂಬುಕಂಠಸ್ಯ ಶತ್ರುಘ್ನಸ್ಯಾಪಿ ವೇಗತಃ ।
ಆಕಾರಣಾರ್ಥಂ ಶ್ರೀರಾಮಂ ಯಯುರ್ದೂತಾ ಮುದಾನ್ವಿತಾಃ ॥ ೯೭ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ವಿವಾಹಕಾಂಡೇ ಮದನಸುಂದರೀ
ಹರಣಂ ನಾಮ ಅಷ್ಟಮಸ್ಸರ್ಗಃ

---

೯೬. ಕಂಬುಕಂಠನ ಮಾತಿನಂತೆ ಶತ್ರುಘ್ನನು ಆ ಶಿವಕಾಂತಿಪುರಿಯ ಹೊರಗೆ ನಿಂತನು. ಮತ್ತು ಲಗ್ನಕ್ಕೆ ಬರುವಂತೆ ರಾಮನಿಗೂ ದೂತರನ್ನು ಕಳುಹಿಸಿದನು.

೯೭. ಆ ದೂತರು ಕಂಬುಕಂಠನ ಮತ್ತು ಶತ್ರುಘ್ನನ ಮಾತಿನಂತೆ ರಾಮನನ್ನು ಕರೆದುಕೊಂಡು ಬರಲು ಸಂತೋಷದಿಂದ ಬೇಗನೆ ಹೊರಟರು.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ ಮದನಸುಂದರೀ
ಹರಣವೆಂಬ ಎಂಟನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ

॥ ಎಂಟನೆಯ ಸರ್ಗದ ಸಾರಾಂಶವು ॥

ಹೀಗಿರುತ್ತಿರಲು ದಕ್ಷಿಣದೇಶದ ಶಿವಕಾಂತಿಯಲ್ಲಿ ಕಂಬುಕಂಠನೆಂಬ ರಾಜನು ತನ್ನ ಮಗಳಿಗೆ ಸ್ವಯಂವರವನ್ನು ಏರ್ಪಡಿಸಿದನು. ಈತನು ಎಲ್ಲರಿಗೂ ಸ್ವಯಂವರಕ್ಕೆ ಕಾಗದವನ್ನು ಬರೆಯುವುದಕ್ಕೆ ಮೊದಲೇ ರಾಜರೆಲ್ಲರೂ ಪೂರ್ವವೈರವನ್ನು ನೆನೆಪಿಗೆ ತಂದುಕೊಂಡು ಅವರೆಲ್ಲರೂ ಈ ಕಂಬುಕಂಠನಿಗೆ ಒಂದೇ ರೀತಿಯ ಅಭಿಪ್ರಾಯವುಳ್ಳ ಕಾಗದವನ್ನು ಬರೆದಿದ್ದರು.

ರಾಮನ ಮಕ್ಕಳು ಸ್ವಯಂವರಕ್ಕೆ ಬರದಿದ್ದರೆ ಆಗ ನಾವೆಲ್ಲರೂ ಬರುತ್ತೇವೆ. ಎಂಬುದಾಗಿ ಅವರ ಅಭಿಪ್ರಾಯವಿದ್ದಿತು. ಆದ್ದರಿಂದ ಈ ರಾಜನು ರಾಮನಿಗೆ ಕಾಗದವನ್ನು ಬರೆಯದೇ ಮಿಕ್ಕವರೆಲ್ಲರಿಗೂ ಬರೆದನು. ಇವನಿಗೂ ಕೂಡ ಚಂಪಿಕೆ ಸುಮತಿಯರ ವಿವಾಹದ ವೈರವಿದ್ದೇ ಇದ್ದಿತು. ರಾಮನೂ ಅವನಕಡೆಯವರೂ ಹೊರತಾಗಿ ಉಳಿದ ರಾಜರೆಲ್ಲರೂ ಬಂದರು.

ಈ ಕಂಬುಕಂಠನ ಮಗಳಾದ ಮದನಸುಂದರಿಯು ಉಪ್ಪರಿಗೆಯ ಮೇಲಿದ್ದಾಗ ಆಕಾಶದಿಂದ ನಾರದನು ಅವಳ ಬಳಿಗೆ ಬಂದನು. ಅವಳಿಂದ ಸತ್ಕೃತನಾಗಿ ಆ ನಾರದನು ತಾನು ರಾಮನ ಮನೆಯಲ್ಲಿಯೂ ಅವನ ಮಕ್ಕಳ ಮನೆಯಲ್ಲಿಯೂ ಆತಿಥ್ಯವನ್ನು ಹೊಂದಬೇಕೆಂದು ಬಂದಿರುವಂತೆಯೂ ಇಲ್ಲಿ ಈಕೆಯ ಸ್ವಯಂವರವು ನಡೆಯುವುದರಿಂದ ಅವರೂ ಇಲ್ಲಿಯೇ ಇರಬಹುದೆಂದೂ ಊಹಿಸಿಬಂದಿರುವಂತೆಯೂ ಹೇಳಿ ರಾಮನು ಅವನಮಕ್ಕಳೂ ಬರದಿದ್ದರೆ ಅದು ಸ್ವಯಂವರವೇ ಅಲ್ಲವೆಂದೂ ನೀನು ರಾಘವನಿಗೆ ಸೊಸೆಯಾಗದುದರಿಂದ ಮಂದಭಾಗ್ಯೆಯೆಂದೂ ಹೇಳಿ ಹೊರಡಲನುವಾದನು.

ಆಗ ಆ ಕನ್ಯೆಯು ಕಣ್ಣೀರನ್ನು ಸುರಿಸುತ್ತಾ ಎಲೈ ಮುನಿಯೇ ! ನಾನು ಶ್ರೀರಾಮನಿಗೆ ಸೊಸೆಯಾಗುವಂತೆ ಮಾಡಬೇಕೆಂದು ಕೇಳಿಕೊಂಡಳು. ಆಗ ಆ ಮುನಿಗೆ ಕರುಣೆಯು ಬಂದು ನೀನು ರಾಮನಿಗೆ ಸೊಸೆಯಾಗುತ್ತೀಯೆ. ಚಿಂತಿಸ ಬೇಡವೆಂದು ಹೇಳಿ ಹೊರಟು ಹೋದನು.

ಈ ಸ್ವಯಂವರವು ನಡೆಯುತ್ತಿರುವ ಕಾಲದಲ್ಲಿ ಅಯೋಧ್ಯೆಯಿಂದ ಶತ್ರುಘ್ನನ ಮಗನಾದ ಯೂಪಕೇತುವು ಮಿತವಾದ ಸೈನ್ಯದೊಡನೆ ಹೊರಟು ವನವನ್ನೆಲ್ಲವನ್ನೂ ಸುತ್ತಿಕೊಂಡು ತಮಸಾನದಿಗೆ ಬಂದು ಅಲ್ಲಿ ಸ್ನಾನವನ್ನು ಮಾಡುತ್ತಿದ್ದನು. ಆಗ ಅಲ್ಲಿಗೆ ಈ ನಾರದನು ಬರಲು ಅವನನ್ನು ಪೂಜಿಸಿ ಸ್ವಾಮಿ ! ಎಲ್ಲಿಂದ ಬಂದಿರಿ ? ಎಂದು ಕೇಳಿದನು. ಆಗ ಆ ಮುನಿಯು ಎಲ್ಲಾ ವಿಷಯವನ್ನೂ ವಿಸ್ತಾರವಾಗಿ ಹೇಳಿದನು.

ಇದನ್ನು ಕೇಳಿದ ಆ ಬಾಲಕನು ಎಲೈ ಋಷಿಯೆ ! ರಾಘವನಲ್ಲಿ ರಾಜರಿಗೆ ದ್ವೇಷಬುದ್ಧಿಯು ಹುಟ್ಟಿರುವುದು ಬಹು ಅನರ್ಥಕರವಾದುದು. ಈಗ ಆ ಕಂಬುಕಂಠನೇ ಮುಂತಾದವರ ಸಾಹಸವನ್ನು ಯುದ್ಧದಲ್ಲಿ ನೋಡುತ್ತೇನೆ. ಎಲೈ ಮುನಿಯೇ ! ಈಗ ಯುದ್ಧದಲ್ಲಿ ಅವರೆಲ್ಲರನ್ನೂ ಜಯಿಸಿ ಆ ಬಾಲಿಕೆಯನ್ನು ತರುತ್ತೇನೆ. ಎಂದು ಹೇಳಿ ಹೊರಟನು. ನಾರದನು ಇತ್ತ ರಾಮನಲ್ಲಿಗೆ ಹೊರಟು ಹೋದನು.

ಶ್ರೀರಾಮನು ಭೋಜನವೇಳೆಯಲ್ಲಿ ಯೂಪಕೇತುವನ್ನು ಕಾಣದೆ ಲಕ್ಷ್ಮಣನನ್ನು ಕೇಳಲು ಅವನು ವಿಚಾರಿಸಿ ವನಕ್ಕೆ ಹೋಗಿರುವನೆಂದು ಹೇಳಿದನು. ನಾರದನೂ ಕೂಡ ರಾಮನ ಮಾತಿನಂತೆ ನಾಲ್ಕೈದುದಿನಗಳು ಅಲ್ಲಿರುವುದಾಗಿ ಒಪ್ಪಿಕೊಂಡನು. ರಾತ್ರಿಯ ಊಟಕ್ಕೂ ಯೂಪಕೇತುವು ಬರದಿದ್ದುದನ್ನು ನೋಡಿ ಎಲ್ಲರೂ ಕಳವಳಗೊಂಡಿರಲು ನಾರದನು ನಡೆದ ವಿಷಯವನ್ನು ತಿಳಿಸಿದನು.

ಅನಂತರ ರಾಮನು ಆ ಯೂಪಕೇತುವಿನ ಸಹಾಯಕ್ಕೆ ಶತ್ರುಘ್ನನನ್ನು ಕಳುಹಿಸಿದನು. ಇತ್ತ ಮದನಸುಂದರಿಯು ಸ್ವಯಂವರಕ್ಕೋಸ್ಕರ ಸಭೆಗೆ ಬರಲು ಯೂಪಕೇತುವು ಆ ಸಭೆಯ ಮಧ್ಯಕ್ಕೆ ಹೋಗಿ ಮೋಹನಾಸ್ತ್ರವನ್ನು ಬಿಟ್ಟು

ಎಲ್ಲರನ್ನೂ ಮೂರ್ಛೆಗೊಳಿಸಿ ಆ ಮದನಸುಂದರಿಯನ್ನು ರಥದಲ್ಲಿ ಕೂರಿಸಿಕೊಂಡು ತನ್ನ ವಿಷಯವನ್ನು ಹೇಳಿ ಹೊರಟು ಊರಹೊರಗೆ ನಿಂತನು. ಮತ್ತು ಆ ಮೋಹನಾಸ್ತ್ರವನ್ನು ಹಿಂದಕ್ಕೆ ತೆಗೆದುಕೊಂಡನು.

ಮೋಹವು ಕಳೆದನಂತರ ಮದನಸುಂದರಿಯ ವಿಷಯವು ರಾಜರಿಗೆ ತಿಳಿಯಲು ಅವರೆಲ್ಲರೂ ರಥದದಾರಿಯನ್ನು ಹಿಡಿದುಕೊಂಡು ಬಂದು ಬಾಣಗಳನ್ನು ಬಿಡುತ್ತ ಯುದ್ಧಮಾಡಿದರು. ಆಗ ಆ ಯೂಪಕೇತುವು ವಾಯುವ್ಯಾಸ್ತ್ರವನ್ನು ಬಿಟ್ಟು ಎಲ್ಲರನ್ನೂ ಓಡಿಸಿದನು. ಕಂಬುಕಂಠನೂ ಸೈನ್ಯದೊಡನೆ ಯುದ್ಧಕ್ಕೆಬರಲು ಅವನನ್ನೂ ಸೋಲಿಸಿ ತನ್ನ ರಥದ ಧ್ವಜಸ್ತಂಭಕ್ಕೆ ಕಟ್ಟಿಕೊಂಡು ಅಯೋಧ್ಯೆಗೆ ಹೊರಟನು.

ಅಷ್ಟರಲ್ಲಿಯೇ ಶತ್ರುಘ್ನನು ಬರುವುದನ್ನು ತಿಳಿದು ಎದುರಿಗೆ ಹೋಗಿ ನಮಸ್ಕರಿಸಿದನು. ಶತ್ರುಘ್ನನು ಆ ಕಂಬುಕಂಠನನ್ನು ನೋಡಿ ಬಿಡಿಸಿದನು. ಕಂಬುಕಂಠನ ಪ್ರಾರ್ಥನೆಯಂತೆ ಶತ್ರುಘ್ನನು ಆ ಕಾಂತಿಪುರಿಗೆ ಹೋದನು. ಅನಂತರ ಲಗ್ನಗಳನ್ನು ನಿಷ್ಕರ್ಷಿಸಿ ವಿವಾಹವನ್ನು ನೆರವೇರಿಸಲು ರಾಮನ ಬಳಿಗೆ ದೂತರನ್ನು ಕಳುಹಿಸಿದನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ವಿವಾಹಕಾಂಡೇ

॥ ನವಮಃ ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಗತ್ವಾಯೋಧ್ಯಾಪುರೀಂ ದೂತಾ ರಾಮಂ ವೃತ್ತಂ ನ್ಯವೇದಯನ್ ।
ರಾಮೋಪಿ ಶ್ರುತ್ವಾ ತದ್ವೃತ್ತಂ ಸೀತಾಯೈ ಸಂನ್ಯವೇದಯತ್ ॥ ೧ ॥

ತತೋ ಮುಹೂರ್ತೇ ಶ್ರೀರಾಮಸ್ಸಾವರೋಧಜನೈಸ್ಸಹ ।
ಪೌರೈರ್ಜಾನಪದೈಸ್ಸರ್ವೈಸ್ಸುಹೃದ್ಭಿಸ್ಸೇನಯಾ ಸಹ ॥ ೨ ॥

ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ ಒಂಭತ್ತನೆಯ ಸರ್ಗವು

೧. ರಾಮದಾಸನು ಹೇಳಿದನು—ಕಂಬುಕಂಠನ ದೂತರು ಅಯೋಧ್ಯೆಗೆ ಹೋಗಿ ರಾಮನಿಗೆ ಈ ವಿಷಯಗಳೆಲ್ಲವನ್ನೂ ತಿಳಿಸಿದರು. ರಾಮನು ಆ ವಿಷಯಗಳೆಲ್ಲವನ್ನೂ ಕೇಳಿ ಸೀತೆಗೂ ತಿಳಿಸಿದನು.

೨. ಅನಂತರ ರಾಮನು ಮುಹೂರ್ತದ ದಿನಕ್ಕೆ ಸರಿಯಾಗಿ ಅಂತಃಪುರದವರೊಡನೆಯೂ, ಪೌರರೊಡನೆಯೂ, ಜನಪದದೊಡನೆಯೂ, ಸ್ನೇಹಿತರೊಡನೆಯೂ, ಸೈನ್ಯದೊಡನೆಯೂ ಹೋದನು.

ನಾರದೇನ ಯಯೌ ಕಾಂತಿಮಾದ್ಯಾಂ ಮುಕ್ತಿಪುರೀಂ ಪ್ರತಿ ।
ತತಃ ಶ್ರುತ್ವಾ ಕಂಬುಕಂಠಶ್ಶೀಘ್ರಂ ರಾಘವಮಾಗತಂ ॥ ೩ ॥

ತಂ ಪ್ರತ್ಯುದ್ಗಮ್ಯ ವಿನಯಾನ್ನತ್ವಾ ತಂ ಪೂಜಯನ್ಮುದಾ ।
ಯೂಪಕೇತುಂ ತತಃ ಪೂಜ್ಯ ವಾರಣಸ್ಥಃ ಪುರೀಂ ಯಯೌ ॥ ೪ ॥

ವಾರಸ್ತ್ರೀನೃತ್ಯಗೀತೈಶ್ಚ ತೂರ್ಯಘೋಷೈರ್ನಿನಾಯ ಸಃ ।
ತತಃ ಕಾಂತಿಪುರೀಸ್ಥಾಸ್ತಾಃ ಸ್ತ್ರಿಯಃ ಪ್ರಾಸಾದಸಂಸ್ಥಿತಾಃ ॥ ೫ ॥

ದೃಷ್ಟ್ವಾ ರಾಮಂ ಯೂಪಕೇತುಂ ವವರ್ಷುಃ ಪುಷ್ಪವೃಷ್ಟಿಭಿಃ ।
ತತೋ ರಾಮಶ್ಶನೈರ್ವಸ್ತುಂ ಕಲ್ಪಿತಂ ಗೃಹಮುತ್ತಮಂ ॥ ೬ ॥

---

೩. ಆ ಕಾಂತಿಪುರಕ್ಕೆ ನಾರದನೂ ರಾಮನ ಜೊತೆಯಲ್ಲಿ ಹೊರಟನು. ಅವರೆಲ್ಲರೂ ಮೊದಲು ಆ ಮುಕ್ತಿಪುರಿಗೆ ಹೋದರು. ಅನಂತರ ಕಂಬುಕಂಠನಿಗೆ ರಾಮನು ಬಂದ ವಿಷಯವು ತಿಳಿಯಿತು.

೪. ಆ ಕಂಬುಕಂಠನು ಬೇಗನೆಹೋಗಿ ಅವನನ್ನು ಎದುರುಗೊಂಡು ವಿನಯದಿಂದ ನಮಸ್ಕರಿಸಿ ಪೂಜಿಸಿದನು. ಅನಂತರ ಯೂಪಕೇತುವನ್ನು ಪೂಜಿಸಿ ಆನೆಯಮೇಲೆ ಕೂರಿಸಿಕೊಂಡು ಪಟ್ಟಣದೊಳಕ್ಕೆ ಕರೆದುಕೊಂಡು ಹೊರಟನು.

೫–೬. ಮೆರವಣಿಗೆಯಲ್ಲಿ ಹೋಗುತ್ತಿರುವಾಗ ವಾರಸ್ತ್ರೀಯರು ನರ್ತನ ಮಾಡುತ್ತಿದ್ದರು. ವಾದ್ಯಗಳು ಮೊಳಗುತ್ತಿದ್ದುವು. ಆಗ ಆ ಕಾಂತಿಪುರಿಯ ಹೆಂಗಸರು ಮಹಡಿಯಮೇಲಿದ್ದುಕೊಂಡು ರಾಮನನ್ನೂ ಯೂಪಕೇತುವನ್ನೂ ನೋಡುತ್ತ ಪುಷ್ಪವೃಷ್ಟಿಯನ್ನು ಸುರಿಸಿದರು. ರಾಮನು ಅಂತೆಯೇ ಹೋಗುತ್ತ ತನಗೋಸ್ಕರ ಗೊತ್ತುಮಾಡಿದ್ದ ಬಿಡಾರಕ್ಕೆ ಹೋದನು.

ಸತ್ವಾ ದೃಷ್ಟ್ವಾ ಮುಹೂರ್ತಂ ತು ಪೂರ್ವೋಕ್ತ ಕೌತುಕೈಸ್ಸುಖಂ।
ಯೂಪಕೇತೋರ್ವಿವಾಹಂ ಸ ಚಕಾರ ಪರಮೋತ್ಸವೈಃ ॥ ೭ ॥

ತತೋ ವಿವಾಹಂ ನಿರ್ವರ್ತ್ಯ ಕಂಬುಕಂಠೇನ ಪೂಜಿತಃ।
ಹಸ್ತ್ಯಶ್ವರಥಪಾದಾತದಾಸದಾಸೀಜನಾದಿಭಿಃ ॥ ೮ ॥

ಯಯೌ ಮದನಸುಂದರ್ಯಾ ರಾಮೋಽಯೋಧ್ಯಾಪುರೀಂ ನಿಜಾಂ।
ತತೋ ವಿವೇಶ ನಗರೀಂ ನೇದುರ್ವಾದ್ಯಾನಿ ವೈ ತದಾ ॥ ೯ ॥

ನನೃತುರ್ವಾರನಾರ್ಯಶ್ಚ ತುಷ್ಟುವುರ್ಮಾಗಧಾದಯಃ।
ಪ್ರಾಸಾದಸ್ಥಾ ಸ್ತ್ರಿಯೋ ರಾಮಂ ವವರ್ಷುಃ ಪುಷ್ಪವೃಷ್ಟಿಭಿಃ ॥ ೧೦ ॥

---

೭. ಆ ಕಂಬುಕಂಠನು ರಾಮನಿಗೆ ನಮಸ್ಕರಿಸಿ ಮೂಹೂರ್ತವನ್ನು ಬಹುವಾದ ಅಟ್ಟಹಾಸದಿಂದ ನೆರವೇರಿಸಿದನು. ಈ ರೀತಿಯಾಗಿ ಕಂಬುಕಂಠನು ಯೂಪಕೇತುವಿಗೂ ಮದನಸುಂದರಿಗೂ ವಿವಾಹವನ್ನು ನೆರವೇರಿಸಿದನು.

೮–೯. ವಿವಾಹವು ಮುಗಿದಮೇಲೆ ಶ್ರೀರಾಮನನ್ನು ಕಂಬುಕಂಠನು ಕಪ್ಪಕಾಣಿಕೆಗಳನ್ನು ಕೊಟ್ಟು ಪೂಜಿಸಿದನು. ಆ ರಾಮನು ಕಂಬುಕಂಠನು ಕೊಟ್ಟ ದಾಸಿ, ದಾಸ, ಆನೆ, ಕುದುರೆ, ರಥಗಳನ್ನು ತೆಗೆದುಕೊಂಡು ಮದನ ಸುಂದರಿಯೊಡನೆ ಅಯೋಧ್ಯೆಗೆ ಪ್ರಯಾಣ ಬೆಳೆಸಿದನು. ಅಯೋಧ್ಯೆಗೆ ಪ್ರವೇಶಿಸುತ್ತಿರಲು ವಾದ್ಯಗಳು ಮೊಳಗಿದುವು. ನರ್ತಕಿಯರು ಕುಣಿದರು.

೧೦. ಸ್ತುತಿಪಾಠಕರು ಹೊಗಳುತ್ತಿದ್ದರು. ಮಹಡಿಯಮೇಲಿದ್ದುಕೊಂಡು ಹೆಂಗಸರು ರಾಮ, ಯೂಪಕೇತುಗಳಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದರು.

ಮಾರ್ಗೇ ನೀ ರಾಜಿತಃ ಸ್ತ್ರೀಭಿಃ ವಿವೇಶ ನಿಜಮಂದಿರಂ ।
ಕಾರಯಿತ್ವಾ ರಮಾಪೂಜಾಂ ದದೌ ದಾನಾನ್ಯನೇಕಶಃ ॥ ೧೧ ॥

ಸುಹೃದಃ ಪೂಜಯಾಮಾಸ ರಾಘವೋ ವಸನಾದಿಭಿಃ ।
ತತೋ ವಿಸರ್ಜಯಾಮಾಸ ಸರ್ವಾನ್ ಸ್ವಸ್ವಸ್ಥಲಂ ಪ್ರತಿ ॥ ೧೨ ॥

ಅಥ ಸಪ್ತಕುಮಾರಾಶ್ಚ ಲವಾದ್ಯಾಃ ಸ್ವಸ್ವವೇಶ್ಮನಿ ।
ಚಕ್ರುಃ ಕ್ರೀಡಾಂ ಪ್ರಥಕ್ ಸ್ತ್ರೀಭ್ಯಾಂ ಕುಶಶ್ಚಂಪಿಯಾಕರೋತ್ ॥ ೧೩ ॥

ಚಂಪಿಕಾಯ್ಯೈ ದುಹಿತರಃ ಕುಶುಜ್ಞಾತಾಶ್ಮ್ಯಭಾ ನವ ।
ಕುಶಾಯಾಗ್ರೇ ಕುಮುದ್ವತ್ಯಾಂ ಭವಿಷ್ಯಂತ್ಯಷ್ಟ ಸೂನವಃ ॥ ೧೪ ॥

---

೧೧. ಮಾರ್ಗದಲ್ಲಿ ಉದ್ದಕ್ಕೂ ಮುತ್ತೈದೆಯರು ಆರತಿಯನ್ನು ಬೆಳಗುತ್ತಿದ್ದರು. ಈ ರೀತಿಯಾಗಿ ಹೊರಟು ಆ ರಾಮನು ಮನೆಯನ್ನು ಸೇರಿದನು. ಅಲ್ಲಿ ಲಕ್ಷ್ಮೀಪೂಜೆಯನ್ನು ಮಾಡಿ ಅನೇಕವಾಗಿ ದಾನಗಳನ್ನು ಕೊಟ್ಟನು.

೧೨. ಆ ರಾಮನು ಸ್ನೇಹಿತರನ್ನು ಗೌರವಿಸಿ ಅವರಿಗೆ ಬಟ್ಟೆ ಬರೆಯೇ ಮುಂತಾದ ಉಡುಗೆರೆಗಳನ್ನು ಕೊಟ್ಟು ಅವರವರ ಸ್ಥಳಗಳಿಗೆ ಅವರನ್ನು ಕಳುಹಿಸಿದನು.

೧೩. ಅನಂತರ ಲವನೇ ಮುಂತಾದ ಆ ಏಳು ಜನ ಬಾಲಕರೂ ತಮ್ಮ ತಮ್ಮ ಮನೆಯಲ್ಲಿ ತಮ್ಮ ತಮ್ಮ ಹೆಂಡತಿಯರೊಡನೆ ಸುಖವಾಗಿರುತ್ತಿದ್ದರು. ಕುಶನು ಚಂಪಿಕೆಯೊಡನೆ ಸುಖವಾಗಿರುತ್ತಿದ್ದನು.

೧೪. ಆ ಕುಶನಿಗೆ ಚಂಪಿಕೆಯಲ್ಲಿ ಒಂಬತ್ತು ಜನ ಹೆಣ್ಣು ಮಕ್ಕಳಾದರು. ಈ ಕುಶನಿಗೆ ಕುಮುದ್ವತಿಯಲ್ಲಿಯೂ ಎಂಟು ಜನ ಗಂಡು ಮಕ್ಕಳು ಮುಂದೆ ಆಗುವರು.

ಭವಿಷ್ಯತಿ ತಥಾ ಕನ್ಯಾ ತ್ವೇಕಾ ಚಂಪಕಮಾಲಿನೀ ।
ಜ್ಯೇಷ್ಠಃ ಪುತ್ರೋsತಿಥಿರಿತಿ ನಾಮ್ನಾ ರಾಜ್ಯಂ ಕರಿಷ್ಯತಿ ॥ ೧೫ ॥

ಚತುರ್ದಶ ಸುಮತ್ಯಾದ್ಯಾಃ ಸ್ತ್ರಿಯಸ್ಸರ್ವಾಃ ಕ್ರಮೇಣ ಹಿ ।
ಸುಷುವುಸ್ತನಯಾನಷ್ಟ ಕನ್ಯೈಕಾಪಿ ಪೃಥಕ್ ಪೃಥಕ್ ॥ ೧೬ ॥

ಸದ್ವಾದಶಶತಂ ಪೌತ್ರಾನ್ಪೌತ್ರೀಶ್ಚೈವ ಮನೋರಮಾಃ ।
ತ್ರಯೋವಿಂಶದ್ರಾಮಚಂದ್ರೋ ಲಾಲಯಾಮಾಸ ಸೀತಯಾ ॥ ೧೭ ॥

ಕುಮುದ್ವತೀಭಾವಿಪುತ್ರಸಹಿತಾಶ್ಚಿಶವಶ್ಶುಭಾಃ ।
ಸವಿಂಶಚ್ಛತಮಾಸಂಸ್ತೇ ತಥಾ ಪೌತ್ರ್ಯಸ್ತುಟಿತ್ರಭಾಃ ॥ ೧೮ ॥

ಚತುರ್ವಿಂಶನ್ಮಿತಾ ಆಸ್ಸ ಸರ್ವಾಶ್ಚೋದ್ವಾಹಿತಾ ನೃಪೈಃ ।
ತಥಾ ಶ್ರೀರಾಮಪೌತ್ರೈಶ್ಚ ನೃಪಕನ್ಯಾ ಅನೇಕಶಃ ॥ ೧೯ ॥

---

೧೫. ಚಂಪಕಮಾಲಿನಿಯೆಂಬ ಒಬ್ಬಳ ಮಗಳೂ ಆಗುತ್ತಾಳೆ. ಹಿರಿಯ ಮಗನು ಅತಿಥಿಯೆಂದು ಹೆಸರುಳ್ಳವನಾಗುವನು. ಅವನೇ ರಾಜ್ಯವನ್ನಾಳುವನು

೧೬. ಸುಮತಿಯೇ ಮುಂತಾದ ಹದಿನಾಲ್ಕು ಜನ ಸೊಸೆಯರು ಸುಖವಾಗಿದ್ದರು. ಒಬ್ಬೊಬ್ಬರಿಗೂ ಎಂಟೆಂಟು ಜನ ಗಂಡು ಮಕ್ಕಳಾದರು. ಒಬ್ಬೊಬ್ಬರಿಗೂ ಒಂದೊಂದು ಹೆಣ್ಣು ಮಗುವೂ ಆಯಿತು.

೧೭. ಒಟ್ಟಿನಲ್ಲಿ ರಾಮನಿಗೆ ನೂರಹನ್ನೆರಡು ಜನ ಮೊಮ್ಮೊಕ್ಕಳಾದರು. ಇಪ್ಪತ್ತಮೂರು ಜನ ಪೌತ್ರಿಯರಾದರು. ಇಷ್ಟು ಜನರನ್ನೂ ರಾಮನು ಸೀತೆಯೊಡನೆ ಮುದ್ದಿಸುತ್ತಿದ್ದನು.

೧೮-೧೯. ಕುಮುಧ್ವತಿಗೆ ಮುಂದೆ ಆಗತಕ್ಕ ಮಗನೂ ಸೇರಿ ನೂರ ಇಪ್ಪತ್ತೊಂದು ಮಂದಿ ಗಂಡುಮಕ್ಕಳಾದರು. ಇಪ್ಪತ್ತುನಾಲ್ಕು ಜನ ಪೌತ್ರಿಯರಾದರು. ಆ ಹೆಣ್ಣುಮಕ್ಕಳೆಲ್ಲರನ್ನೂ ರಾಜರಿಗೆ ಕೊಟ್ಟು ಮದುವೆಮಾಡಿದನು. ಅಂತೆಯೇ ಶ್ರೀರಾಮನ ಮೊಮ್ಮೊಕ್ಕಳೆಲ್ಲರೂ ಮದುವೆಯಾದರು.

ಕಾಶ್ಚಿತ್ಸ್ವಯಂವರೇಣೈವ ಕಾಶ್ಚಿದ್ರಾಕ್ಷಸಯೋಗತಃ ।
ಕಾಶ್ಚಿದ್ಗಾಂಧರ್ವಯೋಗೇನ ಕಾಶ್ಚಿದ್ವೈವಾಹಕರ್ಮಣಾ ॥ ೨೦ ॥

ಪರಿಣೀತಾಃ ಪೌರುಷೇಣ ತಾಸಾಂ ಸಂಖ್ಯಾ ನ ವಿದ್ಯತೇ ।
ತಾಸಾಂ ಹಿ ಸಂತತಿಂ ವಕ್ತುಂ ಕಸ್ಸಮರ್ಥೋ ಭವೇದಿಹ ॥ ೨೧ ॥

ಏವಂ ಸ ಯೂಪಕೇತೋಶ್ಚ ವಿವಾಹಶ್ಚರಮಶ್ಶುಭಃ ।
ಸಂಪಾದ್ಯ ನಾರದಃ ಶ್ರೀಮಾನ್ ಸಭಾಯಾಂ ರಘುನಂದನಂ ॥ ೨೨ ॥

ರಾಮನಾಮಸಹಸ್ರೇಣ ಸೂತೋಕ್ತೇನಾತಿಭಕ್ತಿತಃ ।
ಸ್ತುತ್ವಾ ಶ್ರೀರಾಘವಂ ಪೃಷ್ಟ್ವಾ ಯಯಾವಾಕಾಶವರ್ತ್ಮನಾ ॥ ೨೩ ॥

೨೦–೨೧. ಆ ಮೊಮ್ಮೊಕ್ಕಳಲ್ಲಿ ಎಲ್ಲರೂ ಮದುವೆಯನ್ನು ಮಾಡಿಕೊಂಡು ರಷ್ಟೆ ಅವರಲ್ಲಿ ಕೆಲವರು ಸ್ವಯಂವರದಿಂದ ಮದುವೆಯಾದವರು, ಮತ್ತೆ ಕೆಲವರು ರಾಕ್ಷಸ ವಿವಾಹವಿಧಿಯಿಂದ ಮದುವೆಯಾದವರು, ಕೆಲವರು ಗಾಂಧರ್ವ ವಿವಾಹದ ರೀತಿಯಿಂದ ಮದುವೆಯಾದವರು, ಕೆಲವರು ಕ್ರಮವಾದ ವಿವಾಹದ ರೀತಿಯಿಂದ ಮದುವೆಯಾದವರು, ಕೆಲವರು ಪೌರುಷದಿಂದ ಮದುವೆಯಾದವರು. ಈ ರೀತಿಯಾಗಿ ಅವರೆಲ್ಲರೂ ಅಸಂಖ್ಯಾತವಾಗಿದ್ದರು. ಅವರಲ್ಲಿ ಮೊಮ್ಮೊಕ್ಕಳಿಗೆ ಉಂಟಾದ ಸಂತತಿಯನ್ನು ಹೇಳುಲು ಯಾರಿಗೂ ಸಾಧ್ಯವೇ ಇಲ್ಲವು.

೨೨–೨೩. ಈ ರೀತಿಯಾಗಿ ಈ ಯೂಪಕೇತುವಿನ ವಿವಾಹವು ಇಲ್ಲಿ ಕೊನೆಯದಾಗುವುದು. ಶುಭಕರವಾದುದು. ಇದನ್ನು ಶ್ರೀನಾರದನು ಮಾಡಿಸಿ ಸಭೆಯಲ್ಲಿ ಕುಳಿತಿರುವಾಗ ಸೂತನು ತನಗೆ ಹೇಳಿದ ರಾಮನಾಮ ಸಹಸ್ರದಿಂದ ಬಹು ಭಕ್ತಿಯಿಂದ ಆ ರಾಮನನ್ನು ಸ್ತುತಿಸಿ ಅವನ ಅಪ್ಪಣೆಯನ್ನು ತೆಗೆದುಕೊಂಡು ಅಂತರಿಕ್ಷ ಮಾರ್ಗದಿಂದ ಹೊರಟುಹೋದನು.

॥ ಶ್ರೀರಾಮದಾಸ ಉವಾಚ ॥

ಏವಂ ರಾಮೇಣ ಸಾಕೇತಪುರ್ಯಾಂ ಭೋಗಾಶ್ಚಿರಂ ಸುಖಂ ।
ಭುಕ್ತಾಸ್ತೇಷಾಂ ವರ್ಣನೇತ್ರ ಕಸ್ಸಮರ್ಥೋ ಭವೇನ್ನರಃ ॥ ೨೪ ॥

ಏಕ ಏವ ಸಮರ್ಥೋ ಭೂದ್ವಾಲ್ಮೀಕಿಸ್ತಪಸಾಂ ನಿಧಿಃ ।
ಶತಕೋಟಿಮಿತಂ ಯೇನ ನಾನಾಕ್ರೀಡಾದಿ ಸಂಯುತಂ ॥ ೨೫ ॥

ವರ್ಣಿತಂ ರಾಮಚರಿತಂ ಮಹಾಮಂಗಳಕಾರಕಂ ।
ಯಸ್ಮಾತ್ಸಾರಂ ಮಯಾ ಕಿಂಚಿತ್ತ್ವದಗ್ರೇ ಪರಿವರ್ಣಿತಂ ॥ ೨೬ ॥

ಏವಂ ರಾಮಸ್ತ್ವಯೋಧ್ಯಾಯಾಂ ಪುತ್ರೈಃಪೌತ್ರೈಸ್ಸಮನ್ವಿತಃ ।
ಪ್ರಪೌತ್ರೈಃ ಪೌತ್ರಪೌತ್ರೈಶ್ಚ ರಂಜಯಾಮಾಸ ಜಾನಕೀಂ ॥ ೨೭ ॥

---

೨೪. ಶ್ರೀರಾಮದಾಸನು ಹೇಳಿದನು—ಈ ರೀತಿಯಾಗಿ ರಾಮನು ಅಯೋಧ್ಯೆಯಲ್ಲಿ ಬಹುಕಾಲ ಸುಖವಾಗಿ ಭೋಗಗಳನ್ನು ಅನುಭವಿಸಿದನು. ಅವೆಲ್ಲವನ್ನೂ ವರ್ಣಿಸಲು ಯಾರಿಂದಲೂ ಸಾಧ್ಯವಾಗುವುದಿಲ್ಲ.

೨೫-೨೬. ತಪೋನಿಧಿಯಾದ ಆ ವಾಲ್ಮೀಕಿಯೊಬ್ಬನೇ ಅದರಲ್ಲಿ ಸಮರ್ಥನು. ಅವನು ಶ್ರೀರಾಮನ ಕ್ರೀಡಾದಿಗಳನ್ನು ನೂರು ಕೋಟಿ ಗ್ರಂಥಗಳಿಂದ ಬರೆದಿರುವನು. ಚೆನ್ನಾಗಿ ವರ್ಣಿಸಿರುವನು. ಅದು ಬಹು ಮಂಗಳಕರವಾದುದು. ಅದರಲ್ಲಿ ಸಾರವಾದ ಭಾಗವನ್ನು ತೆಗೆದು ನಿನ್ನೆದುರಿಗೆ ವರ್ಣಿಸಿರುವೆನು.

೨೭. ಈ ರಾಮನು ಅಯೋಧ್ಯೆಯಲ್ಲಿ ಮಕ್ಕಳು, ಮತ್ತು ಮೊಮ್ಮಕ್ಕಳೊಡನೆಯೂ ಕೂಡಿಕೊಂಡು ಆ ಜಾನಕಿಯನ್ನು ಸಂತೋಷಪಡಿಸಿದನು.

ಏವಂ ವಿವಾಹಕಾಂಡಂ ಚ ಶಿಷ್ಯ ತ್ವಾಂ ಪರಿವರ್ಣಿತಂ ।
ನವಸರ್ಗೈಃ ಪವಿತ್ರಂ ಚ ಶ್ರವಣಾನ್ಮಂಗಳ ಪ್ರದಂ ॥ ೨೮ ॥

ವಿವಾಹಕಾಂಡಂ ಪರಮಂ ಯೇ ಶೃಣ್ವಂತ್ಯಪಿ ಮಾನವಾಃ ।
ತೇ ಸ್ತ್ರೀಭಿಃ ಪುತ್ರಪೌತ್ರೈಶ್ಚ ವಿಯೋಗಂ ನಾಪ್ನುವಂತಿ ಹಿ ॥ ೨೯ ॥

ಧರ್ಮಾರ್ಥೀ ಪ್ರಾಪ್ನುಯಾದ್ಧರ್ಮಂ ಧನಾರ್ಥೀ ಧನಮಾಪ್ನುಯಾತ್ ।
ಕಾಮಾನಾಪ್ನೋತಿ ಕಾಮಾರ್ಥೀ ಮೋಕ್ಷಾರ್ಥೀ ಮೋಕ್ಷಮಾಪ್ನುಯಾತ್

ಸ್ತ್ರೀಕಾಮುಕೈರ್ನರೈರೇತತ್ಪಠನೀಯಂ ನಿರಂತರಂ ।
ವಿವಾಹಕಾಂಡಂ ಪರಮಂ ಪ್ರಾಪ್ನುವಂತ್ಯತ್ರ ತೇ ವಧೂಃ ॥ ೩೧ ॥

ಪತಿಕಾಮಾತ್ಕುಮಾರೀ ಚೇತ್ ಸ್ನಾತ್ವಾ ಶ್ರೋಷ್ಯತಿ ಭಕ್ತಿತಂ ।
ವಿವಾಹಕಾಂಡಮೇತದ್ವೈ ಮನೋಜ್ಞಂ ಪತಿಮಾಪ್ನುಯಾತ್ ॥ ೩೨ ॥

---

೨೮. ಎಲೈ ಶಿಷ್ಯನೇ ! ಈ ರೀತಿಯಾಗಿ ವಿವಾಹ ಕಾಂಡವನ್ನು ನಿನಗೆ ಹೇಳಿದೆನು. ಇದು ಒಂಬತ್ತು ಸರ್ಗಗಳಿಂದ ಕೂಡಿರುವುದು. ಇದನ್ನು ಕೇಳುವುದರಿಂದ ಮಂಗಳವೂ ಉಂಟಾಗುತ್ತದೆ.

೨೯. ಈ ಉತ್ತಮವಾದ ವಿವಾಹಕಾಂಡವನ್ನು ಕೇಳತಕ್ಕ ಮನುಷ್ಯರು ಮಕ್ಕಳೊಡನೆಯೂ, ಮೊಮ್ಮಕ್ಕಳೊಡನೆಯೂ ಹೆಂಡತಿಯರೊಡನೆಯೂ, ಯಾವಾಗಲೂ ವಿಯೋಗವನ್ನು ಹೊಂದುವುದೇ ಇಲ್ಲವು.

೩೦. ಇದನ್ನು ಓದಿದರೂ ಅಥವಾ ಕೇಳಿದರೂ ಧರ್ಮಾರ್ಥಿಯು ಧರ್ಮವನ್ನೂ, ಧನಾರ್ಥಿಯು ಧನವನ್ನೂ, ಕಾಮಾರ್ಥಿಯು ಕಾಮವನ್ನೂ, ಮೋಕ್ಷಾರ್ಥಿಯು ಮೋಕ್ಷವನ್ನೂ ಹೊಂದುತ್ತಾರೆ.

೩೧. ಮದುವೆಯಾಗಲು ಅಪೇಕ್ಷಿಸುವವರು ಯಾವಾಗಲೂ ಇದನ್ನು ಓದುತ್ತಿರಬೇಕು. ಈ ವಿವಾಹಕಾಂಡವನ್ನು ಓದುವುದರಿಂದ ಉತ್ತಮವಾದ ಹೆಂಡತಿಯರನ್ನು ಹೊಂದುತ್ತಾರೆ.

೩೨. ಪತಿಯನ್ನು ಅಪೇಕ್ಷಿಸುವ ಕನ್ಯೆಯು ಸ್ನಾನಮಾಡಿ ಭಕ್ತಿಯಿಂದ ಕೇಳಿದರೆ ಮನೋಜ್ಞನಾದ ಪತಿಯನ್ನು ಹೊಂದುತ್ತಾಳೆ.

ಸಭಾರ್ಯಶ್ಚೇತ್ಪಠೇದೇತತ್ ಶೃಣುಯಾದ್ವಾಪಿ ಭಕ್ತಿತಃ ।
ಇಹ ಸ್ತ್ರಿಯಾ ಸುಖಂ ಭುಕ್ತ್ವಾಪ್ಸರೋಭಿರ್ದಿವಿ ಮೋದತೇ ॥ ೩೩ ॥

ಸಧವಾ ಶುಣುಯಾದೇತದ್ಯಾನಾರೀ ಕಾಂಡಮುತ್ತಮಂ ।
ವಿವಾಹಾಖ್ಯಂ ಕದಾ ಭರ್ತ್ರಾ ವಿಯೋಗಂ ನಾಪ್ನುಯಾತ್ತು ಸಾ ॥ ೩೪ ॥

ಸಪ್ತದಶದಿನೈರಸ್ಯ ಕಾರ್ಯಂ ಸ್ತ್ರೀಕಾಮುಕೈರ್ಮುಹುಃ ।
ಅನುಷ್ಠಾನಂ ವರ್ಷಮೇಕಂ ಮೂರ್ಖೋಽಪಿ ಸ್ತ್ರಿಯಮಾಪ್ನುಯಾತ್ ॥ ೩೫ ॥

ಪ್ರಥಮೇ ದಿವಸೇ ಸರ್ಗಂ ಪಠೇದ್ದ್ವೌ ಚಾಪರೇಽಹನಿ ।
ನವಮೇ ದಿವಸೇ ಸರ್ಗಾನ್ಕ್ರಮೇಣ ಸಂಪಠೇನ್ನವ ॥ ೩೬ ॥

---

೩೩. ಹೆಂಡತಿಯಿರುವವರು ಇದನ್ನು ಭಕ್ತಿಯಿಂದ ಓದಿದರೆ ಅಥವಾ ಕೇಳಿದರೆ ಈ ಲೋಕದಲ್ಲಿ ಅವಳೊಡನೆ ಸುಖವನ್ನು ಅನುಭವಿಸಿ, ಸ್ವರ್ಗದಲ್ಲಿ ಅಪ್ಸರ ಸ್ತ್ರೀಯರೊಡನೆ ಸುಖಿಸುತ್ತಾರೆ.

೩೪. ಈ ಉತ್ತಮವಾದ ವಿವಾಹ ಕಾಂಡವನ್ನು, ಗಂಡನುಳ್ಳವಳು ಭಕ್ತಿಯಿಂದ ಕೇಳಿದರೆ ಅವಳು ಯಾವಾಗಲೂ ಗಂಡನಿಂದ ವಿಯೋಗವನ್ನು ಹೊಂದುವುದೇ ಇಲ್ಲವು.

೩೫. ಮದುವೆಯಾಗಲು ಅಪೇಕ್ಷಿಸುವವರು ಇದನ್ನು ಹದಿನೇಳು ದಿನಗಳವರೆಗೆ ಪದೇ ಪದೇ ಪಠಿಸುತ್ತಿರಬೇಕು. ಅಷ್ಟಕ್ಕೆ ಸ್ತ್ರೀ ಪ್ರಾಪ್ತಿಯಾಗುವುದು. ಹಾಗಾಗದಿದ್ದರೆ ಒಂದು ವರ್ಷದವರೆಗೆ ಓದುತ್ತಿದ್ದರೆ ಮೂರ್ಖನಾದರೂ ಸ್ತ್ರೀಯನ್ನು ಹೊಂದುತ್ತಾನೆ.

೩೬–೩೭. ಇದನ್ನೂ ಓದತಕ್ಕವರು ಮೊದಲನೇ ದಿವಸ ಒಂದು ಸರ್ಗವನ್ನೂ, ಎರಡನೆಯ ದಿನ ಒಂದು ಮತ್ತು ಎರಡನೇ ಸರ್ಗಗಳನ್ನೂ, ಈ ರೀತಿಯಾಗಿ ನಿತ್ಯದಲ್ಲಿಯೂ ಮೊದಲಿನಿಂದ ಓದುತ್ತ ಒಂಭತ್ತನೆಯ ದಿವಸ

ದಶಮೋ ದಿವಸೇಷ್ಟೈವ ಕ್ಷಯಸ್ತ್ವೇಕೇನ ವೈ ಕ್ರಮಾತ್ |
ಏವಂ ಸಪ್ತದಶದಿನೈರನುಷ್ಠಾನಂ ಸ್ಮೃತಂ ಬುಧೈಃ || ೩೭ ||

ಅಥವಾ ಸಕಲಂ ಕಾಂಡಂ ಪ್ರಥಮೋ ದಿವಸೇ ಪಠೇತ್ |
ಪರೇಽಹನಿ ದ್ವಿವಾರಂ ಹಿ ನವಮೋ ದಿವಸೇ ಕ್ರಮಾತ್ || ೩೮ ||

ನವವಾರಂ ಪಠೇಚ್ಚೇದಂ ದಶಮೋ ದಿವಸೇ ತತಃ |
ಅಷ್ಟವಾರಂ ಪಠೇತ್ಕಾಂಡಂ ಕ್ಷಯಸ್ತ್ವೇವಂ ಕ್ರಮಾತ್ ಸ್ಮೃತಃ || ೩೯ ||

ಏವಂ ನರೋ ವರ್ಷಮೇಕಮನುಷ್ಠಾನಾತ್ ಸ್ತ್ರಿಯಂ ಲಭೇತ್ |
ಸ್ಮಿತವಕ್ತ್ರಾಂ ಚಾರುನಾಸಾಂ ದಿವ್ಯರೂಪಾಂ ಮನೋಹರಾಂ || ೪೦ ||

ಒಂಭತ್ತು ಸರ್ಗಗಳನ್ನೂ ಓದಬೇಕು. ಅನಂತರ ಹತ್ತನೆಯ ದಿನದಲ್ಲಿ ಮತ್ತೆ ಒಂಭತ್ತು ಸರ್ಗವನ್ನು ಓದಬೇಕು. ಆನಂತರ ಒಂದೊಂದನ್ನು ಕಡಿಮೆಮಾಡಿ ಈ ರೀತಿಯಾಗಿ ಕಡಿಮೆಮಾಡಿಕೊಂಡು ಬರಬೇಕು. ಈ ರೀತಿಯಾಗಿ ಹದಿನೇಳು ದಿನಗಳು ಇದನ್ನೇ ಅನುಷ್ಠಾನಮಾಡಬೇಕೆಂದು ತಿಳಿದವರು ನಿಶ್ಚಯಿಸಿದ್ದಾರೆ.

೩೮-೩೯. ಅದಿಲ್ಲದಿದ್ದರೆ ಈ ವಿವಾಹಕಾಂಡದಲ್ಲಿ ಎಲ್ಲವನ್ನೂ ಮೊದಲನೆಯ ದಿವಸದಲ್ಲಿ ಓದಬೇಕು. ಎರಡನೆಯ ದಿವಸ ಎರಡುಬಾರಿ ಓದಬೇಕು. ಈ ರೀತಿಯಾಗಿ ಒಂದೊಂದುಸಾರಿ ಹೆಚ್ಚಾಗಿ ಓದುತ್ತಾ ಒಂಭತ್ತನೆಯ ದಿವಸ ಒಂಭತ್ತು ಬಾರಿ ಓದಬೇಕು. ಅನಂತರ ಹತ್ತನೆಯ ದಿವಸದಲ್ಲಿ ಒಂಭತ್ತುಬಾರಿ ಓದಬೇಕು. ಹನ್ನೊಂದನೆಯ ದಿನ ಎಂಟುಬಾರಿ ಓದಬೇಕು. ಇದೇ ರೀತಿಯಲ್ಲಿ ಒಂದೊಂದುಬಾರಿ ಕಡಿಮೆಮಾಡಿಕೊಂಡು ಬರಬೇಕು.

೪೦. ಮನುಷ್ಯನು ಈ ರೀತಿಯಾಗಿ ಒಂದುವರ್ಷಕಾಲ ಓದಿದರೆ ಮುಗುಳುನಗೆಯನ್ನು ನಗುತ್ತಿರುವ ಮನೋಹರವಾದ ಮೂಗುಳ್ಳ, ದಿವ್ಯವಾದ ರೂಪುಳ್ಳ ಸುಂದರಿಯಾದ ಹೆಂಗಸನ್ನು ಹೊಂದುತ್ತಾನೆ.

ವಿವಾಹಕಾಂಡಂ ಪರಮಂ ಪವಿತ್ರ ।
ಮಾನಂದದಂ ಮಂಗಳದಾಯಕಂ ಚ ।
ಸ್ತ್ರೀದಂ ಮನೋಜ್ಞಂ ಶ್ರುತಿಸೌಖ್ಯದಂ ವೈ ।
ನರೈಸ್ಸದಾ ಸಂಶ್ರವಣೀಯಮೇತತ್ ॥ ೪೧ ॥

ಆನಂದರಾಮಾಯಣ ಮಧ್ಯಸಂಸ್ಥಂ ।
ವಿವಾಹಕಾಂಡಂ ಪರಮಂ ಹಿ ಷಷ್ಠಂ ।
ಶೃಣ್ವಂತಿ ಭಕ್ತ್ಯಾ ಭುವಿ ಮಾನವಾ ಯೇ ।
ಲಭಂತಿ ಕಾಮಾನಖಿಲಾನ್ ಮನೋಜ್ಞಾನ್ ॥ ೪೨ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ವಿವಾಹಕಾಂಡೇ ಜಲದೇವೀ ಜೀವದಾನಂ ಬಾಲಿಕಾ ವಿಮೋಚನಂ ನಾಮ ನವಮಸ್ಸರ್ಗಃ

---

೪೧. ಈ ವಿವಾಹಕಾಂಡವು ಉತ್ತಮವೂ, ಪವಿತ್ರವೂ, ಆದುದು. ಆನಂದವನ್ನೂ, ಮಂಗಳವನ್ನೂ ಉಂಟುಮಾಡುತ್ತದೆ. ಸ್ತ್ರೀಯನ್ನು ಕೊಡುತ್ತದೆ. ಮನೋಜ್ಞವಾದುದು. ಕಿವಿಗೆ ಇಂಪಾಗಿಯೂ ಇದೆ. ಆದ್ದರಿಂದ ಮನುಷ್ಯರು ಇದನ್ನೇ ಯಾವಾಗಲೂ ಓದಬೇಕು. ಇಲ್ಲವೇ ಕೇಳುತ್ತಿರಬೇಕು.

೪೨. ಆನಂದರಾಮಾಯಣದ ಮಧ್ಯದಲ್ಲಿ ಈ ಆರನೆಯದಾದ ವಿವಾಹಕಾಂಡವು ಇದೆ. ಇದನ್ನು ಈ ಭೂಮಿಯಲ್ಲಿ ಯಾರು ಕೇಳುವರೋ ಅವರೆಲ್ಲರೂ ತಮಗೆ ಬೇಕಾದ ಇಷ್ಟಗಳನ್ನು ಹೊಂದುತ್ತಾರೆ.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ ಜಲದೇವೀ ಜೀವದಾನ ಬಾಲಿಕಾ ವಿಮೋಚನವೆಂಬ ಒಂಬತ್ತನೆಯ ಸರ್ಗವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ವಿವಾಹಕಾಂಡದಲ್ಲಿ ಒಂಭತ್ತನೆಯ ಸರ್ಗದ ಸಾರಾಂಶವು

ಶ್ರೀರಾಮನು ದೂತರಿಂದ ವಿಷಯಗಳೆಲ್ಲವನ್ನೂ ತಿಳಿದುಕೊಂಡು ಎಲ್ಲರೊಡನೆಯೂ ಬಂದನು. ಕಂಬುಕಂಠನು ಆ ರಾಮನನ್ನು ಎದುರುಗೊಂಡು ಕರೆತಂದನು. ಯೂಪಕೇತುವಿನ ಮದುವೆಯು ಸಾಂಗವಾಗಿ ನಡೆಯಿತು. ಅನಂತರ ರಾಮನು ಅಯೋಧ್ಯೆಗೆ ಉತ್ಸವದಿಂದ ಹೊರಟು ಬಂದನು. ಅನಂತರ ಎಲ್ಲರೂ ಅವರವರ ಹೆಂಡಿರೊಡನೆ ಸುಖವಾಗಿದ್ದರು.

ಈ ಕಾಂಡವನ್ನು ಕ್ರಮದಿಂದ ಓದಿದರೆ ಇಷ್ಟಾರ್ಥಗಳು ಸಿದ್ಧಸುತ್ತವೆ.

ಶ್ರೀಮದಾನಂದರಾಮಾಯಣೇ ವಿವಾಹಕಾಂಡಃ ಷಷ್ಠಃ ಸಂಪೂರ್ಣಃ



ಶ್ರೀಮದಾನಂದರಾಮಾಯಣದಲ್ಲಿ ಆರನೆಯದಾದ ವಿವಾಹಕಾಂಡವು ಮುಗಿದುದು

॥ ಶ್ರೀಃ ॥

॥ ಶ್ರೀ ಸೀತಾ ಲಕ್ಷ್ಮಣ ಭರತ ಶತ್ರುಘ್ನ ಹನುಮತ್ಸಮೇತ ಶ್ರೀರಾಮಚಂದ್ರಸ್ವಾಮಿನೇ ನಮಃ ॥

ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀಮದಾನಂದ ರಾಮಾಯಣಂ

ರಾಜ್ಯಕಾಂಡಃ ಸಪ್ತಮಃ ಪ್ರಾರಭ್ಯತೇ

॥ ಪ್ರಥಮಸ್ಸರ್ಗಃ ॥

॥ ಶ್ರೀವಿಷ್ಣುದಾಸ ಉವಾಚ ॥

ರಾಮದಾಸ ಗುರೋ ಪ್ರೋಕ್ತಂ ತ್ವಯಾ ಪೂರ್ವಂ ಮಮಾಂತಿಕೇ ।
ವಿವಾಹಕಾಂಡಚರಮಸರ್ಗೇತ್ರ ಪಾತಕಾಪಹೇ ॥ ೧ ॥

ರಾಮನಾಮಸಹಸ್ರೇಣ ನಾರದೇನ ಮಹಾತ್ಮನಾ ।
ಸೂತೋಕ್ತೇನ ಸಭಾಯಾಂ ಸಃ ರಾಮಚಂದ್ರಸ್ಸ್ತುತಸ್ತ್ವಿತಿ ॥ ೨ ॥

ಶ್ರೀಮದಾನಂದರಾಮಾಯಣದಲ್ಲಿ ರಾಜ್ಯಕಾಂಡವು

ಮೊದಲನೆಯ ಸರ್ಗವು

೧-೨. ವಿಷ್ಣುದಾಸನು ಹೇಳಿದನು—ಎಲೈ ಗುರುವಾದ ರಾಮದಾಸನೇ! ನನ್ನೆದುರಿಗೆ ವಿವಾಹಕಾಂಡದ ಕೊನೆಯ ಸರ್ಗದಲ್ಲಿ ನಾರದನು ಸೂತೋಕ್ತವಾದ ರಾಮಸಹಸ್ರನಾಮದಿಂದ ಸಭೆಯಲ್ಲಿ ರಾಮಚಂದ್ರನನ್ನು ಸ್ತುತಿಸಿದನು. ಎಂದು ಹೇಳಿದೆಯಷ್ಟೆ.

ತತ್ಕೀದೃಶಂ ರಾಮನಾಮಸಹಸ್ರಂ ಮಾಂ ಪ್ರಕಾಶಯ ।
ಕಥಂ ಸೂತೇನ ಕಥಿತಂ ಮುನೀನಾಮಗ್ರತಃ ಪುರಾ ॥ ೩ ॥

॥ ಶ್ರೀರಾಮದಾಸ ಉವಾಚ ॥

ಸಮ್ಯಕ್ ಪೃಷ್ಟಂ ತ್ವಯಾ ವತ್ಸ ಸಾವಧಾನಮನಾಃ ಶೃಣು ।
ರಾಮನಾಮಸಹಸ್ರಂ ಚ ಸೂತೋಕ್ತಂ ಪ್ರವದಾಮಿ ತೇ ॥ ೪ ॥

ಯಥಾ ತ್ವಯಾ ಕೃತಃ ಪ್ರಶ್ನಃ ಶೌನಕೇನ ತಥಾ ಕೃತಃ ।
ತಚ್ಛ್ರುತ್ವಾ ಸ್ಮಾಹ ಸೂತಃ ತಂ ಶೌನಕಂ ನೈಮಿಷೇ ವನೇ ॥ ೫ ॥

॥ ಶ್ರೀ ಸೂತ ಉವಾಚ ॥

ಏಕದಾ ಸುಖಮಾಸೀನೌ ಪಾರ್ವತೀಪರಮೇಶ್ವರೌ ।
ಅನ್ಯೋನ್ಯಾಶ್ಲಿಷ್ಟಹೃದ್ಬಾಹೂ ಲೋಕರಕ್ಷಣ ತತ್ಪರೌ ॥ ೬ ॥

---

೩. ಆ ರಾಮ ಸಹಸ್ರನಾಮವು ಎಂಥಹವು ? ಏತಕ್ಕಾಗಿ ಸೂತನು ಹೀಗೆ ಹೇಳಿದನು? ಅದನ್ನು ಋಷಿಗಳಿಗೆ ಹೇಳಲು ಕಾರಣವೇನು ? ಅದನ್ನು ದಯವಿಟ್ಟು ನನಗೆ ಹೇಳು.

೪. ಶ್ರೀರಾಮದಾಸನು ಹೇಳಿದನು—ಎಲೈ ಶಿಷ್ಯನೆ ! ನೀನು ಕೇಳಿದುದು ಬಹು ಚೆನ್ನಾಗಿದೆ. ಸಾವಧಾನದಿಂದ ಕೇಳು. ಸೂತನು ಹೇಳಿದ ಆ ರಾಮ ಸಹಸ್ರನಾಮವನ್ನು ಹೇಳುತ್ತೇನೆ.

೫. ಹಿಂದೆ ನೈಮಿಷಾರಣ್ಯದಲ್ಲಿ ನೀನು ನನ್ನನ್ನು ಕೇಳಿದಂತೆಯೇ ಶೌನಕನು ಸೂತ ಪುರಾಣಿಕನನ್ನು ಮುನಿಗಳೆದುರಿಗೆ ಕೇಳಿದನು. ಅದನ್ನು ಕೇಳಿ ಸೂತನು ಶೌನಕನಿಗೆ ಇಂತೆಂದು ಹೇಳಿದನು.

೬. ಸೂತನು ಹೇಳಿದನು—ಒಂದು ಸಾರಿ ಪಾರ್ವತಿ ಪರಮೇಶ್ವರರು ಸುಖವಾಗಿ ಕುಳಿತಿದ್ದರು. ಅವರಿಬ್ಬರೂ ಲೋಕವನ್ನು ರಕ್ಷಿಸುವುದರಲ್ಲಿ ಆಸಕ್ತ ರಾಗಿ ಒಬ್ಬರಿಗೊಬ್ಬರು ಆಲಂಗಿಸಿಕೊಂಡಿದ್ದರು.

ಇಂದ್ರಾದಿಲೋಕಪಾಲೈಶ್ಚ ಸೇವಿತೌ ಚ ಪರಾತ್ಪರೌ ।
ಪಾರ್ವತೀ ಪರಿಪಪ್ರಚ್ಛ ತದಾ ಧರ್ಮಾನನುಕ್ರಮಾತ್ ॥ ೭ ॥

॥ ಪಾರ್ವತ್ಯುವಾಚ ॥

ಮನ್ನಾಥ ಜಗತಾಂ ನಾಥ ಸರ್ವಜ್ಞ ಪರಮೇಶ್ವರ ।
ತ್ವತ್ಪ್ರಸಾದಾನ್ಮಯಾ ಜ್ಞಾತಂ ಧರ್ಮಶಾಸ್ತ್ರಮನುತ್ತಮಮ್ ॥ ೮ ॥

ಪ್ರಾಯಶ್ಚಿತ್ತಂ ತು ಪಾಪಾನಾಂ ಶ್ರುತಂ ಸರ್ವಮಶೇಷತಃ ।
ಬ್ರಹ್ಮಹತ್ಯಾದಿಪಾಪಾನಾಂ ನಿಷ್ಕೃತಿಂ ವಕ್ತುಮರ್ಹಸಿ ॥ ೯ ॥

॥ ಶ್ರೀಮಹಾದೇವ ಉವಾಚ ॥

ಶೃಣು ದೇವಿ ಪ್ರವಕ್ಷ್ಯಾಮಿ ಗುಹ್ಯಾದ್ಗುಹ್ಯತರಂ ಮಹತ್ ।
ಸನತ್ಕುಮಾರ ವಿಘ್ನೇಶಸಂವಾದಂ ಪಾಪನಾಶನಂ ॥ ೧೦ ॥

---

೭. ಅವರನ್ನು ಇಂದ್ರನೇ ಮುಂತಾದ ದೇವತೆಗಳು ಸೇವಿಸುತ್ತಿದ್ದರು. ಅವರು ಪರಾತ್ಪರರು. ಆಗ ಪಾರ್ವತಿಯು ಪರಮೇಶ್ವರನನ್ನು ಕುರಿತು ಕ್ರಮವಾಗಿ ಧರ್ಮವನ್ನು ಕೇಳುತ್ತ ಬಂದಳು.

೮. ಪಾರ್ವತಿಯು ಹೇಳಿದಳು—ನನ್ನ ಒಡೆಯನೇ ! ಜಗತ್ತಿಗೆಲ್ಲಾ ನಾಯಕನೆ! ಸರ್ವಜ್ಞನೇ! ಪರಮೇಶ್ವರನೇ! ನಿನ್ನ ದಯೆಯಿಂದ ಉತ್ತಮವಾದ ಧರ್ಮಗಳನ್ನು ಕೇಳಿದೆನು.

೯. ಪಾಪಗಳೆಲ್ಲಕ್ಕೂ ಪ್ರಾಯಶ್ಚಿತ್ತವನ್ನು ಪೂರ್ತಿಯಾಗಿ ಕೇಳಿದನು. ಈಗ ಬ್ರಹ್ಮಹತ್ಯಾದಿ ಪಾಪಗಳೆಲ್ಲಕ್ಕೂ ನಾಶಕವಾದ ಪ್ರಾಯಶ್ಚಿತ್ತವನ್ನು ಹೇಳು.

೧೦. ಶ್ರೀ ಮಹಾದೇವನು ಹೇಳಿದನು—ಎಲೈ ದೇವಿಯೆ ! ಹೇಳುತ್ತೇನೆ. ಕೇಳು. ಇದು ಗುಹ್ಯಕ್ಕೆಲ್ಲವೂ ಗುಹ್ಯವಾದುದು. ಈಗ ನಾನು ಹೇಳುವುದು ಸನತ್ಕುಮಾರ ವಿಘ್ನೇಶ್ವರ ಪಾಪನಾಶಕವಾದ ಸಂವಾದವು. ಆ ಸಂವಾದವನ್ನು ಹೇಳುತ್ತೇನೆ. ಕೇಳು.

ಉಪವಿಷ್ಟಂ ಗಣಾಧ್ಯಕ್ಷಮೇಕಾಂತೇ ಪ್ರಣಿಪತ್ಯ ಚ ।
ಸನತ್ಕುಮಾರಃ ಪಪ್ರಚ್ಛ ಸರ್ವಧರ್ಮವಿದಾಂ ವರಂ ॥ ೧೧ ॥

॥ ಸನತ್ಕುಮಾರ ಉವಾಚ ॥

ಭಗವನ್ ಸರ್ವಧರ್ಮಜ್ಞ ಸರ್ವವಿಘ್ನವಿನಾಶನ ।
ದ್ವಿಜಹತ್ಯಾಹರಂ ಧರ್ಮಂ ವಕ್ತುಮರ್ಹಸಿ ಮೇ ಪ್ರಭೋ ॥ ೧೨ ॥

ವಿನಾ ಭವಂತಂ ಧರ್ಮಸ್ಯ ವಕ್ತಾ ನಾಸ್ತಿ ಜಗತ್ರಯೇ ।

॥ ವಿನಾಯಕ ಉವಾಚ ॥

ಸಾಧು ಪೃಷ್ಟಂ ತ್ವಯಾ ಬ್ರಹ್ಮನ್ ಸರ್ವಲೋಕೋಪಕಾರಕಂ ॥ ೧೩ ॥

ಮಯಾ ಚಿರಂ ಕೃತಂ ಕರ್ಮ ಸ್ಮಾರಿತಂ ಭವತಾಽನಘ ।
ಪುರಾಽಹಂ ಗಜರೂಪೇಣ ಜಾತಃ ಪರ್ವತಸನ್ನಿಭಃ ॥ ೧೪ ॥

---

೧೧. ಒಂದು ಸಾರಿ ಗಣಾಧ್ಯಕ್ಷನು ಏಕಾಂತದಲ್ಲಿ ಕುಳಿತಿರಲು ಸನತ್ಕುಮಾರನು ಆ ಏಕಾಂತದಲ್ಲಿ ನಮಸ್ಕರಿಸಿ ಇಂತೆಂದು ಹೇಳಿದನು.

೧೨. ಸನತ್ಕುಮಾರನು ಹೇಳಿದನು—ಪೂಜ್ಯನೂ, ಸರ್ವಜ್ಞನೂ, ಸರ್ವ ವಿಘ್ನ ವಿನಾಶಕನೂ ಆದ ಸ್ವಾಮಿಯೆ! ಬ್ರಹ್ಮಹತ್ಯೆಯ ನಾಶಕವಾದ ಧರ್ಮವನ್ನು ಈಗ ಹೇಳು. ಈ ರೀತಿಯಾದ ಧರ್ಮವನ್ನು ಹೇಳಲು ಪ್ರಪಂಚದಲ್ಲಿ ನಿನ್ನೊಬ್ಬನನ್ನು ಬಿಟ್ಟರೆ ಮತ್ತಾವನೂ ಇರುವುದಿಲ್ಲ.

೧೩. ಶ್ರೀ ವಿನಾಯಕನು ಹೇಳಿದನು—ಎಲೈ ಬ್ರಾಹ್ಮಣನೇ! ನೀನು ಕೇಳಿದುದು ಸರಿಯಾಗಿದೆ. ಸರ್ವಲೋಕಗಳಿಗೂ ಉಪಕಾರಕವಾಗಿರುವುದು.

೧೪. ನಾನು ಬಹಳ ಕಾಲದ ಹಿಂದೆ ಮಾಡಿದ ಧರ್ಮವನ್ನು ನೀನು ಈಗ ಜ್ಞಾಪಕಕ್ಕೆ ಬರುವಂತೆ ಮಾಡಿದೆ. ಹಿಂದೆ ನಾನು ಆನೆಯ ಆಕಾರವನ್ನು ಹೊಂದಿ ಬೆಟ್ಟದಂತೆ ದಪ್ಪವಾಗಿ ಹುಟ್ಟಿದೆನು.

ತತೋ ವೃಕ್ಷಾನ್ಸಮುತ್ಪಾಟ್ಯ ಮುನಿಹಿಂಸಾಂ ಸಮಾರಭಂ ।
ತದಾ ಮಯಾ ಮುನಿಗಣಾ ನಿಹತಾ ಬಹವೋ ಬಲಾತ್ ॥ ೧೫ ॥

ಹಾಹಾಕಾರೋ ಮಹಾನಾಸೀದ್ಬ್ರಾಹ್ಮಣಾನಾಂ ಸಮಂತತಃ ।
ತದಾ ಹತ್ಯಾ ಸಹಸ್ರೇಣ ವೇಷ್ಟಿತಃ ಪತಿತೋಸ್ಮ್ಯಹಂ ॥ ೧೬ ॥

ನಿಸ್ಸಂಜ್ಞಂ ಮೃತತುಲ್ಯಂ ಮಾಂ ಪತಿತಂ ವೀಕ್ಷ್ಯ ಮೇ ಪಿತಾ ।
ಆರಾಧ್ಯ ಜಗತಾಮೀಶಂ ರಾಮಂ ಸರ್ವಹೃದಿ ಸ್ಥಿತಂ ॥ ೧೭ ॥

ಪ್ರತ್ಯಕ್ಷಮಕರೋದ್ದೇವಂ ಮದ್ಧೇತೋ ರಘುನಂದನಂ ।
ತದಾ ಪ್ರೋವಾಚ ಭಗವಾನ್ ಶ್ರೀರಾಮಃ ಪಿತರಂ ಮಮ ॥ ೧೮ ॥

---

೧೫. ಆಗ ಮದಿಸಿದವನಾಗಿ ಮರಗಳನ್ನು ಕಿತ್ತೆಸೆಯುತ್ತ ಮುನಿಗಳೆಲ್ಲರನ್ನೂ ಹಿಂಸಿಸುತ್ತಿದ್ದೆನು. ಅಲ್ಲದೆ ಆಗ ಬಹು ಜನ ಮುನಿಗಳನ್ನೂ ನನ್ನ ಬಲದಿಂದ ಕೊಂದುಹಾಕಿದೆನು.

೧೬. ಆಗ ಬ್ರಾಹ್ಮಣರೆಲ್ಲರೂ, ಎಲ್ಲಾ ಕಡೆಯಲ್ಲಿಯೂ ಹಾಹಾಕಾರ ಮಾಡತೊಡಗಿದರು. ಹೀಗೆಯೇ ಕೊಲ್ಲುತ್ತಿರಲು ಸಾವಿರಾರು ಬ್ರಹ್ಮಹತ್ಯೆಗಳಿಂದ ನಾನು ಕೂಡಿಕೊಂಡು ಬಿದ್ದುಬಿಟ್ಟೆನು.

೧೭. ಆಗ ಜ್ಞಾನವಿಲ್ಲದೆ ಸತ್ತವನಂತೆ ಬಿದ್ದಿರುವ ನನ್ನನ್ನು ನನ್ನ ತಂದೆಯು ನೋಡಿ ಜಗದೀಶನಾದ ಸರ್ವರ ಹೃದಯದಲ್ಲಿಯೂ ಇರುವ ಶ್ರೀರಾಮನನ್ನು ಆರಾಧಿಸಿದನು.

೧೮. ಆ ಶಿವನು ನನಗೋಸ್ಕರವಾಗಿಯೇ ಆ ಶ್ರೀರಾಮನನ್ನು ಪ್ರತ್ಯಕ್ಷನನ್ನಾಗಿ ಮಾಡಿಕೊಂಡನು. ಆಗ ಆ ಶ್ರೀರಾಮನು ನನ್ನ ತಂದೆಯನ್ನು ಕುರಿತು ಇಂತೆಂದನು.

॥ ಶ್ರೀರಾಮ ಉವಾಚ ॥

ಪ್ರಸನ್ನೋಽಸ್ಮಿ ಮಹಾದೇವ ಕಿಂ ಮಾಂ ಪ್ರಾರ್ಥಯಸೇ ಪ್ರಭೋ ।
ದಾಸ್ಯಾಮಿ ಯದಭೀಷ್ಟಂ ತೇ ತ್ರಿಷು ಲೋಕೇಷು ದುರ್ಲಭಂ ॥ ೧೯ ॥

॥ ಶ್ರೀಮಹಾದೇವ ಉವಾಚ ॥

ದ್ವಿಜಹತ್ಯಾ ಸಮಾವಿಷ್ಟಂ ಮಮ ಪುತ್ರಮಿಮಂ ಪ್ರಭೋ ।
ನಿಷ್ಪಾಪಂ ಕುರು ದೇವೇಶ ಯದ್ಯಸ್ತಿ ಮಯಿ ತೇ ದಯಾ ॥ ೨೦ ॥

॥ ಶ್ರೀವಿನಾಯಕ ಉವಾಚ ॥

ತಥೇತ್ಯುಕ್ತ್ವಾ ತದಾ ತೇನ ಕೃಪಯಾಽಹಂ ನಿರೀಕ್ಷಿತಃ ।
ತತ್ಕ್ಷಣಾಲಬ್ಧಚೈತನ್ಯೋ ನಿರ್ಮಲಜ್ಞಾನಬೃಂಹಿತಃ ॥ ೨೧ ॥

---

೧೯. ಶ್ರೀರಾಮನು ಹೇಳಿದನು–ಎಲೈ ಮಹಾದೇವನೇ! ನಿನಗೆ ಪ್ರಸನ್ನನಾಗಿದ್ದೇನೆ. ನೀನು ನನ್ನನ್ನು ಏನನ್ನು ಪ್ರಾರ್ಥಿಸಿಕೊಳ್ಳುತ್ತೀಯೆ? ನಿನಗೆ ಬೇಕಾದುದು ಮೂರುಲೋಕದಲ್ಲಿಯೂ ದುರ್ಲಭವಾದರೂ ಅದನ್ನು ಕೊಡುತ್ತೇನೆ. ಕೇಳು.

೨೦. ಶ್ರೀ ಮಹಾದೇವನು ಹೇಳಿದನು—ಈ ಉಮಾಪುತ್ರನು ಬ್ರಹ್ಮಹತ್ಯೆಯಿಂದ ಕೂಡಿಕೊಂಡಿರುವನು. ನನ್ನಮೇಲೆ ನಿನಗೆ ದಯೆಯಿದ್ದರೆ ಇವನಿಗೆ ಆ ಪಾಪವು ಹೋಗುವಂತೆ ಮಾಡು.

೨೧. ಶ್ರೀ ವಿನಾಯಕನು ಹೇಳಿದನು–ಆ ರಾಮನು ಹಾಗೆಯೇ ಆಗಲೆಂದು ಹೇಳಿ ನನ್ನನ್ನು ಕೃಪಾದೃಷ್ಟಿಯಿಂದ ನೋಡಿದನು. ಆ ಒಡನೆಯೇ ನನಗೆ ಜ್ಞಾನವು ಬಂದಿತು. ನಿರ್ಮಲವಾದ ಜ್ಞಾನದಿಂದ ಕೂಡಿಕೊಂಡೆನು ಅನಂತರ ಅವನನ್ನು ಬಹುವಾದ ಗದ್ಯಪದ್ಯಗಳಿಂದ ಸ್ತುತಿಸಿ ನಮಸ್ಕರಿಸಿದನು.

ಬಹುಭಿರ್ಗದ್ಯಪದ್ಯೈಶ್ಚ ಸ್ತುತ್ವಾ ತಂ ಪ್ರಣತೋಽಭವಂ ।

॥ ಶ್ರೀರಾಮಚಂದ್ರ ಉವಾಚ ॥

ದ್ವಿಜಹತ್ಯಾಸಹಸ್ರಸ್ಯ ಪ್ರಾಯಶ್ಚಿತ್ತಂ ವದಾಮಿ ತೇ ॥ ೨೨ ॥

ಜಪಂ ನಾಮ ಸಹಸ್ರಂ ಮೇ ಹತ್ಯಾಕೋಟಿವಿನಾಶನಂ ।
ಇತಿ ಗುಹ್ಯಂ ದದೌ ರಾಮಸ್ತತ್ವಂ ನಾಮಸಹಸ್ರಕಂ ॥ ೨೩ ॥

ತಸ್ಯ ತದ್ಗ್ರಹಣಾದೇವ ನಿಷ್ಪಾಪೋಽಹಂ ತದಾಭವಂ ।
ತದಾರಭ್ಯಾಸ್ಮಿ ದೇವಾನಾಂ ಪೂಜ್ಯೋಽಹಂ ಮುನಿಸತ್ತಮ ॥ ೨೪ ॥

ತ್ವಮಪ್ಯೇತದಧೀಯಾನೋ ರಾಘವಸ್ಯ ಮಹಾತ್ಮನಃ ।
ನಾಮ್ನಾಂ ಸಹಸ್ರಂ ಲೋಕೇಷು ಪ್ರಖ್ಯಾಪಯ ಮಹಾಮತೇ ॥ ೨೫ ॥

॥ ಸನತ್ಕುಮಾರ ಉವಾಚ ॥

ಧನ್ಯೋಽಸ್ಮ್ಯನುಗೃಹೀತೋಽಸ್ಮಿ ಕೃತಾರ್ಥೋಽಸ್ಮಿ ಗಣಾಧಿಪ ।
ತ್ವತ್ಪ್ರಸಾದಾನ್ಮಯಾಧೀತಂ ರಾಮನಾಮಸಹಸ್ರಕಂ ॥ ೨೬ ॥

೨೨-೨೩. ಶ್ರೀರಾಮಚಂದ್ರನು ಹೇಳಿದನು–ನೀನು ಸಾವಿರಾರು ಹತ್ಯೆಗಳನ್ನು ಮಾಡಿದ್ದರೂ ಕೂಡ ಅದಕ್ಕೆ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ. ನನ್ನ ಸಹಸ್ರನಾಮವನ್ನು ಜಪಿಸು. ಅದು ಕೋಟಿಬ್ರಹ್ಮಹತ್ಯೆಗಳನ್ನೂ ನಾಶಮಾಡುತ್ತದೆ. ಹೀಗೆಂದು ಹೇಳಿ ರಾಮನು ಗುಹ್ಯವಾದ ರಾಮನಾಮ ಸಹಸ್ರವನ್ನು ನನಗೆ ಹೇಳಿದನು.

೨೪. ಅವನ ಆ ನಾಮಗಳನ್ನು ನಾನು ಗ್ರಹಿಸಿದೊಡನೆಯೇ ಆ ಪಾಪಗಳೆಲ್ಲವೂ ಹೋಯಿತು. ಅದು ಮೊದಲುಗೊಂಡು ನಾನು ದೇವತೆಗಳಿಗೆಲ್ಲ ಪೂಜ್ಯನಾದೆನು.

೨೫. ನೀನೂ ಕೂಡ ಈ ರಾಮನ ಸಹಸ್ರನಾಮವನ್ನು ಅಧ್ಯಯನ ಮಾಡುತ್ತ ಲೋಕಕ್ಕೆಲ್ಲವೂ ಪ್ರಚಾರಮಾಡು.

೨೬. ಶ್ರೀ ಸನತ್ಕುಮಾರನು ಹೇಳಿದನು–ಎಲೈ ಗಣಾಧಿಪನೇ! ನಿನ್ನ ಅನುಗ್ರಹದಿಂದ ರಾಮನಾಮ ಸಹಸ್ರಕವನ್ನು ಅಧ್ಯಯನಮಾಡಿದೆನು ಇದರಿಂದ ಧನ್ಯನಾದೆನು. ಅನುಗ್ರಹವನ್ನು ಹೊಂದಿದೆನು. ಕೃತಾರ್ಥನೂ ಆದೆನು.

॥ ಶ್ರೀಮಹಾದೇವ ಉವಾಚ ॥

ಇತಿ ವಿಜ್ಞಾಪ್ಯ ದೇವೇಶಂ ಪರಿಕ್ರಮ್ಯ ಪ್ರಣಮ್ಯ ಚ ।
ತದಾದಿ ಸತತಂ ಜಪ್ತ್ವಾ ಸ್ತೋತ್ರಮೇತದ್ವರಾನನೇ ।
ಅವಾಪ ಪರಮಾಂ ಸಿದ್ಧಿಂ ಪುಣ್ಯಪಾಪವಿವರ್ಜಿತಃ ॥ ೨೭ ॥

॥ ಪಾರ್ವತ್ಯುವಾಚ ॥

ಶ್ರೋತುಮಿಚ್ಛಾಮಿ ದೇವೇಶ ತದಹಂ ಸರ್ವಕಾಮದಂ ।
ನಾಮ್ನಾಂ ಸಹಸ್ರಂ ಮಾಂ ಬ್ರೂಹಿ ಯದ್ಯಸ್ತಿ ಮಯಿ ತೇ ದಯಾ॥ ೨೮ ॥

॥ ಮಹಾದೇವ ಉವಾಚ ॥

ಅಥ ವಕ್ಷ್ಯಾಮಿ ಭೋ ದೇವಿ ರಾಮನಾಮಸಹಸ್ರಕಂ ।
ಶೃಣುಷ್ವೈಕಮನಾಃ ಸ್ತೋತ್ರಂ ಗುಹ್ಯಾದ್ಗುಹ್ಯತರಂ ಮಹತ್ ॥ ೨೯ ॥

ಋಷಿರ್ವಿನಾಯಕಶ್ಚಾಸ್ಯ ಹ್ಯನುಷ್ಟುಪ್ ಛಂದ ಉಚ್ಯತೇ ।
ಪರಬ್ರಹ್ಮಾತ್ಮಕೋ ರಾಮೋ ದೇವತಾ ಶುಭದರ್ಶನೇ ॥ ೩೦ ॥

---

೨೭. ಶ್ರೀ ಮಹಾದೇವನು ಹೇಳಿದನು-ಇಂತೆಂದು ಆ ಸ್ವಾಮಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ವಿಜ್ಞಾಪಿಸಿ ಅದು ಮೊದಲುಗೊಂಡು ಈ ಸಹಸ್ರನಾಮ ಸ್ತೋತ್ರವನ್ನು ಆ ಬ್ರಹ್ಮನ ಮಾನಸಪುತ್ರನಿಂದ ನಾನು ಹೊಂದಿದೆನೆಂದು ತಿಳಿ.

೨೮. ಶ್ರೀ ಪಾರ್ವತಿಯು ಹೇಳಿದಳು-ಎಲೈ ದೇವೇಶನೇ ! ಸರ್ವಕಾಮಗಳನ್ನು ಕೊಡುವ ಈ ಸಹಸ್ರನಾಮವನ್ನು ಕೇಳಲು ಇಚ್ಛಿಸುತ್ತೇನೆ. ನಿನಗೆ ನನ್ನಮೇಲೆ ದಯೆಯಿದ್ದರೆ ಆ ಸಹಸ್ರನಾಮವನ್ನು ಹೇಳು.

೨೯. ಶ್ರೀ ಮಹಾದೇವನು ಹೇಳಿದನು-ಎಲೈ ದೇವಿಯೇ ! ಆ ರಾಮನಾಮ ಸಹಸ್ರವನ್ನು ನಿನಗೆ ಹೇಳುತ್ತೇನೆ. ಇದನ್ನು ಏಕಾಗ್ರತೆಯಿಂದ ಕೇಳು. ಇದು ಮಹತ್ವವುಳ್ಳದ್ದು. ಬಹು ಗುಹ್ಯವಾದುದು.

೩೦. ಇದಕ್ಕೆ ಋಷಿಯು ವಿನಾಯಕನು. ಅನುಷ್ಟುಪ್ ಛಂದಸ್ಸು. ಪರಬ್ರಹ್ಮಕನಾದ ರಾಮನೇ ದೇವತೆಯು.

॥ ಅಥ ಸಂಕಲ್ಪಃ ॥

ಅಸ್ಯ ಶ್ರೀರಾಮಸಹಸ್ರನಾಮಮಾಲಾಮಂತ್ರಸ್ಯ ವಿನಾಯಕ ಋಷಿಃ. ಅನುಷ್ಟುಪ್ ಛಂದಃ. ಶ್ರೀರಾಮೋ ದೇವತಾ. ಮಹಾವಿಷ್ಣುರಿತಿ ಬೀಜಂ. ಗುಣಭೃನ್ನಿರ್ಗುಣೋಮಹಾನಿತಿ ಶಕ್ತಿಃ. ಸಚ್ಚಿದಾನಂದವಿಗ್ರಹ ಇತಿ ಕೀಲಕಂ. ಶ್ರೀರಾಮಪ್ರೀತ್ಯರ್ಥೇ ಜಪೇ ವಿನಿಯೋಗಃ ॥

॥ ಅಥ ಅಂಗನ್ಯಾಸಃ ॥

ಶ್ರೀರಾಮಚಂದ್ರಾಯ ಅಂಗುಷ್ಠಾಭ್ಯಾಂ ನಮಃ ।
ಸೀತಾಪತಯೇ ತರ್ಜನೀಭ್ಯಾಂ ನಮಃ ।
ರಘುನಾಥಾಯ ಮಧ್ಯಮಾಭ್ಯಾಂ ನಮಃ ।
ಭರತಾಗ್ರಜಾಯ ಅನಾಮಿಕಾಭ್ಯಾಂ ನಮಃ ।
ದಶರಥಾತ್ಮಜಾಯ ಕನಿಷ್ಠಿಕಾಭ್ಯಾಂ ನಮಃ ।
ಹನುಮತ್ಪ್ರಭವೇ ಕರತಲಕರಪೃಷ್ಠಾಭ್ಯಾಂ ನಮಃ ॥

---

೩೧. ಸಂಕಲ್ಪವು—ಈ ಶ್ರೀರಾಮಸಹಸ್ರನಾಮ ಮೂಲಮಂತ್ರಕ್ಕೆ ವಿನಾಯಕನು ಋಷಿಯು. ಅನುಷ್ಟುಪ್ ಛಂದಸ್ಸು. ಶ್ರೀರಾಮನು ದೇವತೆಯು. ಮಹಾವಿಷ್ಣುವು ಬೀಜವು. ಗುಣಭೃನ್ನಿರ್ಗುಣೋಮಹಾನ್ ಎಂಬುದು ಶಕ್ತಿಯು. ಸಚ್ಚಿದಾನಂದವಿಗ್ರಹ ಎಂಬುದು ಕೀಲಕವು. ಶ್ರೀರಾಮ ಪ್ರೀತಿಗೋಸ್ಕರವಾಗಿ ಜಪಮಾಡುತ್ತೇನೆ ಎಂಬುದೇ ವಿನಿಯೋಗವು.

ಅಂಗನ್ಯಾಸವು—ಶ್ರೀರಾಮಚಂದ್ರನು ಅಂಗುಷ್ಟಗಳಲ್ಲಿ ನೆಲಸಲೆಂದು ನಮಸ್ಕರಿಸುತ್ತೇನೆ. ಸೀತಾಪತಿಯು ತರ್ಜನಿಯಲ್ಲಿ ನೆಲಸಲೆಂದು ನಮಸ್ಕರಿಸುತ್ತೇನೆ. ರಘುನಾಥನು ಮಧ್ಯಮ ಬೆರಳಿನಲ್ಲಿ ನೆಲಸಲೆಂದು ನಮಸ್ಕರಿಸುತ್ತೇನೆ. ಭರತಾಗ್ರಜನು ಅನಾಮಿಕೆಯಲ್ಲಿ ನೆಲಸಲೆಂದು ಅವನನ್ನು ನಮಸ್ಕರಿಸುತ್ತೇನೆ ದಶರಥಾತ್ಮಜನು ಕನಿಷ್ಟಿಕೆಯಲ್ಲಿ ನೆಲಸಲೆಂದು ಅವನನ್ನು ನಮಸ್ಕರಿಸುತ್ತೇನೆ. ಹನುಮಂತನ ಪ್ರಭುವು ಕರತಲದಲ್ಲಿಯೂ ಕರಗಳ ಪೃಷ್ಠದಲ್ಲಿಯೂ ನೆಲಸಲೆಂದು ಅವನನ್ನು ನಮಸ್ಕರಿಸುತ್ತೇನೆ.

॥ ಅಥ ಷಡಂಗನ್ಯಾಸಃ ॥

ಶ್ರೀರಾಮಚಂದ್ರಾಯ ಹೃದಯಾಯ ನಮಃ ॥
ಸೀತಾಪತಯೇ ಶಿರಸೇ ಸ್ವಾಹಾ ।
ರಘುನಾಥಾಯ ಶಿಖಾಯೈ ವಷಟ್ ॥
ಭರತಾಗ್ರಜಾಯ ಕವಚಾಯ ಹುಮ್ ।
ದಶರಥಾತ್ಮಜಾಯ ನೇತ್ರತ್ರಯಾಯ ವೌಷಟ್ ॥
ಹನುಮತ್ಪ್ರಭವೇ ಅಸ್ತ್ರಾಯ ಫಟ್ ॥

॥ ಅಥ ಧ್ಯಾನಮ್ ॥

ಧ್ಯಾಯೇದಾಜಾನುಬಾಹುಂ ಧೃತಶರಧನುಷಂ ಬದ್ಧಪದ್ಮಾಸನಸ್ಥಂ
ಪೀತಂ ವಾಸೋವಸಾನಂ ನವಕಮಲದಲಸ್ಪರ್ಧಿನೇತ್ರಂ ಪ್ರಸನ್ನಂ ॥
ವಾಮಾಂಕಾರೂಢಸೀತಾಮುಖಕಮಲಮಿಲಲ್ಲೋಚನಂ ನೀರದಾಭಂ
ನಾನಾಲಂಕಾರದೀಪ್ತಂ ದಧತಮುರುಜಟಾಮಂಡನಂ ರಾಮಚಂದ್ರಂ॥೩೧॥

ಷಡಂಗನ್ಯಾಸವು—ಶ್ರೀರಾಮಚಂದ್ರಾಯ ಹೃದಯಾಯ ನಮಃ, ಸೀತಾಪತಯೇ ಶಿರಸೇ ಸ್ವಾಹಾ, ರಘುನಾಥಾಯ ಶಿಖಾಯೈ ವಷಟ್, ಭರತಾಗ್ರಜಾಯ ಕವಚಾಯ ಹುಂ, ದಶರಥಾತ್ಮಜಾಯ ನೇತ್ರತ್ರಯಾಯೈ ವಷಟ್, ಹನುಮತ್ಪ್ರಭವೇ ಅಸ್ತ್ರಾಯ ಫಟ್ ಎಂದು ಹೇಳಿ ಹೃದಯಾದಿ ಷಡಂಗನ್ಯಾಸಗಳನ್ನು ಮಾಡಬೇಕು.

ಧ್ಯಾನವು—ಆಜಾನುಬಾಹುವಾದ, ಧನುರ್ಬಾಣಗಳನ್ನು ಹಿಡಿದಿರುವ, ಪದ್ಮಾಸನವನ್ನು ಹಾಕಿ ಕುಳಿತಿರುವ, ಹೊಂಬಣ್ಣದ ಬಟ್ಟೆಯನ್ನು ಧರಿಸಿರುವ, ಹೊಸದಾದ ಕಮಲದಳದಂತಿರುವ ಕಣ್ಣುಗಳುಳ್ಳ, ಪ್ರಸನ್ನನಾಗಿರುವ, ಎಡಗಡೆಯ ತೊಡೆಯಮೇಲೆ ಸೀತೆಯು ಕುಳಿತಿರುವ, ಆ ಸೀತೆಯ ಮುಖದಲ್ಲಿ ನೆಟ್ಟಿರುವ ನೋಟಗಳುಳ್ಳ, ಮೇಘದಂತೆ ಕಾಂತಿಯುಳ್ಳ, ಅನೇಕ ವಿಧವಾದ ಅಲಂಕಾರಗಳನ್ನು ಧರಿಸಿ ಪ್ರಕಾಶಿಸುತ್ತಿರುವ, ಜಡೆಯ ಗುಂಪನ್ನೇ ಧರಿಸಿರುವ, ಶ್ರೀರಾಮಚಂದ್ರನನ್ನು ಧ್ಯಾನಿಸುತ್ತೇನೆ.

ವೈದೇಹೀಸಹಿತಂ ಸುರದ್ರುಮತಲೇ ಹೈಮೇ ಮಹಾಮಂಡಪೇ
ಮಧ್ಯೇಪುಷ್ಪಕಮಾಸನೇ ಮಣಿಮಯೇ ವಿರಾಸನೇ ಸಂಸ್ಥಿತಂ ||
ಅಗ್ರೇ ವಾಚಯತಿ ಪ್ರಭಂಜನಸುತೇ ತತ್ವಂ ಮುನಿಭ್ಯಃ ಪರಂ
ವ್ಯಾಖ್ಯಾಂತಂ ಭರತಾದಿಭಿಃ ಪರಿವೃತಂ ರಾಮಂ ಭಜೇಚ್ಛಾಮಲಮ್ ||೩೨||

ಸೌವರ್ಣಮಂಡಪೇ ದಿವ್ಯೇ ಪುಷ್ಪಕೇ ಸುವಿರಾಜಿತೇ |
ಮೂಲೇ ಕಲ್ಪತರೋಃ ಸ್ವರ್ಣಪೀಠೇ ಸಿಂಹಾಷ್ಟಸಂಯುತೇ || ೩೩ ||

ಮೃದುಶ್ಲಕ್ಷ್ಣಾಂತರೇ ತತ್ರ ಜಾನಕ್ಯಾ ಸಹ ಸಂಸ್ಥಿತಂ |
ರಾಮಂ ನೀಲೋತ್ಪಲಶ್ಯಾಮಂ ದ್ವಿಭುಜಂ ಪೀತವಾಸಸಂ || ೩೪ ||

ಸ್ಮಿತವಕ್ತ್ರಂ ಸುಖಾಸೀನಂ ಪದ್ಮಪತ್ರನಿಭೇಕ್ಷಣಂ |
ಕಿರೀಟಹಾರಕೇಯೂರಕುಂಡಲೈಃ ಕಟಕಾದಿಭಿಃ || ೩೫ ||

---

೩೨. ಕಲ್ಪವೃಕ್ಷದ ಕೆಳಗೆ ಸುವರ್ಣದ ಮಹಾಮಂಟಪದ ಮಧ್ಯದಲ್ಲಿರುವ ಮಣಿಗಳಿಂದ ಕೂಡಿದ ಪುಷ್ಪಕದೊಳಗೆ ಸಿಂಹಾಸನದಲ್ಲಿ ವೀರಾಸನವನ್ನು ಹಾಕಿಕೊಂಡು ಸೀತೆಯೊಡನೆ ಕುಳಿತಿರುವ, ಹನುಮಂತನು ಮುಂಭಾಗದಲ್ಲಿ ಓದುತ್ತಿರಲು ಮುನಿಗಳಿಗೆ ತತ್ವೋಪದೇಶವನ್ನು ವ್ಯಾಖ್ಯಾನಮಾಡುತ್ತಿರುವ, ಭರತಾದಿಗಳಿಂದ ಕೂಡಿರುವ, ಶ್ಯಾಮಲವರ್ಣವುಳ್ಳ ಶ್ರೀರಾಮನನ್ನು ಭಜಿಸುತ್ತೇನೆ.

೩೩–೩೭. ಕಲ್ಪವೃಕ್ಷದ ಬುಡದಲ್ಲಿರುವ, ಪುಷ್ಪಕದಲ್ಲಿರುವ ಸುವರ್ಣ ಮಂಟಪದಲ್ಲಿ ಸ್ವರ್ಣಪೀಠವಿರುವುದು. ಅದು ಎಂಟುಸಿಂಹಗಳಿಂದ ಕೂಡಿರುವುದು. ಅದರೊಳಗೆ ಮೃದುವಾಗಿಯೂ, ನುಣುಪಾಗಿಯೂ ಇರುವ ಬಟ್ಟೆಯನ್ನು ಹಾಸಿರುವರು. ಅದರಲ್ಲಿ ಜಾನಕಿಯೊಡನೆ ಕುಳಿತಿರುವ, ನೀಲೋತ್ಪಲದಂತೆ ವರ್ಣವುಳ್ಳ, ಹೊಂಬಣ್ಣದ ರೇಷ್ಮೆಯ ಬಟ್ಟೆಯನ್ನು ಧರಿಸಿರುವ ಮುಗುಳುನಗೆ ನಗುತ್ತ ಸುಖವಾಗಿ ಕುಳಿತಿರುವ ಪದ್ಮದ ದಳದಂತೆ ಕಣ್ಣುಗಳುಳ್ಳ, ಕಿರೀಟ ಹಾರ ಕೇಯೂರ ಕುಂಡಲ ಕಟಕಗಳಿಂದ ಭೂಷಿತನಾಗಿರುವ, ಜ್ಞಾನಮುದ್ರೆಯನ್ನು

ಘ್ರಾಜನಮಾನಂ ಜ್ಞಾನಮುದ್ರಾಧರಂ ವೀರಾಸನಸ್ಥಿತಂ ।
ಸ್ಪೃಶಂತಂ ಸ್ತನಯೋರಗ್ರೇ ಜಾನಕ್ಯಾಃ ಸವ್ಯಪಾಣಿನಾ ॥ ೩೬ ॥

ವಸಿಷ್ಠವಾಮದೇವಾದ್ಯೈಃ ಸೇವಿತಂ ಲಕ್ಷ್ಮಣಾದಿಭಿಃ ।
ಅಯೋಧ್ಯಾನಗರೇ ರಮ್ಯೇ ಹ್ಯಭಿಷಿಕ್ತಂ ರಘೂದ್ವಹಂ ॥ ೩೭ ॥

ಏವಂ ಧ್ಯಾತ್ವಾ ಜಪೇನ್ನಿತ್ಯಂ ರಾಮನಾಮಸಹಸ್ರಕಂ ।
ಹತ್ಯಾಕೋಟಿಯುತೋ ವಾಪಿ ಮುಚ್ಯತೇ ನಾತ್ರ ಸಂಶಯಃ ॥ ೩೮ ॥

ರಾಮಶ್ರೀಮಾನ್ಮಹಾವಿಷ್ಣುರ್ಜಿಷ್ಣುರ್ದೇವಹಿತಾವಹಃ ।
ತತ್ವಾತ್ಮಾ ತಾರಕಂ ಬ್ರಹ್ಮ ಶಾಶ್ವತಸ್ಸರ್ವಸಿದ್ಧಿದಃ ॥ ೩೯ ॥

ಹಿಡಿದು ವೀರಾಸನದಲ್ಲಿ ಕುಳಿತಿರುವ, ಎಡಗಡೆಯಲ್ಲಿ ಕುಳಿತುಕೊಂಡಿರುವ ಸೀತೆಯ ಅಂಗದ ಸಂಗದಿಂದ ಸಂತೋಷಗೊಂಡಿರುವ ವಸಿಷ್ಠವಾಮದೇವ ಮುಂತಾದವರಿಂದಲೂ ಲಕ್ಷ್ಮಣಾದಿಗಳಿಂದಲೂ ಸೇವಿತನಾದ, ರಮ್ಯನಾದ, ಅಯೋಧ್ಯಾನಗರದಲ್ಲಿ ಪಟ್ಟಾಭಿಷಿಕ್ತನಾಗಿರುವ ರಘೂತ್ತಮನನ್ನು ಧ್ಯಾನಿಸಬೇಕು.

೩೮. ಈ ರೀತಿಯಾಗಿ ರಾಮಧ್ಯಾನವನ್ನು ಮಾಡಿ ನಿತ್ಯವೂ ರಾಮನಾಮ ಸಹಸ್ರನಾಮವನ್ನು ಜಪಿಸಬೇಕು. ಅವನು ಬ್ರಹ್ಮಹತ್ಯೆಗಳನ್ನು ಕೊಟ್ಟಿಗಟ್ಟಲೆ ಮಾಡಿದ್ದರೂ ಅವುಗಳಿಂದ ಮುಕ್ತನಾಗುತ್ತಾನೆ. ಇದರಲ್ಲಿ ಸಂಶಯವಿಲ್ಲ.

೩೯. ಯಾವಾಗಲೂ ನಿತ್ಯಾನಂದದಲ್ಲಿ ರಮಿಸುತ್ತಿರುವವನು. ಪೂರ್ಣವಾದ ಐಶ್ವರ್ಯರೂಪವಾದ ಸಂಪತ್ತನ್ನು ಹೊಂದಿರುವವನು. ಯಾವನಿಂದ ಆಕಾಶವೇ ಮುಂತಾದ ಪ್ರಪಂಚವು ಬಂದಿರುವುದೋ ಯಾವನಿಂದ ಅವು ಹೋಗುತ್ತವೆಯೋ ಯಾವನು ಸರ್ವಕಾಮಗಳನ್ನೂ ಪೂರ್ಣಗೊಳಿಸುವನೋ ಯಾವನು ಪ್ರಾಣಿಗಳ ಹೃದಯವನ್ನು ಆಕ್ರಮಿಸಿಕೊಂಡಿರುವನೋ ಯಾವನು ಮಳೆಯನ್ನು ಹುಯ್ಯಿಸುವನೋ ಯಾವನು ಬಹುವಾದ ಕಾಂತಿಯನ್ನು ಹೊಂದಿ ಬೆಳಗುತ್ತಿರುವನೋ ಅವನೇ ಇವನು. ಬ್ರಹ್ಮ, ಇಂದ್ರನೇ ಮುಂತಾದವರಿಗೆ ಹಿತವನ್ನುಂಟುಮಾಡುವವನು. ಪೃಥಿವಿ, ಅಪ್ಪು, ತೇಜಸ್ಸು, ವಾಯು,

ರಾಜೀವಲೋಚನಶ್ಶ್ರೀಮಾನ್ ಶ್ರೀರಾಮೋ ರಘುಪುಂಗವಃ ।
ರಾಮಭದ್ರಸ್ಸದಾಚಾರೋ ರಾಜೇಂದ್ರೋ ಜಾನಕೀಪತಿಃ ॥ ೪೦ ॥

ಆಕಾಶರೂಪವಾದುವು ಐದುಭೂತಗಳು, ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನವೆಂಬುವು ಐದು ಪ್ರಾಣಗಳು. ವಾಕ್, ಪಾಣಿ, ಪಾದ, ಪಾಯು, ಉಪಸ್ಥೆ, ಎಂಬಿವು ಐದು ಕರ್ಮೇಂದ್ರಿಯಗಳು. ಶ್ರೋತ್ರ, ತ್ವಕ್, ಚಕ್ಷು, ಜಿಹ್ವೆ, ಪ್ರಾಣ, ಇವು ಐದು ಜ್ಞಾನೇಂದ್ರಿಯಗಳು. ಮನಸ್ಸು ಬುದ್ಧಿ, ಚಿತ್ತ ಅಹಂಕಾರ ವೆಂಬುವು ನಾಲ್ಕು. ಅಂತಃಕರಣ ಒಂದು. ಇವೆಲ್ಲವೂ ಸೇರಿ ಇಪ್ಪತ್ತೈದು ತತ್ವಗಳೆಂದು ಸಾಂಖ್ಯಶಾಸ್ತ್ರದಲ್ಲಿ ಹೇಳಿದೆ. ಮಹತ್ತತ್ವ, ಕಾಲತತ್ವ, ಪ್ರಧಾನತತ್ವ, ಮಾಯಾತತ್ವ, ಅವಿದ್ಯಾತತ್ವ, ಪುರುಷತತ್ವ, ಎಂದು ತಾವು ಹೊಸದಾಗಿ ಹೇಳುವ ಆರುತತ್ವಗಳು, ಮೇಲಿನ ಇಪ್ಪತ್ತೈದು ತತ್ವಗಳು ಒಟ್ಟಿನಲ್ಲಿ ಪುರಾಣಿಕರ ಮತದಲ್ಲಿ ಮೂವತ್ತೊಂದು ತತ್ವಗಳು ಎಂದು ಹೇಳುವರು. ಅಂತಃಕರಣ ತತ್ವವನ್ನು ಸೇರಿಸಿಕೊಳ್ಳದೆ ಮೂವತ್ತೇ ತತ್ವಗಳೆಂದೂ ಹೇಳುತ್ತಾರೆ. ಬಿಂದುತತ್ವವು ಎಂದರೆ ಸದಾಶಿವಾಖ್ಯಾನವೆಂಬ ನಿರ್ಗುಣತತ್ವವು, ನಾದತತ್ವವು, ಎಂದರೆ ನಾದಸ್ವರೂಪವಾದ ಪ್ರಣವತತ್ವವು, ಶಕ್ತಿತತ್ವವು, ಎಂದರೆ ಸರ್ವಾಧಿಷ್ಠಾನ ಸಾಮರ್ಥ್ಯತತ್ವರೂಪವಾದುದು. ಶಿವತತ್ವವು, ಎಂದರೆ ಲೀಲಾವಿಗ್ರಹಾಧಿಕಾರಿ ಯಾದ ತತ್ವವು, ಶಾಂತಾತೀತತತ್ವವೆಂದರೆ ಅದು ಶಿವನ ಅವಸ್ಥಾವಿಶೇಷವಾದ ತತ್ವವು, ಎಂದರೆ ಶಾಂತತತ್ವ, ಅತೀತತತ್ವವೆಂದು ಅದು ಎರಡು. ಒಟ್ಟಿನಲ್ಲಿ ಆರು ತತ್ವಗಳು ಮೇಲಿನ ಮೂವತ್ತು ತತ್ವಗಳು ಸೇರಿ ಮೂವತ್ತಾರುತತ್ವಗಳೆಂದು ಶೈವಾಗಮಮತದವರು ಹೇಳುವರು. ಅವನು ಇಂತಹ ತತ್ವರೂಪನು. ತಾರಕ ಬ್ರಹ್ಮವೆಂದರೆ " ಶ್ರೀರಾಮಾಯನಮಃ " ಎಂಬುದು ತಾರಕ ಮಂತ್ರವು. ತದ್ದೇವತಾರಕವಾದ ಬ್ರಹ್ಮನು ತಾರಕಬ್ರಹ್ಮನು. ಅದರ ಸ್ವರೂಪನಾದವನು. ನಿತ್ಯನಾದವನು. ಭಕ್ತರಿಗೂ, ಹಠಯೋಗಿಗಳಿಗೂ ಅಣಿಮ, ಮಹಿಮ, ಗರಿಮ, ಲಘಿಮ, ಪ್ರಾಪ್ತಿ, ಪ್ರಾಕಾಮ್ಯ, ಈಶತ್ವ, ವಶಿತ್ವಗಳೆಂಬ ಅಷ್ಟಸಿದ್ಧಿಗಳನ್ನು ಕೊಡುವವನು.

೪೦. ಕಮಲದಂತೆ ಕಣ್ಣುಗಳುಳ್ಳವನು. ಲಕ್ಷ್ಮಿಯನ್ನು ಹೊಂದಿರು ವವನು. ಶ್ರೀರಾಮನೆಂಬ ಹೆಸರುಳ್ಳವನು. ರಘುವಂಶದಲ್ಲಿ ಶ್ರೇಷ್ಠನಾದವನು. ಜಯಪ್ರದವಾದ ರಾಮಭದ್ರ ಮಂತ್ರವಾಚ್ಯನಾದವನು. ಸದಾಚಾರವನ್ನು ಹೊಂದಿರುವವನು. ರಾಜೇಂದ್ರನೆಂದರೆ ಚಕ್ರವರ್ತಿಯಾದ ಸ್ವಾಮಿಯು. ಜನಕರಾಜನಮಗಳಾದ ಸೀತೆಯ ಗಂಡನು.

ಅಗ್ರಗಣ್ಯೋ ವರೇಣ್ಯಶ್ಚ ವರದಃ ಪರಮೇಶ್ವರಃ ।
ಜನಾರ್ದನೋ ಜಿತಾಮಿತ್ರಃ ಪರಾರ್ಥೈಕಪ್ರಯೋಜನಃ ॥ ೪೧ ॥

ವಿಶ್ವಾಮಿತ್ರಪ್ರಿಯೋ ದಾಂತಃ ಶತ್ರುಜಿಚ್ಛತ್ರುತಾಪನಃ ।
ಸರ್ವಜ್ಞಃ ಸರ್ವವೇದಾದಿಃ ಶರಣ್ಯೋ ವಾಲಿಮರ್ದನಃ ॥ ೪೨ ॥

ಜ್ಞಾನಭವ್ಯೋಽಪರಿಚ್ಛೇದ್ಯೋ ವಾಗ್ಮೀ ಸತ್ಯವ್ರತಶ್ಶುಚಿಃ ।
ಜ್ಞಾನಗಮ್ಯೋ ದೃಢಪ್ರಜ್ಞಃ ಖರಧ್ವಂಸೀ ಪ್ರತಾಪವಾನ್ ॥ ೪೩ ॥

---

೪೧. ದೇವತೆಗಳಲ್ಲಿ ಮುಂದಾಳಾದವನು. ಶ್ರೇಷ್ಠನಾದವನು. ಭಕ್ತರಿಗೆ ವರವನ್ನು ಕೊಡುವವನು. ಲೋಕದಲ್ಲೆಲ್ಲಾ ಶ್ರೇಷ್ಠನಾದವನು. ದುರ್ಜನರನ್ನು ಶಿಕ್ಷಿಸುವವನು. ಆಂತರಂಗಿಕದ್ವೇಷಾದಿಗಳನ್ನೂ, ಬಾಹ್ಯಶತ್ರುಗಳನ್ನೂ ಜಯಿಸಿರುವವನು. ಮೋಕ್ಷರೂಪವಾದ ಪ್ರಯೋಜನಸ್ವರೂಪನಾದವನು.

೪೨. ವಿಶ್ವಾಮಿತ್ರನಿಗೆ ಪ್ರೀತಿಪಾತ್ರನಾದವನು. ಇಂದ್ರಿಯ ನಿಗ್ರಹ ವುಳ್ಳವನು. ಶತ್ರುಗಳನ್ನು ನಾಶಮಾಡುವವನು. ಶತ್ರುಗಳನ್ನು ಶಪ್ಪಿಸುವಂತೆ ಮಾಡುವವನು. ಎಲ್ಲವನ್ನೂ ತಿಳಿದಿರುವವನು. ಎಲ್ಲಾ ವೇದಗಳಿಗೆ ಆದಿಸ್ವರೂಪ ದಿಂದ ಪ್ರಣವಸ್ವರೂಪದವನು. ಸಮಸ್ತಲೋಕಕ್ಕೂ ರಕ್ಷಕನು. ವಾಲಿಯನ್ನು ಸಂಹರಿಸಿದವನು.

೪೩. ಜ್ಞಾನದಿಂದ ಮನೋಹರನಾಗಿರುವವನು. ಪರಿಚ್ಛೇದಿಸುವುದು ಎಂದರೆ ಇವನು ಇಂತಹವನು ಎಂದು ಸರಿಯಾಗಿ ತಿಳಿಯುವುದು. ಆ ರೀತಿಯಾಗಿ ಆಗದವನು. ಬ್ರಹ್ಮಮಯವಾದ ವೇದಸ್ವರೂಪನಾದವನು. ಸತ್ಯವಾದ ಅಭಯವೆಂಬುದೇ ವ್ರತವಾಗಿ ಉಳ್ಳವನು. ಸ್ಮರಿಸಿದವರೆಲ್ಲರನ್ನೂ ಶುಚಿಗಳನ್ನಾಗಿ ಮಾಡುವವನು. ಜ್ಞಾನವೊಂದರಿಂದಲೇ ತಿಳಿಯಲು ಸಾಧ್ಯನು. ನಿಶ್ಚಲವಾದ ಜ್ಞಾನವುಳ್ಳವನು. ಖರನೆಂಬ ರಾಕ್ಷಸನನ್ನು ಕೊಂದವನು. ಬಾಣಗಳ ಪ್ರಯೋಗ ಉಪಸಂಹಾರಗಳನ್ನು ಬಲ್ಲ ಪ್ರತಾಪಶಾಲಿಯು.

ದ್ಯುತಿಮಾನಾತ್ಮವಾನ್ ವೀರೋ ಜಿತಕ್ರೋಧೋರಿಮರ್ದನಃ ।
ವಿಶ್ವರೂಪೋ ವಿಶಾಲಾಕ್ಷಃ ಪ್ರಭುಃ ಪರಿವೃಢೋ ದೃಢಃ ॥ ೪೪ ॥

ಈಶಃ ಖಡ್ಗಧರಃ ಶ್ರೀಮಾನ್ ಕೌಸಲ್ಯೇಯೋಽನಸೂಯಕಃ ।
ವಿಪುಲಾಂಸೋ ಮಹೋರಸ್ಕಃ ಪರಮೇಷ್ಠೀ ಪರಾಯಣಃ ॥ ೪೫ ॥

ಸತ್ಯವ್ರತಸ್ಸತ್ಯಸಂಧೋ ಗುರುಃ ಪರಮಧಾರ್ಮಿಕಃ ।
ಲೋಕಜ್ಞೋ ಲೋಕವಂದ್ಯಶ್ಚ ಲೋಕಾತ್ಮಾ ಲೋಕಕೃತ್ ವಿಭುಃ ॥೪೬॥

---

೪೪. ಉತ್ತಮೋತ್ತಮ ಕಾಂತಿಯುಳ್ಳವನು, ಇಂದ್ರಿಯ ನಿಗ್ರಹವುಳ್ಳವನು, ವಿಕ್ರಮ ಶಾಲಿಯು, ಕೋಪವನ್ನು ಅಡಗಿಸುವವನು, ಶತ್ರು ಸಂಹಾರಕನು, ವಿರಾಟ್ ಸ್ವರೂಪನು, ವಿಶಾಲವಾದ ಕಣ್ಣುಳ್ಳವನು, ವ್ಯಾಪಕನು, ಲೋಕದಲ್ಲಿ ಉತ್ತಮನಾದವನು, ತನ್ನ ರೂಪಕ್ಕೆ ತಕ್ಕ ಸಾಮರ್ಥ್ಯವುಳ್ಳವನು.

೪೫. ಬೇಕಾದುದನ್ನೆಲ್ಲಾ ಕೊಡುವವನು, ನಂದಕವೆಂಬ ಖಡ್ಗವನ್ನು ಧರಿಸಿರುವವನು. ಲಕ್ಷ್ಮಿಯನ್ನು ಹೊಂದಿರುವವನು, ಕೌಸಲ್ಯೆಗೆ ಮಗನು, ಅಸೂಯೆಯೇ ಮುಂತಾದ ದುರ್ಗುಣಗಳಿಲ್ಲದವನು, ವಿಸ್ತಾರವಾದ ಭುಜ ಶಿರಸ್ಸುಳ್ಳವನು, ದೊಡ್ಡದಾದ ಎದೆಯುಳ್ಳವನು, ಉತ್ತಮವಾದ ಮಹಿಮೆಯುಳ್ಳವನು, ಸತ್ಯ ಧರ್ಮದಲ್ಲಿಯೇ ಆಸಕ್ತನಾದವನು.

೪೬. ಸರಿಯಾಗಿರುವ ಅರ್ಥದಂತೆ ವಿಷಯಗಳನ್ನು ಅನುಸರಿಸಿ ಆಚರಿಸುವವನು, ಸತ್ಯವೇ ಪ್ರತಿಜ್ಞೆಯಾಗಿ ಉಳ್ಳವನು, ಸಮಸ್ತ ವಿದ್ಯೆಗಳನ್ನೂ ಉಪದೇಶಿಸುವವನು, ಉತ್ತಮವಾದ ಧರ್ಮದಲ್ಲಿ ಆಸಕ್ತನು, ತನ್ನ ಸ್ವರೂಪವನ್ನು ಲೋಕವು ತಿಳಿಯುವಂತೆ ಮಾಡುವವನು, ಎಲ್ಲರಿಗೂ ನಮಸ್ಕರಿಸಲು ಯೋಗ್ಯನಾದವನು, ಲೋಕವೆಲ್ಲಕ್ಕೂ ಆತ್ಮ ಸ್ವರೂಪನಾಗಿರುವವನು, ಲೋಕವನ್ನು ಸೃಷ್ಟಿಸುವವನು, ತಪಸ್ವಿಗಳಿಗೆ ಜ್ಞಾನಚಕ್ಷುಸ್ಸಿನಿಂದ ನೋಡಲು ಸಾಧ್ಯನು.

ಅನಾದಿರ್ಭಗವಾನ್ ಸೇವ್ಯೋ ಜಿತಮಾಯೋ ರಘೂದ್ವಹಃ ।
ರಾಮೋ ದಯಾಕರೋ ದಕ್ಷಃ ಸರ್ವಜ್ಞಸ್ಸರ್ವಪಾವನಃ ॥ ೪೭ ॥

ಬ್ರಹ್ಮಣ್ಯೋ ನೀತಿಮಾನ್ ಗೋಪ್ತಾ ಸರ್ವದೇವಮಯೋ ಹರಿಃ ।
ಸುಂದರಃ ಪೀತವಾಸಾಶ್ಚ ಸೂತ್ರಕಾರಃ ಪುರಾತನಃ ॥ ೪೮ ॥

ಸೌಮ್ಯೋ ಮಹರ್ಷಿಃ ಕೋದಂಡೀ ಸರ್ವಜ್ಞಃ ಸರ್ವಕೋವಿದಃ ।
ಕವಿಸ್ಸುಗ್ರೀವವರದಃ ಸರ್ವಪುಣ್ಯಾಧಿಕಪ್ರದಃ ॥ ೪೯ ॥

೪೭-೪೯. ಎಲ್ಲರಿಗೂ ಮೊದಲನೆಯವನು, ಪೂರ್ತಿಯಾದ ಐಶ್ವರ್ಯವೂ, ಪೂರ್ಣವಾದ ಧರ್ಮವೂ, ಬಹುವಾದ ಯಶಸ್ಸೂ, ಪೂರ್ಣವಾದ ವಿವೇಕವೂ, ಸಂಪೂರ್ಣವಾದ ಆಧ್ಯಾತ್ಮಜ್ಞಾನವೂ, ಪೂರ್ಣವಾದ ವಿಜ್ಞಾನವೂ ಇವು ಆರೂ ಭಗವೆಂದಿನಿಸಿಕೊಳ್ಳುತ್ತವೆ. ಅವು ಯಾರಲ್ಲಿವೆಯೋ ಅವನು ಭಗವಂತನು. ಈ ಸ್ವಾಮಿಯು ಅಂತಹವನು. ಲೋಕದವರಿಂದ ಸೇವೆತೆಗೆಮಕೊಳ್ಳಲು ಯೋಗ್ಯನು. ಮಾಯೆಯನ್ನು ಜಯಿಸಿದವನು. ಎಂದರೆ ಮಾಯೆಗೆ ಅತಿರಿಕ್ತನು. ರಘುಮಹಾರಾಜನ ವಂಶದಲ್ಲಿ ಹುಟ್ಟಿ ಅದನ್ನು ಉದ್ಧರಿಸಿದವನು, ರಮೆ ಎಂದರೆ ಸೀತೆ ಅವಳಲ್ಲಿ ಆಸಕ್ತನಾದವನು ಕಾರುಣ್ಯ ಸಾಗರನು, ಎಲ್ಲಾ ಕೆಲಸವಲ್ಲಿಯೂ ಶಕ್ತನು ಮತ್ತು ಜಾಣನು. ಎಲ್ಲವನ್ನೂ ತಿಳಿದವನು. ಎಲ್ಲಾ ರೀತಿಯಲ್ಲಿಯೂ ಪಾವನ ಸ್ವರೂಪನು. ಬ್ರಾಹ್ಮಣರಲ್ಲಿ ಪ್ರೀತಿಯುಳ್ಳವನು. ನೀತಿ ಶಾಸ್ತ್ರದಲ್ಲಿ ನಿಪುಣನು. ಪ್ರಪಂಚವನ್ನು ಪಾಲಿಸುವವನು. ಸಮಸ್ತ ದೇವತಾ ಸ್ವರೂಪನು. ಕಾರಣ ಸಹಿತವಾಗಿ ಸಂಸಾರದಿಂದಪಾರುಗಾಣಿಸುವವನು. ಸರ್ವಾಂಗದಲ್ಲಿಯೂ ಸುಂದರನಾದವನು. ಉತ್ತಮವಾದ ಪೀತಾಂಬರವನ್ನು ಧರಿಸಿರುವವನು. ಕಪಿಲ ಮಹರ್ಷಿಯಾಗಿ ಅವತರಿಸಿ ಸಾಂಖ್ಯಸೂತ್ರವನ್ನು ರಚಿಸಿ ಉಪದೇಶಿಸಿದವನು. ಕಾಲದೇಶಗಳು ಯಾವಾಗ ವ್ಯವಹಾರಕ್ಕೆ ಬಂದುವೋ ಅದರ ಮೊದಲಿಂದಲೂ ಇರುವವನು. ಬುಧ ಗ್ರಹಕ್ಕೆ ಅಧಿಪತಿಯಾಗಿ ಬುಧ ರೂಪನಾಗಿ ಅವತರಿಸಿರುವವನು. ಅಥವಾ ಶಾಂತಾಕಾರವುಳ್ಳವನು. ಸ್ಮೃತಿ ಕರ್ತೃವಾದ ಮಹರ್ಷಿಗಳ ಸ್ವರೂಪನು. ಶಾರ್ಙ್ಗವೆಂಬ ಧನುಸ್ಸನ್ನು ಹಿಡಿದಿರುವವನು ಭೌದ್ಧಾವತಾರ ಮಾಡಿದವನು ಅಥವಾ ಎಲ್ಲರಲ್ಲಿಯೂ ಇದ್ದುಕೊಂಡು ಎಲ್ಲವನ್ನೂ ಬಲ್ಲವನು. ಎಲ್ಲರಿಗಿಂತಲೂ ಅಧಿಕಜ್ಞಾನವುಳ್ಳವನು. ಎಲ್ಲವನ್ನೂ ನೋಡತಕ್ಕವನು ಸುಗ್ರೀವನಿಗೆ ವಾಲಿ ವಧರೂಪವಾದ ವರವನ್ನು ಕೊಟ್ಟವನು. ಎಲ್ಲ ಪುಣ್ಯಗಳೂ ಯಾವ ಫಲವನ್ನು ಕೊಡುವುವೋ ಅವಕ್ಕಿಂತಲೂ ಹೆಚ್ಚು ಫಲವನ್ನು ಕೊಡತಕ್ಕವನು.

ಭವ್ಯೋ ಜಿತಾರಿಷಡ್ವರ್ಗೋ ಮಹೋದಾರೋಽಘನಾಶನಃ ।
ಸುಕೀರ್ತಿರಾದಿಪುರುಷಃ ಕಾಂತಃ ಪುಣ್ಯಕೃದಾಗಮಃ ॥ ೫೦ ॥

ಅಕಲ್ಮಷಃ ಚತುರ್ಬಾಹುಃ ಸದಾವಾಸೋ ದುರಾಸದಃ ।
ಸ್ಮಿತಭಾಷೀ ನಿವೃತ್ತಾತ್ಮಾ ಸ್ಮೃತಿರ್ಮಾ ವೀರ್ಯವಾ ಪ್ರಭುಃ ॥ ೫೧ ॥

---

೫೦. ಮಂಗಳಾತ್ಮಕನು, ಕಾಮ ಕ್ರೋಧ ಲೋಭ ಮೋಹ ಮದ ಮಾತ್ಸರ್ಯಗಳನ್ನು ನಿಗ್ರಹಿಸಿರುವವನು. ಒಳ್ಳೆಯ ದಾನ ಮಾಡುವವನು. ಎಲ್ಲಾ ಪಾಪಗಳನ್ನೂ ಪರಿಹಾರ ಮಾಡುವವನು. ಒಳ್ಳೆಯ ಕೀರ್ತಿಯುಳ್ಳವನು. ಜಗತ್ಕಾರಣನಾಗಿ ಆದಿಯಲ್ಲಿದ್ದವನು. ಸುಂದರನು. ಪುಣ್ಯವನ್ನು ಕೊಡತಕ್ಕವನು. ವೇದಶಾಸ್ತ್ರಗಳ ಸ್ವರೂಪನು.

೫೧. ಮಾಯಾಪಾಶ ಕರ್ಮ ಕಲ್ಮಷಗಳಿಲ್ಲದವನು. ಅಥವಾ ೧. ವಿಷಯ ಸಂಭೋಗ ಬುದ್ಧಿಯುಳ್ಳವಿಕೆ. ೨. ವಿಷದಿಂದ ಪರರನ್ನು ತೊಂದರೆ ಪಡಿಸುವುದು. ೩. ದಾನಮಾಡಿ ಪಶ್ಚಾತ್ತಾಪ ಪಡುವಿಕೆ. ೪. ಕೃಪಣತನ. ೫. ಜ್ಞಾನದ ಬಲವಿಲ್ಲದಿರುವಿಕೆ. ೬. ಇಂದ್ರಿಯ ವರ್ಗಗಳನ್ನು ಹೊಗಳುವಿಕೆ. ೭. ಅನನ್ಯಶರಣಳಾದ ತನ್ನ ಹೆಂಡತಿಯನ್ನು ದ್ವೇಷಿಸುವುದು. ಇವೇಳೂ ಪಾಪಗಳು. ಇವುಗಳಿಲ್ಲದವನು, ನಾಲ್ಕು ತೋಳುಗಳುಳ್ಳವನು. ಭಕ್ತರಲ್ಲಿ ಯಾವಾಗಲೂ ಇರುವವನು. ತಿಳಿಯಲು, ಕಾಣಲು, ಕೂಡ ಆಗದವನು. ನಗುತ್ತಲೇ ಮಾತನಾಡುವವನು. ಸಂಸಾರ ಬಂಧದಿಂದ ನಿವೃತ್ತನಾಗಿ ಸ್ವಸ್ವರೂಪವನ್ನು ತಿಳಿಸಿರುವವನು, ನಿಯಾಮಕ ರೂಪವಾದ ಸ್ಮೃತಿಯುಳ್ಳವನು, ಹಿರಣ್ಯಗರ್ಭನನ್ನು ಸೃಷ್ಟಿಸುವ ಶಕ್ತಿ ವಿಶೇಷವುಳ್ಳವನು. ಸರ್ವೋತ್ಕೃಷ್ಟನು.

ಧೀರೋದಾತ್ತೋ ಘನಶ್ಯಾಮಃ ಸರ್ವಾಯುಧವಿಶಾರದಃ ।
ಅಧ್ಯಾತ್ಮಯೋಗನಿಲಯಃ ಸುಮನಾ ಲಕ್ಷ್ಮಣಾಗ್ರಜಃ ॥ ೫೨ ॥

ಸರ್ವತೀರ್ಥಮಯಶ್ಶೂರಃ ಸರ್ವಯಜ್ಞಫಲಪ್ರದಃ ।
ಯಜ್ಞಸ್ವರೂಪೀ ಯಜ್ಞೇಶೋ ಜರಾಮರಣವರ್ಜಿತಃ ॥ ೫೩ ॥

ವರ್ಣಾಶ್ರಮಗುರುರ್ವರ್ಣೀ ಶತ್ರುಜಿತ್ಪುರುಷೋತ್ತಮಃ ।
ಶಿವಲಿಂಗಪ್ರತಿಷ್ಠಾತಾ ಪರಮಾತ್ಮಾ ಪರಾತ್ಪರಃ ॥ ೫೪ ॥

---

೫೨. ಧೀರೋದಾತ್ತನಾದ ನಾಯಕನು. ಧೀರೋದಾತ್ತನ ಲಕ್ಷಣಗಳು–ಗಂಭೀರವಾಗಿಯೂ, ಬಲಿಷ್ಠನಾಗಿಯೂ, ಕೃಪೆಯುಳ್ಳವನಾಗಿಯೂ, ಜಂಭದ ಮಾತನ್ನಾಡದೆಯೂ, ಪರರ ಗುಣಗಳನ್ನು ಗ್ರಹಿಸುವವನಾಗಿಯೂ, ಇರುವವನು. ಮೇಘದಂತೆ ಶ್ಯಾಮಲ ವರ್ಣವುಳ್ಳವನು. ಎಲ್ಲಾ ಆಯುಧಗಳ ಪ್ರಯೋಗವನ್ನೂ ತಿಳಿದಿರುವವನು. ವೇದಾಂತ ಮತ್ತು ಯೋಗಶಾಸ್ತ್ರಗಳನ್ನು ಚೆನ್ನಾಗಿ ಬಲ್ಲವನು. ಒಳ್ಳೆಯ ಮಂಗಳಕರವಾದ ಮನಸ್ಸುಳ್ಳವನು, ಲಕ್ಷ್ಮಣನಿಗೆ ಅಣ್ಣನು.

೫೩. ಎಲ್ಲಾ ತೀರ್ಥಗಳ ಸ್ವರೂಪನು. ಕಾಮ ನಿಗ್ರಹಿಯು. ಎಲ್ಲಾ ಯಜ್ಞಗಳ ಫಲವನ್ನೂ ಕೊಡತಕ್ಕವನು. ಜ್ಞಾನಯಜ್ಞ, ತಪೋಯಜ್ಞ, ಯೋಗಯಜ್ಞ, ಸ್ವಾಧ್ಯಾಯಯಜ್ಞಗಳ ಸ್ವರೂಪನು. ಯಜ್ಞಕ್ಕೆ ನಿಯಾಮಕನು. ಮುಪ್ಪೇ ಇಲ್ಲದವನು.

೫೪. ಬ್ರಾಹ್ಮಣ, ವೈಶ್ಯ, ಕ್ಷತ್ರಿಯ, ಶೂದ್ರ ವರ್ಣಗಳಿಗೂ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ ರೂಪವಾದ ಆಶ್ರಮಗಳಿಗೂ ಗುರುವು. ಐವತ್ತು ಅಕ್ಷರಗಳ ರೂಪನು. ಹೊರಗಿನ ಮತ್ತು ಒಳಗಿನ ಶತ್ರುಗಳನ್ನು ನಾಶಪಡಿಸಿರುವವನು. ಚೇತನಾ ಚೇತನಗಳನ್ನು ಅತಿಕ್ರಮಿಸಿರುವ ಪುರುಷ ಶ್ರೇಷ್ಠನು. ಶಿವಲಿಂಗವನ್ನು ಪ್ರತಿಷ್ಠೆಮಾಡಿದವನು. ಕಾರ್ಯಕಾರಣಗಳಿಗೆ ವಿಲಕ್ಷಣ ರೂಪನಾದವನು. ಯಾವುದನ್ನು ಅತ್ಯುತ್ಕೃಷ್ಟವೆಂದು ಹೇಳುವೆವೋ ಅದಕ್ಕಿಂತಲೂ ಉತ್ಕೃಷ್ಟನು.

ಪ್ರಮಾಣಭೂತೋ ದುರ್ಜ್ಞೇಯಃ ಪೂರ್ಣಃ ಪರಪುರಂ ಜಯಃ ।
ಅನಂತದೃಷ್ಟಿರಾನಂದೋ ಧನುರ್ವೇದೋ ಧನುರ್ಧರಃ ॥ ೫೫ ॥

ಹಿರಣ್ಯಗರ್ಭಸ್ಸವಿತಾ ಲೋಕಕೃಲ್ಲೋಕಭುಗ್ವಿಭುಃ ।
ಓಂಕಾರವಾಚ್ಯೋ ಭಗವಾನ್ ಶ್ರೀಭೂಲೀಲಾಪತಿಪ್ರಭುಃ ॥ ೫೬ ॥

ಶ್ರೀಮತ್ಸಮಸ್ತಲೋಕೇಶಃ ಸರ್ವಜ್ಞಃ ಸರ್ವತೋಮುಖಃ ।
ಸ್ವಾಮೀ ಸುಶೀಲಸ್ಸುಲಭಸ್ಸರ್ವಗಸ್ಸರ್ವಶಕ್ತಿಮಾನ್ ॥ ೫೭ ॥

---

೫೫. ಎಲ್ಲದಕ್ಕೂ ನಿಯಾಮಕರೂಪನಾದವನು. ವಾಕ್ಕು ಮನಸ್ಸುಗಳಿಗೆ ಸಿಕ್ಕದವನು. ಸಕಲವಾದ ಕಾಮಗಳಿಂದ ಪರಿಪೂರ್ಣನಾದವನು. ಭೇದ ವಾಸನೆಗಳಿಂದ ಕೂಡಿದ ದೇಹವನ್ನು ಜಯಿಸಿದವನು. ಕೊನೆಗಾಣದ ಜ್ಞಾನದೃಷ್ಟಿಯುಳ್ಳವನು. ಸತ್ಯ ಸುಖಸ್ವರೂಪನು. ಧನುರ್ವೇದವನ್ನು ತಿಳಿದವನು. ಮಹಾ ಧನುಸ್ಸುಳ್ಳವನು.

೫೬. ಹಿರಣ್ಮಯಾತ್ಮಕವಾದ ಅಂಡವನ್ನು ಸೃಷ್ಟಿಸಿದವನು. ಅಥವಾ ಬ್ರಹ್ಮಸ್ವರೂಪನು. ಸಮಸ್ತ ಜಗತ್ತನ್ನೇ ಸೃಷ್ಟಿಸಿದವನು. ಲೋಕಗಳನ್ನು ಸೃಷ್ಟಿಸಿದವನು. ಸರ್ವಾಂತರ್ಯಾಮಿಯಾಗಿ ಎಲ್ಲವನ್ನೂ ಅನುಭವಿಸುವವನು. ವ್ಯಾಪಕನು. ಓಂಕಾರದ ಅರ್ಥಸ್ವರೂಪವಾದ ತಾರಕ ಬ್ರಹ್ಮವಾಚ್ಯನು. ಷಡ್ಗುಣೈಶ್ವರ್ಯ ಸಂಪನ್ನನು. ಶ್ರೀದೇವಿ, ಭೂದೇವಿ, ಲೀಲಾದೇವಿಯರಿಗೆ ಒಡೆಯನು. ಸಮರ್ಥನು.

೫೭. ಐಶ್ವರ್ಯದಿಂದ ಕೂಡಿದವನು. ಲೋಕಕ್ಕೆಲ್ಲಾ ಒಡೆಯನು. ಈಶ್ವರ ಸ್ವರೂಪನು. ಎಲ್ಲಾ ಕಡೆಗೂ ಮುಖವುಳ್ಳವನು. ಕುಮಾರಸ್ವಾಮಿಯ ಅವತಾರವುಳ್ಳವನು. ಒಳ್ಳೆಯ ನಡತೆಯುಳ್ಳವನು. ಯೋಗ್ಯರಾದವರಿಗೆ ಬಹು ಸುಲಭದಿಂದ ಸಿಕ್ಕತಕ್ಕವನು. ಎಲ್ಲಾ ಕಡೆಯಲ್ಲಿಯೂ ಗಮನವುಳ್ಳವನು. ಸಮಸ್ತ ಶಕ್ತಿಯನ್ನೂ ಹೊಂದಿರುವವನು.

ಅಕ್ಷಯಃ ಪುರುಷಸ್ಸಾಕ್ಷೀ ಕೇಶವಃ ಪುರುಷೋತ್ತಮಃ ।
ಲೋಕಾಧ್ಯಕ್ಷೋ ಮಹಾಕಾರ್ಯೋ ವಿಭೀಷಣವರಪ್ರದಃ ॥ ೫೮ ॥

ಆನಂದವಿಗ್ರಹಜ್ಯೋತಿಃ ಹನೂಮತ್ಪ್ರಭುರವ್ಯಯಃ ।
ಭ್ರಾಜಿಷ್ಣುಸ್ಸಹನೋ ಭೋಕ್ತಾ ಸತ್ಯವಾದೀ ಬಹುಶ್ರುತಃ ॥ ೫೯ ॥

ಸಂಸಾರತಾರಕೋರಾಮಃ ಸರ್ವದುಃಖವಿಮೋಕ್ಷಕೃತ್ ।
ವಿದ್ವತ್ತಮೋ ವಿಶ್ವಕರ್ತಾ ವಿಶ್ವಕೃದ್ವಿಶ್ವಕರ್ಮ ಚ ॥ ೬೦ ॥

---

೫೮. ನಾಶವಿಲ್ಲದವನು. ಎಲ್ಲಕ್ಕಿಂತಲೂ ಮೊದಲೇ ಆದವನು. ಎಲ್ಲಾ ಕಡೆಯಲ್ಲಿಯೂ ಸಾಕ್ಷಿಯಾಗಿರುವವನು. ಸುಂದರವಾದ ಕೂದಲುಳ್ಳವನು, ಅಥವಾ ಇಂದ್ರಿಯುಗಳಿಗೆ ಒಡೆಯನು. ಶರೀರದಲ್ಲಿ ಮಲಗುವವನು ಪುರುಷನು ಅವರಲ್ಲಿ ಉತ್ತಮನು. ಲೋಕಕ್ಕೆಲ್ಲಾ ಅಧಿಕಾರಿಯು. ಮಹತ್ತಾದ ಕಾರ್ಯಗಳನ್ನು ಮಾಡುವವನು. ವಿಭೀಷಣನಿಗೆ ರಾಜ್ಯರೂಪವಾದ ವರವನ್ನು ಕೊಟ್ಟವನು.

೫೯. ಜ್ಞಾನಾತ್ಮಕ ಪ್ರಕಾಶ ಸ್ವರೂಪನು. ಆಂಜನೇಯನಿಗೆ ಒಡೆಯನು. ನಾಶರಹಿತನು. ಪ್ರಕಾಶ ರೂಪವಾದ ರಸವುಳ್ಳವನು. ಎಲ್ಲದರಲ್ಲಿದ್ದುಕೊಂಡು ಅದರ ಒಳ್ಳೆಯದು ಕೆಟ್ಟದ್ದನ್ನು ಸಹಿಸುವವನು. ಎಲ್ಲವನ್ನೂ ತಿನ್ನುವವನು, ಯಥಾರ್ಥವಾದುದನ್ನು ವಾದಿಸುವವನು. ಬಹುವಾದ ಶಾಸ್ತ್ರಗಳನ್ನು ಬಲ್ಲವನು.

೬೦. ಜನನ ಮರಣ ದುಃಖ ಪ್ರವಾಹ ರೂಪವಾದ ಸಂಸಾರವನ್ನು ದಾಟಿಸುವವನು. ಕ್ರೀಡಿಸುವವನು. ಎಲ್ಲಾ ದುಃಖವನ್ನೂ ಪರಿಹರಿಸುವವನು. ಎಲ್ಲರಿಗೂ ತಿಳಿದಿರುವ ಜ್ಞಾನಕ್ಕಿಂತಲೂ ಹೆಚ್ಚಿನ ಜ್ಞಾನವುಳ್ಳವನು. ಪ್ರಪಂಚಕ್ಕೆ ಕರ್ತೃರೂಪನಾದವನು. ಎಲ್ಲವನ್ನೂ ನಾಶಮಾಡುವವನು. ಎಲ್ಲಾ ಉತ್ತಮ ಕೆಲಸಗಳನ್ನೂ ಮಾಡತಕ್ಕವನು.

ಸುಖದಃ ಕಾರಣಂ ಕರ್ತಾ ಭವಬಂಧವಿಮೋಚನಃ ।
ದೇವಚೂಡಾಮಣಿರ್ನೇತಾ ಬ್ರಹ್ಮಣ್ಯೋ ಬ್ರಹ್ಮವರ್ಧನಃ ॥ ೬೧ ॥

ನಿತ್ಯಾನಂದೈಕಕಲ್ಯಾಣಃ ಸೀತಾಶೋಕವಿನಾಶಕೃತ್ ।
ಕಾಕುತ್ಸ್ಥಃ ಪುಂಡರೀಕಾಕ್ಷೋ ವಿಶ್ವಾಮಿತ್ರಭಯಾಪಹಃ ॥ ೬೨ ॥

ಮಾರೀಚಮಥನೋ ರಾಮೋ ವಿರಾಧವಧಪಂಡಿತಃ ।
ದುಸ್ವಪ್ನನಾಶನೋ ರಮ್ಯಃ ಕಿರೀಟೀ ತ್ರಿದಶಾಧಿಪಃ ॥ ೬೩ ॥

---

೬೧. ಸುಖವನ್ನು ಕೊಡುವವನು. ಪ್ರಪಂಚಕ್ಕೆಲ್ಲಾ ಉಪಾದಾನ ಕಾರಣನಾದವನು. ಪ್ರಪಂಚಕ್ಕೆ ನಿಮಿತ್ತಕಾರಣನು. ಸಂಸಾರ ಬಂಧನವಿಲ್ಲದವನು. ಎಲ್ಲಾ ದೇವತೆಗಳಿಗೂ ಮುಖ್ಯನು. ಪ್ರಪಂಚಕ್ಕೇ ಶಿಕ್ಷಕನು. ತಪಸ್ಸು ವೇದ, ಜಾತಿ ಇವುಗಳ ಜ್ಞಾನವುಳ್ಳವನು. ತಪಸ್ಸು ವೇದ ಜಾತಿಗಳನ್ನು ಬೆಳಸುವವನು.

೬೨. ಯಾವಾಗಲೂ ಆನಂದವನ್ನೂ, ಕಲ್ಯಾಣವನ್ನೂ, ಹೊಂದಿರುವವನು. ಸೀತೆಯ ದುಃಖವನ್ನು ನಾಶಮಾಡಿದವನು. ಕಕುತ್‌ಸ್ಥನ ವಂಶದಲ್ಲಿ ಅವತರಿಸಿರುವವನು. ಪುಂಡರೀಕದ ಹೂವಿನಂತೆ ಕಣ್ಣುಗಳುಳ್ಳವನು. ಯಜ್ಞ ರಕ್ಷಣೆಯನ್ನು ಮಾಡಿ ವಿಶ್ವಾಮಿತ್ರನ ಭಯವನ್ನು ನಾಶಮಾಡಿದವನು.

೬೩. ಮಾರೀಚನೆಂಬ ರಾಕ್ಷಸನನ್ನು ಕೊಂದವನು. ರಾಮ ಎಂಬ ತಾರಕ ಮಂತ್ರ ಸ್ವರೂಪನು. ದೂರ್ವಾಸನ ಶಾಪದಿಂದ ರಾಕ್ಷಸನಾಗಿ ಹುಟ್ಟಿದ್ದ ವಿರಾಧನೆಂಬುವನನ್ನು ಕೊಂದವನು. ಮುಂದೆ ಬರತಕ್ಕ ಕೆಟ್ಟುದನ್ನು ಸೂಚಿಸುವ ಕೆಟ್ಟ ಸ್ವಪ್ನಗಳನ್ನು ನಾಶಮಾಡುವವನು. ಮನೋಹರವಾದ ಕಿರೀಟವುಳ್ಳವನು. ದೇವತೆಗಳಿಗೆ ಒಡೆಯನು.

ಮಹಾಧನುರ್ಮಹಾಕಾಯೋ ಭೀಮೋ ಭೀಮಪರಾಕ್ರಮಃ ।
ತತ್ತ್ವಸ್ವರೂಪೀ ತತ್ವಜ್ಞಃ ತತ್ವವಾದೀ ಸುವಿಕ್ರಮಃ ॥ ೬೪ ॥

ಭೂತಾತ್ಮಾ ಭೂತಕೃತ್ ಸ್ವಾಮೀ ಕಾಲಜ್ಞಾನೀ ಮಹಾವಪುಃ ।
ಅನಿರ್ವಿಣ್ಣೋ ಗುಣಗ್ರಾಮೋ ನಿಷ್ಕಳಂಕಃ ಕಳಂಕಹಾ ॥ ೬೫ ॥

ಸ್ವಭಾವಭದ್ರಃ ಶತ್ರುಘ್ನಃ ಕೇಶವಃ ಸ್ಥಾಣುರೀಶ್ವರಃ ।
ಭೂತಾದಿಶ್ಶಂಭುರಾದಿತ್ಯಃ ಸ್ಥವಿಷ್ಠಶ್ಶಾಶ್ವತೋ ಧ್ರುವಃ ॥ ೬೬ ॥

---

೬೪. ಪರಶುರಾಮನಿಂದ ದೊಡ್ಡ ಧನುಸ್ಸನ್ನು ತೆಗೆದುಕೊಂಡು ಅದನ್ನು ಬಗ್ಗಿಸಿ ಹಿಡಿದವನು. ಬ್ರಹ್ಮಾಂಡವನ್ನೇ ಒಳಗೆ ಹೊಂದಿರುವಷ್ಟು ದೊಡ್ಡದೇಹವುಳ್ಳವನು. ಭಯಂಕರವಾದ ಸ್ವರೂಪವುಳ್ಳವನು. ಭಯಂಕರವಾದ ಪರಾಕ್ರಮವುಳ್ಳವನು. ತತ್ವಗಳ ಸ್ವರೂಪನು. ತತ್ವವನ್ನು ಬಲ್ಲವನು. ತತ್ವವನ್ನು ವಾದಿಸುವವನು. ಒಳ್ಳೆಯ ಪರಾಕ್ರಮಿಯು.

೬೫. ಪ್ರಾಣಿಗಳಿಗೆ ಆತ್ಮರೂಪನು. ರಜೋಗುಣವನ್ನವಲಂಬಿಸಿ ಪ್ರಾಣಿಗಳನ್ನು ಸೃಷ್ಟಿಸುವವನು. ಪ್ರಭುವು. ಸೃಷ್ಟಿ ಸ್ಥಿತಿ ಸಂಹಾರ ಕಾಲವನ್ನು ಬಲ್ಲವನು. ಬಹು ದೊಡ್ಡದಾದ ಶರೀರವುಳ್ಳವನು. ಎಲ್ಲವನ್ನೂ ಹೊಂದಿರುವುದರಿಂದ ದುಃಖವಿಲ್ಲದವನು. ಸದ್ಗುಣಗಳ ಸಮೂಹಗಳುಳ್ಳವನು. ಅಪವಾದವಿಲ್ಲದವನು ದೋಷಗಳನ್ನು ನಾಶಮಾಡುವವನು.

೬೬. ಸ್ವಭಾವ ಸಿದ್ಧವಾಗಿಯೇ ಮಂಗಳ ಸ್ವರೂಪನು. ಹೊರಗಿನ ಒಳಗಿನ ಶತ್ರುಗಳನ್ನು ನಾಶಮಾಡತಕ್ಕವನು. ಮೂರ್ತಿತ್ರಯಗಳಿಗೂ ಮೀರಿದವನು. (ಉತ್ಕೃಷ್ಟನು). ಎಲ್ಲವನ್ನೂ ನಿಲ್ಲುವಂತೆ ಮಾಡುವವನು. ಇಂದ್ರಿಯ ನಿಗ್ರಹವುಳ್ಳವನು. ಭೂತಗಳಿಗೆ ಆದಿಯಾದವನು.·ಸುಖವನ್ನು ಕೊಡತಕ್ಕವನು. ಅದಿತಿಯಲ್ಲಿ ಹುಟ್ಟಿದವನು. ಬಹು ದಪ್ಪನಾದವನು. ಆಗಾಗ್ಗೆ ಹುಟ್ಟುವವನು. (ಶಾಶ್ವತನೂ ಆದವನು).

ಕವಚೀ ಕುಂಡಲೀ ಚಕ್ರೀ ಖಡ್ಗೀ ಭಕ್ತಜನಪ್ರಿಯಃ ।
ಅಮೃತ್ಯುರ್ಜನ್ಮರಹಿತಃ ಸರ್ವಜಿತ್ಸರ್ವಗೋಚರಃ ॥ ೬೭ ॥

ಅನುತ್ತಮೋಽಪ್ರಮೇಯಾತ್ಮಾ ಸರ್ವಾತ್ಮಾ ಗುಣಸಾಗರಃ ।
ಸಮಸ್ಸಮಾತ್ಮಾ ಸಮಗೋ ಜಟಾಮುಕುಟಮಂಡಿತಃ ॥ ೬೮ ॥

ಅಜೇಯಃಸರ್ವಭೂತಾತ್ಮಾ ವಿಷ್ವಕ್ಸೇನೋ ಮಹಾತಪಾಃ ।
ಲೋಕಾಧ್ಯಕ್ಷೋ ಮಹಾಬಾಹುರಮೃತೋ ವೇದ ವಿತ್ತಮಃ ॥ ೬೯ ॥

---

೬೭. ಕವಚವನ್ನು ಹಾಕಿಕೊಂಡಿರುವವನು. ಕಿವಿಗೆ ಕುಂಡಲವನ್ನು ಹಾಕಿಕೊಂಡಿರುವವನು. ಸುದರ್ಶನವೆಂಬ ಚಕ್ರವನ್ನು ಹೊಂದಿರುವವನು. ನಂದಕವೆಂಬ ಖಡ್ಗವನ್ನು ಹೊಂದಿರುವವನು. ತನ್ನಲ್ಲಿ ಭಕ್ತರಾಗಿರುವವರಲ್ಲಿ ಬಹುವಾದ ಪ್ರೀತಿಯುಳ್ಳವನು. ತನಗೆ ನಾಶಕ್ಕೆ ಕಾರಣವೇ ಇಲ್ಲದವನು. ಆರು ರೀತಿಯಾದ ಭಾವವಿಕಾರಗಳಿರುವುದೇ ಜನ್ಮ. ಅವುಗಳಿಲ್ಲದವನು. (ಇರುವುದು, ಹುಟ್ಟುವುದು, ಬೆಳೆಯುವುದು, ದಪ್ಪವಾಗುವುದು, ಕಡಿಮೆಯಾಗುವುದು, ನಾಶವಾಗುವುದು ಇವೇ ಆರು ವಿಕಾರಗಳು). ಎಲ್ಲವನ್ನೂ ಜಯಿಸಿರುವವನು. ಎಲ್ಲದರಲ್ಲಿಯೂ ಆತ್ಮರೂಪನಾಗಿ ಕಾಣಿಸಿಕೊಳ್ಳುವವನು.

೬೮. ಸ್ವಾಮಿಗಿಂತಲೂ ಇನ್ನು ಬೇರೆ ಉತ್ತಮರಿಲ್ಲ. ಅಂತಹ ಉತ್ತಮನು. ಅಳೆಯುವುದಕ್ಕೂ, ಎಣಿಸುವುದಕ್ಕೂ ಆಗದಷ್ಟು ಸ್ವರೂಪವುಳ್ಳವನು. ಸರ್ವಪದಾರ್ಥಗಳ ಸ್ವರೂಪವುಳ್ಳವನು. ಉತ್ತಮವಾದ ಗುಣಗಳಿಗೆ ಸಮುದ್ರದಂತಿರುವವನು, ಎಲ್ಲಾ ಕಾಲದಲ್ಲಿಯೂ ಒಂದೇ ರೀತಿಯಿಂದಿರುವವನು. ರಾಗ ದ್ವೇಷಗಳಿಗೆ ಒಳಗಾಗದ ಸಮವಾದ ಮನಸ್ಸುಳ್ಳವನು. ಎಲ್ಲರಲ್ಲಿಯೂ ಹೆಚ್ಚುಕಡಿಮೆಯಿಲ್ಲದಂತೆ ಸಮನಾಗಿರತಕ್ಕವನು. ಜಟೆಯನ್ನು ಕಟ್ಟಿಕೊಂಡು ಕಿರೀಟವನ್ನು ಹಾಕಿಕೊಂಡಿರುವವನು.

೬೯. ಜಯಿಸುವುದಕ್ಕೆ ಅಸಾಧ್ಯನು. ಎಲ್ಲಾ ಪ್ರಾಣಿಗಳಲ್ಲಿಯೂ ಇರುವವನು. ಎಲ್ಲಾ ಕಡೆಯಲ್ಲಿಯೂ ಇರುವ ಸೇನೆಯುಳ್ಳವನು. ತಾನು ಸೃಷ್ಟಿಸಬೇಕಾದ ಮಹತ್ತಾದ ವಿಷಯದ ಜ್ಞಾನವುಳ್ಳವನು. ಎಲ್ಲಾ ಲೋಕಗಳಿಗೂ ಮುಖ್ಯನಾದವನು- ದೊಡ್ಡದಾದ ತೋಳುಗಳುಳ್ಳವನು. ಮರಣವಿಲ್ಲದವನು. ವೇದವನ್ನು ಬಲ್ಲವರಲ್ಲಿ ಬಹು ಉತ್ಕೃಷ್ಟನು.

ಸಹಿಷ್ಣುಃ ಸದ್ಗತಿಶ್ಶಾಸ್ತಾ ವಿಶ್ವಯೋನಿರ್ಮಹಾದ್ಯುತಿಃ ।
ಅತೀಂದ್ರ ಊರ್ಜಿತಃ ಪ್ರಾಂಶುರುಪೇಂದ್ರೋ ವಾಮನೋ ಬಲಿಃ ॥ ೭೦ ॥

ಧನುರ್ವೇದೋ ವಿಧಾತಾ ಚ ಬ್ರಹ್ಮಾ ವಿಷ್ಣುಶ್ಚ ಶಂಕರಃ ।
ಹಂಸೋ ಮರೀಚಿರ್ಗೋವಿಂದೋ ರತ್ನಗರ್ಭೋ ಮಹಾದ್ಯುತಿಃ ॥ ೭೧ ॥

ವ್ಯಾಸೋ ವಾಚಸ್ಪತಿಸ್ಸರ್ವದಃ ಪಿತಾಽಸುರಮರ್ದನಃ ।
ಜಾನಕೀವಲ್ಲಭಶ್ಶ್ರೀಮಾನ್ ಪ್ರಕಟಃ ಪ್ರೀತಿವರ್ಧನಃ ॥ ೭೨ ॥

---

೭೦. ಸಹನಶೀಲನಾದವನು. ಅಲ್ಲದೆ ಶತ್ರುಗಳ ಬಲವನ್ನು ಸಹಿಸಿಕೊಂಡು ಅವರನ್ನು ನಾಶಪಡಿಸುವವನು. ಒಳ್ಳೆಯ ಬುದ್ಧಿಯುಳ್ಳವನು. ಎಲ್ಲರಿಗೂ ಶಿಕ್ಷಕನು. ಪ್ರಪಂಚವೆಲ್ಲಕ್ಕೂ ಕಾರಣಕರ್ತನು. ಬಹುವಾದ ಕಾಂತಿಯುಳ್ಳವನು. ಜ್ಞಾನ ಇಂದ್ರಿಯ ಇವಕ್ಕೆ ಮೀರಿದ ಜ್ಞಾನವುಳ್ಳವನು. ಬಲಿಷ್ಠನು. ಎತ್ತರವಾದವನು. ಇಂದ್ರನಿಗೆ ತಮ್ಮನಾಗಿ ಹುಟ್ಟಿದವನು. ಕುಳ್ಳನಾಗಿರುವವನು. ಹವಿಸ್ಸಿನರೂಪನು.

೭೧. ಧನುರ್ವೇಧವನ್ನು ಬಲ್ಲವನು. ಮತ್ತು ಧನುರ್ವೇದ ಸ್ವರೂಪನು. ವಿಶೇಷವಾಗಿ ಎಲ್ಲಾ ಭೂತಗಳನ್ನೂ ಧರಿಸಿರುವವನು. ರಜೋ ಗುಣವನ್ನು ಹೊಂದಿ ಆತ್ಮನಾಗಿ ಸೃಷ್ಟಿಸುವವನು. ಸತ್ವಗುಣವನ್ನು ಹೊಂದಿ ವಿಷ್ಣುವಾಗಿ ರಕ್ಷಿಸುವವನು. ತಮೋಗುಣವನ್ನು ಹೊಂದಿ ರುದ್ರನಾಗಿ ಸಂಹರಿಸುವವನು. ಜೀವದೇವಾಭೇದ ವಿಜ್ಞಾನವನ್ನು ಹೊಂದಿ ಅದೇ ಇದು ಇದೇ ಅದು ಎಂಬ ಭಾವದಿಂದ ಶಿವೋಹಂ, ಎನ್ನುವವರಿಗೆ ಸಂಸಾರವನ್ನು ಪರಿಹರಿಸುವವನು. ಮರೀಚಿಯೆಂಬ ಮಹರ್ಷಿಯ ರೂಪನು. ಗೋಪಾಲಕನು. ರತ್ನಗಳೇ ಗರ್ಭದಲ್ಲಿ ಉಳ್ಳ ಸಮುದ್ರರೂಪನು. ಬಹುವಾದ ಕಾಂತಿಯುಳ್ಳವನು.

೭೨. ವ್ಯಾಸಮುನಿಯಾಗಿ ಅವತರಿಸಿರುವವನು. ಎಲ್ಲಾ ವಿದ್ಯೆಗಳಿಗೂ ಈಶ್ವರನು. ಸಕಲವನ್ನೂ ಕೊಡುವವನು ಎಲ್ಲಾ ಜನರನ್ನೂ ಕಾಪಾಡುವವನು. ರಾಕ್ಷಸರನ್ನು ಸಂಹರಿಸುವವನು. ಜಾನಕಿಗೆ ಮನೋಹರನಾದವನು. ಶ್ರೀಮಂತನು. ಪ್ರಸಿದ್ಧನಾದವನು. ತನ್ನನ್ನು ಸ್ತುತಿಸಿದವರಿಗೆ ಪ್ರೀತಿಯನ್ನು ಹೆಚ್ಚಿಸುವವನು.

ಸಂಭವೋಽತೀಂದ್ರಿಯೋ ವೇದ್ಯೋ ನಿರ್ದೇಶ್ಯೋ ಜಾಂಭವತ್ಪ್ರಭುಃ ।
ದಮನೋ ಮನ್ಮಥೋ ವ್ಯಾಪೀ ವಿಶ್ವರೂಪೋ ನಿರಂಜನಃ ॥ ೭೩ ॥

ನಾರಾಯಣೋಽಗ್ರಣೀಸ್ಸಾಧುಃ ಜಟಾಯುಃ ಪ್ರೀತಿವರ್ಧನಃ ।
ನೈಕರೂಪೋ ಜಗನ್ನಾಥಃ ಸುರಕಾರ್ಯಹಿತಪ್ರಭುಃ ॥ ೭೪ ॥

ಜಿತಕ್ರೋಧೋ ಜಿತಾರಾತಿಃ ಪ್ಲವಗಾಧಿಪರಾಜ್ಯದಃ ।
ವಸುದಸ್ಸುಭುಜೋ ನೈಕಮಾಯೋ ಭವ್ಯಃ ಪ್ರಮೋದನಃ ॥ ೭೫ ॥

---

೭೩. ತನ್ನ ಇಷ್ಟಬಂದಂತೆ ಆಯಾ ಕಾಲಕ್ಕೆ ಸರಿಯಾಗಿ ಹುಟ್ಟುವವನು. ಶಬ್ದಾದಿಗಳಿಲ್ಲದುದರಿಂದ ಆಯಾ ಇಂದ್ರಿಯಗಳಿಗೆ ಸಿಕ್ಕತಕ್ಕವನಲ್ಲ. ಮೋಕ್ಷಾಪೇಕ್ಷಿಗಳಿಗೆ ತಿಳಿಯಲು ಯೋಗ್ಯನು. ಅವನಲ್ಲಿ ಗುಣಗಳಿಲ್ಲದಿರುವುದರಿಂದ ಈರೀತಿ ಇರುವನೆಂದು ತಿಳಿಯಲು ಅಸಾಧ್ಯನು. ಬ್ರಹ್ಮಾಂಶ ಸಂಭವನಾದ ಜಾಂಬವಂತನಿಗೆ ಒಡೆಯನು. ಜನರು ತಮ್ಮ ತಮ್ಮ ಕರ್ತವ್ಯದಿಂದ ಜಾರಿದಾಗ ಅವರನ್ನು ಶಿಕ್ಷಿಸುವವನು. ಮನ್ಮಥನಾಗಿ ಅವತರಿಸಿದವನು. ಆಕಾಶದಂತೆ ಎಲ್ಲ ಕಡೆಗೂ ವ್ಯಾಪಕನು ಸರ್ವಾತ್ಮಕನು. ಯಾವುದನ್ನೂ ಅಂಟಿಸಿಕೊಳ್ಳದೆ ಯಾವುದಕ್ಕೂ ಸಿಕ್ಕದೆ ಇರುವವನು.

೭೪. ನೀರೇ ಸ್ಥಾನವಾಗಿ ಉಳ್ಳವನು. ಸಮುದ್ರಶಾಯಿಯು. ಮುಮುಕ್ಷುಗಳನ್ನು ಮೊದಲು ಕರೆದುಕೊಂಡು ಹೋಗುವವನು. ನ್ಯಾಯದಂತೆ ನಡೆಯುವವನು ಜಟಾಯುವಿಗೆ ಬಹುವಾದ ಪ್ರೀತಿಯನ್ನು ಹೆಚ್ಚಿಸಿದವನು. ಅನೇಕ ಅವತಾರಗಳುಳ್ಳವನು ಪ್ರಪಂಚಕ್ಕೆಲ್ಲವೂ ಒಡೆಯನು: ದೇವತೆಗಳಿಗೆ ಹಿತವಾದ ಕೆಲಸವನ್ನು ಮಾಡುವುದರಲ್ಲಿ ಸಮರ್ಥನು.

೭೫. ಕ್ರೋಧವನ್ನು ಜಯಿಸಿರುವವನು. ಒಳಗಿನ ಮತ್ತು ಹೊರಗಿನ ಶತ್ರುಗಳನ್ನು ನಿಗ್ರಹಿಸಿರುವವನು. ಕಪೀಂದ್ರನಾದ ಸುಗ್ರೀವನಿಗೆ ವಾಲಿಯನ್ನು ಕೊಂದು ರಾಜ್ಯವನ್ನು ಕೊಡಿಸಿದವನು. ಹಣವನ್ನು ಕೊಡುವವನು. ಲಕ್ಷಣವಾದ ಭುಜಗಳುಳ್ಳವನು. ಅನೇಕ ಬಗೆಯಾದ ಮಾಯೆಗಳನ್ನು ಹೊಂದಿರುವವನು. ಮಂಗಳ ಸ್ವರೂಪನು. ಆತ್ಮನಲ್ಲಿಯೇ ರಮಿಸುತ್ತ ರಸಾಸ್ವಾದ ಮಾಡುತ್ತಿರುವವನು.

ಚಂಡಾಂಶುಃ ಸಿದ್ಧಿದಃ ಕಲ್ಪಶ್ಶರಣಾಗತವತ್ಸಲಃ ।
ಅಂಗದೋ ರೋಗಹರ್ತಾ ಚ ಮಂತ್ರಜ್ಞೋ ಮಂತ್ರಭಾವನಃ ॥ ೭೬ ॥

ಸೌಮಿತ್ರಿವತ್ಸಲೋ ಧುರ್ಯೋ ವ್ಯಕ್ತಾವ್ಯಕ್ತಸ್ವರೂಪಧೃಕ್ ।
ವಸಿಷ್ಠೋ ಗ್ರಾಮಣೀಃ ಶ್ರೀಮಾನನುಕೂಲಃ ಪ್ರಿಯಂವದಃ ॥ ೭೭ ॥

ಅತುಲಸ್ಸಾತ್ವಿಕೋ ಧೀರಃ ಶರಾಸನವಿಶಾರದಃ ।
ಜ್ಯೇಷ್ಠಸ್ಸರ್ವಗುಣೋಪೇತಃ ಶಕ್ತಿಮಾಂಸ್ತಾಟಕಾಂತಕಃ ॥ ೭೮ ॥

---

೭೬. ತೀಕ್ಷ್ಣವಾದ ಕಿರಣಗಳುಳ್ಳವನು ಎಂದರೆ ಸೂರ್ಯಸ್ವರೂಪನು. ಅಣಿಮಾದಿ ಅಷ್ಟಸಿದ್ಧಿಗಳನ್ನು ಕೊಡುವವನು. ಕಾಲಾತ್ಮಕನು. ನೀನೇ ಗತಿಯೆಂದು ಮರೆಹೊಕ್ಕವರನ್ನು ಕಾಪಾಡುವವನು. ಪರಮೈಕಾಂತಿಗಳಿಗೆ ಸಾರೂಪ್ಯ ಮುಕ್ತಿಯನ್ನು ಕೊಡುವವನು. ಭಕ್ತರ ರೋಗವನ್ನು ಪರಿಹರಿಸುವವನು. ಋಗ್ಯಜುಸ್ಸಾಮರೂಪವಾದ ಮಂತ್ರಗಳನ್ನು ಬಲ್ಲವನು. ಮಂತ್ರದಿಂದ ತಿಳಿಯತಕ್ಕವನು.

೭೭. ಲಕ್ಷ್ಮಣನಲ್ಲಿ ಬಹುವಿಶ್ವಾಸವುಳ್ಳವನು. ಪ್ರಪಂಚದ ಭಾರವನ್ನು ಧರಿಸಿರುವವನು. ಸಗುಣ ನಿರ್ಗುಣ ಸ್ವರೂಪವನ್ನು ಹೊಂದಿರುವವನು. ಆತ್ಮ ತತ್ವವನ್ನು ಬಲ್ಲವರಿಗೆ ಅನುಕೂಲವಾದವನು. ಪ್ರಿಯವಾದ ವಿಷಯಗಳನ್ನು ಹೇಳುವವನು.

೭೮. ತನಗೆ ಸಮಾನರಾದವರು ಬೇರೊಬ್ಬರೂ ಇಲ್ಲದವನು. ಶಾಂತ ಸ್ವಭಾವದವನು. ಒಳ್ಳೆಯದು ಕೆಟ್ಟದ್ದನ್ನು ವಿಚಾರಮಾಡುವವನು ಧನುಸ್ಸು ಹಿಡಿಯುವುದರಲ್ಲಿ ಗಟ್ಟಿಗನು. ಬಹು ಹಿಂದಿನವನು. ಅಥವಾ ಮುದುಕನು. ಎಲ್ಲಾ ಉತ್ತಮ ಗುಣಗಳಿಂದಲೂ ಕೂಡಿದವನು. ಬ್ರಹ್ಮಾದಿಗಳಿಗಿಂತಲೂ ಹೆಚ್ಚಿನ ಶಕ್ತಿಯುಳ್ಳವನು. ತಾಟಕಿಯನ್ನು ಕೊಂದವನು.

ವೈಕುಂಠಃ ಪ್ರಾಣಿನಾಂ ಪ್ರಾಣಃ ಕಮಠಃ ಕಮಲಾಧಿಪಃ ।
ಗೋವರ್ಧನಧರೋ ಮತ್ಸ್ಯರೂಪಃ ಕಾರುಣ್ಯಸಾಗರಃ ॥ ೭೯ ॥

ಕುಂಭಕರ್ಣಪ್ರಭೇತ್ತಾ ಚ ಗೋಪೀ ಗೋಪಾಲಸಂವೃತಃ ।
ಮಾಯಾವೀ ವ್ಯಾಪಕೋ ವ್ಯಾಪೀ ರೇಣುಕೇಯಬಲಾಪಹಃ ॥ ೮೦ ॥

ಪಿನಾಕಮಥನೋ ವಂದ್ಯಸ್ಸಮರ್ಥೋ ಗರುಡ ಧ್ವಜಃ ।
ಲೋಕತ್ರಯಾಶ್ರಯೋ ಲೋಕಭರಿತೋ ಭರತಾಗ್ರಜಃ ॥ ೮೧ ॥

---

೭೯. ವೈಕುಂಠವೆಂಬ ಲೋಕಕ್ಕೆ ಒಡೆಯನು. ಪ್ರಾಣಿಗಳಿಗೆಲ್ಲಾ ಪ್ರಾಣ ಸ್ವರೂಪನು. ಕೂರ್ಮಾವತಾರ ಮಾಡಿದವನು. ಲಕ್ಷ್ಮಿಗೆ ಒಡೆಯನು. ಗೋವರ್ಧನ ಪರ್ವತವನ್ನು ಎತ್ತಿ ಹಿಡಿದವನು. ಮತ್ಸ್ಯಾವತಾರವನ್ನು ಮಾಡಿದವನು. ದಯೆಗೆ ಸಮುದ್ರನು.

೮೦. ರಾವಣನ ತಮ್ಮನಾದ ಕುಂಭಕರ್ಣನನ್ನು ಕೊಂದವನು. ಗೋಪಿಯರೊಡನೆಯೂ, ಗೋಪಾಲರೊಡನೆಯೂ, ಕೂಡಿಕೊಂಡಿರುವವನು. ಮಹಾ ಮಾಯೆಯನ್ನು ಹೊಂದಿದ ಮೋಹಿನಿಯ ಅವತಾರವನ್ನು ಮಾಡಿದವನು. ಎಲ್ಲದರಲ್ಲಿಯೂ ಇರುವವನು. ಆಕಾಶದಂತೆ ಎಲ್ಲದರಲ್ಲಿಯೂ ವ್ಯಾಪಿಸಿಕೊಂಡಿರುವವನು. ರೇಣುಕೆಯ ಮಗನಾದ ಪರಶುರಾಮನ ಬಲವನ್ನು ಕುಂದಿಸಿವವನು.

೮೧. ಶಿವಚಾಪವನ್ನು ಮುರಿದವನು. ಸ್ತೋತ್ರಕ್ಕೆ ಯೋಗ್ಯನು. ಸರಿಯಾದ ಅರ್ಥದಿಂದ ಕೂಡಿದ ವೇದಾತ್ಮಕನಾದವನು. ಗರುಡನೇ ಧ್ವಜದಲ್ಲಿ ಚಿಹ್ನೆಯಾಗಿ ಉಳ್ಳವನು. ಮೂರುಲೋಕಗಳಿಗೂ ಆಶ್ರಯನು. ಲೋಕಗಳನ್ನು ಕಾಪಾಡುವವನು. ಭರತನಿಗೆ ಅಣ್ಣನಾದವನು.

ಶ್ರೀಧರಸ್ಸದ್ಗತಿರ್ಲೋಕಸಾಕ್ಷೀ ನಾರಾಯಣೋ ವಿಭುಃ |
ಮನೋರೂಪೀ ಮನೋವೇಗೀ ಪೂರ್ಣಃ ಪುರುಷಪುಂಗವಃ || ೮೨ ||

ಯದುಶ್ರೇಷ್ಠೋ ಯದುಪತಿಃ ಭೂತಾವಾಸಸ್ಸುವಿಕ್ರಮಃ |
ತೇಜೋ ಧರಾಧರೋಽವ್ಯಗ್ರಶ್ಚತುರ್ಮೂರ್ತಿರ್ಮಹಾನಿಧಿಃ || ೮೩ ||

ಚಾಣೂರಮಥನೋ ವಂದ್ಯಃ ಶಾಂತೋ ಭರತವಂದಿತಃ |
ಶಬ್ದಾಶಿಗೋ ಗಭೀರಾತ್ಮಾ ಕೋಮಲಾಂಗಃ ಪ್ರಜಾಗರಃ || ೮೪ ||

---

೮೨. ಎಲ್ಲಾ ಪ್ರಾಣಿಗಳಿಗೂ ತಾಯಿಯಾದ ಲಕ್ಷ್ಮಿಯನ್ನು ಹೃದಯದಲ್ಲಿ ಧರಿಸಿರುವವನು. ಮುಮುಕ್ಷುಗಳಿಗೆ ಒಳ್ಳೆಯ ಗತಿಯನ್ನು ಕೊಡುವವನು. ಸರ್ವಾಂತರ್ಯಾಮಿಯಾಗಿ ಲೋಕಗಳಿಗೆ ಸಾಕ್ಷಿಯಾಗಿರುವವನು. ಪರಬ್ರಹ್ಮ ಸ್ವರೂಪನು. ಅನೇಕ ರೀತಿಯಾಗಿ ಅವತರಿಸಿರುವವನು. ಮನಸ್ಸಿನ ರೂಪ ನಾದವನು. ಎಲ್ಲಾ ತತ್ವಗಳಲ್ಲಿಯೂ ಮನೋವೇಗವುಳ್ಳವನು. ಎಲ್ಲಾ ಇಷ್ಟಾರ್ಥಗಳಿಂದಲೂ ಕೂಡಿದವನು. ಪುರುಷರಲ್ಲಿ ಶ್ರೇಷ್ಠನು.

೮೩. ಯದುವಂಶದವರಲ್ಲಿ ಶ್ರೇಷ್ಠನು. ಯದುಗಳಿಗೆ ಒಡೆಯನು. ಎಲ್ಲಾ ಭೂತಗಳಲ್ಲಿಯೂ ವಾಸಮಾಡುವವನು. ಒಳ್ಳೆಯ ಪರಾಕ್ರಮವುಳ್ಳ ವನು. ಪ್ರಕಾಶಾತ್ಮಕನು. ವರಹಾವತಾರವನ್ನು ಮಾಡಿ ಭೂಮಿಯನ್ನು ಎತ್ತಿದವನು. ಕಾತರನಲ್ಲದವನು. ರಾಮ, ಲಕ್ಷ್ಮಣ, ಭರತ, ಶತ್ರುಘ್ನ ರೂಪ ವಾದ ಚತುರ್ಮೂರ್ತಿ ಸ್ವರೂಪನು. ದೊಡ್ಡದಾದ ನಿಧಿಯರೂಪನು.

೮೪. ಚಾಣೂರನೆಂಬ ಜಟ್ಟಿಯನ್ನು ಕೊಂದವನು. ಎಲ್ಲರಿಂದಲೂ ನಮಸ್ಕರಿಸಿಕೊಳ್ಳಲು ಯೋಗ್ಯನು. ವಿಷಯಗಳಿಂದ ತೊಂದರೆಪಟ್ಟುಕೊಳ್ಳದೆ ಶಾಂತನಾಗಿರುವವನು. ಭರತನಿಂದ ನಮಸ್ಕರಿಸಿಕೊಳ್ಳುವವನು. ಶಬ್ದವನ್ನು ಕೂಡ ಅತಿಕ್ರಮಿಸಿರುವವನು. ಜ್ಞಾನ, ಐಶ್ವರ್ಯ, ಬಲ, ಪರಾಕ್ರಮಗಳಿಂದ ಗಂಭೀರವಾದ ಸ್ವರೂಪವುಳ್ಳವನು. ಸುಕುಮಾರ ಶರೀರನು. ಯಾವಾಗಲೂ ಎಚ್ಚರದಿಂದಿರುವವನು.

ಲೋಕೋರ್ಧ್ವಗಶ್ಶೇಷಶಾಯೀ ಕ್ಷೀರಾಬ್ಧಿನಿಲಯೋಽಮಲಃ ।
ಆತ್ಮಜ್ಯೋತಿರದೀನಾತ್ಮಾ ಸಹಸ್ರಾರ್ಚಿಸ್ಸಹಸ್ರಪಾತ್ ॥ ೮೫ ॥

ಅಮೃತಾಂಶುರ್ಮಹೀಭರ್ತಾ ನಿವೃತ್ತವಿಷಯಸ್ಪೃಹಃ ।
ತ್ರಿಕಾಲಜ್ಞೋ ಮುನಿಸ್ಸಾಕ್ಷೀ ವಿಹಾಯಸಗತಿಃ ಕೃತೀ ॥ ೮೬ ॥

ಪರ್ಜನ್ಯಃ ಕುಮುದೋ ಭೂತಾವಾಸಃ ಕಮಲಲೋಚನಃ ।
ಶ್ರೀವತ್ಸವಕ್ಷಾಃ ಶ್ರೀವಾಸೋ ವೀರಹಾ ಲಕ್ಷ್ಮಣಾಗ್ರಜಃ ॥ ೮೭ ॥

---

೮೫. ಹದಿನಾಲ್ಕು ಲೋಕಗಳಿಗೂ ಮೀರಿದವನು. ಆದಿಶೇಷನ ಮೇಲೆ ಮಲಗಿರುವವನು. ಕ್ಷೀರಸಮುದ್ರವೇ ಮನೆಯಾಗಿ ಉಳ್ಳವನು. ನಿರ್ಮಲನಾದವನು. ಎಲ್ಲಾ ಶರೀರದಲ್ಲಿಯೂ ಜ್ಯೋತಿಸ್ಸಿನ ರೂಪದಿಂದಿರುವವನು. ಕೇಳಿಕೊಳ್ಳುವ ಸ್ವಭಾವವಿಲ್ಲದವನು. ಅನೇಕವಾದ ತೇಜಸ್ಸುಳ್ಳವನು. ಅನೇಕ ಕಾಲುಗಳುಳ್ಳವನು.

೮೬. ಅಮೃತರೂಪವಾದ ಕಿರಣಗಳುಳ್ಳವನು. ಭೂಮಿಗೆ ಒಡೆಯನು. ವಿಷಯ ಸುಖಗಳಲ್ಲಿ ಆಸೆಯನ್ನು ಬಿಟ್ಟವನು. ಭೂತ ಭವಿಷ್ಯದ್ವರ್ತಮಾನಗಳ ಜ್ಞಾನವನ್ನು ಬಲ್ಲವನು. ಮುನಿಯು. ಎಲ್ಲವನ್ನೂ ಎಡೆಬಿಡದೆ ತಾನೇ ನೋಡುವವನು. ಗರುಡನಮೇಲೆ ಸುತ್ತುವವನು. ಪುರುಷಪ್ರಯತ್ನವುಳ್ಳವನು.

೮೭. ಬೇಕಾದ ಇಷ್ಟಗಳನ್ನು ಮಳೆಯಂತೆ ಸುರಿಸುವವನು. ಭೂಮಿಗೆ ಅದರ ಭಾರವನ್ನು ಇಳಿಸಿ ಸಂತೋಷವನ್ನುಂಟುಮಾಡಿದವನು. ಎಲ್ಲಾ ಪ್ರಾಣಿಗಳಿಗೂ ಆಶ್ರಯನು. ತಾವರೆಯಂತೆ ಕಣ್ಣುಗಳುಳ್ಳವನು. ಎದೆಯಮೇಲೆ ಶ್ರೀವತ್ಸವೆಂಬ ಮಚ್ಚೆಯುಳ್ಳವನು. ಲಕ್ಷ್ಮೀದೇವಿಗೆ ವಾಸಸ್ಥಳನು. ವೀರರನ್ನು ಕೊಂದವನು. ಲಕ್ಷ್ಮಣನಿಗೆ ಅಣ್ಣನು.

ಲೋಕಾಭಿರಾಮೋ ಲೋಕಾರಿಮರ್ದನಃ ಸೇವಕಪ್ರಿಯಃ ।
ಸನಾತನತಮೋ ಮೇಘಶ್ಯಾಮಲೋ ರಾಕ್ಷಸಾಂತಕಃ ॥ ೮೮ ॥

ದಿವ್ಯಾಯುಧಧರ ಶ್ರೀಮಾನಪ್ರಮೇಯೋ ಜಿತೇಂದ್ರಿಯಃ ।
ಭೂದೇವವಂದ್ಯೋ ಜನಕಪ್ರಿಯಕೃತ್ಪ್ರಪಿತಾಮಹಃ ॥ ೮೯ ॥

ಉತ್ತಮಸ್ಸಾತ್ವಿಕಸ್ಸತ್ಯಃ ಸತ್ಯಧರ್ಮಪರಾಕ್ರಮಃ ।
ಸುವ್ರತಸ್ಸುಗಮಸ್ಸೂಕ್ಷ್ಮಸ್ಸುಘೋಷಸ್ಸುಖದಸ್ಸುಹೃತ್ ॥ ೯೦ ॥

---

೮೮. ಎಲ್ಲಾ ಜನಗಳಿಗೂ ಸುಂದರನಾಗಿ ಕಾಣುವವನು. ಲೋಕಕ್ಕೆ ಶತ್ರುಗಳಾಗಿರುವವರನ್ನು ಕೊಲ್ಲುವವನು. ತನ್ನನ್ನು ಸೇವಿಸುವವರಲ್ಲಿ ಪ್ರೀತಿಯುಳ್ಳವನು. ಎಲ್ಲಕ್ಕೂ ಕಾರಣಕರ್ತರಾದ ಸನಾತನ ಬ್ರಹ್ಮರಿಗೂ ಸನಾತನನು. ಮೇಘದಂತೆ ಶ್ಯಾಮಲವರ್ಣವುಳ್ಳವನು. ರಾಕ್ಷಸರಿಗೆ ಯಮನು.

೮೯. ಉತ್ತಮೋತ್ತಮವಾದ ಆಯುಧಗಳನ್ನು ಧರಿಸಿರುವವನು. ಅಪಾರ ಶಕ್ತಿಯನ್ನು ಸ್ವಾಧೀನವಾಗಿಟ್ಟುಕೊಂಡಿರುವವನು. ಪ್ರತ್ಯಕ್ಷ ಅನುಮಾನ ಉಪಮಾನ ಮೊದಲಾದ ಪ್ರಮಾಣ ಗೋಚರನೂ ಅಲ್ಲದೆ ಸ್ವಾತಿರಿಕ್ತವಾದ ಸದಾಶೂನ್ಯನಾಗಿ ವಿಲಕ್ಷಣನಾಗಿ ಕೇವಲ ಸ್ವರೂಪಿನಿಂದ ತೋರತಕ್ಕವನು. ಇಂದ್ರಿಯಗಳನ್ನು ಜಯಿಸಿ ಸ್ವಾಧೀನದಲ್ಲಿಟ್ಟುಕೊಂಡಿರುವವನು. ಭೂಮಿಯಲ್ಲಿ ಉತ್ತಮೋತ್ತಮರಾದವರಿಗೂ ನಮಸ್ಕಾರಾರ್ಹನು. ತಂದೆಗೆ ಪ್ರೀತಿಕರವಾದ ಕೆಲಸವನ್ನು ಮಾಡಿದವನು. ಚತುರ್ಮುಖಾದಿ ಬ್ರಹ್ಮರಿಗೆ ತಂದೆಯು.

೯೦. ಸರ್ವಶ್ರೇಷ್ಠನು. ಸತ್ವಸ್ವಭಾವವುಳ್ಳವನು. ಸತ್ಯಸ್ವರೂಪನು. ವ್ಯರ್ಥವಾಗದ ಪರಾಕ್ರಮವುಳ್ಳವನು. ಮಂಗಳಕರವಾದ ವ್ರತವುಳ್ಳವನು. ಸುಲಭವಾಗಿ ಸಿಕ್ಕತಕ್ಕವನು. ಸೂಕ್ಷ್ಮರೂಪನು. ಚೆನ್ನಾಗಿರುವ ಧ್ವನಿಯುಳ್ಳವನು. ಸುಖವನ್ನು ಕೊಡತಕ್ಕವನು. ಲೋಕಗಳಿಗೆ ಸ್ನೇಹಿತನು.

ದಾಮೋದರೋಽಚ್ಯುತಶ್ಶಾರ್ಙ್ಗೀ ವಾಮನೋ ಮಧುರಾಧಿಪಃ |
ದೇವಕೀನಂದನಶ್ಶೌರೀ ಕೈಟಭಾಸುರಮರ್ದನಃ || ೯೧ ||

ಸಪ್ತತಾಳಪ್ರಭೇತ್ತಾ ಚ ಮಿತ್ರವಂಶಪ್ರವರ್ಧನಃ |
ಕಾಲಸ್ವರೂಪೀ ಕಾಲಾತ್ಮಾ ಕಾಲಃ ಕಲ್ಯಾಣದಃ ಕಲಿಃ || ೯೨ ||

ಸಂವತ್ಸರೋ ಋತುಃ ಪಕ್ಷೋ ಹ್ಯಯನೋ ದಿವಸೋ ಯುಗಃ |
ಸ್ತವ್ಯೋ ವಿವಿಕ್ತೋ ನಿರ್ಲೇಪಸ್ಸರ್ವವ್ಯಾಪೀ ನಿರಾಕುಲಃ || ೯೩ ||

---

೯೧. ದಮಾದಿ ಸಾಧನಗಳೇ ಹೊಟ್ಟೆಯಲ್ಲಿ ಉಳ್ಳವನು. ತನ್ನ ಗೌರವಕ್ಕಾಗಲಿ, ಸ್ಥಾನಕ್ಕಾಗಲಿ ಚ್ಯುತಿಯನ್ನು ತಂದುಕೊಳ್ಳದವನು. ಶಾರ್ಙ್ಗವೆಂಬ ಧನುಸ್ಸನ್ನು ಉಳ್ಳವನು. ವಾಮನಾವತಾರ ಮಾಡಿದವನು. ಮಧುರಾಪಟ್ಟಣಕ್ಕೆ ಅಧಿಪನು. ದೇವಕಿಗೆ ಮಗನು. ಕೈಟಭನೆಂಬ ರಾಕ್ಷಸನನ್ನು ಕೊಂದವನು.

೯೨. ಸುಗ್ರೀವನಿಗೆ ತನ್ನ ಬಲವನ್ನು ತೋರಿಸಲು ಏಳು ತಾಳೆಯಮರಗಳನ್ನು ಒಂದೇಬಾರಿಗೆ ಕತ್ತರಿಸಿದವನು. ಸೂರ್ಯವಂಶವನ್ನು ಬೆಳೆಸಿದವನು. ಕಾಲರೂಪನು. ಆ ಕಾಲವೇ ತನ್ನ ಆತ್ಮದಲ್ಲಿ ಉಳ್ಳವನು. ಎಲ್ಲವನ್ನೂ ಲೆಕ್ಕ ಮಾಡುವವನು. ಮಂಗಳವನ್ನು ಕೊಡತಕ್ಕವನು. ಸಮರ್ಥನು.

೯೩. ಸಂವತ್ಸರದ ಸ್ವರೂಪನು. ಋತುಸ್ವರೂಪನು. ಪಕ್ಷಸ್ವರೂಪನು. ಅಯನಸ್ವರೂಪನು. ದಿವಸಸ್ವರೂಪನು. ಯುಗಸ್ವರೂಪನು. ಎಲ್ಲರಿಂದಲೂ ಹೊಗಳಿಸಿಕೊಳ್ಳುವವನು. ಎಲ್ಲದರಲ್ಲಿಯೂ ಸೇರಿಕೊಂಡಿದ್ದರೂ ಬೇರೆ ಬೇರೆಯಾಗಿರುವವನು. ಸಂಬಂಧಿಸಿದ್ದರೂ ಸಂಬಂಧಿಸದಂತೆ ಇರುವವನು. ಎಲ್ಲದರಲ್ಲಿಯೂ ವ್ಯಾಪಿಸಿಕೊಂಡಿರುವವನು. ಚಿಂತೆಯೇ ಇಲ್ಲದಿರುವವನು.

ಅನಾದಿನಿಧನಸ್ಸರ್ವಲೋಕಪೂಜ್ಯೋ ನಿರಾಮಯಃ ।
ರಸೋ ರಸಜ್ಞಸ್ಸಾರಜ್ಞೋ ಲೋಕಸಾರೋ ರಸಾತ್ಮಕಃ ॥ ೯೪ ॥

ಸರ್ವದುಃಖಾತಿಗೋ ವಿದ್ಯಾರಾಶಿಃ ಪರಮಗೋಚರಃ ।
ಶೇಷೋ ವಿಶೇಷೋ ವಿಗತಕಲ್ಮಷೋ ರಘುಪುಂಗವಃ ॥ ೯೫ ॥

ವರ್ಣಶ್ರೇಷ್ಠೋ ವರ್ಣಭಾವ್ಯೋ ವರ್ಣೋ ವರ್ಣಗುಣೋಜ್ವಲಃ ।
ಕರ್ಮಸಾಕ್ಷೀ ಗುಣಶ್ರೇಷ್ಠೋ ದೇವಾಸುರವರಪ್ರದಃ ॥ ೯೬ ॥

---

೯೪. ಹುಟ್ಟು ಸಾವುಗಳಿಲ್ಲದವನು. ಎಲ್ಲಾ ಪ್ರಾಣಿಗಳಿಗೂ ಪೂಜ್ಯನು. ಯಾವ ತೊಂದರೆಯೂ ಇಲ್ಲದವನು. ರಸಗಳರೂಪನು. ಎಲ್ಲಾ ರಸವನ್ನು ಬಲ್ಲವನು. ಎಲ್ಲಾ ವೇದಗಳ ಸಾರವನ್ನೂ ಬಲ್ಲವನು. ಲೋಕಕ್ಕೆಲ್ಲಾ ಸಾರ ರೂಪನು. ಶೃಂಗಾರಾದಿ ನವರಸಗಳ ಸ್ವರೂಪನು.

೯೫. ಜನ್ಮ, ಮುಪ್ಪು, ಮರಣರೂಪವಾದ ದುಃಖಗಳಿಲ್ಲದವನು. ಜ್ಞಾನ ಬೋಧಕವಾದ ವಿದ್ಯೆಗಳ ರಾಶಿಯು. ಉತ್ತಮವಾದ ಸಿದ್ಧಿಯನ್ನು ಹೊಂದಿದ ವರಿಗೆ ಮಾತ್ರ ತಿಳಿಯತಕ್ಕವನು. ಆದಿಶೇಷಸ್ವರೂಪನು. ಪರಮಾತ್ಮನಾಗಿ ಹೆಚ್ಚಿನವನು. ಪಾಪರಹಿತನು. ರಘುವಂಶದ ರಾಜರಲ್ಲಿ ಉತ್ತಮನು.

೯೬. ಅಕ್ಷರಗಳಲ್ಲಿ ಶ್ರೇಷ್ಠವಾದ ಅಕಾರಸ್ವರೂಪನು. ಪ್ರಣವವಾದ ಓಂಕಾರದಿಂದ ಸಿಕ್ಕತಕ್ಕವನು. ಓಂಕಾರವಾಚ್ಯನು. ವರ್ಣಗುಣವು ಸತ್ವರಜಸ್ತ ಮೋರೂಪವು. ಇವುಗಳಿಂದ ಪ್ರಕಾಶಿಸುವವನು. ಎಲ್ಲಾ ಪ್ರಾಣಿಗಳೂ ಮಾಡ ತಕ್ಕ ಕರ್ಮಗಳಿಗೆ ಸಾಕ್ಷಿಯು. ಒಳ್ಳೆಯ ಗುಣವುಳ್ಳವರಲ್ಲಿ ಶ್ರೇಷ್ಠನು. ದೇವತೆ ಗಳಿಗೂ ರಾಕ್ಷಸರಿಗೂ ವರವನ್ನು ಕೊಡತಕ್ಕವನು.

ದೇವಾದಿದೇವೋ ದೇವರ್ಷಿರ್ದೇವಾಸುರಭಯಪ್ರದಃ ।
ಸರ್ವದೇವಮಯಶ್ಚಕ್ರೀ ಶಾಂರ್ಗಪಾಣೀ ರಘೂತ್ತಮಃ ॥ ೯೭ ॥

ಮನೋ ಬುದ್ಧಿರಹಂಕಾರಃ ಪ್ರಕೃತಿಃ ಪುರುಷೋವ್ಯಯಃ ।
ನ್ಯಾಯೋ ನ್ಯಾಯೀ ನಯೀ ಶ್ರೀಮಾ‌ನ್ ನಯೋ ನಗಧರೋ ಧ್ರುವಃ ॥೯೮॥

ಲಕ್ಷ್ಮೀವಿಶ್ವಂಭರಾಭರ್ತಾ ದೇವೇಂದ್ರೋ ಬಲಿಮರ್ದನಃ ।
ಬಾಣಾರಿಮರ್ದನೋ ಯಜ್ವಾನನುತ್ತಮೋ ಮುನಿಸೇವಿತಃ ॥ ೯೯ ॥

---

೯೭. ದೇವತೆಗಳಿಗೆಲ್ಲಾ ಒಡೆಯನು. ದೇವತೆಗಳ ಋಷಿಸ್ವರೂಪನು. ದೇವತೆಗಳಿಗೂ ಅಸುರರಿಗೂ ಭಯವನ್ನುಂಟುಮಾಡುವವನು. ಸಮಸ್ತ ದೇವತಾ ಸ್ವರೂಪನು. ಸುದರ್ಶನವೆಂಬ ಚಕ್ರವನ್ನುಳ್ಳವನು. ಶಾಂರ್ಗವೆಂಬ ಧನುಸ್ಸನ್ನು ಕೈಯ್ಯಲ್ಲಿ ಹಿಡಿದಿರುವವನು. ರಘುವಂಶದ ರಾಜರಲ್ಲಿ ಉತ್ತಮನು.

೯೮. ಮನಸ್ಸೆಂಬ ತತ್ವಾತ್ಮಕನು. ಬುದ್ಧಿಯೆಂಬ ತತ್ವಾತ್ಮಕನು. ಅಹಂಕಾರ ತತ್ವಾತ್ಮಕನು ಮಹಾಮಾಯಾಸ್ವರೂಪನು. ದೇಹದಲ್ಲಿರುವವನು. ವಿನಾಶವಾಗಲಿ ವಿಕಾರವಾಗಲೀ ಇಲ್ಲದಿರುವವನು. ಪ್ರಮಾಣವನ್ನು ತಿಳಿಯುವ ತರ್ಕವೆಂಬ ನ್ಯಾಯಸ್ವರೂಪನು. ಆ ತರ್ಕಕ್ಕೆ ಆಧಾರವಾಗಿರುವವನು. ಆತ್ಮ ಸಾಕ್ಷಾತ್ಕಾರವನ್ನು ಹೊಂದುವ ಹಾಗೆ ಮಾಡುವವನು. ಉತ್ತಮವಾದ ಕಾಂತಿ ಯುಳ್ಳವನು. ನೀತಿಶಾಸ್ತ್ರಸ್ವರೂಪನು. ಗೋವರ್ಧನವೆಂಬ ಪರ್ವತವನ್ನು ಧರಿಸಿರುವವನು. ನಾಶವನ್ನು ಹೊಂದದೆ ಶಾಶ್ವತನಾದವನು.

೯೯. ಭೂದೇವಿ, ಲಕ್ಷ್ಮೀದೇವಿಯರಿಗೆ ಒಡೆಯನು. ದೇವತೆಗಳಿಗೆಲ್ಲಾ ಒಡೆಯನು. ವಾಮನಾವತಾರದಲ್ಲಿ ಬಲಿಯನ್ನು ನಿಗ್ರಹಿಸಿದವನು. ಬಾಣನೆಂಬ ಶತ್ರುವನ್ನು ಕೊಂದವನು. ಯಜ್ಞಗಳನ್ನು ಆಚರಿಸಿದವನು. ತನಗಿಂತಲೂ ಉತ್ತಮನಿಲ್ಲದವನು. ಮುನಿಗಳಿಂದ ಸೇವಿತನಾದವನು.

ದೇವಾಗ್ರಣೇಶ್ಶಿವಧ್ಯಾನತತ್ಪರಃ ಪರಮಃ ಪರಃ ।
ಸಾಮಗಾನಪ್ರಿಯಶ್ಶೂರಃ ಪೂರ್ಣಕೀರ್ತಿಸ್ಸುಲೋಚನಃ ॥ ೧೦೦ ॥

ಅವ್ಯಕ್ತಲಕ್ಷಣೋ ವ್ಯಕ್ತೋ ದಶಾಸ್ಯದ್ವಿಪಕೇಸರೀ ।
ಕಲಾನಿಧಿಃ ಕಳಾನಾಥಃ ಕಮಲಾನಂದವರ್ಧನಃ ॥ ೧೦೧ ॥

ಪುಣ್ಯಃ ಪುಣ್ಯಾಧಿಕಃ ಪೂರ್ಣಃ ಪೂರ್ವಃ ಪೂರಯಿತಾ ರವಿಃ ।
ಜಟಿಲಃ ಕಲ್ಮಷಧ್ವಾಂತಪ್ರಭಂಜನವಿಭಾವಸುಃ ॥ ೧೦೨ ॥

---

೧೦೦. ದೇವಶ್ರೇಷ್ಠನು. ಶಿವನಧ್ಯಾನ ಮಾಡುವುದರಲ್ಲಿ ಆಸಕ್ತನು. ಮಂಗಳವನ್ನು ಮಾಡತಕ್ಕವನು. ಎಲ್ಲರಿಗೂ ಉತ್ಕೃಷ್ಟನು. ಸಾಮಗಾನದಿಂದ ಪ್ರೀತನಾಗತಕ್ಕವನು. ವೀರನು. ತನ್ನ ಹೆಸರನ್ನು ಹೇಳಿದವರಿಗೆ ಪುಣ್ಯವನ್ನುಂಟು ಮಾಡುವವನು. ಚೆನ್ನಾಗಿರುವ ಕಣ್ಣುಗಳುಳ್ಳವನು.

೧೦೧. ಎಲ್ಲಾ ಮೂರ್ತಿಗಳ ಲಕ್ಷಣವೂ ತನ್ನಲ್ಲಿರುವುದರಿಂದ ಇವನು ಇಂತಹವನೆಂದು ಹೇಳುವ ಲಕ್ಷಣಗಳು ಗೊತ್ತಾಗದವನು. ಹತ್ತು ತಲೆಗಳುಳ್ಳ ರಾವಣನೆಂಬ ಆನೆಗೆ ಸಿಂಹದಂತಿರುವವನು. ತೇಜಸ್ಸಿಗೆ ನಿಧಿಯು. ವಿದ್ಯೆಗಳಿಗೆಲ್ಲಾ ಒಡೆಯನು. ಕಮಲೆಯೆಂಬ ಚಿಚ್ಛಕ್ತಿಗೆ ಆನಂದವನ್ನು ಹೆಚ್ಚಿಸುವವನು.

೧೦೨. ಭಕ್ತಿಯಿಂದ ಸ್ಮರಿಸಿದವರಿಗೂ ಪೂಜಿಸಿದವರಿಗೂ ಪುಣ್ಯವನ್ನು ಕೊಡುವವನು. ಪುಣ್ಯಕ್ಕಿಂತಲೂ ಹೆಚ್ಚಿನವನು. ಎಲ್ಲಾ ಇಷ್ಟಾರ್ಥಗಳನ್ನೂ ಹೊಂದಿರುವವನು. ಎಲ್ಲರಿಗಿಂತಲೂ ಮೊದಲನೆಯವನು. ಎಲ್ಲರ ಇಷ್ಟಾರ್ಥವನ್ನೂ ಪೂರ್ತಿಮಾಡುವವನು. ಆದಿತ್ಯಸ್ವರೂಪನು. ಜಟೆಯನ್ನು ಧರಿಸಿರುವವನು. ಪಾಪವೆಂಬ ಕತ್ತಲೆಯನ್ನು ನಾಶಮಾಡುವುದರಲ್ಲಿ ಸೂರ್ಯಸ್ವರೂಪನು.

ಜಯೀ ಜಿತಾರಿಸ್ಸರ್ವಾದಿಶಮನೋ ಭವಭಂಜನಃ ।
ಅಲಂಕರಿಷ್ಣುರಚಲೋ ರೋಚಿಷ್ಣುರ್ವಿಕ್ರಮೋತ್ತಮಃ ॥ ೧೦೩ ॥

ಆಶುಶ್ಶಬ್ದಪತಿಶ್ಶಬ್ದಗೋಚರೋ ರಂಜನೋ ಲಘುಃ ।
ನಿಶ್ಶಬ್ದಃ ಪುರುಷೋ ಮಾಯೀ ಸ್ಥೂಲಸ್ಸೂಕ್ಷ್ಮೋ ವಿಲಕ್ಷಣಃ ॥ ೧೦೪ ॥

ಆತ್ಮಯೋನಿರಯೋನಿಶ್ಚ ಸಪ್ತಜಿಹ್ವಃ ಸಹಸ್ರಪಾತ್ ।
ಸನಾತನತಮಃ ಸ್ರಗ್ವೀ ಪೇಶಲೋ ಜೀವಿನಾಂ ವರಃ ॥ ೧೦೫ ॥

---

೧೦೩. ಜಯವುಳ್ಳವನು. ಶತ್ರುಗಳನ್ನು ಜಯಿಸಿರುವವನು. ಎಲ್ಲಾ ಪ್ರಾಣಿಗಳಿಗೂ ಮೊದಲನೆಯವನು. ಎಲ್ಲವನ್ನೂ ಶಾಂತಮಾಡುವವನು. ಜನ್ಮದ ದುಃಖವನ್ನು ನಾಶಮಾಡುವವನು. ಅಲಂಕರಿಸಿಕೊಂಡಿರುವವನು. ಚಲಿಸದಿರುವವನು. ಅಲಂಕರಿಸಿಕೊಳ್ಳದಿದ್ದರೂ ಅಲಂಕರಿಸಿಕೊಂಡಿರುವಂತೆ ಕಾಂತಿಯುಳ್ಳವನು. ಪರಾಕ್ರಮಿಗಳಲ್ಲಿ ಬಹು ಉತ್ತಮನಾದವನು.

೧೦೪. ವೇಗಸ್ವರೂಪನು. ಶಬ್ದಗಳಿಗೆಲ್ಲಾ ಒಡೆಯನು. ವೇದವೇದಾಂತಗಳಿಂದ ತಿಳಿಯತಕ್ಕವನು. ಪ್ರೀತಿಸ್ವರೂಪನು. ಲಘುಸ್ವರೂಪನು. ಶಬ್ದವಿಲ್ಲದವನು. ಎಲ್ಲಾ ದೇಹದಲ್ಲಿಯೂ ಇರುವವನು. ಮೂಲಪ್ರಕೃತಿಯಾದ ಮಾಯೆಯನ್ನು ಅಧೀನವಾಗಿ ಉಳ್ಳವನು. ಪ್ರಪಂಚಗಳೆಲ್ಲವನ್ನೂ ತನ್ನ ದೇಹದಲ್ಲಿ ಉಳ್ಳಷ್ಟು ದೊಡ್ಡವನಾಗಿರತಕ್ಕವನು. ಎಲ್ಲಕ್ಕಿಂತಲೂ ಅಣುವಾದ ಯಾವ ಪದಾರ್ಥವಿದೆಯೋ ಅವೆಲ್ಲಕ್ಕಿಂತ ಸಣ್ಣವನು. ಸ್ಥೂಲನಾದವನು. ಸೂಕ್ಷ್ಮವಾಗಿರುವುದೂ ಸೂಕ್ಷ್ಮನಾದವನು ಸ್ಥೂಲವಾಗಿರುವುದೂ ಅಸಂಭವವು. ಸ್ವಾಮಿಯು ಅಂತಹವನು. ಆದ್ದರಿಂದ ವಿಲಕ್ಷಣನು ಎಂದರೆ ಎಲ್ಲಕ್ಕಿಂತ ಬೇರೆ ರೀತಿಯವನು

೧೦೫. ಬೇರೊಬ್ಬರಿಂದಲೂ ಜನಿಸದೆ ತನ್ನಷ್ಟಕ್ಕೆ ತಾನೇ ಜನಿಸಿದವನು. ತನಗೆ ಬೇರೊಂದೂ ಕಾರಣವಾಗಿಲ್ಲದವನು. ಕಾಳಿ ಕರಾಳಿ, ಮನೋಜವೆ, ಸುಲೋಹಿತೆ, ಸುಧೂಮ್ರವರ್ಣೆ, ಸ್ಫುಲಿಂಗಿನಿ, ವಿಶ್ವರೂಪಿಣಿ, ಎಂಬ ಹವಿಸ್ಸುಗಳನ್ನು ತಿನ್ನುವ ಏಳು ಜ್ವಾಲಾ ರೂಪವಾದ ನಾಲಿಗೆಗಳುಳ್ಳವನು. ಸಾವಿರ ಕಾಲುಗಳುಳ್ಳವನು. ಪುರಾಣಪುರುಷನು. ವೈಜಯಂತಿ ಮಾಲೆಯುಳ್ಳವನು. ಮನೋವಾಕ್ಕಾಯಗಳಿಂದ ಮಂಗಳಕರನು. ಎಲ್ಲಾ ಪ್ರಾಣಿಗಳಲ್ಲೂ ಶ್ರೇಷ್ಠನು.

ಶಕ್ತಿಮಾನ್ ಶಂಖಭೃನ್ನಾದೋ ಗದಾಖಡ್ಗರಥಾಂಗಭೃತ್ ।
ನಿರೀಹೋ ನಿರ್ವಿಕಲ್ಪಶ್ಚ ಚಿದ್ರೂಪೋ ವೀತಸಾಧ್ವಸಃ ॥ ೧೦೬ ॥

ಶತಾನನಸ್ಸಹಸ್ರಾಕ್ಷಃ ಶತಮೂರ್ತಿರ್ಘನಪ್ರಭಃ ।
ಹೃತ್ಪುಂಡರೀಕಶಯನಃ ಕಠಿನೋ ದ್ರವ ಏವ ಚ ॥ ೧೦೭ ॥

ಸೂರ್ಯೋ ಗ್ರಹಪತಿಃ ಶ್ರೀಮಾನ್ ಸಮರ್ಥೋಽನರ್ಥನಾಶನಃ ।
ಅಧರ್ಮಶತ್ರೂ ರಕ್ಷೋಘ್ನಃ ಪುರುಹೂತಃ ಪುರುಷ್ಟುತಃ ॥ ೧೦೮ ॥

---

೧೦೬. ಸೃಷ್ಟಿ ಸ್ಥಿತಿ ಸಂಹಾರ ಕಾರಣರೂಪವಾದ ಶಕ್ತಿಯುಳ್ಳವನು. ಪಾಂಚಜನ್ಯವೆಂಬ ಶಂಖವನ್ನು ಧರಿಸಿರುವವನು. ಪ್ರಣವ ಸ್ವರೂಪನು. ಕೌಮೋದಿಕಿಯೆಂಬಗದೆ, ನಂದಕವೆಂಬ ಖಡ್ಗ, ಸುದರ್ಶನವೆಂಬ ಚಕ್ರ ಇವುಗಳನ್ನುಳ್ಳವನು. ಯಾವ ಅಪೇಕ್ಷೆಯೂ ಇಲ್ಲದ ನಿತ್ಯತೃಪ್ತನು. ಭ್ರಾಂತಿಯಿಲ್ಲದವನು. ಜ್ಞಾನಸ್ವರೂಪನು. ಭಯವಿಲ್ಲದವನು.

೧೦೭. ನೂರು ಮುಖವುಳ್ಳವನು. ಸಾವಿರ ಕಣ್ಣುಗಳುಳ್ಳವನು. ನಾನಾ ಬಗೆಯಾದ ಅನೇಕ ಮೂರ್ತಿಗಳುಳ್ಳವನು. ಮೇಘದಂತೆ ನೀಲವರ್ಣನು. ಯೋಗಿಗಳ ಹೃದಯವೆಂಬ ಪುಂಡರೀಕದಲ್ಲಿರುವವನು. ಯಾರಿಂದಲೂ ಭೇದಿಸಲಾಗದಂತೆ ಇರುವವನು. ನೀರಿನಂತಿರುವವನು.

೧೦೮. ಸೂರ್ಯನೊಳಗಿರುವ ತೇಜೋರೂಪನು. ಗ್ರಹಗಳಿಗೆಲ್ಲಾ ಒಡೆಯನು. ಸಂಪತ್ತುಳ್ಳವನು. ಸರ್ವಶಕ್ತನು. ಕಷ್ಟಗಳನ್ನು ಪರಿಹರಿಸುವವನು. ಅಧರ್ಮಗಳಿಗೆ ಶತ್ರುಸ್ವರೂಪನು, ರಾಕ್ಷಸರನ್ನು ಸಂಹರಿಸುವವನು, ಯಜ್ಞಗಳಲ್ಲಿ ಬಹುಸಾರಿ ಕರೆಸಿಕೊಳ್ಳತಕ್ಕವನು. ಬಹುವಾಗಿ ಸ್ತುತಿಸಿಕೊಳ್ಳತಕ್ಕವನು.

ಬ್ರಹ್ಮಗರ್ಭೋ ಬೃಹದ್ಗರ್ಭೋ ಧರ್ಮಧೇನುರ್ಧನಾಗಮಃ ।
ಹಿರಣ್ಯಗರ್ಭೋ ಜ್ಯೋತಿಷ್ಮಾನ್ ಸುಲಲಾಟಸ್ಸುವಿಕ್ರಮಃ ॥ ೧೦೯ ॥

ಶಿವಪೂಜಾರತಶ್ಶ್ರೀಮಾನ್ ಭವಾನೀ ಪ್ರಿಯಕೃದ್ವಶೀ ।
ನರನಾರಾಯಣಾತ್ಮಾ ಚ ಕಪರ್ದೀ ನೀಲಲೋಹಿತಃ ॥ ೧೧೦ ॥

ರುದ್ರಃ ಪಶುಪತಿಃ ಸ್ಥಾಣುಃ ವಿಶ್ವಾಮಿತ್ರೋ ದ್ವಿಜೇಶ್ವರಃ ।
ಮಾತಾಮಹೋ ಮಾತರಿಶ್ವಾ ವಿರಿಂಚಿರ್ವಿಷ್ಟರಶ್ರವಾಃ ॥ ೧೧೧ ॥

---

೧೦೯. ಚತುರ್ಮುಖಬ್ರಹ್ಮನಿಗೆ ಜನಕನು. ಪ್ರಪಂಚವೆಲ್ಲನ್ನೂ ಇಟ್ಟು ಕೊಳ್ಳುವಂತಹ ದೊಡ್ಡದಾದ ಹೊಟ್ಟೆಯುಳ್ಳವನು. ಕಾಮಧೇನು ಸ್ವರೂಪನು ಅರ್ಥಶಾಸ್ತ್ರಸಹಿತನು. ಹಿರಣ್ಯಗರ್ಭರೂಪವಾದ ಅಂಡವೇ ಹೊಟ್ಟೆಯಲ್ಲಿ ಉಳ್ಳವನು. ಎಲ್ಲರೀತಿಯಾದ ಜ್ಯೋತಿಯನ್ನೂ ಉಳ್ಳವನು.

೧೧೦. ಯಾವಾಗಲೂ ಶಿವಪೂಜೆಯಲ್ಲಿಯೇ ಆಸಕ್ತಿಯುಳ್ಳವನು. ನಿತ್ಯವಾದ ಅಖಂಡವಾದ ಸಂಪತ್ತುಳ್ಳವನು. ಪಾರ್ವತಿಗೆ ಇಷ್ಟವಾದುದನ್ನು ಕೊಡುವವನು. ಇತರರಿಗೆ ಅಧೀನನಲ್ಲದವನು. ನರನೆಂಬ ಋಷಿ ಮತ್ತು ನಾರಾಯಣನೆಂಬ ಋಷಿಗಳ ಸ್ವರೂಪನು. ಜಡೆಗಳುಳ್ಳವನು. ಶಿವಸ್ವರೂಪನು.

೧೧೧. ಭಕ್ತರ ದುಃಖವನ್ನು ನಾಶಮಾಡುವವನು. ಪಶುಗಳಿಗೆ ಒಡೆಯನು. ಮಹಾಪ್ರಳಯಕಾಲದಲ್ಲಿಯೂ ಅಲ್ಲಾಡದೆ ಇರತಕ್ಕವನು ವಿಶ್ವಾಮಿತ್ರ ಋಷಿಸ್ವರೂಪನು. ಗರುಡಸ್ವರೂಪನು. ಪ್ರಜೆಗಳಿಗೆಲ್ಲಾ ಸರಸ್ವತಿಯು ತಾಯಿಯು, ಆ ಸರಸ್ವತಿಗೆ ವಿಷ್ಣುವು ತಂದೆಯಾದುದರಿಂದ ಜನಗಳಿಗೆ ಇವನು ಮಾತಾಮಹನು. ವಾಯುಸ್ವರೂಪನು. ಪ್ರಾಣಿಗಳನ್ನು ಸೃಷ್ಟಿಸುವವನು. ಪವಿತ್ರದ ಗಂಟೆನಂತಿರುವ ಕಿವಿಯುಳ್ಳವನು.

ಅಕ್ಷೋಭ್ಯಸ್ಸರ್ವಭೂತಾನಾಂ ಚಂಡಸ್ಸತ್ಯಪರಾಕ್ರಮಃ ।
ವಾಲಖಿಲ್ಯೋ ಮಹಾಕಲ್ಪಃ ಕಲ್ಪವೃಕ್ಷಃ ಕಲಾಧರಃ ॥ ೧೧೨ ॥

ನಿದಾಘತಪನೋ ಮೇಘಶ್ಶುಕ್ರಃ ಪರಬಲಾಪಹೃತ್ ।
ವಸುಶ್ರವಾಃ ಕಾವ್ಯವಾಹಃ ಪ್ರತಪ್ತೋವಿಶ್ವಭೋಜನಃ ॥ ೧೧೩ ॥

ರಾಮೋ ನೀಲೋತ್ಪಲಶ್ಯಾಮೋ ಜ್ಞಾನಸ್ಕಂದೋ ಮಹಾದ್ಯುತಿಃ ।
ಕಬಂಧಮಥನೋ ದಿವ್ಯಃ ಕಂಬುಗ್ರೀವಶ್ಶಿವಪ್ರಿಯಃ ॥ ೧೧೪ ॥

---

೧೧೨. ಯಾವುದರಿಂದಲಾದರೂ ಕಷ್ಟವಾಗಲೀ, ಸುಖವಾಗಲೀ, ಬಂದರೆ ಮನಸ್ಸನ್ನು ವ್ಯತ್ಯಾಸಮಾಡಿಕೊಳ್ಳದವನು. ಪ್ರಾಣಿಗಳೊಳಗೆಲ್ಲಾ ಸಮರ್ಥನು. ವ್ಯರ್ಥವಾಗದ ಪರಾಕ್ರಮವುಳ್ಳವನು. ವಾಲಖಿಲ್ಯ ಋಷಿಯ ಸ್ವರೂಪನು ಪ್ರಳಯಕಾಲದಲ್ಲಿ ತನ್ನನ್ನು ಬಿಟ್ಟು ಮತ್ತಾವುದನ್ನೂ ಇಲ್ಲದಿರುವಂತೆ ಮಾಡುವವನು. ಭಕ್ತರಿಗೆ ಕಲ್ಪವೃಕ್ಷದಂತೆ ಇಷ್ಟಾರ್ಥಗಳನ್ನು ಕೊಡತಕ್ಕವನು. ವಿದ್ಯಾನಿಧಿಯು.

೧೧೩. ಜಗತ್ತಿಗೆಲ್ಲಾ ಆದಿಕಾರಣನು ಶತ್ರುಸಂಹಾರಕನು ಮೇಘಸ್ವರೂಪನು. ಶುಕ್ರಗ್ರಹಸ್ವರೂಪನು. ಶತ್ರುಸೈನ್ಯವನ್ನು ನಾಶಮಾಡುವವನು. ಎಲ್ಲವನ್ನೂ ಗ್ರಹಿಸುವಂತಹ ಕಿವಿಗಳುಳ್ಳವನು. ಕಾವ್ಯದಲ್ಲೆಲ್ಲಾ ಪ್ರತಿಪಾದ್ಯನು. ತಪಸ್ಸನ್ನು ಮಾಡಿರುವವನು. ಎಲ್ಲವನ್ನೂ ತಿನ್ನುವವನು.

೧೧೪. ಶ್ರೀರಾಮ, ಪರಶುರಾಮ, ಬಲರಾಮ, ಇವರ ರೂಪನಾದವನು. ನೀಲೋತ್ಪಲದಂತೆ ಕಾಂತಿಯುಳ್ಳವನು. ಜ್ಞಾನಕ್ಕೆ ಮೂಲಭೂತನು. ಬಹುವಾದ ತೇಜಸ್ಸುಳ್ಳವನು. ಕಬಂಧನೆಂಬ ರಾಕ್ಷಸನನ್ನು ಕೊಂದವನು. ಸುಂದರನು. ಶಂಖದಂತಿರುವ ಕತ್ತುಳ್ಳವನು. ಶಿವನಿಗೆ ಬಹು ಪ್ರೀತಿಪಾತ್ರನು.

ಸುಖೋ ನೀಲಸ್ಸುನಿಷ್ಪನ್ನಸ್ಸುಲಭಶ್ಶಿಶಿರಾತ್ಮಕಃ ।
ಅಸಂಸೃಷ್ಟೋಽತಿಥಿಶ್ಶೂರಃ ಪ್ರಮಾಥೀ ಪಾಪನಾಶಕೃತ್ ॥ ೧೧೫ ॥

ಪವಿತ್ರಪಾದಃ ಪಾಪಾರಿಃ ಮಣಿಪೂರೋ ನಭೋಗತಿಃ ।
ಉತ್ತಾರಣೋ ದುಷ್ಕೃತಿಹಾ ದುರ್ಧರ್ಷೋ ದುಸ್ಸಹೋ ಬಲಃ ॥ ೧೧೬ ॥

ಅಮೃತಾಂಶೋಽಮೃತವಪುಃ ಧರ್ಮೀ ಧರ್ಮಃಕೃಪಾಕರಃ ।
ಭರ್ಗೋ ವಿವಸ್ವಾನಾದಿತ್ಯೋ ಯೋಗಾಚಾರ್ಯೋ ದಿವಸ್ಪತಿಃ ॥ ೧೧೭ ॥

---

೧೧೫. ಆನಂದಸ್ವರೂಪನು. ನೀಲವರ್ಣದವನು. ಚೆನ್ನಾಗಿ ಸಿದ್ಧಿಯಿರುವವನು. ಭಕ್ತರಿಗೆಲ್ಲಾ ಸುಲಭನು ಸಂಸಾರಿಗಳಿಗೆ ತಾಪತ್ರಯವನ್ನು ನಾಶಮಾಡಿ ತಣ್ಣಗಿರುವಂತೆ ಮಾಡುವವನು. ಒಬ್ಬರೊಡನೆ ಸೇರದವನು. ಭಕ್ತರಿಗೆ ಅತಿಥಿಯಾಗಿ ಹೋಗುವವನು. ಬಹುವಾದ ಪರಾಕ್ರಮಿಯು. ದುಷ್ಟರನ್ನು ನಾಶಮಾಡುವವನು ಪಾಪವನ್ನು ನಾಶಮಾಡುವವನು

೧೧೬. ಪರಿಶುದ್ಧವನ್ನು ಮಾಡುವ ಪಾದಗಳುಳ್ಳವನು. ಪಾಪಕ್ಕೆಲ್ಲಾ ಶತ್ರುವು. ಮಣಿಪೂರವೆಂಬರೆ ದೇಹದಲ್ಲಿರುವ ಷಟ್ಚಕ್ರಗಳಲ್ಲಿ ಒಂದು ಸ್ಥಾನವು. ಅದರಲ್ಲಿರುವವನು. ಆಕಾಶದಲ್ಲಿ ಸಂಚರಿಸುವ ಶಕ್ತಿಯುಳ್ಳವನು. ಸಂಸಾರ ಸಾಗರದಿಂದ ಮೇಲಕ್ಕೆತ್ತುವವನು. ಪಾಪಗಳನ್ನೆಲ್ಲಾ ನಾಶಮಾಡುವವನು. ದೈತ್ಯಾದಿಗಳಿಗೆ ಜಯಿಸಲು ಅಸಾಧ್ಯನಾದವನು. ಯಾವ ಪ್ರಾಣಿಗೂ ಸಹಿಸಲು ಅಸಾಧ್ಯನು. ಬಹು ಬಲಿಷ್ಠನು

೧೧೭. ಮೋಕ್ಷಕ್ಕೆ ಒಡೆಯನು. ಅಮೃತಸ್ವರೂಪನು. ಧರ್ಮವನ್ನು ಹೊಂದಿರುವವನು. ಧರ್ಮಾತ್ಮರಲ್ಲಿ ದಯೆಯುಳ್ಳವನು. ಭರ್ಗನೆಂಬ ಪರಶಿವಸ್ವರೂಪನು. ಕಾಂತಿಯುಳ್ಳವನು. ಅದಿತಿಯ ಪ್ರಾರ್ಥನೆಯಂತೆ ಅವಳಲ್ಲಿ ಹುಟ್ಟಿದವನು. ಯೋಗಾಚಾರ್ಯನಾದ ಕಪಿಲ ಮುನಿಯ ಸ್ವರೂಪನು. ಸ್ವರ್ಗಕ್ಕೆ ಒಡೆಯನು.

ಉದಾರಕೀರ್ತಿರುದ್ಯೋಗೀ ವಾಙ್ಮಯಸ್ಸದಸನ್ಮಯಃ ।
ನಕ್ಷತ್ರನೇಮೀ ನಾಕೇಶಃ ಸ್ವಾಧಿಷ್ಠಾನಷ್ಷಡಾನನಃ ॥ ೧೧೮ ॥

ಚತುರ್ವರ್ಗಫಲಂ ವರ್ಣಶಕ್ತಿತ್ರಯಫಲಂ ನಿಧಿಃ ।
ನಿಧಾನಗರ್ಭೋ ನಿರ್ವ್ಯಾಜೋ ನಿರೀಶೋ ವ್ಯಾಳಮರ್ದನಃ ॥ ೧೧೯ ॥

ಶ್ರೀವಲ್ಲಭಶ್ಶಿವಾರಂಭಃ ಶಾಂತಭದ್ರಸ್ಸಮಂಜಸಃ ।
ಭೂಶಾಯೀ ಭೂತಕೃದ್ಭೂತಿಭೂಷಣೋ ಭೂತವಾಹನಃ ॥ ೧೨೦ ॥

---

೧೧೮. ಉತ್ತಮವಾದ ಕೀರ್ತಿಯುಳ್ಳವನು. ಯಾವಾಗಲೂ ಪ್ರಯತ್ನವನ್ನು ಮಾಡುವವನು. ಬ್ರಹ್ಮಮಯವಾದ ವಾಕ್ಕುಳ್ಳವನು. ಒಳ್ಳೆಯದು ಮತ್ತು ಕೆಟ್ಟದ್ದು ಇವುಗಳ ರೂಪವಾದವನು. ನಕ್ಷತ್ರಗಳಿಗೆ ಧ್ರುವನಂತಿರುವವನು. ಸ್ವರ್ಗಕ್ಕೆಲ್ಲಾ ಅಪ್ಪಣೆಮಾಡುವವನು. ದೇಹದ ಷಟ್ಚಕ್ರಗಳಲ್ಲಿ ಒಂದಾದ ಅಧಿಷ್ಠಾನವೆಂಬ ಚಕ್ರದಲ್ಲಿ ಷಡಕ್ಷರ ಮಂತ್ರರೂಪವಾಗಿರುವವನು. ಷಣ್ಮುಖಸ್ವರೂಪನು.

೧೧೯. ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವರ್ಗಗಳಿಗೆ ಫಲರೂಪನು. ಇಚ್ಛಾಶಕ್ತಿ ಜ್ಞಾನಶಕ್ತಿ ಕ್ರಿಯಾಶಕ್ತಿಗಳಿಗೆ ಫಲವಾದ ವಿಜ್ಞಾನ ಸ್ವರೂಪನು. ವಿಧಿಸ್ವರೂಪನು. ನವನಿಧಿಗಳನ್ನೂ ಹೊಟ್ಟೆಯಲ್ಲಿ ಉಳ್ಳವನು. ಕಪಟೆಯಲ್ಲದವನು. ತನಗೆ ಅಪ್ಪಣೆ ಮಾಡುವ ಅಧಿಕಾರಿಗಳಿಲ್ಲದವನು. ಕಾಳಿಂಗ ಸರ್ಪವನ್ನು ಮರ್ದಿಸಿದವನು.

೧೨೦. ಲಕ್ಷ್ಮೀದೇವಿಗೆ ಕಾಂತನು. ಮಂಗಳವನ್ನುಂಟುಮಾಡುವವನು. ಶಮೆಯೂ ಮಂಗಳವೂ ಉಳ್ಳವನು. ಉತ್ತಮನು. ವ್ರತಗಳಿಗೋಸ್ಕರ ಭೂಮಿಯಲ್ಲಿ ಮಲಗಿದ್ದವನು. ಎಲ್ಲಾ ಪ್ರಾಣಿಗಳನ್ನೂ ಸೃಷ್ಟಿಸಿದವನು. ಐಶ್ವರ್ಯದಿಂದ ಅಲಂಕೃತನು. ಎಲ್ಲಾ ಭೂತಗಳ ರಕ್ಷಣೆಯನ್ನೂ ವಹಿಸಿರುವವನು.

ಅಕಾಯೋ ಭಕ್ತಕಾಯಸ್ಥಃ ಕಾಲಜ್ಞಾನೀ ಮಹಾಪಟುಃ ।
ಪರಾರ್ಥವೃತ್ತಿರಚಲೋ ವಿವಿಕ್ತಃ ಶ್ರುತಿಸಾಗರಃ ॥ ೧೨೧ ॥

ಸ್ವಭಾವಭದ್ರೋ ಮಧ್ಯಸ್ಥಃ ಸಂಸಾರಭಯನಾಶನಃ ।
ವೇದ್ಯೋ ವೇದ್ಯೋ ವಿಯದ್ಗೋಪ್ತಾ ಸರ್ವಾಮರಮುನೀಶ್ವರಃ ॥ ೧೨೨ ॥

ಸುರೇಂದ್ರಃ ಕಾರಣಂ ಕರ್ಮಕರಃ ಕರ್ಮೀ ಹ್ಯಧೋಕ್ಷಜಃ ।
ಧೈರ್ಯೋಽಗ್ರಧುರ್ಯೋ ಧಾತ್ರೀಶಸ್ಸಂಕಲ್ಪಶ್ಶರ್ವರೀಪತಿಃ ॥ ೧೨೩ ॥

---

೧೨೧. ಶರೀರವಿಲ್ಲದೆ ನಿರಾಕಾರನಾದವನು. ಭಕ್ತರ ದೇಹದಲ್ಲಿ ಅವರ ಉಪಾಸ್ಯ ದೇವತೆಯ ರೂಪದಲ್ಲಿರುವವನು. ತ್ರಿಕಾಲಜ್ಞಾನವುಳ್ಳವನು. ಬಹು ಸಮರ್ಥನು. ಪರರ ಉಪಕಾರವೇ ತನಗೆ ಪ್ರಯೋಜನವಾಗಿ ಉಳ್ಳವನು. ಚಲಿಸದೆ ಸ್ಥಿರವಾಗಿರುವವನು. ಎಲ್ಲರಲ್ಲಿಯೂ ಬೇರೆಬೇರೆ ರೀತಿಯಾಗಿರುವವನು. ವೇದಗಳೆಂಬುವುಗಳಿಗೆ ಸ್ಥಾನನು.

೧೨೨. ಸಹಜವಾಗಿ ಮಂಗಳಸ್ವರೂಪನು. ಎಲ್ಲರಿಗೂ ಮಧ್ಯಸ್ಥಿಕೆಯಿಂದಿರುವವನು. ಜನನಮರಣರೂಪವಾದ ದುಃಖಪ್ರವಾಹವೆಂಬ ಭಯವನ್ನೇ ನಾಶಮಾಡುವವನು. ವೇದಸ್ವರೂಪನು. ಮೋಕ್ಷಾರ್ಥಿಗಳು ತಿಳಿಯುವಂತಿರುವವನು. ಆಕಾಶದಲ್ಲಿರುವವರನ್ನೆಲ್ಲಾ ಕಾಪಾಡುವವನು. ದೇವಮುನಿಗಳಿಗೆಲ್ಲಾ ಒಡೆಯನು.

೧೨೩. ದೇವತೆಗಳಿಗೆ ಇಂದ್ರನು. ಜಗತ್ತಿನ ಉತ್ಪತ್ತಿಗೆ ಕಾರಣನು. ಜಗದ್ವ್ಯಾಪಾರ ರೂಪವಾದ ಕರ್ಮಗಳನ್ನು ಮಾಡತಕ್ಕವನು. ಕರ್ಮಸಾಕ್ಷಿಯಾಗಿ ಎಲ್ಲವನ್ನೂ ಕಾಪಾಡತಕ್ಕವನು. ಯಾವಾಗಲೂ ಕಡಿಮೆಯಾಗದವನು. ಧೈರ್ಯವುಳ್ಳವನು. ಎಲ್ಲಾ ಪ್ರಾಣಿಗಳಿಗೂ ಮುಂದೆ ಹೋಗತಕ್ಕವನು. ಭೂಮಿಗೆ ಒಡೆಯನು. ಎಲ್ಲಾ ಪ್ರಾಣಿಗಳಲ್ಲಿಯೂ, ಅಂತರಂಗದಲ್ಲಿ ಇದ್ದುಕೊಂಡು ಅವುಗಳಿಗೆ ಸ್ವೇಚ್ಛೆಯನ್ನು ಹುಟ್ಟಿಸುವವನು. ರಾತ್ರಿಗೆ ಒಡೆಯನಾದ ಚಂದ್ರಸ್ವರೂಪನು.

ಪರಮಾರ್ಥಗುರುರ್ವೃಷ್ಟಿಃ ರುಚಿರಾಶ್ರಿತವತ್ಸಲಃ ।
ವಿಷ್ಣುರ್ಜಿಷ್ಣುರ್ಯಜ್ಞವಿಭುರ್ಯಜ್ಞೇಶೋ ಯಜ್ಞಪಾವಕಃ ॥ ೧೨೪ ॥

ಮಹಾವಿಷ್ಣುರ್ಗ್ರಸಿಷ್ಣುಶ್ಚ ಲೋಕಾತ್ಮಾ ಲೋಕಪಾವಕಃ ।
ಕೇಶವಃ ಕೇಶಿಹಾ ಕಾವ್ಯಃ ಕವಿಃ ಕಾರಣಕಾರಣಂ ॥ ೧೨೫ ॥

ಕಾಲಕರ್ತಾ ಕಾಲಶೇಷೋ ವಾಸುದೇವಃ ಪುರುಷ್ಟುತಃ ।
ಆದಿಕರ್ತಾ ವರಾಹಶ್ಚ ವಾಮನೋ ಮಧುಸೂದನಃ ॥ ೧೨೬ ॥

---

೧೨೪. ವೇದಾಂತ ವಿದ್ಯೆಗೆ ಗುರುವು. ವೃಷ್ಟಿಸ್ವರೂಪನು. ಮನೋವಾಕ್ಕಾಯಗಳಿಂದ ನೀನೇ ಗತಿಯೆಂದು ಆಶ್ರಯಿಸಿರುವವರಲ್ಲಿ ಪ್ರೀತಿಯುಳ್ಳವನು. ವ್ಯಾಪಕರೂಪವಾದ ಪರಬ್ರಹ್ಮವು ಜಯಶೀಲನು. ಯಜ್ಞಗಳಿಗೆ ಒಡೆಯನು. ಯಜ್ಞನಿಯಾಮಕನು. ಯಜ್ಞವನ್ನು ಪಾವನಮಾಡತಕ್ಕವನು.

೧೨೫. ತ್ರಿಮೂರ್ತಿಗಳನ್ನು ಅತಿಕ್ರಯಿಸಿದ ಮಹಾವಿಷ್ಣುವಿನ ರೂಪನು ಎಲ್ಲವನ್ನೂ ತಿಂದುಬಿಡುವ ಸಂಹಾರಕ ಸ್ವರೂಪನು. ಜಗತ್ಸ್ವರೂಪನು. ಲೋಕಕ್ಕೆಲ್ಲಾ ಪ್ರಳಯಕಾಲದ ಅಗ್ನಿಯಾಗಿರುವವನು. ಸೂರ್ಯನ ಸಂಕ್ರಾಂತಿಯಲ್ಲಿ ಕೇಶವ ಸಂಜ್ಞೆಯುಳ್ಳವನು. ಕೇಶಿಯೆಂಬ ರಾಕ್ಷಸನನ್ನು ಕೊಂದವನು. ಕವಿಯಿಂದ ಹೊಗಳಲ್ಪಡುವವನು. ಎಲ್ಲಾ ಕಡೆಯುಲ್ಲಿಯೂ ಕಣ್ಣುಳ್ಳವನು. ಪ್ರಪಂಚ ಸೃಷ್ಟಿಗೆ ಕಾರಣವಾದ ಪಂಚಭೂತಗಳಿಗೂ ಕಾರಣನಾದವನು.

೨೬. ಕಾಲಕ್ಕೆ ಸೃಷ್ಟಿಕರ್ತನು. ಕಾಲಕ್ಕಿಂತಲೂ ಅತೀತನು. ಸೂರ್ಯನಂತೆ ತನ್ನ ಶಕ್ತಿಯಿಂದ ಪ್ರಪಂಚವನ್ನು ಆವರಿಸಿರುವುದರಿಂದ ವಾಸುದೇವನು. ಹೆಚ್ಚಿನ ಸ್ತೋತ್ರವನ್ನು ಹೊಂದತಕ್ಕವನು. ಪ್ರಪಂಚಕ್ಕೆ ಮೂಲಕಾರಣನು. ವರಹಾವತಾರಿಯು. ವಾಮನಾವತಾರಿಯು. ಮಧುವೆಂಬ ರಾಕ್ಷಸನನ್ನು ಕೊಂದವನು.

ನಾರಾಯಣೋ ನರೋ ಹಂಸೋ ವಿಷ್ವಕ್ಸೇನೋ ಜನಾರ್ದನಃ ।
ವಿಶ್ವಕರ್ತಾ ಮಹಾಯಜ್ಞೋ ಜ್ಯೋತಿಷ್ಮಾನ್ ಪುರುಷೋತ್ತಮಃ ॥೧೨೭॥

ವೈಕುಂಠಃ ಪುಂಡರೀಕಾಕ್ಷಃ ಕೃಷ್ಣಸ್ಸೂರ್ಯಸ್ಸುರಾರ್ಚಿತಃ ।
ನಾರಸಿಂಹೋ ಮಹಾಭೀಮವಜ್ರದಂಷ್ಟ್ರ ನಖಾಯುಧಃ ॥ ೧೨೮ ॥

ಆದಿದೇವೋ ಜಗತ್ಕರ್ತಾ ಯೋಗೀಶೋ ಗರುಡಧ್ವಜಃ ।
ಗೋವಿಂದೋ ಗೋಪತಿರ್ಗೋಪ್ತಾ ಭೂಪತಿರ್ಭುವನೇಶ್ವರಃ ॥ ೧೨೯ ॥

---

೧೨೭. ಎಲ್ಲಾ ಪ್ರಪಂಚವನ್ನೂ ಒಳಗೂ, ಹೊರಗೂ ವ್ಯಾಪಿಸಿಕೊಂಡಿರುವವನು. ನರನೆಂಬ ಋಷಿಯ ಸ್ವರೂಪನು. ಹಂಸವೆಂಬ ತತ್ವಸ್ವರೂಪನು. ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿರುವವನು. ಜನಗಳನ್ನು ಪೀಡಿಸುವವನು, ಎಲ್ಲಕ್ಕೂ ಕರ್ತೃವು. ಮಹಾಯಜ್ಞಸ್ವರೂಪನು. ಸೂರ್ಯನೇ ಮುಂತಾದ ಜ್ಯೋತಿಸ್ಸನ್ನು ಹೊಂದಿರುವವನು. ಸಮಸ್ತ ದೇವರುಗಳಲ್ಲಿಯೂ ಅಂತರ್ಯಾಮಿಯಾಗಿರತಕ್ಕವನು.

೧೨೮. ವಿಕುಂಠಳೆಂಬುವಳ ಮಗನು ಪುಂಡರೀಕದಂತೆ ಕಣ್ಣುಗಳುಳ್ಳವನು. ಗೀತಾಚಾರ್ಯನಾದ ಕೃಷ್ಣನು. ರವಿಮಂಡಲದ ತೇಜಸ್ವರೂಪನು. ದೇವತೆಗಳಿಗೆ ಪೂಜ್ಯನು. ನರ ಮತ್ತು ಸಿಂಹದ ರೂಪವಾದ ಅವತಾರಮಾಡಿರುವವನು. ಬಹು ಭಯಂಕರವಾದ ವಜ್ರದಂತಿರುವ ಕೋರೆಹಲ್ಲೂ, ಉಗುರುಗಳೂ ಆಯುಧವಾಗಿ ಉಳ್ಳವನು.

೧೨೯. ಎಲ್ಲಕ್ಕಿಂತಲೂ ಮೊದಲಿನ ದೇವನು. ಪ್ರಪಂಚಕ್ಕೆಲ್ಲಾ ಕರ್ತೃವಾದವನು. ನಿರ್ವಿಕಲ್ಪ ಸಮಾಧಿಯುಳ್ಳವನು, ಗರುಡನೇ ಧ್ವಜದಲ್ಲಿ ಉಳ್ಳವನು. ಗೋವುಗಳ ರೂಪವಾಗಿ ಅವತರಿಸಿದ ವೇದವಾಕ್ಕುಗಳನ್ನು ಕಾಯುತ್ತಿದ್ದವನು ಗೋಪಾಲರಿಗೆ ಒಡೆಯನು. ಎಲ್ಲಾ ಪ್ರಾಣಿಗಳನ್ನು ಕಾಪಾಡುವವನು. ಭೂದೇವಿಗೆ ಒಡೆಯನು. ಲೋಕಗಳಿಗೆಲ್ಲಾ ಒಡೆಯನು.

ಪದ್ಮನಾಭೋ ಹೃಷೀಕೇಶೋ ಧಾತಾ ದಾಮೋದರಃ ಪ್ರಭುಃ ।
ತ್ರಿವಿಕ್ರಮಸ್ತ್ರಿಲೋಕೇಶೋ ಬ್ರಹ್ಮೇಶಃ ಪ್ರೀತಿವರ್ಧನಃ ॥ ೧೩೦ ॥

ಸನ್ಯಾಸೀ ಶಾಸ್ತ್ರತತ್ವಜ್ಞೋ ಮಂದರಾದ್ರಿನಿಕೇತನಃ ।
ವಾಮನೋ ದುಷ್ಟದಮನೋ ಗೋವಿಂದೋ ಗೋಪವಲ್ಲಭಃ ॥ ೧೩೧ ॥

ಭಕ್ತಪ್ರಿಯೋಽಚ್ಯುತಸ್ಸತ್ಯ ಸ್ಸತ್ಯಕೀರ್ತಿಃ ಧೃತಿಸ್ಮೃತಿಃ ।
ಕಾರುಣ್ಯಃ ಕರುಣೋ ವ್ಯಾಸೋ ಪಾಪಹಾ ಶಾಂತಿವರ್ಧನಃ ॥ ೧೩೨ ॥

---

೧೩೦. ಜಗತ್ತಿಗೆ ಕಾರಣವಾದ ಪದ್ಮವನ್ನು ಹೊಕ್ಕಳಿನಲ್ಲಿ ಉಳ್ಳವನು, ಇಂದ್ರಿಯಗಳಿಗೆ ಒಡೆಯನು. ಎಲ್ಲವನ್ನೂ ಧರಿಸಿರುವವನು. ತುಲಸೀಮಾಲೆಯನ್ನು ಉದ್ದವಾಗಿ ಹೊಟ್ಟೆಯಮೇಲೆ ಹಾಕಿಕೊಂಡಿರುವವನು. ಸ್ವಾಮಿಯು. ಬಲಿಬಂಧನಕಾಲದಲ್ಲಿ ಮೂರು ಲೋಕವನ್ನೂ ಆಕ್ರಮಿಸುವಂತೆ ಅವತರಿಸಿದವನು. ಸ್ವರ್ಗ ಮರ್ತ್ಯ ಪಾತಾಳಗಳಿಗೆ ಒಡೆಯನು. ಚತುರ್ಮುಖ ಬ್ರಹ್ಮನಿಗೆ ಒಡೆಯನು. ಭಕ್ತರಿಗೆ ಪ್ರೀತಿಯನ್ನು ಹೆಚ್ಚಿಸುವವನು.

೧೩೧. ಯತಿಸ್ವರೂಪನು. ಎಲ್ಲಾ ಶಾಸ್ತ್ರಗಳ ತತ್ವಗಳನ್ನೂ ಬಲ್ಲವನು. ಸಮುದ್ರ ಮಥನಕಾಲದಲ್ಲಿ ಕೂರ್ಮಾವತಾರವನ್ನು ಮಾಡಿ ಮಂದರ ಪರ್ವತವನ್ನು ಧರಿಸಿದವನು. ಕಶ್ಯಪನ ಮಗನಾಗಿ ವಾಮನನಾಗಿ ಅವತರಿಸಿದವನು. ಖಲರನ್ನು ಸಂಹರಿಸಿದವನು. ಭೂಮಿಯನ್ನೂ ಗೋವುಗಳನ್ನೂ ಹೊಂದಿರುವವನು. ಗೋಪಾಲಕರಿಗೆ ಪ್ರಿಯನು.

೧೩೨. ಭಕ್ತಿಯೋಗದಲ್ಲಿ ಪ್ರೀತಿಯುಳ್ಳವನು. ನಾಶರಹಿತನು. ಸತ್ಯವೇ ಸ್ವರೂಪನಾಗಿ ಉಳ್ಳವನು. ಸತ್ಯವಾದ ಕೀರ್ತಿಯುಳ್ಳವನು. ಧೈರ್ಯಸ್ವರೂಪನು. ಸ್ಮೃತಿಸ್ವರೂಪನು. ದಯಾಸ್ವರೂಪನು. ಕರುಣೆಯ ಸ್ವರೂಪನು. ವೇದವ್ಯಾಸ ಸ್ವರೂಪನು. ಪಾಪವನ್ನು ಪರಿಹರಿಸುವವನು. ಇಂದ್ರಿಯಗಳ ಉಪರತಿರೂಪವಾದ ಶಾಂತಿಯನ್ನು ಹೆಚ್ಚಿಸುವವನು.

ಬದರೀನಿಲಯಶ್ಶಾಂತಸ್ತಪಸ್ವೀ ವೈದ್ಯುತಪ್ರಭುಃ ।
ಭೂತವಾಸೋ ಮಹಾವಾಸಶ್ಶ್ರೀನಿವಾಸಶ್ಶ್ರಿಯಃ ಪತಿಃ ॥ ೧೩೩ ॥

ತಪೋವಾಸೋ ಮುದಾವಾಸಸ್ಸತ್ಯವಾಸಸ್ಸನಾತನಃ ।
ಪುರುಷಃ ಪುಣ್ಯವಾನ್ ಪುಣ್ಯಃ ಪುಷ್ಕರಾಕ್ಷೋ ಮಹೇಶ್ವರಃ ॥ ೧೩೪ ॥

ಪುಣ್ಯಮೂರ್ತಿಃ ಪುರಾಣಜ್ಞಃ ಪುಣ್ಯದಃ ಪ್ರೀತಿವರ್ಧನಃ ।
ಪೂರ್ಣರೂಪಃ ಕಾಲಚಕ್ರಪ್ರವರ್ತನಸ್ಸಮಾಹಿತಃ ॥ ೧೩೫ ॥

---

೧೩೩. ಹಿಮಾಲಯದ ಬಳಿಯಿರುವ ಬದರಿಕಾಶ್ರಮವೇ ಮನೆಯಾಗಿ ಉಳ್ಳವನು. ಸರ್ವವ್ಯಾಪಕನಾಗಿದ್ದರೂ ಅರಣಿಯಲ್ಲಿರುವ ಅಗ್ನಿಯಂತೆ ಶಾಂತವಾಗಿರುವವನು. ನರನಾರಾಯಣ ಅವತಾರದಲ್ಲಿ ತಪಸ್ಸನ್ನು ಮಾಡಿ ತಪಸ್ವಿಯಾದವನು. ಮಿಂಚಿನಲ್ಲಿರುವ ಕಾಂತಿಗೆ ಉತ್ಪತ್ತಿಸ್ಥಾನನು ಸಮಸ್ತ ಭೂತಗಳಲ್ಲಿಯೂ ವಾಸಿಸುವವನು. ಮಹಾತ್ಮರಿಗೆಲ್ಲಾ ವಾಸಸ್ಥಾನನು. ಶ್ರೀಮಂತರಲ್ಲಿ ನಿತ್ಯವೂ ವಾಸಿಸುವವನು. ಲಕ್ಷ್ಮಿಗೆ ಒಡೆಯನು.

೧೩೪. ತಪಸ್ಸಿಗೆಲ್ಲಾ ವಾಸಸ್ಥಾನನು. ಸಂತೋಷಕ್ಕೆ ಸ್ಥಾನನು. ಸತ್ಯದಲ್ಲಿಯೇ ಇರತಕ್ಕವನು. ಪುರಾಣ ಪುರುಷನು, ಪರಬ್ರಹ್ಮ ಸ್ವರೂಪನು. ಎಲ್ಲಾ ಪುಣ್ಯಕ್ಕೂ ಆಶ್ರಯನು. ಪುಣ್ಯಸ್ವರೂಪನು. ಕಮಲದಂತೆ ಕಣ್ಣುಗಳುಳ್ಳವನು. ಒಬ್ಬರ ತೊಂದರೆಯೂ ಕಾರಣವೂ ಇಲ್ಲದ ಐಶ್ವರ್ಯವನ್ನು ಹೊಂದಿರುವವನು.

೧೩೫. ಪುಣ್ಯದ ಸ್ವರೂಪನು. ಎಲ್ಲಾ ಪುರಾಣಗಳಲ್ಲಿಯೂ ತತ್ವಾರ್ಥ ಸ್ವರೂಪನಾಗಿ ತಿಳಿಯತಕ್ಕವನು. ಪ್ರಾಣಿಗಳಿಗೆ ಧರ್ಮಕಾರ್ಯಕ್ಕೆ ಪುಣ್ಯವನ್ನು ಕೊಡುವವನು. ಭಕ್ತರಿಗೆ ಪ್ರೀತಿಯನ್ನು ಹೆಚ್ಚಿಸುವವನು. ಬೇರೆ ಬೇರೆಯಾಗದ ಮೂರ್ತಿಯುಳ್ಳವನು. ತಿಳಿಯಲು ಅಸಾಧ್ಯವೂ ಅಪಾರವೂ ಆದ ಕಾಲಚಕ್ರವನ್ನು ನಡೆಸುವವನು. ಒಂದೇ ರೀತಿಯಾಗಿ ಬುದ್ಧಿಯನ್ನು ಇಟ್ಟುಕೊಂಡಿರುವವನು.

ನಾರಾಯಣಃ ಪರಂಜ್ಯೋತಿಃ ಪರಮಾತ್ಮಾ ಸದಾಶಿವಃ |
ಶಂಖೀ ಚಕ್ರೀ ಗದೀ ಶಾಂಗಿರ್ೀ ಲಾಂಗಲೀ ಮುಸಲೀ ಹಲೀ || ೧೩೬ ||

ಕಿರೀಟೀ ಕುಂಡಲೀ ಹಾರೀ ಮೇಖಲೀ ಕವಚೀ ಧ್ವಜೀ |
ಯೋಧಜೇತಾ ಮಹಾವೀರ್ಯಶ್ಶತ್ರುಘ್ನಶ್ಶತ್ರುತಾಪನಃ || ೧೩೭ ||

ಶಾಸ್ತಾ ಶಾಸ್ತ್ರಕರಃ ಶಾಸ್ತ್ರಂ ಶಂಕರಶ್ಶಂಕರಸ್ತುತಃ |
ಸಾರಥೀ ಸಾತ್ವಿಕಸ್ವಾಮೀ ಸಾಮವೇದಪ್ರಿಯಸ್ತಥಾ || ೧೩೮ ||

---

೧೩೬. ಅವತಾರದಲ್ಲಿ ನರರ ಶರೀರವನ್ನು ಹೊಂದಿರುವವನು. ಪ್ರಕಾಶ ಸ್ವರೂಪನು. ಪರಮಾತ್ಮಸ್ವರೂಪನು. ಸೃಷ್ಟಿಯ ಆದ್ಯಂತಮಧ್ಯಗಳಲ್ಲಿರತಕ್ಕವನು. ಪಾಂಚಜನ್ಯವೆಂಬ ಶಂಖವುಳ್ಳವನು. ಸುದರ್ಶನವೆಂಬ ಚಕ್ರವುಳ್ಳವನು. ಕೌಮೋದಕೀ ಎಂಬ ಗದೆಯುಳ್ಳವನು ಶಾಂರ್ಗವೆಂಬ ಧನುಸ್ಸುಳ್ಳವನು. ಲಾಂಗಲವೆಂಬ ನೇಗಿಲಿನಂತಿರುವ ಆಯುಧವುಳ್ಳವನು. ಮುಸಲವೆಂಬ ಆಯುಧವುಳ್ಳವನು. ಹಲಾಯುಧವುಳ್ಳವನು.

೧೩೭. ಕಿರೀಟವನ್ನು ಹಾಕಿಕೊಂಡಿರುವವನು. ದಿವ್ಯವಾದ ಕರ್ಣಾಭರಣವನ್ನು ಹಾಕಿಕೊಂಡಿರುವವನು. ವಾಮನಾವತಾರದಲ್ಲಿ ಉತ್ತಮವಾದ ಉಡಿದಾರವನ್ನು ಹಾಕಿಕೊಂಡಿರುವವನು. ದಿವ್ಯವಾದ ಕವಚವನ್ನು ಹಾಕಿಕೊಂಡಿರುವವನು, ಗರುಡ ಹನುಮಂತ ಮುಂತಾದ ಧ್ವಜವುಳ್ಳವನು. ಯುದ್ಧದಲ್ಲಿ ಭಟರನ್ನು ಜಯಿಸುವವನು. ಅವಿದ್ಯಾರೂಪವಾದ ವೀರ್ಯವುಳ್ಳವನು. ಶತ್ರುಸಂಹಾರಕನು. ಶತ್ರುಗಳು ತಪಿಸುವಂತೆ ಮಾಡುವವನು.

೧೩೮. ಶ್ರುತಿ ಸ್ಮೃತಿ ಸ್ವರೂಪವಾದ ನಿಯಮಗಳಿಂದ ಶಿಕ್ಷಕನು. ಎಲ್ಲಾ ಶಾಸ್ತ್ರಗಳನ್ನೂ ಮಾಡಿದವನು. ಶಾಸ್ತ್ರಗಳ ಸ್ವರೂಪನು. ಸುಖವನ್ನು ಮಾಡುವವನು. ಶಿವನಿಂದ ಸ್ತುತಿಸಿಕೊಂಡವನು. ದೇಹವೆಂಬ ರಥದಲ್ಲಿ ಕುಳಿತು ಇಂದ್ರಿಯಗಳೆಂಬ ಅಶ್ವಗಳನ್ನು ನಡೆಸುವವನು. ಸಜ್ಜನರಿಗೆಲ್ಲಾ ಒಡೆಯನು. ಸಾಮವೇದದ ಗಾನದಲ್ಲಿ ಬಹು ಇಷ್ಟವುಳ್ಳವನು.

ಪವನಸ್ಸಂಹತಶ್ಶಕ್ತಿಃ ಸಂಪೂರ್ಣಾಂಗಸ್ಸಮೃದ್ಧಿಮಾನ್ ।
ಸ್ವರ್ಗದಃ ಕಾಮದಃ ಶ್ರೀದಃ ಕೀರ್ತಿದಃ ಕೀರ್ತಿದಾಯಕಃ ॥ ೧೩೯ ॥

ಮೋಕ್ಷದಃ ಪುಂಡರೀಕಾಕ್ಷಃ ಕ್ಷೀರಾಬ್ಧಿಕೃತಕೇತನಃ ।
ಸರ್ವಾತ್ಮಾ ಸರ್ವಲೋಕೇಶಃ ಪ್ರೇರಕಃ ಪಾಪನಾಶನಃ ॥ ೧೪೦ ॥

ವೈಕುಂಠಃ ಪುಂಡರೀಕಾಕ್ಷಃ ಸರ್ವದೇವನಮಸ್ಕೃತಃ ।
ಸರ್ವವ್ಯಾಪೀ ಜಗನ್ನಾಥಃ ಸರ್ವಲೋಕಮಹೇಶ್ವರಃ ॥ ೧೪೧ ॥

---

೧೩೯. ವಾಯು ಸ್ವರೂಪನು, ಒಟ್ಟುಗೂಡಿಕೊಂಡು ಬಲವಾಗಿರುವವನು, ಶಕ್ತಿಸ್ವರೂಪನು, ವ್ಯೆಕಟ್ಟಿಕೊಂಡು ಎಲ್ಲೆಡೆಯಲ್ಲಿಯೂ ಪೂರ್ಣನಾಗಿರುವವನು, ತುಂಬಿದ ಐಶ್ವರ್ಯವುಳ್ಳವನು, ಸ್ವರ್ಗವನ್ನು ಕೊಡುವವನು, ಭಕ್ತರಿಗೆ ಇಷ್ಟವನ್ನು ಕೊಡುವವನು, ಭಕ್ತರಿಗೆ ಸಂಪತ್ತನ್ನು ಕೊಡುವವನು, ಭಕ್ತರಿಗೆ ಕೀರ್ತಿಯನ್ನು ಕೊಡುವವನು, ಕೀರ್ತಿಯನ್ನು ಕೊಡಿಸುವವನು.

೧೪೦. ಮೋಕ್ಷವನ್ನು ಕೊಡತಕ್ಕವನು, ಪುಂಡರೀಕದಂತೆ ಕಣ್ಣುಗಳುಳ್ಳವನು, ಕ್ಷೀರಸಮುದ್ರವನ್ನು ಮನೆಯನ್ನಾಗಿ ಮಾಡಿಕೊಂಡಿರುವವನು, ಸರ್ವಸ್ವರೂಪನು, ಸಮಸ್ತ ಲೋಕಕ್ಕೂ ಒಡೆಯನು, ಅಂತರ್ಯಾಮಿಯಾಗಿದ್ದುಕೊಂಡು ಎಲ್ಲಾ ಪ್ರಾಣಿಗಳನ್ನೂ ಪ್ರೇರಿಸುವವನು, ಭಕ್ತರ ಪಾಪವನ್ನು ನಾಶಮಾಡುವವನು.

೧೪೧. ವಿಕುಂಠಳಿಗೆ ಮಗನಾದವನು, ಹೃದಯ ಕಮಲದಲ್ಲಿ ವ್ಯಾಪಿಸಿರುವವನು, ಎಲ್ಲಾ ದೇವತೆಗಳಿಂದಲೂ ನಮಸ್ಕೃತನಾದವನು, ಎಲ್ಲದರಲ್ಲಿಯೂ ತುಂಬಿರುವವನು, ಪ್ರಪಂಚಕ್ಕೆಲ್ಲಾ ಒಡೆಯನು, ಎಲ್ಲಾ ಲೋಕಗಳಿಗೂ ಮುಖ್ಯನಾದ ಸ್ವಾಮಿಯು.

ಸರ್ಗಸ್ಥಿತ್ಯಂತಕೃದ್ದೇವಃ ಸರ್ವಲೋಕಸುಖಾವಹಃ ।
ಅಕ್ಷಯಶ್ಶಾಶ್ವತೋನಂತಃ ಕ್ಷಯವೃದ್ಧಿವಿವರ್ಜಿತಃ ॥ ೧೪೨ ॥

ನಿರ್ಲೇಪೋ ನಿರ್ಗುಣಸ್ಸೂಕ್ಷ್ಮೋ ನಿರ್ವಿಕಾರೋ ನಿರಂಜನಃ ।
ಸರ್ವೋಪಾಧಿ ವಿನಿರ್ಮುಕ್ತಃ ಸತ್ತಾಮಾತ್ರವ್ಯವಸ್ಥಿತಃ ॥ ೧೪೩ ॥

ಅವಿಕಾರೀ ವಿಭುರ್ನಿತ್ಯಃ ಪರಮಾತ್ಮಾ ಸನಾತನಃ ।
ಅಚಲೋ ನಿಶ್ಚಲೋ ವ್ಯಾಪೀ ನಿತ್ಯತೃಪ್ತೋ ನಿರಾಶ್ರಯಃ ॥ ೧೪೪ ॥

---

೧೪೨. ಸೃಷ್ಟಿ, ಸ್ಥಿತಿ, ನಾಶಗಳನ್ನು ಮಾಡುವವನು. ಎಲ್ಲಾ ಲೋಕಗಳಿಗೂ ಸುಖವನ್ನುಂಟುಮಾಡುವವನು. ನಾಶರಹಿತನು. ಸ್ಥಿರನು. ಯಾವ ವಿಷಯದಲ್ಲಿಯೂ ಕೊನೆಯೇ ಇಲ್ಲದವನು. ಹೆಚ್ಚು ಕಡಿಮೆಗಳನ್ನು ಹೊಂದದವನು.

೧೪೩. ಪ್ರಪಂಚದ ಸಂಗವನ್ನು ಹೊಂದದವನು. ಸ್ವಭಾವವಾಗಿ ಗುಣಗಳಿಲ್ಲದವನು. ಎಲ್ಲರಲ್ಲಿಯೂ ಸೇರಿರುವವನು. ಪ್ರಪಂಚದ ಸಂಬಂಧವಾದ ವಿಕಾರವಿಲ್ಲದವನು. ದೋಷರಹಿತನು. ಯಾವ ವಿಧವಾದ ತೊಂದರೆಯನ್ನೂ ಹೊಂದದವನು. ಇಲ್ಲವೆಂದು ಹೇಳಲು ಸಾಧ್ಯವಾಗದಂತೆಯೂ ಇದೆ ಎಂದು ಹೇಳಲು ಆಗುವಂತೆಯೂ ಇರತಕ್ಕವನು.

೧೪೪. ಸ್ಥೂಲ, ಸೂಕ್ಷ್ಮ, ವೃದ್ಧಿ, ಕ್ಷಯ, ಹ್ರಸ್ವ, ದೀರ್ಘಗಳೆಂಬ ಆರು ವಿಕಾರಗಳಿಲ್ಲದವನು. ಸರ್ವಸ್ವತಂತ್ರನು. ಭೂತ ಭವಿಷ್ಯತ್ತು ವರ್ತಮಾನಗಳೆಂಬ ಮೂರು ಕಾಲದಲ್ಲಿಯೂ ಒಂದೇ ರೀತಿಯಾಗಿರುವವನು. ಕಾರ್ಯಕಾರಣಗಳಿಗಿಂತಲೂ ಬೇರೆಯಾದ ನಿತ್ಯಶುದ್ಧ ಬುದ್ಧ ಮುಕ್ತ ಸ್ವಭಾವನು. ಪುರಾಣ ಪುರುಷನು. ಯಾವ ವಿಧವಾದ ವಿಕಾರಗಳಿಂದಲೂ ಕಾರಣಗಳಿಂದಲೂ ಚಲಿಸದವನು. ಎಲ್ಲದರಲ್ಲಿಯೂ ತುಂಬಿರುವವನು. ಯಾವ ವಿಧವಾದ ಆಶೆಯಿಲ್ಲದವನು. ತಾನು ಸರ್ವಾಶ್ರಯನೇ ಹೊರತು ತನಗಾರೂ ಆಶ್ರಯವಿಲ್ಲದವನು.

ಶ್ಯಾಮೋ ಯುವಾ ಲೋಹಿತಾಕ್ಷೋ ದೀಪ್ತಿಶೋಭಿತ ಭೂಷಣಃ ।
ಆಜಾನುಬಾಹುಸ್ಸುಮುಖಸ್ಸಿಂಹಸ್ಕಂಧೋ ಮಹಾಭುಜಃ ॥ ೧೪೫ ॥

ಸತ್ವವಾನ್ ಗುಣಸಂಪನ್ನೋ ದೀಪ್ಯಮಾನಸ್ಸ್ವತೇಜಸಾ ।
ಕಾಲಸ್ವರೂಪೀ ಭಗವಾನ್ ಕಾಲಚಕ್ರಪ್ರವರ್ತಕಃ ॥ ೧೪೬ ॥

ನಾರಾಯಣಃ ಪರಂಜ್ಯೋತಿಃ ಪರಮಾತ್ಮಾ ಸನಾತನಃ ।
ವಿಶ್ವಕೃದ್ವಿಶ್ವಭೋಕ್ತಾ ಚ ವಿಶ್ವಗೋಪ್ತಾ ಚ ಶಾಶ್ವತಃ ॥ ೧೪೭ ॥

---

೧೪೫. ಎಲೆಯಂತೆ ಹಸುರು ಬಣ್ಣವುಳ್ಳವನು. ಯಾವಾಗಲೂ ಯೌವನದಿಂದಲೇ ಇರುವವನು. ಕೆಂಪಗಿರುವ ಕಣ್ಣುಗಳುಳ್ಳವನು. ಎಲ್ಲರಿಗೂ ಉದ್ರೇಕವಾಗುವಂತೆ ಮಾತನಾಡುವವನು. ಮಂಡಿಯವರೆಗೂ ತೋಳುಳ್ಳವನು. ಪ್ರಸನ್ನವಾಗಿರುವ ಮುಖಕಾಂತಿಯುಳ್ಳವನು. ಸಿಂಹದ ಕತ್ತಿನಂತೆ ಕತ್ತುಳ್ಳವನು. ಎದ್ದುಕೊಂಡಿರುವ ಭುಜವುಳ್ಳವನು.

೧೪೬. ಶೌರ್ಯ ವೀರ್ಯಗಳುಳ್ಳವನು. ಕಲ್ಯಾಣಗುಣಗಳನ್ನೂ ಸದ್ಗುಣಗಳನ್ನೂ ಹೊಂದಿರುವವನು. ತನ್ನ ತೇಜಸ್ಸಿನಿಂದಲೇ ಪ್ರಕಾಶಿಸುವವನು. ಖಂಡ ಅಖಂಡ ರೂಪವಾದ ಕಾಲವಾಗಿ ಎಲ್ಲರನ್ನೂ ಕಾಪಾಡುವವನು. ಷಡ್ಗುಣೈಶ್ವರ್ಯ ಸಂಪನ್ನನು. ವಸ್ತುಗಳು ಹೆಚ್ಚು ಕಡಿಮೆಯಾಗುವಂತೆ ಮಾಡುವ ಕಾಲಚಕ್ರವನ್ನು ನಡೆಸತಕ್ಕವನು.

೧೪೭. ನರರ ಗುಂಪಿಗೆ ಸ್ಥಾನನಾದವನು. ಉತ್ತಮೋತ್ತಮವಾದ ತೇಜಸ್ಸುಳ್ಳವನು. ಸರ್ವವ್ಯಾಪಕವಾದ ಚೈತನ್ಯಸ್ವರೂಪನು. ಶಾಶ್ವತನು. ಪ್ರಪಂಚವನ್ನೆಲ್ಲಾ ಸೃಷ್ಟಿಸುವವನು. ಎಲ್ಲವನ್ನೂ ತಿನ್ನುವವನು. ಎಲ್ಲವನ್ನೂ ಕಾಪಾಡುವವನು. ನಾಶರಹಿತನು.

ವಿಶ್ವಂಭರೋ ವಿಶ್ವಮೂರ್ತಿರ್ವಿಶ್ವಾತ್ಮಾ ವಿಶ್ವಭಾವನಃ ।
ಸರ್ವಭೂತಸುಹೃತ್ ಶಾಂತಃ ಸರ್ವಭೂತಾನುಕಂಪನಃ ॥ ೧೪೮ ॥

ಸರ್ವೇಶ್ವರಸ್ಸರ್ವಶರ್ವಃ ಸರ್ವದಾಶ್ರಿತವತ್ಸಲಃ ।
ಸರ್ವಗಸ್ಸರ್ವಭೂತೇಶಃ ಸರ್ವಭೂತಾಶಯಸ್ಥಿತಃ ॥ ೧೪೯ ॥

ಅಭ್ಯಂತರಸ್ಥಸ್ತಮಸಃ ಛೇತ್ತಾ ನಾರಾಯಣಃ ಪರಃ ।
ಅನಾದಿನಿಧನಸ್ಸ್ರಷ್ಟಾ ಪ್ರಜಾಪತಿಪತಿರ್ಹರಿಃ ॥ ೧೫೦ ॥

---

೧೪೮. ಪ್ರಪಂಚವನ್ನೇ ಪೋಷಿಸತಕ್ಕವನು. ಪ್ರಪಂಚವನ್ನೇ ದೇಹವಾಗಿ ಉಳ್ಳವನು. ಪ್ರಪಂಚಕ್ಕೆ ಆತ್ಮರೂಪನು. ಪ್ರಪಂಚಕ್ಕೆ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಮಾಡುವವನು. ಸಮಸ್ತ ಪ್ರಾಣಿಗಳಿಗೂ ಸ್ನೇಹಿತನಾಗಿರುವವನು. ಶಾಂತ ಗುಣವುಳ್ಳವನು. ಸರ್ವಪ್ರಾಣಿಗಳಲ್ಲಿಯೂ ದಯೆಯುಳ್ಳವನು.

೧೪೯, ಸುರಾಸುರ ನರರುಗಳಿಗೆ ಒಡೆಯನು. ಮಹಾಪ್ರಳಯದಲ್ಲಿ ಎಲ್ಲವನ್ನೂ ನಾಶಮಾಡುವವನು. ಸರ್ವಕಾಲದಲ್ಲಿಯೂ ತನ್ನನ್ನು ಆಶ್ರಯಿಸಿಕೊಂಡಿರುವವರಲ್ಲಿ ಪ್ರೀತಿಯುಳ್ಳವನು. ಎಲ್ಲದರಲ್ಲಿಯೂ ಪ್ರವೇಶಿಸುವವನು. ಸಮಸ್ತ ಭೂತಗಳಿಗೂ ಒಡೆಯನು. ಎಲ್ಲಾ ಪ್ರಾಣಿಗಳ ಹೃದಯಾಕಾಶದಲ್ಲಿ ವಾಸಮಾಡಿಕೊಂಡಿರುವವನು.

೧೫೦. ದಿಕ್ಕುಗಳ ಮಧ್ಯಭಾಗದಲ್ಲಿರುವವನು. ಕತ್ತಲೆಯನ್ನು ನಾಶಮಾಡುವ ಜಗಚ್ಚಕ್ಷುವಾದ ಸೂರ್ಯಸ್ವರೂಪನು. ಪರಬ್ರಹ್ಮ ಸ್ವರೂಪನು. ಸರ್ವೋತ್ತಮನು. ಆದ್ಯಂತವಿಲ್ಲದವನು. ಎಲ್ಲವನ್ನೂ ಸೃಷ್ಟಿಸುವ ಬ್ರಹ್ಮಸ್ವರೂಪನು. ಬ್ರಹ್ಮನಿಗೂ ಒಡೆಯನಾದವನು. ಭಕ್ತರ ಪಾಪಗಳನ್ನು ನಾಶಮಾಡುವವನು.

ನರಸಿಂಹೋ ಹೃಷೀಕೇಶಃ ಸರ್ವಾತ್ಮಾ ಸರ್ವದೃಗ್ವಶೀ ।
ಜಗತಸ್ತಸ್ಥುಷಶ್ಚೈವ ಪ್ರಭುರ್ನೇತಾ ಸನಾತನಃ ॥ ೧೫೧ ॥

ಕರ್ತಾ ಧಾತಾ ವಿಧಾತಾ ಚ ಸರ್ವೇಷಾಂ ಪತಿರೀಶ್ವರಃ ।
ಸಹಸ್ರಮೂರ್ಧಾ ವಿಶ್ವಾತ್ಮಾ ವಿಷ್ಣುರ್ವಿಶ್ವಭುಗವ್ಯಯಃ ॥ ೧೫೨ ॥

ಪುರಾಣಪುರುಷಶ್ರೇಷ್ಠಃ ಸಹಸ್ರಾಕ್ಷಃ ಸಹಸ್ರಪಾತ್ ।
ತತ್ವಂ ನಾರಾಯಣೋ ವಿಷ್ಣುಃ ವಾಸುದೇವಸ್ಸನಾತನಃ ॥ ೧೫೩ ॥

---

೧೫೧. ನರರಲ್ಲಿ ಶ್ರೇಷ್ಠನಾದವನು, ಇಂದ್ರಿಯಗಳಿಗೆ ಈಶ್ವರನು. ಪ್ರಪಂಚಕ್ಕೆಲ್ಲಾ ಆತ್ಮಸ್ವರೂಪನು. ಪ್ರಾಣಿಗಳ ಸಕಲಕರ್ಮಗಳನ್ನೂ ನೋಡತಕ್ಕವನು. ಎಲ್ಲವನ್ನೂ ತನ್ನ ಅಧೀನವನ್ನಾಗಿ ಮಾಡಿಕೊಳ್ಳುವವನು. ಪ್ರಪಂಚಕ್ಕೆ ಸ್ಥಿರನಾದ ಆತ್ಮಸ್ವರೂಪನು. ಸ್ವತಂತ್ರನಾದವನು. ಎಲ್ಲರಿಗೂ ಒಡೆಯನು. ಶಾಶ್ವತನು.

೧೫೨. ಜಗತ್ತನ್ನು ಸೃಷ್ಟಿಸುವವನು. ಎಲ್ಲವನ್ನೂ ಧರಿಸುವವನು. ವಿಶೇಷವಾಗಿ ಎಲ್ಲವನ್ನೂ ಸೃಷ್ಟಿಸುವವನು. ಎಲ್ಲದಕ್ಕೂ ಒಡೆಯನು. ಐಶ್ವರ್ಯವಂತನು. ಸಾವಿರ ತಲೆಗಳುಳ್ಳವನು. ಪ್ರಪಂಚ ಸ್ವರೂಪನು. ಎಲ್ಲವನ್ನೂ ವ್ಯಾಪಿಸಿರತಕ್ಕವನು. ಎಲ್ಲವನ್ನೂ ಅನುಭವಿಸುವವನು. ವಿನಾಶವಾಗಲಿ ವಿಕಾರರೂಪವಾದ ನಾಶವಾಗಲಿ ಇಲ್ಲದವನು.

೧೫೩. ಬಹು ಹಳಬನಾದ ಮನುಷ್ಯನು ಸರ್ವೋತ್ತಮೋತ್ತಮನು. ಸಾವಿರ ಕಣ್ಣುಗಳುಳ್ಳವನು. ಸಾವಿರ ಕಾಲುಗಳುಳ್ಳವನು. ಸತ್ಯಸ್ವರೂಪನು. ನರಾವತಾರವನ್ನು ಹೊಂದಿದವನು. ಎಲ್ಲವನ್ನೂ ವ್ಯಾಪಿಸಿರುವವನು. ವಸುದೇವನ ಮಗನಾಗಿ ಅವತರಿಸಿರುವವನು. ಪುರಾಣ ಪುರುಷನು.

ಪರಮಾತ್ಮಾ ಪರಂ ಬ್ರಹ್ಮ ಸಚ್ಚಿದಾನಂದವಿಗ್ರಹಃ ।
ಪರಂ ಜ್ಯೋತಿಃ ಪರಂ ಧಾಮ ಪರಾಕಾಶಃ ಪರಾತ್ಪರಃ ॥ ೧೫೪ ॥

ಅಚ್ಯುತಃ ಪುರುಷಃ ಕೃಷ್ಣಃ ಶಾಶ್ವತಶ್ಶಿವ ಈಶ್ವರಃ ।
ನಿತ್ಯಸ್ಸರ್ವಗತಸ್ಸ್ಥಾಣೂ ರುದ್ರಸ್ಸಾಕ್ಷೀ ಪ್ರಜಾಪತಿಃ ॥ ೧೫೫ ॥

ಹಿರಣ್ಯಗರ್ಭಸ್ಸವಿತಾ ಲೋಕಕೃಲ್ಲೋಕಭುಗ್ವಿಭುಃ ।
ಓಂಕಾರವಾಚ್ಯೋ ಭಗವಾನ್ ಶ್ರೀಭೂಲೀಲಾಪತಿಃ ಪ್ರಭುಃ ॥ ೧೫೬ ॥

---

೧೫೪. ಸರ್ವಚೈತನ್ಯ ಸ್ವರೂಪನು ಸರ್ವವ್ಯಾಪಕನಾದ ಚಿತ್‌ಸ್ವರೂಪನು. ಎಲ್ಲಾ ಕಾಲದಲ್ಲಿಯೂ ಸ್ಫುರಿಸುತ್ತಿರುವವನು. ಎಲ್ಲಾ ತೇಜಸ್ಸಿಗೂ ಕಾರಣವಾದ ಮಹಾತೇಜಸ್ವರೂಪನು. ದಿವ್ಯಜ್ಯೋತಿಸ್ವರೂಪನು. ನಿರಾಕಾರವಾದ ಆಕಾಶ ಸ್ವರೂಪನು. ಲೋಕೇಶನೂ ಜಗನ್ನಿಯಾಮಕನೂ ಆದವನು.

೧೫೫. ತನ್ನ ಸ್ವರೂಪಕ್ಕೆ ಚ್ಯುತಿ ಇಲ್ಲದವನು. ದೇಹಿಯಲ್ಲಿ ಜೀವಾತ್ಮಕನಾಗಿರುವವನು. ಕೃಷ್ಣವರ್ಣವುಳ್ಳವನು ತ್ರೈಕಾಲಿಕ ಅಬಾಧ್ಯವಾದ ಸತ್ಯಸ್ವರೂಪನು. ಮಂಗಳಸ್ವರೂಪನು. ನಿರುಪಾಧಿಕ ಐಶ್ವರ್ಯವಂತನು. ದಿಕ್ಕುಕಾಲಗಳ ವ್ಯವಸ್ಥೆಯಿಲ್ಲದೆ ಯಾವಾಗಲೂ ಇರುವವನು. ಸರ್ವಾಂತರ್ಯಾಮಿಯಾಗಿರುವವನು. ಪ್ರಳಯಕಾಲದಲ್ಲಿಯೂ ಇರತಕ್ಕವನು. ದುಃಖವನ್ನು ಹೋಗಲಾಡಿಸುವವನು. ಎಲ್ಲವನ್ನೂ ಬಿಡದೆ ನೋಡುತ್ತಿರುವವನು. ಪ್ರಭುಗಳಿಗೆ ಒಡೆಯನು.

೧೫೬. ಸುವರ್ಣರೂಪನಾದ ಗರ್ಭವುಳ್ಳವನು. ಎಲ್ಲರಿಗೂ ಬೇಕಾದುದನ್ನು ಕೊಡತಕ್ಕವನು. ಜಗತ್ತನ್ನು ಸೃಷ್ಟಿಸುವವನು. ಜಗತ್ತನ್ನೇ ಅನುಭವಿಸುವವನು. ಮಹಾಮಹಿಮನು. ಅಕಾರ ಉಕಾರ ಮಕಾರ ವಾಚ್ಯರಾದ ಪ್ರಣವ ವಾಚ್ಯರಾದ ಬ್ರಹ್ಮ ವಿಷ್ಣು- ರುದ್ರ ಸ್ವರೂಪನು ಷಡ್ಗುಣಗಳುಳ್ಳವನು. ಲಕ್ಷ್ಮೀ, ಭೂಮಿ, ನೀಳಾದೇವಿಯರಿಗೆ ಗಂಡನು. ಸರ್ವೋತ್ಕೃಷ್ಟನು.

ಸರ್ವಲೋಕೇಶ್ವರಃ ಶ್ರೀಮಾನ್ ಸ್ಸರ್ವಜ್ಞಸ್ಸರ್ವತೋಮುಖಃ ।
ಸ್ವಾಮೀ ಸುಶೀಲಸ್ಸುಲಭಃ ಸರ್ವಗಸ್ಸರ್ವಶಕ್ತಿಮಾನ್ ॥ ೧೫೭ ॥

ನಿತ್ಯಸ್ಸಂಪೂರ್ಣಕಾಮಶ್ಚ ನೈಸರ್ಗಿಕಸುಹೃತ್ ಸುಖೀ ।
ಕೃಪಾಪೀಯೂಷಜಲಧಿಃ ಶರಣ್ಯಸ್ಸರ್ವದೇಹಿನಾಂ ॥ ೧೫೮ ॥

ಶ್ರೀಮನ್ನಾರಾಯಣಸ್ವಾಮೀ ಜಗತಾಂ ಪ್ರಭುರೀಶ್ವರಃ ।
ಅಯೋಧ್ಯೇಶೋ ನೃಪಶ್ರೇಷ್ಠಃ ಕುಶಬಾಲಃ ಪರಂತಪಃ ॥ ೧೫೯ ॥

---

೧೫೭. ಸಮಸ್ತ ಲೋಕಕ್ಕೆ ಒಡೆಯನು. ಲಕ್ಷ್ಮೀಧರನು. ಎಲ್ಲವನ್ನೂ ತಿಳಿದವನು. ಎಲ್ಲ ಕಡೆಯಲ್ಲಿಯೂ ಮುಖವುಳ್ಳವನು. ಎಲ್ಲದನ್ನೂ ತನ್ನ ಸ್ವತ್ತನ್ನಾಗಿ ಉಳ್ಳವನು. ಒಳ್ಳೆಯ ಸ್ವಭಾವವುಳ್ಳವನು. ಭಕ್ತರಿಗೆ ಬಹು ಸುಲಭವಾಗಿ ಸಿಕ್ಕತಕ್ಕವನು. ಎಲ್ಲದರಲ್ಲಿಯೂ ಇರುವವನು. ಸೃಷ್ಟಿ, ಸ್ಥಿತಿ, ಸಂಹಾರ ರೂಪವಾದ ಶಕ್ತಿಯುಳ್ಳವನು.

೧೫೮. ದೇಶ ಕಾಲ ವಸ್ತುಗಳಿಗನುಗುಣವಾಗಿ ವ್ಯತ್ಯಾಸವಾಗದೆ ನಿತ್ಯವಾಗಿರತಕ್ಕವನು. ಪೂರ್ಣವಾದ ಸಂಪತ್ತುಳ್ಳವನು. ಸ್ವಭಾವವಾದ ಸ್ನೇಹಿತನು ನಿತ್ಯಾನಂದ ಸ್ವರೂಪನು. ಕರುಣಾಮೃತಕ್ಕೆ ಸಮುದ್ರನು. ಸಮಸ್ತ ಪ್ರಾಣಿಗಳಿಗೂ ರಕ್ಷಕನು.

೧೫೯. ಸರ್ವಶಕ್ತಿವಂತನಾದ, ಪರಬ್ರಹ್ಮ ಸ್ವರೂಪನಾದ ಪರಮಾತ್ಮನಾದ ಪ್ರಭುವು. ಎಲ್ಲ ಪ್ರಪಂಚಕ್ಕು ಒಡೆಯನು. ಅಖಂಡವಾದ ಐಶ್ವರ್ಯವುಳ್ಳವನು. ಅಯೋಧ್ಯೆಗೆ ಒಡೆಯನು. ರಾಜಶ್ರೇಷ್ಠನು. ಕುಶನನ್ನು ಮಗನಾಗಿ ಉಳ್ಳವನು. ಶತ್ರುಸಂಹಾರಕನು.

ಲವಬಾಲಃ ಕಂಜನೇತ್ರಃ ಕಂಜಾಂಘ್ರಿಃ ಪಂಕಜಾನನಃ ।
ಸೀತಾಕಾಂತಸ್ಸೌಮ್ಯರೂಪಃ ಶಿಶುಜೀವನತತ್ಪರಃ ॥ ೧೬೦ ॥

ಸೇತುಕೃಚ್ಚಿತ್ರಕೂಟಸ್ಥಃ ಶಬರೀಸಂಸ್ತುತಃ ಪ್ರಭುಃ ।
ಯೋಗಿಧ್ಯೇಯಶ್ಶಿವಧ್ಯೇಯೋ ರಾವಣಾಸುರದರ್ಪಹಾ ॥ ೧೬೧ ॥

ಶರಣ್ಯಸ್ಸರ್ವಭೂತಾನಾಂ ಸಂಶ್ರಿತಾಭೀಷ್ಟದಾಯಕಃ ।
ಅನಂತಶ್ಶ್ರೀಪತಿಶ್ಶೂರೋ ಗುಣಭೃನ್ನಿರ್ಗುಣೋ ಮಹಾನ್ ॥ ೧೬೨ ॥

---

೧೬೦. ತನ್ನ ಅಂಶದಿಂದಲೇ ಲವ ಬಾಲಕನಾಗಿ ಅವತರಿಸಿದವನು. ಕಮಲದಂತೆ ಕಣ್ಣುಗಳುಳ್ಳವನು. ಕಮಲದಂತೆ ಪಾದಗಳುಳ್ಳವನು. ಕಮಲದಂತೆ ಮುಖವುಳ್ಳವನು. ಜಾನಕಿಯ ರಮಣನು. ಶಾಂತಾಕಾರನು. ಬ್ರಾಹ್ಮಣನ ಮಗನನ್ನು ಬದುಕಿಸುವುದರಲ್ಲಿ ಬಹುವಾದ ಆಸಕ್ತನಾಗಿ ಇದ್ದವನು.

೧೬೧ ಸಮುದ್ರದಲ್ಲಿ ಸೇತುವೆಯನ್ನು ಕಟ್ಟಿದವನು. ಚಿತ್ರಕೂಟ ಪರ್ವತದಲ್ಲಿದ್ದವನು. ಶಬರಿಯಿಂದ ಹೊಗಳಲ್ಪಟ್ಟವನು. ಸರ್ವನಿಯಾಮಕನು. ತತ್ವವನ್ನು ಬಲ್ಲವರಾದ ಯೋಗಿಗಳಿಂದ ಧ್ಯಾನಿಸತಕ್ಕವನು. ಶಿವನಿಂದ ಧ್ಯಾನ ಮಾಡಿಸಿಕೊಳ್ಳತಕ್ಕವನು. ರಾವಣನೆಂಬ ಅಸುರನ ದರ್ಪವನ್ನು ಹಾಳುಮಾಡಿದವನು.

೧೬೨. ಸಮಸ್ತ ಭೂತಗಳಿಗೂ ರಕ್ಷಕನು. ತನ್ನನ್ನು ಆಶ್ರಯಿಸಿದವರಿಗೆ ಎಲ್ಲವನ್ನೂ ಕೊಡುವವನು. ಕೊನೆಯಿಲ್ಲದವನು. ಲಕ್ಷ್ಮಿಗೆ ವಲ್ಲಭನು. ಶೂರರಲ್ಲಿ ಮುಂದಾಳು. ಸೃಷ್ಟಿ, ಸ್ಥಿತಿ, ಸಂಹಾರ ರೂಪವಾದ ಗುಣವನ್ನು ಹೊಂದಿರುವವನು. ಯೋಚಿಸಿ ನೋಡಿದರೆ ಯಾವ ಗುಣವನ್ನೂ ಹೊಂದದಿರುವವನು. ಮಹತ್ ಸ್ವರೂಪನು.

ಮತ್ಸ್ಯಃ ಕೂರ್ಮೋ ವರಾಹಶ್ಚ ನಾರಸಿಂಹೋಥ ವಾಮನಃ |
ರಾಮೋ ರಾಮಶ್ಚ ಕೃಷ್ಣಶ್ಚ ಬೌದ್ಧಃ ಕಲ್ಕಿಃ ಪರಾತ್ಪರಃ || ೧೬೩ ||

---

೧೬೩. ಸೋಮಕಾಸುರನು ವೇದಗಳನ್ನು ಕದ್ದುಕೊಂಡು ಹೋದಾಗ ಅವನನ್ನು ಕೊಲ್ಲಲು ನೀರಿನೊಳಗೆ ಹೋಗಬೇಕಾದಾಗ ಮೀನಿನ ಅವತಾರವನ್ನು ಮಾಡಿದವನು.

ದೇವದಾನವರು ಸಮುದ್ರವನ್ನು ಕಡೆಯಬೇಕಾಗಿ ಬಂದಾಗ ಮಂದರ ಪರ್ವತವನ್ನು ಧರಿಸಲು ಆಮೆಯ ರೂಪವಾಗಿ ಬೆನ್ನಿನಮೇಲೆ ಅದನ್ನು ಧರಿಸಿ ಕೊಳ್ಳಲು ಆಮೆಯ ಅವತಾರವನ್ನು ಮಾಡಿದವನು.

ಹಿರಣ್ಯಾಕ್ಷನು ಭೂಮಿಯನ್ನು ಹೊತ್ತುಕೊಂಡು ಹೋದಾಗ ಅವನನ್ನು ಕೊಲ್ಲಲು ಹಂದಿಯಂತೆ ಅವತರಿಸಿದವನು.

ಹಿರಣ್ಯಕಶಿಪುವನ್ನು ಕೊಲ್ಲಲು ಅವನಿಗೆ ಕೊಟ್ಟಿದ್ದ ವರಕ್ಕನುಸಾರವಾಗಿ ಎರಡು ಪ್ರಾಣಿಗಳ ರೂಪವನ್ನು ಧರಿಸಿ ನರಸಿಂಹಾವತಾರವನ್ನು ಮಾಡಿದವನು.

ಬಲಿಯನ್ನು ನಿಗ್ರಹಿಸಲು ಕಶ್ಯಪ ಋಷಿಯ ಪ್ರಾರ್ಥನೆಯಂತೆ ವಾಮನ ನಾಗಿ ಅವತರಿಸಿದವನು.

ಭೂಮಿಯಲ್ಲಿ ದುಷ್ಟರು ಹೆಚ್ಚಲು ಅವರನ್ನು ನಿಗ್ರಹಿಸಲು ಪರಶುರಾಮಾ ವತಾರವನ್ನು ಅಂಶದಿಂದ ಮಾಡಿದವನು.

ಜಯ ವಿಜಯರೆಂಬ ತನ್ನ ಭಕ್ತರನ್ನು ಅನುಗ್ರಹಿಸಲು ಅವರ ರಾವಣ ಕುಂಭಕರ್ಣಾವತಾರಕ್ಕೆ ಶತ್ರುವಾಗಿ ಅಯೋಧ್ಯಾರಾಮನಾಗಿ ಹುಟ್ಟಿದವನು.

ಭಕ್ತರು ಶಿಶುಪಾಲ ದಂತವಕ್ತ್ರರಾಗಿ ಹುಟ್ಟಲು ಅವರನ್ನು ರಾಕ್ಷಸ ಜನ್ಮ ದಿಂದ ಉದ್ಧರಿಸಲು ಕೃಷ್ಣಾವತಾರವನ್ನು ಮಾಡಿದವನು.

ಶಾಂತಿ ರಸವನ್ನು ಹೊರಸೂಸಲು ಬೌದ್ಧಾವತಾರವನ್ನು ಮಾಡಿದವನು.

ಧರ್ಮವನ್ನು ನಿರ್ಮೂಲಮಾಡಿದ ಕಲಿಯನ್ನು ನಿಗ್ರಹಿಸಲು ಕಲ್ಕಿಯ ಅವತಾರವನ್ನು ಮಾಡಿದವನು. ಪ್ರಪಂಚದಲ್ಲೆಲ್ಲಾ ಶ್ರೇಷ್ಠವಾದುದು ಯಾವು ದಿದೆಯೋ ಅವಕ್ಕೆಲ್ಲಾ ಶ್ರೇಷ್ಠನಾದವನು.

ಏವಮಾದೀನಿ ನಾಮಾನಿ ಹ್ಯಸಂಖ್ಯಾನ್ಯಪರಾಣಿ ಚ ।
ಏಕೈಕಂ ನಾಮ ರಾಮಸ್ಯ ಸರ್ವಪಾಪಪ್ರಣಾಶನಂ ॥ ೧೬೪ ॥

ಸಹಸ್ರನಾಮಫಲದಂ ಸರ್ವೈಶ್ವರ್ಯಪ್ರದಾಯಕಂ ।
ಸರ್ವಸಿದ್ಧಿಕರಂ ಪುಣ್ಯಂ ಭುಕ್ತಿಮುಕ್ತಿಫಲಪ್ರದಂ ॥ ೧೬೫ ॥

ಮಂತ್ರಾತ್ಮಕಮಿದಂ ಸರ್ವಂ ವ್ಯಾಖ್ಯಾತಂ ಸರ್ವಮಂಗಲಂ ।
ಉಕ್ತಾನಿ ತವ ಪುತ್ರೇಣ ವಿಷ್ಣುರಾಜೇನ ಧೀಮತಾ ॥ ೧೬೬ ॥

ಸನತ್ಕುಮಾರಾಯ ಪುರಾ ತಾನ್ಯುಕ್ತಾನಿ ಮಯಾ ತವ ।
ಯಃ ಪಠೇಚ್ಛೃಣುಯಾದ್ವಾಪಿ ಸ ತು ಬ್ರಹ್ಮಪದಂ ಲಭೇತ್ ॥ ೧೬೭ ॥

---

೧೬೪. ಶ್ರೀಮದಾನಂದ ರಾಮಾಯಣದ ದಿವ್ಯಸಹಸ್ರನಾಮದ ಉತ್ತರ ಪೀಠಿಕೆಯಲ್ಲಿ ಈ ಶ್ರೀಮದಾನಂದ ರಾಮನ ನಾಮಗಳು ಹೀಗೆ ಅಸಂಖ್ಯಾತವಾಗಿ ಇನ್ನೂ ಇರುವುವು. ಈ ರಾಮನಾಮಗಳು ಒಂದೊಂದೂ ಎಲ್ಲಾ ಪಾಪಗಳನ್ನೂ ನಾಶಮಾಡುತ್ತವೆ.

೧೬೫. ಈ ಸಹಸ್ರನಾಮವು ಕೇಳಿದ ಫಲಗಳನ್ನು ಕೊಡುತ್ತದೆ. ಎಲ್ಲಾ ಐಶ್ವರ್ಯಗಳನ್ನೂ ಕೊಡುತ್ತದೆ. ಎಲ್ಲಾ ಸಿದ್ಧಿಯನ್ನೂ ಉಂಟುಮಾಡುತ್ತದೆ. ಪುಣ್ಯಕರವಾದುದು. ಭಕ್ತಿಯನ್ನೂ, ಮುಕ್ತಿಯನ್ನೂ ಕೊಡುತ್ತದೆ.

೧೬೬. ಈ ನಾಮವೆಲ್ಲವೂ ಮಂತ್ರಸ್ವರೂಪವಾದುವು. ಸರ್ವಮಂಗಳ ಸ್ವರೂಪವಾದುವು. ಇವನ್ನು ಹೇಳಿದ್ದೇನೆ. ಇವೆಲ್ಲವನ್ನೂ ನಿನ್ನ ಮಗನಾದ ವಿಷ್ಣು ರಾಜನಿಗೆ ಹೇಳಿದ್ದೇನೆ.

೧೬೭. ಅವನು ಆ ಸನತ್ಕುಮಾರನಿಗೆ ಹೇಳಿದುದನ್ನು ನಾನು ನಿನಗೆ ಹೇಳಿದ್ದೇನೆ. ಇದನ್ನು ಓದಿದವನೂ, ಕೇಳಿದವನೂ ಬ್ರಹ್ಮಪದವನ್ನು ಹೊಂದುತ್ತಾರೆ.

ತಾವದೇವ ಬಲಂ ತೇಷಾಂ ಮಹಾಪಾತಕದಂತಿನಾಮ್ ।
ಯಾವನ್ನ ಶ್ರೂಯತೇ ರಾಮ ನಾಮಪಂಚಾನನಧ್ವನಿಃ ॥ ೧೬೮ ॥

ಬ್ರಹ್ಮಘ್ನಶ್ಚ ಸುರಾಪಶ್ಚ ಸ್ತೇಯೀ ಚ ಗುರುತಲ್ಪಗಃ ।
ಶರಣಾಗತಘಾತೀ ಚ ಮಿತ್ರವಿಶ್ವಾಸಘಾತಕಃ ॥ ೧೬೯ ॥

ಮಾತೃಹಾ ಪಿತೃಹಾ ಚೈವ ಭ್ರೂಣಹಾ ವೀರಹಾ ತಥಾ ।
ಕೋಟಿಕೋಟಿಸಹಸ್ರಾಣಿ ಹ್ಯುಪಪಾಪಾನಿ ಯಾನ್ಯಪಿ ॥ ೧೭೦ ॥

ಸಂವತ್ಸರಂ ಕ್ರಮಾಜ್ಜಪ್ತ್ವಾ ಪ್ರತ್ಯಹಂ ರಾಮಸನ್ನಿಧೌ ।
ನಿಷ್ಕಂಟಕಂ ಸುಖಂ ಭುಕ್ತ್ವಾ ತತೋ ಮೋಕ್ಷಮವಾಪ್ನುಯಾತ್ ॥೧೭೧॥

॥ ಸೂತ ಉವಾಚ ॥

ಏವಂ ಶೌನಕ ಪಾರ್ವತ್ಯೈ ರಾಮನಾಮಸಹಸ್ರಕಂ ।
ಯಥಾ ಶಿವೇನ ಕಥಿತಂ ಮಯಾ ತೇಽದ್ಯ ನಿವೇದಿತಂ ॥ ೧೭೨ ॥

---

೧೬೮. ಈ ರಾಮನಾಮವೆಂಬ ಸಿಂಹದ ಧ್ವನಿಯನ್ನು ಎಲ್ಲಿಯವರೆಗೆ ಕೇಳು ವುದಿಲ್ಲವೋ ಅಲ್ಲಿಯವರೆಗೂ ಮಹಾಪಾತಕಗಳೆಂಬ ಆನೆಗಳು ವಿಜೃಂಭಿಸುತ್ತವೆ.

೧೬೯–೧೭೧. ಬ್ರಾಹ್ಮಣನನ್ನು ಕೊಂದವನು, ಹೆಂಡ ಕುಡಿದವನು, ಚಿನ್ನ ವನ್ನು ಕದ್ದವನು, ಗುರುವಿನ ಹೆಂಡತಿಯಲ್ಲಿ ರಮಿಸಿದವನು, ಶರಣಾಗತರನ್ನು ಕೊಂದವನು, ಮಿತ್ರರನ್ನೂ ವಿಶ್ವಾಸಿಗಳನ್ನೂ ಕೊಂದವನು, ತಾಯಿಯನ್ನು ಕೊಂದವನು, ತಂದೆಯನ್ನು ಕೊಂದವನು, ಮಕ್ಕಳನ್ನು ಕೊಂದವನು, ವೀರರನ್ನು ಕೊಂದವನು, ಇನ್ನೂ ಕೋಟಿ ಕೋಟಿಗಟ್ಟಲೆಯಿರುವ ಉಪಪಾತಕಗಳನ್ನು ಮಾಡಿದ್ದವನು ಇಂಥವರೆಲ್ಲರೂ ಕೂಡ ಇದನ್ನು ರಾಮಸನ್ನಿಧಿಯಲ್ಲಿ ಪ್ರತಿದಿನವೂ ಜಪಿಸುತ್ತ ಒಂದು ವರ್ಷದವರೆಗೆ ಜಪಿಸಿದರೆ ಪಾಪವನ್ನು ಕಳೆದುಕೊಂಡು ಸುಖ ವನ್ನು ಅನುಭವಿಸಿ ಅನಂತರ ಮೋಕ್ಷವನ್ನು ಹೊಂದುತ್ತಾರೆ.

೧೭೨. ಸೂತನು ಹೇಳಿದನು–ಎಲೈ ಶೌನಕನೆ! ಈ ರಾಮನಾಮ ಸಹಸ್ರ ವನ್ನು ಶಿವನು ಪಾರ್ವತಿಗೆ ಹೇಳಿದಂತೆಯೇ ನಾನೂ ನಿನಗೆ ಹೇಳಿದ್ದೇನೆ.

॥ ರಾಮದಾಸ ಉವಾಚ ॥

ಯಥಾ ಶಿಷ್ಯ ತ್ವಯಾ ಪೃಷ್ಟಂ ರಾಮನಾಮಸಹಸ್ರಕಂ ।
ತತ್ಸೂತೋಕ್ತಂ ಸವಿಸ್ತಾರಂ ಮಯಾ ತೇಽದ್ಯ ನಿವೇದಿತಂ ॥ ೧೭೩ ॥

ಅನೇನ ರಾಮಂ ಸದಸಿ ನಾರದಃ ಸ್ತುತವಾನ್ಮುನಿಃ ।
ರಾಮನಾಮಸಹಸ್ರೇಣ ಭುಕ್ತಿಮುಕ್ತಿಪ್ರದೇನ ಚ ॥ ೧೭೪ ॥

ಶ್ರೀರಾಮನಾಮ್ನಾಂ ಪರಮಂ ಸಹಸ್ರಕಂ
ಪಾಪಾಪಹಂ ಸೌಖ್ಯವಿವೃದ್ಧಿಕಾರಕಮ್ ।
ಭವಾಪಹಂ ಭಕ್ತಜನೈಕಪಾಲಕಂ
ಸ್ತ್ರೀಪುತ್ರಪೌತ್ರಪ್ರದಮೃದ್ಧಿದಾಯಕಮ್ ॥ ೧೭೫ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ರಾಜ್ಯಕಾಂಡೇ ಶ್ರೀರಾಮನಾಮ ಸಹಸ್ರ
ಕಥನಂ ನಾಮ ಪ್ರಥಮಸ್ಸರ್ಗಃ

---

೧೭೩. ರಾಮದಾಸನು ಹೇಳಿದನು—ಎಲೈ ಶಿಷ್ಯನೆ! ನೀನು ಕೇಳಿದಂತೆ ಈ ರಾಮನಾಮ ಸಹಸ್ರವನ್ನು ಸೂತನು ಹೇಳಿದುದನ್ನು ವಿಸ್ತಾರವಾಗಿ ನಿನಗೆ ಹೇಳಿದ್ದೇನೆ.

೧೭೪ ಈ ಸ್ತೋತ್ರದಿಂದಲೇ ನಾರದನು ಸಭೆಯಲ್ಲಿ ರಾಮನನ್ನು ಸ್ತುತಿಸಿದನು. ಈ ರಾಮನಾಮವು ಭುಕ್ತಿ, ಮುಕ್ತಿಗಳನ್ನು ಕೊಡುತ್ತದೆ.

೧೭೫. ಶ್ರೀರಾಮನ ದಿವ್ಯ ಸಹಸ್ರನಾಮವು ಪಾಪವನ್ನು ನಾಶಮಾಡುತ್ತದೆ. ಸೌಖ್ಯವನ್ನು ಹೆಚ್ಚಿಸುತ್ತದೆ. ಸಂಸಾರದಿಂದ ಮುಕ್ತಿಯನ್ನು ಕೊಡುತ್ತದೆ. ಭಕ್ತಜನರನ್ನು ಕಾಪಾಡುತ್ತದೆ. ಹೆಂಡತಿಯನ್ನೂ, ಮಕ್ಕಳನ್ನೂ, ಮೊಮ್ಮಕ್ಕಳನ್ನೂ ಕೊಡುತ್ತದೆ. ಐಶ್ವರ್ಯವನ್ನು ಕೊಡುತ್ತದೆ.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಶ್ರೀರಾಮನಾಮ
ಸಹಸ್ರ ಕಥನವೆಂಬ ಮೊದಲನೆಯ ಸರ್ಗವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ

॥ ಮೊದಲನೆಯ ಸರ್ಗದ ಸಾರಾಂಶವು ॥

ನಾರದನು ಶ್ರೀರಾಮನನ್ನು ಸಹಸ್ರನಾಮಗಳಿಂದ ಸ್ತುತಿಸಿದನೆಂದು ರಾಮದಾಸನು ವಿಷ್ಣುದಾಸನಿಗೆ ಹೇಳಲು ಆ ವಿಷ್ಣುದಾಸನು ರಾಮದಾಸನನ್ನು ಆ ಸಹಸ್ರನಾಮಗಳನ್ನು ಹೇಳುವಂತೆ ಕೇಳಿದನು.

ಆಗ ರಾಮದಾಸನು ಶಿವನು ಪಾರ್ವತಿಗೆ ಹೇಳಿದಂತೆಯೂ ಹಿಂದೆ ಗಣಪತಿಯು ಬೆಟ್ಟದಂತೆ ಜನಿಸಿ ಎಲ್ಲರನ್ನೂ ತೊಂದರೆಪಡಿಸಿ ನಾಶಪಡಿಸುತ್ತ ಅನೇಕ ಬ್ರಹ್ಮಹತ್ಯೆಗಳನ್ನು ಮಾಡಿ ಆ ಪಾಪದಿಂದ ಕೈಲಾಗದಂತೆ ಬಿದ್ದಿರುವಾಗ ಈ ಸಹಸ್ರನಾಮವನ್ನು ಹೇಳಿ ಆ ಶಿವನು ಮಂತ್ರಿಸಲು ಅವನು ತನ್ನ ಎಲ್ಲಾ ಪಾಪಗಳನ್ನೂ ಕಳೆದುಕೊಂಡು ಈಗಿನ ಸ್ಥಿತಿಯನ್ನು ಹೊಂದಿದಂತೆಯೂ ಹೇಳಿ ಆ ಸಹಸ್ರನಾಮಗಳನ್ನು ವಿಷ್ಣುದಾಸನಿಗೆ ಹೇಳಿದನು.

ಇದು ಎಂತಹ ಪಾಪಗಳನ್ನಾದರೂ ನಾಶಮಾಡುವುದೆಂದು ಹೇಳಿ ಇದು ಬಹು ಉತ್ತಮವಾದುದೆಂದೂ ಹೇಳುತ್ತಾನೆ.

॥ ಶ್ರೀರಸ್ತು ॥

ಶ್ರೀ ನಾರದಮಹರ್ಷಿ ಕೃತ

ಶ್ರೀರಾಮ ದಿವ್ಯ ಸಹಸ್ರನಾಮಾವಳಿಃ

[ವಾಚಕರು ಪ್ರತಿಯೊಂದು ನಾಮದ ಮೊದಲಿನಲ್ಲೂ "ಓಂ" ಶಬ್ದವನ್ನು ಸೇರಿಸಿಕೊಳ್ಳಬೇಕು.]

ಓಂ ಶ್ರೀರಾಮಾಯ ನಮಃ
ಶ್ರೀ ಮಹಾವಿಷ್ಣವೇ ನಮಃ
ವಿಷ್ಣವೇ ನಮಃ
ದೇವಹಿತಾವಹಾಯ ನಮಃ
ತತ್ವಾತ್ಮನೇ ನಮಃ
ತಾರಕಬ್ರಹ್ಮಣೇ ನಮಃ
ಶಾಶ್ವತಾಯ ನಮಃ
ಸರ್ವಸಿದ್ಧಿದಾಯ ನಮಃ
ರಾಜೀವಲೋಚನಾಯ ನಮಃ
ಶ್ರೀಮತೇ ನಮಃ
ಶ್ರೀರಾಮಾಯ ನಮಃ
ರಘುಪುಂಗವಾಯ ನಮಃ
ರಾಮಭದ್ರಾಯ ನಮಃ
ಸದಾಚಾರಾಯ ನಮಃ
ರಾಜೇಂದ್ರಾಯ ನಮಃ
ಜಾನಕೀಪತಯೇ ನಮಃ
ಅಗ್ರಗಣ್ಯಾಯ ನಮಃ
ವರೇಣ್ಯಾಯ ನಮಃ

ಓಂ ವರದಾಯ ನಮಃ
ಪರಮೇಶ್ವರಾಯ ನಮಃ
ಜನಾರ್ದನಾಯ ನಮಃ
ಜಿತಾಮಿತ್ರಾಯ ನಮಃ
ಪರಾರ್ಥೈಕಪ್ರಯೋಜನಾಯ ನಮಃ
ವಿಶ್ವಾಮಿತ್ರಪ್ರಿಯಾಯ ನಮಃ
ದಾಂತಾಯ ನಮಃ
ಶತ್ರುಜಿತೇ ನಮಃ
ಶತ್ರುತಾಪನಾಯ ನಮಃ
ಸರ್ವಜ್ಞಾಯ ನಮಃ
ಸರ್ವವೇದಾದಯೇ ನಮಃ
ಶರಣ್ಯಾಯ ನಮಃ
ವಾಲಿಮರ್ದನಾಯ ನಮಃ
ಜ್ಞಾನಭವ್ಯಾಯ ನಮಃ
ಅಪರಿಚ್ಛೇದ್ಯಾಯ ನಮಃ
ವಾಗ್ಮಿನೇ ನಮಃ
ಸತ್ಯವ್ರತಾಯ ನಮಃ
ಶುಚಯೇ ನಮಃ

ಓಂ ಜ್ಞಾನಗಮ್ಯಾಯ ನಮಃ	ಓಂ ಗುರವೇ ನಮಃ
ದೃಢಪ್ರಜ್ಞಾಯ ನಮಃ	ಪರಮಧಾರ್ಮಿಕಾಯ ನಮಃ
ಖರಧ್ವಂಸಿನೇ ನಮಃ	ಲೋಕಜ್ಞಾಯ ನಮಃ
ಪ್ರತಾಪವತೇ ನಮಃ	ಲೋಕವಂದ್ಯಾಯ ನಮಃ
ದ್ಯುತಿಮತೇ ನಮಃ	ಲೋಕಾತ್ಮನೇ ನಮಃ
ಆತ್ಮವತೇ ನಮಃ	ಲೋಕಕೃತೇ ನಮಃ
ವೀರಾಯ ನಮಃ	ವಿಭವೇ ನಮಃ
ಜಿತಕ್ರೋಧಾಯ ನಮಃ	ಅನಾದಯೇ ನಮಃ
ಅರಿಮರ್ದನಾಯ ನಮಃ	ಭಗವತೇ ನಮಃ
ವಿಶ್ವರೂಪಾಯ ನಮಃ	ಸೇವ್ಯಾಯ ನಮಃ
ವಿಶಾಲಾಕ್ಷಾಯ ನಮಃ	ಜಿತಮಾಯಾಯ ನಮಃ
ಪ್ರಭವೇ ನಮಃ	ರಘೂದ್ವಹಾಯ ನಮಃ
ಪರಿವೃಢಾಯ ನಮಃ	ರಾಮಾಯ ನಮಃ
ದೃಢಾಯ ನಮಃ	ದಯಾಕರಾಯ ನಮಃ
ಈಶಾಯ ನಮಃ	ದಕ್ಷಾಯ ನಮಃ
ಖಡ್ಗಧರಾಯ ನಮಃ	ಸರ್ವಜ್ಞಾಯ ನಮಃ
ಶ್ರೀಮತೇ ನಮಃ	ಸರ್ವಪಾವನಾಯ ನಮಃ
ಕೌಸಲ್ಯೇಯಾಯ ನಮಃ	ಬ್ರಹ್ಮಣ್ಯಾಯ ನಮಃ
ಅನಸೂಯಕಾಯ ನಮಃ	ನೀತಿಮತೇ ನಮಃ
ವಿಪುಲಾಂಸಾಯ ನಮಃ	ಗೋಪ್ತ್ರೇ ನಮಃ
ಮಹೋರಸ್ಕಾಯ ನಮಃ	ಸರ್ವದೇವಮಯಾಯ ನಮಃ
ಪರಮೇಷ್ಠಿನೇ ನಮಃ	ಹರಯೇ ನಮಃ
ಪರಾಯಣಾಯ ನಮಃ	ಸುಂದರಾಯ ನಮಃ
ಸತ್ಯವ್ರತಾಯ ನಮಃ	ಪೀತವಾಸಸೇ ನಮಃ
ಸತ್ಯಸಂಧಾಯ ನಮಃ	ಸೂತ್ರಕಾರಾಯ ನಮಃ

ಓಂ ಪುರಾತನಾಯ ನಮಃ	ಓಂ ಧೀರೋದಾತ್ತಾಯ ನಮಃ
ಸೌಮ್ಯಾಯ ನಮಃ	ಘನಶ್ಯಾಮಾಯ ನಮಃ
ಮಹರ್ಷಯೇ ನಮಃ	ಸರ್ವಾಯುಧವಿಶಾರದಾಯ ನಮಃ
ಕೋದಂಡಿನೇ ನಮಃ	ಅಧ್ಯಾತ್ಮಯೋಗನಿಲಯಾಯ ನಮಃ
ಸರ್ವಜ್ಞಾನಾಯ ನಮಃ	ಸುಮನಸೇ ನಮಃ
ಸರ್ವಕೋವಿದಾಯ ನಮಃ	ಲಕ್ಷ್ಮಣಾಗ್ರಜಾಯ ನಮಃ
ಕವಯೇ ನಮಃ	ಸರ್ವತೀರ್ಥಮಯಾಯ ನಮಃ
ಸುಗ್ರೀವವರದಾಯ ನಮಃ	ಶೂರಾಯ ನಮಃ
ಸರ್ವಪುಣ್ಯಾಧಿಕಪ್ರದಾಯ ನಮಃ	ಸರ್ವಯಜ್ಞಫಲಪ್ರದಾಯ ನಮಃ
ಭವ್ಯಾಯ ನಮಃ	ಯಜ್ಞಸ್ವರೂಪಾಯ ನಮಃ
ಜಿತಾರಿಷಡ್ವರ್ಗಾಯ ನಮಃ	ಯಜ್ಞೇಶಾಯ ನಮಃ
ಮಹೋದಾರಾಯ ನಮಃ	ಜರಾಮರಣವರ್ಜಿತಾಯ ನಮಃ
ಅಘನಾಶನಾಯ ನಮಃ	ವರ್ಣಾಶ್ರಮಗುರವೇ ನಮಃ
ಸುಕೀರ್ತಯೇ ನಮಃ ॥೧೦೦॥	ವರ್ಣಿನೇ ನಮಃ
ಆದಿಪುರುಷಾಯ ನಮಃ	ಶತ್ರುಜಿತೇ ನಮಃ
ಶಾಂತಾಯ ನಮಃ	ಪುರುಷೋತ್ತಮಾಯ ನಮಃ
ಪುಣ್ಯಕೃತಾಯ ನಮಃ	ಶಿವಲಿಂಗಪ್ರತಿಷ್ಠಾತ್ರೇ ನಮಃ
ಅಕಲ್ಮಷಾಯ ನಮಃ	ಪರಮಾತ್ಮನೇ ನಮಃ
ಚತುರ್ಬಾಹವೇ ನಮಃ	ಪರಾತ್ಪರಸ್ಮೈ ನಮಃ
ಸದಾವಾಸಾಯ ನಮಃ	ಪ್ರಮಾಣಭೂತಾಯ ನಮಃ
ದುರಾಸದಾಯ ನಮಃ	ದುರ್ಜ್ಞೇಯಾಯ ನಮಃ
ಸ್ಮಿತಭಾಷಿಣೇ ನಮಃ	ಪೂರ್ಣಾಯ ನಮಃ
ನಿವೃತ್ತಾತ್ಮನೇ ನಮಃ	ಪರಪುರಂಜಯಾಯ ನಮಃ
ಸ್ಮೃತಿಮತೇ ನಮಃ	ಅನಂತದೃಷ್ಟಯೇ ನಮಃ
ಪ್ರಭವೇ ನಮಃ	ಆನಂದಾಯ ನಮಃ

ಓಂ ಧನುರ್ವೇದಾಯ ನಮಃ
ಹಿರಣ್ಯಗರ್ಭಾಯ ನಮಃ
ಪವಿತ್ರೇ ನಮಃ
ಲೋಕಕೃತೇ ನಮಃ
ಲೋಕಭುಜೇ ನಮಃ
ವಿಭವೇ ನಮಃ
ಓಂಕಾರವಾಚ್ಯಾಯ ನಮಃ
ಭಗವತೇ ನಮಃ
ಶ್ರೀಭೂನೀಳಾಪತಯೇ ನಮಃ
ಪ್ರಭವೇ ನಮಃ
ಶ್ರೀಮತ್ಸಮಸ್ತಲೋಕೇಶಾಯ [ನಮಃ
ಸರ್ವಜ್ಞಾಯ ನಮಃ
ಸರ್ವತೋಮುಖಾಯ ನಮಃ
ಸ್ವಾಮಿನೇ ನಮಃ
ಸುಶೀಲಾಯ ನಮಃ
ಸುಲಭಾಯ ನಮಃ
ಸರ್ವಗಾಯ ನಮಃ
ಸರ್ವಶಕ್ತಿಮತೇ ನಮಃ
ಅಕ್ಷಯಾಯ ನಮಃ
ಪುರುಷಾಯ ನಮಃ
ಸಾಕ್ಷಿಣೇ ನಮಃ
ಕೇಶವಾಯ ನಮಃ
ಪುರುಷೋತ್ತಮಾಯ ನಮಃ
ಲೋಕಾಧ್ಯಕ್ಷಾಯ ನಮಃ
ಮಹಾಕಾರ್ಯಾಯ ನಮಃ

ಓಂ ವಿಭೀಷಣವರಪ್ರದಾಯ ನಮಃ
ಹನುಮತ್ಪ್ರಭವೇ ನಮಃ
ಅವ್ಯಯಾಯ ನಮಃ
ಭ್ರಾಜಿಷ್ಣವೇ ನಮಃ
ಸಹನಾಯ ನಮಃ
ಭೋಕ್ತ್ರೇ ನಮಃ
ಸತ್ಯವಾದಿನೇ ನಮಃ
ಬಹುಶ್ರುತಾಯ ನಮಃ
ಸಂಸಾರತಾರಕಾಯ ನಮಃ
ರಾಮಾಯ ನಮಃ
ಸರ್ವದುಃಖವಿಮೋಕ್ಷಕೃತೇ ನಮಃ
ವಿದ್ವತ್ತಮಾಯ ನಮಃ
ವಿಶ್ವಕರ್ತ್ರೇ ನಮಃ
ವಿಶ್ವಕೃತೇ ನಮಃ
ವಿಶ್ವಕರ್ಮಣೇ ನಮಃ
ಸುಖದಾಯ ನಮಃ
ಕಾರಣಾಯನಮಃ
ಕರ್ತ್ರೇ ನಮಃ
ಭವಬಂಧವಿಮೋಚನಾಯ ನಮಃ
ದೇವಚೂಡಾಮಣಯೇ ನಮಃ
ನೇತ್ರೇ ನಮಃ
ಬ್ರಹ್ಮಣ್ಯಾಯ ನಮಃ
ಬ್ರಹ್ಮವರ್ಧನಾಯ ನಮಃ
ನಿತ್ಯಾನಂದ್ಯೈಕ ಕಲ್ಯಾಣಾಯ ನಮಃ
ಸೀತಾಶೋಕವಿನಾಶಕೃತೇ ನಮಃ

ಓಂ ಕಾಕುತ್ಸ್ಥಾಯ ನಮಃ
ಪುಂಡರೀಕಾಕ್ಷಾಯ ನಮಃ
ವಿಶ್ವಾಮಿತ್ರಭಯಾಪಹಾಯ [ನಮಃ
ರಾಮಾಯ ನಮಃ
ಮಾರೀಚಮಥನಾಯ ನಮಃ
ವಿರಾಧವಧಪಾಂಡಿತಾಯ ನಮಃ
ದುಸ್ಸ್ವಪ್ನನಾಶನಾಯ ನಮಃ
ರಮ್ಯಕಿರೀಟಾಯ ನಮಃ
ತ್ರಿದಶಾಧಿಪಾಯ ನಮಃ
ಮಹಾಧನುಷೇ ನಮಃ
ಮಹಾಕಾಯಾಯ ನಮಃ
ಭೀಮಾಯ ನಮಃ
ಭೀಮಪರಾಕ್ರಮಾಯ ನಮಃ
ತತ್ವಸ್ವರೂಪಿಣೇ ನಮಃ ॥೨೦೦॥
ತತ್ವಜ್ಞಾನಾಯ ನಮಃ
ತತ್ವವಾದಿನೇ ನಮಃ
ಸುವಿಕ್ರಮಾಯ ನಮಃ
ಭೂತಾತ್ಮನೇ ನಮಃ
ಭೂತಕೃತೇ ನಮಃ
ಸ್ವಾಮಿನೇ ನಮಃ
ಕಾಲಜ್ಞಾನಿನೇ ನಮಃ
ಮಹಾವಪುಷೇ ನಮಃ
ಅನಿರ್ವಿಣ್ಣಾಯ ನಮಃ
ಗುಣಗ್ರಾಮಾಯ ನಮಃ
ನಿಷ್ಕಲಂಕಾಯ ನಮಃ

ಓಂ ಕಲಂಕಘ್ನೇ ನಮಃ
ಸ್ವಭಾವಭದ್ರಾಯ ನಮಃ
ಶತ್ರುಘ್ನಾಯ ನಮಃ
ಕೇಶವಾಯ ನಮಃ
ಸ್ಥಾಣವೇ ನಮಃ
ಈಶ್ವರಾಯ ನಮಃ
ಭೂತಾದಯೇ ನಮಃ
ಶಂಭವೇ ನಮಃ
ಆದಿತ್ಯಾಯ ನಮಃ
ಸ್ಥವಿಷ್ಠಾಯ ನಮಃ
ಶಾಶ್ವತಾಯ ನಮಃ
ಧ್ರುವಾಯ ನಮಃ
ಕವಚಿನೇ ನಮಃ
ಕುಂಡಲಿನೇ ನಮಃ
ಚಕ್ರಿಣೇ ನಮಃ
ಖಡ್ಗಿನೇ ನಮಃ
ಭಕ್ತಜನಪ್ರಿಯಾಯ ನಮಃ
ಅಮೃತ್ಯವೇ ನಮಃ
ಜನ್ಮರಹಿತಾಯ ನಮಃ
ಸರ್ವಜಿತೇ ನಮಃ
ಸರ್ವಗೋಚರಾಯ ನಮಃ
ಅನುತ್ತಮಾಯ ನಮಃ
ಅಪ್ರಮೇಯಾತ್ಮನೇ ನಮಃ
ಸರ್ವಾತ್ಮನೇ ನಮಃ
ಗುಣಸಾಗರಾಯ ನಮಃ

ಓಂ ಸಮಾಯ ನಮಃ
ಸಮಾರ್ತನೇ ನಮಃ
ಸಮಗಾಯ ನಮಃ
ಜಟಾಮುಕುಟಮಂಡಿತಾಯ [ನಮಃ
ಅಜೇಯಾಯ ನಮಃ
ಸರ್ವಭೂತಾತ್ಮನೇ ನಮಃ
ವಿಷ್ವಕ್ಸೇನಾಯ ನಮಃ
ಮಹಾತಪಸೇ ನಮಃ
ಲೋಕಾಧ್ಯಕ್ಷಾಯ ನಮಃ
ಮಹಾಮಾಯಾಯ ನಮಃ
ಅಮೃತಾಯ ನಮಃ
ವೇದವಿತ್ತಮಾಯ ನಮಃ
ಸಹಿಷ್ಣವೇ ನಮಃ
ಸದ್ಗತಯೇ ನಮಃ
ಶಾಸ್ತ್ರೇ ನಮಃ
ವಿಶ್ವಯೋನಯೇ ನಮಃ
ಮಹಾದ್ಯುತಯೇ ನಮಃ
ಅತೀಂದ್ರಾಯ ನಮಃ
ಊರ್ಜಿತಾಯ ನಮಃ
ಪ್ರಾಂಶವೇ ನಮಃ
ಉಪೇಂದ್ರಾಯ ನಮಃ
ವಾಮನಾಯ ನಮಃ
ಬಲಯೇ ನಮಃ
ಧನುರ್ವೇದಾಯ ನಮಃ
ವಿಧಾತ್ರೇ ನಮಃ

ಓಂ ಬ್ರಹ್ಮಣೇ ನಮಃ
ವಿಷ್ಣವೇ ನಮಃ
ಶಂಕರಾಯ ನಮಃ
ಹಂಸಾಯ ನಮಃ
ಮರೀಚಯೇ ನಮಃ
ಗೋವಿಂದಾಯ ನಮಃ
ರತ್ನಗರ್ಭಾಯ ನಮಃ
ಮಹಾದ್ಯುತಯೇ ನಮಃ
ವ್ಯಾಸಾಯ ನಮಃ
ವಾಚಸ್ಪತಯೇ ನಮಃ
ಸರ್ವದಾಯ ನಮಃ
ಪಿತ್ರೇ ನಮಃ
ಅಸುರಮಥನಾಯ ನಮಃ
ಜಾನಕೀವಲ್ಲಭಾಯ ನಮಃ
ಶ್ರೀಮತೇ ನಮಃ
ಪ್ರಕಟಾಯ ನಮಃ
ಪ್ರೀತಿವರ್ಧನಾಯ ನಮಃ
ಸಂಭವಾಯ ನಮಃ
ಅತೀಂದ್ರಿಯಾಯ ನಮಃ
ವೇದ್ಯಾಯ ನಮಃ
ಅನಿರ್ದೇಶ್ಯಾಯ ನಮಃ
ದಮನಾಯ ನಮಃ
ಮನ್ಮಥಾಯ ನಮಃ
ವ್ಯಾಪಿನೇ ನಮಃ
ವಿಶ್ವರೂಪಾಯ ನಮಃ

ಓಂ ನಿರಂಜನಾಯ ನಮಃ
ನಾರಾಯಣಾಯ ನಮಃ
ಅಗ್ರಣ್ಯೈ ನಮಃ
ಸಾಧವೇ ನಮಃ
ಜಟಾಯುಪ್ರೀತಿವರ್ಧನಾಯ
ನೈಕರೂಪಾಯ ನಮಃ [ನಮಃ
ಜಗನ್ನಾಥಾಯ ನಮಃ
ಸುರಕಾರ್ಯಹಿತಪ್ರಭವೇ ನಮಃ
ಜಿತಕ್ರೋಧಾಯ ನಮಃ
ಜಿತಾರಾತಯೇ ನಮಃ
ಪ್ಲವಗಾಧಿಪರಾಜ್ಯದಾಯ ನಮಃ
ವಸುದಾಯ ನಮಃ
ಸುಭುಜಾಯ ನಮಃ
ನೈಕಮಾಯಾಯ ನಮಃ ॥೩೦೦॥
ಭವ್ಯಾಯ ನಮಃ
ಪ್ರಮೋದಾಯ ನಮಃ
ಚಂಡಾರಯೇ ನಮಃ
ಸಿದ್ಧಿದಾಯ ನಮಃ
ಕಲ್ಪಾಯ ನಮಃ
ಶರಣಾಗತವತ್ಸಲಾಯ ನಮಃ
ಅಂಗದಾಯ ನಮಃ
ರೋಗಹರ್ತ್ರೇ ನಮಃ
ಮಂತ್ರಜ್ಞಾಯ ನಮಃ
ಮಂತ್ರಭಾವನಾಯ ನಮಃ
ಸೌಮಿತ್ರಿವತ್ಸಲಾಯ ನಮಃ

ಓಂ ಧುರ್ಯಾಯ ನಮಃ
ವ್ಯಕ್ತಾವ್ಯಕ್ತಸ್ವರೂಪಧೃತೇ ನಮಃ
ವಸಿಷ್ಠಾಯ ನಮಃ
ಗ್ರಾಮಣ್ಯೈ ನಮಃ
ಶ್ರೀಮತೇ ನಮಃ
ಅನುಕೂಲಾಯ ನಮಃ
ಪ್ರಿಯಂವದಾಯ ನಮಃ
ಅತುಲಾಯ ನಮಃ
ಸಾತ್ವಿಕಾಯ ನಮಃ
ಧೀರಾಯ ನಮಃ
ಶರಾಸನವಿಶಾರದಾಯ ನಮಃ
ಜ್ಯೇಷ್ಠಾಯ ನಮಃ
ಸರ್ವಗುಣೋಪೇತಾಯ ನಮಃ
ಶಕ್ತಿಮತೇ ನಮಃ
ತಾಟಕಾಂತಕಾಯ ನಮಃ
ವೈಕುಂಠಾಯ ನಮಃ
ಪ್ರಾಣಿನಾಂಪ್ರಾಣಾಯ ನಮಃ
ಕಮಠಾಯ ನಮಃ
ಕಮಲಾಧಿಪಾಯ ನಮಃ
ಗೋವರ್ಧನಧರಾಯ ನಮಃ
ಮತ್ಸ್ಯರೂಪಾಯ ನಮಃ
ಕಾರುಣ್ಯಸಾಗರಾಯ ನಮಃ
ಕುಂಭಕರ್ಣಪ್ರಭೇತ್ರೇ ನಮಃ
ಗೋಪೀಗೋಪಾಲಸಂವೃತಾಯ
ಮಾಯಾವಿನೇ ನಮಃ [ನಮಃ

ಓಂ ವ್ಯಾಪಕಾಯ ನಮಃ
ವ್ಯಾಪಿನೇ ನಮಃ
ರೇಣುಕೇಯ ಬಲಾಪಹಾಯ [ನಮಃ
ವಂದ್ಯಾಯ ನಮಃ
ಪಿನಾಕಮಥನಾಯ ನಮಃ
ಸಮರ್ಥಗರುಡಧ್ವಜಾಯ ನಮಃ
ಲೋಕತ್ರಯಾಶ್ರಯಾಯ ನಮಃ
ಲೋಕಭರಿತಾಯ ನಮಃ
ಭರತಾಗ್ರಜಾಯ ನಮಃ
ಶ್ರೀಧರಾಯ ನಮಃ
ಸಂಗತಯೇ ನಮಃ
ಲೋಕಸಾಕ್ಷಿಣೇ ನಮಃ
ನಾರಾಯಣಾಯ ನಮಃ
ವಿಭವೇ ನಮಃ
ಮನೋರೂಪಿಣೇ ನಮಃ
ಮನೋವೇಗಿನೇ ನಮಃ
ಪೂರ್ಣಾಯ ನಮಃ
ಪುರುಷಪುಂಗವಾಯ ನಮಃ
ಯದುಶ್ರೇಷ್ಠಾಯ ನಮಃ
ಭೂತಾವಾಸಾಯ ನಮಃ
ಸುವಿಕ್ರಮಾಯ ನಮಃ
ತೇಜಸೇ ನಮಃ
ಧರಾಧರಾಯ ನಮಃ
ಅವ್ಯಗ್ರಾಯ ನಮಃ
ಚತುರ್ಮೂರ್ತಯೇ ನಮಃ

ಓಂ ಮಹಾನಿಧಯೇ ನಮಃ
ಚಾಣೂರಮಥನಾಯ ನಮಃ
ವಂದ್ಯಾಯ ನಮಃ
ಶಾಂತಾಯ ನಮಃ
ಭರತವಂದಿತಾಯ ನಮಃ
ಶಬ್ದಾತಿಗಾಯ ನಮಃ
ಗಭೀರಾತ್ಮನೇ ನಮಃ
ಕೋಮಲಾಂಗಾಯ ನಮಃ
ಪ್ರಜಾಗರಾಯ ನಮಃ
ಲೋಕೋರ್ಧ್ವಗಾಯ ನಮಃ
ಶೇಷಶಾಯಿನೇ ನಮಃ
ಕ್ಷೀರಾಬ್ಧಿನಿಲಯಾಯ ನಮಃ
ಅಮಲಾಯ ನಮಃ
ಆತ್ಮಜ್ಯೋತಿಷೇ ನಮಃ
ಅದೀನಾತ್ಮನೇ ನಮಃ
ಸಹಸ್ರಾರ್ಚಿಷೇ ನಮಃ
ಸಹಸ್ರಪಾದೇ ನಮಃ
ಅಮೃತಾಂಶವೇ ನಮಃ
ಮಹೀಭರ್ತ್ರೇ ನಮಃ
ನಿವೃತ್ತವಿಷಯಸ್ಪೃಹಾಯ ನಮಃ
ತ್ರಿಕಾಲಜ್ಞಮುನಯೇ ನಮಃ
ಸಾಕ್ಷಿಣೇ ನಮಃ
ವಿಹಾಯಸಗತಯೇ ನಮಃ
ಕೃತಿನೇ ನಮಃ
ಪರ್ಜನ್ಯಾಯ ನಮಃ

ಓಂ ಕುಮುದಾಯ ನಮಃ
ಭೂತಾವಾಸಾಯ ನಮಃ
ಕಮಲಲೋಚನಾಯ ನಮಃ
ಶ್ರೀವತ್ಸವಕ್ಷಸೇ ನಮಃ
ಶ್ರೀವಾಸಾಯ ನಮಃ
ವೀರಘ್ನೇ ನಮಃ
ಲಕ್ಷ್ಮಣಾಗ್ರಜಾಯ ನಮಃ
ಲೋಕಾಭಿರಾಮಾಯ ನಮಃ
ಲೋಕಾರಿಮರ್ದನಾಯ ನಮಃ
ಸೇವಕಪ್ರಿಯಾಯ ನಮಃ
ಸನಾತನತಮಾಯ ನಮಃ
ಮೇಘಶ್ಯಾಮಲಾಯ ನಮಃ
ರಾಕ್ಷಸಾಂತಕಾಯ ನಮಃ
ಶ್ರೀಮತೇ ನಮಃ ||೪೦೦||
ದಿವ್ಯಾಯುಧಧರಾಯ ನಮಃ
ಅಪ್ರಮೇಯಾಯ ನಮಃ
ಜಿತೇಂದ್ರಿಯಾಯ ನಮಃ
ಭೂದೇವವಂದ್ಯಾಯ ನಮಃ
ಜನಕಪ್ರಿಯಕೃತೇ ನಮಃ
ಪ್ರಹಿತಾಯ ನಮಃ
ಉತ್ತಮಾಯ ನಮಃ
ಸಾತ್ವಿಕಾಯ ನಮಃ
ಸತ್ಯಾಯ ನಮಃ
ಸತ್ಯಧರ್ಮಪರಾಕ್ರಮಾಯ ನಮಃ
ಸುವ್ರತಾಯ ನಮಃ

ಓಂ ಸುಮುಖಾಯ ನಮಃ
ಸೂಕ್ಷ್ಮಾಯ ನಮಃ
ಸುಘೋಷಾಯ ನಮಃ
ಸುಖದಾಯ ನಮಃ
ಸುಹೃದೇ ನಮಃ
ದಾಮೋದರಾಯ ನಮಃ
ಅಚ್ಯುತಾಯ ನಮಃ
ಶಾಂರ್ಗಿಣೇ ನಮಃ
ವಾಮನಾಯ ನಮಃ
ಮಧುರಾಧಿಪಾಯ ನಮಃ
ದೇವಕೀನಂದನಾಯ ನಮಃ
ಶೌರಯೇ ನಮಃ
ಕೈಟಭಾಸುರಮರ್ದನಾಯ ನಮಃ
ಸಪ್ತತಾಳಪ್ರಭೇತ್ರೇ ನಮಃ
ಮಿತ್ರವಂಶಪ್ರವರ್ಧನಾಯ ನಮಃ
ಕಾಲಸ್ವರೂಪಿಣೇ ನಮಃ
ಕಾಲಾತ್ಮನೇ ನಮಃ
ಕಾಲಾಯ ನಮಃ
ಕಲ್ಯಾಣದಾಯ ನಮಃ
ಕಲಯೇ ನಮಃ
ಸಂವತ್ಸರಾಯ ನಮಃ
ಋತವೇ ನಮಃ
ಪಕ್ಷಾಯ ನಮಃ
ಅಯನಾಯ ನಮಃ
ದಿವಸಾಯ ನಮಃ

ಓಂ ಯುಗಾಯ ನಮಃ
ಸ್ತುವ್ಯಾಯ ನಮಃ
ವಿವಿಕ್ತಾಯ ನಮಃ
ನಿರ್ಲೇಪಾಯ ನಮಃ
ಸರ್ವವ್ಯಾಪಿನೇ ನಮಃ
ನಿರಾಕುಲಾಯ ನಮಃ
ಅನಾದಿನಿಧನಾಯ ನಮಃ
ಸರ್ವಲೋಕಪೂಜ್ಯಾಯ ನಮಃ
ನಿರಾಮಯಾಯ ನಮಃ
ರಸಾಯ ನಮಃ
ರಸಜ್ಞಾಯ ನಮಃ
ಲೋಕಸಾರಾಯ ನಮಃ
ರಸಾತ್ಮಕಾಯ ನಮಃ
ಸರ್ವದುಃಖಾತಿಗಾಯ ನಮಃ
ವಿದ್ಯಾರಾಶಯೇ ನಮಃ
ಪರಮಗೋಚರಾಯ ನಮಃ
ಶೇಷಾಯ ನಮಃ
ವಿಶೇಷಾಯ ನಮಃ
ವಿಗತಕಲ್ಮಷಾಯ ನಮಃ
ರಘುಪುಂಗವಾಯ ನಮಃ
ವರ್ಣಶ್ರೇಷ್ಠಾಯ ನಮಃ
ವರ್ಣಭಾವ್ಯಾಯ ನಮಃ
ವರ್ಣಾಯ ನಮಃ
ವರ್ಣಗುಣೋಜ್ವಲಾಯ ನಮಃ
ಕರ್ಮಸಾಕ್ಷಿಣೇ ನಮಃ

ಓಂ ಗುಣಶ್ರೇಷ್ಠಾಯ ನಮಃ
ದೇವಾಸುರಭಯಪ್ರದಾಯ ನಮಃ
ದೇವಾದಿದೇವಾಯ ನಮಃ
ದೇವರ್ಷಯೇ ನಮಃ
ದೇವಾಸುರವರಪ್ರದಾಯ ನಮಃ
ಸರ್ವದೇವಮಯಾಯ ನಮಃ
ಚಕ್ರಿಣೇ ನಮಃ
ಶಾಂರ್ಗಪಾಣಯೇ ನಮಃ
ರಘೂತ್ತಮಾಯ ನಮಃ
ಮನಸೇ ನಮಃ
ಬುದ್ಧಯೇ ನಮಃ
ಅಹಂಕಾರಾಯ ನಮಃ
ಪ್ರಕೃತಯೇ ನಮಃ
ಪುರುಷಾಯ ನಮಃ
ಅವ್ಯಯಾಯ ನಮಃ
ನ್ಯಾಯಾಯ ನಮಃ
ನ್ಯಾಯಿನೇ ನಮಃ
ನಯಿನೇ ನಮಃ
ಶ್ರೀಮತೇ ನಮಃ
ನಯಾಯ ನಮಃ
ನಗಧರಾಯ ನಮಃ
ಧ್ರುವಾಯ ನಮಃ
ಲಕ್ಷ್ಮೀವಿಶ್ವಂಭರಾಭರ್ತ್ರೇ ನಮಃ
ದೇವೇಂದ್ರಾಯ ನಮಃ
ಬಲಿಮರ್ದನಾಯ ನಮಃ

ಓಂ ಬಾಣಭೃತೇ ನಮಃ
ವರ್ಧನಾಯ ನಮಃ
ಯಜ್ವನೇ ನಮಃ
ಅನುತ್ತಮಾಯ ನಮಃ
ಮುನಿಸೇವಿತಾಯ ನಮಃ
ದೇವಾಗ್ರಣ್ಯೈ ನಮಃ
ಶಿವಧ್ಯಾನತತ್ಪರಾಯ ನಮಃ
ಪರಮಾಯ ನಮಃ
ಪರಸ್ಮೈ ನಮಃ
ಸಾಮಗಾನಪ್ರಿಯಾಯ ನಮಃ
ಶೂರಾಯ ನಮಃ
ಪುಣ್ಯಕೀರ್ತಯೇ ನಮಃ
ಸುಲೋಚನಾಯ ನಮಃ
ಅವ್ಯಕ್ತಾಯ ನಮಃ ||೫೦೦||
ಅವ್ಯಕ್ತಲಕ್ಷಣಾಯ ನಮಃ
ದಶಾಸ್ಯದ್ವಿಪಕೇಸರಿಣೇ ನಮಃ
ಕಲಾನಿಧಯೇ ನಮಃ
ಕಮಲಾನಾಥಾಯ ನಮಃ
ಕಮಲಾನಂದವರ್ಧನಾಯ ನಮಃ
ಪುಣ್ಯಾಯ ನಮಃ
ಪುಣ್ಯಾಧಿಕಾಯ ನಮಃ
ಪೂರ್ಣಾಯ ನಮಃ
ಪೂರ್ವಸ್ಮೈ ನಮಃ
ಪೂರಯಿತ್ರೇ ನಮಃ
ರವಯೇ ನಮಃ
ಓಂ ಜಟಿಲಾಯ ನಮಃ
ಕಲ್ಮಷಧ್ವಾಂತಪ್ರಭಂಜನವಿಭಾಸವೇ [ನಮಃ
ಜಯಿನೇ ನಮಃ
ಜಿತಾರಯೇ ನಮಃ
ಸರ್ವಾದಯೇ ನಮಃ
ಶಮನಾಯ ನಮಃ
ಭವಭಂಜನಾಯ ನಮಃ
ಅಲಂಕರಿಷ್ಣವೇ ನಮಃ
ಅಚಲಾಯ ನಮಃ
ರೋಚಿಷ್ಣವೇ ನಮಃ
ವಿಕ್ರಮೋತ್ತಮಾಯ ನಮಃ
ಆಶವೇ ನಮಃ
ಶಬ್ದಪತಯೇ ನಮಃ
ಶಬ್ದಗೋಚರಾಯ ನಮಃ
ರಂಜನಾಯ ನಮಃ
ಲಘವೇ ನಮಃ
ನಿಶ್ಶಬ್ದಾಯ ನಮಃ
ಪುರುಷಾಯ ನಮಃ
ಮಾಯಿನೇ ನಮಃ
ಸ್ಥೂಲಾಯ ನಮಃ
ಸೂಕ್ಷ್ಮಾಯ ನಮಃ
ವಿಲಕ್ಷಣಾಯ ನಮಃ
ಆತ್ಮಯೋನಯೇ ನಮಃ
ಅಯೋನಯೇ ನಮಃ
ಸಪ್ತಜಿಹ್ವಾಯ ನಮಃ

ಓಂ ಸಹಸ್ರಪಾದೇ ನಮಃ
ಸನತನತಮಾಯ ನಮಃ
ಸ್ರಗ್ವಿಣೇ ನಮಃ
ಪೇಶಲಾಯ ನಮಃ
ಜೀವಿನಾಂವರಾಯ ನಮಃ
ಶಕ್ತಿಮತೇ ನಮಃ
ಶಕ್ತಿಭೃತೇ ನಮಃ
ನಾದಾಯ ನಮಃ
ಗದಾಖಡ್ಗರಥಾಂಗಭೃತೇ ನಮಃ
ನಿರೀಹಾಯ ನಮಃ
ನಿರ್ವಿಕಲ್ಪಾಯ ನಮಃ
ಚಿದ್ರೂಪಾಯ ನಮಃ
ವೀತಸಾಧ್ವಸಾಯ ನಮಃ
ಶತಾನನಾಯ ನಮಃ
ಸಹಸ್ರಾಕ್ಷಾಯ ನಮಃ
ಶತಮೂರ್ತಯೇ ನಮಃ
ಘನಪ್ರಭಾಯ ನಮಃ
ಹೃತ್ಪುಂಡರೀಕಶಯನಾಯ ನಮಃ
ಕಠಿಣಾಯ ನಮಃ
ದ್ರವಾಯ ನಮಃ
ಸೂರ್ಯಾಯ ನಮಃ
ಗ್ರಹಪತಯೇ ನಮಃ
ಕೃಷ್ಣಾಯ ನಮಃ
ಸಮರ್ಥಾಯ ನಮಃ
ಅನರ್ಥನಾಶನಾಯ ನಮಃ

ಓಂ ಅಧರ್ಮಶತ್ರವೇ ನಮಃ
ರಕ್ಷೋಘ್ನಾಯ ನಮಃ
ಪುರುಹೂತಾಯ ನಮಃ
ಪುರುಷ್ಟುತಾಯ ನಮಃ
ಬ್ರಹ್ಮಗರ್ಭಾಯ ನಮಃ
ಬೃಹದ್ಗರ್ಭಾಯ ನಮಃ
ಧರ್ಮಧೇನವೇ ನಮಃ
ಧನಾಗಮಾಯ ನಮಃ
ಹಿರಣ್ಯಗರ್ಭಾಯ ನಮಃ
ಜ್ಯೋತಿಷ್ಮತೇ ನಮಃ
ಸುಲಲಾಟಾಯ ನಮಃ
ಸುವಿಕ್ರಮಾಯ ನಮಃ
ಶಿವಪೂಜಾರತಾಯ ನಮಃ
ಶ್ರೀಮತೇ ನಮಃ
ಭವಾನೀಪ್ರಿಯಕೃತೇ ನಮಃ
ವಶಿನೇ ನಮಃ
ನರನಾರಾಯಣಾತ್ಮನೇ ನಮಃ
ಕಪರ್ದಿನೇ ನಮಃ
ನೀಲಲೋಹಿತಾಯ ನಮಃ
ರುದ್ರಾಯ ನಮಃ
ಪಶುಪತಯೇ ನಮಃ
ಸ್ಥಾಣವೇ ನಮಃ
ವಿಶ್ವಾಮಿತ್ರಾಯ ನಮಃ
ದ್ವಿಜೇಶ್ವರಾಯ ನಮಃ
ಮಾತಾಮಹಾಯ ನಮಃ

ಓಂ ಮಾತರಿಶ್ವನೇ ನಮಃ
ವಿರಿಂಚಯೇ ನಮಃ
ವಿಷ್ಟರಶ್ರವಸೇ ನಮಃ
ಅಕ್ಷೋಭ್ಯಾಯ ನಮಃ
ಸರ್ವಭೂತಾನಾಂಚಂಡಾಯ ನಮಃ
ಸತ್ಯಪರಾಕ್ರಮಾಯ ನಮಃ
ವಾಲಖಿಲ್ಯಾಯ ನಮಃ
ಮಹಾಕಲ್ಪಾಯ ನಮಃ
ಕಲ್ಪವೃಕ್ಷಾಯ ನಮಃ
ಕಲಾಧರಾಯ ನಮಃ
ನಿದಾನಾಯ ನಮಃ
ತಪನಾಯ ನಮಃ
ಮೋಘಾಯ ನಮಃ
ಶುಕ್ರಾಯ ನಮಃ ॥೬೦೦॥
ಪರಬಲಾಪಹೃತೇ ನಮಃ
ವಿಸುಶ್ರವಸೇ ನಮಃ
ಕಾವ್ಯವಾಹಾಯ ನಮಃ
ಪ್ರತಪ್ತಾಯ ನಮಃ
ವಿಶ್ವಭೋಜನಾಯ ನಮಃ
ರಾಮಾಯ ನಮಃ
ನೀಲೋತ್ಪಲಾಯ ನಮಃ
ಜ್ಞಾನಸ್ಕಂಧಾಯ ನಮಃ
ಮಹಾದ್ಯುತಯೇ ನಮಃ
ಕಬಂಧಮಥನಾಯ ನಮಃ
ದಿವ್ಯಾಯ ನಮಃ

ಓಂ ಕಂಬುಗ್ರೀವಾಯ ನಮಃ
ಶಿವಪ್ರಿಯಾಯ ನಮಃ
ಸುಖಾಯ ನಮಃ
ನೀಲಾಯ ನಮಃ
ಸುನಿಷ್ಪನ್ನಾಯ ನಮಃ
ಸುಲಭಾಯ ನಮಃ
ಶಿಶಿರಾತ್ಮಕಾಯ ನಮಃ
ಅಸಂಸೃಷ್ಟಾಯ ನಮಃ
ಅತಿಥಯೇ ನಮಃ
ಶೂರಾಯ ನಮಃ
ಪ್ರಮಾಥಿನೇ ನಮಃ
ಪಾಪನಾಶಕೃತೇ ನಮಃ
ಪವಿತ್ರಪಾದಾಯ ನಮಃ
ಪಾಪಾರಯೇ ನಮಃ
ಮಣಿಪೂರಾಯ ನಮಃ
ನಭೋಗತಯೇ ನಮಃ
ಉತ್ತರಣಾಯ ನಮಃ
ದುಷ್ಕೃತಿಘ್ನೇ ನಮಃ
ದುರ್ಧರ್ಷಾಯ ನಮಃ
ದುಸ್ಸಹಾಯ ನಮಃ
ಬಲಾಯ ನಮಃ
ಅಮೃತೇಶಾಯ ನಮಃ
ಅಮೃತವಪುಷೇ ನಮಃ
ಧರ್ಮಿಣೇ ನಮಃ
ಧರ್ಮಾಯ ನಮಃ

ಓಂ ಕೃಪಾಕರಾಯ ನಮಃ
ಭರ್ಗಾಯ ನಮಃ
ವಿವಸ್ವತೇ ನಮಃ
ಆದಿತ್ಯಾಯ ನಮಃ
ಯೋಗಾಚಾರ್ಯಾಯ ನಮಃ
ದಿವಸ್ಪತಯೇ ನಮಃ
ಉದಾರಕೀರ್ತಯೇ ನಮಃ
ಉದ್ಯೋಗಿನೇ ನಮಃ
ವಾಙ್ಮಯಾಯ ನಮಃ
ಸದಸನ್ಮಯಾಯ ನಮಃ
ನಕ್ಷತ್ರನೇಮಯೇ ನಮಃ
ನಾಕೇಶಾಯ ನಮಃ
ಸ್ವಾಧಿಷ್ಠಾನಾಯ ನಮಃ
ಷಡಾನನಾಯ ನಮಃ
ಚತುರ್ವರ್ಗಫಲಾಯ ನಮಃ
ವರ್ಣಶಕ್ತಿತ್ರಯಫಲಾಯ ನಮಃ
ವಿಧಯೇ ನಮಃ
ನಿಧಾನಗರ್ಭಾಯ ನಮಃ
ನಿರ್ವ್ಯಾಜಾಯ ನಮಃ
ನಿರೀಶಾಯ ನಮಃ
ವ್ಯಾಳಮರ್ದನಾಯ ನಮಃ
ಶ್ರೀವಲ್ಲಭಾಯ ನಮಃ
ಶಿವಾರಂಭಾಯ ನಮಃ
ಶಾಂತಭದ್ರಾಯ ನಮಃ
ಸಮಂಜಸಾಯ ನಮಃ

ಓಂ ಭೂಶಾಯಿನೇ ನಮಃ
ಭೂತಕೃತೇ ನಮಃ
ಭೂತಿಭೂಷಣಾಯ ನಮಃ
ಭೂತವಾಹನಾಯ ನಮಃ
ಅಕಾಯಾಯ ನಮಃ
ಭಕ್ತಕಾಯಸ್ಥಾಯ ನಮಃ
ಕಾಲಜ್ಞಾನಿನೇ ನಮಃ
ಮಹಾವಟವೇ ನಮಃ
ಪರಾರ್ಥವೃತ್ತಯೇ ನಮಃ
ಅಚಲಾಯ ನಮಃ
ವಿವಿಕ್ತಾಯ ನಮಃ
ಶ್ರುತಿಸಾಗರಾಯ ನಮಃ
ಸ್ವಭಾವಭದ್ರಾಯ ನಮಃ
ಮಧ್ಯಸ್ಥಾಯ ನಮಃ
ಸಂಸಾರಭಯನಾಶನಾಯ ನಮಃ
ವೇದಾಯ ನಮಃ
ವೇದ್ಯಾಯ ನಮಃ
ವಿಯದ್ಗೋಪ್ತ್ರೇ ನಮಃ
ಸರ್ವಾಮರಮುನೀಶ್ವರಾಯ ನಮಃ
ಸುರೇಂದ್ರಾಯ ನಮಃ
ಕಾರಣಾಯ ನಮಃ
ಕರ್ಮಕರಾಯ ನಮಃ
ಕರ್ಮಿಣೇ ನಮಃ
ಅಧೋಕ್ಷಜಾಯ ನಮಃ
ಧೈರ್ಯಾಯ ನಮಃ

ಓಂ ಅಗ್ರಧುರ್ಯಾಯ ನಮಃ
ಧಾತ್ರೀಶಾಯ ನಮಃ
ಸಂಕಲ್ಪಾಯ ನಮಃ
ಶರ್ವರೀಪತಯೇ ನಮಃ
ಪರಮಾರ್ಥಗುರುವೇ ನಮಃ
ಧೃಷ್ಟಯೇ ನಮಃ
ರುಚಿರಾಶ್ರಿತವತ್ಸಲಾಯ ನಮಃ
ವಿಷ್ಣವೇ ನಮಃ
ಜಿಷ್ಣವೇ ನಮಃ
ಯಜ್ಞವಿಭವೇ ನಮಃ
ಯಜ್ಞೇಶಾಯ ನಮಃ
ಯಜ್ಞಪಾವಕಾಯ ನಮಃ
ಮಹಾವಿಷ್ಣವೇ ನಮಃ
ಗ್ರಸಿಷ್ಣವೇ ನಮಃ ॥೭೦೦॥
ಲೋಕಾತ್ಮನೇ ನಮಃ
ಲೋಕಪಾವಕಾಯ ನಮಃ
ಕೇಶವಾಯ ನಮಃ
ಕೇಶಿಘ್ನೇ ನಮಃ
ಕಾವ್ಯಾಯ ನಮಃ
ಕವಯೇ ನಮಃ
ಕಾರಣಕಾರಣಾಯ ನಮಃ
ಕಾಲವಕ್ತ್ರೇ ನಮಃ
ಕಾಲಶೇಷಾಯ ನಮಃ
ವಾಸುದೇವಾಯ ನಮಃ
ಪುರುಷ್ಟುತಾಯ ನಮಃ

ಓಂ ಆದಿಕರ್ತ್ರೇ ನಮಃ
ನಿರೀಹಾಯ ನಮಃ
ಮಾಧವಾಯ ನಮಃ
ಮಧುಸೂದನಾಯ ನಮಃ
ನಾರಾಯಣಾಯ ನಮಃ
ನರಾಯ ನಮಃ
ಹಂಸಾಯ ನಮಃ
ವಿಷ್ವಕ್ಸೇನಾಯ ನಮಃ
ಜನಾರ್ದನಾಯ ನಮಃ
ವಿಶ್ವಕರ್ತ್ರೇ ನಮಃ
ಮಹಾಯಜ್ಞಾಯ ನಮಃ
ಜ್ಯೋತಿಷ್ಮತೇ ನಮಃ
ಪುರುಷೋತ್ತಮಾಯ ನಮಃ
ವೈಕುಂಠಾಯ ನಮಃ
ಪುಂಡರೀಕಾಕ್ಷಾಯ ನಮಃ
ಕೃಷ್ಣಾಯ ನಮಃ
ಸೂರ್ಯಾಯ ನಮಃ
ಸುರಾರ್ಚಿತಾಯ ನಮಃ
ನರಸಿಂಹಾಯ ನಮಃ
ಮಹಾಭೀಮವಜ್ರದಂಷ್ಟ್ರನಖಾಯುಧಾಯ ನಮಃ
ಜಗತ್ಕರ್ತ್ರೇ ನಮಃ
ಆದಿದೇವಾಯ ನಮಃ
ಯೋಗೀಶಾಯ ನಮಃ
ಗರುಡಧ್ವಜಾಯ ನಮಃ
ಗೋವಿಂದಾಯ ನಮಃ

ಓಂ ಗೋಪತಯೇ ನಮಃ	ಓಂ ಕಾರುಣ್ಯಾಯ ನಮಃ
ಗೋಪ್ತ್ರೇ ನಮಃ	ಕರುಣಾಯ ನಮಃ
ಭೂಪತಯೇ ನಮಃ	ವ್ಯಾಸಾಯ ನಮಃ
ಭುವನೇಶ್ವರಾಯ ನಮಃ	ಪಾಪಘ್ನೇ ನಮಃ
ಪದ್ಮನಾಭಾಯ ನಮಃ	ಶಾಂತಿವರ್ಧನಾಯ ನಮಃ
ಹೃಷೀಕೇಶಾಯ ನಮಃ	ಬದರೀನಿಲಯಾಯ ನಮಃ
ಧಾತ್ರೇ ನಮಃ	ಶಾಂತಾಯ ನಮಃ
ದಾಮೋದರಪ್ರಭವೇ ನಮಃ	ತಪಸ್ವಿನೇ ನಮಃ
ತ್ರಿವಿಕ್ರಮಾಯ ನಮಃ	ವೈದ್ಯುತಪ್ರಭವೇ ನಮಃ
ತ್ರಿಲೋಕೇಶಾಯ ನಮಃ	ಭೂತಾವಾಸಾಯ ನಮಃ
ಬ್ರಹ್ಮೇಶಾಯ ನಮಃ	ಮಹಾವಾಸಾಯ ನಮಃ
ಪ್ರೀತಿವರ್ಧನಾಯ ನಮಃ	ಶ್ರೀನಿವಾಸಾಯ ನಮಃ
ಸನ್ಯಾಸಿನೇ ನಮಃ	ಶ್ರೀಯಃಪತಯೇ ನಮಃ
ಶಾಸ್ತ್ರತತ್ವಜ್ಞಾಯ ನಮಃ	ತಪೋವಾಸಾಯ ನಮಃ
ಮಂದರಾದ್ರಿನಿಕೇತನಾಯ ನಮಃ	ಮುದಾವಾಸಾಯ ನಮಃ
ನಾಮನಾಯ ನಮಃ	ಸತ್ಯವಾಸಾಯ ನಮಃ
ದುಷ್ಟದಮನಾಯ ನಮಃ	ಸನಾತನಾಯ ನಮಃ
ಗೋವಿಂದಾಯ ನಮಃ	ಪುರುಷಾಯ ನಮಃ
ಗೋಪವಲ್ಲಭಾಯ ನಮಃ	ಪುಣ್ಯವತೇ ನಮಃ
ಭಕ್ತಪ್ರಿಯಾಯ ನಮಃ	ಪುಣ್ಯಾಯ ನಮಃ
ಅಚ್ಯುತಾಯ ನಮಃ	ಪುಷ್ಕರಾಕ್ಷಾಯ ನಮಃ
ಸತ್ಯಾಯ ನಮಃ	ಮಹೇಶ್ವರಾಯ ನಮಃ
ಸತ್ಯಕೀರ್ತಯೇ ನಮಃ	ಪೂರ್ಣಮೂರ್ತಯೇ ನಮಃ
ಧೃತಯೇ ನಮಃ	ಪುರಾಣಜ್ಞಾಯ ನಮಃ
ಸ್ಮೃತಯೇ ನಮಃ	ಪುಣ್ಯದಾಯ ನಮಃ

ಓಂ ಪ್ರೀತಿವರ್ಧನಾಯ ನಮಃ
ಪೂರ್ಣರೂಪಾಯ ನಮಃ
ಕಾಲಚಕ್ರಪವರ್ತನಾಯ ನಮಃ
ಸಮಾಹಿತಾಯ ನಮಃ
ನಾರಾಯಣಾಯ ನಮಃ
ಪರಸ್ಮೈಜ್ಯೋತಿಷೇ ನಮಃ
ಪರಮಾತ್ಮನೇ ನಮಃ
ಸದಾಶಿವಾಯ ನಮಃ
ಶಂಖಿನೇ ನಮಃ
ಚಕ್ರಿಣೇ ನಮಃ
ಗದಿನೇ ನಮಃ
ಶಾಂರ್ಗಿಣೇ ನಮಃ
ಲಾಂಗಲಿನೇ ನಮಃ ||೮೦೦||
ಮುಸಲಿನೇ ನಮಃ
ಹಲಿನೇ ನಮಃ
ಕಿರೀಟಿನೇ ನಮಃ
ಕುಂಡಿಲಿನೇ ನಮಃ
ಹಾರಿಣೇ ನಮಃ
ಮೇಖಲಿನೇ ನಮಃ
ಕವಚಿನೇ ನಮಃ
ಧ್ವಜಿನೇ ನಮಃ
ಯೋಧಜೇತ್ರೇ ನಮಃ
ಮಹಾವೀರ್ಯಾಯ ನಮಃ
ಶತ್ರುಘ್ನಾಯ ನಮಃ
ಶತ್ರುತಾಪನಾಯ ನಮಃ

ಓಂ ಶಾಸ್ತ್ರೇ ನಮಃ
ಶಾಸ್ತ್ರಕರಾಯ ನಮಃ
ಶಾಸ್ತ್ರಾಯ ನಮಃ
ಶಂಕರಾಯ ನಮಃ
ಶಂಕರಸ್ತುತಾಯ ನಮಃ
ಸಾರಥಿನೇ ನಮಃ
ಸಾತ್ವಿಕಸ್ವಾಮಿನೇ ನಮಃ
ಸಾಮವೇದಪ್ರಿಯಾಯ ನಮಃ
ಪವನಾಯ ನಮಃ
ಸಂಹತಾಯ ನಮಃ
ಶಕ್ತಯೇ ನಮಃ
ಸಂಪೂರ್ಣಾಂಗಾಯ ನಮಃ
ಸಮೃದ್ಧಿಮತೇ ನಮಃ
ಸ್ವರ್ಗದಾಯ ನಮಃ
ಕಾಮದಾಯ ನಮಃ
ಶ್ರೀದಾಯ ನಮಃ
ಕೀರ್ತಿದಾಯ ನಮಃ
ಕೀರ್ತಿದಾಯಕಾಯ ನಮಃ
ಮೋಕ್ಷದಾಯ ನಮಃ
ಪುಂಡರೀಕಾಕ್ಷಾಯ ನಮಃ
ಕ್ಷೀರಾಬ್ಧಿಕೃತಕೇತನಾಯ ನಮಃ
ಸರ್ವಾತ್ಮನೇ ನಮಃ
ಸರ್ವಲೋಕಾಯ ನಮಃ
ಪ್ರೇರಕಾಯ ನಮಃ
ಪಾಪನಾಶನಾಯ ನಮಃ

ಓಂ ವೈಕುಂಠಾಯ ನಮಃ
ಪುಂಡರೀಕಾಕ್ಷಾಯ ನಮಃ
ಸರ್ವದೇವನಮಸ್ಕೃತಾಯ ನಮಃ
ಸರ್ವವ್ಯಾಪಿನೇ ನಮಃ
ಜಗನ್ನಾಥಾಯ ನಮಃ
ಸರ್ವಲೋಕಮಹೇಶ್ವರಾಯ ನಮಃ
ಸರ್ಗಸ್ಥಿತ್ಯಂತಕೃದ್ದೇವಾಯ ನಮಃ
ಸರ್ವಲೋಕಸುಖಾವಹಾಯ ನಮಃ
ಅಕ್ಷಯಾಯ ನಮಃ
ಶಾಶ್ವತಾಯ ನಮಃ
ಅನಂತಾಯ ನಮಃ
ಕ್ಷಯವೃದ್ಧಿವಿವರ್ಜಿತಾಯ ನಮಃ
ನಿರ್ಲೇಪಾಯ ನಮಃ
ನಿರ್ಗುಣಾಯ ನಮಃ
ಸೂಕ್ಷ್ಮಾಯ ನಮಃ
ನಿರ್ವಿಕಾರಾಯ ನಮಃ
ನಿರಂಜನಾಯ ನಮಃ
ಸರ್ವೋಪಾಧಿವಿನಿರ್ಮುಕ್ತಾಯ [ನಮಃ
ಅವಿಕಾರಿಣೇ ನಮಃ
ಸತ್ತಾಮಾತ್ರವ್ಯವಸ್ಥಿತಾಯ ನಮಃ
ವಿಭವೇ ನಮಃ
ನಿತ್ಯಾಯ ನಮಃ
ಪರಮಾತ್ಮನೇ ನಮಃ
ಸನಾತನಾಯ ನಮಃ
ಅಚಲಾಯ ನಮಃ

ಓಂ ನಿಶ್ಚಲಾಯ ನಮಃ
ವ್ಯಾಪಿನೇ ನಮಃ
ನಿತ್ಯತೃಪ್ತಾಯ ನಮಃ
ನಿರಾಶ್ರಿತಾಯ ನಮಃ
ಶ್ಯಾಮಾಯ ನಮಃ
ಯೂನೇ ನಮಃ
ಲೋಹಿತಾಕ್ಷಾಯ ನಮಃ
ದೀಪ್ತಿಶೋಭಿತಭೂಷಣಾಯ ನಮಃ
ಆಜಾನುಬಾಹವೇ ನಮಃ
ಸುಮುಖಾಯ ನಮಃ
ಸಿಂಹಸ್ಕಂಧಾಯ ನಮಃ
ಮಹಾಭುಜಾಯ ನಮಃ
ಸತ್ತ್ವವತೇ ನಮಃ
ಗುಣಸಂಪನ್ನಾಯ ನಮಃ
ಸ್ವತೇಜಸಾದೀಪ್ಯಮಾನಾಯ ನಮಃ
ಕಾಲಸ್ವರೂಪಿಣೇ ನಮಃ
ಭಗವತೇ ನಮಃ
ಕಾಲಚಕ್ರಪ್ರವರ್ತನಾಯ ನಮಃ
ನಾರಾಯಣಾಯ ನಮಃ
ಪರಸ್ಮೈಜ್ಯೋತಿಷೇ ನಮಃ
ಪರಮಾತ್ಮನೇ ನಮಃ
ಸನಾತನಾಯ ನಮಃ
ವಿಶ್ವಕೃತೇ ನಮಃ
ವಿಶ್ವಭೋಕ್ತ್ರೇ ನಮಃ
ವಿಶ್ವಗೋಪ್ತ್ರೇ ನಮಃ

ಓಂ ಶಾಶ್ವತಾಯ ನಮಃ
ವಿಶ್ವಂಭರಾಯ ನಮಃ
ವಿಶ್ವಮೂರ್ತಯೇ ನಮಃ
ವಿಶ್ವಾತ್ಮನೇ ನಮಃ
ವಿಶ್ವಭಾವನಾಯ ನಮಃ
ಸರ್ವಭೂತಸುಹೃದೇ ನಮಃ
ಶಾಂತಾಯ ನಮಃ
ಸರ್ವಭೂತಾನುಕಂಪನಾಯ ನಮಃ
ಸರ್ವೇಶ್ವರಾಯ ನಮಃ
ಸರ್ವಶರ್ವಾಯ ನಮಃ
ಸರ್ವದಾಶ್ರಿತವತ್ಸಲಾಯ ನಮಃ
ಸರ್ವಗಾಯ ನಮಃ
ಸರ್ವಭೂತಾಶಯಸ್ಥಿತಾಯ ನಮಃ
ಸರ್ವಭೂತೇಶಾಯ ನಮಃ ॥೯೦೦॥
ಅಭ್ಯಂತರಸ್ಥಾಯ ನಮಃ
ತಮಸಶ್ಛೇತ್ರೇ ನಮಃ
ನಾರಾಯಣಾಯ ನಮಃ
ಪರಸ್ಮೈ ನಮಃ
ಅನಾದಿನಿಧನಾಯ ನಮಃ
ಸ್ರಷ್ಟ್ರೇ ನಮಃ
ಪ್ರಜಾಪತಿಪತಯೇ ನಮಃ
ಹರಯೇ ನಮಃ
ನರಸಿಂಹಾಯ ನಮಃ
ಹೃಷೀಕೇಶಾಯ ನಮಃ
ಸರ್ವಾತ್ಮನೇ ನಮಃ

ಓಂ ಸರ್ವದೃಶೇ ನಮಃ
ವಶಿನೇ ನಮಃ
ಜಗತಸ್ತಸ್ಥುಷಸ್ವಾಮಿನೇ ನಮಃ
ಪ್ರಭವೇ ನಮಃ
ನೇತ್ರೇ ನಮಃ
ಸನಾತನಾಯ ನಮಃ
ಕರ್ತ್ರೇ ನಮಃ
ಧಾತ್ರೇ ನಮಃ
ವಿಧಾತ್ರೇ ನಮಃ
ಸರ್ವೇಷಾಂಪತಯೇ ನಮಃ
ಈಶ್ವರಾಯ ನಮಃ
ಸಹಸ್ರಮೂರ್ಧ್ನೇ ನಮಃ
ವಿಶ್ವಾತ್ಮನೇ ನಮಃ
ವಿಷ್ಣವೇ ನಮಃ
ವಿಶ್ವಭುಜೇ ನಮಃ
ಅವ್ಯಯಾಯ ನಮಃ
ಪುರಾಣಪುರುಷಾಯ ನಮಃ
ಶ್ರೇಷ್ಠಾಯ ನಮಃ
ಸಹಸ್ರಾಕ್ಷಾಯ ನಮಃ
ಸಹಸ್ರಪದೇ ನಮಃ
ತತ್ವಾಯ ನಮಃ
ನಾರಾಯಣಾಯ ನಮಃ
ವಿಷ್ಣವೇ ನಮಃ
ವಾಸುದೇವಾಯ ನಮಃ
ಸನಾತನಾಯ ನಮಃ

ಓಂ ಪರಮಾತ್ಮನೇ ನಮಃ
ಪರಬ್ರಹ್ಮಣೇ ನಮಃ
ಸಚ್ಚಿದಾನಂದಾಯ ನಮಃ
ಪರಸ್ಮೈಜ್ಯೋತಿಷೇ ನಮಃ
ಪರಂಧಾಮ್ನೇ ನಮಃ
ಪರಾಕಾಶಾಯ ನಮಃ
ಪರಾತ್ಪರಾಯ ನಮಃ
ಅಚ್ಯುತಾಯ ನಮಃ
ಪುರುಷಾಯ ನಮಃ
ಕೃಷ್ಣಾಯ ನಮಃ
ಶಾಶ್ವತಾಯ ನಮಃ
ಶಿವಾಯ ನಮಃ
ಈಶ್ವರಾಯ ನಮಃ
ನಿತ್ಯಾಯ ನಮಃ
ಸರ್ವಗತಾಯ ನಮಃ
ಸ್ಥಾಣವೇ ನಮಃ
ರುದ್ರಾಯ ನಮಃ
ಸಾಕ್ಷಿಣೇ ನಮಃ
ಪ್ರಜಾಪತಯೇ ನಮಃ
ಹಿರಣ್ಯಗರ್ಭಾಯ ನಮಃ
ಸವಿತ್ರೇ ನಮಃ
ಲೋಕಕೃತೇ ನಮಃ
ಲೋಕಭುಜೇ ನಮಃ
ವಿಭವೇ ನಮಃ
ಓಂಕಾರವಾಚ್ಯಾಯ ನಮಃ

ಓಂ ಭಗವತೇ ನಮಃ
ಶ್ರೀ ಭೂನಿಲಾಪತಯೇ ನಮಃ
ಪ್ರಭವೇ ನಮಃ
ಸರ್ವಲೋಕೇಶ್ವರಾಯ ನಮಃ
ಶ್ರೀಮತೇ ನಮಃ
ಸರ್ವಜ್ಞಾಯ ನಮಃ
ಸರ್ವತೋಮುಖಾಯ ನಮಃ
ಸ್ವಾಮಿನೇ ನಮಃ
ಸುಶೀಲಾಯ ನಮಃ
ಸುಲಭಾಯ ನಮಃ
ಸರ್ವಗಾಯ ನಮಃ
ಸರ್ವಶಕ್ತಿಮತೇ ನಮಃ
ನಿತ್ಯಾಯ ನಮಃ
ಸಂಪೂರ್ಣಾಯ ನಮಃ
ನೈಸರ್ಗಿಕಸುಹೃದೇ ನಮಃ
ಸುಖಿನೇ ನಮಃ
ಕೃಪಾಪೀಯೂಷಜಲಧಯೇ
ಸರ್ವದೇಹಿನಾಂಶರಣ್ಯಾಯ ನಮಃ
ಶ್ರೀಮನ್ನಾರಾಯಣಸ್ವಾಮಿನೇ
ಜಗತಾಂಪ್ರಭವೇ ನಮಃ [ನಮಃ
ಈಶ್ವರಾಯ ನಮಃ
ಅಯೋಧ್ಯೇಶಾಯ ನಮಃ
ನೃಪಶ್ರೇಷ್ಠಾಯ ನಮಃ
ಕುಶಬಾಲಾಯ ನಮಃ
ಪರಂತಪಾಯ ನಮಃ

ಓಂ ಲವಬಾಲಾಯ ನಮಃ
ಕಂಜನೇತ್ರಾಯ ನಮಃ
ಕಂಜಾಂಘ್ರಯೇ ನಮಃ
ಕಂಜಾನನಾಯ ನಮಃ
ಸೀತಾಕಾಂತಾಯ ನಮಃ
ಸೌಮ್ಯರೂಪಾಯ ನಮಃ
ಶಿಶುಜೀವನತತ್ಪರಾಯ ನಮಃ
ಸೇತುಕೃತೇ ನಮಃ
ಚಿತ್ರಕೂಟಸ್ಥಾಯ ನಮಃ
ಶಬರೀಸಂಸ್ತುತಾಯ ನಮಃ
ಪ್ರಭವೇ ನಮಃ
ಯೋಗಿಧ್ಯೇಯಾಯ ನಮಃ
ಶಿವಧ್ಯೇಯಾಯ ನಮಃ
ಅನಂತಾಯ ನಮಃ ॥೧೦೦೦॥
ಸರ್ವಭೂತಾನಾಂಶರಣ್ಯಾಯ ನಮಃ
ಸಂಶ್ರಿತಾಭೀಷ್ಟದಾಯಕಾಯ [ನಮಃ

ಓಂ ರಾವಣಾಸುರದರ್ಪಘ್ನೇ ನಮಃ
ಶ್ರೀಪತಯೇ ನಮಃ
ಶೂರಾಯ ನಮಃ
ಗುಣಭೃತೇ ನಮಃ
ನಿರ್ಗುಣಾಯ ನಮಃ
ಮಹತೇ ನಮಃ
ಮತ್ಸ್ಯಾಯ ನಮಃ
ಕೂರ್ಮಾಯ ನಮಃ
ವರಾಹಾಯ ನಮಃ
ನರಸಿಂಹಾಯ ನಮಃ
ವಾಮನಾಯ ನಮಃ
ರಾಮಾಯ ನಮಃ
ಶ್ರೀ ರಾಮಾಯ ನಮಃ
ಕೃಷ್ಣಾಯ ನಮಃ
ಬೌದ್ಧಾಯ ನಮಃ
ಕಲ್ಕಯೇ ನಮಃ
ಪರಾತ್ಪರಾಯ ನಮಃ

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ಶ್ರೀ ನಾರದಮಹರ್ಷಿಕೃತ ಶ್ರೀರಾಮ ದಿವ್ಯಸಹಸ್ರನಾಮಾವಳಿಃ
ಸಂಪೂರ್ಣಃ

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ

॥ ದ್ವಿತೀಯಸ್ಸರ್ಗಃ ॥

॥ ಶ್ರೀ ವಿಷ್ಣುದಾಸ ಉವಾಚ ॥

ಗುರೋ ತ್ವಯಾ ರಾಮನಾಮಸಹಸ್ರಂ ರಾಘವಸ್ಯ ಚ ।
ಧ್ಯಾನಂ ಕಲ್ಪತರೋರ್ಮೂಲೇ ಕಥಿತಂ ಸ್ವರ್ಣಪೀಠಕೇ ॥ ೧ ॥

ಸಂದೇಹಸ್ತೇನ ಮೇ ಜಾತಃ ಕಲ್ಪವೃಕ್ಷಃ ಕಥಂ ಭುವಿ ।
ಅಯೋಧ್ಯಾಯಾಂ ರಾಮಗೇಹೇ ಸ್ವರ್ಗಲೋಕಾತ್ಸಮಾಗತಃ ॥ ೨ ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ

ಎರಡನೆಯ ಸರ್ಗವು

೧. ವಿಷ್ಣುದಾಸನು ಹೇಳಿದನು— ಎಲೈ ಗುರುವೆ! ಶ್ರೀರಾಮನ ದಿವ್ಯಸಹಸ್ರನಾಮವನ್ನೂ ಕಲ್ಪವೃಕ್ಷದ ಕೆಳಗೆ ಚಿನ್ನದ ಪೀಠದಲ್ಲಿರುವಂತೆ ಅವನ ಧ್ಯಾನವನ್ನೂ ಉಪದೇಶಮಾಡಿದೆ.

೨. ಇದರಿಂದ ನನಗೆ ಒಂದು ಸಂದೇಹವುಂಟಾಯಿತು. ಭೂಲೋಕದಲ್ಲಿರುವ ಅಯೋಧ್ಯೆಯಲ್ಲಿಗೆ ಕಲ್ಪವೃಕ್ಷವು ಸ್ವರ್ಗದಿಂದ ಹೇಗೆತಾನೆ ಬಂದೀತು? ಕಲ್ಪವೃಕ್ಷವು ಸಮುದ್ರದಲ್ಲಿ ಹುಟ್ಟಿದ ಸ್ವರ್ಗಲೋಕದಲ್ಲಿರುವ ದೇವತೆಗಳ ಮರವಲ್ಲವೆ?

ಅಮುಂ ಮೇ ಸಂಶಯಂ ಛಿಂಧಿ ಕೃಪಾಂ ಕೃತ್ವಾದ್ಯ ಮಾಂ ಗುರೋ ।
॥ ಶ್ರೀರಾಮದಾಸ ಉವಾಚ ॥
ಸಮ್ಯಕ್ಪೃಷ್ಟಂ ವಿಷ್ಣುದಾಸ ಸಾವಧಾನಮನಾಃ ಶೃಣು ॥ ೩ ॥

ಏಕದಾ ರಾಘವಂ ದ್ರಷ್ಟುಂ ದೂರ್ವಾಸಾ ಮುನಿರಭ್ಯಗಾತ್ ।
ಶಿಷ್ಯೈಷ್ಷಷ್ಟಿಸಹಸ್ರೈಶ್ಚ ವೇಷ್ಟಿತೋಽಚಿಂತಯತ್ಪಥಿ ॥ ೪ ॥

ವಿಷ್ಣುರ್ಮನುಜರೂಪೇಣ ರಾಮೋ ಜಾತೋತ್ರ ವೇದ್ಮ್ಯಹಂ ।
ತಥಾಪಿಲೋಕಾನ್ ರಾಮಸ್ಯ ದರ್ಶಯಿಷ್ಯಾಮಿ ಪೌರುಷಂ ॥ ೫ ॥

ಏವಂ ನಿಶ್ಚಿತ್ಯ ಸಾಕೇತೇ ಮುನಿಶ್ಶಿಷ್ಯೈರ್ವಿವೇಶ ಹ ।
ವಿಲಂಘ್ಯ ಸೋಽಷ್ಟಕಕ್ಷಾಸ್ತ್ರೈಃ ಸೀತಾಗೇಹಂ ಯಯೌ ಮುನಿಃ ॥ ೬ ॥

---

೩. ಕೃಪೆಮಾಡಿ ನನ್ನ ಈ ಸಂದೇಹವನ್ನು ಈಗ ನಿವೃತ್ತಿಮಾಡು.

ರಾಮದಾಸನು ಹೇಳಿದನು—ಎಲೈ ವಿಷ್ಣುದಾಸನೆ! ನೀನು ಕೇಳಿದುದು ಸರಿ. ಅದನ್ನು ಸರಿಯಾಗಿ ಹೇಳುತ್ತೇನೆ. ಮನಸ್ಸಿಟ್ಟು ಕೇಳು.

೪. ಒಂದುಸಾರಿ ಶ್ರೀರಾಮನನ್ನು ನೋಡಲು ದೂರ್ವಾಸ ಋಷಿಯು ಅಯೋಧ್ಯೆಗೆ ಬಂದನು. ಅವನು ತಾನು ಬರುವಾಗ ತನ್ನ ಜೊತೆಯಲ್ಲಿ ಅರವತ್ತು ಸಾವಿರಜನ ಶಿಷ್ಯರನ್ನೂ ಕರೆದುಕೊಂಡು ಈ ರೀತಿಯಾಗಿ ಯೋಚಿಸುತ್ತ ಬಂದನು.

೫. ವಿಷ್ಣುವು ಮನುಷ್ಯ ರೂಪದಿಂದ ಅಯೋಧ್ಯೆಯಲ್ಲಿ ರಾಮನಾಗಿ ಹುಟ್ಟಿರುವನು. ಅದನ್ನು ನಾನು ತಿಳಿದಿದ್ದೇನೆ. ಆದರೂ ಆ ರಾಮನ ಪೌರುಷ ವನ್ನು ಜನಗಳಿಗೆ ತೋರಿಸುವಂತೆ ನಾನು ಮಾಡುತ್ತೇನೆ.

೬. ಈ ರೀತಿಯಾಗಿ ಆ ದೂರ್ವಾಸಮುನಿಯು ನಿಶ್ಚಯಿಸಿಕೊಂಡು ಅಯೋಧ್ಯೆಗೆ ಹೋದನು. ಅರಮನೆಯ ಒಳಕ್ಕೂ ಹೋಗಿ ಎಂಟು ತೊಟ್ಟಿಗಳನ್ನು ದಾಟಿ ಸೀತೆಯ ಮನೆಗೆ ಹೋದನು.

ಸೀತಾಗೇಹೇ ಮಹದ್ದ್ವಾರ ಸಂಸ್ಥಿತಂ ಮುನಿಸತ್ತಮಂ ।
ದೂರ್ವಾಸಸಂ ಶಿಷ್ಯಯುಕ್ತಂ ದೃಷ್ಟ್ವಾ ವೈ ವೇತ್ರಪಾಣಯಃ ॥ ೭ ॥

ಶೀಘ್ರಂ ನಿವೇದಯಾಮಾಸುರ್ದಾಸ್ಯಾ ರಾಮಂ ರಹಃ ಸ್ಥಿತಂ ।
ರಾಮೋಽಪಿ ಶ್ರುತ್ವಾ ಸಂಪ್ರಾಪ್ತಂ ಮುನಿಂ ಪ್ರತ್ಯುಜ್ಜಗಾಮ ಸಃ ॥ ೮ ॥

ನತ್ವಾ ನಿನಾಯ ಸೀತಾಯಾಸ್ಸದ್ಮಾಸನಮಥಾರ್ಪಯತ್ ।
ಏತಸ್ಮಿನ್ನಂತರೇ ರಾಮಂ ತಿಷ್ಠನ್ ಸ ಮುನಿಸತ್ತಮಃ ॥ ೯ ॥

ಅಬ್ರವೀನ್ಮಧುರಂ ವಾಕ್ಯಂ ಶಿಷ್ಯೈಸ್ಸರ್ವತ್ರ ವೇಷ್ಟಿತಃ ।
ಅದ್ಯ ವರ್ಷಸಹಸ್ರಾಣಾಂ ಉಪವಾಸಸಮಾಪನಂ ॥ ೧೦ ॥

---

೭. ಸೀತೆಯ ಮನೆಯ ಹೆಬ್ಬಾಗಿಲಿನಲ್ಲಿ ಆ ದೂರ್ವಾಸನು ಶಿಷ್ಯರೊಡನೆ ನಿಂತುಕೊಂಡನು. ಇದನ್ನು ಅಲ್ಲಿದ್ದ ಕಟ್ಟಿಗೆಯ ಆಳುಗಳು ನೋಡಿದರು.

೮. ಒಡನೆಯೇ ಅವರು ದಾಸಿಯರಿಗೆ ಹೇಳಲು ಆ ದಾಸಿಯರು ಬೇಗನೆ ಹೋಗಿ ರಹಃಪ್ರದೇಶದಲ್ಲಿ ಸೀತೆಯೊಡನೆ ಇರುವ ರಾಮನಿಗೆ ಅರಿಕೆಮಾಡಿದರು. ರಾಮನೂ ಕೂಡ ಈ ಮುನಿಯು ಬಂದಿರುವುದನ್ನು ಕೇಳಿ ಬೇಗನೆ ಬಂದು ಎದುರುಗೊಂಡನು.

೯. ಮತ್ತು ಆ ಋಷಿಗೆ ನಮಸ್ಕರಿಸಿ ಸೀತೆಯ ಮನೆಗೆ ಕರೆದುಕೊಂಡು ಹೋಗಿ ಆಸನವನ್ನು ಕೊಟ್ಟು ಕೂರಿಸಿದನು. ಹೀಗೆ ಕುಳಿತಿರುವಾಗ ಆ ಋಷಿಯು ರಾಮನನ್ನು ಕುರಿತು ಇಂತೆಂದನು.

೧೦. ಆ ಋಷಿಯ ಶಿಷ್ಯರೂ ಕೂಡ ಅವನ ಸುತ್ತಲೂ ಕುಳಿತಿದ್ದರು. ಆಗ ಈ ಋಷಿಯು ಎಲೈ ರಾಮನೆ! ಸಾವಿರ ವರ್ಷಗಳಿಂದ ನಾನು ಉಪವಾಸ ಮಾಡುವ ವ್ರತವನ್ನು ಹಿಡಿದಿದ್ದೇನೆ. ಈ ದಿನ ಆ ವ್ರತವು ಕೊನೆಗಾಣುತ್ತದೆ.

ಅತೋ ಭೋಜನಮಿಚ್ಛಾಮಿ ಮಣಿಧೇನ್ವನಲೈರ್ವಿನಾ ।
ಸಿದ್ಧಮನ್ನಂ ಮುಹೂರ್ತೇನ ಸಶಿಷ್ಯಾಯ ಸಮರ್ಪಯ ॥ ೧೧ ॥

ಮಹ್ಯಂ ಮನೋಭಿಲಷಿತಂ ನಾನಾಪಕ್ವಾನ್ನಸಂಯುತಂ ।
ತಥಾ ಮಾಂ ಪೂಜನಾರ್ಥಂ ಹಿ ಶಂಭೋಃ ಪುಷ್ಪಾಣಿ ಮಾನಯೈಃ ॥ ೧೨ ॥

ಅದೃಷ್ಟಾನ್ಯಾನಯಸ್ವಾದ್ಯ ಗಾರ್ಹಸ್ಥ್ಯಂ ಚೇತ್ಪ್ರರಕ್ಷಸಿ ।
ನೋ ಚೇನ್ನಾಹಂ ಸಮರ್ಥೋಽಸ್ಮೀತ್ಯುಕ್ತ್ವಾ ಮಾಂ ತ್ವಂ ವಿಸರ್ಜಯ॥೧೩

ತನ್ಮುನೇರ್ವಚನಂ ಶ್ರುತ್ವಾ ವಿಹಸ್ಯ ರಘುನಂದನಃ ।
ಸರ್ವಮಂಗೀಕೃತಂ ಚೇತಿ ವಿನಯೇನಾಬ್ರವೀನ್ಮುನಿಂ ॥ ೧೪ ॥

---

೧೧. ಇಂದು ನಾನು ಊಟಮಾಡಬೇಕು ಆದ್ದರಿಂದ ಒಂದು ಮುಹೂರ್ತದೊಳಗೆ ನನಗೂ ನನ್ನ ಶಿಷ್ಯರಿಗೂ ಸಿದ್ಧವಾದ ಅನ್ನವನ್ನು ಕೊಡಬೇಕು. ಆ ಅನ್ನವು ನಿನ್ನಲ್ಲಿರುವ ಚಿಂತಾಮಣಿಯ ಪ್ರಭಾವದಿಂದಾಗಲಿ, ಕಾಮಧೇನುವಿನ ಪ್ರಭಾವದಿಂದಾಗಲಿ ಸಿದ್ಧವಾಗಿರಕೂಡದು. ಅಥವಾ ನರರು ಮಾಡುವಂತೆ ಬೆಂಕಿಯಿಂದ ಬೇಯಿಸಿದ್ದಾಗಿಯೂ ಇರಕೂಡದು.

೧೨. ಅಂತಹ ಅನ್ನವು ನನಗೂ ನನ್ನ ಶಿಷ್ಯರಿಗೂ ಬೇಕಾಗಿರುವುದು. ಅದನ್ನು ತರಿಸಿ ಊಟಮಾಡಿಸು. ನಾನು ಶಿವ ಪೂಜೆಯನ್ನು ಮಾಡಲು ಉತ್ತಮವಾದ ಹೂಗಳನ್ನು ತರಿಸಿಕೊಡು.

೧೩. ನೀನು ತರಿಸುವ ಹೂಗಳನ್ನು ಇದುವರೆಗೂ ಮನುಷ್ಯರು ನೋಡಿರಕೂಡದು. ನೀನು ಗೃಹಸ್ಥಾಶ್ರಮ ಧರ್ಮವನ್ನು ರಕ್ಷಿಸಿಕೊಳ್ಳಬೇಕಾದರೆ ಆ ರೀತಿಯಾದ ಹೂವನ್ನು ತರಿಸಬೇಕು. ನಾನು ಹೇಳಿದರೀತಿಯಾಗಿ ಭೋಜನವನ್ನೂ ಮಾಡಿಸಬೇಕು. ಹಾಗಾಗದಿದ್ದರೆ ನನ್ನ ಕೈಯ್ಯಲ್ಲಾಗುವುದಿಲ್ಲವೆಂದು ಹೇಳಿ ನನ್ನನ್ನು ಕಳುಹಿಸಿಬಿಡು ಎಂದನು.

೧೪. ಆ ದೂರ್ವಾಸನು ಹೇಳಿದುದನ್ನು ರಾಮನು ಕೇಳಿ ನಕ್ಕನು. ಮತ್ತು ನೀನು ಹೇಳಿದಂತೆಯೇ ಮಾಡುತ್ತೇನೆ. ಎಂಬುದಾಗಿ ವಿನಯದಿಂದ ಆ ಋಷಿಗೆ ಹೇಳಿದನು.

ತದ್ರಾಮವಚನಂ ಶ್ರುತ್ವಾ ತುಷ್ಟಸ್ತಂ ಮುನಿರಬ್ರವೀತ್ ।
ಸ್ನಾತ್ವಾ ಸರಯ್ವಾಃ ಶೀಘ್ರಂ ತ್ವಾಮಾಗಚ್ಛಾಮಿ ತ್ವರಾಂ ಕುರು ॥ ೧೫ ॥

ಮದುಕ್ತಂ ಸಫಲಂ ಸಿದ್ಧಂ ಕರ್ತುಂ ಬಂಧೂಂಶ್ಚ ಜಾನಕೀಂ ।
ತಥೇತ್ಯುಕ್ತ್ವಾ ಮುನಿಂ ರಾಮಸ್ಸ್ನಾನಾರ್ಥಂ ಚ ವಿಸರ್ಜಯತ್ ॥ ೧೬ ॥

ತದಾ ತೇ ಲಕ್ಷ್ಮಣಾದ್ಯಾಶ್ಚ ಬಂಧವೋ ಜಾನಕೀ ತಥಾ ।
ಕುಶಾದ್ಯಾ ಬಾಲಕಾಸ್ಸರ್ವೇ ತೇಭೂರ್ವ ಭಯವಿಹ್ವಲಾಃ ॥ ೧೭ ॥

ಊಚುಃ ಪರಸ್ಪರಂ ಸರ್ವೇ ರಾಮನ್ಯಸ್ತೇಕ್ಷಣಾಶ್ಯನೈಃ ।
ಕಿಂ ಯಾಚಿತಂ ಹಿ ಮುನಿನಾ ಕಿಂ ರಾಮೋಽಗ್ರೇ ಕರಿಷ್ಯತಿ ॥ ೧೮ ॥

---

೧೫. ರಾಮನು ಆಗ ಎಲ್ಲಕ್ಕೂ ಒಪ್ಪಿಕೊಂಡುದನ್ನು ನೋಡಿ ಮುನಿಗೆ ಸಂತೋಷವಾಯಿತು. ಆಗ ರಾಮನನ್ನು ಕುರಿತು ನಾನು ಸರಯೂ ನದಿಗೆ ಹೋಗಿ ಸ್ನಾನಮಾಡಿಕೊಂಡುಬರುತ್ತೇನೆ. ನೀನು ಜಾಗ್ರತೆಪಡಿಸು.

೧೬. ನಿನ್ನ ತಮ್ಮಂದಿರು, ಸೀತೆ ಎಲ್ಲರೂ ಅಷ್ಟು ಹೊತ್ತಿಗೆ ಸಿದ್ಧವಾಗಿರಬೇಕು. ಎಂದು ರಾಮನಿಗೆ ಹೇಳಿ ದೂರ್ವಾಸನು ಶಿಷ್ಯರನ್ನು ಕರೆದುಕೊಂಡು ಸ್ನಾನಕ್ಕೆ ಹೊರಟುಹೋದನು. ರಾಮನು ಹಾಗೆಯೇ ಆಗಲೆಂದನು.

೧೭. ಆ ಮಾತನ್ನು ಕೇಳಿ ಲಕ್ಷ್ಮಣ ಭರತ ಶತ್ರುಘ್ನರೂ, ಸೀತೆಯೂ, ಕುಶನೇ ಮುಂತಾದ ಮಕ್ಕಳೂ ಇದನ್ನು ಹೇಗೆಮಾಡುವುದು? ಮುನಿಯನ್ನು ಹೇಗೆ ಸಮಾಧಾನಪಡಿಸುವುದು? ಇದು ಅಸಾಧ್ಯವು ಎಂಬುದಾಗಿ ತಿಳಿದು ಭಯದಿಂದ ತಳಮಳಿಸುತ್ತಿದ್ದರು.

೧೮. ಆಗ ಅವರೆಲ್ಲರೂ ರಾಮನನ್ನೇ ನೋಡುತ್ತ ಒಬ್ಬರಿಗೊಬ್ಬರು ಇಂತೆಂದು ಮಾತನಾಡಿಕೊಳ್ಳುತ್ತಿದ್ದರು. ಈ ದೂರ್ವಾಸನು ಎಂತಹ ಕಷ್ಟವಾದ ವಿಷಯವನ್ನು ಕೇಳಿದನು? ರಾಮನು ಮುಂದೇನು ಮಾಡುವನು?

ವಿನಾ ಗೋವಹ್ನಿಮಣಿಭಿಃ ಕಥಮನ್ನಂ ಪ್ರದಾಸ್ಯತಿ ।
ತತೋ ಗತೇ ಮುನೌ ರಾಮಃ ಪತ್ರಂ ಸೌಮಿತ್ರಿಣಾ ತದಾ ॥ ೧೯ ॥

ವಿಲೇಖ್ಯ ಬದ್ಧ್ವಾ ಬಾಣೇ ತು ಮುಮೋಚ ಶರಮುತ್ತಮಂ ।
ಸ ಶರೋ ವಾಯುವೇಗೇನ ಶೀಘ್ರಂ ಗತ್ವಾಮರಾವತೀಂ ॥ ೨೦ ॥

ಸುಧರ್ಮಾಯಾಂ ಸುರೈರ್ಯುಕ್ತಸ್ಯೇಂದ್ರಸ್ಯಾಗ್ರೇ ಪಪಾತ ಹ ।
ತಂ ಶರಂ ಮಘವಾ ದೃಷ್ಟ್ವಾ ಚಕಿತೋ ಭಯವಿಹ್ವಲಃ ॥ ೨೧ ॥

ಕಸ್ಯಾಯಮಿತಿ ಚೋಕ್ತ್ವಾ ತದ್ರಾಮನಾಮ ವ್ಯಲೋಕಯತ್ ।
ಸುವರ್ಣರಚಿತಂ ಬಾಣಪುಚ್ಛಸ್ಥಂ ಪಾಪದಾಹಕಂ ॥ ೨೨ ॥

---

೧೯. ಕಾಮಧೇನು, ಚಿಂತಾಮಣಿ, ಅಗ್ನಿ, ಇವನ್ನು ಬಿಟ್ಟರೆ ಇಂತಹ ಅನ್ನವು ಸಿದ್ಧವಾಗುವುದು ತಾನೆ ಹೇಗೆ? ಅಂತಹ ಅನ್ನವನ್ನು ಮುನಿಗೆ ಹೇಗೆ ಕೊಂಡಲು ಸಾಧ್ಯ? ಎಂದೆನ್ನುತ್ತಿದ್ದರು. ಮುನಿಯು ಅತ್ತ ಸ್ನಾನಕ್ಕೆ ಹೊರಟು ಹೋಗಲು ರಾಮನು ಒಂದು ಕಾಗದವನ್ನು ಲಕ್ಷ್ಮಣನಿಂದ ಬರೆಸಿದನು.

೨೦. ರಾಮನು ಆ ಕಾಗದವನ್ನು ಬಾಣಕ್ಕೆ ಕಟ್ಟಿ ಧನುಸ್ಸಿಗೆ ಹೂಡಿ ವೇಗದಿಂದ ಬಿಟ್ಟನು. ಆ ಬಾಣವು ವಾಯುವೇಗದಿಂದ ಹೊರಟು ಅಮರಾವತಿಗೆ ಹೋಯಿತು.

೨೧. ಅಮರಾವತಿಗೆ ಹೋಗಿ ದೇವತೆಗಳೊಡನೆ ಸುಧರ್ಮವೆಂಬ ಸಭೆಯಲ್ಲಿ ಕುಳಿತುಕೊಂಡಿದ್ದ ಇಂದ್ರನ ಮುಂದೆ ಬಿದ್ದಿತು. ಬಾಣವು ಹಾಗೆ ಬಂದು ಬಿದ್ದುದನ್ನು ಇಂದ್ರನು ನೋಡಿ ಆಶ್ಚರ್ಯಪಡುತ್ತ ಭಯಗೊಂಡನು.

೨೨. ಇದು ಯಾರದಿರಬಹುದೆಂದು ಯೋಚಿಸುತ್ತ ಕೈಗೆ ತೆಗೆದುಕೊಂಡು ಅದರಲ್ಲಿ ರಾಮನ ಹೆಸರಿದ್ದುದನ್ನು ನೋಡಿದನು. ಆ ಕಾಗದವನ್ನು ಬರೆದು ಚಿನ್ನದ ಹಿಡಿಯುಳ್ಳ ಬಾಣದ ಬುಡಕ್ಕೆ ಕಟ್ಟಿದ್ದಿತು. ಅದು ಪಾಪವನ್ನು ನಾಶ ಮಾಡುವುದಾಗಿದ್ದಿತು.

ತತೋ ಜ್ಞಾತ್ವಾ ರಾಘವಸ್ಯ ಶರೋಽಯಮಿತಿ ದೇವರಾಟ್ ।
ತಸ್ಮಿನ್ ಬಂಧಂ ವಿಮುಚ್ಯಾಸೌ ಪತ್ರಂ ನತ್ವಾ ಪಪಾಠ ಚ ॥ ೨೩ ॥

ಏತಸ್ಮಿನ್ನಂತರೇ ಬಾಣಃ ಪುನಃ ಶ್ರೀರಾಘವಂ ಯಯೌ ।
ವಿವೇಶ ರಾಮತೂಣೀರೇ ಪೂರ್ವವತ್ಸಂಸ್ಥಿತೋಽಭವತ್ ॥ ೨೪ ॥

ಮಘವಾಪಿ ಸುಧರ್ಮಾಯಾಂ ಶ್ರಾವಯಾಮಾಸ ನಿರ್ಜರಾನ್ ।
ರಾಮಮುದ್ರಾಂಕಿತಂ ಪತ್ರಂ ಭಯವಿಸ್ಮಯಸಂಯುತಃ ॥ ೨೫ ॥

ಮಘವಂಸ್ತ್ವಂ ಸುಖಂ ತಿಷ್ಠ ಸ್ವರ್ಗೇಽಹಂ ತ್ವಾಂ ಸದಾ ಸ್ಮರೇ ।
ಮನ್ನಿಯೋಗಂ ಶ್ರುಣುಷ್ವಾದ್ಯ ಯಾಚಿತೋಽಸ್ಮ್ಯಧುನಾ ತ್ವಹಂ ॥ ೨೬ ॥

---

೨೩. ಆ ಬಾಣದ ಹೆಸರನ್ನು ನೋಡಿದುದರಿಂದ ಈ ಬಾಣವು ಶ್ರೀರಾಮನ ದೆಂದು ದೇವೇಂದ್ರನಿಗೆ ಗೊತ್ತಾಯಿತು. ಅನಂತರ ಆ ಕಾಗದದ ಗಂಟನ್ನು ಬಿಚ್ಚಿ ಕಾಗದವನ್ನು ಕೈಗೆ ತೆಗೆದುಕೊಂಡು ಅದಕ್ಕೆ ನಮಸ್ಕರಿಸಿ ಓದಿದನು.

೨೪. ಆ ಕಾಗದವನ್ನು ಬಿಚ್ಚಿಕೊಂಡ ಒಡನೆಯೇ ಆ ಬಾಣವು ಅಲ್ಲಿಂದ ಹೊರಟು ಮತ್ತೆ ಶ್ರೀರಾಮನ ಬಳಿಗೆ ಬಂದಿತು. ಆ ರಾಮನ ಬತ್ತಳಿಕೆಯನ್ನು ಪ್ರವೇಶಿಸಿ ಅಲ್ಲಿ ಸುಖವಾಗಿ ನಿಂತಿತು.

೨೫. ಇಂದ್ರನು ಆ ಕಾಗದವನ್ನು ತೆಗೆದುಕೊಂಡು ಭಯದಿಂದಲೂ, ಆಶ್ಚರ್ಯದಿಂದಲೂ ಕೂಡಿಕೊಂಡು ದೇವತೆಗಳಿಗೆಲ್ಲಾ ತೋರಿಸಿದನು. ಅದನ್ನು ಅನಂತರ ಅವರೆದುರಿಗೆ ಇಂತೆಂದು ಓದಿದನು.

೨೬. ಎಲೈ ಇಂದ್ರನೆ ! ನೀನು ಯಾವಾಗಲೂ ಸ್ವರ್ಗದಲ್ಲಿ ಸುಖವಾಗಿರು. ನಾನು ನಿನ್ನನ್ನು ಯಾವಾಗಲೂ ಜ್ಞಾಪಿಸಿಕೊಳ್ಳುತ್ತಿರುತ್ತೇನೆ. ಈಗ ನನ್ನದೊಂದು ಮಾತನ್ನು ಕೇಳು. ನನ್ನ ಬಳಿಗೆ ದೂರ್ವಾಸನು ಬಂದು ಈಗ ಇಂತೆಂದು ಯಾಚಿಸಿರುವನು.

ವಿನಾ ಗೋವಹ್ನಿಮಣಿಭಿಶ್ಚಾನ್ನೈಶ್ಶಿಷ್ಯೈರ್ಯುತೇನ ಚ ।
ವರ್ಷೈಷ್ಷಷ್ಟಿಸಹಸ್ರೈಶ್ಚ ತಥಾನ್ನೈರ್ಮುನಿಸತ್ತಮೈಃ ॥ ೨೭ ॥

ಸಹಸ್ರಾಬ್ದಕ್ಷುಧಿತೇನ ಕ್ರೋಧಿನಾತಿತಪಸ್ವಿನಾ ।
ದುರ್ವಾಸಸಾ ಮುಹೂರ್ತಾತ್ತು ಮಯಾಪ್ಯಂಗೀಕೃತಂ ಹಿ ತತ್ ॥ ೨೮ ॥

ಯಾಚಿತಾನ್ಯಪಿ ಪುಷ್ಪಾಣಿ ಕೇನಾದೃಷ್ಟಾನಿ ಮಾನವೈಃ ।
ಮಯಾಂಗೀಕೃತ್ಯ ಸಕಲಂ ಸ್ನಾನಾರ್ಥಂ ತೇ ವಿಸರ್ಜಿತಾಃ ॥ ೨೯ ॥

ಅತಶ್ಶೀಘ್ರಂ ಕಲ್ಪವೃಕ್ಷಪಾರಿಜಾತೌ ಸಮುದ್ರಜೌ ।
ಪ್ರೇಷಯಸ್ವ ಕ್ಷಣಾನ್ಮಾಂ ತ್ವಮವಿಲಂಬೇನ ಸಾದರಾತ್ ॥ ೩೦ ॥

---

೨೭. ಕಾಮಧೇನು, ಬೆಂಕಿ, ಚಿಂತಾಮಣಿಗಳಿಂದ ಸಿದ್ಧವಾಗದ ಅನ್ನವನ್ನು ನನಗೂ ನನ್ನ ಶಿಷ್ಯರಿಗೂ ಕೊಡಬೇಕೆಂದು ಹೇಳಿದನು. ಆ ಶಿಷ್ಯರು ಅರವತ್ತು ಸಾವಿರ ಜನರಿರುವರು. ನಾನಾದರೋ ಹಾಗೆಯೇ ಆಗಲೆಂದು ಒಪ್ಪಿಕೊಂಡೆನು.

೨೮. ಆ ದುರ್ವಾಸನು ಒಂದುಸಾವಿರ ವರ್ಷಗಳಿಂದಲೂ ಉಪವಾಸ ವ್ರತವನ್ನು ಮಾಡುತ್ತಿರುವನಂತೆ. ಇಂದು ಪಾರಣೆಯಾಗಬೇಕು. ಅವನಾದರೋ ತಪಸ್ವಿಯು. ಬಹು ಕೋಪವುಳ್ಳವನು. ಒಂದು ಮುಹೂರ್ತದಲ್ಲಿಯೇ ಅನ್ನವು ಸಿದ್ಧವಾಗಬೇಕು. ನಾನಾದರೋ ಹಾಗೆಯೇ ಆಗಲೆಂದು ಒಪ್ಪಿಕೊಂಡಿರುವೆನು.

೨೯. ಇದೂ ಅಲ್ಲದೆ ಮನುಷ್ಯರು ನೋಡದಿರತಕ್ಕ ಹೂಗಳನ್ನು ತನ್ನ ಶಿವಪೂಜೆಗೆ ತಂದುಕೊಡಬೇಕೆಂದು ಕೂಡ ಹೇಳಿರುವನು. ಅದನ್ನು ನಾನು ಒಪ್ಪಿಕೊಂಡು ಅವರನ್ನೆಲ್ಲಾ ಸ್ನಾನಕ್ಕೋಸ್ಕರ ಕಳುಹಿಸಿರುವೆನು.

೩೦. ಆದ್ದರಿಂದ ಸಮುದ್ರದಲ್ಲಿ ಹುಟ್ಟಿದ ಕಲ್ಪವೃಕ್ಷವನ್ನೂ ಪಾರಿಜಾತವನ್ನೂ ಕ್ಷಣಕಾಲದಲ್ಲಿ ನನ್ನಲ್ಲಿಗೆ ಕಳುಹಿಸು. ಸ್ವಲ್ಪವೂ ಸಾವಕಾಶಮಾಡ ಕೂಡದು. ದಯಮಾಡಿ ಕಳುಹಿಸು.

ಮಾ ರಾವಣಶಿರಃಸ್ಥಸ್ಯ ಪ್ರತೀಕ್ಷಾಂ ತ್ವಮಿಷೋಃ ಕುರು ।
ಏನಂ ಸಂಶ್ರಾವ್ಯ ತತ್ಪತ್ರಂ ಸುರಾನಿಂದ್ರಃ ಸುರೈಸ್ಸಹ ॥ ೩೧ ॥

ಸಮ್ಮಂತ್ರ್ಯಾಥ ಕಲ್ಪವೃಕ್ಷಪಾರಿಜಾತೌ ವಿಗೃಹ್ಯ ಸಃ ।
ವಿಮಾನೇನ ಸುರೈರ್ಯುಕ್ತಃ ಶ್ರೀರಾಮನಗರೀಂ ಯಯೌ ॥ ೩೨ ॥

ಇಂದ್ರಮಾಗತಮಾಜ್ಞಾಯ ತಂ ಪ್ರತ್ಯುದ್ಗಮ್ಯ ಲಕ್ಷ್ಮಣಃ ।
ಅಯೋಧ್ಯಾಯಾಂ ನಿನಾಯೇಂದ್ರಂ ಸಭಾಸ್ಥಂ ರಘುನಂದನಂ ॥ ೩೩ ॥

ಕಲ್ಪವೃಕ್ಷಪಾರಿಜಾತೌ ಮಘವಾ ರಘುನಂದನಂ ।
ಸಮರ್ಪ್ಯ ನತ್ವಾ ಶ್ರೀರಾಮಂ ಸ ಉಪಾವಿಶದಾಸನೇ ॥ ೩೪ ॥

---

೩೧. ರಾವಣಾಸುರನ ತಲೆಯಮೇಲೆ ಪ್ರಯೋಗಿಸಿದ ಬಾಣಗಳ ಕ್ರೌರ್ಯವನ್ನು ನೀನು ಹೊಂದಲು ಅವಕಾಶವನ್ನು ಕಲ್ಪಿಸಿಕೊಳ್ಳಬೇಡ. ಎಂಬದಾಗಿ ಬರೆದಿದ್ದ ಆ ಕಾಗದದ ವಿಷಯವನ್ನು ಇಂದ್ರನು ಅವರೆಲ್ಲರಿಗೂ ತಿಳಿಸಿದನು.

೩೨. ಅನಂತರ ಆ ದೇವತೆಗಳೊಡನೆ ಆಲೋಚಿಸಿ ಕಲ್ಪವೃಕ್ಷ ಪಾರಿಜಾತಗಳನ್ನು ಕಿತ್ತು ವಿಮಾನದಲ್ಲಿಟ್ಟುಕೊಂಡು ಜೊತೆಗೆ ದೇವತೆಗಳನ್ನು ಕರೆದುಕೊಂಡು ಶ್ರೀರಾಮನ ರಾಜಧಾನಿಯಾದ ಅಯೋಧ್ಯೆಗೆ ಬಂದನು.

೩೩. ಇಂದ್ರನು ಬಂದುದು ರಾಮನಿಗೆ ತಿಳಿಯಲು ಲಕ್ಷ್ಮಣನು ಅವನನ್ನು ಎದುರುಗೊಂಡು ಅಯೋಧ್ಯೆಯ ಅರಮನೆಯ ಸಭಾಮಂಟಪದಲ್ಲಿದ್ದ ರಾಮನ ಬಳಿಗೆ ಕರೆದುಕೊಂಡು ಹೋದನು.

೩೪. ಇಂದ್ರನು ಸಭೆಗೆ ಬಂದು ಆ ರಾಮನಿಗೆ ಕಲ್ಪವೃಕ್ಷ, ಪಾರಿಜಾತಗಳನ್ನು ಒಪ್ಪಿಸಿ ಅವನಿಗೆ ನಮಸ್ಕರಿಸಿ ಅವನು ಕೊಟ್ಟ ಆಸನದಲ್ಲಿ ಕುಳಿತುಕೊಂಡನು.

ಏತಸ್ಮಿನ್ನಂತರೇ ಶಿಷ್ಯಂ ದುರ್ವಾಸೋ ಮುನಿರಬ್ರವೀತ್ ।
ಗತ್ವಾ ತ್ವಂ ಪಶ್ಯ ರಾಮಸ್ತು ಕಿಂಕರೋತ್ಯಧುನಾ ಗೃಹೇ ॥ ೩೫ ॥

ಅಸ್ಮಾಕಂ ಕಲ್ಪಿತಂ ಕಿಂಚಿದನ್ನಮಸ್ತ್ಯಥವಾ ನ ವಾ ।
ಚಿಂತಾಯುಕ್ತೋಽಸ್ತಿ ವಾ ತೂಷ್ಣೀಂ ಸಂಸ್ಥಿತೋಽಸ್ತ್ಯತ್ರ ಕಿಂ ಕೃತಂ ॥೩೬॥

ಬಹಿಸ್ಸಂಪಾದಿತಂ ಸರ್ವಂ ಮಯಾ ಯದ್ಯಚ್ಚ ಯಾಚಿತಂ ।
ರಹಃಸ್ಥಿತಃ ಶನೈರ್ದೃಷ್ಟ್ವಾ ಶ್ರೀಘ್ರಂ ತ್ವಂ ಯಾಹಿ ಮಾಂ ಪುನಃ ॥ ೩೭ ॥

ತಥೇತ್ಯುಕ್ತ್ವಾ ಮುನಿಂ ಶಿಷ್ಯಸ್ಸ ಯಯೌ ರಾಮಸದ್ಗೃಹಂ ।
ತತ್ರ ದೃಷ್ಟ್ವಾ ಕಲ್ಪವೃಕ್ಷಪಾರಿಜಾತೌ ಸನಿರ್ಜರೌ ॥ ೩೮ ॥

---

೩೫. ಇತ್ತ ದೂರ್ವಾಸ ಋಷಿಯು ಒಬ್ಬ ಶಿಷ್ಯನನ್ನು ಕರೆದು ಇಂತೆಂದು ಹೇಳಿ ಕಳುಹಿಸಿದನು. ಎಲೈ ಶಿಷ್ಯನೆ! ನೀನು ಈಗಲೇ ಹೋಗಿ ರಾಮನು ಮನೆಯಲ್ಲಿ ಏನು ಮಾಡುತ್ತಿರುವನು ? ನೋಡು.

೩೬. ನನಗೋಸ್ಕರ ಏನಾದರೂ ಅನ್ನವನ್ನು ಸಿದ್ಧಮಾಡಿರುವನೆ ? ಇಲ್ಲ ಇಲ್ಲವೆ ? ಆದಿಲ್ಲದಿದ್ದರೆ ಚಿಂತೆಮಾಡುತ್ತ ಸುಮ್ಮನೆ ಕುಳಿತಿರುವನೆ ? ಏನು ಮಾಡಿ ರುವನು ? ಎಂಬುದನ್ನು ಹೊರಗಡೆಯಿಂದ ನೋಡಿಕೊಂಡು ಬಾ.

೩೭. ನಾನು ಏನೇನನ್ನು ಕೇಳಿರುವೆನೋ ಅದೆಲ್ಲವನ್ನೂ ಮಾಡಿರು ವುದನ್ನೂ, ಇಲ್ಲದುದನ್ನೂ ಗುಟ್ಟಾಗಿ ನಿಧಾನವಾಗಿ ಪರೀಕ್ಷಿಸಿಕೊಂಡು ಮತ್ತೆ ಬೇಗನೆ ನನ್ನ ಬಳಿಗೆ ಬಂದು ಬಿಡು. ಎಂದು ಹೇಳಿಕಳುಹಿಸಿದನು.

೩೮. ಆ ಶಿಷ್ಯನು ಮುನಿಯ ಮಾತನ್ನು ಕೇಳಿ ಹಾಗೆಯೇ ಆಗಲೆಂದು ಹೇಳಿ ರಾಮನ ಮನೆಗೆ ಹೋದನು. ಅಲ್ಲಿ ದೇವತೆಗಳು ಪಾರಿಜಾತ ಕಲ್ಪವೃಕ್ಷ ದೊಡನೆ ಬಂದಿರುವುದನ್ನು ನೋಡಿದನು.

ಸನಿರ್ಜರೇಶಂ ರಾಮಂ ಚ ಮುದಿತಂ ಸೀತಯಾನ್ವಿತಂ ।
ತತಸ್ತೂರ್ಣಂ ಯಯೌ ಶಿಷ್ಯಃ ಪರಾವೃತ್ಯ ಮುನಿಂ ಪ್ರತಿ ॥ ೩೯ ॥

ಕಥಯಾಮಾಸ ಸಕಲಂ ಯಥಾ ವೃತ್ತಂ ನಿರೀಕ್ಷಿತಂ ।
ತಚ್ಛ್ರುತ್ವಾ ಶಿಷ್ಯವಚನಂ ದುರ್ವಾಸಾ ವಿಸ್ಮಯಾನ್ವಿತಃ ॥ ೪೦ ॥

ಯಯೌ ಶಿಷ್ಯೈಃ ಪರಿವೃತಃ ಸ ವಿವೇಶ ನೃಪಂ ಗೃಹಂ ।
ತಂ ಮುನಿಂ ರಾಘವೋ ದೃಷ್ಟ್ವಾ ಪ್ರತ್ಯುದ್ಗಮ್ಯ ಪುನಸ್ಸುರೈಃ ॥ ೪೧ ॥

ನಮಸ್ಕೃತ್ಯ ಮುಹುರ್ವೇಗಾದ್ದದಾವಾಸನಮುತ್ತಮಂ ।
ತತೋ ಮುನೇಃ ಪೂಜನಂ ಸ ಸಶಿಷ್ಯಸ್ಯ ರಘೂತ್ತಮಃ ॥ ೪೨ ॥

---

೩೯. ರಾಮನು ಸೀತೆಯೊಡನೆಯೂ ದೇವೇಂದ್ರನೊಡನೆಯೂ ಸಂತೋಷದಿಂದ ಕುಳಿತಿದ್ದನು. ಇದನ್ನು ಆ ಶಿಷ್ಯನು ನೋಡಿ ಹಿಂದಿರುಗಿ ಬೇಗನೆ ಮುನಿಯ ಬಳಿಗೆ ಬಂದು ಬಿಟ್ಟನು.

೪೦. ಬಂದು ತಾನು ನೋಡಿದುದನ್ನೆಲ್ಲಾ ಕ್ರಮವಾಗಿ ಮುನಿಗೆ ಹೇಳಿದನು. ಶಿಷ್ಯನು ಹೇಳಿದ ಈ ಮಾತನ್ನು ಮುನಿಯು ಕೇಳಿ ಬಹುವಾಗಿ ಆಶ್ಚರ್ಯಪಟ್ಟನು.

೪೧. ಅನಂತರ ದೂರ್ವಾಸನು ಸ್ನಾನಾಹ್ನಿಕಗಳನ್ನು ಮಾಡಿಕೊಂಡು ಶಿಷ್ಯರೊಡನೆ ಆ ರಾಮನ ಮನೆಗೆ ಹೋದನು. ರಾಮನು ಆ ದೂರ್ವಾಸನು ಬಂದುದನ್ನು ನೋಡಿ ದೇವತೆಗಳೊಡನೆ ಅವನನ್ನು ಎದುರುಗೊಂಡನು.

೪೨. ಮತ್ತು ನಮಸ್ಕರಿಸಿ ಬೇಗನೆ ಅವರೆಲ್ಲರಿಗೂ ಆಸನವನ್ನು ಕೊಟ್ಟನು. ಅನಂತರ ರಾಮನು ಆ ದೂರ್ವಾಸನಿಗೂ ಅವನ ಶಿಷ್ಯರಿಗೂ ಕ್ರಮವಾಗಿ ಪೂಜೆಯನ್ನು ಮಾಡಿದನು.

ಚಕಾರ ಸೀತಯಾ ಸಾರ್ಧಂ ಲಕ್ಷ್ಮಣಾದಿಭಿರನ್ವಿತಃ ।
ಪಾರಿಜಾತಪ್ರಸೂನಾನಿ ನೇಕ್ಷಿತಾನ್ಯತ್ರ ಮಾನವೈಃ ॥ ೪೩ ॥

ದದೌ ಶಂಭೋಃ ಪೂಜನಾರ್ಥಂ ರಾಮೋ ದೂರ್ವಾಸಸೇ ತದಾ ।
ತಾನಿ ದೃಷ್ಟ್ವಾ ಮುನಿಸ್ತುಷ್ಟಿಂ ತೈಶ್ಚಕಾರೇಶ್ವರಾರ್ಚನಂ ॥ ೪೪ ॥

ತತಸ್ಸರ್ವಾನ್ ಸುರಾನ್ಪೂಜ್ಯ ಪರಿವೇಷಣಕರ್ಮಣಿ ।
ಚೋದಯಾಮಾಸ ಶ್ರೀರಾಮೋ ಜಾನಕೀಂ ಲಕ್ಷ್ಮಣೇನ ಸಃ ॥ ೪೫ ॥

ತತಸ್ಸಾ ಜಾನಕೀ ವೇಗಾದ್ದಿವ್ಯಾಲಂಕಾರಮಂಡಿತಾ ।
ಕಲ್ಪವೃಕ್ಷಪಾರಿಜಾತೌ ಸಂಪೂಜ್ಯ ನೂಪುರಸ್ವನಾ ॥ ೪೬ ॥

---

೪೩. ಸೀತೆಯೂ, ಲಕ್ಷ್ಮಣ ಭರತಶತ್ರುಘ್ನರೂ ಅವರ ಮಕ್ಕಳೂ ಕೂಡ ಅವರಿಗೆಲ್ಲಾ ಪೂಜಿಸಿದರು. ದೇವಲೋಕದಲ್ಲಿದ್ದ ಪಾರಿಜಾತದ ಹೂವನ್ನು ಮರ್ತ್ಯಲೋಕದ ಜನರು ನೋಡಿಯೇ ಇರಲಿಲ್ಲ.

೪೪. ಮನುಷ್ಯರು ನೋಡದ ಅಂತಹ ಹೂವನ್ನು ದೂರ್ವಾಸನ ಶಿವ ಪೂಜೆಗೆ ಕೊಟ್ಟನು. ಅವನ್ನು ಆ ಮುನಿಯು ತೆಗೆದುಕೊಂಡು ಅವುಗಳಿಂದ ಶಿವಾರ್ಚನೆಯನ್ನು ಮಾಡಿದನು.

೪೫. ಅನಂತರ ರಾಮನು ಆ ದೇವತೆಗಳನ್ನು ಗೌರವಿಸಿ ಲಕ್ಷ್ಮಣನನ್ನೂ ಸೀತೆಯನ್ನೂ ಕುರಿತು ಆ ಮುನಿಗಳಿಗೆ ಭೋಜನಕ್ಕೆ ಬಡಿಸುವಂತೆ ಹೇಳಿದನು.

೪೬. ಅನಂತರ ಜಾನಕಿಯು ಬೇಗನೆ ದಿವ್ಯವಾದ ಅಲಂಕಾರಗಳಿಂದ ಅಲಂಕೃತಳಾಗಿ ಕಾಲುಕಡಗವನ್ನು ಸದ್ದುಮಾಡುತ್ತ ಹೋಗಿ ಆ ಕಲ್ಪವೃಕ್ಷ ಪಾರಿಜಾತಗಳನ್ನು ಪೂಜಿಸಿದಳು.

ಪಾತ್ರಾಣಿ ಕಲ್ಪವೃಕ್ಷಾಧಃ ಸ್ಥಾಪಯಾಮಾಸ ಕೋಟಿಶಃ ।
ಸೀತಾ ತಂ ಪ್ರಾರ್ಥಯಾಮಾಸ ಕಲ್ಪವೃಕ್ಷನಗೋತ್ತಮಂ ॥ ೪೭ ॥

ಕ್ಷೀರಸಾಗರಸಂಭೂತ ದೇವಾನಾಂ ಚಿಂತಿತಪ್ರದ ।
ದುರ್ವಾಸಸೇ ಕಲ್ಪವೃಕ್ಷ ಸಶಿಷ್ಯಾಯಾದ್ಯ ತೋಷಯ ॥ ೪೮ ॥

ತತ್ಸೀತಾವಚನಂ ಶ್ರುತ್ವಾ ಹೇಮಪಾತ್ರಾಣಿ ಕೋಟಿಶಃ ।
ಚಿತ್ರಾನ್ನೈಃ ಪೂರಯಾಮಾಸ ಕ್ಷಣಾತ್ಕಲ್ಪತರುಸ್ತದಾ ॥ ೪೯ ॥

ತೈರನ್ನೈರ್ಹೇಮಪಾತ್ರೇಷು ಜಾನಕೀ ಪರಿವೇಷಣಂ ।
ಕ್ಷಣಾಚ್ಚಕಾರ ಸಂತುಷ್ಟಾ ಹ್ಯೂರ್ಮಿಲಾಚಂಪಿಕಾದಿಭಿಃ ॥ ೫೦ ॥

---

೪೭. ಅನಂತರ ಪಾತ್ರೆಗಳನ್ನು ಕೋಟಿಗಟ್ಟಲೆಯಲ್ಲಿ ತಂದು ಆ ಕಲ್ಪ ವೃಕ್ಷದ ಕೆಳಗೆ ಇಟ್ಟಳು. ಅನಂತರ ಆಕೆಯು ಆ ಉತ್ತಮ ವೃಕ್ಷವಾದ ಕಲ್ಪ ವೃಕ್ಷವನ್ನು ಕುರಿತು ಇಂತೆಂದು ಪ್ರಾರ್ಥಿಸಿದಳು.

೪೮. ಕ್ಷೀರಸಮುದ್ರದಲ್ಲಿ ಹುಟ್ಟಿದ ದೇವತೆಗಳಿಗೆ ಬೇಕಾದುದನ್ನು ಕೊಡುವ ಎಲೈ ಕಲ್ಪವೃಕ್ಷವೇ ! ನೀನು ಶಿಷ್ಯರೊಡಗೂಡಿದ ಈ ದೂರ್ವಾಸನನ್ನು ಎಲ್ಲಾ ರೀತಿಯಲ್ಲಿಯೂ ಈಗ ಸಂತೋಷಗೊಳಿಸು ಎಂದಳು.

೪೯. ಆ ಕಲ್ಪವೃಕ್ಷವು ಸೀತೆಯು ಈ ಮಾತನ್ನು ಕೇಳಿ ಆ ಕೋಟಿಗಟ್ಟಲೆ ಯಾಗಿ ಇಟ್ಟಿದ್ದ ಚಿನ್ನದ ಪಾತ್ರೆಗಳನ್ನು ಕ್ಷಣಕಾಲದಲ್ಲಿಯೇ ಚಿತ್ರವಿಚಿತ್ರವಾದ ಅನ್ನಗಳಿಂದ ತುಂಬಿತು.

೫೦. ಅನಂತರ ಜಾನಕಿಯು ಚಂಪಿಕೆ ಮೊದಲಾದ ಸೊಸೆಯ ರೊಡನೆಯೂ, ಊರ್ಮಿಳೆಯೇ ಮುಂತಾದ ಓರಗಿತ್ತಿಯರೊಡನೆಯೂ ಆ ಚಿನ್ನದ ಪಾತ್ರೆಗಳಲ್ಲಿದ್ದ ಅನ್ನಗಳನ್ನು ಕ್ಷಣಕಾಲದಲ್ಲಿ ಅವರಿಗೆಲ್ಲಾ ಬಡಿಸಿದಳು.

ತತಸ್ತುಷ್ಟೋ ಮುನಿರ್ದೇವೈಃ ಶಿಷ್ಯೈರಶನಮಾದರಾತ್ ।
ಚಕಾರ ರಘುವೀರೇಣ ಪ್ರಾರ್ಥಿತಸ್ಸ ಮುಹುರ್ಮುಹುಃ ॥ ೫೧ ॥

ತತಃ ಕೃತ್ವಾ ಭೋಜನಂ ಹಿ ಕರಶುದ್ಧಿಂ ವಿಧಾಯ ಸಃ ।
ತಾಂಬೂಲಂ ದಕ್ಷಿಣಾಂ ಚಾಪಿ ಜಗ್ರಾಹ ರಘುನಾಯಕಾತ್ ॥ ೫೨ ॥

ತತಸ್ಸುರಾಣಾಂ ಪುರತೋ ವೇದವಾಕ್ಯೈಸ್ಸವಿಸ್ತರಂ ।
ದುರ್ವಾಸಾ ರಾಘವಂ ಸ್ತುತ್ವಾ ತಮಾಹಾನಂದನಿರ್ಭರಃ ॥ ೫೩ ॥

ರಾಮ ರಾಜೀವಪತ್ರಾಕ್ಷ ತ್ವಂ ಸಾಕ್ಷಾಜ್ಜಗದೀಶ್ವರಃ ।
ಅತ್ರ ರಾವಣಘಾತಾರ್ಥಮವತೀರ್ಣೋಽಸಿ ವೇದ್ಮ್ಯಹಂ ॥ ೫೪ ॥

---

೫೧. ಆಗ ಋಷಿಯು ದೇವತೆಗಳೊಡನೆಯೂ, ಶಿಷ್ಯರೊಡನೆಯೂ ರಾಮನಿಂದ ಬಾರಿ ಬಾರಿಗೂ ಪ್ರಾರ್ಥಿತನಾಗಿ ಭೋಜನಮಾಡಿದನು.

೫೨. ಆ ಮುನಿಯು ಸಂತೋಷದಿಂದ ಭೋಜನವನ್ನು ಮಾಡಿ ಕೈ ತೊಳೆದುಕೊಂಡನು. ಅನಂತರ ರಾಮನು ತಾಂಬೂಲ ದಕ್ಷಿಣೆಗಳನ್ನು ಕೊಡಲು ಅದನ್ನೂ ತೆಗೆದುಕೊಂಡನು.

೫೩. ಅನಂತರ ದೂರ್ವಾಸನು ವೇದವಾಕ್ಯಗಳಿಂದ ಆ ರಾಮನನ್ನು ದೇವತೆಗಳ ಎದುರಿಗೆ ಸ್ತುತಿಸಿ ಆನಂದದಿಂದ ಅವನನ್ನು ಕುರಿತು ಇಂತೆಂದನು.

೫೪. ಎಲೈ ಕಮಲದಳದಂತೆ ಕಣ್ಣುಳ್ಳ ರಾಮನೇ ! ನೀನು ಸಾಕ್ಷಾತ್ ಜಗದೀಶ್ವರನು. ನೀನು ರಾವಣನನ್ನು ಕೊಲ್ಲುವುದಕ್ಕೋಸ್ಕರ ಈ ಭೂಮಿಯಲ್ಲಿ ಅವತರಿಸಿದ್ದೀಯೆ. ಅದನ್ನು ನಾನು ಬಲ್ಲೆನು.

ಜನಾಃ ತ್ವತ್ಪೌರುಷಂ ಜ್ಞಾತುಂ ಮಂತ್ರೈತದ್ಯಾಚಿತಂ ತವ ।
ವಿನಾ ಗೋವಹ್ನಿಮಣಿಭಿರ್ದಿವ್ಯಾನ್ನಂ ರಘುನಂದನ || ೫೫ ||

ಪ್ರಸೂನಾನ್ಯಪ್ಯದೃಷ್ಟಾನಿ ಮಾನವೈರ್ಜಗತೀತಲೇ ।
ಕಿಂ ರಾಮ ದುರ್ಘಟಂ ತತ್ರ ಯಸ್ಯ ಭ್ರೂಭಂಗಮಾತ್ರತಃ || ೫೬ ||

ಲಯೋ ಬ್ರಹ್ಮಾದಿಕಾನಾಂ ಚ ಜಾಯತೇ ಸಂಭವೋಽಪಿ ಚ ।
ಮಂದರಂ ಮಜ್ಜಮಾನಂ ತು ದೃಷ್ಟ್ವಾ ತ್ವಂ ಕ್ಷೀರಸಾಗರೇ || ೫೭ ||

ಕೂರ್ಮರೂಪೇಣ ಜಾತೋಽಸಿ ಧರ್ತುಂ ತಂ ಮಂದರಾಚಲಂ ।
ನಿಷ್ಕಾಸಿತಾನಿ ರತ್ನಾನಿ ತದಾ ದೇವೈಶ್ಚತುರ್ದಶ || ೫೮ ||

---

೫೫. ಜನಗಳು ನಿನ್ನ ಪೌರುಷವನ್ನು ತಿಳಿದುಕೊಳ್ಳಲೆಂದು ಯೋಚಿಸಿ ನಿನ್ನ ಹತ್ತಿರವಿರುವ ಕಾಮಧೇನು, ಅಗ್ನಿ, ಚಿಂತಾಮಣಿಗಳಿಂದ ಹೊರತಾಗಿ ಪಕ್ವವಾದ ಅತಿಥಿ ಸತ್ಕಾರವನ್ನು ಈರೀತಿಯಾಗಿ ಯಾಚಿಸಿದೆನು.

೫೬–೫೮. ಜಗತ್ತಿನಲ್ಲಿ ಮನುಜರು ನೋಡದಿರತಕ್ಕ ಹೂವನ್ನು ಶಿವಾರ್ಚನೆಗೆ ಯಾಚಿಸಿದೆನು. ಎಲೈ ರಾಮನೇ ! ನೀನು ನಿನ್ನ ಹುಬ್ಬನ್ನು ಅಲ್ಲಾಡಿಸುವುದರಿಂದ ಅಸಂಭವವಾದ ಬ್ರಹ್ಮಾದಿಗಳ ಲಯವೂ ಕೂಡ ಉಂಟಾಗುತ್ತಿರುವಾಗ ನಿನಗೆ ಆಗದಿರತಕ್ಕ ಕೆಲಸವು ಯಾವುದಿರುವುದು ? ದೇವತೆಗಳು ಅಮೃತಕ್ಕೋಸ್ಕರ ಸಮುದ್ರವನ್ನು ಕಡೆಯಲು ಅದರೊಳಕ್ಕೆ ಮಂದರ ಪರ್ವತವನ್ನು ಹಾಕಿದಾಗ ಅದು ಮುಳುಗುತ್ತಿರುವುದನ್ನು ನೀನು ನೋಡಿ ಅದನ್ನು ಎತ್ತಿಹಿಡಿಯಲು ಆಮೆಯ ರೂಪವನ್ನು ಧರಿಸಿದೆ. ಆಗ ದೇವತೆಗಳು ನಿನ್ನ ಸಹಾಯದಿಂದ ಹದಿನಾಲ್ಕು ಬಗೆಯ ಶ್ರೇಷ್ಠ ವಸ್ತುಗಳನ್ನು ಹೊರಗೆಡಹಿದರು.

ತವ ಸಾಹಾಯ್ಯಮಾತ್ರೇಣ ಸರ್ವಂ ಜಾನಾಮ್ಯಹಂ ಪ್ರಭೋ ।
ಲಕ್ಷ್ಮೀಸ್ಸೋಮಃ ಕಾಮಧೇನುಃ ಕೌಸ್ತುಭಶ್ಚ ಸುಧಾವಿಷಂ ॥ ೫೯ ॥

ಐರಾವತಶ್ಚಾಪ್ಸರಸಃ ಕಲ್ಪವೃಕ್ಷೋ ಭಿಷಗ್ವರಃ ।
ಉಚ್ಚೈಶ್ರವಾಃ ಪಾರಿಜಾತೋ ಸುರಾ ಜ್ಯೇಷ್ಠೇತಿ ರಾಘವ ॥ ೬೦ ॥

ಚತುರ್ದಶಸು ರತ್ನಾನಿ ವಿಭಕ್ತಾನಿ ಪುರಾ ತ್ವಯಾ ।
ದೇವೇಭ್ಯೋ ಯಾನಿ ತಾನ್ಯೇತೇ ಭೋಕ್ಷ್ಯಂತಿ ಕೃಪಯಾ ತವ ॥ ೬೧ ॥

ತ್ವದಾಜ್ಞಾಪಾಲಿನಸ್ಸರ್ವೇ ಶಂಕರಾದ್ಯಾಶ್ಚ ನಿರ್ಜರಾಃ ।
ಸರ್ವೇಷಾಂ ಜೀವನೋಪಾಯಾಃ ತ್ವಯಾ ಸರ್ವೇ ಪೃಥಕ್ ಪೃಥಕ್ ॥ ೬೨ ॥

ಕಲ್ಪಿತಾ ಯೇನ ರಾಮೇಣ ತತ್ರ ಕಿಂ ದುರ್ಘಟಂ ತವ ।
ಮಮಾಭಿಲಕ್ಷಿತಂ ಭೋಜ್ಯಂ ದಾತುಂ ತತ್ಕೌತುಕಂ ಮಯಾ ॥ ೬೩ ॥

೫೯–೬೦. ಇದೆಲ್ಲವನ್ನೂ ನಾನು ಬಲ್ಲೆನು. ಅವಾವುವೆಂದರೆ ೧ ಲಕ್ಷ್ಮಿ ಯು, ೨. ಚಂದ್ರನು, ೩. ಕಾಮಧೇನುವು, ೪. ಕೌಸ್ತುಭವು, ೫. ಅಮೃತವು, ೬. ವಿಷವು, ೭. ಐರಾವತವು, ೮. ಅಪ್ಸರ ಸ್ತ್ರೀಯರು, ೯. ಕಲ್ಪವೃಕ್ಷವು, ೧೦. ಧನ್ವಂತರಿಯು, ೧೧. ಉಚ್ಚೈಶ್ರವಸ್ಸು, ೧೨. ಪಾರಿಜಾತವು, ೧೩. ಸುರೆಯು, ೧೪. ಜ್ಯೇಷ್ಠಾ ಲಕ್ಷ್ಮಿಯು.

೬೧. ಈ ರೀತಿಯಾಗಿ ಹದಿನಾಲ್ಕು ರತ್ನಗಳು ಹುಟ್ಟಲು ಅವನ್ನು ದೇವತೆಗಳಿಗೆ ಭಾಗಮಾಡಿ ಕೊಟ್ಟಿದ್ದೀಯೆ. ಅವೆಲ್ಲವನ್ನೂ ಆ ದೇವತೆಗಳು ನಿನ್ನ ಕೃಪೆಯಿಂದ ಅನುಭವಿಸುತ್ತಿರುವರು.

೬೨. ಶಂಕರನೇ ಮೊದಲಾದ ದೇವತೆಗಳೆಲ್ಲರೂ ನಿನ್ನ ಅಪ್ಪಣೆಯನ್ನು ಪಾಲಿಸುತ್ತಿರುವರು. ಎಲ್ಲರಿಗೂ ಜೀವನೋಪಾಯವನ್ನು ನೀನು ಬೇರೆ ಬೇರೆಯಾಗಿ ಕಲ್ಪಿಸಿದ್ದೀಯೆ.

೬೩. ಆ ರೀತಿಯಾಗಿ ನೀನು ಕಲ್ಪಿಸಿರುವಾಗ ಈಗ ನಿನ್ನ ಕೈಯಲ್ಲಿ ಆಗದಿರುವ ಕೆಲಸವಾವುದು ? ಅದರಲ್ಲಿಯೂ ನನಗೆ ಬೇಕಾದ ಭೋಜನವನ್ನು ಕೊಡಲು ನಿನಗೆ ಕೊಂಚವೂ ಕಷ್ಟವೇ ಇಲ್ಲ.

ಅದ್ಯಾವಲೋಕಿತಂ ರಾಮ ನ ಕೇನಾಪಿ ಪ್ರದರ್ಶಿತಂ ।
ತ್ವಂ ಪಾತಾ ಸರ್ವಲೋಕಾನಾಂ ಜನಕಶ್ಚಾಪಿ ಘಾತಕೃತ್ ॥ ೬೪ ॥

ಅಸ್ಮಾಕಂ ಗತಿದಾತಾ ತ್ವಂ ಮೇ ಕ್ಷಮಸ್ವಾಪರಾಧಿತಂ ।
ಏವಂ ನಾನಾವಿಧಂ ಸ್ತುತ್ವಾ ತಂ ಪ್ರಣಮ್ಯ ಪುನಃ ಪುನಃ ॥ ೬೫ ॥

ರಾಮಮಾಮಂತ್ರ್ಯ ದುರ್ವಾಸಾ ಯಯೌ ಶಿಷ್ಯೈಸ್ಸ್ವಮಾಶ್ರಮಂ ।
ಅಥ ತಾನ್ನಿರ್ಜರಾನ್ಪ್ರಾಹ ರಾಮಃ ಕಮಲಲೋಚನಃ ॥ ೬೬ ॥

ಕಲ್ಪವೃಕ್ಷಪಾರಿಜಾತೌ ಗೃಹೀತ್ವಾ ಗಮ್ಯತಾಂ ದಿವಂ ।
ತದ್ರಾಮವಚನಂ ಶ್ರುತ್ವಾ ವಾಕ್ಪತಿಃ ಪ್ರಾಹ ರಾಘವಂ ॥ ೬೭ ॥

---

೬೪. ಈರೀತಿಯಾಗಿ ನೀನು ಮಾಡಿದುದನ್ನೆಲ್ಲಾ ನಾನು ನೋಡಿ ಆಶ್ಚರ್ಯಗೊಂಡಿದ್ದೇನೆ. ಈಗ ನೀನು ಮಾಡಿತೋರಿಸಿದ ಆಶ್ಚರ್ಯವನ್ನು ಯಾವನೂ ನೋಡುವಂತೆ ಮಾಡಲೇ ಇಲ್ಲ. ಎಲೈ ರಾಮನೇ! ನೀನೇ ಲೋಕಕ್ಕೆಲ್ಲಾ ಸೃಷ್ಟಿಕರ್ತನು. ಕಾಪಾಡುವವನು. ಸಂಹಾರವನ್ನೂ ಮಾಡುವವನು.

೬೫. ನೀನೇ ನಮಗೆ ಗತಿಯನ್ನು ಕೊಡತಕ್ಕವನು ನಾನು ಮಾಡಿದ ಅಪರಾಧವನ್ನು ನೀನು ಕ್ಷಮಿಸು. ಎಂದೆನ್ನುತ್ತಾ ಆ ದುರ್ವಾಸನು ಹೀಗೆ ಅನೇಕ ವಿಧವಾಗಿ ಸ್ತುತಿಸಿ ಅವನಿಗೆ ಅನೇಕಬಾರಿ ನಮಸ್ಕರಿಸಿದನು.

೬೬. ಅನಂತರ ಹೋಗಿ ಬರುವೆನೆಂದು ರಾಮನಿಗೆ ಹೇಳಿ ಆ ದುರ್ವಾಸನು ತನ್ನ ಶಿಷ್ಯರೊಡನೆ ಹಿಂದಿರುಗಿ ಆಶ್ರಮಕ್ಕೆ ಹೊರಟುಹೋದನು. ಅನಂತರ ಕಮಲಲೋಚನನಾದ ರಾಮನು ಆ ದೇವತೆಗಳನ್ನು ಕುರಿತು ಇಂತೆಂದನು.

೬೭. ಎಲೈ ದೇವತೆಗಳಿರಾ! ನೀವು ಕಲ್ಪವೃಕ್ಷ. ಪಾರಿಜಾತಗಳನ್ನು ತೆಗೆದುಕೊಂಡು ಸ್ವರ್ಗಕ್ಕೆ ಹೋಗಿರಿ. ಎಂದೆನ್ನಲು ರಾಮನ ಈ ಮಾತನ್ನು ಕೇಳಿ ದೇವತೆಗಳ ಗುರುವಾದ ಬೃಹಸ್ಪತಿಯು ಇಂತೆಂದನು.

ಯಾವತ್ಕಾಲಂ ತಿಷ್ಠಸಿ ತ್ವಂ ಭೂಮ್ಯಾಂ ತಾವನ್ನಗೋತ್ತಮೌ ।
ಅಯೋಧ್ಯಾಯಾಂ ತಿಷ್ಠತಸ್ತೌ ಕಲ್ಪವೃಕ್ಷಸುರದ್ರುಮೌ ॥ ೬೮ ॥

ತ್ವಯಿ ವೈಕುಂಠಮಾಯಾತೇ ದಿವಂ ತೌ ಯಾಸ್ಯತೋ ಭುವಃ ।
ತಥೇತಿ ತತ್ಸುರಗುರೋಃ ಪ್ರತಿನಂದ್ಯ ವಚಃ ಪ್ರಭುಃ ॥ ೬೯ ॥

ಪುಷ್ಪಕೇ ಸ್ಥಾಪಯಾಮಾಸ ಕಲ್ಪವೃಕ್ಷಸುರದ್ರುಮೌ ।
ತತಸ್ತೇ ರಾಘವಂ ನತ್ವಾ ಯಯುರಿಂದ್ರಾದಿಕಾಸ್ಸುರಾಃ ॥ ೭೦ ॥

ಸ್ವರ್ಗಲೋಕಂ ಸುಸಂತುಷ್ಟಾ ರಾಘವೇಣಾತಿಪೂಜಿತಾಃ ।
ಏವಂ ಪ್ರಾಪ್ತೌ ಕಲ್ಪವೃಕ್ಷಪಾರಿಜಾತೌ ಭುವಂ ದಿವಃ ॥ ೭೧ ॥

---

೬೮. ರಾಮನೇ ! ನೀನು ಭೂಮಿಯಲ್ಲಿ ಎಲ್ಲಿಯವರೆಗೂ ಇರುತ್ತೀಯೋ ಅಲ್ಲಿಯವರೆಗೂ ಈ ಎರಡು ಮರಗಳೂ ಅಯೋಧ್ಯೆಯಲ್ಲಿರಲಿ.

೬೯. ನೀನು ವೈಕುಂಠಕ್ಕೆ ಹೋದಮೇಲೆ ಅವು ಈ ಭೂಮಿಯಿಂದ ಸ್ವರ್ಗಕ್ಕೆ ಹೋಗುತ್ತವೆ ಎಂದನು. ಅದನ್ನು ರಾಮನು ಕೇಳಿ ಆ ಗುರುವನ್ನು ಕುರಿತು ಹಾಗೆಯೇ ಆಗಲೆಂದನು.

೭೦. ಮತ್ತು ಆ ಮರಗಳೆರಡನ್ನೂ ಪುಷ್ಪಕವಿಮಾನದಲ್ಲಿಟ್ಟನು. ಅನಂತರ ಇಂದ್ರನೇ ಮೊದಲಾದ ದೇವತೆಗಳು ರಾಮನಿಗೆ ನಮಸ್ಕರಿಸಿ ಅವರವರ ಸ್ಥಾನಕ್ಕೆ ಹೊರಟುಹೋದರು.

೭೧. ರಾಘವನು ಅವರನ್ನು ಬಹುವಾಗಿ ಗೌರವಿಸಿ ಕಳುಹಿಸಿಕೊಟ್ಟನು. ಅವರು ಬಹು ಸಂತೋಷಗೊಂಡರು. ಈರೀತಿಯಾಗಿ ಪಾರಿಜಾತ ಕಲ್ಪವೃಕ್ಷಗಳು ಸ್ವರ್ಗದಿಂದ ಭೂಮಿಗೆ ಬಂದುವು.

ತಯೋರೇತತ್ಕಾರಣಂ ತೇ ಪ್ರೋಕ್ತಂ ಪೃಷ್ಟಂ ಯಥಾ ತ್ವಯಾ ।
ತದಾರಭ್ಯ ಸುರತರೂ ಪುಷ್ಪತಸ್ಥೌ ವಿರೇಜತುಃ ॥ ೭೨ ॥

ಸಾಕೇತೇ ಸೀತಯಾ ರಾಮಸ್ತಾಭ್ಯಾಂ ಸುಖಮವಾಪ ಸಃ ।
ಕಲ್ಪವೃಕ್ಷತಲೇ ದಿವ್ಯಪರ್ಯಂಕೇ ಸೀತಯಾ ಸಹ ॥ ೭೩ ॥

ನಾನಾಭೋಗಾನ್ರಾಘವೇಂದ್ರಸ್ಸ ಬುಭೋಜಾಚಿರಂ ಸುಖಂ ।
ಅತಃ ಪೂರ್ವಂ ಮಯಾ ರಾಮಧ್ಯಾನಂ ಕಲ್ಪತರೋಃ ಸ್ಥಲೇ ॥ ೭೪ ॥

ಸಹಸ್ರನಾಮಕೇಧ್ಯಾಯೇ ಪ್ರೋಕ್ತಂ ಶಿಷ್ಯ ತವಾಗ್ರತಃ ।
ತದಾರಭ್ಯ ಪಾರಿಜಾತವೃಕ್ಷಾಂಶಾಶ್ಚತಶೋ ಭುವಿ ॥ ೭೫ ॥

ಪಾರಿಜಾತನಗಾ ಜಾತಾ ವರ್ತಂತೇ ಡ್ಯಾಪಿ ತತ್ರ ಹಿ ।
ನಾನೇನ ಸದೃಶಂ ಪುಷ್ಪಂ ವರ್ತತೇ ರಾಮತೋಷದಂ ॥ ೭೬ ॥

---

೭೨. ಎಲೈ ಶಿಷ್ಯನೇ ! ನೀನು ಕೇಳಿದುದರಿಂದ ಅವು ಇಲ್ಲಿಗೆ ಬಂದುದಕ್ಕೆ ಕಾರಣವನ್ನು ಹೇಳಿದೆನು. ಆದು ಮೊದಲುಗೊಂಡು ಆ ಎರಡು ಮರಗಳೂ ಪುಷ್ಪಕದಲ್ಲಿದ್ದುಕೊಂಡು ಇರುತ್ತವೆ.

೭೩. ರಾಮನು ಅಯೋಧ್ಯೆಯಲ್ಲಿ ಸೀತೆಯೊಡನಿದ್ದುಕೊಂಡು ಆ ಮರಗಳಿಂದ ಈರೀತಿಯಾಗಿ ಸುಖವನ್ನು ಹೊಂದಿದನು. ಕಲ್ಪವೃಕ್ಷದ ಕೆಳಗೆ ಸೀತೆಯೊಡನಿದ್ದುಕೊಂಡು ಇರುತ್ತಿದ್ದನು.

೭೪-೭೬. ಅಲ್ಲಿದ್ದುಕೊಂಡು ಬಹುಕಾಲದವರೆಗೂ ಆ ಸೀತೆಯೊಡನೆ ಅನೇಕ ಭೋಗಗಳನ್ನು ಅನುಭವಿಸಿದನು ಆದ್ದರಿಂದ ನಾನು ಸಹಸ್ರನಾಮಾಧ್ಯಾಯವಲ್ಲಿ ಕಲ್ಪವೃಕ್ಷದ ತಲದಲ್ಲಿರುವಂತೆ ಧ್ಯಾನವನ್ನು ಹೇಳಿದೆನು. ಅದು ಮೊದಲುಗೊಂಡು ಪಾರಿಜಾತ ಕಲ್ಪವೃಕ್ಷಗಳ ಅಂಶವು ಭೂಮಿಯಲ್ಲಿ ಸಾವಿರ ಗಟ್ಟಲೆಯಲ್ಲಿ ಪಾರಿಜಾತ ಕಲ್ಪವೃಕ್ಷಗಳಾಗಿ ಹುಟ್ಟಿದುವು. ಈಗಲೂ ಅವುಗಳು ಇದ್ದುಕೊಂಡಿರುತ್ತವೆ. ಈ ಹೂವಿಗೆ ಸಮವಾಗಿ ಸಂತೋಷವನ್ನು ರಾಮನಿಗೆ ಉಂಟುಮಾಡುವ ಹೂವುಗಳು ಮತ್ತಾವುವೂ ಇಲ್ಲವೇ ಇಲ್ಲ.

ಕಲ್ಪವೃಕ್ಷಾಂಶರೂಪಾಶ್ಚ ಜ್ಞಾತವ್ಯಾಸ್ತತ್ರ ಮಾನವೈಃ ।
ಅಶ್ವತ್ಥಾಸ್ಸೇವನಾದ್ಯೈಶ್ಚ ಸರ್ವವಾಂಛಿತದಾಯಕಾಃ ॥ ೭೭ ॥

ಪುಣ್ಯಾಧಿಕ್ಯೇನ ಸೇವಂತೇ ನೋಪೇಕ್ಷಂತಿ ಯುಗತ್ರಯೇ ।
ಪಾಪಾಧಿಕ್ಯೇನಾಪಿ ಸೇವಾಂ ನರಾ ವಾಂಛಂತಿ ನೋ ಕಲೌ ॥ ೭೮ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ರಾಜ್ಯಕಾಂಡೇ ಪೂರ್ವಾರ್ಧೇ ಪಾರಿಜಾತಾ
ನಯನಂ ನಾಮ ದ್ವಿತೀಯಸ್ಸರ್ಗಃ

---

೭೭. ಆ ಅಯೋಧ್ಯೆಯಲ್ಲಿರುವ ಮರಗಳೆಲ್ಲವೂ ಕಲ್ಪವೃಕ್ಷದ ಅಂಶಗಳೆಂದು ತಿಳಿಯಬೇಕು. ಸೇವಿಸುವವರಿಗೆ ಇಷ್ಟಾರ್ಥಗಳನ್ನು ಕೊಡತಕ್ಕ ಅರಳಿಯ ಮರಗಳೇ ಮುಂತಾದುವು ಕಲ್ಪವೃಕ್ಷದ ಅಂಶದಿಂದ ಹುಟ್ಟಿದುವೆಂದು ಮನುಷ್ಯರು ತಿಳಿಯಬೇಕು.

೭೮. ಕೃತಯುಗ, ತ್ರೇತಾಯುಗ, ದ್ವಾಪರಯುಗಗಳಲ್ಲಿ ಪುಣ್ಯವು ಹೆಚ್ಚಾಗಿರುವುದರಿಂದ ಅವನ್ನು ಮಾನವರು ಸೇವಿಸುತ್ತಾರೆ. ಉಪೇಕ್ಷೆಮಾಡುವುದಿಲ್ಲ. ಕಲಿಯುಗದಲ್ಲಿ ಎಲ್ಲರಿಗೂ ಪಾಪವೇ ಹೆಚ್ಚಾಗಿರುವುದರಿಂದ ಆ ಮನುಷ್ಯರು ಅವನ್ನು ಸೇವಿಸುವುದಿಲ್ಲ. ಉಪೇಕ್ಷಿಸುತ್ತಾರೆ.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಪೂರ್ವಾರ್ಧದಲ್ಲಿ
ಪಾರಿಜಾತಾ ನಯನವೆಂಬ ಎರಡನೆಯ ಸರ್ಗವು

|| ಶ್ರೀರಸ್ತು ||

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ

|| ಎರಡನೆಯ ಸರ್ಗದ ಸಾರಾಂಶವು ||

ವಿಷ್ಣುದಾಸನು ಗುರುವನ್ನು ಕುರಿತು ಭೂಲೋಕದಲ್ಲಿರುವ ರಾಮನ ಧ್ಯಾನವನ್ನು ಸ್ವರ್ಗಲೋಕದಲ್ಲಿರುವ ಕಲ್ಪವೃಕ್ಷದ ಕೆಳಗೆ ಇರುವಂತೆ ಹೇಳಿದೆಯಲ್ಲಾ ! ಅದು ಹೇಗೆಂದು ಕೇಳಲು ಗುರುವಾದ ರಾಮದಾಸನು ಇಂತೆಂದನು.

ಒಂದುಸಾರಿ ದುರ್ವಾಸ ಋಷಿಯು ಅರವತ್ತುಸಾವಿರಜನ ಶಿಷ್ಯರೊಂದಿಗೆ ಹೋಗುತ್ತಿದ್ದನು. ಆಗ ಅವನ ಮನಸ್ಸಿನಲ್ಲಿ ವಿಷ್ಣುವು ರಾಮಾವತಾರದಿಂದ ಆಯೋಧ್ಯೆಯಲ್ಲಿ ಹುಟ್ಟಿರುವನು. ಅವನ ಪೌರುಷವನ್ನು ಜನಗಳು ತಿಳಿಯುವಂತೆ ಮಾಡಬೇಕೆಂದು ಯೋಚಿಸಿ ಆ ರಾಮನ ಬಳಿಗೆ ಬಂದನು.

ದುರ್ವಾಸನು ಶಿಷ್ಯರೊಡನೆ ಬರಲು ರಾಮನೇ ಎದುರುಗೊಂಡು ಪೂಜಿಸಿದನು. ಆಗ ಆ ಋಷಿಯು ಎಲೈ ರಾಮನೆ ! ನಾನು ಸಾವಿರವರ್ಷಗಳಿಂದಲೂ ಉಪವಾಸವಿದ್ದೇನೆ. ಈದಿನ ಪಾರಣೆಯಾಗಬೇಕಾಗಿದೆ. ನನಗೆ ಚಿಂತಾಮಣಿ, ಕಾಮಧೇನು, ಅಗ್ನಿಗಳಿಂದ ನಿರ್ಮಿತವಾದ ಅನ್ನಗಳಾಗಕೂಡದು. ಬೇರೆಯದಾದ ಪಕ್ವಾನ್ನಗಳಾಗಬೇಕು. ಮನುಷ್ಯರೂ ಎಂದೂ ನೋಡದ ಹೂವನ್ನು ಶಿವಪೂಜೆಗೆ ತಂದು ಕೊಡಬೇಕು ಎಂದನು. ರಾಮನು ಹಾಗೆಯೇ ಆಗಲೆಂದು ಹೇಳಲು ಆ ಋಷಿಯು ಶಿಷ್ಯರೊಡನೆ ಸ್ನಾನಕ್ಕೆ ಹೋದನು.

ಇತ್ತ ರಾಮನು ಲಕ್ಷ್ಮಣನ ಕೈಯ್ಯಿಂದ ತನ್ನ ಧನುಸ್ಸನ್ನು ತರಿಸಿ ಅದಕ್ಕೆ ಬಾಣವನ್ನು ಹೂಡಿ ಆ ಬಾಣಕ್ಕೆ ದೇವೇಂದ್ರನಿಗೆ ಬರೆದ ಒಂದು ಕಾಗದವನ್ನು ಕಟ್ಟಿ ಸ್ವರ್ಗಕ್ಕೆ ಬಿಟ್ಟನು. ಆ ಬಾಣವು ದೇವೇಂದ್ರನ ಮುಂದೆ ಬಿದ್ದಿತು. ಅದರಲ್ಲಿ

ರಾಮನು ಪಾರಿಜಾತ ಕಲ್ಪವೃಕ್ಷಗಳು ತನಗೆ ಬೇಕೆಂದು ಬರೆದಿದ್ದುದನ್ನು ನೋಡಿ ಅವನ್ನು ತೆಗೆದುಕೊಂಡು ದೇವತೆಗಳನ್ನೂ ಕರೆದುಕೊಂಡು ಬಂದು ದೇವೇಂದ್ರನು ರಾಮನಿಗೆ ಒಪ್ಪಿಸಿದನು.

ದುರ್ವಾಸನು ಸ್ನಾನಮಾಡಿ ಶಿಷ್ಯರೊಡನೆ ಬರಲು ಸೀತೆಯೇ ಮುಂತಾದವರು ಆ ಪಾರಿಜಾತ ಕಲ್ಪವೃಕ್ಷಗಳಿಂದ ಕೊಡಲ್ಪಟ್ಟ ಪಕ್ವಾನ್ನಗಳನ್ನು ಅವರಿಗೆಲ್ಲರಿಗೂ ಬಡಿಸಲು ಅವರೆಲ್ಲರೂ ಸಂತೋಷಪಟ್ಟರು. ರಾಮನು ಅವರಿಗೆಲ್ಲಾ ತಾಂಬೂಲ ದಕ್ಷಿಣೆಗಳನ್ನು ಕೊಟ್ಟು ಸತ್ಕರಿಸಿ ಉಪಚಾರ ವಾಕ್ಯಗಳನ್ನು ಹೇಳಿದನು. ಆಗ ಆ ದುರ್ವಾಸನು ತನ್ನ ಉದ್ದೇಶವೆಲ್ಲವನ್ನೂ ತಿಳಿಸಿ ತಾನು ಮಾಡಿದ ಅಪರಾಧವನ್ನು ಕ್ಷಮಿಸುವಂತೆ ಕೇಳಿಕೊಂಡು ಹೊರಟುಹೋದನು.

ಇತ್ತ ರಾಮನು ದೇವತೆಗಳಿಗೆ ಅವರ ಮರಗಳನ್ನು ಅವರು ತೆಗೆದುಕೊಂಡು ಹೋಗುವಂತೆ ಹೇಳಲು ಬೃಹಸ್ಪತಿಯು ಆ ರಾಮನು ಭೂಲೋಕದಲ್ಲಿರುವವರೆಗೂ ಆ ಮರಗಳು ಇಲ್ಲಿಯೇ ಇರಲೆಂದೂ ಅನಂತರ ಸ್ವರ್ಗಕ್ಕೆ ತೆಗೆದುಕೊಂಡು ಹೋಗುವೆವೆಂದೂ ಹೇಳಿ ಅಂತೆಯೇ ದೇವತೆಗಳಿಗೂ ಒಪ್ಪಿಸಿ ಎಲ್ಲರೊಡನೆಯೂ ಹೊರಟುಹೋದನು.

ಅನಂತರ ರಾಮನು ಅವನ್ನು ಪುಷ್ಪಕವಿಮಾನದೊಳಕ್ಕೆ ಇಡಿಸಿದನು.

ಆದುದರಿಂದಲೇ ನಾನು ಕಲ್ಪವೃಕ್ಷದ ಕೆಳಗೆ ರಾಮನಿರುವಂತೆ ಧ್ಯಾನವನ್ನು ಹೇಳಿದೆನು ಎಂದು ರಾಮದಾಸನು ವಿಷ್ಣುದಾಸನಿಗೆ ಸಮಾಧಾನವನ್ನು ಹೇಳಿದನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ

॥ ತೃತೀಯಃ ಸರ್ಗಃ ॥

॥ ವಿಷ್ಣುದಾಸ ಉವಾಚ ॥

ರಾಮದಾಸ ಗುರೋ ಭೂಮ್ಯಾಂ ರಾಮಕೃಷ್ಣೌ ವರೌ ಶ್ರುತೌ ।
ಮಯಾ ದಶಾವತಾರೇಷು ಹ್ಯವತಾರಾವುಭೌ ಪುರಾ ॥ ೧ ॥

ತಯೋರಪಿ ಚ ಕಶ್ಶ್ರೇಷ್ಠ ಸ್ತತ್ತ್ವಂ ವದ ಮಮಾಗ್ರತಃ ।
ತಾಂ ಶ್ರುತ್ವಾ ಸರ್ವದಾ ತಸ್ಯ ಶ್ರೋಷ್ಯೇಹಂ ಚರಿತಂ ಶುಭಂ ॥ ೨ ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಮೂರನೆಯ ಸರ್ಗವು

೧. ವಿಷ್ಣುದಾಸನು ಹೇಳಿದನು—ಎಲೈ ಗುರುವಾದ ರಾಮದಾಸನೇ ! ಭೂಮಿಯಲ್ಲಿ ರಾಮಕೃಷ್ಣರಿಬ್ಬರೂ ಶ್ರೇಷ್ಠರೆಂದು ಪ್ರಸಿದ್ಧವಾಗಿದೆ. ಸ್ವಾಮಿಯು ಮಾಡಿದ ದಶಾವತಾರಗಳಲ್ಲಿ ಅವರೆಡೂ ಶ್ರೇಷ್ಠವೆಂದು ನೀನೇ ಹಿಂದೆ ಹೇಳಿದ್ದೀಯೆ.

೨. ಆ ರಾಮಕೃಷ್ಣಾವತಾರಗಳೆರಡಲ್ಲಿ ಯಾವುದು ಶ್ರೇಷ್ಠವೆಂದು ನನಗೆ ಹೇಳು. ನೀನು ಹೇಳಿದಮೇಲೆ ಆ ಉತ್ತಮವಾದ ಅವತಾರವನ್ನು ತಿಳಿದುಕೊಂಡು ಆ ಅವತಾರದ ಕಥೆಯನ್ನೇ ಯಾವಾಗಲೂ ಕೇಳುತ್ತಿರುವೆನು.

॥ ಶ್ರೀರಾಮದಾಸ ಉವಾಚ ॥

ಸಮ್ಯಕ್ಪೃಷ್ಟಂ ವಿಷ್ಣುದಾಸ ಸಾವಧಾನಮನಾಃ ಶೃಣು ।
ರಾಮಾವತಾರಃ ಶ್ರೇಷ್ಠೋಽತ್ರ ವಿಜ್ಞೇಯಸ್ಸರ್ವದಾ ನರೈಃ ॥ ೩ ॥

ಅಸ್ಮಿನ್ನರ್ಥೇ ಪೂರ್ವವೃತ್ತಾಂ ಕಥಾಂ ಶೃಣು ಮನೋಹರಾಂ ।
ದ್ವಿಜಾಭ್ಯಾಂ ವಾದರೂಪೇಣ ಕೀರ್ತಿತಾಂ ಪುಣ್ಯದಾಯಕಾಂ ॥ ೪ ॥

ಅಯೋಧ್ಯಾವಿಷಯೇ ಕಶ್ಚಿದ್ದ್ವಿಜೋ ರಾಮಾಹ್ವಯಸ್ತ್ವಭೂತ್ ।
ದ್ವಾರಕಾಯಾಂ ತಥಾ ವಿಪ್ರಃ ಕೃಷ್ಣಾಖ್ಯೋಽಭೂತ್ಪರಸ್ಸುಧೀಃ ॥ ೫ ॥

ಚಕ್ರತುಸ್ಸೇವನಂ ಚೋಭೌ ಸರ್ವದಾ ರಾಮಕೃಷ್ಣಯೋಃ ।
ತಾವೇಕದಾ ಮಾಘಮಾಸೇ ಪ್ರಯಾಗೇ ಮಿಳಿತೌ ದ್ವಿಜೌ ॥ ೬ ॥

---

೩. ಶ್ರೀ ರಾಮದಾಸನು ಹೇಳಿದನು—ಎಲೈ ವಿಷ್ಣುದಾಸನೆ ! ನೀನು ಕೇಳಿದುದು ಬಹು ಚೆನ್ನಾಗಿದೆ, ಆದರೆ ಒಂದೇ ಮನಸ್ಸಿನಿಂದ ಕೇಳು. ಎಲ್ಲಾ ಅವತಾರಗಳಿಗಿಂತಲೂ ರಾಮಾವತಾರವೇ ಬಹು ದೊಡ್ಡದೆಂದು ಎಲ್ಲರೂ ತಿಳಿಯ ಬೇಕು,

೪. ಈ ವಿಷಯದಲ್ಲಿ ಹಿಂದೆ ನಡೆದ ಒಂದು ಕಥೆಯನ್ನು ಹೇಳುತ್ತೇನೆ ಕೇಳು. ಅದು ಬಹು ರಮ್ಯವಾಗಿದೆ, ಅದು ಇಬ್ಬರು ದ್ವಿಜರಿಗೆ ವಾದರೂಪದಿಂದ ನಡೆದು ಬಹು ಪುಣ್ಯವಾದುದಾಗಿದೆ.

೫. ಅಯೋಧ್ಯೆಯ ದೇಶದಲ್ಲಿ ರಾಮನೆಂಬ ಹೆಸರುಳ್ಳ ಒಬ್ಬ ಬ್ರಾಹ್ಮಣ ನಿದ್ದನು. ದ್ವಾರಿಕೆಯಲ್ಲಿ ಅಂತೆಯೇ ಕೃಷ್ಣನೆಂಬ ಬುದ್ಧಿವಂತನಾದ ಒಬ್ಬ ಬ್ರಾಹ್ಮಣನಿದ್ದನು.

೬. ರಾಮನು, ರಾಮನಸೇವೆಯನ್ನೂ, ಕೃಷ್ಣನು ಕೃಷ್ಣನ ಸೇವೆಯನ್ನೂ, ಯಾವಾಗಲೂ ಮಾಡುತ್ತಿದ್ದರು. ಒಂದುಸಾರಿಯು ಮಾಘಮಾಸದಲ್ಲಿ ಅವ ರಿಬ್ಬರೂ ಪ್ರಯಾಗದಲ್ಲಿ ಸೇರಿದರು.

ಉಭೌ ಸ್ನಾತೌ ತ್ರಿವೇಣ್ಯಾಂ ಹಿ ಮಾಧವಂ ಪರಿಪೂಜ್ಯ ಚ ।
ಕಥಾಂ ಪೌರಾಣಿಕಮುಖಾಚ್ಛ್ರೋತುಂ ತತ್ಪುರತಃ ಸ್ಥಿತೌ ॥ ೭ ॥

ಶುಶ್ರೂಷತುಃ ಕಥಾಸ್ತತ್ರ ಪ್ರಸಂಗಾದ್ರಾಘವಸ್ಯ ಚ ।
ರಾಮಾಖ್ಯೋ ರಾಮಭಕ್ತಸ್ಸ ಶ್ರುತ್ವಾ ರಾಘವಸತ್ಕಥಾಂ ॥ ೮ ॥

ತುಷ್ಟಸ್ತಂ ಪೂಜಯಾಮಾಸ ಮುದಾ ಪೌರಾಣಿಕಂ ತದಾ ।
ಕೃಷ್ಣಾಖ್ಯಃ ಕ್ರೋಧಸಂಯುಕ್ತಸ್ತದಾ ವಚನಮಬ್ರವೀತ್ ॥ ೯ ॥

ಕಿಂ ಕ್ಲೇಶಿನೋದ್ಯ ರಾಮಸ್ಯ ಕಥಾಂ ಶ್ರುತ್ವಾತಿಹರ್ಷಿತಃ ।
ಪೂಜಿತೋಪಿ ವೃಥಾ ವ್ಯಾಸಸ್ತ್ವಂ ಮೂಢೋಸೀತಿ ವೇದ್ಮ್ಯಹಂ ॥ ೧೦ ॥

---

೭. ಅವರಿಬ್ಬರೂ ತ್ರಿವೇಣಿಯಲ್ಲಿ ಸ್ನಾನಮಾಡಿದರು. ಮಾಧವಸ್ವಾಮಿಯನ್ನು ಪೂಜಿಸಿದರು. ಪೌರಾಣಿಕನ ಮುಖದಿಂದ ಕಥೆಯನ್ನು ಕೇಳಲು ಅವನ ಎದುರಿಗೆ ಕುಳಿತರು.

೮. ಆಗ ಪ್ರಸಂಗದಿಂದ ರಾಮನ ಕಥೆಯು ನಡೆಯುತ್ತಿದ್ದಿತು. ಅದನ್ನು ಕೇಳಲು ಕುಳಿತರು. ರಾಮ ಭಕ್ತನಾದ ರಾಮಶರ್ಮನು ರಾಮನ ಕಥೆಯನ್ನು ಕೇಳಿದನು.

೯. ಆಗ ಅವನು ಸಂತೋಷಪಟ್ಟು ಪೌರಾಣಿಕನನ್ನು ಪೂಜಿಸಿದನು. ಕೃಷ್ಣಶರ್ಮನು ಇದನ್ನು ನೋಡಿ ಕೋಪಗೊಂಡು ಆಗ ಇಂತೆಂದನು.

೧೦. ಎಲೈ ಬ್ರಾಹ್ಮಣನೆ! ಬಹುವಾದ ಕ್ಲೇಶವನ್ನು ಹೊಂದಿದ ರಾಮನ ಕಥೆಯನ್ನು ಕೇಳಿ ಏಕೆ ಸಂತೋಷಗೊಂಡಿದ್ದೀಯೆ? ಆ ಪೌರಾಣಿಕನನ್ನು ಅನ್ಯಾಯವಾಗಿ ಪೂಜಿಸಿದೆಯಲ್ಲ! ನೀನು ದಡ್ಡನಾಗಿದ್ದೀಯೆ ಎಂದೇ ನಾನು ಭಾವಿಸುತ್ತೇನೆ.

ನಾನ್ಯಚ್ಚರಿತ್ರಂ ಕಸ್ಯಾಪಿ ಪಾವನಂ ಶ್ರುತಿತೋಷದಂ ।
ಯಥಾ ಕೃಷ್ಣಸ್ಯ ಮೇ ರಮ್ಯಂ ನಾನಾಕ್ರೀಡಾಪುರಸ್ಸರಂ ॥ ೧೧ ॥

ತತ್ಕೃಷ್ಣವಚನಂ ಶ್ರುತ್ವಾ ರಾಮಾಖ್ಯಃ ಪ್ರಾಹಸಸ್ಮಿತಃ ।
॥ ರಾಮೋಪಾಸಕ ಉವಾಚ ॥
ರಾಮಃ ಕ್ಲೇಶೀ ಕಥಂ ಪ್ರೋಕ್ತಃ ತ್ವಯಾ ಕೃಷ್ಣಃ ಕಥಂ ಸುಖೀ ॥ ೧೨ ॥

ಕಥಂ ಕೃಷ್ಣಸ್ಯ ತೇ ರಮ್ಯಂ ಚರಿತಂ ದುರಿತಾಪಹಂ ।
ಕಥಂ ರಾಮಸ್ಯ ಮೇ ರಮ್ಯಂ ಚರಿತಂ ನೇರಿತಂ ತ್ವಯಾ ॥ ೧೩ ॥

ವದಾದ್ಯ ವಿಸ್ತರೇಣೈವ ಶೃಣ್ವಂತ್ವೇತೇ ಸಭಾಸದಃ ।
॥ ಕೃಷ್ಣೋಪಾಸಕ ಉವಾಚ ॥
ಸಮ್ಯಕ್ಪೃಷ್ಟಂ ತ್ವಯಾ ರಾಮ ಸಾವಧಾನಮನಾಃ ಶೃಣು ॥ ೧೪ ॥

---

೧೧. ಅನೇಕ ರೀತಿಯಾದ ಕ್ರೀಡೆಗಳನ್ನು ನಡೆಸಿದ ಕೃಷ್ಣನ ಚರಿತ್ರೆಯು ಹೇಗೆ ಪುಣ್ಯಪ್ರದವೂ ಚೆನ್ನಾಗಿಯೂ ಇರುವುದೋ ಅದರಂತಿರುವುದು ಲೋಕದಲ್ಲಿ ಮತ್ತೊಂದಿಲ್ಲ.

೧೨. ಕೃಷ್ಣನ ಈ ಮಾತನ್ನು ಕೇಳಿ ರಾಮನೆಂಬುವನು ಇಂತೆಂದನು. ರಾಮಭಕ್ತನು ಹೇಳಿದನು—ರಾಮನು ಕ್ಲೇಶವುಳ್ಳವನೆಂದೂ ಕೃಷ್ಣನು ಸುಖಿಯೆಂದೂ ನೀನು ಹೇಳಿದೆಯಲ್ಲ? ಅದು ಹೇಗೆ?

೧೩. ಕೃಷ್ಣನ ಚರಿತ್ರೆಯು ನಿನಗೆ ಹೇಗೆ ರಮ್ಯವೂ ಪಾಪಹಾರಕವೂ ಆಗಿರುವುದೋ ಅಂತೆಯೇ ರಾಮನ ಚರಿತ್ರೆಯೂ ನನಗೆ ರಮ್ಯವೂ ಮನೋಹರವಾಗಿಯೂ ಪಾಪಹಾರಕವಾಗಿಯೂ ಇದೆ. ಎಂಬುದಾಗಿ ನೀನು ಹೇಳದಿರಲು ಕಾರಣವೇನು?

೧೪. ಈಗ ಅದನ್ನು ವಿಸ್ತಾರವಾಗಿ ಹೇಳು. ಈ ಸಭಾಸದರೆಲ್ಲರೂ ಅದನ್ನು ಕೇಳಲಿ. ಕೃಷ್ಣಭಕ್ತನು ಹೇಳಿದನು.—ಎಲೈ ರಾಮನೇ! ನೀನು ಕೇಳಿದುದು ಸರಿ ಮನಸ್ಸಿಟ್ಟು ಅದನ್ನು ಕೇಳು, ಹೇಳುತ್ತೇನೆ.

ವದಾಮಿ ರಾಘವಸ್ಯಾಥ ಕೃಷ್ಣಸ್ಯ ಚರಿತಂ ತ್ವಹಂ ।
ಕ್ಲೇಶದಂ ತೋಷದಂ ಸೃಣಾಂ ತೃಣ್ವಂತ್ವೇತೇ ಸಭಾಸದಃ ॥ ೧೫ ॥

ತವ ರಾಮಸ್ಯ ಜನ್ಮಾದೌ ಜಾತಶ್ಶಾಪಃ ಪಿತುಃ ಪುರಾ ।
ಶಾಪಸ್ಯಾದಾವಪಿ ಪುರಾ ತದ್ಧೇತೋ ರಾವಣೇನ ಹಿ ॥ ೧೬ ॥

ಲಂಕಾಂ ತತ್ಪಿತರೌ ನೀತೌ ಪ್ರಾರಂಭೇ ದುಃಖಮೀದೃಶಂ ।
ಮಮ ಕೃಷ್ಣಸ್ಯ ಜನ್ಮಾದೌ ತತ್ಪಿತ್ರೋಃ ಸೌಖ್ಯದಾಯಕಃ ॥ ೧೭ ॥

ವಿವಾಹಮಂಗಳೈಃ ಕಂಸಃ ಪೂಜಯಾಮಾಸ ಸಾದರಂ ।

॥ ರಾಮೋಪಾಸಕ ಉವಾಚ ॥

ರೇರೇ ಶೃಣು ತ್ವಂ ದುರ್ಬುದ್ಧೇ ನ ಸ ಶಾಪೋ ವರೋಽರ್ಪಿತಃ ॥ ೧೮ ॥

---

೧೫. ರಾಮನು ಕಷ್ಟಪಡತಕ್ಕವನೆಂದೂ, ಕೃಷ್ಣನು ಸುಖದಿಂದ ಸಂತೋಷ ಪಡತಕ್ಕವನೆಂದೂ ಅವರ ಚರಿತ್ರೆಗಳನ್ನು ಈಗ ಹೇಳುತ್ತೇನೆ. ಈ ಸಭಾಸದ ರೆಲ್ಲಾ ಕೇಳಲಿ.

೧೬–೧೭. ನಿಮ್ಮ ರಾಮನು ಹುಟ್ಟುವುದಕ್ಕೆ ಮೊದಲೇ ಅವನ ತಂದೆಗೆ ಶಾಪವು ಬಂದಿದ್ದಿತು. ಶಾಪವು ಬರುವುದಕ್ಕಿಂತಲೂ ಮೊದಲೇ ಆ ರಾಮನ ತಾಯಿ ತಂದೆಗಳನ್ನು ರಾವಣನು ಲಂಕೆಗೆ ಕೊಂಡೊಯ್ದಿದ್ದನು. ರಾಮನು ಹುಟ್ಟು ವುದಕ್ಕೆ ಮೊದಲೇ ಅವನ ತಾಯಿ ತಂದೆಗಳಿಗೆ ಈರೀತಿಯಾದ ದುಃಖವು ಬಂದಿತು. ನನ್ನ ಕೃಷ್ಣನು ಹುಟ್ಟುವುದಕ್ಕೆ ಮೊದಲೇ ಅವನ ತಾಯಿ ತಂದೆಗಳಿಗೆ ಗೌರವವು ದೊರೆಯಿತು.

೧೮. ಆಗ ಅವರಿಬ್ಬರಿಗೂ ವಿವಾಹವು ನಡೆದು ಕಂಸನು ಅವರಿಬ್ಬರನ್ನೂ ಬಹುವಾಗಿ ಆದರದಿಂದ ಗೌರವಿಸಿದನು. ರಾಮ ಭಕ್ತನು ಹೇಳಿದನು — ಎಲೈ ದುರ್ಬುದ್ಧಿಯೇ ! ಕೇಳು. ರಾಮನು ಹುಟ್ಟುವುದಕ್ಕೆ ಮೊದಲು ಅವನ ತಂದೆಗೆ ಬಂದುದು ಶಾಪವಲ್ಲ. ಅದು ವರವು.

ಯತ್ಪ್ರಸಾದಾದಪುತ್ರಸ್ಯ ನೃಪಸ್ಯ ತನಯಸ್ತ್ವಭೂತ್ ।
ತದಾ ಮದ್ರಾಮಭೀತ್ಯಾ ತೌ ನೀತಾವಪಿ ವಿಸರ್ಜಿತೌ ॥ ೧೯ ॥

ದಶಾಸ್ಯೇನ ತತ್ಪಿತರೌ ಜನ್ಮಾದೌ ಪೌರುಷಂ ತ್ವಿದಂ ।
ತವ ಕೃಷ್ಣಸ್ಯ ಜನ್ಮಾದೌ ಪಿತ್ರೋಃ ಕಾರಾಗೃಹಾಸ್ಥಿತಿಃ ॥ ೨೦ ॥

ರಾಜಭೋಗನಿಷೇಧಾರ್ಥಂ ಶಾಪೋ ಯದುಕುಲಾಯ ಚ ।
ಜನ್ಮಾಪಿ ಬಂದಿಶಾಲಾಯಾಂ ವಿಯೋಗಶ್ಚ ತಯೋರಪಿ ॥ ೨೧ ॥

ಸಹೋದರವಧಶ್ಚಾಪಿ ತದ್ದೇತೋರ್ಮಾತುಲೇನ ಚ ।
ನ ಚ ರಾಜಾ ನ ವೈಶ್ಯಶ್ಚ ಯಸ್ಯ ತಾತಾವುಭಾವಪಿ ॥ ೨೨ ॥

---

೧೯. ಆ ಮಾತಿನ ಅನುಗ್ರಹದಿಂದಲೇ ಮಕ್ಕಳಿಲ್ಲದಿದ್ದ ಆ ದಶರಥನಿಗೆ ಮಕ್ಕಳಾದುವು. ರಾಮನ ಭೀತಿಯಿಂದಲೇ ಅವನ ತಾಯಿ ತಂದೆಗಳನ್ನು ಕದ್ದು ಕೊಂಡು ಹೋಗಿದ್ದು. ಆ ರಾವಣನು ಅವರನ್ನು ಬಿಟ್ಟುಬಿಟ್ಟಿನು.

೨೦. ಆ ರಾಮನು ಹುಟ್ಟುವುದಕ್ಕೆ ಮೊದಲೇ ಅವನ ತಾಯಿ ತಂದೆ ಗಳಿಗೆ ಈ ರೀತಿಯಾದ ಸೌಖ್ಯವು ಸಿಕ್ಕಿತು. ಅವನು ಹುಟ್ಟುವುದಕ್ಕೆ ಮೊದಲೇ ಅವನ ಪೌರುಷವು ಈರೀತಿಯಿರುವುದು. ನಿನ್ನ ಕೃಷ್ಣನು ಹುಟ್ಟುವುದಕ್ಕೆ ಮೊದಲೇ ಅವನ ತಾಯಿ ತಂದೆಗಳಿಗೆ ಅವನ ದೆಸೆಯಿಂದ ಕಾರಾಗೃಹ ಪ್ರಾಪ್ತಿಯಾಯಿತು.

೨೧. ಅವನು ಹುಟ್ಟುವುದಕ್ಕೆ ಮೊದಲೇ ಯದುಕುಲಕ್ಕೆ ರಾಜಭೋಗ ವನ್ನು ಹೊಂದದಂತೆ ಶಾಪವು ಬಂದಿತು. ಅವನು ಹುಟ್ಟಿದುದೂ ಕೂಡ ಕಾರಾ ಗೃಹದಲ್ಲಿ. ಹುಟ್ಟಿದಮೇಲೆಯೂ ತಾಯಿ ತಂದೆಗಳಿಗೂ ಮಗನಿಗೂ ವಿಯೋಗ ವುಂಟಾಯಿತು.

೨೨. ಅವನ ಕಾರಣದಿಂದಲೇ ಅವನ ಜೊತೆಯಲ್ಲಿ ಹುಟ್ಟಿದವರನ್ನೆಲ್ಲಾ ಸೋದರಮಾವನಾದ ಕಂಸನೇ ಕೊಂದುಹಾಕಿದನು. ಅವನ ತಾಯಿ ತಂದೆ ಗಳಾದರೋ ಕ್ಷತ್ರಿಯರಲ್ಲ. ಇಲ್ಲವೇ ವೈಶ್ಯರಲ್ಲ. ಇಂತಹವರು.

ಗೋರಕ್ಷಕಸ್ಯ ತನಯಃ ಪ್ರಸಸಶ್ಶೈಶವೇಪಿ ಚ ।
ಪರೇಣ ಪೋಷಿತಶ್ಚಾಪಿ ಕನೀಯೋ ಬಲಭದ್ರತಃ ॥ ೨೩ ॥

ಏವಂ ನಾನಾವಿಧಂ ದುಃಖಂ ತವ ಕೃಷ್ಣಸ್ಯ ನೋ ಸುಖಂ ।

॥ ಕೃಷ್ಣೋಪಾಸಕ ಉವಾಚ ॥

ಆತ್ಮಾರ್ಥಂ ತವ ರಾಮೇಣ ತಾಟಿಕಾ ಸ್ತ್ರೀ ವಿದಾರಿತಾ ।
ನಾರ್ಯಾಂ ವಿಮೋಚಿತೋ ಬಾಣಃ ಪಿತ್ರೋಃ ಖೇದೋ ವಿಯೋಗತಃ ॥ ೨೪ ॥

॥ ರಾಮೋಪಾಸಕ ಉವಾಚ ॥

ದ್ವಿಜಘ್ನೀ ನಿಹತಾ ದುಷ್ಟಾ ಮಮ ರಾಮೇಣ ತಾಟಿಕಾ ।
ಮುನಿಯಜ್ಞರಕ್ಷಣಾರ್ಥಂ ಮುದಾ ರಾಜ್ಞಾರ್ಪಿತೌ ಶಿಶೂ ॥ ೨೫ ॥

---

೨೩. ಅವನಾದರೋ ದನಕಾಯುವವನ ಮಗನು. ಬಾಲ್ಯದಲ್ಲಿಯೇ ತಾಯಿ ತಂದೆಗಳನ್ನಗಲಿ ಪರರಿಂದ ಪೋಷಿತನಾದವನು. ಇದಲ್ಲದೆ ಅವನು ಹಿರಿಯ ಮಗನಾಗದೆ ಬಲಭದ್ರನಿಗೆ ಕಿರಿಯುವನು.

೨೪. ನಿನ್ನ ಕೃಷ್ಣನಿಗೆ ಈ ರೀತಿಯಾದ ನಾನಾ ದುಃಖಗಳಿರುವುವು. ಸುಖವೆಂಬುದು ಇಲ್ಲವೇ ಇಲ್ಲ. ಕೃಷ್ಣಭಕ್ತನು ಹೇಳಿದನು— ನಿನ್ನ ರಾಮನು ತಾನು ಬದುಕಬೇಕೆಂದು ಹೆಂಗಸಾದರೂ ತಾಟಕೆಯನ್ನು ಕೊಂದನು. ಹೆಂಗಸಿನಮೇಲೆ ಬಾಣವನ್ನು ಬಿಟ್ಟಿರುವನಲ್ಲ ! ಅಲ್ಲದೆ ಚಿಕ್ಕತನದಲ್ಲಿಯೇ ತಾಯಿ ತಂದೆಗಳನ್ನು ಬಿಟ್ಟು ಅಗಲಿದನು. ಅದರಿಂದ ಅವನ ತಾಯಿ ತಂದೆಗಳಿಗೆ ಬಹುವಾದ ದುಃಖವನ್ನೂ ಕೊಟ್ಟನು.

೨೫. ರಾಮಭಕ್ತನು ಹೇಳಿದನು—ಅಯ್ಯಾ ! ಆ ತಾಟಕೆಯು ಬ್ರಹ್ಮಘಾತಕಿಯು. ದುಷ್ಟಳು. ಅಂತಹವಳನ್ನು ರಾಮನು ಕೊಂದನು. ವಿಶ್ವಾಮಿತ್ರನ ಯಜ್ಞರಕ್ಷಣೆಗೋಸ್ಕರವಾಗಿ ರಾಜನಾದ ದಶರಥನೇ ಸಂತೋಷದಿಂದ ಆ ಋಷಿಯ ಜೊತೆಯಲ್ಲಿ ಅವರನ್ನು ಕಳುಹಿಸಿಕೊಟ್ಟನು.

ತವ ಕೃಷ್ಣೇನ ರಕ್ಷಾರ್ಥಮಾತ್ಮನಃ ಪೂತನಾ ಹತಾ ।
ತಥಾತ್ಮಾರ್ಥಂ ಪ್ರಾಣಿಹಿಂಸಾ ಬಹು ತೇನ ಕೃತಾ ವ್ರಜೇ ॥ ೨೬ ॥

ಗೋಪೈಶ್ಚ ಸಂಗತಿಸ್ತಸ್ಯ ತಥೈವ ಗೋಪರಕ್ಷಣಂ ।
ಗೋವಧಸ್ಸರ್ಪಘಾತಶ್ಚ ಖಗವಾಜೀವಧಸ್ತಥಾ ॥ ೨೭ ॥

ರಾಸಭವೃಷಘಾತಶ್ಚ ಚೌರ್ಯಂ ಕೃತಂ ವನೇಟನಂ ।
ಕಂಬಳಾವರಣಂ ಶೀತಪರ್ಜನ್ಯೋಷ್ಣಪ್ರಪೀಡನಂ ॥ ೨೮ ॥

ಕ್ಷುತ್ತೃಡ್ಭ್ಯಾಂ ಪೀಡನಂ ನಿತ್ಯಂ ಗೋಪಾಲೋಚ್ಛಿಷ್ಟ ಸೇವನಂ ।
ಅತ್ಮಾರ್ಥಂ ಯಾಚಿತಂ ಚಾನ್ನಂ ದ್ವಿಜಸ್ತ್ರೀಭ್ಯೋ ವನೇ ಮುಹುಃ ॥ ೨೯ ॥

---

೨೬. ನಿನ್ನ ಕೃಷ್ಣನು ತನ್ನ ರಕ್ಷಣೆಗೋಸ್ಕರವಾಗಿ ಹೆಂಗಸಾದರೂ ಪೂತನಿಯನ್ನು ಕೊಂದನು. ಅಂತೆಯೇ ತನ್ನ ಆತ್ಮರಕ್ಷಣೆಗೋಸ್ಕರವೇ ಅವನು ಆ ಗೋಕುಲದಲ್ಲಿ ಅನೇಕ ಪ್ರಾಣಿಗಳನ್ನು ಕೊಂದನು.

೨೭. ತನ್ನ ರಕ್ಷಣೆಗೋಸ್ಕರಲೇ ಗೊಲ್ಲರೊಡನೆ ಸೇರಿಕೊಂಡು ದನಗಳನ್ನು ಕಾಯುತ್ತಿದ್ದನು. ಗೋವಧೆ, ಸರ್ಪವಧೆ, ಅಂತೆಯೇ ಪಕ್ಷಿವಧೆಗಳನ್ನು ಮಾಡಿದನು. ಕುದುರೆಗಳನ್ನೂ ಕೂಡ ಕೊಲ್ಲಲಿಲ್ಲವೇ !

೨೮. ಎತ್ತುಗಳನ್ನೂ ಕೊಂದನು. ಅದಿರಲಿ. ಕೊನೆಗೆ ಕತ್ತೆಗಳನ್ನೂ ಕೊಂದನಲ್ಲ! ಬೇಕಾದಂತೆ ಕಳ್ಳತನಗಳನ್ನು ಮಾಡುತ್ತಿದ್ದನು. ತಲೆತಪ್ಪಿಸಿಕೊಂಡು ಕಾಡಿನಲ್ಲಿಯೇ ಸುತ್ತುತ್ತಿದ್ದನು. ಕಂಬಳಿಯನ್ನು ಗೊಮುಟೆಯನ್ನಾಗಿ ಹಾಕಿಕೊಂಡಿರುತ್ತಿದ್ದನು. ಚಳಿ, ಮಳೆ, ಶಖೆಯೆಲ್ಲವನ್ನೂ ಅಲ್ಲಿ ಸಹಿಸಬೇಕಾಗಿ ಬಂದಿತು.

೨೯. ಯಾವಾಗಲೂ ಹಸಿವು ಬಾಯಾರಿಕೆಗಳನ್ನು ತಡೆದುಕೊಂಡಿರುತ್ತಿದ್ದನು. ಆ ಗೋಪಾಲರ ಎಂಜಲನ್ನೆಲ್ಲಾ ತಿನ್ನುತ್ತಿದ್ದನು. ಆ ಕಾಡಿನಲ್ಲಿ ಬ್ರಾಹ್ಮಣರ ಮನೆಗೆ ಹೋಗಿ ಅವರ ಹೆಂಗಸರ ಬಳಿ ಹೊಟ್ಟೆಗಿಲ್ಲದೆ ಅನ್ನವನ್ನು ಭಿಕ್ಷೆಬೇಡುತ್ತಿದ್ದನು.

ಇಂದ್ರಯಜ್ಞಪೂಜನಾದಿವೃದ್ಧಾಚಾರನಿಷೇಧನಂ ।
ಪರಸ್ತ್ರೀಗಮನಂ ಜ್ಯೇಷ್ಠನಾರೀಭಿಃ ಕ್ರೀಡನಂ ಚಿರಂ ॥ ೩೦ ॥

ನಗ್ನಸ್ತ್ರೀದರ್ಶನಂ ವಹ್ನಿಪ್ರಾಶನಂ ದಾಮಬಂಧನಂ ।
ಉನ್ಮೂಲನಂ ಚ ನಗಯೋರ್ಮೃತ್ಪರ್ಯುಷಿತಸೇವನಂ ॥ ೩೧ ॥

ರೋದನಂ ನವನೀತಾರ್ಥಂ ಮುಹುರ್ಮಾತ್ರಾ ಪ್ರತಾಡನಂ ।
ಗೋಪಿಕಾದಿಷು ಚ ಸ್ನೇಹಃ ಪೂರ್ವಸ್ಥಲವಿಸರ್ಜನಂ ॥ ೩೨ ॥

ಕೃತಾ ರಜಕಹತ್ಯಾ ಚ ಯುದ್ಧಂ ಕ್ಷತ್ರಿಯವತ್ಕೃತಂ ।
ಗಜಹತ್ಯಾ ಮಲ್ಲಯುದ್ಧಂ ಮಲ್ಲಮಾತುಲಮರ್ದನಂ ॥ ೩೩ ॥

---

೩೦. ಆ ಗೊಲ್ಲರು ಆಚಾರವಾಗಿಟ್ಟುಕೊಂಡಿದ್ದ ಇಂದ್ರಧ್ವಜ ಪೂಜೆಯೇ ಮುಂತಾದ ಆಚಾರಗಳನ್ನು ತಪ್ಪಿಸಿದನು. ಪರಸ್ತ್ರೀಯರಲ್ಲಿ ರಮಿಸುತ್ತಿದ್ದನು. ಅಲ್ಲದೆ ತನಗಿಂತಲೂ ವಯಸ್ಸಿನಲ್ಲಿ ದೊಡ್ಡವರಾದ ಹೆಂಗಸರಲ್ಲಿಯೂ ಸುಖಿಸಿದನು.

೩೧. ಬೆತ್ತಲೆಯಿರುವ ಹೆಂಗಸರನ್ನು ನೋಡುವುದು, ಅವರೊಡನೆ ರಮಿಸುವುದು. ಬೆಂಕಿಯನ್ನು ನುಂಗುವುದು. ಈ ಕೆಟ್ಟಕೆಲಸಗಳನ್ನು ಮಾಡಿದನು. ಹಗ್ಗದಿಂದ ಕಟ್ಟಿಸಿಕೊಂಡನು. ಮರವನ್ನು ಕಿತ್ತನು. ಮಣ್ಣನ್ನು ತಿನ್ನುತ್ತಿದ್ದನು. ಹಳಸಿದ ತಂಗಳನ್ನವನ್ನು ತಿನ್ನುತ್ತಿದ್ದನು.

೩೨. ಬೆಣ್ಣೆಗೋಸ್ಕರ ಅಳುತ್ತಿದ್ದನು. ಅದಕ್ಕೋಸ್ಕರಲೇ ತಾಯಿಯು ಆಗಾಗ್ಗೆ ಹೊಡೆಯುತ್ತಿದ್ದಳು. ಗೋಪಿಕಾಸ್ತ್ರೀಯರೊಡನೆ ಸ್ನೇಹಮಾಡುತ್ತಿದ್ದನು. ಒಂದೆ ತಾನಿದ್ದ ಸ್ಥಳದಲ್ಲಿ ಇದ್ದುಕೊಂಡಿರದೆ ಆಗಾಗ್ಗೆ ಬೇರೆ ಬೇರೆ ಸ್ಥಳಗಳನ್ನು ಮಾಡಿಕೊಂಡು ಮುಂದು ಮುಂದಕ್ಕೆ ಹೋಗುತ್ತಿದ್ದನು

೩೩. ಅಗಸರವನನ್ನು ಕೊಂದನು. ಕ್ಷತ್ರಿಯನಂತೆಯೇ ಯುದ್ಧವನ್ನು ಮಾಡುತ್ತಿದ್ದನು. ಆನೆಯನ್ನು ಕೊಂದನು. ಕುಸ್ತಿಮಾಡುತ್ತಿದ್ದನು. ಮಲ್ಲನನ್ನು ಕೊಂದುದಲ್ಲದೆ ಸೋದರಮಾವನನ್ನೇ ಕೊಂದನು.

ನೈಷ್ಠುರ್ಯಮಾಪ್ತವರ್ಗೇಷು ರಾಜ್ಯಪ್ರಾಪ್ತಿಸ್ತೇಥೈವ ಚ ।
ನೃಪಾಜ್ಞಾವರ್ತನಂ ಚಾಪಿ ಕ್ರೀಡಾ ದಾಸ್ಯಾ ಕುರೂಪಯಾ ॥ ೩೪ ॥

ಯುದ್ಧಾತ್ಪರಾಜಯಶ್ಚಾಪೀ ರಿಪವೇಪೃಷ್ಠದರ್ಶನಂ ।
ಗಿರೌ ದಗ್ಧಃ ಪರೈರ್ಜಾತಃ ಸ್ವೀಯಸ್ಥಲವಿಮೋಚನಂ ॥ ೩೫ ॥

ಅಬ್ಧಿತೀರನಿವಾಸಶ್ಚ ಬಲಾತ್ ಸ್ತ್ರೀಹರಣಂ ಕೃತಂ ।
ಭೌಮಾಸುರಪರದ್ರವ್ಯಹರಣಂ ಪರಸೂನುತಃ ॥ ೩೬ ॥

ಸ್ವೀಯಗೋತ್ರವಧಾರ್ಥಂ ಹಿ ಪಾಂಡುಜಾಯೋಪದೇಶಿತಂ ।
ಜನೈಃ ಸ್ತೇಯಾಪವಾದಶ್ಚ ವೃಕ್ಷಾರ್ಥಂ ಸಂಗರಸ್ಸುರೈಃ ॥ ೩೭ ॥

---

೩೪. ಆಪ್ತರಲ್ಲೆಲ್ಲಾ ನಿಷ್ಠೂರವನ್ನು ಕಟ್ಟಿಕೊಂಡಿದ್ದನು. ನಿಷ್ಠೂರವನ್ನು ಕಟ್ಟಿಕೊಂಡು ರಾಜ್ಯವನ್ನು ಸಂಪಾದಿಸಿಕೊಂಡನು. ಆಳುಗಳಂತೆ ರಾಜನ ಅಪ್ಪಣೆಯನ್ನು ನೆರವೇರಿಸುತ್ತಿದ್ದನು. ಕುರೂಪಿಯಾದ ದಾಸಿಯರೊಡನೆ ಕ್ರೀಡಿಸಿದನು.

೩೫. ಯುದ್ಧದಲ್ಲಿ ಎಷ್ಟೋಬಾರಿ ಸೋತುಹೋದನು. ಅಲ್ಲದೆ ಶತ್ರುವಿಗೆ ಬೆನ್ನುತೋರಿಸುತ್ತ ಓಡಿಹೋದನು. ಬೆಟ್ಟದಲ್ಲಿ ಸುಟ್ಟುಹೋದನೆಂದು ಶತ್ರುಗಳಿಗೆ ತಿಳಿಯುವಂತೆ ಮಾಡಿಕೊಂಡನು. ಅನಂತರ ಆ ಸ್ಥಳವನ್ನು ಬಿಟ್ಟು ಬೇರೆ ಕಡೆಗೆ ಹೊರಟುಹೋದನು.

೩೬. ಸಮುದ್ರದ ದಡದಲ್ಲಿ ವಾಸಮಾಡಿದನು. ಬಲಾತ್ಕಾರದಿಂದ ಹೆಂಗಸರನ್ನು ಹಿಡಿದು ಕೊಳ್ಳುತ್ತಿದ್ದನು. ನರಕಾಸುರನ ಧನವನ್ನೆಲ್ಲಾ ಕಂಡವರ ಮಕ್ಕಳಿಂದ ಅಪಹರಿಸಿದನು.

೩೭. ಪಾಂಡುರಾಜನ ಮಗನಾದ ಅರ್ಜುನನಿಗೆ ತನ್ನವಂಶವನ್ನು ನಾಶಪಡಿಸಿಕೊಳ್ಳುವಂತೆ ಉಪದೇಶಮಾಡಿದನು. ಜನಗಳಿಂದ ಕಳ್ಳನೆಂದು ಅಪವಾದವನ್ನು ಹೊರಿಸಿಕೊಂಡು ತಿರಸ್ಕೃತನಾದನು. ಮರಕ್ಕೋಸ್ಕರ ದೇವತೆಗಳೊಡನೆ ಯುದ್ಧಮಾಡಿದನು. ಆಹಾ ! ನಿನ್ನ ಕೃಷ್ಣನ ಕಥೆ ಎಷ್ಟು ಚೆನ್ನಾಗಿದೆ !

॥ ಕೃಷ್ಣೋಪಾಸಕ ಉವಾಚ ॥

ಕಿಂ ತ್ವಂ ಜಲ್ಪಸಿ ಶೃಣ್ವದ್ಯ ತವ ರಾಮಸ್ಯ ಕಾಮಿನಃ ।
ಕಸ್ಯ ಸಾ ದುಹಿತಾ ಬ್ರೂಹಿ ಕೃತಸ್ಸ ವರ್ಣಸಂಕರಃ ॥ ೩೮ ॥

ಶಿವ ಚಾಪಸ್ಯ ಭಂಗೇನ ಶಿವಸ್ಯಾಪ್ಯಪರಾಧಿತಂ ।
ಜಾಮದಗ್ನಿಮಾನಭಂಗಕರಣಂ ಮುದ್ಗಲಸ್ಯ ಚ ॥ ೩೯ ॥

ಆಜ್ಞಾಂ ವಿನಾ ಲಕ್ಷ್ಮಣೇನ ತದ್ವಲ್ಲ್ಯಸ್ತ್ರೋಟಿತಾಶ್ಶುಭಾಃ ।
ಸದಾರಣ್ಯಚರಃ ಸ್ವಾರ್ಥಂ ಪಶುಹಿಂಸಾಪರಾಯಣಃ ॥ ೪೦ ॥

ವನಾಶ್ರಮೀ ವನ್ಯಜೀವೀ ಮಾಂಸಾಹರೀ ಧನುರ್ಧರಃ ।
ವ್ಯಾಧಕರ್ಮರತಶ್ಶೀತಪರ್ಜನ್ಯೋಷ್ಣಪ್ರಪೀಡಿತಃ ॥ ೪೧ ॥

---

೩೮. ಕೃಷ್ಣಭಕ್ತನು ಹೇಳಿದನು—ಅಯ್ಯಾ ! ನೀನು ಎಷ್ಟು ಹರಟುತ್ತೀಯೆ ? ಕಾಮಿಯಾದ ನಿನ್ನ ರಾಮನ ಕಥೆಯನ್ನು ಕೇಳು. ಆ ಸೀತೆಯು ಯಾರ ಮಗಳು ಹೇಳು ? ಆ ಜನಕನ ಮಗಳನ್ನು ಮದುವೆಯಾದುದರಿಂದ ವರ್ಣಸಂಕರ ಮಾಡಿಕೊಂಡಂತಾಗಲಿಲ್ಲವೇ. (ಜನಕವೆಂದರೆ–ತಂದೆ, ತಂದೆಯ ಮಗಳನ್ನು ಮದುವೆಯಾದುದು ವರ್ಣರಂಕರ).

೩೯–೪೦. ಶಿವಧನುಸ್ಸನ್ನು ಮುರಿದುದರಿಂದ ಶಿವನಿಗೆ ತಪ್ಪುಮಾಡಿದಂತಾಗಲಿಲ್ಲವೆ ? ಬ್ರಾಹ್ಮಣನಾದ ಪರಶುರಾಮನಿಗೆ ಮಾನಭಂಗಮಾಡಲಿಲ್ಲವೆ ? ಮುದ್ಗಲನ ಅಪ್ಪಣೆಯಿಲ್ಲದೆ ಅವನ ಆಶ್ರಮದಲ್ಲಿದ್ದ ಕಾಡಿನಿಂದ ಔಷಧಿಯನ್ನು ತರಲಿಲ್ಲವೆ ? ಸ್ವಾರ್ಥಕ್ಕೋಸ್ಕರ ಪಶುವನ್ನು ಕೊಲ್ಲುತ್ತಿದ್ದದು.

೪೧. ವನಗಳಲ್ಲಿಯೇ ಆಶ್ರಮವನ್ನು ಮಾಡಿಕೊಂಡಿದ್ದದು. ವನದ ಪದಾರ್ಥಗಳನ್ನೇ ತಿಂದು ಜೀವಿಸುತ್ತಿದ್ದನು. ಮಾಂಸಾಹಾರವನ್ನೆಲ್ಲಾ ಮಾಡುತ್ತಿದ್ದನು. ಯಾವಾಗಲೂ ವ್ಯಾಧರ ಕೆಲಸದಲ್ಲಿಯೇ ನಿರತನಾಗಿರುತ್ತಿದ್ದನು. ಗಾಳಿ, ಮಳೆ, ಉಷ್ಣಗಳಿಂದ ತೊಂದರೆಪಡುತ್ತಿದ್ದನು.

ಪಾದಗಾಮೀ ಚರ್ಮವಾಸಾ ಜಟಾವಲ್ಕಲವಾನ್ನಖೀ ।
ಶ್ಮಶ್ರುಧಾರೀ ತರುಚ್ಛಾಯಾಶ್ರಯೀ ಪಾತ್ರವಿವರ್ಜಿತಃ ॥ ೪೨ ॥

ರಾಕ್ಷಸೇನ ಹೃತಾ ಪತ್ನೀ ತವ ರಾಮಸ್ಯ ಕಾನನೇ ।
ಪತ್ನ್ಯರ್ಥಂ ಹಿ ಕೃತಶ್ಶೋಕಸ್ತಥಾ ದಾಸ್ಯಾ ಪ್ರಪೂಜಿತಃ ॥ ೪೩ ॥

॥ ರಾಮೋಪಾಸಕ ಉವಾಚ ॥

ರಾಮೇಣ ಮೋಚಿತಾ ಪತ್ನೀ ಕೃತಾ ಛಾಯಾಮಯೀ ಪುರಾ ।
ನ ಸಾ ದಾಸೀ ತು ಶಬರೀ ಮುನಿಸೇವನತತ್ಪರಾ ॥ ೪೪ ॥

ಜೀವನ್ಮುಕ್ತಾ ತತ್ಕೃಪಯಾ ಮೋಕ್ಷಮಾಪ ಶುಚಿವ್ರತಾ ।
ತವ ಕೃಷ್ಣಸ್ಯ ತಾಃ ಪತ್ನೀರ್ಭ್ಯೋಕ್ಷ್ಯಂತ್ಯದ್ಯಾಪಿ ಶತ್ರವಃ ॥ ೪೫ ॥

---

೪೨ ಅವನು ಯಾವಾಗಲೂ ಕಾಲಿನಿಂದಲೇ ಓಡಾಡುತ್ತಿದ್ದನು. ಚರ್ಮವನ್ನು ಹೊದೆಯುತ್ತಿದ್ದನು. ಜಟೆಯನ್ನೂ, ನಾರುದುಡಿಯನ್ನೂ, ಧರಿಸುತ್ತಿದ್ದನು. ಉಗುರನ್ನೂ, ಗಡ್ಡವನ್ನೂ ಬೆಳೆಸುತ್ತಿದ್ದನು. ಮರದ ಬುಡದಲ್ಲಿಯೇ ಇರುತ್ತಿದ್ದನು. ಪಾತ್ರೆಯೇ ಇರಲಿಲ್ಲ.

೪೩. ನಿನ್ನ ರಾಮನ ಹೆಂಡತಿಯನ್ನು ಕಾಡಿನಲ್ಲಿ ರಾಕ್ಷಸನು ಕದ್ದುಕೊಂಡು ಹೋದನು. ಅವನು ಹೆಂಡತಿಗೋಸ್ಕರವಾಗಿ ಬಹುವಾಗಿ ಅತ್ತನು. ದಾಸಿಯಿಂದ ಪೂಜಿಸಿಕೊಂಡನು.

೪೪. ರಾಮಭಕ್ತನು ಹೇಳಿದನು—ನನ್ನ ರಾಮನು ಬಿಟ್ಟ ಹೆಂಡತಿಯು ಸರಿಯಾದವಳಲ್ಲ. ಮಾಯಾರೂಪಳಾದವಳು. ಪೂಜಿಸಿದವಳು ದಾಸಿಯಲ್ಲ. ಮುನಿಗಳನ್ನು ಸೇವಿಸುವುದರಲ್ಲಿ ಆಸಕ್ತಳಾದ ಶಬರಿಯು.

೪೫. ಆಕೆಯು ಆ ಸ್ವಾಮಿಯ ಕೃಪೆಯಿಂದ ಜೀವನ್ಮುಕ್ತಳಾಗಿದ್ದುಕೊಂಡು ಮೋಕ್ಷವನು ಹೊಂದಿದಳು. ನಿನ್ನ ಕೃಷ್ಣನ ಆ ಹೆಂಡತಿಯರನ್ನು ಈಗಲೂ ಕೂಡ ಅವನ ಶತ್ರುಗಳು ರಮಿಸುತ್ತಿರುವರು.

ಜಿತ್ವಾರ್ಜುನಂ ಬಲಾದೇವ ಹೃತಾಃ ಪೂರ್ವಂ ಸಹಸ್ರಶಃ ।
ಸ್ತ್ರೀಜಿತಶ್ಚ ಸ್ತ್ರಿಯಾ ದತ್ತಃ ಕ್ರಯಕ್ರೀತಶ್ಚ ಸಾದರಾತ್ ॥ ೪೬ ॥

ಸರ್ವಾಸಾಂ ಕಾಮಪೂರ್ತ್ಯರ್ಥಂ ನಿಶಿ ನಿದ್ರಾವಿವರ್ಜಿತಃ ।
ಬಂಧುಭ್ಯಾಂ ಗೋಪಿಕಾ ಭುಕ್ತಾ ಮಾತೃತುಲ್ಯಾ ವಯೋಽಧಿಕಾಃ ॥ ೪೭ ॥

॥ ಕೃಷ್ಣೋಪಾಸಕ ಉವಾಚ ॥

ಬಂಧುನಾ ತವ ರಾಮಶ್ಚ ಪಶುಭೀತ್ಯಾ ನ ನಿದ್ರಿತಃ ।
ಬಂಧುಪತ್ನ್ಯರ್ಪಿತಾ ತಾರಾ ಸುಗ್ರೀವಾಯ ಯಥಾಸುಖಂ ॥ ೪೮ ॥

---

೪೬. ಶತ್ರುಗಳು ಅರ್ಜುನನನ್ನು ಜಯಿಸಿ ಕೃಷ್ಣನ ಹೆಂಡಿರನ್ನು ಕೊಳ್ಳೆ ಹೊಡೆದುಕೊಂಡು ಹೋದರು. ನಿನ್ನ ಕೃಷ್ಣನು ಹೆಂಗಸರಿಗೆ ಸೋತುಹೋದನು. ಹೆಂಗಸರು ಅವನನ್ನು ದಾನವನ್ನಾಗಿ ಕೊಟ್ಟುಬಿಟ್ಟರು. ಮತ್ತು ನಾರದನಿಂದ ಕ್ರಯಕ್ಕೆ ಆ ಹೆಂಗಸರೇ ತೆಗೆದುಕೊಂಡರು.

೪೭. ನಿನ್ನ ಕೃಷ್ಣನು ಅನೇಕಜನ ಹೆಂಗಸರನ್ನು ಇಟ್ಟುಕೊಂಡು ಅವರ ಕಾಮ ಪೂರ್ತಿಗೋಸ್ಕರವಾಗಿ ರಾತ್ರಿಯಲ್ಲೆಲ್ಲಾ ಅಲೆದಾಡುತ್ತ ನಿದ್ರೆಯನ್ನೇ ಮಾಡುತ್ತಿರಲಿಲ್ಲ. ತನಗೆ ವಯಸ್ಸಿನಲ್ಲಿ ದೊಡ್ಡವರಾದ ತಾಯಿಗೆ ಸಮಾನರಾದ ಗೋಪಿಕೆಯರನ್ನು ಗ್ರಾಮ್ಯ ಸುಖದ ಆಸೆಯಿಂದ ಅನುಭವಿಸಿದನು. ಆಹಾ! ನಿನ್ನ ಕೃಷ್ಣನ ಯೋಗ್ಯತೆಯನ್ನು ಏನೆಂದು ಹೇಳಲಿ!

೪೮. ಕೃಷ್ಣಭಕ್ತನು ಹೇಳಿದನು—ನಿನ್ನ ರಾಮನು ತಮ್ಮನೊಡನಿದ್ದು ಕೊಂಡು ದುಷ್ಟಪ್ರಾಣಿಗಳದೆಸೆಯಿಂದ ಹೆದರಿ ಸರಿಯಾಗಿ ನಿದ್ದೆಯನ್ನೇ ಮಾಡಲಿಲ್ಲ. ಅಣ್ಣನ ಹೆಂಡತಿಯಾದ ತಾರೆಯನ್ನು ತಮ್ಮನಾದ ಸುಗ್ರೀವನಿಗೆ ಭೋಗಿಸಲು ಯೋಚಿಸದೇನೇ ಕೊಟ್ಟನು.

ವಾನರೈಶ್ಚ ಕೃತಾ ಮೈತ್ರೀ ಸ್ಪರ್ಶಿತಂ ದುಂದುಭೇಶ್ಶವಂ ।
ನಿರರ್ಥಕಂ ಹತೋ ವಾಲೀ ಸಾಹಾಯ್ಯಂ ವಾನರೈಃ ಕೃತಂ ॥ ೪೯ ॥

ವಾನರೋ ಯಸ್ಯ ವೈ ಯಾನಂ ವೃಥಾ ತಾಲಾ ವಿದಾರಿತಾಃ ।
ಸಾಗರೋ ರೋಧಿತೋ ಯೇನ ಲಂಕಾ ಸಾ ಜ್ವಾಲಿತಾ ವರಾ ॥ ೫೦ ॥

॥ ರಾಮೋಪಾಸಕ ಉವಾಚ ॥

ದರಿದ್ರೇಣ ಸುಧಾಮ್ನಾ ತೇ ಕೃಷ್ಣೇನ ಮೈತ್ರಿಕೀ ಕೃತಾ ।
ನ ಜ್ಞೇಯಾ ವಾನರಾಸ್ತೇ ಹಿ ಸರ್ವೇ ವೇದಾಂಶರೂಪಿಣಃ ॥ ೫೧ ॥

ಕಾಪಟ್ಯೇನ ಹತೋ ಯೇನ ಜರಾಸಂಧೋ ನಿರರ್ಥಕಃ ।
ಸಾಹಾಯ್ಯಂ ಸರ್ವದಾ ಯಸ್ಯ ಕೃತಂ ಗೋಪೈಃ ಪ್ರಜೇ ವನೇ ॥ ೫೨ ॥

---

೪೯. ಕಪಿಗಳೊಡನೆ ಸ್ನೇಹಮಾಡಿಕೊಂಡನು. ದುಂದುಭಿಯ ಅಪವಿತ್ರವಾದ ಹೆಣವನ್ನು ಮುಟ್ಟಿದನು. ಪ್ರಯೋಜನವಿಲ್ಲದೆ ವ್ಯರ್ಥವಾಗಿ ವಾಲಿಯನ್ನು ಕೊಂದನು. ಅವನ ಕೈಲಾಗದಿದ್ದುದರಿಂದ ವಾನರರು ಅವನಿಗೆ ಸಹಾಯಮಾಡಿದರು.

೫೦. ಕೋತಿಗಳಮೇಲೆ ಹತ್ತಿಕೊಂಡು ತಿರುಗುತ್ತಿದ್ದನು. ತಾಳೆಯ ಮರಗಳನ್ನು ತನಗೆ ಸ್ವಲ್ಪವೂ ಪ್ರಯೋಜನವಿಲ್ಲದಿದ್ದರೂ ಕತ್ತರಿಸಿದನು. ಸಮುದ್ರಕ್ಕೆ ಕಟ್ಟೆಯನ್ನು ಹಾಕಿದನು. ಲಂಕೆಯೆಂಬ ಊರಿಗೆ ಬೆಂಕಿಯನ್ನು ಹಚ್ಚಿಸಿದನು.

೫೧. ರಾಮಭಕ್ತನು ಹೇಳಿದನು—ನಿನ್ನ ಕೃಷ್ಣನು ದರಿದ್ರನಾದ ಸುಧಾಮನೊಡನೆ ಸ್ನೇಹವನ್ನು ಮಾಡಿಕೊಂಡಿರಲಿಲ್ಲವೆ? ನಮ್ಮ ರಾಮನು ಸ್ನೇಹಮಾಡಿಕೊಂಡಿದ್ದುವು ಕಪಿಗಳಲ್ಲ. ಅವೆಲ್ಲವೂ ವೇದಾಂಶದ ರೂಪಗಳೆಂದು ತಿಳಿ.

೫೨. ನಿನ್ನ ಕೃಷ್ಣನು ವ್ಯರ್ಥವಾಗಿ ಕಪಟವನ್ನನುಸರಿಸಿ ಜರಾಸಂಧನನ್ನು ಕೊಂದನು. ಅವನಿಗೆ ಮನೆಯಲ್ಲಿಯೂ, ಕಾಡಿನಲ್ಲಿಯೂ, ಗೋಪಾಲಕರು ಯಾವಾಗಲೂ ಸಹಾಯಮಾಡುತ್ತಿದ್ದರು.

ಗೋಪಾಲಸ್ಯ ಕೃತಂ ಯಾನಂ ಕ್ರೀಡನಂ ಸರ್ವದಾ ವನೇ ।
ಜ್ವಲಿತಾ ಯೇನ ಸಾ ಕಾಶೀ ಸುಹೃದ್ರುಕ್ಮೀ ನಿರೂಪಿತಃ ॥ ೫೩ ॥

ಶಿವಭಕ್ತೇನ ಸಮರಃ ಕೃತೋ ಬಾಣೇನ ಸಾದರಂ ।
ಶಿವೇನಾಪಿ ಕೃತಂ ಯುದ್ಧಂ ಚೈದ್ಯೇನ ನಿಂದಿತೋ ಮುಹುಃ ॥ ೫೪ ॥

ಪರೈಃ ಪೌತ್ರೋ ಜಿತೋ ಯಸ್ಯ ಯೇನ ಸ್ತ್ರೀಣಾಂ ಪರಸ್ಪರಂ ।
ಕೃತಾ ವಿಷಮತಾ ಚಾತ್ರ ಪಾರಿಜಾತಾರ್ಪಣಾದಿಭಿಃ ॥ ೫೫ ॥

॥ ಕೃಷ್ಣೋಪಾಸಕ ಉವಾಚ ॥

ತವಾಪಿ ರಾಮಪುತ್ರೇಣ ಸುಹೃದ್ಬದ್ಧೋ ರಣೇ ಜಿತಃ ।
ಶಿವಭಕ್ತದಶಾಸ್ಯೇನ ರಾಮೇಣ ಸಂಗರಃ ಕೃತಃ ॥ ೫೬ ॥

---

೫೩. ಚಿಕ್ಕಚಿಕ್ಕ ದನಕಾಯುವ ಹುಡುಗರ ಮೇಲೆ ಹತ್ತಿಕೊಂಡು ಸಂಚರಿಸುತ್ತಿದ್ದನು. ಅಲ್ಲದೆ ಅವರೊಡನೆಯೇ ಅವನ ಆಟವೆಲ್ಲವೂ ಯಾವಾಗಲೂ ಕಾಡಿನಲ್ಲಿಯೇ ಆಗಿದ್ದಿತು. ಕಾಡಿಗೆ ಬೆಂಕಿ ಹಾಕಿ ಸುಟ್ಟನು. ಒಳ್ಳೆಯವನಾದ ರುಕ್ಮಿಯನ್ನು ವಿರೂಪಮಾಡಿ ಅವಮಾನಪಡಿಸಿದನು.

೫೪. ಶಿವಭಕ್ತನಾದ ಬಾಣನೊಡನೆ ಯುದ್ಧಮಾಡಿದನು. ಆ ಪರಮಾತ್ಮನಾದ ಶಿವನೊಡನೆಯೂ ಯುದ್ಧವನ್ನು ಮಾಡಿದನು. ಚೈದ್ಯರಾಜನಿಂದ ಅನೇಕ ಬಾರಿ ನಿಂದೆಯನ್ನು ಹೊಂದಿದನು.

೫೫. ಅವನ ಮೊಮ್ಮಗನನ್ನು ಶತ್ರುಗಳು ಜಯಿಸಿದರು. ನಿನ್ನ ಕೃಷ್ಣನು ಪಾರಿಜಾತ ಮರವನ್ನು ತಂದುಕೊಟ್ಟು ಹೆಂಗಸರಲ್ಲಿ ಜಗಳವನ್ನು ತಂದುಹಾಕಿದುದಲ್ಲದೆ ಆ ಸಮನಾದ ಹೆಂಗಸರಲ್ಲಿ ಭೇದ ಬುದ್ಧಿಯನ್ನೂ ತೋರಿಸಿದನು.

೫೬. ಕೃಷ್ಣಭಕ್ತನು ಹೇಳಿದನು— ನಿನ್ನ ರಾಮಪುತ್ರನೂ ಕೂಡ ಮಿತ್ರನಾದ ಸುಗ್ರೀವ ಹನುಮ ಮುಂತಾದವರನ್ನು ಬಂಧಿಸಿರಲಿಲ್ಲವೆ ? ಅಲ್ಲದೆ ಅವನೂ ಕೂಡ ರಣದಲ್ಲಿ ಸೋಲಲಿಲ್ಲವೆ ? ಶಿವಭಕ್ತನಾದ ದಶಾಸ್ಯನೊಡನೆ ರಾಮನು ಯುದ್ಧವನ್ನು ಮಾಡಿದನು.

ದ್ವಿಜಹತ್ಯಾ ಕೃತಾ ಯೇನ ಮುನಿನಾ ನಿಂದಿತೋಽಪಿ ಯಃ ।
ತಥಾ ಮಿತ್ರಂ ಜಿತೋ ಯಸ್ಯ ಬಂಧುಜೇನ ವಿಭೀಷಣಃ ॥ ೫೭ ॥

ಪರಗೇಹಸ್ಥಿರೌ ಪತ್ನೀ ಪುನರ್ಯೇನಾಶ್ರಿತಾ ಸುಖಂ ।
ನೈಷ್ಠುರ್ಯಂ ಚ ಕೃತಂ ಪತ್ನ್ಯಾಂ ಸ್ತ್ರೀಣಾಂ ಕಾಮಾ ನ ಪೂರಿತಾಃ ॥ ೫೮ ॥

ಯಾನಾರೂಢಾ ಕೃತಾ ಯಾತ್ರಾ ವೇಶ್ಯಾಸ್ಪೃಷ್ಟಸ್ತಥಾ ರಹಃ ।
ಪತಿವ್ರತಾಯಾಂ ಸೀತಾಯಾಂ ದೋಷಾರೋಪಃ ಕೃತೋಽಪಿ ಚ ॥ ೫೯ ॥

ಪುತ್ರಂ ಹಂತುಂ ಕೃತಾ ಚಾಜ್ಞಾ ಶೂದ್ರಸಿಂಹವಧೌ ಕೃತೌ ।
ಪತ್ನೀಸಕ್ತಾಶ್ರಿತಾ ಯೇನ ಯಸ್ಯಾಜ್ಞಾ ಪಾಲಿತಾ ನೃಪೈಃ ॥ ೬೦ ॥

---

೫೭. ನಿನ್ನ ರಾಮನು ಬ್ರಹ್ಮಹತ್ಯವನ್ನೂ ಮಾಡಿದನು. ಅಂತೆಯೇ ಮುನಿಯಿಂದ ನಿಂದೆಯನ್ನೂ ಹೊಂದಿದನು. ಅಲ್ಲದೆ ಅವನ ತಮ್ಮನ ಮಗನು ಮಿತ್ರನಾದ ವಿಭೀಷಣನನ್ನು ಜಯಿಸಿದನು.

೫೮. ಅವನ ಹೆಂಡತಿಯು ಪರರ ಮನೆಯಲ್ಲಿದ್ದಳು. ಮತ್ತೆ ಅವಳನ್ನೇ ಕರೆದುಕೊಂಡು ಸುಖಿಸುತ್ತ ಸಂತೋಷದಿಂದಿದ್ದನು. ತನ್ನ ಹೆಂಡತಿಯಲ್ಲಿ ಬಹುವಾದ ನಿಷ್ಠೂರತನವನ್ನೂ ಎಂದರೆ ಕ್ರೂರತನವನ್ನು ತೋರ್ಪಡಿಸಿದನು. ಅಲ್ಲದೆ ಹೆಂಗಸರ ಅಪೇಕ್ಷೆಗಳನ್ನು ನೆರವೇರಿಸಿ ಪೂರ್ಣಮಾಡಲಿಲ್ಲ.

೫೯. ಯಾನದಮೇಲೆ ಕುಳಿತು ತೀರ್ಥಯಾತ್ರೆಯನ್ನು ಮಾಡಿದನು. ರಹಸ್ಯವಾಗಿ ಸೂಳೆಯೊಡನೆ ಮಾತನಾಡಿದನು. ಪತಿವ್ರತೆಯಾದ ಸೀತೆಯಮೇಲೆ ದೋಷಾರೋಪಣೆಯನ್ನು ಮಾಡಿದನು.

೬೦. ಮಗನನ್ನೇ ಕೊಲ್ಲುವಂತೆ ಅಪ್ಪಣೆಮಾಡಿದನು. ತನ್ನ ಆಜ್ಞೆಯನ್ನು ರಾಜರು ಪಾಲಿಸುತ್ತಿದ್ದರೂ ತನಗೆ ಅನುಕೂಲಳಾದ ಹೆಂಡತಿಯಿದ್ದರೂ ಶೂದ್ರನನ್ನೂ ಸಿಂಹವನ್ನು ವಧಿಸಿದನಲ್ಲವೇ !

॥ ಶ್ರೀರಾಮೋಪಾಸಕ ಉವಾಚ ॥

ಅಂತೇ ಕೃಷ್ಣಸ್ಯ ತೇ ಶಾಪಾದ್ವಂಶಚ್ಛೇದೋ ಹ್ಯಭೂತ್ ದ್ವಿಜ ।
ಅಬ್ಧಿನಾ ಲೋಪಿತಾ ಯಸ್ಯ ನಗರೀ ದ್ವಾರಿಕಾ ಶುಭಾ ॥ ೬೧ ॥

ಸ್ವಗೋತ್ರಸ್ಯ ವಧಸ್ತ್ವಂತೇ ಮದ್ಯಪಾನಾದಿ ಯುತ್ಕುಲೇ ।
ದರ್ಶನಂ ಪಾಂಡುಜಾಯಾಂತೇ ಯೇನ ಮಿತ್ರಾಯ ನಾರ್ಪಿತಂ ॥ ೬೨ ॥

ಸ್ವಸ್ಥಾನಂ ಗಮನಂ ಯೇನ ಕೃತಮೇಕಾಕಿನಾ ತಥಾ ।
ಸಕ್ಷತೋಽಪಿ ಕೃತಸ್ತ್ವಂತೇ ವ್ಯಾಧೇನಾಲ್ಪೇನ ಪತ್ರಿಣಾ ॥ ೬೩ ॥

॥ ಕೃಷ್ಣೋಪಾಸಕ ಉವಾಚ ॥

ತವ ರಾಮೇಣ ಸಮರಃ ಪುತ್ರೇಣಾಪಿ ಕೃತೋ ಮಹಾನ್ ।
ತಥಾ ಸೀತಾ ಮಯಾ ತ್ಯಕ್ತಾ ಚೇತಿ ಲೋಕಾನ್ ಪ್ರತಾರ್ಯ ಚ ॥ ೬೪ ॥

---

೬೧. ರಾಮಭಕ್ತನು ಹೇಳಿದನು—ಅಯ್ಯಾ ! ಕೊನೆಯಲ್ಲಿ ನಿನ್ನ ಕೃಷ್ಣನ ವಂಶವು ಶಾಪದಿಂದ ನಾಶವಾಯಿತು. ಅವನ ಪಟ್ಟಣವನ್ನು ಸಮುದ್ರವು ಒಳ ನುಗ್ಗಿ ಹಾಳುಮಾಡಿತು.

೬೨. ಕೊನೆಯಲ್ಲಿ ತನ್ನ ವಂಶವನ್ನು ತಾನೇ ಹಾಳುಮಾಡಿಕೊಂಡನು. ಅವನ ವಂಶದವರೆಲ್ಲಾ ಮದ್ಯಪಾನವನ್ನು ಮಾಡುತ್ತಿದ್ದರು. ತನ್ನ ಮಿತ್ರನಾದ ಪಾಂಡುಪುತ್ರನಿಗೆ ಕೊನೆಗಾಲದಲ್ಲಿ ದರ್ಶನವನ್ನು ಕೊಡದೆಹೋದನು.

೬೩. ತನ್ನ ಸ್ಥಾನವಾದ ವೈಕುಂಠಕ್ಕೆ ಕೊನೆಯಲ್ಲಿ ತಾನೊಬ್ಬನೇ ಹೋದನು. ಅಲ್ಪವಾದ ವ್ಯಾಧನ ಬಾಣದ ಏಟನ್ನು ಕೊನೆಯಲ್ಲಿ ತಿಂದು ಸತ್ತ ನಲ್ಲವೆ !

೬೪–೬೬. ಕೃಷ್ಣಭಕ್ತನು ಹೇಳಿದನು—ನಿನ್ನ ರಾಮನು ಮಗನೊಡನೆಯೂ ಘೋರವಾದ ಯುದ್ಧವನ್ನು ಮಾಡಿದನಲ್ಲವೆ ? ತಾನು ಸೀತೆಯನ್ನು ಬಿಟ್ಟನು ಎಂದು ತಿಳಿಯುವಂತೆ ಮಾಡಿ ಜನಗಳನ್ನು ವಂಚಿಸಿ ಅವಳನ್ನು

ವಾಲ್ಮೀಕೇರಾಶ್ರಮಂ ಗತ್ವಾ ದೃಷ್ಟ್ವಾ ಸೀತಾಸುತೌ ರಹಃ ।
ಪಿಣ್ಯಾಕೇನ ತಥೇಂಗುದ್ಯಾಃ ಪಿಂಡದಾನಾದಿಕಂ ಕೃತಂ ॥ ೬೫ ॥

ದಂಡಕೇ ತವ ರಾಮೇಣ ಸ್ವಪಿತ್ರೇ ಭ್ರಮತಾರ್ಪಿತಂ ।
ತಥೈರಾವಣಭುಕ್ತಾಯಾಃ ಸ್ಪೃಷ್ಟಸ್ಸ ಮಂಚಕಃ ಸ್ಥಲೇ ॥ ೬೬ ॥

ತಥಾಶ್ವತ್ಥಚ್ಛೇದನಾರ್ಥಂ ಮಹಾನ್ಯಜ್ಞಃ ಕೃತೋ ಮುಹುಃ ।
ಸ್ವಮಂತ್ರಿಣಶ್ಚ ಶೇಷಾಯುಃ ಪೂರ್ತ್ಯರ್ಥಂ ಸಂಗರೋಽಪಿ ಚ ॥ ೬೭ ॥

ಕಾರಿತೋ ಯಮರಾಜೇನ ಪೂರ್ವಜೇನ ಲವಾದಿಭಿಃ ।
ಪುಷ್ಪಾಸ್ವಾದನಮಾತ್ರಾದಿಪತ್ನ್ಯೈಶಿಕ್ಷಾ ತಥಾ ಕೃತಾ ॥ ೬೮ ॥

ಮಮ ಕೃಷ್ಣೇನ ಬಾಲತ್ವೇ ಲೀಲಯಾ ಪೂತನಾ ಹತಾ ।
ಹತಾಸ್ತೃಣಾಸುರಾದ್ಯಾಶ್ಚ ಧೃತೋಂಗುಲ್ಯಾ ಗಿರಿಸ್ತಥಾ ॥ ೬೯ ॥

ವಾಲ್ಮೀಕಿಯ ಆಶ್ರಮದಲ್ಲಿರುವಂತೆ ಏರ್ಪಡಿಸಿ ಅವಳ ಮಕ್ಕಳನ್ನು ಒಬ್ಬರಿಗೂ ತಿಳಿಯದಂತೆ ಹೋಗಿ ನೋಡಿದನು. ಹಿಂಡಿಯಿಂದಲೂ, ಇಂಗಳದ ಹಣ್ಣಿನಿಂದಲೂ, ಪಿತೃಗಳಿಗೆ ದಂಡಕಾರಣ್ಯದಲ್ಲಿ ಪಿಂಡವನ್ನು ಕೊಟ್ಟನು. ಐರಾವಣನು ಅನುಭವಿಸಿದವಳನ್ನು ಅವಳ ಮಂಚದಮೇಲೆ ಹೋಗಿ ಸ್ಪರ್ಶಮಾಡಿದನು.

೬೭-೬೮. ಕಡಿಯಬಾರದ ಅರಳಿಯಮರವನ್ನು ಕಡಿಯಲು ಅನೇಕಬಾರಿ ಯಜ್ಞಗಳನ್ನು ಮಾಡಿದನು. ಆಯಸ್ಸು ತೀರಿದ ತನ್ನ ಮಂತ್ರಿಯನ್ನು ಬದುಕಿಸಲು ಯಮನೊಡನೆ ಯುದ್ಧವನ್ನು ಮಾಡಿದನು. ತಾನು ಹೂವಿನ ವಾಸನೆಯನ್ನು ನೋಡುತ್ತಿರಬೇಕೆಂದು ಯೋಚಿಸಿ ತನ್ನ ತಮ್ಮನಿಂದ ಲವಾದಿಗಳ ಮೂಲಕ ಹೆಂಡತಿಯನ್ನು ಶಿಕ್ಷಿಸಿದನು.

೬೯. ನನ್ನ ಕೃಷ್ಣನಾದರೋ ಚಿಕ್ಕವನಾಗಿದ್ದಾಗಲೇ ಲೀಲೆಯಿಂದಲೇ ಪೂತನಿಯನ್ನು ಕೊಂದನು. ಬೆರಳಿನಲ್ಲಿ ಬೆಟ್ಟವನ್ನು ಎತ್ತಿಹಿಡಿದನು. ತೃಣಾಸುರನೇ ಮುಂತಾದವರನ್ನು ಕೊಂದನು.

॥ ರಾಮೋಪಾಸಕ ಉವಾಚ ॥

ಮಮ ರಾಮೇಣ ಬಾಲತ್ವೇ ಲೀಲಯಾ ತಾಟಿಕಾ ಹತಾ ।
ಮಾರೀಚಾದ್ಯಾ ಹತಾಶ್ಚಾಪಿ ಪರ್ವತಾಸ್ತಾರಿತಾ ಜಲೇ ॥ ೭೦ ॥

॥ ಕೃಷ್ಣೋಪಾಸಕ ಉವಾಚ ॥

ಮಮ ಕೃಷ್ಣಸ್ವರೂಪೇಣ ಗೋಪಿಕಾ ಮೋಹಿತಾ ವ್ರಜೇ ।
ಮೋಹಿತಾ ರಾಧಿಕಾ ಶ್ರೇಷ್ಠಾ ಮದನಸ್ಯಾಪಿ ಮೋಹಿನೀ ॥ ೭೧ ॥

॥ ರಾಮೋಪಾಸಕ ಉವಾಚ ॥

ಮಮ ರಾಮೇಣ ದೇವಾನಾಂ ಮೋಹಿತಾಃ ಸ್ತ್ರೀಯರೂಪತಃ ।
ದೇವಪತ್ನ್ಯೋ ರಹೋ ರಾತ್ರೌ ಮಾತೃತುಲ್ಯಾ ವಿಚಿಂತಿತಾಃ ॥ ೭೨ ॥

---

೭೦. ರಾಮಭಕ್ತನು ಹೇಳಿದನು—ನನ್ನ ರಾಮನು ಬಾಲ್ಯದಲ್ಲಿ ಲೀಲೆಯಿಂದಲೇ ತಾಟಕಿಯನ್ನು ಕೊಂದನು. ಸಮುದ್ರದ ನೀರಿನಲ್ಲಿ ಪರ್ವತಗಳು ತೇಲುವಂತೆಮಾಡಿ ನಿಲ್ಲಿಸಿರುವನು.

೭೧. ಕೃಷ್ಣಭಕ್ತನು ಹೇಳಿದನು—ನನ್ನ ಕೃಷ್ಣನು ಬಹು ಸುಂದರನಾಗಿದ್ದುದರಿಂದ ಗೋಪಿಕೆಯರು ತಾವಾಗಿಯೇ ಬಂದು ತನ್ನನ್ನು ಮೋಹಿಸುವಂತೆ ಮಾಡಿದನು. ಮನ್ಮಥನಿಗೂ ಮೋಹಕಳಾದ ರಾಧಿಕೆಯೂ ಕೂಡ ನನ್ನ ಕೃಷ್ಣನ ಅಂದ ಚೆಂದವನ್ನು ನೋಡಿ ಮೋಹಿಸಿದಳು.

೭೨. ರಾಮಭಕ್ತನು ಹೇಳಿದನು—ನನ್ನ ರಾಮನು ದೇವಪತ್ನಿಯರು ಕೂಡ ಮೋಹಿಸುವಂತಹ ಸುಂದರನು. ಅದಕ್ಕೋಸ್ಕರವೇ ಅವರು ರಾತ್ರಿಯಲ್ಲಿ ಒಬ್ಬರಿಗೂ ಕಾಣದಂತೆ ರಾಮನಲ್ಲಿಗೆ ಬಂದರು. ಆದರೂ ಅವರನ್ನು ರಾಮನು ತಾಯಿಯರಂತೆ ಕಂಡನು.

ಕೃತಾಃ ಕೃತಾರ್ಥಾಃ ಸ್ವವರಾದ್ಯತೋ ಜಾತಾಸ್ತು ಗೋಪಿಕಾಃ ।
ತಾಂಬೂಲೋಚ್ಛಿಷ್ಟಸ್ವರಸಂ ದಾಸೀ ರಾಮಸ್ಯ ಭಕ್ತಿತಃ ॥ ೭೩ ॥

ಪೀತಾ ತಸ್ಯೈವ ವರತೋ ವ್ರಜೇ ಸಾ ರಾಧಿಕಾ ಹ್ಯಭೂತ್ ।
ಅತೋ ಮೇ ರಾಘವೋ ಧನ್ಯೋ ಯಸ್ಯೈಕಾ ದಯಿತಾತ್ರ ಹಿ ॥ ೭೪ ॥

॥ ಕೃಷ್ಣೋಪಾಸಕ ಉವಾಚ ॥

ಮಮ ಕೃಷ್ಣೇನ ಪತ್ನ್ಯಶ್ಚ ಸಹಸ್ರಾಣಿ ಹಿ ಷೋಡಶ ।
ಸಾಷ್ಟೋತ್ತರಶತಾನ್ಯತ್ರೋದ್ವಾಹಿತಾಶ್ಚ ವಿಧಾನತಃ ॥ ೭೫ ॥

॥ ರಾಮೋಪಾಸಕ ಉವಾಚ ॥

ಮಮ ರಾಮಸ್ವರೂಪೇಣ ಸರ್ವಾಸ್ತಾ ಮೋಹಿತಾಃ ಸ್ತ್ರಿಯಃ ।
ಮಾತೃವನ್ಮೋಹಿತಾಸ್ತೇನ ವೀರೇಣ ಪುರುಷಾರ್ಥಿನಾ ॥ ೭೬ ॥

---

೭೩. ಆಗ ರಾಮನು ದೇವಪತ್ನಿಯರಿಗೆ ವರವನ್ನು ಕೊಟ್ಟು ಗೋಪಿಯರಾಗಿ ಹುಟ್ಟುವಂತೆ ಮಾಡಿದನು. ನನ್ನ ರಾಮನು ಹಾಕಿಕೊಂಡಿದ್ದ ತಾಂಬೂಲದ ರಸವನ್ನು ಒಬ್ಬದಾಸಿಯು ಭಕ್ತಿಯಿಂದ ಪಾನಮಾಡಿದಳು.

೭೪. ಅವಳು ಹಾಗೆ ಕುಡಿದುದರಿಂದ ಅವನ ವರದಿಂದ ಗೋಕುಲದಲ್ಲಿ ರಾಧಿಕೆಯಾಗಿ ಹುಟ್ಟಿದಳು. ನನ್ನ ರಾಮನು ಬಹುಜನ ಹೆಂಡಿರನ್ನು ಮಾಡಿಕೊಳ್ಳದೆ ಒಬ್ಬಳೇ ಹೆಂಡತಿಯನ್ನು ಹೊಂದಿ ಯೋಗ್ಯನಾಗಿರುವನು. ಆದ್ದರಿಂದ ಅವನೇ ಧನ್ಯನು.

೭೫. ಕೃಷ್ಣಭಕ್ತನು ಹೇಳಿದನು—ನನ್ನ ಕೃಷ್ಣನು ಹದಿನಾರುಸಾವಿರ ಜನ ಹೆಂಡತಿಯರನ್ನು ಮದುವೆಯಾದನು. ಇದರಲ್ಲಿ ನೂರೆಂಟು ಜನರನ್ನು ಶಾಸ್ತ್ರರೀತಿಯಿಂದಲೇ ಮದುವೆ ಮಾಡಿಕೊಂಡಿದ್ದನು.

೭೬. ರಾಮಭಕ್ತನು ಹೇಳಿದನು—ನನ್ನ ರಾಮನ ಸೌಂದರ್ಯವನ್ನು ನೋಡಿ ಎಲ್ಲಾ ಸ್ತ್ರೀಯರೂ ಮೋಹಿತರಾಗಿ ಬರುತ್ತಿದ್ದರು. ಆದರೆ ಆ ಸ್ವಾಮಿಯು ಶೂರನೂ, ಪುರುಷೋತ್ತಮನೂ ಆಗಿದ್ದನು. ಆತನು ಅವರೆಲ್ಲರೂ ಪರಸ್ತ್ರೀಯರೆಂದು ತಿಳಿದು ತಾಯಿಯರಂತೆ ತಿಳಿದುಕೊಂಡನು.

ಕೃಷ್ಣೇನ ರತಿಕಾಮೇನ ಮೋಹಿತಾ ಗೋಪಿಕಾ ಸ್ತ್ರಿಯಃ ।

॥ ಕೃಷ್ಣೋಪಾಸಕ ಉವಾಚ ॥

ಗಜೇಂದ್ರೋ ಮಮ ಕೃಷ್ಣೇನ ಲೀಲಯಾ ನಿಹತೋ ದ್ವಿಜ ॥ ೭೭ ॥

॥ ರಾಮೋಪಾಸಕ ಉವಾಚ ॥

ಮಮ ರಾಮೇಣ ನಾಗೇಂದ್ರರಿಪುರಷ್ಟಾಪದೋ ಹತಃ ।

॥ ಕೃಷ್ಣೋಪಾಸಕ ಉವಾಚ ॥

ಮಮ ಕೃಷ್ಣಪ್ರಸಾದೇನ ಯಮುನಾ ಖಂಡಿತಾ ತ್ವಭೂತ್ ॥ ೭೮ ॥

॥ ರಾಮೋಪಾಸಕ ಉವಾಚ ॥

ಮಮ ರಾಮಪ್ರತಾಪೇನ ಖಂಡಿತಾ ಜಾಹ್ನವೀ ತ್ವಭೂತ್ ।

॥ ಶ್ರೀಕೃಷ್ಣೋಪಾಸಕ ಉವಾಚ ॥

ಮಮ ಕೃಷ್ಣಸ್ಯ ವೈ ಸ್ವರ್ಗಾದಾನಿತೌ ಸುರಪಾದಪೌ ॥ ೭೯ ॥

---

೭೭. ನಿನ್ನ ಕೃಷ್ಣನಾದರೋ ಅತಿಕಾಮಿಯು. ಆದ್ದರಿಂದಲೇ ಗೋಪಿಕಾ ಸ್ತ್ರೀಯರನ್ನು ಮೋಹಿಸಿ ರಮಿಸಿದನು. ಕೃಷ್ಣಭಕ್ತನು ಹೇಳಿದನು—ನನ್ನ ಕೃಷ್ಣನು ಕುವಲಯಾಪೀಡವೆಂಬ ದೊಡ್ಡ ಆನೆಯನ್ನೇ ಲೀಲೆಯಿಂದ ಕೊಂದು ಹಾಕಿದನು. ಅಷ್ಟು ಶೂರನು.

೭೮. ರಾಮಭಕ್ತನು ಹೇಳಿದನು—ನನ್ನ ರಾಮನು ಆನೆಯನ್ನು ಕೊಲ್ಲುವುದಿರಲಿ. ಆನೆಗೆ ಶತ್ರುವಾದ ಎಂಟು ಕಾಲುಗಳುಳ್ಳ ಶರಭವನ್ನೇ ಕೊಂದನು. ಕೃಷ್ಣಭಕ್ತನು ಹೇಳಿದನು—ನನ್ನ ಕೃಷ್ಣನ ಶಕ್ತಿಯಿಂದ ಯಮುನೆಯು ಎರಡು ಭಾಗವಾಗಿ ಮಾಡಲ್ಪಟ್ಟಿತು.

೭೯. ರಾಮಭಕ್ತನು ಹೇಳಿದನು—ನನ್ನ ರಾಮನ ಪ್ರತಾಪದಿಂದ ಗಂಗೆಯು ಎರಡು ಭಾಗವಾಯಿತು. ಕೃಷ್ಣಭಕ್ತನು ಹೇಳಿದನು—ನನ್ನ ಕೃಷ್ಣನು ಪರಾಕ್ರಮದಿಂದ ಸ್ವರ್ಗದಿಂದ ಪಾರಿಜಾತ ವೃಕ್ಷವನ್ನು ತಂದನು.

॥ ರಾಮೋಪಾಸಕ ಉವಾಚ ॥

ಮಮ ರಾಮೇಣ ವೈ ಸ್ವರ್ಗಾದಾನೀತೌ ಸುರಪಾದಪೌ ।

॥ ಕೃಷ್ಣೋಪಾಸಕ ಉವಾಚ ॥

ಮಮ ಕೃಷ್ಣೇನ ಸ್ವಗುರೋರ್ಮಾತುಶ್ಚಾಪಿ ಸುತಾ ಹತಾಃ ॥ ೮೦ ॥

ಸುಜೀವಿತಾಸ್ಸಮಾನೀತಾಸ್ಸಪ್ತ ತಾಭ್ಯಾಂ ನಿವೇದಿತಾಃ ।

॥ ರಾಮೋಪಾಸಕ ಉವಾಚ ॥

ಮಮ ರಾಮೇಣ ಸಾಕೇತೇ ಸಪ್ತ ಮರ್ತ್ಯಾಸ್ಸುಜೀವಿತಾಃ ॥ ೮೧ ॥

॥ ಕೃಷ್ಣೋಪಾಸಕ ಉವಾಚ ॥

ಮಮ ಕೃಷ್ಣೇನ ಪೌರುಷ್ಯಾದ್ವಿಪ್ರಸ್ಯ ಜೀವಿತಾಸ್ಸುತಾಃ ।

॥ ರಾಮೋಪಾಸಕ ಉವಾಚ ॥

ಮಮ ರಾಮೇಣ ಸಚಿವಃ ಸುಮಂತ್ರೋ ಜೀವಿತಃ ಪುನಃ ॥ ೮೨ ॥

೮೦-೮೧. ರಾಮಭಕ್ತನು ಹೇಳಿದನು—ನನ್ನ ರಾಮನೂ ತನ್ನ ಸಾಮರ್ಥ್ಯದಿಂದ ಸ್ವರ್ಗದಿಂದ ಕಲ್ಪವೃಕ್ಷ ಪಾರಿಜಾತಗಳನ್ನು ತಂದನು. ಕೃಷ್ಣಭಕ್ತನು ಹೇಳಿದನು—ನನ್ನ ಕೃಷ್ಣನು ತನ್ನ ಗುರುವಾದ ಸಾಂದೀಪಿನಿಯು ಸತ್ತುಹೋಗಿದ್ದ ತನ್ನ ಮಗನನ್ನು ತಂದು ಕೊಡಬೇಕೆಂದು ಕೇಳಿಕೊಳ್ಳಲು ಅವನನ್ನು ತಂದು ಬದುಕಿಸಿಕೊಟ್ಟನು. ಅಲ್ಲದೆ ತನ್ನ ತಾಯಿಯು ತಾನು ಹೆತ್ತಾಗ ಕಂಸನು ಕೊಂದಿದ್ದ ಮಕ್ಕಳನ್ನೂ ತಂದುಕೊಡಬೇಕೆಂದು ಕೇಳಲು ಅವರನ್ನು ಬದುಕಿಸಿ ತಂದುಕೊಟ್ಟನು. ರಾಮಭಕ್ತನು ಹೇಳಿದನು—ನನ್ನ ರಾಮನು ಅಯೋಧ್ಯೆಯಲ್ಲಿ ಏಳುಜನ ಮನುಷ್ಯರನ್ನು ಬದುಕಿಸಿದನು.

೮೨. ಕೃಷ್ಣಭಕ್ತನು ಹೇಳಿದನು—ನನ್ನ ಕೃಷ್ಣನು ತನ್ನ ಪೌರುಷದಿಂದ ಬ್ರಾಹ್ಮಣನ ಮಕ್ಕಳನ್ನು ಬದುಕಿಸಿದನು. ರಾಮಭಕ್ತನು ಹೇಳಿದನು—ನನ್ನ ರಾಮನು ತನ್ನ ಪೌರುಷದಿಂದ ತನ್ನ ಮಂತ್ರಿಯಾದ ಸುಮಂತ್ರನನ್ನು ಬದುಕಿಸಿದನು.

॥ ಕೃಷ್ಣೋಪಾಸಕ ಉವಾಚ ॥

ಮಮ ಕೃಷ್ಣೇನ ದ್ರೌಪದ್ಯಾ ಸಂಧಿತಂ ಹಿ ಫಲಂ ತರೌ ।

॥ ರಾಮೋಪಾಸಕ ಉವಾಚ ॥

ಮಮ ರಾಮೇಣ ವೈದೇಹ್ಯಾ ಸಂಧಿತಂ ತುಲಸೀದಳಂ ॥ ೮೩ ॥

॥ ಕೃಷ್ಣೋಪಾಸಕ ಉವಾಚ ॥

ಮಮ ಕೃಷ್ಣಪ್ರತಾಪಶ್ಚ ಜನಾನ್ಸಂದರ್ಶಿತಃ ಪುರಾ ।
ದೂರ್ವಾಸಸಾನ್ನಯಾಚ್ಞಾ ಗೋಪಿಕಾನಾಂ ಕೃತಾ ವ್ರಜೇ ॥ ೮೪ ॥

॥ ರಾಮೋಪಾಸಕ ಉವಾಚ ॥

ಮಮ ರಾಮಪ್ರತಾಪಶ್ಚ ಜನಾನ್ಸಂದರ್ಶಿತಃ ಪುರಾ ।
ದುರ್ವಾಸಸಾನ್ನಯಾಚ್ಞಾ ಕೃತಾ ರಾಮಸ್ಯ ತತ್ಪುರಿ ॥ ೮೫ ॥

---

೮೩. ಕೃಷ್ಣಭಕ್ತನು ಹೇಳಿದನು—ನನ್ನ ಕೃಷ್ಣನು ಭೀಮನು ಕೊಯ್ದಿದ್ದ ನೇರಳೆ ಹಣ್ಣನ್ನು ಮರದಲ್ಲಿ ತನ್ನ ಸ್ಥಾನದಲ್ಲಿ ಸೇರುವಂತೆ ದ್ರೌಪದಿಯ ಕೈಯ್ಯಿಂದ ಮಾಡಿಸಿದನು. ರಾಮಭಕ್ತನು ಹೇಳಿದನು—ನನ್ನ ರಾಮನು ವೈದೇಹಿಯ ಕೈಯ್ಯಿಂದ ಅವಳು ಕುಯ್ದಿದ್ದ ತುಳಸಿಯ ದಳವನ್ನು ಅದರಲ್ಲಿ ಸೇರುವಂತೆ ಮಾಡಿದನು.

೮೪. ಕೃಷ್ಣಭಕ್ತನು ಹೇಳಿದನು—ದೂರ್ವಾಸ ಋಷಿಯು ಗೋಕುಲದಲ್ಲಿ ಗೋಪಿಯರೆದುರಿಗೆ ಅನ್ನವನ್ನು ಯಾಚಿಸಿದಾಗ ನನ್ನ ಕೃಷ್ಣನು ತನ್ನ ಪ್ರತಾಪವನ್ನು ಅವನಿಗೆ ಅನ್ನವನ್ನು ಹಾಕುವುದರಿಂದ ಜನಗಳಿಗೆಲ್ಲಾ ತೋರಿಸಿದನು.

೮೫. ರಾಮಭಕ್ತನು ಹೇಳಿದನು--ನನ್ನ ರಾಮನೂ ಕೂಡ ದೂರ್ವಾಸನು ಅಯೋಧ್ಯೆಗೆ ಬಂದು ಅನ್ನವನ್ನು ಯಾಚಿಸಿದಾಗ ಎಲ್ಲರಿಗೂ ತನ್ನ ಪ್ರತಾಪವನ್ನು ತೋರಿಸಿ ಅವನಿಗೆ ಅನ್ನವನ್ನು ಹಾಕಿದನು.

॥ ಕೃಷ್ಣೋಪಾಸಕ ಉವಾಚ ॥

ಮಮ ಕೃಷ್ಣೇನ ರೂಪಾಣಿ ಬಹೂನ್ಯತ್ರ ಕೃತಾನಿ ಹಿ ।

॥ ರಾಮೋಪಾಸಕ ಉವಾಚ ॥

ಬಹೂನಿ ರಾಘವೇಣಾಪಿ ಸ್ವರೂಪಾಣಿ ಕೃತಾನಿ ಹಿ ॥ ೮೬ ॥

॥ ಕೃಷ್ಣೋಪಾಸಕ ಉವಾಚ ॥

ಮಮ ಕೃಷ್ಣೇನ ಮಿತ್ರಾಯ ದತ್ತಾ ಸ್ವರ್ಣಮಯಂ ಪುರಂ ।

॥ ರಾಮೋಪಾಸಕ ಉವಾಚ ॥

ಮಮ ರಾಮೇಣ ಮಿತ್ರಾಯ ದತ್ತಾ ಸ್ವರ್ಣಮಯೀ ಪುರೀ ॥ ೮೭ ॥

॥ ಕೃಷ್ಣೋಪಾಸಕ ಉವಾಚ ॥

ಸೂರ್ಯಗ್ರಹೇ ಕುರುಕ್ಷೇತ್ರೇ ಸ್ನಾನಂ ಕೃಷ್ಣೇನ ಮೇ ಕೃತಂ ।

॥ ರಾಮೋಪಾಸಕ ಉವಾಚ ॥

ಸೂರ್ಯಗ್ರಹೇ ಕುರುಕ್ಷೇತ್ರೇ ರಾಮೇಣಾಪ್ಯವಗಾಹಿತಂ ॥ ೮೮ ॥

---

೮೬. ಕೃಷ್ಣಭಕ್ತನು ಹೇಳಿದನು—ನನ್ನ ಕೃಷ್ಣನು ಪೂರ್ವದಲ್ಲಿ ಅನೇಕ ರೂಪಗಳನ್ನು ತಾಳಿದ್ದನು. ರಾಮಭಕ್ತನು ಹೇಳಿದನು—ನನ್ನ ರಾಮನೂ ಕೂಡ ಅನೇಕವಾದ ರೂಪಗಳನ್ನು ತಾಳಿದ್ದನು.

೮೭. ಕೃಷ್ಣಭಕ್ತನು ಹೇಳಿದನು—ನನ್ನ ಕೃಷ್ಣನು ಮಿತ್ರನಿಗೆ ಚಿನ್ನದಿಂದ ಸಮೃದ್ಧವಾದ ಪಟ್ಟಣವನ್ನೇ ಕೊಟ್ಟನು ರಾಮಭಕ್ತನು ಹೇಳಿದನು—ನನ್ನ ರಾಮನೂ ಕೂಡ ತನ್ನ ಸ್ನೇಹಿತನಿಗೆ ಚಿನ್ನದಿಂದ ಕೂಡಿದ ಪಟ್ಟಣವನ್ನೇ ಕೊಟ್ಟನು.

೮೮. ಕೃಷ್ಣಭಕ್ತನು ಹೇಳಿದನು—ನನ್ನ ಕೃಷ್ಣನು ಸೂರ್ಯಗ್ರಹಣದಲ್ಲಿ ಕುರುಕ್ಷೇತ್ರದಲ್ಲಿ ಸ್ನಾನಮಾಡಿದನು. ರಾಮಭಕ್ತನು ಹೇಳಿದನು—ನನ್ನ ರಾಮನೂ ಕೂಡ ಸೂರ್ಯಗ್ರಹಣದಲ್ಲಿ ಕುರುಕ್ಷೇತ್ರದಲ್ಲಿ ಸ್ನಾನವನ್ನು ಮಾಡಿದನು.

ಮೇ ರಾಮಸ್ಯ ವಚಶ್ಚೈಕಂ ಸತ್ಯಮೇವ ಚ ನಾನ್ಯಥಾ ।
ತೇ ಕೃಷ್ಣಸ್ಯ ಹ್ಯನೇಕಾನಿ ವಚನಾನ್ಯನೃತಾನಿ ಹಿ ॥ ೮೯ ॥

ರಾಮಸ್ಯ ಮೇ ಶರಸ್ತ್ವೇಕಶ್ಶತ್ರುನಿರ್ದಾಲನಕ್ಷಮಃ ।
ವಿಫಲಾಸ್ತವ ಕೃಷ್ಣಸ್ಯ ಬಹವೋಽರಿಷು ಮಾರ್ಗಣಾಃ ॥ ೯೦ ॥

ಏಕಾ ಸ್ತ್ರೀ ಮಮ ರಾಮಸ್ಯ ತೇ ಕೃಷ್ಣಸ್ಯ ಬಹುಸ್ತ್ರಿಯಃ ।
ಪತ್ನ್ಯಾಶ್ಶಯ್ಯಾಂ ವಿನಾ ನಾನ್ಯಾ ಶಯ್ಯಾ ರಾಮಸ್ಯ ವೈ ಮಮ ॥ ೯೧ ॥

ಸ್ತ್ರೀಣಾಂ ಶಯ್ಯಾಂ ವಿನಾ ಶಯ್ಯಾಃ ಕೃಷ್ಣಸ್ಯ ಬಹವಸ್ತವ ।
ರಾಮಸ್ಥಿತಿರ್ಮಧ್ಯದೇಶೇ ಸಾಕೇತೇ ಸರಯೂತಟೇ ॥ ೯೨ ॥

---

೮೯. ನನ್ನ ರಾಮನ ಒಂದೊಂದು ಮಾತೂ ಕೂಡ ಸತ್ಯವಾದುವುಗಳೇ. ನಿನ್ನ ಕೃಷ್ಣನ ಮಾತುಗಳಲ್ಲಿ ಅನೇಕವು ಸುಳ್ಳಾದುವುಗಳೇ ಇರುವುವು.

೯೦. ನನ್ನ ರಾಮನ ಒಂದೊಂದು ಬಾಣವೂ ಶತ್ರುವನ್ನು ಕೊಲ್ಲುವುದರಲ್ಲಿಯೇ ಸಮರ್ಥವಾಗಿದೆ. ನಿನ್ನ ಕೃಷ್ಣನ ಅನೇಕ ಬಾಣಗಳು ಶತ್ರುವನ್ನು ಕೊಲ್ಲದೆ ವಿಫಲವಾಗಿವೆ.

೯೧. ನನ್ನ ರಾಮನಿಗೆ ಒಬ್ಬಳೇ ಹೆಂಡತಿಯು. ಇವನು ಏಕಪತ್ನೀ ವ್ರತಸ್ಥನು. ನಿನ್ನ ಕೃಷ್ಣನಿಗೆ ಅನೇಕಜನ ಹೆಂಡತಿಯರಿರುವರು. ನನ್ನ ರಾಮನು ಹೆಂಡತಿಯ ಹಾಸಿಗೆ ಒಂದನ್ನು ಹೊರತಾಗಿ ಬೇರೆ ಹಾಸಿಗೆಯನ್ನೇ ಹೊಂದಿರಲಿಲ್ಲ.

೯೨. ನಿನ್ನ ಕೃಷ್ಣನಿಗಾದರೋ ಅವನ ಹೆಂಡತಿಯರ ಹಾಸಿಗೆಯಲ್ಲದೆ, ಬೇರೆಯಾದ ಅನೇಕ ಹಾಸಿಗೆಗಳಿವೆ. ನನ್ನ ರಾಮನು ದೇಶದ ಮಧ್ಯದಲ್ಲಿದ್ದುಕೊಂಡು ಸರಯೂ ನದಿಯ ದಡದಲ್ಲಿರುತ್ತಿದ್ದನು.

ಅಬ್ಧೇಸ್ತಟೇ ಪಶ್ಚಿಮಾಂತೇ ಸ್ಥಿತಿಃ ಕೃಷ್ಣಸ್ಯ ವೈ ತವ ।
ಬಂಧುತ್ರಯಂ ಮೇ ರಾಮಸ್ಯ ಕೃಷ್ಣಸ್ಯೈಕೋಗ್ರಜಸ್ತವ ॥ ೯೩ ॥

ಗೌರ್ಮಣೀ ಪುಷ್ಪಕಂ ವೃಕ್ಷೌ ಕಟಕೇ ಮುನಿನಾರ್ಪಿತೇ ।
ಐರಾವತಕುಲೋದ್ಭೂತಶ್ಚತುರ್ದಂತೋ ಗಜೋಪಿ ಚ ॥ ೯೪ ॥

ಏತಾನಿ ಮಮ ರಾಮಸ್ಯ ನವರತ್ನಾನಿ ಸಂತಿ ಹಿ ।
ಮಣಿದ್ವಯಂ ಪಾರಿಜಾತಸ್ತ್ವಿತಿ ರತ್ನತ್ರಯಂ ತವ ॥ ೯೫ ॥

ಕೃಷ್ಣಸ್ಯ ಸಂತಿ ಭೋ ವಿಪ್ರ ತ್ವಂ ತಂ ಸ್ತೌಷಿ ಕಥಂ ವೃಥಾ ।
ಸಪ್ತದ್ವೀಪೇಶ್ವರೋ ರಾಮೋ ಮಮ ಪೃಥ್ವೀಶವಂದಿತಃ ॥ ೯೬ ॥

---

೯೩. ನಿನ್ನ ಕೃಷ್ಣನಾದರೋ ಪಶ್ಚಿಮದಿಕ್ಕಿನ ಕೊನೆಯಲ್ಲಿ ಸಮುದ್ರದ ದಡದಲ್ಲಿದ್ದನು. ನನ್ನ ರಾಮನಿಗೆ ಮೂರುಜನ ತಮ್ಮಂದಿರು ಇದ್ದರು. ಅವರಲ್ಲಿ ತಾನೇ ಹಿರಿಯವನು. ನಿನ್ನ ಕೃಷ್ಣನಿಗಾದರೋ ಒಬ್ಬನೇ ಅಣ್ಣನು. ಆದರಲ್ಲಿಯೂ ತಾನು ಹಿರಿಯವನಲ್ಲ. ಕಿರಿಯವನು.

೯೪-೯೫. ಕಾಮಧೇನು, ಚಿಂತಾಮಣಿ, ಕೌಸ್ತುಭಮಣಿ, ಪುಷ್ಪಕ ವಿಮಾನ, ಪಾರಿಜಾತ ವೃಕ್ಷ, ಕಲ್ಪವೃಕ್ಷ, ಮುನೀಂದ್ರನು ಕೊಟ್ಟ ಎರಡು ಕೈ ಬಳೆಗಳು ಐರಾವತವೆಂಬ ಆನೆಯ ವಂಶದಲ್ಲಿ ಹುಟ್ಟಿದ ನಾಲ್ಕು ದಂತಗಳುಳ್ಳ ಆನೆ, ಈರೀತಿಯಾಗಿ ನನ್ನ ರಾಮನಿಗೆ ನವರತ್ನಗಳಿದ್ದುವು. ಪಾರಿಜಾತವೃಕ್ಷ, ಸ್ಯಮಂತಕಮಣಿ, ಕೌಸ್ತುಭಮಣಿ ಎಂಬ ಮೂರೇ ರತ್ನಗಳು ನಿನ್ನ ಕೃಷ್ಣ ನಿಗಿದ್ದುವು.

೯೬. ಈರೀತಿಯಾದ ವ್ಯತ್ಯಾಸಗಳು ನಿನ್ನ ಕೃಷ್ಣನಿಗೂ ನನ್ನ ರಾಮನಿಗೂ ಇರುವಾಗ ಕೃಷ್ಣನನ್ನು ಹೆಚ್ಚೆಂದು ಯಾತಕ್ಕೆ ಹೊಗಳುತ್ತೀಯೆ ? ಅಲ್ಲದೆ ನನ್ನ ರಾಮನು ಸಪ್ತದ್ವೀಪಗಳಿಗೂ ಅಧಿಪತಿಯಾಗಿ ಅಲ್ಲಿನ ರಾಜರಿಂದ ನಮಸ್ಕರಿಸಿ ಕೊಳ್ಳುತ್ತಿದ್ದನು.

ಈಶತ್ವಂ ಜಗದೀಶತ್ವಂ ಸಮಮೇವ ದ್ವಯಂ ಸ್ಮೃತಂ ।
ಅತೋ ನ ಮಮ ರಾಮೇಣ ತುಲ್ಯಂ ಕೃಷ್ಣಂ ವಿಚಿಂತಯ ॥ ೯೭ ॥

ಯಸ್ಯ ಚಾಪಂ ಹಿ ಕೋದಂಡಂ ಯಸ್ಯಾಕ್ಷಯ್ಯಾಃ ಪತತ್ರಿಣಃ ।
ವಿಪ್ರೇಷ್ಟಪೂರಣಂ ಯಸ್ಯ ವ್ರತಂ ನಿತ್ಯಂ ದ್ವಿಜೋತ್ತಮ ॥ ೯೮ ॥

ಯಸ್ಯ ಸಿಂಹಾಸನಂ ಛತ್ರಂ ವ್ಯಜನಂ ಚಾಮರದ್ವಯಂ ।
ಯಸ್ಯ ಯಾನಂ ಪುಷ್ಪಕಂ ತದ್ಯತ್ಪುತ್ರೌ ತೌ ಪಿತುಸ್ಸಮೌ ॥ ೯೯ ॥

ಅದ್ಯಾಪಿ ಪಾಲ್ಯತೇ ಯಸ್ಯ ದತ್ತಂ ದಾನಂ ದ್ವಿಜೋತ್ತಮೈಃ ।
ರಾಮನಾಥಪುರಸ್ಯೈವ ರಾಜ್ಯಂ ರಾಮಸ್ಯ ಮೇ ನೃಪೈಃ ॥ ೧೦೦ ॥

---

೯೭. ಈಶನಾಗಿರುವಿಕೆಯೂ, ಜಗದೀಶನಾಗಿರುವಿಕೆಯೂ ಎರಡೂ ಒಂದೇ ಎಂದು ತಿಳಿದವರು ಹೇಳುತ್ತಾರೆ. ಆದ್ದರಿಂದ ನೀನು ನಿನ್ನ ಕೃಷ್ಣನು ಚಕ್ರವರ್ತಿಯಾದ ನನ್ನ ರಾಮನೊಡನೆ ಸಮನೆಂದು ತಿಳಿಯಬೇಡ.

೯೮. ನನ್ನ ರಾಮನಿಗೆ ಹರಿಹರರ ಕೋದಂಡವೇ ಧನುಸ್ಸು. ಬತ್ತಳಿಕೆಗಳಾದರೋ ಅಕ್ಷಯವಾದ ಬಾಣಗಳುಳ್ಳವು. ಬ್ರಾಹ್ಮಣರ ಇಷ್ಟವನ್ನು ಪೂರ್ತಿ ಮಾಡುವುದೇ ಅವನ ನಿತ್ಯವ್ರತವು.

೯೯. ನನ್ನ ರಾಮನಿಗೆ ಮಹಾರಾಜನ ಚಿಹ್ನೆಗಳುಳ್ಳ ಸಿಂಹಾಸನ, ಛತ್ರ, ಚಾಮರ, ವ್ಯಜನ ಇವುಗಳಿರುವುವು. ನಿನ್ನ ಕೃಷ್ಣನಿಗೆ ಅವುಗಳಿಲ್ಲ. ನನ್ನ ರಾಮನು ಉತ್ತಮವಾದ ಪುಷ್ಪಕ ವಿಮಾನದಲ್ಲಿಯೇ ಸಂಚರಿಸುವನು. ಮಕ್ಕಳೂ ಕೂಡ ಪರಾಕ್ರಮದಲ್ಲಿ ತಂದೆಗೆ ಸಮಾನರು.

೧೦೦. ನನ್ನ ರಾಮನು ಬ್ರಾಹ್ಮಣರಿಗೆ ಕೊಟ್ಟ ದಾನವನ್ನು ಅವರು ಈಗಲೂ ಕೂಡ ಅನುಭವಿಸುತ್ತಿರುವರು. ಅಂತೆಯೇ ನನ್ನ ರಾಮನು ದಾನ ಮಾಡಿರುವ ರಾಮನಾಥಪುರದ ರಾಜ್ಯವನ್ನು ರಾಜರೂ ಕಾಪಾಡುತ್ತಾ ಬಂದಿದ್ದಾರೆ.

ತವ ಕೃಷ್ಣೇನ ಕಿಂ ದತ್ತಂ ವದ ಯದ್ವರ್ತತೇಽಧುನಾ ।
ಕರೋತ್ಯಹರ್ನಿಶಂ ಶಂಭುಶ್ಚಾಪಿ ಮೇ ರಾಮಚಿಂತನಂ ॥ ೧೦೧ ॥

ತಾರಕಂ ಮೇ ರಾಮನಾಮ ಕಾಶ್ಯಾಂ ಶಂಭುರ್ಜನಾನ್ಸದಾ ।
ಮೃತ್ಯೋನ್ಮುಖಾಂಸ್ತಾರಣಾರ್ಥಂ ದ್ವಿಜೋಪದಿಶತಿ ಸ್ವಯಂ ॥ ೧೦೨ ॥

ಅತ ಏವ ಜನಾಶ್ಚಾಪಿ ಸರ್ವತ್ರ ಮರಣೋನ್ಮುಖಾ‌ನ್ ।
ಸ್ವೀಯಾನ್ಮುಹುಶ್ಶಿಕ್ಷಯಂತಿ ಧ್ಯೇಯೋ ರಾಮೋಽಧುನಾತ್ವಿತಿ ॥ ೧೦೩ ॥

ತಥಾ ಪ್ರಾಣಿವಿಮೋಕ್ಷಾರ್ಥಂ ಸದಾ ತಚ್ಛವವಾಹಕೈಃ ।
ರಾಮರಾಮೇತಿ ರಾಮೇತಿ ನಾಮ ಭೂವ್ಯಾಮುದೀರ್ಯತೇ ॥ ೧೦೪ ॥

ಯನ್ನಾಮಮಹಿಮಾ ಚೇದೃಕ್ಕಿಂ ತಂ ಸ್ತೌಮ್ಯಧುನಾ ಮುಹುಃ ।
ವಾಲ್ಮೀಕಿನಾಪ್ಯತ ಏವ ಪೂರ್ವಂ ತಚ್ಚರಿತಂ ಕೃತಂ ॥ ೧೦೫ ॥

---

೧೦೧. ನಿನ್ನ ಕೃಷ್ಣನು ಯಾವ ದಾನವನ್ನು ಮಾಡಿರುವನು ಹೇಳು? ಅದು ಈಗ ಯಾವುದಿದೆ? ಹಗಲು ರಾತ್ರಿಯಲ್ಲಿಯೂ ಕೂಡ ಶಂಭುವು ನನ್ನ ರಾಮನನ್ನೇ ಚಿಂತಿಸುತ್ತಿರುವನು.

೧೦೨. ನನ್ನ ರಾಮನಾಮವು ತಾರಕ ಮಂತ್ರವಾಗಿರುವುದು. ಜನಗಳನ್ನು ಪಾಪದಿಂದ ಉದ್ಧರಿಸಿ ಮೋಕ್ಷವನ್ನು ಹೊಂದಿಸುತ್ತದೆ. ಶಂಭುವು ಕಾಶಿಯಲ್ಲಿದ್ದುಕೊಂಡು ಮರಣೋನ್ಮುಖರಾದವರಿಗೆ ಆ ತಾರಕಮಂತ್ರವನ್ನು ಉಪದೇಶಿಸುತ್ತಲಿರುವನು.

೧೦೩–೧೦೪. ಆದ್ದರಿಂದಲೇ ಜನರು ಎಲ್ಲಾ ಕಡೆಯಲ್ಲಿಯೂ ಮರಣಕಾಲದಲ್ಲಿ ರಾಮಧ್ಯಾನವನ್ನು ಮಾಡಿ ಎಂದು ಉಪದೇಶಿಸುತ್ತಿರುವರು. ಸತ್ತ ಪ್ರಾಣಿಗಳಿಗೆ ಸ್ವರ್ಗವು ಬರಲೆಂದು ಆ ಶವವನ್ನು ಹೊತ್ತಿರುವವರೂ ಕೂಡ ರಾಮ ರಾಮ ರಾಮ ಎಂದು ಹೇಳುತ್ತ ಹೋಗುತ್ತಿರುವರು.

೧೦೫. ನನ್ನ ರಾಮನಾಮ ಮಹಿಮೆಯೇ ಹೀಗಿರುತ್ತಿರಲು ಅವನನ್ನು ನಾನು ಎಷ್ಟೆಂದು ಹೊಗಳಲಿ? ಆದ್ದರಿಂದಲೇ ವಾಲ್ಮೀಕಿಯು ಪೂರ್ವದಲ್ಲಿ ಆ ರಾಮನ ಚರಿತ್ರೆಯನ್ನೇ ರಚಿಸಿದನು.

ಶತಕೋಟಿಮಿತಂ ಶ್ರೇಷ್ಠಂ ಯಸ್ಮಿನ್ ರಾಮಾಯಣೇ ದ್ವಿಜ ।
ಕೃಷ್ಣಾದೀನಾಂ ಚರಿತ್ರಾಣಿ ಸಂತಿ ಹ್ಯಂತರ್ಗತಾನಿ ಹಿ ॥ ೧೦೬ ॥

॥ ಶ್ರೀರಾಮದಾಸ ಉವಾಚ ॥

ಏವಂ ತಯೋರ್ವಿವದತೋರ್ದ್ವಿಜಯೋಶ್ಚ ಪರಸ್ಪರಂ ।
ಬಭೂವಾಕಾಶಜಾ ವಾಣೀ ತಾಂ ತೌ ಸರ್ವೇ ಚ ಶುಶ್ರುವುಃ ॥ ೧೦೭ ॥

ರಾಮಸ್ಯಾಗ್ರೇ ಸ್ತುತಿಃ ಕೇಷಾಮಪಿ ಕರ್ತುಂ ಘಟೇತ ನ ।
ಇತಿ ತಾಂ ಖೇಚರೀಂ ವಾಣೀಂ ಶ್ರುತ್ವಾ ಸರ್ವೇ ಸಭಾಸದಃ ॥ ೧೦೮ ॥

ಚಕ್ರುರ್ಜಯಸ್ವನಾನ್ ಹಸ್ತೈರ್ವಾದಯಂತಿ ಸ್ಮ ತಾಲಿಕಾಃ ।
ತಂ ರಾಮೋಪಾಸಕಂ ಸರ್ವೇ ವವರ್ಷುಃ ಪುಷ್ಪವೃಷ್ಟಿಭಿಃ ॥ ೧೦೯ ॥

---

೧೦೬. ಆ ರಾಮಾಯಣವೋ ನೂರುಕೋಟಿ ಗ್ರಂಥಗಳಿಂದ ಕೂಡಿದೆ. ಅದರಲ್ಲಿಯೇ ನಿನ್ನ ಕೃಷ್ಣನ ಚರಿತ್ರೆಯೂ ಸೇರಿಹೋಗಿದೆ.

೧೦೭. ರಾಮದಾಸನು ಹೇಳಿದನು—ಅವರಿಬ್ಬರೂ ಈರೀತಿಯಾಗಿ ವಾದ ಮಾಡುತ್ತಿರಲು ಆವರಿಗೂ ಅಲ್ಲಿರುವವರಿಗೂ ಕೇಳಿಸುವಂತೆ ಆಕಾಶವಾಣಿಯು ನುಡಿಯಿತು. ಅದನ್ನು ಎಲ್ಲರೂ ಕೇಳಿದರು.

೧೦೮. ರಾಮನ ಸ್ತುತಿಯನ್ನು ಮಾಡಲು ಯಾರಿಗೂ ಸಾಧ್ಯವೇ ಇಲ್ಲ. ಎಂಬುದಾಗಿ ಹೇಳಿದ ಆ ಆಕಾಶವಾಣಿಯನ್ನು ಎಲ್ಲರೂ ಕೇಳಿದರು.

೧೦೯. ಆಗ ಎಲ್ಲರೂ ಜಯ ಜಯ ಎಂದು ಕೂಗುತ್ತ ಚಪ್ಪಾಳೆಯನ್ನು ತಟ್ಟಿದರು. ಅನಂತರ ಆ ರಾಮಭಕ್ತನ ಮೇಲೆ ಎಲ್ಲರೂ ಪುಷ್ಪವೃಷ್ಟಿಯನ್ನು ಸುರಿಸಿದರು.

ನಿರ್ಜರಾ ಅಪಿ ತೇ ಸರ್ವೇ ವಿಮಾನಸ್ಥಾ ಮುದಾನ್ವಿತಾಃ |
ತದಾ ಕೃಷ್ಣೋಪಾಸಕಸ್ಸ ಲಜ್ಜಯಾನತಮಸ್ತಕಃ || ೧೧೦ ||

ತಂ ರಾಮೋಪಾಸಕಂ ನತ್ವಾ ಪ್ರಾರ್ಥಯಾಮಾಸ ವೈ ಮುಹುಃ |
ತದಾ ರಾಮೋಪಾಸಕೋಽಪಿ ತಂ ನತ್ವಾಲಿಂಗ್ಯ ವೈ ದೃಢಂ |
ಉವಾಚ ಮಧುರಂ ವಾಕ್ಯಂ ಶ್ರುಣು ಕೃಷ್ಣದ್ವಿಜೋತ್ತಮ || ೧೧೧ ||

ನ ನಂದ ಸೂನೋಃ ಪೃಥಗಸ್ತಿ ರಾಮೋ
ನ ರಾಮತೋಽನ್ಯೋ ವಸುದೇವಸೂನುಃ |
ತಥಾಪ್ಯಯೋಧ್ಯಾಪುರ ಪಾಲಬಾಲೇ
ಸಲಕ್ಷ್ಮಣೇ ಧಾವತಿ ಮೇ ಮನೀಷಾ || ೧೧೨ ||

---

೧೧೦. ದೇವತೆಗಳೂ ಕೂಡ ವಿಮಾನದಲ್ಲಿ ಕುಳಿತು ಇದೆಲ್ಲವನ್ನೂ ಕೇಳುತ್ತ ಸಂತೋಷಗೊಂಡರು. ಮತ್ತು ಅವರೂ ಆ ರಾಮಭಕ್ತನ ಮೇಲೆ ಹೂ ಮಳೆಯನ್ನು ಕರೆದರು.

೧೧೧. ಆಗ ಕೃಷ್ಣಭಕ್ತನು ಲಜ್ಜೆಯಿಂದ ತಲೆಯನ್ನು ತಗ್ಗಿಸಿಕೊಂಡನು. ಅನಂತರ ಆ ರಾಮಭಕ್ತನನ್ನು ನಮಸ್ಕರಿಸಿ ಅನೇಕಸಲ ಪ್ರಾರ್ಥಿಸಿದನು. ರಾಮ ಭಕ್ತನೂ ಕೂಡ ಆ ಕೃಷ್ಣಭಕ್ತನಿಗೆ ನಮಸ್ಕರಿಸಿ ದೃಢವಾಗಿ ಆಲಂಗಿಸಿಕೊಂಡನು. ಅನಂತರ ಎಲೈ ಕೃಷ್ಣಭಕ್ತನೇ ! ಹೇಳುತ್ತೇನೆ ಕೇಳು ಎಂಬದಾಗಿ ಹೇಳಿ ಮಧುರವಾದ ಮಾತಿನಿಂದ ಇಂತೆಂದನು.

೧೧೨. ನಂದನ ಮಗನಾದ ಕೃಷ್ಣನಿಗಿಂತಲೂ ರಾಮನು ಬೇರೆಯಲ್ಲ. ರಾಮನಿಗಿಂತಲೂ ವಸುದೇವನು ಮಗನಾದ ಕೃಷ್ಣನೂ ಬೇರೆಯಲ್ಲ. ಇದನ್ನು ನಾನು ತಿಳಿದಿದ್ದರೂ ಕೂಡ ನನ್ನ ಮನಸ್ಸು ಅಯೋಧ್ಯಾಪಟ್ಟಣದ ರಕ್ಷಕನೂ ಬಾಲಕನೂ, ಲಕ್ಷ್ಮಣಸಹಿತನೂ ಆದ ರಾಮನಕಡೆಗೆ ಓಡಿಹೋಗುತ್ತದೆ.

ಅತಸ್ತ್ವತ್ತೋ ಮಯಾ ರಾಮಃ ಕೃಷ್ಣಸ್ಯ ನಿಂದನಂ ಕೃತಂ |
ತನ್ನೇರ್ಷಯಾ ದ್ವಿಜಶ್ರೇಷ್ಠ ವೇದ್ಮಿ ತೌ ದ್ವೌ ಸಮಾವಿತಿ || ೧೧೩ ||

ರಾಮ ಏವಾತ್ರ ಕೃಷ್ಣಶ್ಚ ಕೃಷ್ಣ ಏವಾತ್ರ ರಾಘವಃ |
ಉಭಯೋರ್ನಾಂತರಂ ವಿಪ್ರ ಕೌತುಕಾಚ್ಚ ಮಯೇರಿತಂ || ೧೧೪ ||

ಮಾನವಯತ್ಯಂತರಂ ಯೋ ನಾ ತಯೋಃಶ್ರೀರಾಮಕೃಷ್ಣಯೋಃ |
ಪರಸ್ಪರಂ ಸ ನಿರಯೇ ಪತಿಷ್ಯತಿ ನ ಸಂಶಯಃ || ೧೧೫ ||

ತ್ವದ್ಗರ್ವಪರಿಹಾರಾರ್ಥಂ ಖೇಚರ್ಯಾ ರಾಘವಃ ಸ್ತುತಃ |
ಇತ್ಯುಕ್ತ್ವಾ ಸಾಂತ್ವಯಿತ್ವಾ ತಂ ರಾಮಃ ಕೃಷ್ಣಾಹ್ವಯಂ ಮುಹುಃ ||೧೧೬||

---

೧೧೩. ಆದ್ದರಿಂದಲೇ ನಾನು ರಾಮನನ್ನು ಸ್ತುತಿಸಿದೆನು. ಕೃಷ್ಣನನ್ನು ನಿಂದಿಸಿದೆನು. ಕೃಷ್ಣನನ್ನು ನೋಡಿದರೆ ನನಗೆ ದ್ವೇಷವಿಲ್ಲ. ಆದರೆ ನಿನ್ನ ಮೇಲಿನ ಹೊಟ್ಟೆಗಿಚ್ಚಿನಿಂದ ಆ ಕೃಷ್ಣನನ್ನು ನಿಂದಿಸಿದೆನು ಅಷ್ಟೆ ! ಅವರಿಬ್ಬರೂ ಸಮರೆಂಬುದನ್ನು ನಾನು ಚೆನ್ನಾಗಿ ಬಲ್ಲೆನು.

೧೧೪. ರಾಮನೇ ಕೃಷ್ಣನು, ಕೃಷ್ಣನೇ ರಾಮನು. ಇವರಿಬ್ಬರಿಗೂ ವ್ಯತ್ಯಾಸವೇ ಇಲ್ಲ. ನಾನು ಕುತೂಹಲದಿಂದಲೂ ಸಂತೋಷದಿಂದಲೂ ವ್ಯತ್ಯಾಸವನ್ನು ಹೇಳಿದೆನು.

೧೧೫. ಯಾವ ಮನುಷ್ಯನು ಇವರಿಬ್ಬರಿಗೂ ಇರುವ ವ್ಯತ್ಯಾಸವನ್ನು ಗಣನೆಗೆ ತಂದುಕೊಂಡು ಬೇರೆಯೆಂದುಕೊಳ್ಳುವನೋ ಅವನು ನರಕದಲ್ಲಿ ಖಂಡಿತವಾಗಿಯೂ ಬೀಳುವನು ಸಂಶಯವಿಲ್ಲ.

೧೧೬. ಕೃಷ್ಣನೇ ದೊಡ್ಡವನೆಂದು ನೀನು ಹೊಗಳುತ್ತಿರುವಾಗ ನಿನ್ನ ಗರ್ವವನ್ನು ನಾಶಮಾಡಲು ಆಕಾಶವಾಣಿಯೂ ಕೂಡ ರಾಮನನ್ನೇ ಹೊಗಳಿ ಸ್ತುತಿಸಿದಳು.

ತೂಷ್ಣೀಂ ತಸ್ಥೌ ಸಭಾಮಧ್ಯೇ ಸಭಾಸದ್ಭಿಸ್ಸುಪೂಜಿತಃ ।
ತತಸ್ತೌ ಮಾಘಮಾಸಾಂತೇ ಸ್ವಂ ಸ್ವಂ ದೇಶಂ ಪ್ರಜಗ್ಮತುಃ ॥ ೧೧೭ ॥

ತಸ್ಮಾಚ್ಛಿಷ್ಯಾವತಾರೇಷು ನ ರಾಮಸದೃಶಃ ಪರಃ ।
ಅತಸ್ತಂ ಭಜ ಭಾವೇನ ತಸ್ಯೈವ ಚರಿತಂ ಶೃಣು ॥ ೧೧೮ ॥

ಯದನ್ಯದ್ವರ್ಣಯಾಮ್ಯಗ್ರೇ ಮಹಾಮಂಗಳಕಾರಕಂ ॥ ೧೧೯ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ರಾಜ್ಯಕಾಂಡೇ ಪೂರ್ವಾರ್ಧೇ ಶ್ರೀರಾಮಕೃಷ್ಣೋ
ಪಾಸಕಯೋರ್ವಿವಾದೋ ನಾಮ ತೃತೀಯಸ್ಸರ್ಗಃ

---

೧೧೭. ರಾಮಭಕ್ತನು ಹೀಗೆಂದು ಹೇಳಿ ಕೃಷ್ಣಭಕ್ತನನ್ನು ಸಮಾಧಾನ ಪಡಿಸಿ ಆ ಸಭೆಯಲ್ಲಿ ಸುಮ್ಮನೆ ಕುಳಿತುಕೊಳ್ಳಲು ಆಗ ಆ ಸಭೆಯವರೆಲ್ಲರೂ ಆವನನ್ನು ಪೂಜಿಸಿ ಗೌರವಿಸಿದರು. ಅನಂತರ ಅವರಿಬ್ಬರೂ ಮಾಘಮಾಸದ ಕೊನೆಯಲ್ಲಿ ತಮ್ಮ ತಮ್ಮ ಊರುಗಳಿಗೆ ಹೊರಟು ಹೋದರು.

೧೧೮-೧೧೯. ಎಲೈ ಶಿಷ್ಯನೇ! ಆದ್ದರಿಂದ ಅವತಾರಗಳಲ್ಲಿ ರಾಮಾವತಾರ ಕ್ಕಿಂತಲೂ ಹೆಚ್ಚಿನದು ಮತ್ತೊಂದಿಲ್ಲ. ಆದ್ದರಿಂದ ಭಕ್ತಿಯಿಂದ ರಾಮನನ್ನು ಭಜಿಸು. ಅವನ ಚರಿತ್ರೆಯನ್ನೇ ಕೇಳು. ನಾನು ಮುಂದೆ ಹೇಳುವುದನ್ನು ಕೇಳು. ಅದು ಮಂಗಳಕಾರಕವು.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಪೂರ್ವಾರ್ಧದಲ್ಲಿ ಶ್ರೀರಾಮ
ಕೃಷ್ಣೋಪಾಸಕರ ವಿವಾದವೆಂಬ ಮೂರನೆಯ ಸರ್ಗವು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ
॥ ಮೂರನೆಯ ಸರ್ಗದ ಸಾರಾಂಶವು ॥

ವಿಷ್ಣುದಾಸನು ರಾಮದಾಸನನ್ನು ಕುರಿತು ಎಲೈ ಗುರುವೆ! ಸ್ವಾಮಿಯು ಅವತರಿಸಿದ ಹತ್ತು ಅವತಾರಗಳೊಳಗೆ ರಾಮ ಕೃಷ್ಣಾವತಾರಗಳೆರಡೂ ಶ್ರೇಷ್ಠ ವೆಂದು ಕೇಳಿದ್ದೇನೆ. ಆದರೆ ಆ ಎರಡು ಅವತಾರಗಳಲ್ಲಿ ಯಾವುದು ಉತ್ತಮ ವಾದುದೆಂಬುದನ್ನು ನನಗೆ ತಿಳಿಸು. ಆ ದೇವರನ್ನು ಸ್ತುತಿಸುತ್ತೇನೆ. ಎಂದನು.

ಅದಕ್ಕೆ ರಾಮದಾಸನು, ನೀನು ಕೇಳಿದುದು ಸರಿ. ಇವುಗಳಲ್ಲಿ ರಾಮಾ ವತಾರವೇ ಸರ್ವಶ್ರೇಷ್ಠವಾದುದು ಎಂದು ತಿಳಿ. ಈ ವಿಷಯದಲ್ಲಿ ರಾಮಭಕ್ತ ಕೃಷ್ಣಭಕ್ತರಿಗೆ ನಡೆದ ಒಂದು ವಿವಾದವೇ ಇರುವುದು. ಅವರಿಬ್ಬರೂ ಕಾಶಿಯಲ್ಲಿ ಪುರಾಣವನ್ನು ಕೇಳುತ್ತಿದ್ದಾಗ ರಾಮಭಕ್ತನು ಆ ಪುರಾಣಿಕನು ಹೇಳಿದ ರಾಮ ಕಥೆಯನ್ನು ಕೇಳಿ ಅವನನ್ನು ಪೂಜಿಸಲು ಕೃಷ್ಣಭಕ್ತನು ಅವನನ್ನು ಕುರಿತು ಕೋಪದಿಂದ ರಾಮನ ಚರಿತ್ರೆಯನ್ನು ಕೇಳಿ ಸಂತೋಷದಿಂದ ಪುರಾಣಿಕನನ್ನು ಪೂಜಿಸಿದೆಯಲ್ಲ! ಆ ರಾಮನು ಬಹು ದುಃಖಿಯಲ್ಲವೇ! ಎಂದು ಮೊದಲಿ ಸುತ್ತಾ ಕೃಷ್ಣನನ್ನು ಹೊಗಳುತ್ತ ಬಂದನು. ಈ ರಾಮಭಕ್ತನು ತನ್ನ ರಾಮನ ಗುಣಗಳನ್ನು ಹೇಳುತ್ತ ಆ ಕೃಷ್ಣನನ್ನು ಹಳಿಯುತ್ತ ಬಂದನು. ಹೀಗೆಯೇ ಇವರಿಗೆ ಬಹುವಾಗಿ ವಾಗ್ವಾದಗಳು ನಡೆದುವು. ಕೊನೆಗೆ ಆಕಾಶವಾಣಿಯು ರಾಮನ ಗುಣಗಳೇ ಹೆಚ್ಚೆನಲು ಎಲ್ಲರೂ ಕೈಚಪ್ಪಾಳೆ ತಟ್ಟುತ್ತ ಸಂತೋಷ ಪಟ್ಟರು. ಕೃಷ್ಣಭಕ್ತನು ರಾಮಭಕ್ತನಿಗೆ ನಮಸ್ಕರಿಸಿ ತಾನು ಹೇಳಿದುದು ತಪ್ಪಾಯಿತು ಎಂದೆನಲು ಅವನು ರಾಮನೂ ಕೃಷ್ಣನೂ ಒಂದೇ ಎಂದು ಹೇಳುತ್ತ ಸಮಾಧಾನಪಡಿಸಿದನು. ಇಂತು ರಾಮಾವತಾರವೇ ಉತ್ತಮವಾದುದು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ

॥ ಚತುರ್ಥಸ್ಸರ್ಗಃ ॥

॥ ರಾಮದಾಸ ಉವಾಚ ॥

ಏಕದಾ ರಾಘವಶ್ಶಿಷ್ಯ ಸಭಾಸಂಸ್ಥೋ ಜನೈರ್ವೃತಃ ।
ದದರ್ಶ ದ್ರಾಕ್ಷಾವಲ್ಲೀನಾಂ ಮಂಟಪೇ ಕಾಕಮುತ್ತಮಂ ॥ ೧ ॥

ಉಭಯೋರ್ನೇತ್ರಯೋರೇಕನೇತ್ರಮೂರ್ತಿಸಮನ್ವಿಕಂ ।
ಅತಿದೀನಂ ಕೃಶಂ ವ್ಯಗ್ರದೃಷ್ಟಿಂ ದೀರ್ಘಸ್ವರಂ ಚಲಂ ॥ ೨ ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ

ನಾಲ್ಕನೆಯ ಸರ್ಗವು

೧. ರಾಮದಾಸನು ಹೇಳಿದನು—ಎಲೈ ಶಿಷ್ಯನೇ ! ಒಂದುಸಾರಿ ರಾಮನು ಜನಗಳೊಡನೆ ಸಭೆಯಲ್ಲಿ ಕುಳಿತಿದ್ದನು. ಅಲ್ಲಿ ಒಂದು ದ್ರಾಕ್ಷೆಯ ಮಂಟಪ ವಿದ್ದಿತು. ಆ ಮಂಟಪದಲ್ಲಿದ್ದ ದ್ರಾಕ್ಷೆಯ ಬಳ್ಳಿಗಳಮೇಲೆ ಒಂದು ಕಾಗೆಯು ಕುಳಿತಿದ್ದಿತು. ಅದನ್ನು ನೋಡಿದನು.

೨. ಅದಕ್ಕೆ ಎರಡು ಕಣ್ಣುಗಳಲ್ಲಿಯೂ ಒಂದೇ ಕಣ್ಣಿನ ಗುಡ್ಡೆಯು ಓಡಿಯಾಡುತ್ತಲಿದ್ದಿತು. ಅದು ದೀನವೂ, ಕೃಶವೂ ಆಗಿದ್ದಿತು. ತೊಂದರೆಗೊಳಗಾಗಿದ್ದಿತು. ಕಣ್ಣುಗಳಲ್ಲಿ ತೊಂದರೆಪಡುತ್ತಿರುವಿಕೆಯು ತಿಳಿದುಬರುತ್ತಿದ್ದಿತು. ದೀರ್ಘವಾಗಿ ಕೂಗುತ್ತಿದ್ದಿತು. ಅದರ ಸ್ಥಿತಿಯು ಸ್ಥಿರವಾಗಿಲ್ಲದೆ ಚಂಚಲವಾಗಿರುವಿಕೆಯನ್ನು ತೋರಿಸುತ್ತಿದ್ದಿತು.

ಮುಹುರ್ಮುಹುಶ್ಚ ಪಶ್ಯಂತಮಾತ್ಮಾನಂ ಶಬ್ದಪೂರ್ವಕಂ ।
ತಂ ದೃಷ್ಟ್ವಾ ತತ್ಕೃಪಾವಿಷ್ಟಃ ಸ್ಮೃತ್ವಾ ಕ್ರೋಧಂ ಪುರಾ ಕೃತಂ ॥ ೩ ॥

ಉವಾಚ ಕಾಕಂ ಶ್ರೀರಾಮಃ ಸುಖಮಾಗಚ್ಛ ಮೇಂತಿಕಂ ।
ತದ್ರಾಮವಚನಂ ಶ್ರುತ್ವಾ ದ್ರಾಕ್ಷಾವಲ್ಲ್ಯಾಶ್ಚ ಮಂಟಪಾತ್ ॥ ೪ ॥

ಶೀಘ್ರಮುಡ್ಡೀಯ ಕಾಕಸ್ತು ರಾಮಾಗ್ರೇ ಸದಸಿ ಸ್ಥಿತಃ ।
ರಾಮಂ ಪಶ್ಯನ್ ದೀರ್ಘರವಂ ಸ ಚಕಾರ ಮುಹುರ್ಮುಹುಃ ॥ ೫ ॥

ತದಾ ತಂ ರಾಘವಃ ಪ್ರಾಹ ತತ್ಕೃಪಾವಿಷ್ಟಮಾನಸಃ ।
ನೇತ್ರಂ ವಿನಾ ವರಾನನ್ಯಾನ್ಕಾಕ ಯಾಚಸ್ವ ಮಾಂ ಪ್ರತಿ ॥ ೬ ॥

---

೩. ದೀನವಾಗಿ ಕೂಗುತ್ತ ರಾಮನನ್ನೇ ನೋಡುತ್ತಲಿದ್ದಿತು. ರಾಮನು ಅದನ್ನು ನೋಡಿದನು. ಆಗ ಅದರ ಮೇಲೆ ದಯೆಯುಹುಟ್ಟಿತು. ತಾನು ಅದರಮೇಲೆ ಹಿಂದೆ ಮಾಡಿದ್ದ ಕೋಪವನ್ನು ಸ್ಮರಿಸಿಕೊಂಡನು.

೪–೫. ಆಗ ರಾಮನು ಕಾಗೆಯನ್ನು ಕುರಿತು ಎಲೈ ಕಾಗೆಯೆ ! ನೀನು ಹೆದರಬೇಕಾದುದಿಲ್ಲ. ನನ್ನ ಬಳಿಗೆ ಸರಾಗವಾಗಿ ಬಂದುಬಿಡು. ಎಂದನು. ರಾಮನು ಹೀಗೆ ಹೇಳಿದುದನ್ನು ಕೇಳಿ ಕಾಗೆಯು ಆ ದ್ರಾಕ್ಷಿ ಬಳ್ಳಿಯ ಚಪ್ಪರ ದಿಂದ ಬೇಗನೆ ಎದ್ದು ಹಾರಿ ರಾಮನ ಬಳಿಗೆ ಬಂದಿತು. ಆ ಸಭೆಯ ಮಧ್ಯದಲ್ಲಿ ಅವನೆದುರಿಗೆ ಕುಳಿತುಕೊಂಡಿತು. ಆಗ ರಾಮನನ್ನು ನೋಡುತ್ತ ದೀರ್ಘವಾಗಿ ಕೂಗುತ್ತಲಿದ್ದಿತು.

೬. ಅದರ ಮೇಲೆ ರಾಮನಿಗೆ ದಯೆಯು ಹುಟ್ಟಿ ಇಂತೆಂದು ಹೇಳಿದನು. ಎಲೈ ಕಾಗೆಯೆ ! ಕಣ್ಣನ್ನು ಕೊಡುವಿಕೆಯ ಹೊರತಾಗಿ ಬೇಕಾದ ಬೇರೆ ವರ ಗಳನ್ನು ನೀನು ಕೇಳಿಕೊ,

ತದ್ರಾಮವಚನಂ ಶ್ರುತ್ವಾ ಕಾಕಃ ಪ್ರಾಹಾವನೀಪತಿಂ ।
ಕೃಪಾವಲೋಕನಂ ರಾಮ ಮಯ್ಯಸ್ತು ತವ ಸರ್ವದಾ ॥ ೭ ॥

ಕಿಂ ವರೈರಿತರೈರ್ವ್ಯರ್ಥೈರಿಹೈವ ಸುಖದಾಯಕೈಃ ।
ತತ್ಕಾಕವಚನಂ ಶ್ರುತ್ವಾ ರಾಮಸ್ತಂ ವಾಕ್ಯಮಬ್ರವೀತ್ ॥ ೮ ॥

ದ್ವೀಪಾಂತರೇಷು ಯದ್ವೃತ್ತಂ ಭವಿಷ್ಯಂ ಭೂತಮೇವ ಚ ।
ವರ್ತಮಾನಂ ತು ಸಕಲಂ ತ್ವನ್ನೇತ್ರವಿಷಯೇಽಸ್ತು ತತ್ ॥ ೯ ॥

ಭಾವಿ ಕಾರ್ಯಾಣಿ ಸರ್ವಾಣಿ ಕಾಕ ತ್ವಂ ವೇತ್ಸಿ ಮದ್ವರಾತ್ ।
ಜನಾಃ ಪಶ್ಯಂತು ತೇ ಗತ್ಯಾ ಶಕುನಾನಿ ನಿರಂತರಂ ॥ ೧೦ ॥

ಸ್ಥಿರತ್ವೇ ಸ್ಥಿರಕಾರ್ಯಾಣಿ ಗತೇ ತ್ವಯ್ಯತಿಸತ್ವರಂ ।
ಭವಿಷ್ಯಂತಿ ಹಿ ಕಾರ್ಯಾಣಿ ನರಾಣಾಂ ಶಕುನಂ ತ್ವಿತಿ ॥ ೧೧ ॥

೭–೮. ರಾಮನು ಇಂತು ಹೇಳಿದುದನ್ನು ಕಾಗೆಯು ಕೇಳಿ ವಿನಯದಿಂದ ಅವನನ್ನು ಕುರಿತು ಇಂತೆಂದಿತು. ಎಲೈ ರಾಮನೆ! ನನ್ನನ್ನು ಯಾವಾಗಲೂ ಕೃಪೆಯಿಂದ ನೋಡಿತ್ತಿರು. ಈ ಲೋಕದಲ್ಲಿ ಸುಖವನ್ನು ಕೊಡುವ ಉಳಿದ ವರಗಳಿಂದ ಏನು ಪ್ರಯೋಜನವಿದೆ? ಎನ್ನಲು, ರಾಮನು ಆ ಮಾತನ್ನು ಕೇಳಿ ಮತ್ತೆ ಅದನ್ನು ಕುರಿತು ಇಂತೆಂದನು.

೯. ಎಲೈ ಕಾಗೆಯೇ ಬೇರೆ ದ್ವೀಪದಲ್ಲಿ ನಡೆಯುವ ಭೂತಭವಿಷ್ಯದ್ವರ್ತಮಾನ ವಿಷಯಗಳು ಎಲ್ಲವೂ ಕೂಡ ನಿನ್ನ ಕಣ್ಣಿಗೆ ಕಾಣಲಿ.

೧೦. ಮುಂದೆ ಬರುವ ಆಗುವ ಎಲ್ಲ ವಿಷಯಗಳನ್ನೂ, ಕೆಲಸಗಳನ್ನೂ ನೀನು ನನ್ನ ವರದಿಂದ ತಿಳಿದುಕೊ. ನಿನಗೆ ಗೊತ್ತಾಗಲಿ. ಜನಗಳು ನಿನ್ನ ಗಮನದಿಂದ ಯಾವಾಗಲೂ ಶಕುನಗಳನ್ನು ತಿಳಿದುಕೊಳ್ಳಲಿ.

೧೧. ಅವರು ಮಾಡತಕ್ಕ ಕಾರ್ಯಗಳು ನೀನು ಸ್ಥಿರವಾಗಿದ್ದರೆ ಸ್ಥಿರವೆಂದೂ ನೀನು ಚಲಿಸುತ್ತಲಿದ್ದರೆ ಜಾಗ್ರತೆಯೆಂದೂ ತಿಳಿಯಲಿ. ಈರೀತಿಯಾಗಿ ಜನರಿಗೆ ಶಕುನಗಳುಂಟಾಗಲಿ.

ಪಶ್ಯಂತು ಸಕಲಾ ಭೂಮ್ಯಾಂ ಜನಾಃ ಕಾರ್ಯಪ್ರಸಿದ್ಧಯೇ।
ಗ್ರಾಮಗೃಹಪ್ರವೇಶೇ ತೇ ವಾಮಭಾಗೇನ ಚೇದ್ಗತಿಃ ॥ ೧೨ ॥

ಗಮನೇ ದಕ್ಷಿಣೇ ಭಾಗೇ ಯದಿ ತೇ ಗಮನಂ ತದಾ।
ಲೋಕಾನಾಮಸ್ತು ಶಕುನಂ ಮಹಾಮಂಗಳಕಾರಕಂ ॥ ೧೩ ॥

ಪ್ರೇತೇ ದಶಾಹಪಿಂಡಾಯ ಯದಿ ಸ್ಪರ್ಶೋ ಭವೇನ್ನ ತೇ।
ಮಾಸ್ತು ತರ್ಹಿ ಗತಿಶ್ರೇಷ್ಠಾ ಪ್ರೇತಾನಾಂ ಮಮ ವಾಕ್ಯತಃ ॥ ೧೪ ॥

ಅಂತಕಾಲೇ ಮಾನವಸ್ಯ ವಾಂಛಿತಂ ನೈವ ಪೂರಿತಂ।
ಪ್ರೇತದಶಾಹಿಪಿಂಡಸ್ಯಾಸ್ಪರ್ಶಾಜ್ಜ್ಞಾನಂತು ತನ್ನರಾಃ ॥ ೧೫ ॥

ಪ್ರೇತಸ್ಯ ವಂಶಜಃ ಕಶ್ಚಿದ್ಯದ್ಯತ್ಪ್ರೇತಸ್ಯ ವಾಂಛಿತಂ।
ತತ್ತೇಸ್ಪರ್ಶಾದ್ವಿದಿತ್ವಾ ತು ಸ ಮುದಾ ಪೂರಯಿಷ್ಯತಿ ॥ ೧೬ ॥

೧೨-೧೩. ಜನರೆಲ್ಲರೂ ತಮ್ಮ ಕೆಲಸದ ವಿಷಯದಲ್ಲಿ ನಿನ್ನ ಗತಿಯನ್ನೇ ನೋಡಿ ಅವುಗಳ ಒಳ್ಳೆಯದು ಕೆಟ್ಟದನ್ನು ತಿಳಿದುಕೊಳ್ಳಲಿ. ಗ್ರಾಮಪ್ರವೇಶ ದಲ್ಲಿಯೂ ನೀನು ಅವರಿಗೆ ಎಡಗಡೆಯಿಂದ ಬಲಗಡೆಗೆ ಹೋದರೆ ಆಗ ಅವರಿಗೆ ಮಂಗಳವಾಗಲಿ.

೧೪. ಪ್ರೇತಗಳಿಗೆ ಕೊಡುವ ಹತ್ತನೆಯ ದಿವಸದ ಪಿಂಡವನ್ನು ನೀನು ಮುಟ್ಟದೆ ಹೋದರೆ ಅವರಿಗೆ ನನ್ನ ಮಾತಿನ ಪ್ರಕಾರ ಸದ್ಗತಿಯು ಸಿಕ್ಕದೆ ಹೋಗಲಿ.

೧೫. ನೀನು ಆ ಹತ್ತನೆಯ ದಿವಸ ಪಿಂಡವನ್ನು ಮುಟ್ಟದೆ ಹೋದರೆ ಸತ್ತವರ ಇಷ್ಟಾರ್ಥವನ್ನು ಕೊನೆಗಾಲದಲ್ಲಿ ಅವರ ಸಂಬಂಧಪಟ್ಟವರು ಪೂರ್ತಿ ಮಾಡಲಿಲ್ಲವೆಂದು ತಿಳಿದುಕೊಳ್ಳಲಿ.

೧೬-೧೭. ನೀನು ಆ ಪಿಂಡವನ್ನು ಮುಟ್ಟುವುದರಿಂದಲೂ ಮತ್ತು ಮುಟ್ಟ ದಿರುವುದರಿಂದಲೂ ಅವನ ಕಡೆಯವರು ಅವನಿಗೆ ಬೇಕಾದುದನ್ನು ತಿಳಿದುಕೊಂಡು

ತದಾ ಪಿಂಡಂ ಸ್ಪೃಶಸ್ವ ತ್ವಂ ನೋ ಚೇನ್ಮಾ ಸ್ಪೃಶ ಸರ್ವಥಾ ।
ಅನ್ಯಮೇಕಂ ವರಂ ದದ್ಮಿ ಲಿಪಿಮಾತ್ರೇ ತು ಪುಸ್ತಕೇ ॥ ೧೭ ॥

ಯತ್ರ ಕಿಂಚಿಲ್ಲೇಖಕೈಶ್ಚ ವಿಸ್ಮೃತಂ ತತ್ರ ಮದ್ವರಾತ್ ।
ಕುರ್ವಂತು ಪದಚಿಹ್ನಂ ತೇ ಸರ್ವತ್ರ ಜಗತೀತಲೇ ॥ ೧೮ ॥

ತ್ವತ್ಪದಂ ಪುಸ್ತಕೇ ದೃಷ್ಟ್ವಾ ಜನಾ ಜಾನಂತು ವಿಸ್ಮೃತಂ ।
ಲಿಖಿತಂ ಪಾರ್ಶ್ವಭಾಗೇಷು ಲೇಖಕೈಃ ಪುಸ್ತಕಸ್ಯ ಯತ್ ॥ ೧೯ ॥

ಇತಿ ದತ್ವಾ ವರಾನ್ರಾಮಸ್ತೂಷ್ಣೀಮಾಸೀತ್ ಸ್ಮಿತಾನನಃ ।
ಕಾಕೋಽಪಿ ತುಷ್ಟಶ್ರೀರಾಮಂ ನತ್ವೋಡ್ಡೀಯ ಗತಸ್ತದಾ ॥ ೨೦ ॥

ಇಷ್ಟವನ್ನು ಪೂರ್ತಿಮಾಡಲಿ. ಹಾಗೆ ಅವನಿಗೆ ಅದು ಇಷ್ಟವಾದರೆ ಆಗ ನೀನು ಆ ಪಿಂಡವನ್ನು ಮುಟ್ಟು ಹಾಗಿಲ್ಲದಿದ್ದರೆ ನೀನು ಮುಟ್ಟಲೇಬೇಡ. ಇದಲ್ಲದೆ ನಿನಗೆ ಮತ್ತೊಂದು ವರವನ್ನು ಕೊಡುತ್ತೇನೆ.

೧೮. ಬರೆಯುತ್ತಿರುವ ಪುಸ್ತಕದಲ್ಲಿ ಬರೆಯುವವನಿಗೆ ಯಾವುದಾದರೂ ಮರೆತು ಹೋದರೆ ಆ ಜಾಗದಲ್ಲಿ ನಿನ್ನ ಕಾಲಿನ ಗುರುತನ್ನು ಹಾಕಲಿ. ಇದು ನನ್ನ ವರವು. ಎಲ್ಲಿಡೆಯಲ್ಲಿಯೂ ಪ್ರಚಾರದಲ್ಲಿ ಬರಲಿ.

೧೯. ಪುಸ್ತಕದಲ್ಲಿ ನಿನ್ನ ಹೆಜ್ಜೆಯ ಗುರುತಿರುವ ಸ್ಥಳದಲ್ಲಿ ಇಲ್ಲಿ ಏನನ್ನೋ ಮರೆತಿದ್ದಾನೆಂದು ಆ ಚಿಹ್ನೆಯಿಂದ ತಿಳಿದುಕೊಳ್ಳಲಿ. ಅಲ್ಲದೆ ಆದನ್ನು ಪುಸ್ತಕದ ಪಕ್ಕದಲ್ಲಿ ಬರೆಯಲಿ. ಅದನ್ನು ನಿನ್ನ ಪಾದದ ಚಿಹ್ನೆಯ ಜಾಗದ್ದೆಂದು ತಿಳಿದು ಕೊಳ್ಳಲಿ.

೨೦. ರಾಮನು ಕಾಗೆಗೆ ಈರೀತಿಯಾಗಿ ವರಗಳನ್ನು ಕೊಟ್ಟು ನಗುತ್ತಲಿದ್ದನು. ಕಾಗೆಯು ಸಂತೋಷಗೊಂಡು ಆ ರಾಮನಿಗೆ ನಮಸ್ಕರಿಸಿ ಹಾರಿ ಹೊರಟು ಹೋಯಿತು.

ಏವಂ ನಾನಾಚರಿತ್ರಾಣಿ ಚಕಾರ ರಘುನಂದನಃ ।
ಏಕದಾ ರಾಘವೋ ರಾತ್ರೌ ಪಾರಿಜಾತತರೋರಧಃ ॥ ೨೧ ॥

ನಿದ್ರಿತೋ ಹೇಮಪರ್ಯಂಕೇ ಜಾನಕ್ಯಾ ಸ್ಪೃಶ್ಯಯಾಂ ವಿನಾ ।
ಏತಸ್ಮಿನ್ನಂತರೇ ತಸ್ಯಾಂ ರಾತ್ರೌ ತೇ ರಾಮರಕ್ಷಕಾಃ ॥ ೨೨ ॥

ದ್ವಾರಪಾಶ್ಚಾಪಿ ದಾಸ್ಯಶ್ಚ ದಾಸಾದ್ಯಾಸ್ಸಕಲಾಸ್ತದಾ ।
ಯಯುರ್ವೈ ಕೀರ್ತನಂ ಶ್ರೋತುಂ ಕ್ವಾಪಿ ರಾಮಸ್ಯ ಭಕ್ತಿತಃ ॥ ೨೩ ॥

ದೃಷ್ಟ್ವಾ ತಂ ಸಮಯಂ ವೇಗಾತ್ಕಾಮಬಾಣಪ್ರಪೀಡಿತಾಃ ।
ಪೌರಾಣಾಂ ಶತನಾರ್ಯಸ್ತ್ರಾ ವಸ್ತ್ರಾಲಂಕಾರಭೂಷಿತಾಃ ॥ ೨೪ ॥

---

೨೧. ರಾಮನು ಈರೀತಿಯಾಗಿ ತಾನು ಮರ್ತ್ಯಲೋಕದಲ್ಲಿರುವಾಗ ಅನೇಕ ಕೌತುಗಳನ್ನು ತೋರಿಸಿದನು. ಒಂದುಸಾರಿ ರಾಮನು ಪಾರಿಜಾತದ ಮರದ ಕೆಳಗೆ ಮಲಗಿ ನಿದ್ರಿಸುತ್ತಿದ್ದನು.

೨೨-೨೩. ಚಿನ್ನದ ಮಂಚವನ್ನು ಹಾಕಿಕೊಂಡು ಅದರಲ್ಲಿ ಮಲಗಿದ್ದನು. ಜೊತೆಯಲ್ಲಿ ಜಾನಕಿಯು ಮಲಗಿರಲಿಲ್ಲ. ಆಕೆಯು ಮುಟ್ಟಾಗಿದ್ದಳು. ಹೀಗೆ ಇವನು ಮಲಗಿರುವಾಗ ರಾತ್ರಿಯಲ್ಲಿ ರಾಮರಕ್ಷಕರಾದ ದ್ವಾರಪಾಲಕರು, ದಾಸರು, ದಾಸಿಯರು, ಎಲ್ಲರೂ ಕೂಡ ರಾಮನ ಕೀರ್ತನವನ್ನು ಕೇಳಲು ಭಕ್ತಿಯಿಂದ ಎಲ್ಲಿಗೋ ಹೊರಟು ಹೋದರು.

೨೪. ಇದೇ ಸಮಯವನ್ನು ನೋಡಿಕೊಂಡು ಕಾಮ ಬಾಣದಿಂದ ಪೀಡಿತರಾದ ಆ ಪಟ್ಟಣದ ನೂರುಜನ ಹೆಂಗಸರು ವಸ್ತ್ರ ಅಲಂಕಾರಗಳಿಂದ ಭೂಷಿತರಾಗಿ ಬೇಗನೆ ಅಲ್ಲಿಗೆ ಬಂದರು.

ತಾರುಣ್ಯಮದಸಂಭ್ರಾಂತಾ ಹೇಮಕುಂಭಪಯೋಧರಾಃ ।
ಚಂದ್ರಾನನಾಶ್ಶುಕಘ್ರಾಣಾಃ ಕಮಲಾಂಘ್ರ್ಯೋ ಮೃಗೀದೃಶಃ ॥ ೨೫ ॥

ಪೀತಕೌಶೇಯವಸನಾ ರುಕ್ಮನೂಪುರನಿಸ್ಸ್ವನಾಃ ।
ಪರಸ್ಪರಂ ತಾಸ್ಸಮ್ಮಂತ್ರ್ಯ ಪ್ರಥಮೇ ವಯಸಿ ಸ್ಥಿತಾಃ ॥ ೨೬ ॥

ಯಯುಃ ಸರ್ವಾಃ ಪುಷ್ಪಕೇ ಶ್ರೀರಾಘವಂ ರಹಸಿ ಸ್ಥಿತಂ ।
ಕಾಚಿತ್ತಂ ವೀಜಯಾಮಾಸ ಶ್ರೀರಾಮಂ ವ್ಯಜನೇನ ಹಿ ।
ಕಾಚಿದ್ದಧಾರ ರಾಮಾರ್ಥಂ ಸ್ವಕರೇ ಪುಷ್ಪಮಾಲಿಕಾಂ ॥ ೨೭ ॥

ಕಾಚಿತ್ತಾಂಬೂಲಪಾತ್ರಂ ಚ ಕಾಚಿತ್ಕುಂಭಜಲಸ್ಯ ಸಾ ।
ಪಾತ್ರಂ ನಿಷ್ಠೀವನಸ್ಯಾನ್ಯಾ ದಧಾರ ವಿಲಾಸಿನೀ ॥ ೨೮ ॥

---

೨೫. ಅವರು ತಾರುಣ್ಯವೆಂಬ ಮದದಿಂದ ಹಿಂದು ಮುಂದು ಕಾಣದಂತೆ ಕೊಬ್ಬಿದ್ದರು. ಚಿನ್ನದ ಕಲಶಗಳಂತಿರುವ ಸ್ತನಗಳನ್ನು ಹೊಂದಿದ್ದರು. ಚಂದ್ರನಂತೆ ಮುಖವಿದ್ದಿತು. ಗಿಳಿಯಮೂಗಿನಂತೆ ಅವರ ಮೂಗಿದ್ದಿತು. ಕಮಲದಂತೆ ಪಾದಗಳಿದ್ದುವು. ಜಿಂಕೆಯ ಕಣ್ಣಿನಂತೆ ಕಣ್ಣುಗಳನ್ನು ಹೊಂದಿ ಮನೋಹರರಾಗಿದ್ದರು.

೨೬. ಪಟ್ಟೆಯ ಪೀತಾಂಬರಗಳನ್ನುಟ್ಟಿದ್ದರು. ಚಿನ್ನದ ಕಾಲುಬಳೆಗಳನ್ನು ಹಾಕಿಕೊಂಡಿದ್ದರು. ಅವು ಝುಲ್ ಝುಲ್ ಎಂದು ಶಬ್ದಮಾಡುತ್ತಿದ್ದುವು. ಇವರೆಲ್ಲರೂ ಸೇರಿ ಒಬ್ಬರಿಗೊಬ್ಬರು ಮಾತನಾಡಿಕೊಂಡು ಯೌವನದ ಮೊದಲನೆಯ ಮೆಟ್ಟಲಲ್ಲಿರುತ್ತಾ ಆ ರಾಮನ ಬಳಿಗೆ ಬಂದರು.

೨೭. ಆಗ ಆ ರಾಮನು ನಿದ್ರಿಸುತ್ತಿದ್ದನು. ಅವರಲ್ಲಿ ಒಬ್ಬಳು ಬೀಸಣಿಗೆಯನ್ನು ತೆಗೆದುಕೊಂಡು ಆ ಶ್ರೀ ರಾಮನನ್ನು ಬೀಸುತ್ತಿದ್ದಳು. ಮತ್ತೊಬ್ಬಳು ರಾಮನಿಗೆ ಕೊಡಬೇಕೆಂದು ಕೈಯಲ್ಲಿ ಹೂ ಮಾಲೆಯನ್ನು ಹಿಡಿದಿದ್ದಳು.

೨೮. ಮತ್ತೊಬ್ಬಳು ತಾಂಬೂಲದ ಪಾತ್ರೆಯನ್ನೂ, ಇನ್ನೊಬ್ಬಳು ನೀರಿನ ತಂಬಿಗೆಯನ್ನೂ, ಮಗದೊಬ್ಬಳು ಉಗುಳುವ ಪಾತ್ರೆಯನ್ನೂ ಹಿಡಿದಿದ್ದರು.

ದಧಾರ ಚಂದನಂ ಕಾಚಿಕ್ಕಾಚಿದಿವ್ಯಾನ್ನಮುತ್ತಮಂ ।
ಕಾಚಿತ್ಪಕ್ವಾನ್ನನೈವೇದ್ಯಂ ಕಾಚಿದ್ರಂಭಾಫಲಾದಿಕಂ ॥ ೨೯ ॥

ಏತಸ್ಮಿನ್ನಂತರೇ ಕಾಚಿತ್ಪಾದಸಂವಾಹನಂ ಶನೈಃ ।
ರಾಮಸ್ಯ ಕರ್ತುಮುದ್ಯುಕ್ತಾ ತತ್ಪದಂ ಪಾಣಿನಾಸ್ಪೃಶತ್ ॥ ೩೦ ॥

ತೇನ ರಾಮಃ ಪ್ರಬುದ್ಧೋಽಭೂತ್ ಸ್ಮೃತ್ವಾಸ್ಪೃಶ್ಯಾಂ ವಿದೇಹಜಾಂ ।
ಕೇನ ಮೇಽ ಸ್ಪರ್ಶಿತಃ ಪಾದಶ್ಚಕಿತಶ್ಚೇತ್ಯುಪಾವಿಶತ್ ॥ ೩೧ ॥

ತಾವದ್ದದರ್ಶ ಶ್ರೀರಾಮಶ್ಶತಸ್ತ್ರೀಶ್ಚ ಪುರಃ ಸ್ಥಿತಾಃ ।
ಪೌರಾಣಾಂ ಪ್ರಮದಾಸ್ಸರ್ವಾ ರುಕ್ಮಾಲಂಕಾರಮಂಡಿತಾಃ ॥ ೩೨ ॥

---

೨೯. ಒಬ್ಬಳು ಉತ್ತಮವಾದ ಚಂದನವನ್ನು ಹಿಡಿದು ಇದ್ದಳು. ಇನ್ನೊಬ್ಬಳು ದಿವ್ಯವಾದ ಅನ್ನವನ್ನು ಹಿಡಿದಿದ್ದಳು. ಮಗದೊಬ್ಬಳು ಪಕ್ವಾನ್ನವನ್ನು ಹಿಡಿದಿದ್ದಳು. ಅನ್ಯಳು ಬಾಳೆಯ ಹಣ್ಣೇ ಮುಂತಾದ ಹಣ್ಣುಗಳನ್ನು ಹಿಡಿದಿದ್ದಳು.

೩೦. ಇಷ್ಟರಲ್ಲಿ ಒಬ್ಬಳು ರಾಮನ ಕಾಲುಗಳನ್ನು ಒತ್ತಲು ಮನಸ್ಸುಳ್ಳವಳಾಗಿ ಕೈಗಳಿಂದ ಮೆಲ್ಲನೆ ಅವನ ಆ ಪಾದಗಳನ್ನು ಮುಟ್ಟಿದಳು.

೩೧. ಒಡನೆಯೇ ರಾಮನಿಗೆ ಎಚ್ಚರವಾಯಿತು. ಸ್ಪರ್ಶದಿಂದ ಹೆಂಗಸೆಂದು ತಿಳಿದು ತನ್ನನ್ನು ಮುಟ್ಟಬಹುದಾದ ಹೆಂಗಸಾದ ಸೀತೆಯು ರಜಸ್ವಲೆಯಾಗಿರುವಳೆಂದು ಜ್ಞಾಪಿಸಿಕೊಂಡನು. ಆಗ ಇದಾರು ನನ್ನ ಪಾದಗಳನ್ನು ಮುಟ್ಟಿದವರು ? ಎಂದು ಯೋಚಿಸುತ್ತ ಆಶ್ಚರ್ಯಪಟ್ಟು ಎದ್ದು ಕುಳಿತುಕೊಂಡನು.

೩೨. ಒಡನೆಯೇ ರಾಮನಿಗೆ ಅವನ ಎದುರಿಗೆ ನಿಂತಿದ್ದ ಆ ನೂರುಜನ ಹೆಂಗಸರು ಕಣ್ಣಿಗೆ ಕಾಣಿಸಿದರು. ಅವರೆಲ್ಲರೂ ಕೂಡ ಆ ಪಟ್ಟಣದ ಹೆಂಗಸರು. ಚಿನ್ನದ ಒಡವೆಗಳಿಂದ ಚೆನ್ನಾಗಿ ಅಲಂಕರಿಸಿಕೊಂಡು ಬಂದಿದ್ದರು.

ರಾಮಂ ಸಮುತ್ಥಿತಂ ದೃಷ್ಟ್ವಾ ಪ್ರಣೇಮುಸ್ತಾಸ್ತದಾ ಭುವಿ ।
ಸ್ವಶಿರಾಂಸಿ ನಿಧಾಯಾಥ ತುಷ್ಟುವುರ್ವಿವಿಧೋಕ್ತಿಭಿಃ ॥ ೩೩ ॥

ತಾಸ್ಸರ್ವಾ ರಾಘವಃ ಪ್ರಾಹ ಕಿಮರ್ಥಮಿಹ ಪುಷ್ಪಕೇ ।
ರಾತ್ರೌ ಸಮಾಗತಾಸ್ಸರ್ವಾಸ್ತಥ್ಯಂ ಮಾಂ ಕಥ್ಯತಾಂ ಸ್ತ್ರಿಯಃ ॥ ೩೪ ॥

ತದ್ರಾಮವಚನಂ ಶ್ರುತ್ವಾ ವಿಲಜ್ಜಂತ್ಯಃ ಪುರಸ್ತ್ರಿಯಃ ।
ಅವಾಙ್ಮುಖಾಸ್ಸಂಸ್ಥಿತಾಸ್ತಾಸ್ತೂಷ್ಣೀಮೇವ ಸಮಂತತಃ ॥ ೩೫ ॥

ತಾಸು ಕಾಚಿತ್ತದಾ ರಾಮಂ ಗತಲಜ್ಜಾಬ್ರವೀದ್ವಚಃ ।
ಸರ್ವಂ ಜಾನಂತಿ ಪ್ರಭವೋ ಯದರ್ಥಂ ವಯಮಾಗತಾ ॥ ೩೬ ॥

ಉಪೇಕ್ಷಣೀಯಾ ನೋ ರಾಮ ವಯಂ ಸರ್ವಾಃ ಸ್ತ್ರಿಯಸ್ತ್ವಯಾ ।
ಇತಿ ತಾಸಾಮಭಿಪ್ರಾಯಂ ಜ್ಞಾತ್ವಾ ಸ ರಘುನಂದನಃ ॥ ೩೭ ॥

---

೩೩. ಅವರೆಲ್ಲರೂ ಆ ರಾಮನು ಎದ್ದುದನ್ನು ನೋಡಿ ಒಟ್ಟಾಗಿ ನೆಲದ ಮೇಲೆ ಮಲಗಿ ಅವನಿಗೆ ನಮಸ್ಕರಿಸಿದರು. ಮತ್ತು ವಿಧವಿಧವಾದ ಮಾತುಗಳಿಂದ ಅವನನ್ನು ಸ್ತುತಿಸಿದರು.

೩೪. ಶ್ರೀರಾಮನು ಅವರೆಲ್ಲರನ್ನೂ ಕುರಿತು ಎಲೈ ಸ್ತ್ರೀಯರಿರಾ ! ನೀವೆಲ್ಲರೂ ಈ ರಾತ್ರಿಯಲ್ಲಿ ಪುಷ್ಪಕದೊಳಕ್ಕೆ ಬರಲು ಕಾರಣವೇನು ? ನನ್ನೊಡನೆ ಸುಳ್ಳನ್ನಾಡಬೇಡಿರಿ. ನಿಶ್ಚಯವನ್ನು ಹೇಳಿರಿ ಎಂದನು.

೩೫. ರಾಮನ ಈ ಮಾತನ್ನು ಕೇಳಿ ಆ ಪೌರಸ್ತ್ರೀಯರು ಲಜ್ಜೆಪಡುತ್ತ ತಲೆಯನ್ನು ತಗ್ಗಿಸಿಕೊಂಡು ಆ ರಾಮನ ಸುತ್ತಲೂ ಸುಮ್ಮನೆ ನಿಂತಿದ್ದರು.

೩೬–೩೭. ಆಗ ಅವರಲ್ಲಿ ಒಬ್ಬಳು ಲಜ್ಜೆಯನ್ನು ಬಿಟ್ಟು ರಾಮನೊಡನೆ ಇಂತೆಂದಳು. ಸ್ವಾಮಿ ! ನಾವು ಯಾತಕ್ಕೆ ಬಂದಿರುವೆಂಬುದನ್ನು ಪ್ರಭುಗಳು ತಿಳಿದುಕೊಳ್ಳಬಲ್ಲರು. ಎಲೈ ರಾಮನೇ ! ನಮ್ಮೊಬ್ಬರನ್ನೂ ಕೂಡ ನೀನು ಉಪೇಕ್ಷಿಸಕೂಡದು ಎಂದಳು. ಆಗ ಅವರ ಅಭಿಪ್ರಾಯವು ರಾಮನಿಗೆ ತಿಳಿಯಿತು.

ಅಬ್ರವೀನ್ಮಧುರಂ ವಾಕ್ಯಂ ಶ್ರುಣುಧ್ವಂ ಪ್ರಮದೋತ್ತಮಾಃ ।
ಏಕಪತ್ನೀವ್ರತಂ ಮೇಽಸ್ತಿ ಮಾತೃತುಲ್ಯಾಃ ಸ್ತ್ರಿಯೋ ಮಮ ॥ ೩೮ ॥

ಇತರಾಸ್ಸಕಲಾಸ್ಸೀತಾರಹಿತಾ ಇಹ ಜನ್ಮನಿ ।
ಗಚ್ಛಧ್ವಂ ನಿಜಗೇಹಾನಿ ಮಾಧರ್ಮಸ್ತು ನೃಪೇ ಮಯಿ ॥ ೩೯ ॥

ರಾಜ್ಯಂ ಶಾಸತಿ ಭೋ ನಾರ್ಯಃ ಕ್ಷಮಿತಂ ವೋಽಪರಾಧಿತಂ ।
ಇತಿ ತಾ ರಾಮವಾಗ್ಬಾಣೈಃ ಕಾಮಬಾಣಪ್ರಪೀಡಿತಾಃ ॥ ೪೦ ॥

ತಾಡಿತಾಶ್ಚ ವಿಶೇಷೇಣ ನಿಪೇತುರ್ಮೂರ್ಛಿತಾ ಭುವಿ ।
ಪತಿತಾಸ್ತಾ ನಿರೀಕ್ಷ್ಯಾಥ ಸರ್ವಾ ರಾಮೋಽತಿವಿಹ್ವಲಃ ॥ ೪೧ ॥

---

೩೮. ಆಗ ರಾಮನು ಅವರನ್ನು ಕುರಿತು ಎಲೈ ಸ್ತ್ರೀಯರಿರಾ ! ಕೇಳಿರಿ. ಈ ಜನ್ಮದಲ್ಲಿ ನಾನು ಏಕಪತ್ನೀ ವ್ರತದಲ್ಲಿದ್ದೇನೆ. ಸೀತೆಯು ಹೊರತಾಗಿ ಉಳಿದ ಹೆಂಗಸರೆಲ್ಲರೂ ನನಗೆ ತಾಯಿಗೆ ಸಮಾನರು.

೩೯. ಸೀತೆಯೊಬ್ಬಳೇ ಈ ಜನ್ಮದಲ್ಲಿ ಹೆಂಡತಿಯು. ನೀವೆಲ್ಲರೂ ನಿಮ್ಮ ಮನೆಗೆ ಹೋಗಿರಿ. ನನ್ನ ಬಳಿ ಅಧರ್ಮಕ್ಕೆ ಅವಕಾಶವಿಲ್ಲ.

೪೦. ನಾನು ರಾಜ್ಯವನ್ನಾಳುತ್ತಿರುವಾಗ ಅಧರ್ಮಕ್ಕೆ ಕೊಂಚವೂ ಅವಕಾಶವನ್ನು ಕೊಡುವುದಿಲ್ಲ ಈಗ ನೀವು ಇಲ್ಲಿಗೆ ಬಂದಿರುವ ಅಪರಾಧವನ್ನು ಕ್ಷಮಿಸಿದ್ದೇನೆ. ಹೊರಟುಹೋಗಿ ಎಂದನು.

೪೧. ಮೊದಲೇ ಕಾಮಬಾಣದಿಂದ ಪೀಡಿತವರಾಗಿದ್ದವರಿಗೆ ಈಗ ಈ ರಾಮನ ವಾಗ್ಬಾಣದಿಂದ ಬಹುವಾಗಿ ನೋವಾಯಿತು. ಅದನ್ನು ತಡೆಯಲಾರದೆ ನೆಲದಮೇಲೆ ಬಿದ್ದುಬಿಟ್ಟರು. ಅವರೆಲ್ಲರೂ ಆ ರೀತಿಯಾಗಿ ಬಿದ್ದುಬಿಡಲು ಅದನ್ನು ನೋಡಿ ರಾಮನಿಗೆ ಬಹುವಾಗಿ ಗಾಬರಿಯಾಯಿತು.

ತಾ ಉವಾಚ ಪುನಶ್ಶೀಘ್ರಂ ಸುಷ್ಟುವಾಕ್ಯೈಃ ಕೃಪಾನ್ವಿತಃ |
ಶ್ರುಣುಧ್ವಂ ಮದ್ವಚೋ ನಾರ್ಯಃ ಸಕೃದ್ರತ್ಯಾ ಮಯಾ ಸಹ || ೪೨ ||

ಯುಷ್ಮಾಕಂ ನ ಭವೇತ್ತುಷ್ಟಿರ್ವ್ರತಭಂಗೋಪಿ ಮೇ ಭವೇತ್ |
ಅತಃ ಶ್ರುಣುತ ಮೇ ವಾಕ್ಯಂ ಯಾಗೇ ಪೂರ್ವಂ ಮಯಾರ್ಪಿತಾಃ || ೪೩ ||

ರುಕ್ಮಜಾಶ್ಚ ಶ್ರೀಗುರವೇ ಸೀತಾಯಾಶ್ಶತಮೂರ್ತಯಃ |
ತಾಸಾಂ ಫಲೇನ ಯುಷ್ಮಾಭಿರ್ದ್ವಾಪರೇ ಕ್ರೀಡನಂ ಚಿರಂ || ೪೪ ||

ಕರಿಷ್ಯಾಮಿ ನ ಸಂದೇಹಃ ಕೃಷ್ಣರೂಪೇಣ ವೈ ಸುಖಂ ।
ನಾನಾ ನೃಪಾಣಾಂ ಯುಷ್ಮಾಭಿರ್ಭವಧ್ವಂ ಬಾಲಿಕಾಸ್ತದಾ || ೪೫ ||

೪೨–೪೪. ಒಡನೆಯೇ ಕೃಪೆಗೊಂಡವನಾಗಿ ಅವರನ್ನು ಕುರಿತು ಒಳ್ಳೆಯ ಮಾತಿನಿಂದ ಎಲೈ ನಾರಿಯರಿರಾ ! ನನ್ನ ಮಾತನ್ನು ಕೇಳಿರಿ. ಇಂದು ನೀವು ನನ್ನೊಡನೆ ಒಂದುಸಾರಿ ರಮಿಸಬಹುದು. ಆದರೆ ಈ ಒಂದುಸಾರಿ ರಮಿಸೋಣದರಿಂದ ನಿಮಗೆ ಸಂತೋಷವಾಗುವಂತಿಲ್ಲ. ನನಗಾದರೋ ವ್ರತಭಂಗವಾಗುತ್ತದೆ. ಆದ್ದರಿಂದ ನಾನು ಹೇಳುವುದನ್ನು ಕೇಳಿರಿ. ನಾನು ಹಿಂದೆ ಯಾಗದಲ್ಲಿ ಸೀತಾರೂಪವಾದ ನೂರು ಪ್ರತಿಮೆಗಳನ್ನು ಚಿನ್ನದಲ್ಲಿ ಮಾಡಿಸಿ ಗುರುವಿಗೆ ದಾನ ಮಾಡಿದ್ದೇನೆ. ಆ ದಾನದ ಫಲದಿಂದ ಅನೇಕಜನ ಹೆಂಗಸರು ದೊರೆಯಬೇಕು. ಆ ಫಲದಿಂದ ದ್ವಾಪರ ಯುಗದಲ್ಲಿ ನಿಮ್ಮೊಡನೆ ಬಹುಕಾಲ ರಮಿಸುತ್ತೇನೆ.

೪೫. ಈ ವಿಷಯದಲ್ಲಿ ಸಂದೇಹಪಡಬೇಡಿರಿ. ಆಗ ನಾನು ಕೃಷ್ಣಾವತಾರವನ್ನು ಮಾಡುತ್ತೇನೆ. ನೀವು ಅನೇಕಜನ ರಾಜರ ಹೊಟ್ಟೆಯಲ್ಲಿ ಹೆಣ್ಣುಮಕ್ಕಳಾಗಿ ಹುಟ್ಟುತ್ತೀರಿ.

ಭೌಮಾಸುರಶ್ಚ ಯುಷ್ಮಾಕಂ ಸಂಹರಿಷ್ಯತಿ ವೈ ಯದಾ ।
ತದಾ ಸರ್ವಾ ಮೋಚಯಾಮಿ ಹತ್ವಾ ತಂ ಜಗತೀಸುತಂ ॥ ೪೬ ॥

ಕರಿಷ್ಯಾಮಿ ವಿವಾಹಾಂಶ್ಚ ಯುಷ್ಮಾಭಿರ್ದ್ವಾರಿಕಾಪುರಿ ।
ಸ್ತ್ರೀಷೋಡಶಸಹಸ್ರಾಣಾಮೂರ್ಧ್ವತೋನ್ಯಾಶ್ಶತಂ ತ್ವಹಂ ॥ ೪೭ ॥

ಇತಿ ರಾಮವಚಃ ಶ್ರುತ್ವಾ ತುಷ್ಟಾಸ್ತಾಃ ಪುರಯೋಷಿತಃ ।
ನತ್ವಾ ರಾಮಂ ಯಯುಯುಸ್ಸರ್ವಾಸ್ತೂಷ್ಣೀಂ ಸ್ವಂ ಸ್ವಂ ಗೃಹಂ ಯಯುಃ॥೪೮

ತತಃ ಸ್ತ್ರೀಸ್ತಾವಿಸರ್ಜ್ಯಾಸೌ ರಾಮೋ ದಾಸೀಸ್ಸಮಾಹ್ವಯತ್ ।
ದೃಷ್ಟ್ವಾ ಕಾಮಪಿ ನೋ ದಾಸೀಂ ರಾಮೋ ದಾಸಾಂಸ್ತದಾಹ್ವಯತ್॥೪೯॥

---

೪೬. ಭೂಮಿಯ ಮಗನಾದ ನರಕಾಸುರನು ನಿಮ್ಮ ನಿಮ್ಮ ತಂದೆಯರನ್ನು ಜಯಿಸಿ ನಿಮ್ಮನ್ನು ಹಿಡಿದು ತಂದು ಕೊಲ್ಲಲು ಪ್ರಯತ್ನಿಸುವನು. ಆಗ ಆತನನ್ನೇ ಕೊಂದು ನಿಮ್ಮೆಲ್ಲರನ್ನೂ ಬಿಡಿಸುತ್ತೇನೆ.

೪೭. ಅನಂತರ ನಿಮ್ಮೆಲ್ಲರನ್ನೂ ನಾನೇ ಮದುವೆಯಾಗುತ್ತೇನೆ. ಆಗ ನನಗೆ ಹದಿನಾರುಸಾವಿರ ಜನ ಹೆಂಡತಿಯರಾಗುವರು. ಅವರ ಮೇಲೆ ನೀವು ನೂರುಜನ ಹೆಂಡತಿಯರೂ ಆಗುವಿರಿ. ಈಗ ನೀವು ಹೊರಡಿರಿ ಎಂದನು.

೪೮. ರಾಮನು ಹೀಗೆ ಹೇಳಿದುದನ್ನು ಕೇಳಿ ಆ ಪಟ್ಟಣದ ಹೆಂಗಸರು ಸಂತೋಷಗೊಂಡರು. ಅನಂತರ ರಾಮನಿಗೆ ನಮಸ್ಕರಿಸಿ ತಮ್ಮ ತಮ್ಮ ಮನೆಗೆ ಹೊರಟು ಹೋದರು.

೪೯. ರಾಮನು ಆ ಹೆಂಗಸರೆಲ್ಲರನ್ನೂ ಕಳುಹಿಸಿ ಬಿಟ್ಟು ಅನಂತರ ದಾಸಿಯರನ್ನು ಕರೆದನು. ಆಗ ಅಲ್ಲಿ ದಾಸಿಯರಾರೂ ಇರಲಿಲ್ಲ. ಅನಂತರ ದಾಸರನ್ನು ಕರೆದನು.

ತೇಷ್ವಪ್ಯೇಕಂ ನ ದೃಷ್ಟ್ವಾ ಸ ದ್ವಾರಪಾಲಾನ್ಸಮಾಹ್ವಯತ್ ।
ತಾನಪ್ಯದೃಷ್ಟ್ವಾ ರಾಮಸ್ತು ರಕ್ಷಕಾಂಶ್ಚ ಸಮಾಹ್ವಯತ್ ॥ ೫೦ ॥

ತೇಷ್ವಪ್ಯೇಕಂ ನ ದೃಷ್ಟ್ವಾ ಸ ರಾಘವಶ್ಚಾತಿವಿಸ್ಮಿತಃ ।
ವಿಮಾನಾಟ್ಟಾಲಮಾರುಹ್ಯ ಸೌಮಿತ್ರಿಂ ವೈ ಸಮಾಹ್ವಯತ್ ॥ ೫೧ ॥

ಊರ್ಮಿಲಾ ರಾಮವಾಕ್ಯಂ ತಚ್ಛ್ರುತ್ವಾ ತಂ ಚಾಲಯತ್ಪತಿಂ ।
ಊರ್ಮಿಲಾ ಚಾಲನಾಚ್ಚೀಘ್ರಂ ಪ್ರಬುದ್ಧೋಭೂತ್ಸ ಲಕ್ಷ್ಮಣಃ ॥ ೫೨ ॥

ರಾಮವಾಕ್ಯಂ ಸೋಪಿ ಶ್ರುತ್ವಾ ರತಿಶಾಲಾಬಹಿರ್ಯಯೌ ।
ದತ್ವಾ ಪ್ರತ್ಯುತ್ತರಂ ರಾಮಂ ಯಯೌ ವೇಗೇನ ಲಕ್ಷ್ಮಣಃ ॥ ೫೩ ॥

---

೫೦. ಆವರೂ ಒಬ್ಬರೂ ಇರಲಿಲ್ಲ. ಅವರನ್ನು ಅಲ್ಲಿ ಕಾಣಲೂ ಇಲ್ಲ. ಅನಂತರ ದ್ವಾರಪಾಲಕರನ್ನು ಕೂಗಿದನು. ಅವರೂ ಅಲ್ಲಿಲ್ಲದಿರಲು ರಕ್ಷಕರನ್ನು ಕೂಗಿದನು.

೫೧. ಅವರೂ ಅಲ್ಲಿ ಒಬ್ಬರೂ ಇಲ್ಲದಿರಲು ಅವನಿಗೆ ಬಹು ಆಶ್ಚರ್ಯವಾಯಿತು. ಅನಂತರ ವಿಮಾನದಮೇಲಿನ ಅಂತಸ್ತಿಗೆ ಹತ್ತಿ ಸೌಮಿತ್ರಿಯನ್ನು ಕರೆದನು.

೫೨. ಆಗ ಅಲ್ಲಿ ಲಕ್ಷ್ಮಣನ ಹೆಂಡತಿಯಾದ ಊರ್ಮಿಳೆಯು ಎಚ್ಚರಗೊಂಡು ರಾಮನ ಧ್ವನಿಯನ್ನು ಕೇಳಿ ಲಕ್ಷ್ಮಣನು ಎಚ್ಚರಗೊಳ್ಳದಿರಲು ಗಂಡನನ್ನು ಎಬ್ಬಿಸಲು ಅಲುಗಾಡಿಸಿದಳು. ಊರ್ಮಿಳೆಯು ಅಲುಗಾಡಿಸಲು ಆಗ ಲಕ್ಷ್ಮಣನು ಒಡನೆಯೇ ಎಚ್ಚರಗೊಂಡನು.

೫೩. ಅವನು ಆ ರಾಮನ ಧ್ವನಿಯನ್ನು ಕೇಳಿದ ಕೂಡಲೇ ರತಿಶಾಲೆಯಿಂದ ಹೊರಗೆ ಹೊರಟು ರಾಮನಿಗೆ ಪ್ರತ್ಯುತ್ತರವನ್ನು ಕೊಟ್ಟು ಬೇಗನೆ ರಾಮನಿರುವಲ್ಲಿಗೆ ಹೋದನು.

ಏತಸ್ಮಿನ್ನಂತರೇ ರಾಮೋ ರೋದನಂ ನಗರಾದ್ಬಹಿಃ ।
ಶುಶ್ರಾವ ಸ್ತ್ರೀಕೃತಂ ಘೋರಂ ಕಿಮಿದಂ ಚೇತಿ ವಿಸ್ಮಿತಃ ॥ ೫೪ ॥

ತತೋ ದೃಷ್ಟ್ವಾ ಸ ಸೌಮಿತ್ರಿಂ ಸರ್ವಂ ವೃತ್ತಂ ನ್ಯವೇದಯತ್ ।
ಲಕ್ಷ್ಮಣೋ ರಾಮವಾಕ್ಯಂ ತಚ್ಛ್ರುತ್ವಾ ದೂತಾನ್ನಿಜಾಂಸ್ತದಾ ॥ ೫೫ ॥

ಪ್ರೇಷ್ಯ ದೂತಾನ್ಕೀರ್ತನಸ್ಥಾನಾಹ್ವಯಾಮಾಸ ವೇಗತಃ ।
ರಾಮದೂತಾಸ್ತದೋಚುಸ್ತಾನ್ ಕಥಂ ಶ್ರೀರಾಮಕೀರ್ತನಂ ॥ ೫೬ ॥

ಅಸಮಾಪ್ತಂ ವಿಹಾಯಾದ್ಯ ಗಂತವ್ಯಂ ಸ್ವಾಮಿನಂ ಪ್ರತಿ ।
ತೇಷ್ವೇವ ಕೇಚಿದೂಚುಸ್ತೇ ಪಾಲನೀಯಾ ತು ಸೇವಕೈಃ ॥ ೫೭ ॥

---

೫೪. ಈವಸ ಯದಲ್ಲಿ ಪಟ್ಟಣದ ಹೊರಗಡೆಯಲ್ಲಿ ಯಾರೋ ಹೆಂಗಸರು ಅಳುತ್ತಿರುವ ಶಬ್ದವು ರಾಮನಿಗೆ ಕೇಳಿ ಬಂದಿತು. ಅದು ಬಹು ಮನೋವಿದ್ರಾವಕವಾಗಿ ಘೋರವಾಗಿದ್ದಿತು. ಇದೇನಿರಬಹುದೆಂದು ರಾಮನಿಗೆ ಆಶ್ಚರ್ಯವಾಯಿತು.

೫೫. ಲಕ್ಷ್ಮಣನು ತನ್ನ ಬಳಿಗೆ ಬರಲು ಅವನನ್ನು ನೋಡಿ ಆಗ ನಡೆದ ವಿಷಯಗಳೆಲ್ಲವನ್ನೂ ತಿಳಿಸಿದನು. ಲಕ್ಷ್ಮಣನು ರಾಮನ ಮಾತನ್ನು ಕೇಳಿ ತನ್ನ ಆಳುಗಳನ್ನು ಹತ್ತಿರಕ್ಕೆ ಬರುವಂತೆ ಹೇಳಿ ಕರೆದನು.

೫೬. ಅವರನ್ನು ಆ ಕೀರ್ತನೆಯ ಸ್ಥಾನದ ಬಳಿಗೆ ಕಳುಹಿಸಿ ರಾಮನ ಸೇವಕರನ್ನು ಕರೆಸಿದನು. ಅಲ್ಲಿದ್ದ ಕೆಲವರು ರಾಮದೂತರು ಲಕ್ಷ್ಮಣ ದೂತರನ್ನು ಕುರಿತು ಇನ್ನೂ ರಾಮಕೀರ್ತನೆಯು ಮುಗಿದಿರುವುದಿಲ್ಲ.

೫೭. ಈ ರಾಮನ ಕೀರ್ತನೆಯು ಮುಗಿಯದಿರುವಾಗ ಮಧ್ಯದಲ್ಲಿಯೇ ಬಿಟ್ಟು ಬಿಟ್ಟು ಪಾಪಿಗಳಾಗಿ ಸ್ವಾಮಿಯ ಬಳಿಗೆ ಹೇಗೆ ಹೋಗುವುದು? ಎಂದರು. ಅವರಲ್ಲಿ ಮತ್ತೆ ಕೆಲವರು ರಾಮಕೀರ್ತನೆಯು ಮುಗಿಯದಿದ್ದರೆ ಬೇಡ. ಸ್ವಾಮಿಯ ಅಪ್ಪಣೆಯನ್ನು ಸೇವಕರು ಮಾಡತಕ್ಕದ್ದು ಧರ್ಮವು.

ಪ್ರಭೋರಾಜ್ಞಾದ್ಯ ಚಾಸ್ಮಾಭಿರ್ನೋ ಚೇನ್ನಃ ಪಾತಕಂ ಸ್ಪೃಶೇತ್ ।
ಕೇಚಿದೂಚುರಿದಂ ತಸ್ಯ ಕೀರ್ತನಂ ಮಂಗಳಪ್ರದಂ ॥ ೫೮ ॥

ಸ್ವಾಮ್ಯಾಜ್ಞಾಭಂಗದೋಷಘ್ನಂ ಕಥಂ ತ್ಯಕ್ತ್ವಾ ಪ್ರಗಮ್ಯತಾಂ ।
ಕೇಚಿದೂಚುಃ ಕೀರ್ತನಸ್ಥಾನ್ ಶ್ರುತ್ವಾಸ್ಮಾನ್ ಸ ಸುಖೀ ಭವೇತ್ ॥ ೫೯ ॥

ಇತಿ ಸಂಧಿಗ್ಧಚಿತ್ತಾಸ್ತೇ ನ ತದಾ ರಾಘವಂ ಯಯುಃ ।
ತತೋ ಲಕ್ಷ್ಮಣದೂತಾಸ್ತೇ ರಾಮಂ ವೃತ್ತಂ ನ್ಯವೇದಯನ್ ॥ ೬೦ ॥

ತತಃ ಕಿಂಚಿತ್ ಕ್ರೋಧಯುಕ್ತ ಸ್ಸೌಮಿತ್ರಿಂ ಪ್ರಾಹ ರಾಘವಃ ।
ಮತ್ಕೀರ್ತನಸಮಾಸಕ್ತಾನ್ನಾಹಂ ದಂಡಯಿತುಂ ಕ್ಷಮಃ ॥ ೬೧ ॥

---

೫೮. ನಾವು ಈಗ ಪ್ರಭುವಿನ ಅಪ್ಪಣೆಯಂತೆ ನಡೆಯದಿದ್ದರೆ ನಮಗೆ ಪಾಪವು ಸಂಭವಿಸುವುದು ಎಂದರು. ಮತ್ತೆ ಕೆಲವರು ಇದು ಅವನ ಕೀರ್ತನೆಯೇ ಆಗಿದೆ. ಆ ಪಾಪವನ್ನು ನಾಶಮಾಡಿ ಮಂಗಳವನ್ನುಂಟುಮಾಡುತ್ತದೆ.

೫೯. ನಾವು ಸ್ವಾಮಿಯ ಅಪ್ಪಣೆಯಂತೆ ನಡೆಯದೆ ಇರುವುದರ ಪಾಪವನ್ನು ಅದು ನಾಶಮಾಡುತ್ತದೆ. ಇಂತಹದನ್ನು ಮಧ್ಯದಲ್ಲಿ ಬಿಟ್ಟು ಹೋಗುವುದು ಹೇಗೆ ? ಎಂದರು. ಮತ್ತೆ ಕೆಲವರು ಆ ಸ್ವಾಮಿಯ ಕೀರ್ತನೆಯ ಜಾಗದಲ್ಲಿದ್ದೇವೆಂದು ಕೇಳಿದ ಮಾತ್ರದಿಂದಲೇ ಆ ರಾಮನು ಸಂತೋಷಪಟ್ಟುಕೊಂಡು ನಮ್ಮ ವಿಷಯದಲ್ಲಿ ಸುಮುಖವಾಗಿರುವನು ಎಂದರು.

೬೦. ಅವರೆಲ್ಲರೂ ಈರೀತಿಯಾಗಿ ಸಂದೇಹಪಟ್ಟುಕೊಂಡು ವಿಷಯವನ್ನು ಇತ್ಯರ್ಥಮಾಡಲಾರದವರಾಗಿ ರಾಮನ ಬಳಿಗೆ ಹೋಗಲೇ ಇಲ್ಲ. ಆಗ ಲಕ್ಷ್ಮಣನ ದೂತರು ಹಿಂತಿರುಗಿ ಬಂದು ರಾಮನಿಗೆ ಅಲ್ಲಿ ನಡೆದ ವಿಷಯವನ್ನು ತಿಳಿಸಿದರು.

೬೧. ಇದರಿಂದ ರಾಮನಿಗೆ ಸ್ವಲ್ಪ ಕೋಪವು ಬಂದಿತು. ಆಗ ಲಕ್ಷ್ಮಣನನ್ನು ಕುರಿತು ಇಂತೆಂದನು. ಎಲೈ ಲಕ್ಷ್ಮಣನೇ ! ನನ್ನ ಕೀರ್ತನೆಯಲ್ಲಿ ಆಸಕ್ತರಾಗಿರತಕ್ಕವರನ್ನು ನಾನೇ ದಂಡಿಸುವುದು ಸರಿಯಲ್ಲ.

ತಥಾಪ್ಯೇತನ್ನ ಯೋಗ್ಯಂ ಹಿ ಕಿಂಚಿತ್ ಶಿಕ್ಷಾಂ ಕರೋಮ್ಯಹಂ ।
ಇತ್ಯುಕ್ತ್ವಾ ತಾಂ ತು ರುದತೀಂ ಪುನಃ ಶ್ರುತ್ವಾ ಬಹಿಃ ಪ್ರಭುಃ ॥ ೬೨ ॥

ವಿಮಾನಂ ಪ್ರಾಹ ಗಚ್ಛಾದ್ಯ ಬಹಿಃ ಪುರ್ಯಾಃ ಸ್ತ್ರಿಯಂ ಪ್ರತಿ ।
ತಥೇತಿ ರಾಮವಾಕ್ಯೇನ ಯಯೌ ತನ್ನಗರಾದ್ಬಹಿಃ ॥ ೬೩ ॥

ಯತ್ರ ಸಾತಿವಿಲಾಪಂ ಸ್ತ್ರೀ ಕರೋತಿ ಸರಯೂತಟೇ ।
ತಾಮಂಜನನಿಭಾಂ ನಾರೀಂ ರುದಂತೀಂ ರಾಘವೋಽಬ್ರವೀತ್ ॥ ೬೪ ॥

॥ ಶ್ರೀರಾಮ ಉವಾಚ ॥

ಕಿಂ ತೇ ದುಃಖಂ ವದಸ್ವಾದ್ಯ ಕಾ ತ್ವಂ ರೋದಿಷಿ ವೈ ಕಥಂ ।
ಇತಿ ರಾಮವಚಃ ಶ್ರುತ್ವಾ ಸಾ ರಾಮಂ ವಾಕ್ಯಮಬ್ರವೀತ್ ॥ ೬೫ ॥

---

೬೨. ಆದರೂ ಕೂಡ ಅವರಿಗೆ ಶಿಕ್ಷಿಸದಿರುವುದು ಯೋಗ್ಯವಲ್ಲ. ಆದ್ದರಿಂದ ಸ್ವಲ್ಪ ಶಿಕ್ಷೆಯನ್ನು ವಿಧಿಸುತ್ತೇನೆ! ಎಂದು ಹೇಳಿ ಪಟ್ಟಣದ ಹೊರಗಡೆಯಲ್ಲಿ ಅಳುತ್ತಿರುವುದು ಮತ್ತೆ ಕೇಳಿ ಬಂದಿತು.

೬೩. ಆಗ ರಾಮನು ವಿಮಾನವನ್ನು ಕುರಿತು ಪುಷ್ಪಕವೇ! ಈಗ ನೀನು ಪಟ್ಟಣದ ಹೊರಗಡೆ ಆ ಹೆಂಗಸು ಅಳುತ್ತಿರುವ ಜಾಗಕ್ಕೆ ಹೊರಡು ಎಂದನು. ಆ ವಿಮಾನವು ಹಾಗೇ ಆಗಲೆಂದು ಪಟ್ಟಣದ ಹೊರಗಡೆಗೆ ಆ ಹೆಂಗಸು ಅಳುತ್ತಿದ್ದ ಸ್ಥಳಕ್ಕೆ ಹೋಯಿತು.

೬೪. ಒಬ್ಬಳು ಹೆಂಗಸು ಸರಯೂ ನದಿಯ ದಡದಲ್ಲಿ ಕುಳಿತುಕೊಂಡು ಬಹುವಾಗಿ ದುಃಖಿಸುತ್ತಿದ್ದಳು. ನೀಲಮೇಘದಂತೆ ಬಣ್ಣವನ್ನು ಹೊಂದಿ ಬಹುವಾಗಿ ದುಃಖಿಸುತ್ತಿರುವ ಆಕೆಯನ್ನು ನೋಡಿ ರಾಮನು ಇಂತೆಂದು ಕೇಳಿದನು.

೬೫. ಶ್ರೀರಾಮನು ಹೇಳಿದನು—ಅಮ್ಮಾ ನಿನಗೆ ಈಗ ಬಂದಿರುವ ದುಃಖವೇನು? ನೀನಾರು? ಏತಕ್ಕೆ ಅಳುತ್ತಿದ್ದೀಯೆ? ಎಂಬುದಾಗಿ ರಾಮನು ಕೇಳಲು ಆಕೆಯು ರಾಮನನ್ನು ಕುರಿತು ಇಂತೆಂದಳು.

ಚಿರಕಾಲಂ ಕರೋಮ್ಯತ್ರ ರೋದನಂ ರಘುನಂದನ ।
ಅದ್ಯ ಶ್ರುತಂ ತ್ವಯಾ ರಾಮ ಕಿಂ ಚಿತ್ಪುಣ್ಯಚಯಾನ್ಮನೇಃ ॥ ೬೬ ॥

ನಿರ್ಮಿತಾ ವಿಧಿನಾ ಪೂರ್ವಂ ನಿದ್ರಾ ನಾಮ್ನಾ ತ್ವಹಂ ಪ್ರಭೋ ।
ದತ್ತಂ ತೇನ ಮಮ ಸ್ಥಾನಂ ಕುಂಭಕರ್ಣೇ ಚಿರಂ ಸುಖಂ ॥ ೬೭ ॥

ಯಾವತ್ಕಾಲಂ ಸ್ಥಿತಾ ರಾಮ ಸ ತ್ವಯಾ ನಿಹತೋ ರಣೇ ।
ತತೋ ನಷ್ಟನಿವಾಸಾಹಂ ಗತಾ ಶೀಘ್ರಂ ವಿಧಿಂ ಪ್ರತಿ ॥ ೬೮ ॥

ತೇನ ತ್ವಾಂ ಪ್ರೇಷಿತಾ ರಾಮ ತತಃ ಪ್ರಾಪ್ತಾ ತ್ವಿಮಾಂ ಪುರೀಂ ।
ಸೀಮಾಚಾರಭಯಾದಸ್ಯಾಂ ನಗರ್ಯಾಂ ನ ಗತಿರ್ಮಮ ॥ ೬೯ ॥

---

೬೬. ಎಲೈ ರಘುನಂದನನೇ ! ನಾನು ಬಹುಕಾಲದಿಂದ ಇಲ್ಲಿ ಅಳುತ್ತಲೇ ಇದ್ದೇನೆ. ದುಃಖಿನಿಯಾದ ನನ್ನ ಯಾವುದೋ ಒಂದು ಪುಣ್ಯವು ಫಲೋನ್ಮುಖ ವಾದುದರಿಂದ ಈದಿನ ನನ್ನ ಅಳುವು ನಿನ್ನ ಕಿವಿಗೆ ಬಿದ್ದಿತು.

೬೭. ಎಲೈ ಪ್ರಭುವೇ ! ನನ್ನ ಹೆಸರು ನಿದ್ರಾದೇವಿಯು. ನನ್ನನ್ನು ಬ್ರಹ್ಮನು ಪೂರ್ವದಲ್ಲಿಯೇ ನಿರ್ಮಿಸಿದನು. ನನಗೆ ಕುಂಭಕರ್ಣನಲ್ಲಿ ಸ್ಥಾನ ವನ್ನು ಕೊಟ್ಟಿದ್ದನು. ಅಲ್ಲಿ ನಾನು ಬಹುಕಾಲದವರೆಗೂ ಸುಖವಾಗಿದ್ದೆನು.

೬೮. ಅವನನ್ನು ನೀನು ಯುದ್ಧದಲ್ಲಿ ಕೊಂದುಬಿಟ್ಟೆ. ಆಗ ನನಗೆ ಇರಲು ಸ್ಥಳವಿಲ್ಲದೆ ಹೋದುದರಿಂದ ನಾನು ನನ್ನನ್ನು ನಿರ್ಮಿಸಿದ ಆ ಬ್ರಹ್ಮನ ಬಳಿಗೆ ಒಡನೆಯೇ ಹೋದೆನು.

೬೯. ಆ ಬ್ರಹ್ಮನು ನನ್ನನ್ನು ನಿನ್ನ ಬಳಿಗೆ ಕಳುಹಿಸಿದನು. ಅದರಿಂದ ನಾನು ನಿನ್ನ ಪಟ್ಟಣಕ್ಕೆ ಬಂದೆನು. ಈ ನಿನ್ನ ಪಟ್ಟಣದ ಎಲ್ಲೆಕಟ್ಟಿನ ಕಾವಲು ಗಾರರ ಭಯದಿಂದಲೂ ಆಚಾರದ ಭಯದಿಂದಲೂ ನಿನ್ನ ಪಟ್ಟಣದೊಳಕ್ಕೆ ಬರಲು ಸಾಧ್ಯವಾಗಲಿಲ್ಲ.

ಅತ್ರೈವ ಸಂಸ್ಥಿತಾ ರಾಮ ಶೋಚಂತೀ ಶರಯೂತಟೇ ।
ಮೇ ಸ್ಥಾನಂ ವದ ರಾಮಾದ್ಯ ಯತ್ರ ಸ್ಥಾಸ್ಯಾಮ್ಯಹಂ ಸುಖಂ ॥ ೭೦ ॥

ತತ್ತಸ್ಯಾ ವಚನಂ ಶ್ರುತ್ವಾ ರಾಘವೋ ವಾಕ್ಯಮಬ್ರವೀತ್ ।
ಸ್ಮೃತ್ವಾ ದೂತಕೃತಂ ಪೂರ್ವಂ ತದಾ ಕ್ರೋಧೇನ ಚೋದಿತಃ ॥ ೭೧ ॥

ನಿದ್ರೇ ಶ್ರುಣು ವಚೋ ಮೇದ್ಯ ತೇ ಸ್ಥಾನಂ ಕೀರ್ತಯಾಮ್ಯಹಂ ।
ಪಾಪಾತ್ಮಾನೋ ನರಾ ಭೂಮ್ಯಾಂ ಯೇ ಶ್ರುಣ್ವಂತಿ ಹಿ ಕೀರ್ತನಂ॥ ೭೨ ॥

ಪುರಾಣಶ್ರವಣಂ ವೇದಪಠನಂ ಪೂಜನಂ ಜಪಂ ।
ತಪೋ ಧ್ಯಾನಂ ಚ ಹೋಮಾದಿ ಯದ್ಯತ್ಕುರ್ವಂತಿ ಪಾಪಿನಃ ॥ ೭೩ ॥

---

೭೦. ಆದ್ದರಿಂದ ನಾನು ದುಃಖಿಸುತ್ತ ಈ ಸರಯೂ ನದಿಯ ದಡದಲ್ಲಿಯೇ ನಿಂತೆನು. ಎಲೈ ರಾಮನೇ ! ಆದ್ದರಿಂದ ನಾನು ಸುಖವಾಗಿ ಬಹು ಕಾಲದವರೆಗೂ ಇರಲಾಗುವಂತಹ ಒಂದು ಸ್ಥಳವನ್ನು ನನಗೆ ಹೇಳು ಎಂದಳು.

೭೧. ಆಕೆಯು ಹೇಳಿದ ಈ ಮಾತನ್ನು ರಾಮನು ಕೇಳಿ ಅವಳನ್ನು ಕುರಿತು ಇಂತೆಂದನು. ಒಡನೆಯೇ ದೂತರು ಹೇಳಿದ ಆ ಮಾತನ್ನೂ ಜ್ಞಾಪಿಸಿಕೊಂಡನು. ಆದ್ದರಿಂದ ಕೋಪವೂ ಬಂದಿದ್ದಿತು. ಅದರಿಂದ ದೂತರಿಗೆ ಶಿಕ್ಷೆಯನ್ನು ವಿಧಿಸಬೇಕೆಂದು ಮಾಡಿಕೊಂಡಿದ್ದನು.

೭೨. ಆಗ ಎಲೈ ನಿದ್ರೆಯೇ ! ನನ್ನ ಮಾತನ್ನು ಕೇಳು. ನಿನಗೆ ಇರಲು ಜಾಗವನ್ನು ಹೇಳುತ್ತೇನೆ. ಭೂಮಿಯಲ್ಲಿ ಪಾಪಿಗಳಾದವರು ಕೀರ್ತನೆಗಳನ್ನು ಕೇಳುತ್ತಾರೆ.

೭೩. ಪುರಾಣವನ್ನು ಕೇಳುತ್ತಾರೆ. ವೇದದ ಪಠನವನ್ನು ಕೇಳುತ್ತಾರೆ. ಪೂಜೆಮಾಡುತ್ತಾರೆ. ತಪಸ್ಸನ್ನು ಮಾಡುತ್ತಾರೆ. ಧ್ಯಾನಿಸುತ್ತಾರೆ. ಹೋಮಾದಿಗಳನ್ನು ಮಾಡುತ್ತಾರೆ. ಅಲ್ಲದೆ ಇನ್ನು ಯಾವುಯಾವುದು ಒಳ್ಳೆಯದಿದೆಯೋ ಅದೆಲ್ಲವನ್ನೂ ಮಾಡುತ್ತಾರೆ.

ತೇಷು ತ್ವಂ ತಿಷ್ಠ ಮದ್ವಾಕ್ಯಾದ್ಧೀನದೈವನರೇಷ್ವಪಿ ।
ಜಡೇ ಬಾಲೇಥ ಗುರ್ವಿಣ್ಯಾಮುಪವಾಸೋತ್ತರಾಶಿತೇ ॥ ೭೪ ॥

ತಥಾ ವಿದ್ಯಾರ್ಥಿನಿ ಶ್ರಾಂತೇ ವಾಂತೇ ಜಾಗರಕಾಮುಕೇ ।
ಏತೇಷು ತೇ ಸ್ಥಲಂ ದತ್ತಮೇತಾನ್ಮೋಹಯ ಮದ್ವರಾತ್ ॥ ೭೫ ॥

ತದ್ರಾಮವಚನಂ ಶ್ರುತ್ವಾ ಸಾ ತುಷ್ಟಾ ಪ್ರಣನಾಮ ತಂ ।
ಯಯೌ ರಾಮಃ ಸ್ವನಗರೀಂ ಸುಖಂ ನಿದ್ರಾಂ ಚಕಾರ ವೈ । ॥ ೭೬ ॥

ತದಾರಭ್ಯ ಪುರೋಕ್ತೇಷು ವಾಸಂ ನಿದ್ರಾಕರೋತ್ಸುಖಂ ।
ಪಾಪಾತ್ಮನಾಮತೋ ನಿದ್ರಾ ಬಾಧತೇ ಪುಣ್ಯಕರ್ಮಸು ॥ ೭೭ ॥

೭೪–೭೫. ನೀನು ನನ್ನ ಮಾತಿನಂತೆ ಅಂತಹ ಪಾಪಿಗಳೂ ದುರದೃಷ್ಟದವರೂ ಆದವರಲ್ಲಿಯೂ, ಜಡರಲ್ಲಿಯೂ, ಬಾಲಕರಲ್ಲಿಯೂ, ಗರ್ಭಿಣಿಯರಲ್ಲಿಯೂ, ಉಪವಾಸಮಾಡಿ ಊಟಮಾಡಿದವರಲ್ಲಿಯೂ, ವಿದ್ಯಾರ್ಥಿಗಳಲ್ಲಿಯೂ, ಶ್ರಮಪಟ್ಟಿರುವವರಲ್ಲಿಯೂ, ವಾಂತಿಮಾಡಿದವರಲ್ಲಿಯೂ, ಜಾಗರಣೆ ಮಾಡಿದವರಲ್ಲಿಯೂ, ಕಾಮುಕರಲ್ಲಿಯೂ ಇದ್ದುಕೊಂಡಿರು. ಅಲ್ಲಿ ನಿನಗೆ ಸ್ಥಲವನ್ನು ಕೊಟ್ಟಿದ್ದೇನೆ. ಇವರನ್ನು ನನ್ನ ವರದ ಬಲದಿಂದ ಮೋಹದಲ್ಲಿ ಬಿದ್ದಿರುವಂತೆ ಮಾಡು.

೭೬. ರಾಮನ ಈ ಮಾತನ್ನು ಕೇಳಿ ಆ ನಿದ್ರಾದೇವಿಯು ಸಂತೋಷಗೊಂಡು ಅವನಿಗೆ ನಮಸ್ಕರಿಸಿದಳು. ಅನಂತರ ರಾಮನು ತನ್ನ ಪಟ್ಟಣಕ್ಕೆ ಹೊರಟು ಹೋಗಿ ಮಲಗಿ ಸುಖವಾಗಿ ನಿದ್ರಿಸಿದನು.

೭೭. ಅದುಮೊದಲುಗೊಂಡು ನಿದ್ರಾದೇವಿಯು ಮೇಲೆ ಹೇಳಿದವರಲ್ಲಿ ಸುಖವಾಗಿ ವಾಸಮಾಡುತ್ತಿರುವಳು. ಆದ್ದರಿಂದಲೇ ಪುಣ್ಯಕರ್ಮಗಳಲ್ಲಿ ಪಾಪಿಗಳಿಗೆ ನಿದ್ರೆಯೇ ಬಾಧಿಸುತ್ತದೆ.

ತದಾರಭ್ಯ ಸೇವಕೇಷು ನರೇಷ್ವಪ್ಯವನೀಪತೌ ।
ನಿದ್ರಾಗ್ರಸ್ತೇಷು ಪುಣ್ಯಾತ್ಮಾ ಸಹಸ್ರೇಷ್ವಪಿ ಕಶ್ಚನ ॥ ೭೮ ॥

ಶುಶ್ರಾವ ತತ್ಕೀರ್ತನಾದಿ ಚಕಾರ ಪೂಜನಾದಿಕಂ ।

॥ ಶ್ರೀರಾಮದಾಸ ಉವಾಚ ॥

ಅಥಾನ್ಯಾಂ ಸಂಪ್ರವಕ್ಷ್ಯಾಮಿ ಕಥಾಂ ಸೀತಾಯಶಸ್ಕರೀಂ ॥ ೭೯ ॥

ಕುಂಭಕರ್ಣಸ್ಯ ಪುತ್ರಸ್ಯ ನಿಕುಂಭಸ್ಯ ಚ ಗುರ್ವಿಣೀ ।
ಪ್ರಸೂತ್ಯರ್ಥಂ ಚ ಷಣ್ಮಾಸೇ ಪಿತುರ್ಗೇಹಂ ಗತಾ ಪ್ರಿಯಾ ॥ ೮೦ ॥

ರಾವಣಾದಿವಧೇ ಜಾತೇ ತಸ್ಯಾಂ ಜಾತಸ್ತು ಪೌಂಡ್ರಕಃ ।
ಮಾಯಾಪುರ್ಯಾಂ ಶತಶಿರಾಃ ಪುರಾ ದ್ವಿಶತಹಸ್ತಕಃ ॥ ೮೧ ॥

---

೭೮. ಸೇವಕರಾದ ಜನರಲ್ಲಿಯೂ, ರಾಜರಲ್ಲಿಯೂ, ನಿದ್ರೆಯು ವ್ಯಾಪಿಸುತ್ತ ಬಂದಿತು. ಈ ನಿದ್ದೆಯು ಹೀಗೆ ಆಕ್ರಮಿಸುತ್ತಿರುವವರಲ್ಲಿ ಈ ರೀತಿಯಾಗಿರುವ ಸಾವಿರ ಜನರಲ್ಲಿ ಪುಣ್ಯಾತ್ಮನಾದವನು ನಿದ್ದೆಯಿಲ್ಲದೇ ಯಾವನೋ ಒಬ್ಬನು ಇರಬಹುದು.

೭೯. ಅಂತಹವನು ಶ್ರೀರಾಮನ ಕೀರ್ತನೆಯನ್ನು ಕೇಳುವನು. ಪೂಜೆ ಮುಂತಾದುವನ್ನು ಮಾಡುವನು. ಶ್ರೀ ರಾಮದಾಸನು ಹೇಳಿದನು—ಸೀತೆಯ ಯಶಸ್ಸನ್ನು ಹರಡುವ ಮತ್ತೊಂದು ಕಥೆಯನ್ನು ಹೇಳುತ್ತೇನೆ. ಅದನ್ನು ಮನಸ್ಸಿಟ್ಟು ಕೇಳು.

೮೦. ಕುಂಭಕರ್ಣನಿಗೆ ನಿಕುಂಭನೆಂಬ ಮಗನಿದ್ದನು. ಅವನ ಹೆಂಡತಿಯು ಗರ್ಭಿಣಿಯಾಗಿದ್ದಳು. ಅವಳು ಹೆರಿಗೆಗೋಸ್ಕರ ಆರನೆಯ ತಿಂಗಳಲ್ಲಿಯೇ ಬೇರೆಯ ದ್ವೀಪದಲ್ಲಿದ್ದ ತಂದೆಯ ಮನೆಗೆ ಹೋದಳು.

೮೧. ರಾವಣನೇ ಮುಂತಾದವರನ್ನು ರಾಮನು ಕೊಂದಮೇಲೆ ಅವಳಲ್ಲಿ ಗಂಡು ಮಗುವು ಹುಟ್ಟಿತು. ಅವನ ಹೆಸರು ಪೌಂಡ್ರಕನೆಂದು. ಮಾಯಾಪುರಿಯಲ್ಲಿ ಇನ್ನೂರು ಕೈಗಳೂ, ನೂರುತಲೆಗಳೂ ಉಳ್ಳವನೊಬ್ಬ ರಾವಣನಿದ್ದನು.

ಶ್ರೋಣಾನದೀತಟೇ ಚಾಸೀದ್ರಾವಣಃ ಕ್ಷೀರಸಾಗರೇ |
ಸಹಾಯಾತ್ಪೌಂಡ್ರಕಸ್ತಸ್ಯೋದ್ವೇಜಯಿತ್ವಾ ವಿಭೀಷಣಂ ॥ ೮೨ ॥

ಶತಾನನೇನ ವೈ ಸಾರ್ಧಂ ಲಂಕಾರಾಜ್ಯಂ ಚಕಾರ ಸಃ ॥
ತತೋ ವಿಭೀಷಣೋ ರಾಮಂ ಗತ್ವಾ ಸರ್ವಂ ನ್ಯವೇದಯತ್ ॥ ೮೩ ॥

ಸೀತಾವಿಭೀಷಣಾಭ್ಯಾಂ ವೈ ರಾಮೋ ಲಂಕಾಂ ಯಯೌ ದ್ರುತಂ |
ನಿಹತ್ಯ ರಾವಣಂ ಸೀತಾ ಯುದ್ಧೇ ರಾಮೋ ಜಿತೇಽಥ ತಂ ॥ ೮೪ ॥

ವಿಭೀಷಣಾಯ ತಾಂ ಲಂಕಾಂ ಹತ್ವಾ ತಂ ಪೌಂಡ್ರಕಂ ದದೌ |
ಅಥೈಕದಾ ಸಭಾಸಂಸ್ಥಂ ರಾಘವಂ ಸ ವಿಭೀಷಣಃ ॥ ೮೫ ॥

---

೮೨. ಆ ಮಾಯಾಪುರಿಯು ಕ್ಷೀರಸಾಗರದ ಬಳಿ ಶ್ರೋಣಾನದಿಯ ತೀರದಲ್ಲಿ ಇದ್ದಿತು. ಈ ಪೌಂಡ್ರಕನು ಮಾಯಾವತಿಯಲ್ಲಿದ್ದ ಶತಕಂಠ ರಾವಣನ ಸಹಾಯವನ್ನು ಪಡೆದನು.

೮೩. ಅವನ ಸಹಾಯದಿಂದ ಪೌಂಡ್ರಕನು ತನ್ನ ಚಿಕ್ಕತಾತನಾದ ವಿಭೀಷಣನನ್ನು ಕೆಣಕಿ ಅವನನ್ನು ಸೋಲಿಸಿ ಓಡಿಸಿ ಆ ಲಂಕಾರಾಜ್ಯವನ್ನು ತಾನು ಆಳುತ್ತಿದ್ದನು. ಇತ್ತ ವಿಭೀಷಣನು ರಾಮನ ಬಳಿಗೆ ಹೋಗಿ ಎಲ್ಲ ವಿಷಯವನ್ನೂ ವಿಜ್ಞಾಪಿಸಿದನು.

೮೪. ಒಡನೆಯೇ ರಾಮನು ಸೀತೆಯನ್ನು ಕರೆದುಕೊಂಡು ವಿಭೀಷಣನೊಡನೆ ಲಂಕೆಗೆ ಹೋದನು. ಅಲ್ಲಿ ಶತಕಂಠ ರಾವಣನೊಡನೆ ರಾಮನು ಯುದ್ಧ ಮಾಡಿ ಸೋತು ಹೋದನು. ಆಗ ಸೀತೆಯು ತಾನೇ ಯುದ್ಧಕ್ಕೆ ನಿಂತು ಆ ಶತಕಂಠನನ್ನು ಕೊಂದಳು

೮೫ ಅನಂತರ ರಾಮನು ಪೌಂಡ್ರಕನೊಡನೆಯೂ ಯುದ್ಧಮಾಡಿ ಅವನನ್ನು ಕೊಂದು ವಿಭೀಷಣನಿಗೆ ಲಂಕಾರಾಜ್ಯವನ್ನು ಮತ್ತೆ ಕೊಟ್ಟು ಅಯೋಧ್ಯೆಗೆ ಹೊರಟು ಹೋದನು. ರಾಮನು ಹೀಗೆ ಅಯೋಧ್ಯೆಯಲ್ಲಿ ರಾಜ್ಯಭಾರ ಮಾಡುತ್ತ ಸಭೆಯಲ್ಲಿ ಕುಳಿತಿರುವಾಗ ವಿಭೀಷಣನು ಮತ್ತೆ ಅವನಲ್ಲಿಗೆ ಬಂದನು.

ಯಯೌ ವಿಷಣ್ಣಸ್ಸಚಿವೈಶ್ಚತುರ್ಭಿಸ್ಸಸುತಃ ಸ್ತ್ರಿಯಾ ।
ನತ್ವಾ ರಾಮಂ ಸಾಶ್ರುನೇತ್ರಶ್ಶೋಚನ್ಭೃಶಂ ಕಂಪಿತಾಧರಃ ॥ ೮೬ ॥

ಉವಾಚ ಸಕಲಂ ವೃತ್ತಂ ಲಂಕಾಯಾಃ ಪ್ರಸ್ಖಲದ್ಗಿರಾ ।
ರಾಮ ರಾಜೀವಪತ್ರಾಕ್ಷ ತ್ರಾಹಿ ಮಾಂ ಶರಣಾಗತಂ ॥ ೮೭ ॥

ಮೂಲರ್ಕ್ಷೇ ಕುಂಭಕರ್ಣೇನ ಜಾತಃ ಪುತ್ರಃ ಪುರಾ ವನೇ ।
ದೂತೈಸ್ತ್ಯಕ್ತೋ ವೃಕ್ಷಮೂಲೇ ಬಾಲಕಸ್ತತ್ರ ವರ್ಧಿತಃ ॥ ೮೮ ॥

ಮಕ್ಷಿಕಾಭಿಃ ಸ್ರವಮನಜಲಸ್ಯ ಬಿಂದುಭಿರ್ಮುಹುಃ ।
ಸೋಽಧುನಾ ತರುಣಃ ಶ್ರುತ್ವಾ ತ್ವತ್ಕೃತಂ ಸ್ವಕುಲಕ್ಷಯಂ ॥ ೮೯ ॥

---

೮೬. ಆಗ ತನ್ನ ನಾಲ್ಕುಜನ ಮಂತ್ರಿಗಳೊಡನೆಯೂ, ಹೆಂಡತಿ, ಮಕ್ಕಳೊಡನೆಯೂ ಬಂದನು. ರಾಮನಿಗೆ ನಮಸ್ಕಾರಮಾಡಿ ಕಣ್ಣೀರನ್ನು ಸುರಿಸುತ್ತಾ ಅಳುತ್ತ ನಿಂತುಕೊಂಡನು. ಅವನಿಗುಂಟಾದ ದುಃಖದಿಂದ ತುಟಿಗಳೂ ಕೂಡ ನಡುಗುತ್ತಿದ್ದುವು.

೮೭. ಆಗ ಗದ್ಗದ ಧ್ವನಿಯಿಂದ ಅಳುತ್ತ ಲಂಕೆಯ ವಿಷಯವಾದ ಮಾತುಗಳೆಲ್ಲವನ್ನೂ ತಿಳಿಸಿದನು. ಎಲೈ ರಾಮನೇ! ರಾಜೀವ ಪತ್ರಾಕ್ಷನೇ! ನಾನು ಶರಣು ಬಂದಿದ್ದೇನೆ. ನನ್ನನ್ನು ಕಾಪಾಡು ಎಂದು ಇಂತೆಂದನು.

೮೮. ಪೂರ್ವದಲ್ಲಿ ಕುಂಭಕರ್ಣನಿಗೆ ಮೂಲಾನಕ್ಷತ್ರದಲ್ಲಿ ಒಬ್ಬ ಮಗನು ಹುಟ್ಟಿದನು. ಅದು ಕೆಟ್ಟ ನಕ್ಷತ್ರವೆಂದು ಆ ಮಗುವನ್ನು ದೂತರ ಕೈಯಲ್ಲಿ ಕಾಡಿನಲ್ಲಿ ಬಿಟ್ಟು ಬಿಡುವಂತೆ ಕೊಟ್ಟು ಕಳುಹಿಸಿದರು. ಅವರು ಅದನ್ನು ಕೊಲ್ಲದೆ ಕಾಡಿನಲ್ಲಿ ಒಂದುಮರದ ಬುಡದಲ್ಲಿಟ್ಟು ಬರಲು ಆ ಮಗುವು ಅಲ್ಲಿಯೇ ಬೆಳೆಯಿತು.

೮೯. ಮರದಮೇಲೆ ಜೇನು ಕಟ್ಟಿರಲು ಆ ಜೇನು ಹುಳುಗಳ ಬಾಯಿಂದ ಹೊರಬಿದ್ದ ಜೇನಿನಿಂದಲೇ ಆ ಮಗುವು ಬೆಳೆಯಿತು. ಅವನು ಈಗ ತರುಣನಾಗಿ ಸಮರ್ಥನಾಗಿರುವನು. ಅವನು ನೀನು ತನ್ನ ವಂಶವನ್ನು ನಾಶಮಾಡಿದನೆಂದು ತಿಳಿದನು.

ತಪಸಾ ತೋಷ್ಯ ಬ್ರಹ್ಮಾಣಂ ತದ್ವರೇಣಾತಿಗರ್ವಿತಃ ।
ಪಾತಾಲಸ್ಥೈ ರಾಕ್ಷಸೈಶ್ಚ ಲಂಕಾಯಾಂ ಸಮುಪಾಗತಃ ॥ ೯೦ ॥

ಮಯಾ ತೇನ ತು ಷಣ್ಮಾಸಂ ಕೃತಂ ಯುದ್ಧಂ ಮಹತ್ತಮಂ ।
ಮಾಂ ಜಿತ್ವಾ ಸ ಪುರೀಂ ಯಾತಸ್ತದಾಹಂ ಸಚಿವೈಃ ಸ್ತ್ರಿಯಾ ॥ ೯೧ ॥

ಸಪುತ್ರೋ ಗುಪ್ತಮಾರ್ಗೇಣ ಭೂಮಿಜೇನ ಪಲಾಯಿತಃ ।
ಶನೈರ್ವಿವರಮಾರ್ಗೇಣ ಲಂಕಾಯಾಂ ಯೋಜನೋಪರಿ ॥ ೯೨ ॥

ರಾತ್ರೌ ಬಹಿರ್ವಿನಿರ್ಗತ್ಯ ವಿವರಾತ್ತ್ವಾಂ ಸಮಾಗತಃ ।
ಮೂಲರ್ಕ್ಷೇ ಯತ್ಸಮುತ್ಪನ್ನಸ್ತರುಮೂಲೇ ವಿವರ್ಧಿತಃ ॥ ೯೩ ॥

---

೯೦. ಒಡನೆಯೇ ತಪಸ್ಸಿಗೆ ಹೋಗಿ ಬ್ರಹ್ಮನಿಂದ ವರವನ್ನು ಪಡೆದನು. ಆ ವರದಿಂದ ಬಹು ಗರ್ವಿಷ್ಠನಾಗಿರುವನು. ಅನಂತರ ಪಾತಾಳದಲ್ಲಿದ್ದ ರಾಕ್ಷಸರನ್ನು ಕರೆದುಕೊಂಡು ಲಂಕೆಗೆ ಬಂದನು.

೯೧. ನನ್ನೊಡನೆ ಯುದ್ಧಕ್ಕೆ ನಿಲ್ಲಲು ನಾನು ಅವನೊಡನೆ ಆರುತಿಂಗಳ ವರೆಗೂ ಯುದ್ಧವನ್ನು ಮಾಡಿದೆನು. ಕೊನೆಗೆ ಅವನು ನನ್ನನ್ನು ಗೆದ್ದು ಲಂಕೆಗೆ ನುಗ್ಗಿದನು.

೯೨. ಆಗ ನಾನು ಈ ಮಂತ್ರಿಗಳೊಡನೆಯೂ, ಹೆಂಡತಿಯರೊಡನೆಯೂ ಮಕ್ಕಳೊಡನೆಯೂ ಭೂಮಿಯೊಳಗಡೆಯಲ್ಲಿ ನಿರ್ಮಿಸಿದ್ದ ಗುಟ್ಟಾದ ದಾರಿಯಿಂದ ಹೊರಟು ಆ ಸಂದಿನಲ್ಲಿ ನಿಧಾನವಾಗಿ ಬರುತ್ತ ಲಂಕೆಗೆ ಒಂದು ಯೋಜನದೂರವ ವರೆಗೂ ಇರುವ ಅದನ್ನು ದಾಟಿ ಬಂದೆನು.

೯೩-೯೪. ರಾತ್ರಿಯಲ್ಲಿಯೇ ಹೊರಕ್ಕೆ ಹೊರಟು ನಿನ್ನ ಬಳಿಗೆ ಬಂದೆನು. ಮೂಲಾನಕ್ಷತ್ರದಲ್ಲಿ ಹುಟ್ಟಿ ಮರದ ಬುಡದಲ್ಲಿ ಬೆಳೆದ ಆತನು ಮೂಲಕನೆಂಬ

ಮೂಲಕಾಸುರನಾಮ್ನಾತಃ ಪರಾಂ ಖ್ಯಾತಿಂ ಗತೋಽಧುನಾ ।
ಸಂಗರೇ ತೇನ ಮಾಮುಕ್ತಮಾದೌ ತ್ವಾಂ ತು ವಿಭೀಷಣಂ ॥ ೯೪ ॥

ಹತ್ವಾ ಲಂಕಾಪುರೀಂ ಪ್ರಾಪ್ಯ ತತೋ ಗಚ್ಛಾಮಿ ರಾಘವಂ ।
ಮತ್ಪಿತಾ ನಿಹತೋ ಯೇನ ನಿಹತಂ ಸಕಲಂ ಕುಲಂ ॥ ೯೫ ॥

ತಂ ರಾಮಂ ಸಂಗರೇ ಹತ್ವಾನೃಣ್ಯಂ ಗಚ್ಛಾಮ್ಯಹಂ ಪಿತುಃ ।
ಆಗಮಿಷ್ಯತಿ ಸೋಽತ್ರಾಪಿ ತ್ವಾಂ ಯೋದ್ಧುಂ ರಘುನಂದನ ॥ ೯೬ ॥

ಇದಾನೀಂ ಯುದ್ಧಿತಂ ಚಾಗ್ರೇ ತತ್ಕುರುಷ್ವ ರಘೂತ್ತಮ ।
ತತ್ತಸ್ಯ ಸಕಲಂ ವೃತ್ತಂ ಶ್ರುತ್ವಾ ರಾಮೋಽತಿವಿಸ್ಮಿತಃ ॥ ೯೭ ॥

ಹೆಸರನ್ನು ಹೊಂದಿ ಬಹು ಪ್ರಸಿದ್ಧಿಗೆ ಬಂದಿರುವನು. ಅವನು ನನ್ನೊಡನೆ ಯುದ್ಧ ಮಾಡುತ್ತಿರುವಾಗ ನನ್ನನ್ನು ಕುರಿತು ಇಂತೆಂದು ಹೇಳಿದನು.

೯೫. ಎಲೈ ವಿಭೀಷಣನೇ ! ಮೊದಲು ನಿನ್ನನ್ನು ಕೊಂದು ಲಂಕಾ ಪುರಿಯನ್ನು ಸ್ವಾಧೀನವನ್ನಾಗಿ ಮಾಡಿಕೊಂಡು ಅನಂತರ ರಾಮನಮೇಲೆ ದಂಡೆತ್ತಿ ಹೋಗುವೆನು. ನನ್ನ ತಂದೆಯನ್ನ ಅವನು ಕೊಂದಿರುವುದಲ್ಲದೆ ನನ್ನ ಕುಲವನ್ನೇ ನಾಶಮಾಡಿರುವನು.

೯೬. ಅಂತಹ ರಾಮನನ್ನು ಯುದ್ಧದಲ್ಲಿ ಕೊಂದು ನಾನು ನನ್ನ ತಂದೆಯ ಋಣವನ್ನು ತೀರಿಸಿಕೊಳ್ಳುವೆನು. ಎಂದು ಹೇಳಿರುವುದರಿಂದ ಅವನು ನಿನ್ನ ಮೇಲೆಯೂ ಯುದ್ಧಕ್ಕೆ ಬರುವನು.

೯೭. ಎಲೈ ರಾಮನೇ ! ಮುಂದೆ ಅನುಕೂಲವಾಗಲು ಯಾವ ರೀತಿ ಯಲ್ಲಿ ಸಿದ್ಧಪಡಿಸಿಕೊಳ್ಳಬೇಕೋ ಆ ರೀತಿಯಾಗಿ ಮಾಡಿಕೋ. ಈ ಮೂಲ ಕಾಸುರನ ವಿಷಯಗಳೆಲ್ಲವನ್ನೂ ಕೇಳಿ ರಾಮನು ಬಹುವಾಗಿ ಆಶ್ಚರ್ಯಪಟ್ಟನು.

ಲಕ್ಷ್ಮಣಂ ಪ್ರಾಹ ವೇಗೇನ ಪಾರ್ಥಿವಾನ್ ಜಗತೀತಲೇ |
ಸ್ವಸ್ವರಾಜ್ಯಸ್ಥಿತಾನ್ ಸರ್ವಾನ್ದೂತೈರಾಕಾರಯಾಧುನಾ || ೯೮ ||

ತಥೇತಿ ರಾಮವಚನಾದ್ದೂತಾನಾಜ್ಞಾಪಯತ್ತದಾ |
ಲಕ್ಷ್ಮಣಸ್ತೇಽಪಿ ವೇಗೇನ ಗತ್ವಾ ದೂತಾಃ ಸಮಾಗತಾಃ || ೯೯ ||

ಪ್ರೋಚುಸ್ಸಭಾಯಾಂ ಶ್ರೀರಾಮಂ ನೃಪಾಣಾಂ ವಚನಾನಿ ತೇ |
ಕೇಚಿನ್ನೃಪಾಃ ಪಾಲಯಂತಿ ತವಾಜ್ಞಾಂ ರಘುನಂದನ || ೧೦೦ ||

ಕೇಚಿನ್ನ ಪಾಲಯಂತ್ಯಾಜ್ಞಾಂ ತವ ತತ್ಕಾರಣಂ ಶೃಣು |
ಚಂಪಿಕಾಯಾ ಸುಮತ್ಯಾಶ್ಚ ಸ್ವಯಂವರಸಮುದ್ಭವಂ || ೧೦೧ ||

---

೯೮. ಅನಂತರ ಲಕ್ಷ್ಮಣನನ್ನು ಕುರಿತು ಎಲೈ ಲಕ್ಷ್ಮಣನೇ ! ಎಲ್ಲಾ ರಾಜ್ಯಗಳಿಗೂ ದೂತರನ್ನು ಕಳುಹಿಸಿ ಅವರವರ ರಾಜ್ಯದಿಂದ ಅವರವರನ್ನು ಬೇಗನೆ ಕರೆಸು. ಆ ರೀತಿಯಾಗಿ ಭೂತಲದಲ್ಲಿರುವ ರಾಜರೆಲ್ಲರೂ ಈಗಲೇ ಬರಲಿ ಎಂದನು.

೯೯. ಲಕ್ಷ್ಮಣನು ಹಾಗೆಯೇ ಆಗಲೆಂದು ಹೇಳಿ ದೂತರನ್ನು ಕರೆಸಿ ಅವರಿಗೆ ರಾಮನು ಹೇಳಿದುದನ್ನೆಲ್ಲಾ ಹೇಳಿ ಅಪ್ಪಣೆಮಾಡಿ ಕಳುಹಿಸಿದನು ಆ ದೂತರೆಲ್ಲರೂ ತಮತಮಗೆ ಅಪ್ಪಣೆಮಾಡಿರುವ ರಾಜ್ಯಕ್ಕೆ ಹೋಗಿ ಬೇಗನೆ ಹಿಂದಿರುಗಿ ಬಂದರು.

೧೦೦. ಅವರೆಲ್ಲರೂ ಸಭೆಯಲ್ಲಿ ಕುಳಿತಿರುವ ಆ ರಾಮನ ಬಳಿಗೆ ಹೋಗಿ ತಾವು ತಾವು ಹೋಗಿದ್ದ ರಾಜ್ಯದ ರಾಜರುಗಳ ವಿಷಯವನ್ನು ಹೇಳಿದರು. ಎಲೈ ರಾಮನೇ ! ಕೆಲವರು ನಿನ್ನ ಅಪ್ಪಣೆಯನ್ನು ಪಾಲಿಸುತ್ತಾರೆ.

೧೦೧. ಕೆಲವರು ನಿನ್ನ ಅಪ್ಪಣೆಯನ್ನು ಗೌರವಿಸದೆ ಅದರಂತೆ ಮಾಡುವುದಿಲ್ಲ. ಅದಕ್ಕೆ ಕಾರಣವನ್ನು ಹೇಳುತ್ತೇನೆ ಕೇಳು. ಅವರೆಲ್ಲರೂ ಕೂಡ ಚಂಪಿಕೆಯ ಮತ್ತು ಸುಮತಿಯರ ಸ್ವಯಂವರಕ್ಕೆ ಬಂದಿದ್ದರಷ್ಟೆ !

ದುಃಖಂ ಹೃದಯಸಂಸ್ಥಂ ಯತ್ತದದ್ಯಾಪಿ ಗತಂ ನ ಹಿ ।
ಯೂಪಕೇತುಶರಾಘಾತಭಿನ್ನಮರ್ಮಸ್ಥಲಾಃ ಪುನಃ ॥ ೧೦೨ ॥

ಸ್ಮೃತ್ವಾ ಮದನಸುಂದರ್ಯಾ ದುಃಖಂ ಕಾಂತ್ಯುದ್ಭವಂ ನೃಪಾಃ ।
ಆಜ್ಞಾಂ ನ ಪಾಲಯಂತ್ಯದ್ಯ ತವ ರಾಘವ ಸತ್ಪ್ರಭೋ ॥ ೧೦೩ ॥

ಪಾಲಿತಾ ಯೈಸ್ತವಾಜ್ಞಾ ತೇ ಸುಗ್ರೀವಾದ್ಯಾ ನೃಪೋತ್ತಮಾಃ ।
ಸ್ವಸ್ವಕೋಟಿಬಲೈರ್ಯುಕ್ತಾಃ ಸಮಾಯಾತಾಃ ಸಹಸ್ರಶಃ ॥ ೧೦೪ ॥

ತದ್ದೂತವಚನಂ ಶ್ರುತ್ವಾ ರಾಮೋ ರಾಜೀವಲೋಚನಃ ।
ಪ್ರಾಹ ಮದ್ಬಾಣಘಾತಾಂಸ್ತೇ ಸ್ಪೃಹಯಂತಿ ನೃಪಾಧಮಾಃ ॥ ೧೦೫ ॥

---

೧೦೨. ಆಗ ಅವರಿಗುಂಟಾದ ದುಃಖವು ಅವರ ಹೃದಯದಿಂದ ಇನ್ನೂ ಹೊರಟು ಹೋಗಿರುವುದಿಲ್ಲ. ಅನಂತರ ಆ ಯೂಪಕೇತುವಿನ ಬಾಣದ ಏಟಿನಿಂದ ಆ ದುಃಖವು ಮತ್ತೆ ವೃದ್ಧಿಗೊಂಡಿತು.

೧೦೩. ಅಲ್ಲದೆ ಆ ಮದನಸುಂದರಿಯ ರೂಪವನ್ನು ಸ್ಮರಿಸಿಕೊಂಡು ಅದರ ದುಃಖದಿಂದ ಅವರು ನಿನ್ನ ಅಪ್ಪಣೆಯನ್ನು ಪಾಲಿಸದೆ ತಿರಸ್ಕರಿಸುತ್ತಿದ್ದಾರೆ.

೧೦೪. ನಿನ್ನ ಅಪ್ಪಣೆಯನ್ನು ಪಾಲಿಸಲು ಸಿದ್ಧರಾಗಿರುವ ಸುಗ್ರೀವನೇ ಮುಂತಾದವರು ತಮ್ಮ ತಮ್ಮ ಕೋಟಿ ಸಂಖ್ಯಾಕ ಸೈನ್ಯವನ್ನು ಕರೆದುಕೊಂಡು ಗುಂಪು ಗುಂಪಾಗಿ ಬರುತ್ತಿರುವರು.

೧೦೫. ಎಂಬುದಾಗಿ ಆ ದೂತರು ಹೇಳಲು ಅದನ್ನು ಕೇಳಿ ರಾಮನು ಅವರೆಲ್ಲರೂ ಈಗ ನನ್ನ ಬಾಣದ ಪೆಟ್ಟನ್ನು ಅಪೇಕ್ಷಿಸುತ್ತಿದ್ದಾರೆ, ಆವರೆಲ್ಲರೂ ಅಯೋಗ್ಯರು.

ಆದೌ ಹತ್ವಾ ಕೌಂಭಕರ್ಣಿಂ ತ್ವರ್ಾ ಗಚ್ಛಾಮಿ ತತಸ್ತ್ವಹಂ ।
ಇತ್ಯುಕ್ತ್ವಾ ಸುದಿನೇ ರಾಮಸ್ಸೇನಯಾ ಬಂಧುಭಿರ್ಜವಾತ್ ॥ ೧೦೬ ॥

ಮೂಲಕಾಸುರಘಾತಾರ್ಥಮಾದೌ ಪುರ್ಯಾ ಬಹಿರ್ಯಯೌ ।
ಕಿಂಚಿತ್ಸೈನ್ಯಯುತಂ ಪುರ್ಯಾಂ ಯೂಪಕೇತುಂ ನ್ಯವೇಶಯತ್ ॥ ೧೦೭ ॥

ಕುಶಾದ್ಯಾಸ್ಸಪ್ತಬಾಲಾಸ್ತೇ ರಾಮೇಣ ಸಹ ನಿರ್ಯಯುಃ ।
ವಿಮಾನೇ ಸಕಲಾಂ ಸೇನಾಂ ಸ್ಥಾಪಯಾಮಾಸ ರಾಘವಃ ॥ ೧೦೮ ॥

ತಾವತ್ತೇ ಪಾರ್ಥಿವಾಸ್ಸರ್ವೇ ನಾನಾವಾಹನಸಂಸ್ಥಿತಾಃ ।
ವೇಷ್ಟಿತಾಃ ಸ್ವಸ್ವಸೈನ್ಯೈಶ್ಚ ನತ್ವಾ ರಾಮಂ ಪುರಃ ಸ್ಥಿತಾಃ ॥ ೧೦೯ ॥

---

೧೦೬. ಮೊದಲು ಈ ಕುಂಭಕರ್ಣನ ಮಗನಾದ ಮೂಲಕನನ್ನು ಕೊಂದು ಅನಂತರ ಆ ರಾಜರುಗಳ ಮೇಲೆ ದಂಡೆತ್ತಿ ಹೋಗುವೆನು. ಹೀಗೆಂದು ಹೇಳಿ ಸೇನೆಗಳನ್ನು ಕೂಡಿಸಿಕೊಂಡನು.

೧೦೭. ಒಳ್ಳೆಯ ದಿನದಲ್ಲಿ ರಾಮನು ತಮ್ಮಂದಿರೊಡನೆಯೂ, ಮಕ್ಕಳೊಡನೆಯೂ ಯುದ್ಧಕ್ಕೆ ಪ್ರಯಾಣಮಾಡಿ ಹೊರಗೆ ಬಂದು ನಿಂತನು. ಪಟ್ಟಣವನ್ನು ಕಾಪಾಡಲು ಸ್ವಲ್ಪ ಸೈನ್ಯವನ್ನು ಕೊಟ್ಟು ಯೂಪಕೇತುವನ್ನು ಪಟ್ಟಣದಲ್ಲಿಯೇ ಇಟ್ಟನು.

೧೦೮. ಉಳಿದ ಕುಶನೇ ಮೊದಲಾದ ಏಳುಜನ ಬಾಲಕರೂ ರಾಮನೊಡನೆಯೇ ಹೊರಟರು. ಎಲ್ಲಾ ಸೇನೆಯನ್ನೂ ರಾಮನು ಪುಷ್ಪಕದಲ್ಲಿಯೇ ಕೂರಿಸಿದನು.

೧೦೯. ಇಷ್ಟರವೇಳೆಗೆ ರಾಮನಿಗೆ ಅನುಕೂಲರಾಗಿದ್ದ ರಾಜರೆಲ್ಲರೂ ಅನೇಕ ಬಗೆಯಾದ ವಾಹನಗಳನ್ನು ತೆಗೆದುಕೊಂಡು ತಮ್ಮ ತಮ್ಮ ಸೈನ್ಯದೊಡನೆ ಬಂಧು ರಾಮನಿಗೆ ನಮಸ್ಕರಿಸಿ ಅವನೆದುರಿಗೆ ನಿಂತರು.

ತಾನ್ ರಾಮಃ ಸ್ಥಾಪಯಾಮಾಸ ವಿಮಾನೇ ಸೈನ್ಯಸಂಯುತಾನ್ ।
ಅಷ್ಟಾದಶಪದ್ಮಮಿತೈಃ ಕಪಿಭಿಃ ಕಪಿರಾಡ್ಯಯೌ ॥ ೧೧೦ ॥

ಆರುರೋಹ ವಿಮಾನಾಗ್ರ್ಯಂ ಕಪಿಭೀ ರಾಘವಾಜ್ಞಯಾ ।
ತತಸ್ಸೀತಾಂ ವಿನಾ ರಾಮಃ ಸ್ವಯಂ ಸ್ಥಿತ್ವಾ ತು ಪುಷ್ಪಕೇ ॥ ೧೧೧ ॥

ಪಶ್ಯನ್ನಾನಾವಿಧಾನ್ದೇಶಾನ್ಯಯೌ ಲಂಕಾಂ ವಿಹಾಯಸಾ ।
ಯಾತ್ರಾಕಾಲೇ ಯಥಾ ಯಾನರಚನಾಸೀತ್ತಥಾ ಪುನಃ ॥ ೧೧೨ ॥

ತತೋ ರಾಮಂ ಸಮಾಯಾತಂ ಶ್ರುತ್ವಾ ಸ ಮೂಲಕಾಸುರಃ ।
ಯಯೌ ಲಂಕಾಂ ಬಹಿರ್ಯೋದ್ಧುಂ ರಾಘವೇಣ ಬಲೀಯಸಾ ॥ ೧೧೩ ॥

---

೧೧೦. ರಾಮನು ಅವರನ್ನೂ, ಅವರ ಸೈನ್ಯವನ್ನೂ ವಿಮಾನದಲ್ಲಿ ಕೂರಿಸಿದನು. ಇಷ್ಟರವೇಳೆಗೆ ಹದಿನೆಂಟು ಪದ್ಮಗಳಷ್ಟು ಸೈನ್ಯದೊಡನೆ ಕಪಿರಾಜನಾದ ಸುಗ್ರೀವನು ಬಂದನು.

೧೧೧. ರಾಮನು ಅವರೆಲ್ಲರನ್ನೂ ವಿಮಾನದಮೇಲೆ ಹೋಗಿ ನೆಲಸುವಂತೆ ಹೇಳಲು ಅವನ ಅಪ್ಪಣೆಯಂತೆ ಹಾಗೆಯೇ ಮಾಡಿದರು. ಆಗ ಸೀತೆಯನ್ನು ಪಟ್ಟಣದಲ್ಲಿಯೇ ಬಿಟ್ಟು ರಾಮನು ಪುಷ್ಪಕದಲ್ಲಿ ಕುಳಿತು ಹೊರಟನು.

೧೧೨. ಅನಂತರ ಅನೇಕ ಬಗೆಯ ಕೌತುಕಗಳನ್ನು ನೋಡುತ್ತ ಲಂಕೆಯನ್ನು ಕುರಿತು ಆಕಾಶಮಾರ್ಗದಿಂದ ಹೊರಟುಹೋಗಿ ಸೇರಿದನು. ಯಾತ್ರೆಯ ಕಾಲದಲ್ಲಿ ಯಾವ ರೀತಿಯಾಗಿ ಪುಷ್ಪಕದಲ್ಲಿ ಏರ್ಪಡಿಸಿದ್ದನೋ ಈಗಲೂ ಕೂಡ ಅದೇ ರೀತಿಯಾಗಿ ಏರ್ಪಡಿಸಿದನು.

೧೧೩. ಆ ಮೂಲಕಾಸುರನು ರಾಮನು ಲಂಕೆಗೆ ಬಂದುದನ್ನು ಕೇಳಿದನು. ಒಡನೆಯೇ ಬಲಿಷ್ಠನಾದ ಆ ರಾಮನೊಡನೆ ಯುದ್ಧಮಾಡಲು ಪಟ್ಟಣದಿಂದ ಹೊರಗೆ ಬಂದನು.

ದಶಕೋಟಿಮಿತಾಂ ಸೇನಾಂ ಬಿಭ್ರತ್ ಕವರದರ್ಪಿತಃ ।
ತತಸ್ತೇ ರಾಕ್ಷಸಾಃ ಪದ್ಭಿರ್ನಿಹನ್ಯುಃ ಪ್ಲವಗಾನ್ ಮುಹುಃ ॥ ೧೧೪ ॥

ವಾನರಾ ರಾಕ್ಷಸಾಂಶ್ಚಾಪಿ ತೇ ನಿಹನ್ಯುಃ ದೃಷನ್ನಗೈಃ ।
ಏವಂ ಬಭೂವ ತದ್ಯುದ್ಧಂ ತುಮುಲಂ ದಿನಸಪ್ತಕಂ ॥ ೧೧೫ ॥

ತತ್ರ ಯೇ ಯೇ ಮೃತಾ ಯುದ್ಧೇ ವಾನರಾಸ್ತಾನ್ಸ ಮಾರುತಿಃ ।
ದ್ರೋಣಾಚಲಂ ಸಮಾನೀಯ ಜೀವಯಾಮಾಸ ಪೂರ್ವವತ್ ॥ ೧೧೬ ॥

ತತಸ್ಸಾ ರಾಕ್ಷಸೀ ಸೇನಾ ಚತುರ್ಥಾಂಶಾವಶೇಷಿತಾ ।
ತಾನ್ನಷ್ಟಾನ್ರಾಕ್ಷಸೇಂದ್ರಸ್ಸ ದೃಷ್ಟ್ವಾ ಕ್ರೋಧಯುತಸ್ತದಾ ॥ ೧೧೭ ॥

---

೧೧೪. ಅವನಿಗೆ ಬ್ರಹ್ಮನು ವರ ಕೊಟ್ಟದ್ದುದರಿಂದಲೂ ಜೊತೆಯಲ್ಲಿ ಹತ್ತುಕೋಟಿ ಸೈನ್ಯವಿದ್ದುದರಿಂದಲೂ ಬಲು ಗರ್ವಿಷ್ಠನಾಗಿದ್ದನು. ಎರಡು ಕಡೆಯುವರಿಗೂ ಯುದ್ಧವು ಮೊದಲಾಯಿತು. ರಾಕ್ಷಸರು ಕಪಿಗಳನ್ನು ಕಾಲಿನಿಂದ ಒದೆಯುತ್ತ ತಿಕ್ಕುತ್ತ ಬಹುವಾಗಿ ಕೊಂದರು.

೧೧೫. ಕಪಿಗಳೂ ಕೂಡ ಕಲ್ಲಿನಿಂದಲೂ, ಮರಗಳಿಂದಲೂ ಬಹು ಜನ ರಾಕ್ಷಸರನ್ನು ಕೊಂದರು. ಈರೀತಿಯಾಗಿ ಆ ರಾಕ್ಷಸರಿಗೂ ರಾಮನ ಕಡೆಯುವರಿಗೂ ತುಮುಲ ಯುದ್ಧವು ಪ್ರಾರಂಭವಾಗಿ ಏಳು ದಿನಗಳವರೆಗೂ ನಡೆಯಿತು.

೧೧೬. ಆ ಯುದ್ಧದಲ್ಲಿ ಸತ್ತ ಕಪಿಗಳೆಲ್ಲವನ್ನೂ ಹನುಮಂತನು ಹಿಂದಿನಂತೆ ದ್ರೋಣಾಚಲವನ್ನು ತಂದು ಅದರಿಂದ ಬದುಕಿಸುತ್ತಿದ್ದನು.

೧೧೭. ಈ ಯುದ್ಧದಲ್ಲಿ ಒಂದು ವಾರವು ಕಳೆಯುವ ಹೊತ್ತಿಗೆ ರಾಕ್ಷಸರ ಸೇನೆಯು ನಾಶವಾಗಿ ಕಾಲುಭಾಗ ಮಾತ್ರ ಉಳಿಯಿತು. ಹೀಗೆ ಮುಕ್ಕಾಲು ಭಾಗ ಸೈನ್ಯವು ನಾಶವಾದುದನ್ನು ನೋಡಿ ರಾಕ್ಷಸೇಂದ್ರನಾದ ಮೂಲಕನಿಗೆ ಬಹುವಾಗಿ ಕೋಪ ಬಂದಿತು.

ಮಂತ್ರಿಣಶ್ಚೋದಯಾಮಾಸ ತಥಾ ಸೇನಾಪತೀನ್ ಬಲೈಃ ।
ತಾನಾಗತಾನ್ರಣಭುವಂ ರಾಮವೀರಾಸ್ಸಹಸ್ರಶಃ ॥ ೧೧೮ ॥

ಶತಘ್ನೀಭಿರ್ಹಸ್ತಯಂತ್ರೈರ್ಭಿಂದಿಪಾಲಭುಶುಂಡಿಭಿಃ ।
ಪರಿಘೈಃ ಪಟ್ಟಿಶೈಶ್ಶೂಲೈಃ ಕುಂತೈಃ ಖಡ್ಗೈರ್ವ್ಯಮರ್ದಯನ್ ॥ ೧೧೯ ॥

ತೇಽಪಿ ತಾನ್ ತೈಸ್ತಮಾಲೈಶ್ಚ ಹಿಂತಾಲೈಶ್ಚ ದೃಷನ್ನಗೈಃ ।
ಶಾಲೈಶ್ಶಿಲಾಭಿಃ ಶ್ರೀರಾಮವೀರಾನ್ ಸಂಮರ್ದಯನ್ ರಣೇ ॥ ೧೨೦ ॥

ಪುನರ್ಯುದ್ಧಂ ಮಹಾನಾಸೀತ್ತುಮುಲಂ ರೋಮಹರ್ಷಣಂ ।
ತತಸ್ತಾನ್ಮಂತ್ರಿಣಸ್ಸರ್ವಾಂಸ್ತಥಾ ಸೇನಾಪತೀನಪಿ ॥ ೧೨೧ ॥

---

೧೧೮. ತನ್ನ ಮಂತ್ರಿಗಳನ್ನೂ, ಸೇನಾಪತಿಗಳನ್ನೂ ಸೈನ್ಯದೊಡನೆ ಅವರ ಮೇಲೆ ಬಿದ್ದು ಘೋರ ಯುದ್ಧ ಮಾಡುವಂತೆ ಪ್ರೇರಿಸಿದನು. ಅವರೆಲ್ಲರೂ ಅವನ ಮಾತಿನಂತೆ ಸಾವಿರ ಸಂಖ್ಯೆಯಿಂದ ರಣಮಂಡಲಕ್ಕೆ ಬಂದರು.

೧೧೯. ಆರೀತಿಯಾಗಿ ರಾಕ್ಷಸರು ಬಂದುದನ್ನು ನೋಡಿ ರಾಮನ ಕಡೆಯ ವೀರರು ಫಿರಂಗಿಗಳಿಂದಲೂ, ಬಂದೂಕಗಳಿಂದಲೂ, ಭಿಂದಿವಾಳ ಗಳಿಂದಲೂ, ಭುಶುಂಡಿಗಳಿಂದಲೂ, ಪರಿಘಗಳಿಂದಲೂ, ಪಟ್ಟಿಶಗಳಿಂದಲೂ, ಶೂಲಗಳಿಂದಲೂ, ಕುಂತಗಳಿಂದಲೂ, ಖಡ್ಗಗಳಿಂದಲೂ ಹೊಡೆಯುತ್ತ ಅವರನ್ನು ನಾಶಪಡಿಸಿದರು.

೧೨೦. ರಾಕ್ಷಸರೂ ಕೂಡ ರಾಮ ವೀರರನ್ನು ರಾಮವೀರರು ಹೊಡೆಯುತ್ತಿರುವಂತೆ ಆಯುಧಗಳಿಂದಲೂ ತಮಾಲ, ಹಿಂತಾಲ, ಕಲ್ಲು ಇನ್ನೂ ಅನೇಕವಾದ ಮರಗಳು ಇವುಗಳಿಂದಲೂ ಬಹುವಾಗಿ ಹೊಡೆದರು.

೧೨೧-೧೨೨. ಕೋಪದಿಂದ ಒಬ್ಬರ ಮೇಲೊಬ್ಬರು ಬಿದ್ದು ಹೊಡೆಯುತ್ತಿರಲು ಮತ್ತೆ ಘೋರವಾದ ತುಮುಲಯುದ್ಧವು ನಡೆಯಿತು. ಅದು ರೋಮಾಂಚಕರವಾಗಿದ್ದಿತು. ಈರೀತಿ ನಡೆದ ಯುದ್ಧದಲ್ಲಿ ರಾಮಸೈನಿಕರು ರಾಕ್ಷಸ ರಾಜನ

ರಾಮವೀರಾಃ ಕ್ಷಣೇನೈವ ಚಕ್ರುಸ್ಸಂಯಮನೀಗತಾನ್ ।
ತಾನ್ ಸರ್ವಾನ್ ನಿಹತಾನ್ ಶ್ರುತ್ವಾ ಕ್ರೋಧೇನ ಮೂಲಕಾಸುರಃ ॥ ೧೨೨ ॥

ಸ್ವಯಂ ದಿವ್ಯರಥೇ ಸ್ಥಿತ್ವಾ ಕಿಂಚಿತ್ಸೈನ್ಯಯುತೋ ಯಯೌ ।
ತಮಾಗತಂ ನೃಪಾ ದೃಷ್ಟ್ವಾ ಯಯುರ್ಯೋದ್ಧುಂ ಸಹಸ್ರಶಃ ॥ ೧೨೩ ॥

ವವರ್ಷುಶ್ಶರಜಾಲೈಶ್ಚ ಚಕ್ರುಃ ದುಂದುಭಿನಿಸ್ವನಾನ್ ।
ತಾನ್ಸರ್ವಾನ್ ರಾಕ್ಷಸೇಂದ್ರಸ್ಸ ಚಕಾರ ಭುವಿ ಮೂರ್ಛಿತಾನ್ ॥ ೧೨೪ ॥

ತಾನ್ ಮೂರ್ಛಿತಾನ್ ನೃಪಾನ್ ದೃಷ್ಟ್ವಾ ಯೋದ್ಧುಂ ತೇನ ಪುನರ್ಯಯುಃ ।
ಸುಮಂತ್ರಾದ್ಯಾ ಮಂತ್ರಿಣಶ್ಚ ರಾಘವಸ್ಯಾಜ್ಞಯಾ ಬಲೈಃ ॥ ೧೨೫ ॥

ಮಂತ್ರಿಗಳನ್ನೂ ಆ ಸೇನಾಪತಿಗಳನ್ನೂ ಕ್ಷಣಕಾಲದಲ್ಲಿಯೇ ಯಮಪುರಿಗೆ ಕಳುಹಿಸಿದರು. ತನ್ನ ಸೇನಾಪತಿಗಳೂ, ಮಂತ್ರಿಗಳೂ ಸತ್ತುದನ್ನು ಕೇಳಿ ಮೂಲಕಾಸುರನಿಗೆ ಬಹುವಾದ ಕೋಪವು ಬಂದಿತು.

೧೨೩. ಆಗ ಕೋಪಗೊಂಡು ಜೊತೆಯಲ್ಲಿ ತಾನೇ ಸ್ವಲ್ಪ ಸೈನ್ಯವನ್ನೂ ಕರೆದುಕೊಂಡು ದಿವ್ಯವಾದ ರಥದಲ್ಲಿ ಕುಳಿತು ಯುದ್ಧಕ್ಕೆ ಹೊರಟನು. ಅವನು ಬಂದುದನ್ನು ನೋಡಿ ರಾಮನ ಕಡೆಯ ರಾಜರೆಲ್ಲರೂ ಅವನೊಡನೆ ಯುದ್ಧ ಮಾಡಲು ಸಾವಿರ ಸಂಖ್ಯೆಯಲ್ಲಿ ಹೊರಟರು.

೧೨೪. ಅವರೆಲ್ಲರೂ ಅವನಮೇಲೆ ಬಾಣದ ಮಳೆಯನ್ನು ಸುರಿಸಿ ದುಂದುಭಿಯನ್ನು ಬಡಿಸಿದರು. ಆದರಿಂದ ಆ ಮೂಲಕನು ಕೋಪಗೊಂಡು ಅವರ ಬಾಣಗಳನ್ನು ನಾಶಮಾಡಿ ಅವರನ್ನು ಬಾಣದಿಂದ ಹೊಡೆದು ಮೂರ್ಛೆ ಬರುವಂತೆ ಮಾಡಿ ನೆಲದಮೇಲೆ ಕೆಡಹಿದನು.

೧೨೫. ಆ ರಾಜರೆಲ್ಲರೂ ಮೂರ್ಛೆ ಹೋದುದನ್ನು ನೋಡಿ ರಾಮನು ಸುಮಂತ್ರನೇ ಮುಂತಾದ ಮಂತ್ರಿಗಳನ್ನು ಅವನ ಮೇಲೆ ಬೀಳುವಂತೆ ಹೇಳಿ ಕಳುಹಿಸಿದನು.

ತಾನ್ಸರ್ವಾನ್ ಮೂರ್ಛಿತಾನ್ ಬಾಣೈಶ್ಚಕಾರ ಮೂಲಕಾಸುರಃ ।
ಮೂರ್ಛಿತಾನ್ ಮಂತ್ರಿಣೋ ದೃಷ್ಟ್ವಾ ಕುಶಾದ್ಯಾ ಬಾಲಕಾ ಯಯುಃ ॥

ತತೋ ಬಭೂವ ತುಮುಲಂ ಯುದ್ಧಂ ತಲ್ಲೋಮಹರ್ಷಣಂ ।
ತತಃ ಕುಶಃ ಸ್ವಬಾಣೌಘೈಃ ಲಂಕಾಯಾಂ ಮೂಲಕಾಸುರಂ ॥ ೧೨೭ ॥

ಪ್ರಾಕ್ಷಿಪದ್ಧಟ್ಟಮಧ್ಯೇ ಸ ಪಪಾತ ಪುನರುತ್ಥಿತಃ ।
ತತೋಽಭಿಚಾರಿಕಂ ಹೋಮಂ ರಥಶಸ್ತ್ರಾರ್ಥಮುತ್ತಮಂ ॥ ೧೨೮ ॥

ಕರ್ತುಂ ವಿವೇಶ ಸ ಗುಹಾಂ ಬಧ್ವಾ ದ್ವಾರಾಣ್ಯನೇಕಶಃ ।
ತತೋ ವಿಭೀಷಣಃ ಪ್ರಾಹ ಹೋಮಧೂಮಂ ನಿರೀಕ್ಷ್ಯ ಚ ॥ ೧೨೯ ॥

---

೧೨೬. ರಾಮನ ಅಪ್ಪಣೆಯಿಂದ ಅವರೆಲ್ಲರೂ ತನ್ನ ಮೇಲೆ ಬೀಳಲು ಮೂಲಕಾಸುರನು ಅವರಮೇಲೆಯೂ ಬಾಣವನ್ನು ಬಿಟ್ಟು ಮೂರ್ಛೆಗೆಡಹಿದನು. ಮಂತ್ರಿಗಳು ಮೂರ್ಛೆಗೊಂಡುದನ್ನು ನೋಡಿ ಕುಶನೇ ಮುಂತಾದ ಬಾಲಕರು ಯುದ್ಧಕ್ಕೆ ಹೊರಟರು.

೧೨೭. ಆಗ ಆ ಬಾಲಕರಿಗೂ ಮೂಲಕಾಸುರನಿಗೂ ತುಮುಲಯುದ್ಧವು ಬಹುಕಾಲ ನಡೆಯಿತು. ಆಗ ಕುಶನು ಕೋಪಗೊಂಡು ಬಾಣಗಳನ್ನು ಬಿಟ್ಟು ಆ ಮೂಲಕಾಸುರನನ್ನು ಲಂಕೆಯಲ್ಲಿ ಬೀಳುವಂತೆ ಎಸೆದನು.

೧೨೮-೧೨೯. ಆ ಮೂಲಕಾಸುರನು ಲಂಕೆಯಲ್ಲಿ ತನ್ನ ಮನೆಯ ಮಹಡಿಯಮೇಲೆ ಹೋಗಿ ಬಿದ್ದನು. ಆದರೂ ಮತ್ತೆ ಎಚ್ಚೆತ್ತು ಎದ್ದನು ಈರೀತಿಯಾದ ಯುದ್ಧದಿಂದ ತಾನು ಗೆಲ್ಲುವುದು ಅಸಾಧ್ಯವೆಂದು ಆ ಮೂಲಕಾ ಸುರನು ತಿಳಿದು ರಥವೂ ಶಸ್ತ್ರವೂ ಅಪೂರ್ವವಾದುವು ತನಗೆ ಸಿಕ್ಕಬೇಕೆಂಬ ಆಸೆಯಿಂದ ಆ ಲಂಕೆಯ ಬಾಗಿಲುಗಳನ್ನೆಲ್ಲಾ ಹಾಕಿಸಿ ಅದಕ್ಕೋಸ್ಕರ ಆಭಿಚಾರಿಕ ಹೋಮವನ್ನು ಮಾಡಲು ಉದ್ಯುಕ್ತನಾದನು. ಆಗ ಈ ಹೋಮದ ಹೊಗೆಯನ್ನು ವಿಭೀಷಣನು ನೋಡಿದನು.

ರಾಘವಂ ಕಲ್ಪವೃಕ್ಷಾಧಸ್ಸಂಸ್ಥಿತಂ ಬಂಧುವೇಷ್ಟಿತಂ ।
ಹೋಮಂ ಕರೋತ್ಯಯಂ ದುಷ್ಟಃ ಪ್ರೇಷಯಸ್ವ ಕಪೀನ್ಪುನಃ ॥ ೧೩೦ ॥

ಹೋಮೇ ಸಮಾಪ್ತೇಽಜೇಯಸ್ಸ ಭವಿಷ್ಯತಿ ಮಹಾಸುರಃ ।
ಏತಸ್ಮಿನ್ನಂತರೇ ಬ್ರಹ್ಮಾ ಯಯೌ ರಾಮಂ ಸುರೈರ್ಯುತಃ ॥ ೧೩೧ ॥

ನತ್ವಾ ತಂ ರಾಘವಶ್ಚಾಪಿ ಪೂಜಯಾಮಾಸ ಸಾದರಂ ।
ತದಾಹ ರಾಘವಂ ಬ್ರಹ್ಮಾ ವರಸ್ತ್ವಸ್ಮೈ ಮಯಾರ್ಪಿತಃ ॥ ೧೩೨ ॥

ಯದಾ ವೀರಾನ್ನ ಮೇ ಮೃತ್ಯುರ್ಭವತ್ವಿತಿ ಪುರಾ ಮಮ ।
ಅನೇನ ಯಾಚಿತಂ ರಾಮ ತವಾಂತೇಂಗೀಕೃತಂ ಮಯಾ ॥ ೧೩೩ ॥

ಅತೋಽಸ್ಯ ಪುರುಷಾನ್ಮೃತ್ಯುರ್ನ ಭವಿಷ್ಯತಿ ರಾಘವ ।
ಸ್ತ್ರೀಹಸ್ತಾನ್ಮರಣಂ ಚಾಸ್ಯ ವಿದ್ಧಿ ತ್ವಂ ರಘುನಂದನ ॥ ೧೩೪ ॥

೧೩೦–೧೩೧. ಒಡನೆಯೇ ಕಲ್ಪವೃಕ್ಷದ ಕೆಳಗೆ ತಮ್ಮಂದಿರೊಡನೆ ಕುಳಿತಿರುವ ರಾಮನ ಬಳಿಗೆ ಹೋಗಿ ಎಲೈ ಪ್ರಭುವೆ! ಆ ದುಷ್ಟನು ಅಭಿಚಾರಕ ಹೋಮವನ್ನು ಮಾಡುತ್ತಿರುವನು. ಅಲ್ಲಿಗೆ ಕಪಿಗಳನ್ನು ಕಳುಹಿಸು. ಹೋಮವು ನಿರ್ವಿಘ್ನವಾಗಿ ಮುಗಿದರೆ ಅನಂತರ ಆ ರಾಕ್ಷಸನನ್ನು ಜಯಿಸಲು ಯಾರಿಂದಲೂ ಆಗುವುದಿಲ್ಲ ಎಂದನು. ಇಷ್ಟರಲ್ಲಿಯೇ ಬ್ರಹ್ಮನು ದೇವತೆಗಳೊಡನೆ ಕೂಡಿಕೊಂಡು ಆ ರಾಮನ ಬಳಿಗೆ ಬಂದನು.

೧೩೨–೧೩೩. ಆ ಬ್ರಹ್ಮನು ಬರಲು ರಾಮನು ಅವನಿಗೆ ನಮಸ್ಕರಿಸಿ ಸಂತೋಷದಿಂದ ಅವನನ್ನು ಪೂಜಿಸಿದನು. ಆಗ ಬ್ರಹ್ಮನು ಎಲೈ ರಾಘವನೆ! ನಾನು ಈ ಮೂಲಕಾಸುರನಿಗೆ ವರವನ್ನು ಕೊಡಲು ಬಂದಾಗ ಅವನು ವೀರರಿಂದ ನನಗೆ ಮರಣವಾಗಕೂಡದು ಎಂದು ಕೇಳಲು ನಾನು ಹಾಗೆಯೇ ಆಗಲೆಂದು ಹೇಳಿದೆನು.

೧೩೪. ಆದ್ದರಿಂದ ಇವನು ವೀರರ ಕೈಯ್ಯಲ್ಲಾಗಲಿ, ಪುರುಷರ ಕೈಯ್ಯಲ್ಲಾಗಲಿ ಸಾಯುವುದಿಲ್ಲ. ಇವನು ಹೆಂಗಸರ ಕೈಯ್ಯಿಂದ ಸಾವನ್ನು ಹೊಂದುವನೆಂದು ತಿಳಿ.

ಅನ್ಯತ್ಕಿಂಚಿತ್ಪ್ರವಕ್ಷ್ಯಾಮಿ ಕಾರಣಂ ಮರಣೇಽಸ್ಯ ಹಿ ।
ಏಕದಾ ಶೋಕಯುಕ್ತೇನ ಪುರಾನೇನ ದ್ವಿಜಾಗ್ರತಃ ॥ ೧೩೫ ॥

ಸೀತಾಚಂಡಾನಿಮಿತ್ತೇನ ಜಾತೋ ಮೇದ್ಯ ಕುಲಕ್ಷಯಃ ।
ಇತಿ ಯನ್ನಿಷ್ಠುರಂ ವಾಕ್ಯಂ ಉಕ್ತಂ ತನ್ಮುಭಿಃ ಶ್ರುತಂ ॥ ೧೩೬ ॥

ತೇಷ್ವೇಕಸ್ತಂ ಮುನಿಃ ಕ್ರೋಧಾದ್ದದೌ ಶಾಪಂ ಹಿ ರಾಕ್ಷಸಂ ।
ಯಾ ಚಂಡೇತಿ ತ್ವಯೋಕ್ತಾ ಸಾದ್ಯೈವ ತ್ವಾಂ ಮಾರಯಿಷ್ಯತಿ ॥ ೧೩೭ ॥

ತನ್ಮುನೇರ್ವಚನಂ ಶ್ರುತ್ವಾ ತಂ ಜಘಾನ ಸ ರಾಕ್ಷಸಃ ।
ತದ್ಭೀತ್ಯಾ ಮುನಯಸ್ಸರ್ವೇ ತೂಷ್ಣೀಂ ಭೂತಾಃ ಸ್ಥಿತಾಃ ಪುರಾ ॥ ೧೩೮ ॥

೧೩೫–೧೩೬. ಅಲ್ಲದೆ ಇವನ ಮರಣದ ವಿಷಯದಲ್ಲಿ ಮತ್ತೊಂದು ಕಾರಣವನ್ನು ಹೇಳುತ್ತೇನೆ ಕೇಳು. ಒಂದುಸಾರಿ ಈತನಿಗೆ ತನ್ನ ವಂಶದವರೆಲ್ಲರೂ ನಾಶವಾದರಲ್ಲ ಎಂಬ ದುಃಖವು ಬಂದಿತು. ಆಗ ಅವನು ಅಲ್ಲಿ ತನ್ನಂತೆ ತಪಸ್ಸು ಮಾಡುತ್ತಿದ್ದ ಮುನಿಯ ಎದುರಿನಲ್ಲಿ ಚಂಡಳಾದ ಸೀತೆಯ ಕಾರಣದಿಂದ ನನ್ನ ವಂಶವೆಲ್ಲವೂ ನಾಶವಾಯಿತು ಎಂದನು. ಈರೀತಿಯಾಗಿ ಅವನು ಆಡಿದ ಈ ನಿಷ್ಠುರವಾಕ್ಯವು ಅಲ್ಲಿದ್ದ ಋಷಿಗಳಿಗೆಲ್ಲಾ ಗೊತ್ತಾಯಿತು.

೧೩೭. ಆಗ ಅವರಿಗೆ ಸೀತೆಯನ್ನು ನಿಂದಿಸಿದುದರಿಂದ ಕೋಪವು ಬಂದು ಅವರಲ್ಲಿ ಒಬ್ಬ ಋಷಿಯು ಆ ರಾಕ್ಷಸನಿಗೆ ಎಲೈ ರಾಕ್ಷಸನೇ! ನೀನು ಆ ಸೀತೆಯನ್ನು ಚಂಡಿ ಎಂದು ನಿಂದಿಸಿದುದರಿಂದ ಅವಳು ಈಗಲೇ ನಿನ್ನನ್ನು ಕೊಲ್ಲಲಿ ಎಂದು ಶಪಿಸಿದನು.

೧೩೮. ಆ ಮುನಿಯು ಹೀಗೆ ಶಪಿಸಿದುದನ್ನು ತಿಳಿದು ಒಡನೆಯೇ ಆ ರಾಕ್ಷಸನು ಆ ಮುನಿಯನ್ನು ಕೊಂದನು. ಹೀಗೆ ಅವನನ್ನು ಕೊಲ್ಲಲು ಈ ರಾಕ್ಷಸನ ಹೆದರಿಕೆಯಿಂದ ಆ ಮುನಿಗಳೆಲ್ಲರೂ ಅನಂತರ ಸುಮ್ಮನಾದರು.

ತಸ್ಮಾತ್ತನ್ಮುನಿವಾಕ್ಯೇನ ಮಮಾಪಿ ವರದಾನತಃ ।
ಸೀತಾಹಸ್ತಾನ್ಮೃತಿಶ್ಚಾಸ್ಯ ಭವಿಷ್ಯತಿ ನ ಸಂಶಯಃ ॥ ೧೩೯ ॥

ಅತಸ್ಸೀತಾಂ ಸಮಾನೀಯ ತಯೈನಂ ಜಹಿ ರಾಕ್ಷಸಂ ।
ಇತ್ಯುಕ್ತ್ವಾ ರಾಮಮಾಮಂತ್ರ್ಯ ಯಯೌ ವೇಧಾ ನಿಜಂ ಪದಂ ॥ ೧೪೦ ॥

ರಾಮೋಽಪಿ ಬ್ರಹ್ಮವಚನಂ ಶ್ರುತ್ವಾ ಪ್ರಾಹ ವಿಭೀಷಣಂ ।
ಮೂಲಕಾಸುರಹೋಮಾಯ ನ ಕಾರ್ಯಂ ವಿಘ್ನಮದ್ಯ ಹಿ ॥ ೧೪೧ ॥

ಸೀತಾಯಾಮತ್ರ ಯಾತಾಯಾಂ ವಿಘ್ನಂ ಕಾರ್ಯಂ ಪ್ಲವಂಗಮೈಃ ।
ಇತ್ಯುಕ್ತ್ವಾ ಗರುಡಂ ಪ್ರಾಹ ರಾಮಃ ಪುಷ್ಪಕಸಂಸ್ಥಿತಃ ॥ ೧೪೨ ॥

---

೧೩೯. ಆದ್ದರಿಂದ ಈ ಮೂಲಿಕನಿಗೆ ಆ ಮುನಿಯ ಶಾಪದಿಂದಲೂ, ನನ್ನ ವರದಿಂದಲೂ ಸೀತೆಯ ಕೈಯ್ಯಿಂದಲೇ ಈತನಿಗೆ ಮರಣವು ಉಂಟಾಗುತ್ತದೆ. ಸಂಶಯವಿಲ್ಲ.

೧೪೦. ಆದ್ದರಿಂದ ಸೀತೆಯನ್ನು ಕರೆತಂದು ಈ ರಾಕ್ಷಸನನ್ನು ಕೊಲ್ಲಿಸು. ಹೀಗೆಂಬುದಾಗಿ ಆ ಬ್ರಹ್ಮನು ರಾಮನಿಗೆ ಹೇಳಿ ಅವನ ಒಪ್ಪಿಗೆಯನ್ನು ಪಡೆದು ತನ್ನ ಜಾಗಕ್ಕೆ ಹೊರಟುಹೋದನು.

೧೪೧. ರಾಮನು ಬ್ರಹ್ಮನ ಮಾತನ್ನು ಕೇಳಿ ಅನಂತರ ವಿಭೀಷಣನಿಗೆ ಇಂತೆಂದನು. ಎಲೈ ವಿಭೀಷಣನೇ! ಮೂಲಕಾಸುರನ ಹೋಮಕ್ಕೆ ಈಗ ವಿಘ್ನವನ್ನು ಮಾಡಬಾರದು.

೧೪೨. ಸೀತೆಯು ಇಲ್ಲಿಗೆ ಬಂದಮೇಲೆ ಕಪಿಗಳು ಹೋಗಿ ಅವನ ಹೋಮಕ್ಕೆ ವಿಘ್ನವನ್ನು ಮಾಡಲಿ. ಎಂದು ಹೇಳಿ ರಾಮನು ಪುಷ್ಪಕದಲ್ಲಿಯೇ ಕುಳಿತುಕೊಂಡು ಗರುಡನನ್ನು ಕುರಿತು ಇಂತೆಂದನು.

ಅಯೋಧ್ಯಾಂ ಗಚ್ಛ ಶೀಘ್ರಂ ತ್ವಂ ವಾಯುಪುತ್ರೇಣ ಮದ್ಗಿರಾ ।
ಮಮಾತ್ರಾನಯ ವೈದೇಹೀಂ ಸ್ವಪೃಷ್ಠೇ ತಾಂ ನಿವೇಶ್ಯ ಚ ॥ ೧೪೩ ॥

ಸಮಂತತಸ್ತಾಂ ದುಷ್ಟೇಭ್ಯಃ ಪಥಿ ರಕ್ಷತು ಮಾರುತಿಃ ।
ತಥೇತಿ ರಾಮವಚನಮುರರೀಕೃತ್ಯ ಸಾದರಂ ॥ ೧೪೪ ॥

ತಾವುಭೌ ರಾಘವಂ ನತ್ವಾಽಯೋಧ್ಯಾಂ ಶೀಘ್ರಂ ಪ್ರಜಗ್ಮತುಃ ॥ ೧೪೫ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ರಾಜ್ಯಕಾಂಡೇ ಪೂರ್ವಾರ್ಧೇ ಶತನಾರೀ ವರಪ್ರದಾನಂ ಮೂಲಕಾಸುರಾಖ್ಯಾನಂ ನಾಮ ಚತುರ್ಥಸ್ಸರ್ಗಃ

---

೧೪೩. ಎಲೈ ಗರುಡನೇ ! ನನ್ನ ಮಾತಿನಂತೆ ನೀನೂ ಮಾರುತಿಯೂ ಅಯೋಧ್ಯೆಗೆ ಹೋಗಿರಿ. ನೀನು ಆ ಸೀತೆಯನ್ನು ಬೆನ್ನಿನಮೇಲೆ ಕೂರಿಸಿಕೊಂಡು ಇಲ್ಲಿಗೆ ಕರೆದುಕೊಂಡು ಬಾ.

೧೪೪–೧೪೫. ಈ ಮಾರುತಿಯು ದುಷ್ಟರು ಆಕೆಯಮೇಲೆ ಬಂದು ಬೀಳದಂತೆ ಸುತ್ತಲೂ ರಕ್ಷಿಸಿಕೊಂಡು ಬರಲಿ ಎಂದನು. ಅವರಿಬ್ಬರೂ ಕೂಡ ಬಹು ಸಂತೋಷದಿಂದ ರಾಮನ ಮಾತನ್ನು ಅಂಗೀಕರಿಸಿದರು. ಆಗ ಅವರಿಬ್ಬರೂ ರಾಮನಿಗೆ ನಮಸ್ಕರಿಸಿ ಬೇಗನೆ ಅಯೋಧ್ಯೆಗೆ ಹೊರಟರು.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಪೂರ್ವಾರ್ಧದಲ್ಲಿ ಶತನಾರೀ ವರಪ್ರದಾನ ಮೂಲಕಾಸುರಾಖ್ಯಾನಗಳೆಂಬ ನಾಲ್ಕನೆಯ ಸರ್ಗವು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ

॥ ನಾಲ್ಕನೆಯ ಸರ್ಗದ ಸಾರಾಂಶವು ॥

ಒಂದುಸಾರಿ ಶ್ರೀರಾಮನು ಸಭೆಯಲ್ಲಿ ಕುಳಿತಿರುವಾಗ ದ್ರಾಕ್ಷಾಮಂಡಪದ ಚಪ್ಪರದಮೇಲೆ ಕುಳಿತು ಒಂದು ಕಾಗೆಯು ಅವನನ್ನೇ ನೋಡುತ್ತ ಕೂಗುತ್ತಿರುವುದನ್ನು ನೋಡಿ ಅದನ್ನು ಹತ್ತಿರಕ್ಕೆ ಕರೆದು ಅದಕ್ಕೆ ತಾನು ಹಿಂದೆ ಮಾಡಿದ್ದ ತೊಂದರೆಯನ್ನು ಜ್ಞಾಪಿಸಿಕೊಂಡು ಬೇಕಾದ ವರವನ್ನು ಕೇಳಿಕೊಳ್ಳುವಂತೆ ಹೇಳಲು ಅದು ಯಾವಾಗಲೂ ಅವನ ನಾಮಸ್ಮರಣೆ ಮಾಡುತ್ತಿರುವಂತೆ ಅನುಗ್ರಹಿಸಬೇಕೆಂದಿತು.

ಶ್ರೀರಾಮನು ಅಂತೆಯೇ ಆಗಲೆಂದುದಲ್ಲದೆ ಮತ್ತು ಅನೇಕ ವರಗಳನ್ನೂ ಕೊಟ್ಟು ಕಳುಹಿಸಿದನು.

ಒಂದುಸಾರಿ ಶ್ರೀರಾಮನು ಮಂಚದಮೇಲೆ ಮಲಗಿ ನಿದ್ರಿಸುತ್ತಿದ್ದನು. ಸೀತೆಯು ಮುಟ್ಟಾಗಿದ್ದುದರಿಂದ ಹತ್ತಿರದಲ್ಲಿರಲಿಲ್ಲ. ಇದೇ ಸಮಯವನ್ನು ನೋಡಿಕೊಂಡು ಆ ರಾಜನ ಸೌಂದರ್ಯಕ್ಕೆ ಮೋಹಿತರಾಗಿದ್ದ ಆ ಊರಿನ ಅನೇಕಜನ ತರುಣಿಯರು ಅವನ ಬಳಿಗೆ ಬಂದರು. ಬಾಗಿಲನ್ನು ಕಾಯುವವರಾಗಲಿ, ಆಳುಗಳಾಗಲಿ ಅಲ್ಲಿರಲಿಲ್ಲ. ಅವರು ರಾಮಕಥಾಶ್ರವಣವನ್ನು ಮಾಡಲು ಹೋಗಿದ್ದರು.

ಇವರಲ್ಲಿ ಒಬ್ಬಳು ಆ ರಾಮನನ್ನು ಎಬ್ಬಿಸಿ ತಮ್ಮ ಉದ್ದೇಶವನ್ನು ಹೇಳಲು ರಾಮನು ತಾನು ಈ ಜನ್ಮದಲ್ಲಿ ಪರಸ್ತ್ರೀಯರನ್ನು ಮುಟ್ಟುವುದಿಲ್ಲವೆಂದೂ

ಕೃಷ್ಣಾವತಾರದಲ್ಲಿ ಅವರಿಗೆಲ್ಲಾ ಅಂಗಸಂಗವನ್ನು ಕೊಡುವುದಾಗಿಯೂ ಹೇಳಿ ಕಳುಹಿಸಿದನು. ಅನಂತರ ಆಳುಗಳನ್ನು ಕೂಗಲು ಅವರೊಬ್ಬರೂ ಇರಲಿಲ್ಲ. ಲಕ್ಷ್ಮಣನ ಬಳಿಗೆ ಹೋಗಿ ಅವನನ್ನು ಎಬ್ಬಿಸಿ ಎಲ್ಲ ವಿಷಯುವನ್ನೂ ಹೇಳಿದನು. ಅನಂತರ ಆಳುಗಳು ಬರಲು ಆವರನ್ನು ಶಿಕ್ಷಿಸಿದನು.

ಈ ಸಮಯುದಲ್ಲಿ ಊರಿನ ಹೊರಗೆ ಹೆಂಗಸು ಅಳುವ ಶಬ್ದವು ಕೇಳಿಬರಲು ಅಲ್ಲಿಗೆ ಹೋಗಿ ಆ ರಾಮನು ಕೇಳಿದನು.

ಆಕೆಯು ನಿದ್ರಾದೇವಿಯಾಗಿದ್ದಳು. ಕುಂಭಕರ್ಣನು ಸತ್ತಾಗಿನಿಂದ ತನಗೆ ಜಾಗವಿಲ್ಲವೆಂದೂ ಬ್ರಹ್ಮನು ನಿನ್ನ ಬಳಿಗೆ ಕಳುಹಿಸಿದನೆಂದೂ ಹೇಳಿದಳು. ಆಗ ಅದನ್ನು ಕೇಳಿ ಅವಳಿಗೆ ಒಂದು ಯುಕ್ತವಾದ ಜಾಗವನ್ನು ಕೊಟ್ಟನು.

ಕುಂಭಕರ್ಣನ ಮಗನಾದ ನಿಕುಂಭನ ಹೆಂಡತಿಯು ಗರ್ಭಿಣಿಯಾಗಿದ್ದು ಅವನು ಸಾಯುವಾಗ ತನ್ನ ತಂದೆಯ ಮನೆಗೆ ಹೋಗಿದ್ದಳು. ಆವಳು ಪೌಂಡ್ರಕ ನೆಂಬ ಮಗನನ್ನು ಹೆತ್ತಳು. ಅವನು ದೊಡ್ಡವನಾದಮೇಲೆ ಮಾಯಾಪುರಿಯಲ್ಲಿ ರುವ ಶತಕಂಠ ರಾವಣನೊಡನೆ ಸ್ನೇಹವನ್ನು ಮಾಡಿಕೊಂಡನು. ಅವನ ಸಹಾಯು ದಿಂದ ಈ ವಿಭೀಷಣನನ್ನು ಜಯಿಸಿ ತಾನೇ ಲಂಕೆಯನ್ನು ಆಳುತ್ತಿದ್ದನು. ಅವನನ್ನು ಸೀತೆಯು ಕೊಂದು ವಿಭೀಷಣನಿಗೆ ರಾಜ್ಯವನ್ನು ಕೊಡಿಸಿದಳು.

ಒಂದುಸಾರಿ ವಿಭೀಷಣನು ರಾಮನ ಬಳಿಗೆ ಬಂದು ತನಗೆ ತೊಂದರೆಯು ಬಂದಿರುವುದೆನಲು ರಾಮನು ಅದೇನೆಂದು ಕೇಳಿದನು.

ಆಗ ವಿಭೀಷಣನು ಎಲೈ ರಾಮನೆ! ಕುಂಭಕರ್ಣನಿಗೆ ಒಬ್ಬನು ಮಗನು ಹುಟ್ಟಿದನು. ಅವನನ್ನು ಕಾಡಿನಲ್ಲಿ ಬಿಟ್ಟುಬಿಟ್ಟನು. ಅವನು ಕಾಡಿನಲ್ಲಿ ಹೇಗೋ ದೊಡ್ಡವನಾಗಿ ಬ್ರಹ್ಮನಿಂದ ವರವನ್ನು ಪಡೆದು ಈಗ ನಮ್ಮಮೇಲೆ ಯುದ್ಧಕ್ಕೆ ಬಂದಿರುವನು. ಎಂದೆನಲು ರಾಮನು ಎಲ್ಲಾ ರಾಜರನ್ನೂ ಕರೆದುಕೊಂಡು ಅವನ ಮೇಲೆ ಯುದ್ಧಕ್ಕೆ ಹೋದನು. ಆಗ ಸೀತೆಯು ಊರಿನಲ್ಲಿಯೇ ನಿಂತಳು.

ರಾಮನು ಆ ರಾಕ್ಷಸನಮೇಲೆ ಯುದ್ಧಮಾಡಲು ಅವನ ಪರಿವಾರವೆಲ್ಲವೂ ನಾಶವಾಯಿತು. ಆಗ ಅವನು ಅಭಿಚಾರದ ಯಾಗಕ್ಕೆ ಹೊರಟನು. ಅನಂತರ ರಾಮನು ಬ್ರಹ್ಮನ ಮಾತಿನಂತೆ ಸೀತೆಯನ್ನು ಕರೆಸಿ ಅವಳಿಂದ ಅವನನ್ನು ಕೊಲ್ಲಿಸಲು ಗರುಡ ಹನುಮಂತರನ್ನು ಕಳುಹಿಸಿ ಅವಳನ್ನು ಕರೆಸಿದನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ
॥ ಪಂಚಮಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಅಥ ಭೂಮಿಸುತಾಯೋಧ್ಯಾಪುರ್ಯಾಂ ಸಾ ಹೃದಿ ರಾಘವಂ ।
ಸ್ಮರಂತ್ಯಾಸೀತ್ತದ್ವಿರಹಾದ್ವ್ಯಾಕುಲಾಶ್ರುಕುಲಾಕ್ಷಿಣೀ ॥ ೧ ॥

ಪ್ರಾಸಾದೇ ಸಾ ಕದಾ ತಸ್ಥೌ ಕದಾ ಪ್ರಾಸಾದಮೂರ್ಧನಿ ।
ಕದಾ ದ್ರಾಕ್ಷಾಮಂಟಪೇಷು ಕದಾ ಸನ್ಯಸ್ತಭೂಷಣಾ ॥ ೨ ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ
ಐದನೆಯ ಸರ್ಗವು

೧. ಶ್ರೀ ರಾಮದಾಸನು ಹೇಳಿದನು—ಇತ್ತ ಅಯೋಧ್ಯಾನಗರದಲ್ಲಿ ಸೀತೆಯು ರಾಮನನ್ನು ಮನಸ್ಸಿನಲ್ಲಿ ಸ್ಮರಿಸುತ್ತ ಅವನ ವಿರಹದಿಂದ ಕಣ್ಣೀರು ಸುರಿಸುತ್ತ ದುಃಖಪಡುತ್ತಿದ್ದಳು.

೨. ಈ ದುಃಖದಿಂದ ಆಕೆಯು ಒಂದೊಂದುಸಾರಿ ಮಹಡಿಯ ಮೇಲು ಗಡೆಯಲ್ಲಿರುತ್ತಿದ್ದಳು. ಒಂದೊಂದುಸಾರಿ ಬಿಸಿಲುಮಚ್ಚಿನ ಮೇಲಿರುತ್ತಿದ್ದಳು ಮತ್ತೊಂದುಸಾರಿ ದ್ರಾಕ್ಷಾಮಂಟಪದಲ್ಲಿರುವಳು. ಒಂದುಸಾರಿ ಒಡವೆಯೆಲ್ಲ ವನ್ನೂ ತೆಗೆದುಬಿಟ್ಟಿರುವಳು.

ವಾರಸ್ತ್ರೀಣಾಂ ಕದಾ ನೃತ್ಯಂ ದದರ್ಶ ಜನಕಾತ್ಮಜಾ ।
ಕದಾ ಜಯಾರ್ಥಂ ರಾಮಸ್ಯ ಕಾರ್ತವೀರ್ಯಂ ಪ್ರಪೂಜಯತ್ ॥ ೩ ॥

ಕದಾಽಕರೋಚ್ಚ ತುಲಸೀಶಿವಾಶ್ವತ್ಥ ಪ್ರದಕ್ಷಿಣಂ ।
ಮನ್ಯುಸೂಕ್ತಾನಿ ವಿಪ್ರೈಶ್ಚ ಪಾಠಯಾಮಾಸ ಜಾನಕೀ ॥ ೪ ॥

ಗೋಮಯೇನಾಂಜನೇಯಂ ಸಾ ಕುಡ್ಯಾಂ ಕೃತ್ವಾರ್ಚ್ಯ ಜಾನಕೀ ।
ಅಕರೋತ್ಪ್ರತ್ಯಹಂ ಪುಚ್ಛವೃದ್ಧಿಂ ಸ್ವಾಂಗುಲಿಮಾತ್ರತಃ ॥ ೫ ॥

ಶತರುದ್ರೀಯಸೂಕ್ತಸ್ಯ ಜಯಾರ್ಥಂ ರಾಘವಸ್ಯ ಸಾ ।
ಪಾಠಾನಾಕಾರಯದ್ವಿಪ್ರೈಸ್ತಥಾ ದುರ್ಗಾಂ ಪ್ರಪೂಜಯತ್ ॥ ೬ ॥

---

೩ ಒಂದೊಂದುಸಾರಿ ವಾರನಾರಿಯರ ನರ್ತನವನ್ನು ನೋಡುತ್ತಿರುವಳು. ಒಂದೊಂದುಸಾರಿ ರಾಮನಿಗೆ ಜಯವಾಗಲೆಂದು ಕಾರ್ತವೀರ್ಯನನ್ನು ಪೂಜಿಸುತ್ತಿರುವಳು.

೪. ಯಾವಾಗಲೂ ತುಲಸೀ ಪ್ರದಕ್ಷಿಣೆಯನ್ನು ಮಾಡುತ್ತಲೂ, ಶಿವನನ್ನೂ ಅರಳಿ ಮರವನ್ನೂ ಪ್ರದಕ್ಷಿಣೆಮಾಡುತ್ತಲೂ ಇರುವಳು. ಬ್ರಾಹ್ಮಣರಿಂದ ಮನ್ಯು ಸೂಕ್ತವನ್ನು ಹೇಳಿಸುತ್ತಿರುವಳು.

೫. ಹಸುವಿನ ಸಗಣಿಯಲ್ಲಿ ಆಂಜನೇಯನನ್ನು ರಚಿಸಿ ಅದನ್ನು ಗೋಡೆಯಮೇಲಿಟ್ಟು ಪೂಜಿಸುತ್ತ ಪ್ರತಿದಿನವೂ ಅದಕ್ಕೆ ಒಂದೊಂದು ಅಂಗುಲದಷ್ಟು ಉದ್ದವಾಗುವಂತೆ ಆ ಬಾಲವನ್ನು ಹೆಚ್ಚಿಸುತ್ತಿರುವಳು.

೬. ರಾಮನಿಗೆ ಜಯವಾಗಲೆಂದು ಬ್ರಾಹ್ಮಣರ ಕೈಯ್ಯಿಂದ ಶತರುದ್ರೀಯವನ್ನು ಪಾರಾಯಣ ಮಾಡಿಸುತ್ತಿದ್ದಳು. ಅಂತೆಯೇ ದುರ್ಗಿಯನ್ನು ಪೂಜಿಸುತ್ತಿದ್ದಳು.

ಗಣೇಶಂ ಮಾರುತಿಂ ಶಂಭುಂ ಸದ್ಭೈರ್ತಾ ಜಲವರ್ತಿನಃ |
ಚಕಾರ ಬದ್ಧ್ವಾ ದ್ವಾರಾಣಿ ಗವಾಕ್ಷೈಸ್ಸೇಚಯುಜ್ಜಲಂ || ೭ ||

ಕಾರ್ತವೀರ್ಯಸ್ಯ ವೈ ಯಂತ್ರಂ ಸ್ಥಾಪಯಾಮಾಸ ಜಾನಕೀ |
ಮಂಚಕೇ ರಾಘವೇಂದ್ರಸ್ಯ ಪೂಜಯಾಮಾಸ ಸರ್ವದಾ || ೮ ||

ಕದಾ ಸಖೀಮಧ್ಯಗಾ ಸಾ ತ್ಯಕ್ತಾಲಂಕಾರಮಂಡನಾ |
ಜಲಯಂತ್ರಾಂತಿಕೇ ನಿದ್ರಾಂ ನಾಪ ತದ್ವಿರಹಾಗ್ನಿನಾ || ೯ ||

ಕದಾ ನಿರೀಕ್ಷ್ಯ ಪ್ರಾಸಾದೇ ಕಾಕಮಾಹ ವಿದೇಹಜಾ |
ಯದಿ ಶೀಘ್ರಂ ರಾಘವಸ್ಯ ದರ್ಶನಂ ಮೇ ಭವಿಷ್ಯತಿ || ೧೦ ||

ತರ್ಹಿ ತ್ವಂ ಗಚ್ಛ ವೇಗೇನ ನೋ ಚೇದತ್ರ ಸ್ಥಿರೋ ಭವ |
ತತ್ಸೀತಾವಚನಂ ಶ್ರುತ್ವಾ ಕಾಕಸ್ತೂಡ್ಡೀಯ ವೇಗತಃ || ೧೧ ||

---

೭. ಗಣೇಶ, ಮಾರುತಿ, ಶಿವ ಇವರನ್ನು ನೀರಿನಲ್ಲಿರುವಂತೆ ಕಟ್ಟೆಗಳನ್ನು ಕಟ್ಟಿಸಿ ನೀರು ಹೋಗುವ ಬಚ್ಚಲುಗಳನ್ನು ಮುಚ್ಚಿಸಿ ಕಿಟಕಿಯಂತೆ ಕಂಡಿಗಳನ್ನು ಮಾಡಿಕೊಂಡು ಅದರಿಂದ ನೀರನ್ನು ಹಾಕುತ್ತಿದ್ದಳು.

೮. ಕಾರ್ತವೀರ್ಯನ ಯಂತ್ರವನ್ನು ಬರೆಸಿ ಅದನ್ನು ರಾಮನ ಮಂಚದಲ್ಲಿ ಸ್ಥಾಪಿಸಿ ಅದಕ್ಕೆ ನಿತ್ಯವೂ ಪೂಜೆಯನ್ನು ಮಾಡುತ್ತಿದ್ದಳು.

೯. ಆ ಸೀತೆಯು ಯಾವಾಗಲೂ ಅಲಂಕಾರಗಳನ್ನು ತೆಗೆದು ಸಖಿಯರ ಮಧ್ಯದಲ್ಲಿದ್ದುಕೊಂಡು ತಣ್ಣಗಿರುವ ಜಲಯಂತ್ರಗಳ ಬಳಿಯಲ್ಲಿ ಮಲಗುತ್ತಿದ್ದಳು ಆದರೂ ಆ ರಾಮ ವಿರಹಾಗ್ನಿಯಿಂದ ನಿದ್ರೆಯು ಬರುತ್ತಲಿರಲಿಲ್ಲ.

೧೦-೧೧. ಒಂದುಸಾರಿ ಮಹಡಿಯ ಮೇಲಿರುವಾಗ ಅಲ್ಲಿ ಮನೆಯ ಮೇಲೆ ಕುಳಿತಿರುವ ಕಾಗೆಯನ್ನು ನೋಡಿ ಸೀತೆಯು ನನಗೆ ರಾಮನ ದರ್ಶನವು ಬೇಗ ಆಗುವಂತಿದ್ದರೆ ನೀನು ಇಲ್ಲಿಂದ ಬೇಗ ಎದ್ದು ಹಾರಿ ಹೋಗು. ಇಲ್ಲದಿದ್ದರೆ ಇಲ್ಲಿಯೇ ಕುಳಿತಿರು ಎನ್ನುತ್ತಿದ್ದಳು. ಸೀತೆಯ ಈ ಮಾತನ್ನು ಕೇಳಿ ಕಾಗೆಯು ಬೇಗನೆ ಎದ್ದು ಹಾರುತ್ತಿದ್ದಿತು.

ತೇನ ಕಿಂಚಿತ್ಸಮಾಶ್ವಸ್ತಾ ಪವನಂ ಪ್ರಾಹ ಜಾನಕೀ ।
ಸ್ಪೃಷ್ಟ್ವಾ ತ್ವಂ ರಾಘವಾಂಗಾನಿ ಮಾಂ ಸ್ಪರ್ಶಂ ಕರ್ತುಮರ್ಹಸಿ ॥ ೧೨ ॥

ಕದಾ ಚಂದ್ರಂ ನಿಶಿ ಪ್ರಾಹ ತ್ವಂ ಸ್ಪೃಷ್ಟ್ವಾ ಶೀತಲೈಃ ಕರೈಃ ।
ಶ್ರೀರಾಮಂ ಮಾಂ ಸ್ಪೃಶಸ್ವಾದ್ಯ ಸ್ವಕರೈಸ್ಸುಖಕಾರಕೈಃ ॥ ೧೩ ॥

ಶುಕ್ಲಪಕ್ಷೇ ದ್ವಿತೀಯಾಯಾಂ ಸೀತಾಲಂಕಾರಮಂಡಿತಾ ।
ಸ್ನಾತ್ವಾ ಪ್ರಾಕಾರಶಿಖರಾತ್ಸಖೀಭಿಃ ಪರಿವೇಷ್ಟಿತಾ ॥ ೧೪ ॥

ಅಪಶ್ಯಚ್ಛಶಿನಂ ಹರ್ಷಾದ್ಯೇನ ರಾಮೋದ್ಯ ಪಶ್ಯತಿ ।
ಅಂತರೇಣಾದ್ಯ ರಾಮಸ್ಯ ಸಂಯೋಗೋ ಮಾಂ ಭವೇದಿತಿ ॥ ೧೫ ॥

---

೧೨. ಇದರಿಂದ ಆಕೆಗೆ ಸ್ವಲ್ಪ ಸಮಾಧಾನವಾಗುತ್ತಿದ್ದಿತು. ಅನಂತರ ಗಾಳಿಯನ್ನು ಕುರಿತು ಸೀತೆಯು ಎಲೈ ವಾಯುವೇ! ನೀನು ಆ ರಾಮನ ಅಂಗವನ್ನು ಮುಟ್ಟಿ ಅನಂತರ ಬಂದು ನನ್ನ ಅವಯವವನ್ನು ಮುಟ್ಟು ಎಂದು ಹೇಳುತ್ತಿದ್ದಳು.

೧೩. ಒಂದೊಂದುಸಾರಿ ಆ ಸೀತೆಯು ಚಂದ್ರನನ್ನು ಕುರಿತು ಎಲೈ ಚಂದ್ರನೇ! ನೀನು ನಿನ್ನ ಕಿರಣಗಳಿಂದ ಆ ರಾಘವನನ್ನು ಮುಟ್ಟು. ಅನಂತರ ಸುಖಕರಗಳಾದ ಆ ಕಿರಣಗಳಿಂದ ನನ್ನನ್ನು ಮುಟ್ಟು ಎನ್ನುತ್ತಿದ್ದಳು.

೧೪–೧೫. ಶುಕ್ಲಪಕ್ಷದ ಬಿದಿಗೆಯ ದಿವಸ ಸೀತೆಯು ಸ್ನಾನಮಾಡಿ ಅಲಂಕರಿಸಿಕೊಂಡು ಸಖಿಯಿಂದ ಕೂಡಿಕೊಂಡು ಮಹಡಿಯಮೇಲೆ ನಿಂತು ಕೊಂಡು ಚಂದ್ರನನ್ನು ನೋಡಿದರೆ ಶೀಘ್ರವಾಗಿ ಪ್ರಿಯರ ಸಮಾಗಮವಾಗುವು ದೆಂದು ತಿಳಿದಿದ್ದುದರಿಂದ ರಾಮನನ್ನು ಬೇಗನೆ ನೋಡಬೇಕೆಂಬ ಕುತೂಹಲದಿಂದ ಆ ಚಂದ್ರನನ್ನೇ ನೋಡುತ್ತಿದ್ದಳು.

ರಾಮೇ ಗತೇ ಕದಾ ಸೀತಾ ಹರಿದ್ರಾಕಜ್ಜಲಾನ್ವಿತಾ ।
ನಾತ್ಮಾನಂ ಭೂಷಯಾಮಾಸ ಹ್ಯತ್ರಿಪತ್ನ್ಯರ್ಪಿತಂ ವಿನಾ ॥ ೧೬ ॥

ಚಂದನಂ ಪುಷ್ಪಮಾಲಾಶ್ಚ ಪುಷ್ಪಶಯ್ಯಾಂ ವಿದೇಹಜಾ ।
ನಾಂಗೀಚಕಾರ ಶ್ರೀರಾಮವಿರಹಾನಲಪೀಡಿತಾ ॥ ೧೭ ॥

ಶಕುನಾನ್ಸಾದದರ್ಶಾಥ ಶ್ರೀರಾಮದರ್ಶನೇಚ್ಛಯಾ ।
ತುಷ್ಟಾಭೂಚ್ಛಕುನ್ಯೈಃ ಶ್ರುತ್ವಾ ಶೀಘ್ರಂ ರಾಮಸಮಾಗಮಃ ॥ ೧೮ ॥

ಭವೇದಿತಿ ಸಖೀಯುಕ್ತಾ ದದೌ ಸರ್ವಾ ಸುಶರ್ಕರಾಃ ।
ಕದಾ ಪರಗೃಹಂ ಸೀತಾ ನ ಯಯೌ ರಾಘವಂ ವಿನಾ ॥ ೧೯ ॥

---

೧೬. ರಾಮನು ಹೊರಟುಹೋದ ಮೇಲೆ ಸೀತೆಯು ಅರಶಿನವನ್ನು ಪೂಸಿಕೊಂಡಾಗಲಿ, ಕಪ್ಪುಗಳನ್ನು ಹಚ್ಚಿಕೊಂಡಾಗಲಿ ಅಲಂಕರಿಸಿಕೊಳ್ಳುತ್ತಿರಲಿಲ್ಲ. ಆದರೆ ಅತ್ರಿಋಷಿಯ ಪತ್ನಿಯಾದ ಅನಸೂಯೆಯು ಕೊಟ್ಟದ್ದುದು ಮಾತ್ರ ಅಲಂಕಾರವಾಗಿರುತ್ತಿದ್ದಿತು.

೧೭. ಚಂದನವನ್ನು ಪೂಸಿಕೊಳ್ಳುತ್ತಿರಲಿಲ್ಲ. ಹೂಮಾಲೆಯನ್ನು ಮುಡಿದುಕೊಳ್ಳುತ್ತಿರಲಿಲ್ಲ. ಹೂವಿನ ಹಾಸಿಗೆಯಮೇಲೆ ಮಲಗುತ್ತಿರಲಿಲ್ಲ. ರಾಮನ ವಿರಹದಿಂದ ಇವೆಲ್ಲವನ್ನೂ ಬಿಟ್ಟುಬಿಟ್ಟಿದ್ದಳು.

೧೮-೧೯. ಆಕೆಯು ಶ್ರೀರಾಮನನ್ನು ನೋಡಬೇಕೆಂಬ ಕುತೂಹಲದಿಂದ ಶಕುನಗಳನ್ನು ನೋಡಿ ಅದರಲ್ಲಿ ರಾಮನ ದರ್ಶನವಾಗುವುದೆಂದು ತಿಳಿದುಬರಲು ಸಂತೋಷಗೊಂಡು ತನ್ನ ಸಖಿಯರಿಗೆಲ್ಲಾ ಸಂತೋಷದಿಂದ ಸಕ್ಕರೆಯನ್ನು ತಂದು ಕೊಡುತ್ತಿದ್ದಳು. ರಾಘವನಿಲ್ಲದಿದ್ದಾಗ ಸೀತೆಯು ಪರರ ಮನೆಗೆ ಹೋಗುತ್ತಲೇ ಇರಲಿಲ್ಲ.

ನೈಕಾ ತಸ್ಥೌ ಕ್ವಾಪಿ ಸೀತಾ ಸ್ವಾಭ್ಯಂಗೋದ್ವರ್ತನಂ ಜಹೌ ।
ನ ಮೃಷ್ಟಾನ್ನಂ ನ ತಾಂಬೂಲಂ ನ ಗೀತಂ ಕೇಶಬಂಧನಂ ॥ ೨೦ ॥

ಅಂಗೀಚಕಾರ ಶ್ರೀರಾಮವಿರಹಾನಲದೀಪಿತಾ ।
ಸಂಭಾಷಣಂ ಸಾ ಸಾನ್ಯೇನ ಪುರುಷೇಣಾಕರೋತ್ಕದಾ ॥ ೨೧ ॥

ನಾಕರೋತ್ಸಸ್ಮಿತಂ ವಕ್ತ್ರಂ ನೋರ್ಧ್ವಾಸ್ಯಾನ್ಯಂ ದದರ್ಶ ಸಾ ।
ಅನ್ಯಾಕ್ಷಿಗೋಚರಾ ನಾಭೂನ್ನ ಸಂತುಷ್ಟಾಭವತ್ಕದಾ ॥ ೨೨ ॥

ಪರ್ಯಂಕೇ ಶಯನಂ ಸೀತಾ ನಾಕರೋದ್ರಾಘವಂ ವಿನಾ ।
ಮುಕುರೇ ನ ದದರ್ಶೇತ್ಥಂ ಮುಖಂ ವಿರಹಪಾಂಡುರಂ ॥ ೨೩ ॥

---

೨೦. ಒಬ್ಬಂಟಿಗಳಾಗಿ ಕುಳಿತಿರುತ್ತಿರಲಿಲ್ಲ. ಅಭ್ಯಂಜನವನ್ನು ಬಿಟ್ಟು ಬಿಟ್ಟಿದ್ದಳು. ಮೃಷ್ಟಾನ್ನವನ್ನು ಊಟಮಾಡುತ್ತಿರಲಿಲ್ಲ. ತಾಂಬೂಲವನ್ನು ಹಾಕಿ ಕೊಳ್ಳುತ್ತಿರಲಿಲ್ಲ. ಸಂಗೀತವನ್ನು ಕೇಳುತ್ತಿರಲಿಲ್ಲ. ತಲೆಯನ್ನು ಬಾಚಿ ಹೆರಳನ್ನು ಹಾಕಿ ಕೊಳ್ಳುತ್ತಿರಲಿಲ್ಲ.

೨೧. ರಾಮ ವಿರಹದಿಂದ ಇವುಗಳೊಂದನ್ನೂ ಅಂಗೀಕರಿಸದೆ ಬಿಟ್ಟು ಬಿಟ್ಟಿದ್ದಳು. ಪರಪುರುಷನೊಡನೆ ಸಂಭಾಷಣೆಯನ್ನು ಮಾಡುತ್ತಲೇ ಇರಲಿಲ್ಲ.

೨೨. ನಗುಮುಖವನ್ನು ಹೊಂದುತ್ತಲೇ ಇರಲಿಲ್ಲ. ತಲೆಯೆತ್ತಿ ಯಾರನ್ನೂ ನೋಡುತ್ತಲೇ ಇರಲಿಲ್ಲ. ಮತ್ತೊಬ್ಬರನ್ನು ಕಡೆಗಣ್ಣಿನಿಂದಲೂ ನೋಡುತ್ತ ಲಿರಲಿಲ್ಲ. ಸಂತೋಷವೆಂಬುದನ್ನು ಹೊಂದುತ್ತಲೇ ಇರಲಿಲ್ಲ.

೨೩. ರಾಮನಿಲ್ಲದುದರಿಂದ ಮಂಚದಮೇಲೆ ಮಲಗುತ್ತಲೇ ಇರಲಿಲ್ಲ. ವಿರಹದಿಂದ ಬೆಳ್ಳಗಾಗಿರುವ ಮುಖವನ್ನು ಕೂಡ ಕನ್ನಡಿಯಲ್ಲಿ ನೋಡಿ ಕೊಳ್ಳುತ್ತಲೇ ಇರಲಿಲ್ಲ.

ನ ದಧೌ ವಸನಂ ಚಿತ್ರಂ ನ ಚಿತ್ರಾಂ ಕಂಚುಕೀಂ ದಧೌ ।
ನ ತಸ್ಥೌ ದ್ವಾರದೇಶೇ ಚ ದೇಹಲ್ಯಂಗಳಭೂಮಿಷು ॥ ೨೪ ॥

ನ ಯಯೌ ಶರಯೂಂ ಸ್ನಾತುಂ ಯಯೌ ನೋಪವನಂ ವನಂ ।
ಆರಾಮಂ ನ ಯಯೌ ಸೀತಾ ನ ತಥಾ ಪುಷ್ಪವಾಟಿಕಾಂ ॥ ೨೫ ॥

ನ ಚಕಾರ ಸ್ವತೋ ದೂರಂ ಮಾಂಗಲ್ಯಾನಿ ವಿದೇಹಜಾ ।
ವಸ್ತೂನಿ ದ್ವಿಜಪತ್ನೀಸ್ತೈಸ್ತೋಷಯಾಮಾಸ ಜಾನಕೀ ॥ ೨೬ ॥

ನಿಯಮಾನ್ನ ಕರೋನ್ನಾನಾ ದೇವೀನಾಂ ಚ ಪೃಥಕ್ ಪೃಥಕ್ ।
ನಿಯಮೈಶ್ಚ ವ್ರತೈಸ್ತಸ್ಥೌ ಸ್ವಯಂ ನಿತ್ಯಂ ವಿದೇಹಜಾ ॥ ೨೭ ॥

---

೨೪. ಆಕೆಯು ವಿರಹದಿಂದ ಬಣ್ಣಬಣ್ಣದ ಸೀರೆಗಳನ್ನೂ, ಬಣ್ಣದ ಕುಪ್ಪಸವನ್ನೂ ಧರಿಸುತ್ತಿರಲಿಲ್ಲ. ಬಾಗಿಲಿನಲ್ಲಿ ನಿಂತುಕೊಳ್ಳುವುದಾಗಲೀ ಮಾಡುತ್ತಲೇ ಇರಲಿಲ್ಲ. ಹೊಸಲಿನ ಬಳಿಯಲ್ಲಾಗಲಿ, ಒಳಗಿನ ಅಂಗಳದಲ್ಲಾಗಲಿ ಇರುತ್ತಿರಲಿಲ್ಲ.

೨೫. ಸರಯೂ ನದಿಗೆ ಸ್ನಾನಕ್ಕೆ ಹೋಗುತ್ತಿರಲಿಲ್ಲ. ಉಪವನಕ್ಕೆ ಹೋಗುತ್ತಿರಲಿಲ್ಲ. ತೋಟಗಳಿಗಾಗಲೀ ಹೂವಿನ ತೋಟಕ್ಕಾಗಲಿ ಹೋಗುತ್ತಲೇ ಇರಲಿಲ್ಲ.

೨೬. ಮಂಗಳ ವಸ್ತುಗಳನ್ನು ತನ್ನ ಬಳಿಯಲ್ಲಿಯೇ ಇಟ್ಟುಕೊಂಡಿರುತ್ತಿದ್ದಳು. ಮಂಗಳ ವಸ್ತುಗಳನ್ನು ಬ್ರಾಹ್ಮಣ ಮುತ್ತೈದೆಯರಿಗೆ ಕೊಟ್ಟು ಸಂತೋಷಪಡಿಸುತ್ತಿದ್ದಳು.

೨೭. ದೇವತೆಗಳ ತೃಪ್ತಿಗೋಸ್ಕರ ಅನೇಕವಾದ ನಿಯಮಗಳನ್ನು ಆಚರಿಸುತ್ತಿದ್ದಳು. ಆ ನಿಯಮಗಳಿಂದಲೂ, ವ್ರತಗಳಿಂದಲೂ ಸೀತೆಯು ಯಾವಾಗಲೂ ಇರುತ್ತಿದ್ದಳು.

ವಟಕಾನಾಂ ಮಹಾಮಾಲಾಮರ್ಪಯಾಮಿ ಹನೂಮತೇ |
ಮೋದಕಾನ್ ಗಣರಾಜಾಯ ದಾಸ್ಯಾಮಿ ಪೂರಣಾನ್ವಿತಾನ್ || ೨೮ ||

ಸಿದ್ಧಾನ್ನೇನಾಪಿ ನೈವೇದ್ಯಂ ತೇ ದಾಸ್ಯಾಮಿ ಗಣಾಧಿಪ |
ದುರ್ಗೇ ತ್ವಾಂ ಬಲಿದಾನಂ ಚ ಕರಿಷ್ಯಾಮಿ ಪ್ರಸೀದ ಮೇ || ೨೯ ||

ಚಂಡಿಕೇ ತ್ವಾಂ ಪ್ರದಾಸ್ಯಾಮಿ ರಕ್ತಂ ಜಿಹ್ವೋದ್ಭವಂ ತ್ವಹಂ |
ಸುಷ್ಠ್ವನ್ನಂ ಮಾಷಸಂಯುಕ್ತಂ ಬಲಿದೀಪಸಮನ್ವಿತಂ || ೩೦ ||

ಶೀಘ್ರಂ ರಾಮೋ ಜಯಂ ಪ್ರಾಪ್ಯ ಶಿಶುಭಿರ್ಯಾತು ವೈ ಪುರೀಂ |
ಮಂದವಾರೇ ಕರಿಷ್ಯಾಮಿ ಪಂಚ ಚೋಪೋಷಣಾನ್ಯಹಂ || ೩೧ ||

---

೨೮. ಹನುಮಂತನೇ ! ನಿನಗೆ ಒಡವೆಗಳ ಮಾಲೆಯನ್ನು ಮಾಡಿ ಹಾಕುತ್ತೇನೆ. ಎಲೈ ಗಣಪತಿಯೇ ! ನಿನಗೆ ಹೂರಣದಿಂದ ಮಾಡಿರುವ ಕಡುಬುಗಳನ್ನು ಮಾಡಿ ಕೊಡುತ್ತೇನೆ. ರಾಮನು ಜಯವನ್ನು ಹೊಂದಿ ತಮ್ಮಂದಿರೊಡನೆಯೂ ಮಕ್ಕಳೊಡನೆಯೂ ಬರಲಿ.

೨೯. ಎಲೈ ಗಣಪತಿಯೇ ! ನಿನಗೆ ಒಳ್ಳೆಯ ಮೃಷ್ಟಾನ್ನವನ್ನು ಮಾಡಿಸಿ ನಿವೇದನವನ್ನು ಮಾಡುತ್ತೇನೆ. ಎಲೈ ದುರ್ಗಿಯೇ ! ನಿನಗೆ ಬಲಿದಾನವನ್ನು ಮಾಡಿಸುತ್ತೇನೆ. ರಾಮನು ಜಯವನ್ನು ಹೊಂದಿ ಮಕ್ಕಳೊಡನೆಯೂ ತಮ್ಮಂದಿರೊಡನೆಯೂ ಬರಲಿ.

೩೦. ಎಲೈ ಚಂಡಿಯೇ ! ನಿನಗೆ ನಾಲಿಗೆಯ ರಕ್ತವನ್ನು ಕೊಡುತ್ತೇನೆ. ಉದ್ದಿನ ಹುಡಿಯನ್ನವನ್ನು ಚೆನ್ನಾಗಿ ಮಾಡಿಸಿಕೊಡುತ್ತೇನೆ. ದೊಡ್ಡದಾದ ದೀಪವನ್ನು ಹಚ್ಚುತ್ತೇನೆ. ಬಲಿಯನ್ನು ಕೊಡುತ್ತೇನೆ.

೩೧. ರಾಮನು ಬೇಗನೆ ಜಯವನ್ನು ಹೊಂದಿ ಮಕ್ಕಳೊಡನೆ ಪಟ್ಟಣಕ್ಕೆ ಹಿಂದಿರುಗಿ ಬರಲಿ. ಐದು ಶನಿವಾರಗಳ ದಿವಸ ಉಪವಾಸವನ್ನು ಮಾಡುತ್ತೇನೆ.

ನೋಪಭೋಕ್ಷ್ಯಾಮಿ ಮಧುರಂ ನೋಪಭೋಕ್ಷ್ಯಾಮ್ಯಹಂ ಘೃತಂ ।
ಮಾಸಮೇಕಂ ಕರಿಷ್ಯಾಮಿ ವ್ರತಾನ್ಯೇವಂ ಸವಿಸ್ತರಾತ್ ॥ ೩೨ ॥

ಕೃಷ್ಣಪಕ್ಷೇ ತೃತೀಯಾಯಾಂ ಚತುರ್ಥ್ಯಾಂ ವಾ ಮಹೇಶ್ವರಿ ।
ಕಿಂಚಿತ್ಕಿಂಚಿನ್ಮಾಸಿ ಮಾಸಿ ತಿಲವೃದ್ಧಿಂ ವಿಧಾಯ ಚ ॥ ೩೩ ॥

ಗುಡೇನಾಹಂ ತಿಲಾನ್ಭೋಕ್ಷ್ಯೇ ಯಾವಚ್ಛ್ರೀರಾಮದರ್ಶನಂ ।
ಭವಿಷ್ಯತಿ ಕುಶಾದ್ಯೈಶ್ಚ ಲಕ್ಷ್ಮಣಾದ್ಯೈಶ್ಚ ಬಂಧುಭಿಃ ॥ ೩೪ ॥

ಸತ್ವರಂ ನವರಾತ್ರಂ ಚ ಸಖೀಭಿಶ್ಚ ಕರೋಮ್ಯಹಂ ।
ಏಕಸ್ಮಿನ್ನೇವ ದಿವಸೇ ನವಭಿಃ ಪ್ರಭುದರ್ಶನೇ ॥ ೩೫ ॥

---

೩೨. ಸಕ್ಕರೆ ಬೆಲ್ಲಗಳಿಂದ ಕೂಡಿದ ಸಿಹಿಯಾದ ಪದಾರ್ಥವನ್ನು ಊಟಮಾಡುವುದಿಲ್ಲ. ತುಪ್ಪವನ್ನು ಹಾಕಿಸಿಕೊಂಡಾಗಲಿ, ಅದರ ಸಂಬಂಧವಾದದನ್ನಾಗಲೀ ಊಟಮಾಡುವುದಿಲ್ಲ. ಈರೀತಿಯಾಗಿ ವ್ರತವನ್ನು ಒಂದು ತಿಂಗಳವರೆಗೆ ಮಾಡುತ್ತೇನೆ.

೩೩–೩೪. ಎಲೈ ಮಹೇಶ್ವರಿಯೇ ! ಕೃಷ್ಣಪಕ್ಷದ ತದಿಗೆಯ ದಿನವಾಗಲೀ ಚತುರ್ದಶಿಯಲ್ಲಾಗಲಿ ತಿಂಗಳು ತಿಂಗಳಿಗೂ ಎಳ್ಳನ್ನು ಒಂದು ನಿಯಮದಿಂದ ಹೆಚ್ಚಿಸಿಕೊಂಡು ಬೆಲ್ಲವನ್ನು ಸೇರಿಸಿಕೊಂಡು ಶ್ರೀರಾಮನು ಬರುವವರೆಗೂ ತಿನ್ನುತ್ತೇನೆ. ರಾಮನು ತಮ್ಮಂದಿರೊಡನೆಯೂ ಮಕ್ಕಳೊಡನೆಯೂ ಬೇಗನೆ ಬರಲಿ.

೩೫–೩೬. ಆ ಸ್ವಾಮಿಯ ದರ್ಶನವು ಅವನ ತಮ್ಮಂದಿರೊಡನೆಯೂ, ಮಕ್ಕಳೊಡನೆಯೂ ಒಂಭತ್ತು ದಿನಗಳಲ್ಲಿ ಒಂದೇ ದಿನದಲ್ಲಿ ಆದರೆ ನನ್ನ ಓರಗಿತ್ತಿಯರೊಡನೆ ನಾನು ನವರಾತ್ರಿಯನ್ನು ಆಚರಿಸುತ್ತೇನೆ. ಎಲೈ ರವಿಯೇ !

ರವಿವಾರೇ ಕರಿಷ್ಯಾಮಿ ರವೇಹಂ ಪೂಜನಂ ತವ ।
ಇತ್ಥಂ ದಿನೇ ದಿನೇ ಸೀತಾ ನಿಯಮಾನಕರೋತ್ತದಾ ॥ ೩೬ ॥

ಬ್ರಾಹ್ಮಣೈರರ್ಘ್ಯದಾನಂ ಚ ಕಾರಯಾಮಾಸ ಜಾನಕೀ ।
ನ ಸಾ ಸುಷ್ವಾಪ ರಾತ್ರೌ ತು ದಿವಾ ವಾ ವರವರ್ಣಿನೀ ॥ ೩೭ ॥

ಏವಂ ದಿನೇ ದಿನೇ ಸೀತಾ ಶ್ರೀರಾಮವಿರಹಾತುರಾ ।
ನ ಶರ್ಮಾಪ ಕ್ವಾಪಿ ದೇಶೇ ಶ್ರೀರಾಮಾರ್ಪಿತಮಾನಸಾ ॥ ೩೮ ॥

ಏವಂ ತಾ ಊರ್ಮಿಲಾದ್ಯಾಶ್ಚ ಚಂಪಿಕಾದ್ಯಾಪಿ ವೈ ಸ್ತ್ರಿಯಃ ।
ಸ್ವಸ್ವಸ್ವಾಮಿವಿಯೋಗಾಗ್ನಿಜ್ವಲಿತಾ ವ್ಯಾಕುಲೇಕ್ಷಣಾಃ ॥ ೩೯

ನಾನು ಭಾನುವಾರದ ದಿವಸ ಸೂರ್ಯ ನಮಸ್ಕಾರವನ್ನು ಮಾಡುತ್ತೇನೆ. ರಾಮನ ದರ್ಶನವು ಬೇಗನೆ ಆಗಲಿ, ಸೀತೆಯು ಈರೀತಿಯಾಗಿ ದಿನದಿನವೂ ನಿಯಮಗಳನ್ನೂ ವ್ರತಗಳನ್ನೂ ಅನುಸರಿಸಿ ಮಾಡುತ್ತಿದ್ದಳು.

೩೭. ಬ್ರಾಹ್ಮಣರ ಕೈಯ್ಯಲ್ಲಿ ದೇವತೆಗಳಿಗೆ ಅರ್ಘ್ಯವನ್ನು ಕೊಡಿಸುತ್ತಿದ್ದಳು. ಆಕೆಯು ರಾತ್ರಿಯಲ್ಲಾಗಲೀ ಹಗಲಿನಲ್ಲಾಗಲಿ ನಿದ್ದೆಯನ್ನು ಮಾಡುತ್ತಿರಲಿಲ್ಲ.

೩೮. ಶ್ರೀರಾಮನ ವಿರಹದಿಂದ ಕಳವಳಗೊಂಡ ಸೀತೆಯು ದಿನ ದಿನವೂ ಈರೀತಿಯಾಗಿ ನಿಯಮಗಳನ್ನು ಆಚರಿಸುತ್ತ ಶಾಂತಿಯೆಂಬುದನ್ನೇ ಹೊಂದಲಿಲ್ಲ. ಎಲ್ಲಿಯೂ ಕೂಡ ಮನಸ್ಸಿಗೆ ಶಾಂತಿಯೇ ಆಗುತ್ತಿರಲಿಲ್ಲ. ಯಾವಾಗಲೂ ಶ್ರೀರಾಮನನ್ನು ನೆನೆಯುತ್ತಿದ್ದಳು.

೩೯. ಇದೇ ರೀತಿಯಾಗಿ ಊರ್ಮಿಳೆಯೇ ಮುಂತಾದ ಓರಗಿತ್ತಿಯರೂ, ಚಂಪಿಕೆಯೇ ಮುಂತಾದ ಸೊಸೆಯರೂ ತಮ್ಮ ತಮ್ಮ ಗಂಡಂದಿರ ವಿಯೋಗದಿಂದ ಖೇದಗೊಂಡು ಕಳವಳಪಡುತ್ತಿದ್ದರು.

ನ ಸುಖಂ ಕ್ವಾಪಿ ನೈ ಪ್ರಾಪುಃ ಸ್ವಕಾಂತಾರ್ಪಿತಮಾನಸಾಃ ।
ಸರ್ವಾಸ್ತಾ ಲುಲುಠುರ್ನಾರ್ಯೋ ಮಣಿಭೂಮೌ ಮೃಗೀದೃಶಃ ॥ ೪೦ ॥

ಕಾಚಿನ್ನರ್ತಯತಿ ಕ್ರೀಡಾಮಯೂರಂ ನ ಮುದಾ ತದಾ ।
ಶುಕಂ ನ ಪಾಠಯತ್ಯನ್ಯಾ ಪಂಜರಸ್ಥಂ ಕುತೂಹಲಾತ್ ॥ ೪೧ ॥

ಲಾಲಯೇನ್ನಕುಲಂ ನಾನ್ಯಾ ನಾಲಾಪಯತಿ ಸಾರಿಕಾಂ ।
ಅಪರಾತೀವಸಂತಪ್ತಾ ನೈವ ಖೇಲತಿ ಸಾರಸೈಃ ॥ ೪೨ ॥

ಭೇಜಿರೇ ನ ವಿಲಾಸಂ ತಾ ರೇಮಿರೇ ನೈವ ಮಂದಿರೇ ।
ಸಖೀಭಿರೂಚಿರೇ ನಾಲಂ ವೀಣಾವಾದ್ಯಂ ನ ಶುಶ್ರುವುಃ ॥ ೪೩ ॥

---

೪೦. ಅವರೆಲ್ಲರೂ ತಮ್ಮ ತಮ್ಮ ಗಂಡಂದಿರನ್ನು ಸ್ಮರಿಸಿಕೊಳ್ಳುತ್ತ ಶಾಂತಿಯನ್ನು ಹೊಂದಲೇ ಇಲ್ಲ. ಅದರಿಂದ ಯಾವುದರಲ್ಲಿಯೂ ಸುಖವೇ ಇರಲಿಲ್ಲ. ಇದರಿಂದ ಅವರು ಆ ಮಣಿಮಯವಾದ ನೆಲದಮೇಲೆ ಬಿದ್ದು ಹೊರಳಾಡುತ್ತಿದ್ದರು.

೪೧. ಒಬ್ಬಳೂ ಕೂಡ ಲೀಲಾಮಯೂರವನ್ನು ಸಂತೋಷದಿಂದ ಆಡಿಸುತ್ತಲೇ ಇರಲಿಲ್ಲ. ಪಂಜರದಲ್ಲಿರುವ ಗಿಳಿಯನ್ನು ಮಾತನಾಡಿಸುತ್ತಲೇ ಇರಲಿಲ್ಲ.

೪೨. ಮುಂಗುಸಿಯನ್ನು ಲಾಲಿಸುತ್ತಲೂ ಇರಲಿಲ್ಲ. ಸಾರಿಕೆಯನ್ನು ಮಾತನಾಡಿಸುತ್ತಿರಲಿಲ್ಲ. ಆ ಸಾರಸದೊಡನೆ ಆಟವಾಡುತ್ತಿರಲಿಲ್ಲ.

೪೩. ಒಬ್ಬರೂ ಅಲಂಕಾರಗಳನ್ನು ಧರಿಸುತ್ತಲೇ ಇರಲಿಲ್ಲ. ಮನೆಯಲ್ಲಿ ಅವರಿಗೆ ಸುಖಶಾಂತಿಗಳೇ ಇಲ್ಲವಾದುವು. ಸಖಿಯರೊಡನೆ ಹೆಚ್ಚಾಗಿ ಮಾತನ್ನೇ ಆಡುತ್ತಿರಲಿಲ್ಲ. ವೀಣೆಯ ವಾದನವನ್ನು ಕೇಳುತ್ತಲೇ ಇರಲಿಲ್ಲ.

ಕಲ್ಪದ್ರುಮಪ್ರಸೂತಂ ಯದ್ರಸವದ್ಯತ್ಸುಧೋಪಮಂ ।
ಮಂದಾರಕುಸುಮಾಮೋದಂ ನ ಪಪುರ್ಮಧುರಂ ಮಧು ॥ ೪೪ ॥

ಯೋಗಿನ್ಯ ಇವ ತಾಸ್ಸರ್ವಾ ನಾಸಾಗ್ರನ್ಯಸ್ತಲೋಚನಾಃ ।
ಅಲಕ್ಷ್ಯಧ್ಯಾನಸಂಧಾನಾಃ ಸ್ವನಾಥಾರ್ಪಿತಮಾನಸಾಃ ॥ ೪೫ ॥

ಚಂದ್ರಕಾಂತಿಮಣಿಚ್ಛನ್ನೇ ಸ್ರವದ್ವಾರಿಕಣದ್ರವೇ ।
ಕ್ಷಣಂ ವಾತಾಯನೇ ಸ್ಥಿತ್ವಾ ಜಲಯಂತ್ರೇ ಕ್ಷಣಂ ಕ್ಷಣಂ ॥ ೪೬ ॥

ರಚಯಂತಿ ಕ್ಷಣಂ ಶಯ್ಯಾಂ ದೀರ್ಘಿಕಾಂಭೋಜಿನೀದಲೈಃ ।
ವೀಜ್ಯಮಾನಾಸ್ಸಖೀಭಿಸ್ತಾ ಶ್ಶೀತಲೈಃ ಕದಲೀದಲೈಃ ॥ ೪೭ ॥

---

೪೪. ಕಲ್ಪವೃಕ್ಷದಿಂದ ಉತ್ಪನ್ನವಾದ ಬಹು ರುಚಿಯಾಗಿರುವ ಅಮೃತದಂತಿರುವ ಮಂದಾರ ಕುಸುಮವನ್ನು ಹಾಕಿ ವಾಸನೆಯನ್ನು ಕಟ್ಟಿರುವ ಆ ಮಧುವನ್ನು ಪಾನಮಾಡುತ್ತಿರಲೇ ಇಲ್ಲ.

೪೫. ಅವರೆಲ್ಲರೂ ಯೋಗಿನಿಯರಂತೆ ತಮ್ಮ ಮೂಗಿನ ತುದಿಯಲ್ಲಿಯೇ ದೃಷ್ಟಿಯನ್ನಿಟ್ಟು ಗುರಿಯನ್ನು ಹೊಂದದ ಧ್ಯಾನದ ಪರಂಪರೆಯುಳ್ಳವರಾಗಿ ತಮ್ಮ ತಮ್ಮ ಗಂಡಂದಿರಲ್ಲಿಯೇ ಅರ್ಪಿತವಾದ ಮನಸ್ಸುಳ್ಳವರಾಗಿದ್ದರು.

೪೬. ಅವರು ಚಂದ್ರಕಾಂತ ಮಣಿಯಿಂದ ಕೂಡಿದ ನೀರಿನ ಹನಿಗಳನ್ನು ಸೋರಿಸುತ್ತಿರುವ ಕಿಟಕಿಗಳಲ್ಲಿ ಕ್ಷಣಕಾಲವೂ, ಜಲಯಂತ್ರಗಳ ಬಳಿಯಲ್ಲಿ ಕ್ಷಣಕಾಲವೂ, ಇರುತ್ತಿದ್ದರು.

೪೭. ಕೊಳದಿಂದ ಕಮಲದ ದಳಗಳನ್ನು ತಂದು ಹಾಸಿಗೆಯನ್ನು ಮಾಡಿಕೊಳ್ಳುತ್ತಿದ್ದರು. ಶೀತವಾದ ಬಾಳೆಯ ಎಲೆಗಳಿಂದ ಗಾಳಿಯನ್ನು ಬೀಸಿಕೊಳ್ಳುತ್ತಿದ್ದರು.

ಇತ್ಥಂ ಯುಗಸಮಾಂ ರಾತ್ರಿಂ ದಿನಂ ತಾ ಮೇನಿರೇ ಸದಾ ।
ಕಥಂಚಿದ್ಧಾರಣಾಂ ಕೃತ್ವಾ ವಿಹ್ವಲಾಃ ಸಜ್ವರಾಃ ಸ್ಥಿತಾಃ ॥ ೪೮ ॥

ಏತಸ್ಮಿನ್ನಂತರೇ ಸೀತಾನಿಯಮೈಶ್ಚ ವ್ರತಾದಿಭಿಃ ।
ಸಮಾನೀತಾವಾಂಜನೇಯಗರುಡಾವೀಯತುಃ ಪುರೀಂ ॥ ೪೯ ॥

ಪ್ರಸ್ಫುರದ್ಭ್ರೂಭುಜೋ ವಾಮಃ ಸೀತಾಯಾ ನಯನಂ ತಥಾ ।
ಸುಚಿಹ್ನಂ ಮನ್ಯಮಾನಾ ಸಾ ಕಿಂಚಿತ್ತುಷ್ಟಾಭವತ್ತದಾ ॥ ೫೦ ॥

ಅಥ ತೌ ಕಂಪನೋದ್ಭೂತಗರುಡೌ ಸದಸಿ ಸ್ಥಿತಂ ।
ಅಯೋಧ್ಯಾಯಾಂ ಯೂಪಕೇತುಂ ವೃತ್ತಂ ಕಥಯತೋ ಜವಾತ್ ॥ ೫೧ ॥

---

೪೮. ಅವರೆಲ್ಲರೂ ಈರೀತಿಯಾಗಿರುತ್ತ ಒಂದು ರಾತ್ರಿಯನ್ನು ಒಂದು ಯುಗಕ್ಕೆ ಸಮವಾಗಿ ತಿಳಿಯುತ್ತಿದ್ದರು. ದಿನವೂ ಕೂಡ ಅದೇ ರೀತಿಯಲ್ಲಿ ಯುಗಕ್ಕೆ ಸಮವಾಗಿರುತ್ತಲೇ ಇದ್ದಿತು. ಅವರೆಲ್ಲರೂ ಬಹು ಕಷ್ಟದಿಂದ ಜೀವ ಧಾರಣೆಯನ್ನು ಮಾಡಿಕೊಂಡು ಜ್ವರವನ್ನು ಹೊಂದಿ ಕಳವಳದಿಂದಿರುತ್ತಿದ್ದರು.

೪೯. ಇಷ್ಟರವೇಳೆಗೆ ಸೀತೆಯು ನಿಯಮದಿಂದಲೂ ವ್ರತಗಳಿಂದಲೂ ಆಂಜನೇಯ ಗರುಡರು ಅಯೋಧ್ಯೆಗೆ ಬರುವಂತೆ ಮಾಡಲ್ಪಟ್ಟರು.

೫೦. ಆಗ ಸೀತೆಯ ಎಡಹುಬ್ಬೂ, ಎಡಭುಜವೂ, ಎಡಗಣ್ಣೂ ಅಲುಗಿ ಹಾರಿದುವು. ಇದನ್ನು ಒಳ್ಳೆಯ ಚಿಹ್ನೆಯೆಂದು ಆಕೆಯು ತಿಳಿದಳು. ಇದರಿಂದ ಅವಳಿಗೆ ಸ್ವಲ್ಪ ಸಂತೋಷವಾಯಿತು.

೫೧. ಆ ಆಂಜನೇಯನೂ, ಗರುಡನೂ ಬಂದು ಅಯೋಧ್ಯೆಯ ಸಭೆಯಲ್ಲಿ ಕುಳಿತಿರುವ ಯೂಪಕೇತುವಿನೊಡನೆ ಅಲ್ಲಿನ ವಿಷಯಗಳೆಲ್ಲವನ್ನೂ ಬೇಗನೆ ತಿಳಿಸಿದರು.

ತಚ್ಛ್ರುತ್ವಾ ಯೂಪಕೇತುಸ್ಸ ವೃತ್ತಂ ಸೀತಾಂ ನ್ಯವೇದಯತ್ ।
ಸಾಪಿ ತುಷ್ಟಮನಾಸ್ಸಿತಾ ತಸ್ಮಿನ್ನೇವ ದಿನೇ ಶುಭೇ ॥ ೫೨ ॥

ರಾಮವಾಕ್ಯಾದಾರುರೋಹ ಗರುಡಂ ವೇಗವತ್ತರಂ ।
ಅಗ್ನಿಹೋತ್ರಂ ಪುರಸ್ಕೃತ್ಯ ಋತ್ವಿಗ್ಭಿಶ್ಚ ಪುರೋಧಸಾ ॥ ೫೩ ॥

ಪತಿಂ ವಿನಾಗ್ನಿನಾ ನಾರೀ ಸೀಮಾಮುಲ್ಲಂಘ್ಯ ನ ವ್ರಜೇತ್ ।
ಸ ದೋಷೋತ್ರ ನ ವಿಜ್ಞೇಯಸ್ಸೀತೋದ್ಯೋಗೋ ವಿಹಾಯಸಾ ॥೫೪॥

ಭಯೇ ಪ್ರಾಪ್ತೇ ಪ್ರವಾಸೇಪಿ ಸ್ತ್ರೀಣಾಮುಕ್ತೋಽಗ್ನಿಭಿಸ್ಸಹ ।
ಪತಿನಾ ರಹಿತಾನಾಂ ಚ ನ ದೋಷಃ ಕಥ್ಯತೇತ್ರ ಹಿ ॥ ೫೫ ॥

೫೨-೫೩. ಯೂಪಕೇತುವು ಅದೆಲ್ಲವನ್ನೂ ಕೇಳಿ ಸೀತೆಗೆ ಒಡನೆಯೇ ತಿಳಿಸಿದನು. ಸೀತೆಯು ಆ ಮಾತನ್ನು ಕೇಳಿ ಆ ದಿನವೇ ಶುಭದಿನವಾದುದರಿಂದ ರಾಮನ ಮಾತಿನಂತೆ ಗರುಡನ ಬೆನ್ನಿನಮೇಲೆ ಕುಳಿತಳು. ಜೊತೆಯಲ್ಲಿ ಅಗ್ನಿಹೋತ್ರದ ಅಗ್ನಿಯನ್ನು ತೆಗೆದುಕೊಂಡು ಋತ್ವಿಕ್ಕುಗಳನ್ನೂ, ಪುರೋಹಿತರನ್ನೂ ಕರೆದುಕೊಂಡು ಹೊರಟಳು.

೫೪. ಪತಿಯಿಲ್ಲದಿರುವಾಗ ಅಗ್ನಿಹೋತ್ರದ ಅಗ್ನಿಯನ್ನು ತೆಗೆದುಕೊಂಡು ಹೆಂಗಸಾದವಳು ಗ್ರಾಮದ ಎಲ್ಲೆಯನ್ನು ದಾಟಕೂಡದು ಎಂಬ ದೋಷದ ವಿಷಯವನ್ನು ಸೀತೆಯು ಅಂತರಿಕ್ಷ ಮಾರ್ಗದಲ್ಲಿ ಹೋಗುವಾಗ ಗಮನಿಸ ಕೂಡದು.

೫೫. ಭಯವು ಒದಗಿದಾಗ ಹೆಂಗಸರು ಅಗ್ನಿಯನ್ನು ತೆಗೆದುಕೊಂಡು ಪರಸ್ಥಳಕ್ಕೆ ಹೋಗಬಹುದು. ಗಂಡನು ಜೊತೆಯಲ್ಲಿಲ್ಲದಿದ್ದರೂ ದೋಷವಿರುವುದಿಲ್ಲ ಎಂದು ಹೇಳಿದೆ.

ಭೂಮಿಗೈರ್ಬ್ರಾಹ್ಮಣಾದ್ಯೈಶ್ಚ ನ ದೇವಚರಿತಂ ಚರೇತ್ ।
ತತಸ್ಸ ರಕ್ಷಯಾಮಾಸ ಮಾರುತಿಸ್ತಾಂ ಸಮಂತತಃ ॥ ೫೬ ॥

ಪಶ್ಯಂತೀ ವಿವಿಧಾರ್ನ್ ದೇಶಾರ್ನ್ ಸೀತಾ ಲಂಕಾಂ ಯಯೌ ಮುದಾ ।
ದದರ್ಶ ಕಲ್ಪವೃಕ್ಷಾಧಃ ಪುಷ್ಪಕಸ್ಥಂ ರಘೂತ್ತಮಂ ॥ ೫೭ ॥

ನನಾಮ ಶಿರಸಾ ಭಕ್ತ್ಯಾ ಸಾವರುಹ್ಯ ಖಗಾಧಿಪಾತ್ ।
ತಾಂ ದೃಷ್ಟ್ವಾ ರಾಘವಃ ಪ್ರಾಹ ಸೀತೇ ತೇಽದ್ಯ ಸುಖಂ ಕಥಂ ॥ ೫೮ ॥

ವಿವರ್ಣಮಂಗಯಷ್ಟಿಸ್ತೇ ಕೃಶಾಽದ್ಯ ಪರಿಲಕ್ಷ್ಯತೇ ।
ತದ್ರಾಮವಚನಂ ಶ್ರುತ್ವಾ ಜಾನಕೀ ಸುಸ್ಮಿತಾನನಾ ॥ ೫೯ ॥

---

೫೬. ಭೂಮಿಯಮೇಲಿರುವ ಬ್ರಾಹ್ಮಣಾದಿಗಳು ದೇವತೆಗಳಂತೆ ಮಾಡುತ್ತಲಿರಬಾರದು. ಸೀತೆಯು ಇಂತು ಹೊರಡಲು ಮಾರುತಿಯು ಅವಳನ್ನೂ ರಕ್ಷಿಸುತ್ತ ಹೊರಟನು.

೫೭. ಸೀತೆಯು ವಿಧವಿಧವಾದ ದೇಶಗಳನ್ನು ನೊಡುತ್ತ ಹೊರಟಳು. ಲಂಕೆಯನ್ನೂ ಹೊಂದಿದಳು. ಅಲ್ಲಿ ಪುಷ್ಪಕದಲ್ಲಿ ಕಲ್ಪವೃಕ್ಷದ ಕೆಳಗೆ ಕುಳಿತಿರುವ ಶ್ರೀರಾಮನನ್ನು ನೋಡಿದಳು.

೫೮. ಒಡನೆಯೇ ಗರುಡನಿಂದ ಕೆಳಕ್ಕೆ ಇಳಿದು ಭಕ್ತಿಯಿಂದ ಅವನ ಪಾದಗಳಿಗೆ ನಮಸ್ಕರಿಸಿದಳು. ರಾಮನು ಅಲ್ಲಿಗೆ ಬಂದ ಸೀತೆಯನ್ನು ನೋಡಿ ಎಲೈ ಸೀತೆಯೇ ! ನಿನಗೆ ಸುಖವಿಲ್ಲದಂತೆ ಕಾಣುತ್ತದೆ.

೫೯. ನಿನ್ನ ದೇಹದ ಬಣ್ಣವೇ ಬದಲಾಯಿಸಿ ಹೋಗಿರುವುದು. ಕಂಗೆಟ್ಟಿದ್ದೀಯೆ, ಕಾರಣವೇನು ? ಎಂದನು. ರಾಮನು ಹೀಗೆಂದುದನ್ನು ಕೇಳಿ ಸೀತೆಯು ನಗುತ್ತ ನಿಂತುಕೊಂಡಳು.

ವಿಲಜ್ಜಂತೀ ವಿನೋದೇನ ರಾಘವಂ ಪ್ರಾಹ ಸಾದರಂ ।
ಸ್ವಾಮಿಂಸ್ತ್ವದ್ವಿರಹಾದೇತತ್ಸರ್ವಂ ತ್ವಂ ವಿದ್ಧಿ ರಾಘವ ॥ ೬೦ ॥

ನ ನಿದ್ರಾಮಿ ನ ಜಾಗರ್ಮಿ ನಾಶ್ನಾಮಿ ನ ಪಿಬಾಮ್ಯಹಂ ।
ಧ್ಯಾಯಾಮ್ಯಹಂ ಕೇವಲಂ ತ್ವಾಂ ಯೋಗಿನೀವ ವಿಯೋಗಿನೀ ॥ ೬೧ ॥

ನಿದ್ರಾದರಿದ್ರನಯನಾ ಸ್ವಪ್ನೇಽಪಿ ನ ತವಾನನಂ ।
ಆನಂದಿ ಸರ್ವಥಾ ಯನ್ಮೇ ಮಂದಭಾಗ್ಯಾ ವಿಲೋಕಯೇ ॥ ೬೨ ॥

ತ್ವದಾನನಪ್ರತಿನಿಧಿಃ ವಿಧುರ್ವಿಧುರಯಾ ಮಯಾ ।
ಉದಿತ್ವರೋಽಪಿ ನಾಲೋಕಿ ತಾಪಂ ವೈ ತ್ಯಕ್ತುಕಾಮಯಾ ॥ ೬೩ ॥

---

೬೦. ಮತ್ತೆ ಲಜ್ಜೆಪಡುತ್ತ ವಿನೋದದಿಂದ ರಾಮನನ್ನು ಕುರಿತು ಎಲೈ ನಾಥನೇ ! ಇದೆಲ್ಲವೂ ನಿನ್ನ ವಿರಹದಿಂದ ಉಂಟಾದುವೆಂದು ತಿಳಿ.

೬೧. ನನಗೆ ನಿನ್ನ ವಿರಹದಿಂದ ನಿದ್ರೆಬರುವುದಿಲ್ಲ. ನಿದ್ರೆ ಬರದೇ ಇರುವುದು ಇಲ್ಲ. ಏನನ್ನೂ ತಿನ್ನಲೂ ಆಗುವುದಿಲ್ಲ. ಕುಡಿಯಲೂ ಆಗುವುದಿಲ್ಲ. ಯೋಗಿನಿಯಂತೆ ನಿನ್ನನ್ನು ಮಾತ್ರ ಯಾವಾಗಲೂ ಧ್ಯಾನಮಾಡುತ್ತಿದ್ದೆನು.

೬೨. ನನಗೆ ನಿದ್ರೆಯೇ ಬರದಿದ್ದುದರಿಂದ ಆನಂದವನ್ನುಂಟುಮಾಡುವ ನಿನ್ನ ಮುಖವನ್ನು ಮಂದಭಾಗ್ಯಳಾದ ನಾನು ಸ್ವಪ್ನದಲ್ಲಿಯೂ ಸಹ ಕಾಣಲು ಅವಕಾಶವಾಗಲಿಲ್ಲ

೬೩. ನೀನಿಲ್ಲದಿದ್ದರೂ ನಿನ್ನ ಮುಖದಂತಿರುವ ಚಂದ್ರನನ್ನು ನಾನು ನೋಡಲಾಗುತ್ತಲಿರಲಿಲ್ಲ. ಅವನು ಹುಟ್ಟುತ್ತಿದ್ದರೂ ಕೂಡ ಅದರಿಂದ ಉಂಟಾಗುವ ತಾಪವನ್ನು ಹೋಗಲಾಡಿಸಿಕೊಳ್ಳಲು ಅವನನ್ನು ನಾನು ನೋಡುತ್ತಲಿರಲಿಲ್ಲ.

ತ್ವದಾಲಾಪಸಮಾಲಾಪಂ ಕಲಯನ್ಕಿಲ ಕಾಕಲೀಂ ।
ಕೋಕಿಲೋಽಪಿ ಮಯಾಕರ್ಣಿ ನಾಲಕಾಕೀರ್ಣಕರ್ಣಯಾ ॥ ೬೪ ॥

ತ್ವದಂಗಸಂಗಮಧುರೋ ಧವದೂರಿತಯಾ ಮಯಾ ।
ನಾನಿಲೋಽಪಿ ಮಯಾಲಿಂಗಿ ಕ್ವಚಿದ್ವಿಶ್ರಾಂತಯಾ ಭೃಶಂ ॥ ೬೫ ॥

ನಾನಾಯಮಾಶ್ಚ ನಿಯಮಾ ಜಯಾರ್ಥಂ ತವ ರಾಘವ ।
ಕುರ್ವಂತ್ಯಾ ಮಮ ನೈವಾಭೂತ್ ಸುಖಂ ತ್ವದ್ವಿರಹಾಗ್ನಿನಾ ॥ ೬೬ ॥

ತತೋ ವಿಹಸ್ಯ ಶ್ರೀರಾಮಸ್ತಾಮಾಲಿಂಗ್ಯ ಪುನಃ ಪುನಃ ।
ಕರಾಭ್ಯಾಂ ತತಸ್ತನೌ ಸ್ಪೃಷ್ಟ್ವಾ ಪಪೌ ಬಿಂಬಾತ್‌ರಾಮೃತಂ ॥ ೬೭ ॥

---

೬೪. ಕೋಕಿಲಪಕ್ಷಿಯು ನಿನ್ನ ಧ್ವನಿಯಂತೆ ಧ್ವನಿಮಾಡುತ್ತದಷ್ಟೆ! ಅಂತಹ ಕೋಗಿಲೆಯ ಧ್ವನಿಯೂ ನನಗೆ ಬೇಡವಾಗಿ ಮುಂಗುರುಳನ್ನು ಕೆದರಿ ಕೊಂಡುಕೇಳದಿರುತ್ತಿದ್ದೆನು.

೬೫. ಎಲೈ ಸ್ವಾಮಿಯೇ! ನೀನು ದೂರದೇಶಕ್ಕೆ ಹೋಗಿದ್ದುದರಿಂದ ನಿನ್ನ ಅಂಗಸಂಗದಿಂದ ಮಧುರವಾದ ಮಂದಮಾರುತವನ್ನು ಎಲ್ಲಿಯೂ ಅನು ಭವಿಸಲಿಲ್ಲ.

೬೬. ಎಲೈ ರಾಘವನೇ! ನಿನ್ನ ಜಯಕ್ಕೋಸ್ಕರವಾಗಿ ಅನೇಕಬಾರಿ ಬಗೆಬಗೆಯ ನಿಯಮಗಳನ್ನೂ ವ್ರತಗಳನ್ನೂ ಮಾಡುತ್ತಲಿದ್ದುದೇ ನಿನ್ನ ವಿರಹಾಗ್ನಿಯಿಂದ ತಪಿಸುತ್ತಿದ್ದ ನನಗೆ ಸುಖವಾಗಿರುತ್ತಿತ್ತು ಎಂದಳು.

೬೭. ಇದನ್ನು ಕೇಳಿ ಶ್ರೀರಾಮನು ನಕ್ಕು ಆ ಸೀತೆಯನ್ನು ಅನೇಕಬಾರಿ ಆಲಂಗಿಸಿಕೊಂಡು ಕೈಗಳಿಂದ ಆಕೆಯ ಸ್ತನಗಳನ್ನು ಮುಟ್ಟಿ ಅವಳ ಬಿಂಬಾಧರದ ಅಮೃತವನ್ನು ಕುಡಿದನು.

ಅಥಾಪರದಿನೇ ರಾಮಃ ಸ್ನಾತ್ವಾ ಸ್ನಾತಾಂ ವಿದೇಹಜಾಂ ।
ಅಸ್ತ್ರವಿದ್ಯಾಂ ಶಸ್ತ್ರವಿದ್ಯಾಂ ಮಂತ್ರಾಹ್ವಾನವಿಸರ್ಜನೇ ॥ ೬೮ ॥

ಶಿಕ್ಷಯಾಮಾಸ ಸಕಲಾಂ ಧನುರ್ವಿದ್ಯಾಂ ಸವಿಸ್ತರಾಂ ।
ರಾಮಾಜ್ಞಯಾ ಲಕ್ಷ್ಮಣೋಽಪಿ ರಥಂ ಸಿದ್ಧಂ ಚಕಾರ ಸಃ ॥ ೬೯ ॥

ದಾರುಕಸ್ಸಾರಥಿರ್ಯಸ್ಮಿನ್ ಶಸ್ತ್ರಾಣ್ಯಸ್ತ್ರಾಣ್ಯನೇಕಶಃ ।
ಗದಾಪದ್ಮಂ ತು ಯತ್ರಾಸ್ತಿ ಯತ್ರಾಸ್ತಿ ಗರುಡೋ ಧ್ವಜೇ ॥ ೭೦ ॥

ಯಸ್ಮಿನ್ ಶೈಬ್ಯಶ್ಚ ಸುಗ್ರೀವಸ್ತಥಾ ಚೈವ ಬಲಾಹಕಃ ।
ಮೇಘಪುಷ್ಪಶ್ಚ ಚತ್ವಾರೋ ವಾಯುಗಾಸ್ತುರಗೋತ್ತಮಾಃ ॥ ೭೧ ॥

---

೬೮. ಅನಂತರ ಮಾರನೆಯ ದಿನದಲ್ಲಿ ರಾಮನು ಸ್ನಾನಮಾಡಿ ಸೀತೆಯು ಸ್ನಾನಮಾಡಿದ ಮೇಲೆ ಅವಳಿಗೆ ಅಸ್ತ್ರವಿದ್ಯೆ ಮತ್ತು ಶಸ್ತ್ರ ವಿದ್ಯೆಗಳನ್ನು ಉಪದೇಶಿಸಿ ಅವುಗಳನ್ನು ಬಿಡುವುದನ್ನೂ ತೆಗೆದುಕೊಳ್ಳುವುದನ್ನೂ ಹೇಳಿಕೊಟ್ಟನು.

೬೯. ಕೊನೆಗೆ ಸಕಲವಾದ ಧನುರ್ವಿದ್ಯೆಯನ್ನೇ ಪೂರ್ಣವಾಗಿ ಹೇಳಿಕೊಟ್ಟನು. ರಾಮನ ಅಪ್ಪಣೆಯಂತೆ ಲಕ್ಷ್ಮಣನು ರಥವನ್ನು ಸಿದ್ಧಮಾಡಿಕೊಟ್ಟನು.

೭೦. ಆ ರಥದಲ್ಲಿ ದಾರುಕನು ಸಾರಥಿಯಾಗಿ ನಿಂತನು. ಬಹುವಾಗಿ ಶಸ್ತ್ರಗಳನ್ನೂ, ಅಸ್ತ್ರಗಳನ್ನೂ, ಗದೆಗಳನ್ನೂ, ತುಂಬಿದ್ದರು. ಮತ್ತು ಗರುಡನು ಧ್ವಜದಲ್ಲಿ ಬಂದು ಕುಳಿತನು.

೭೧. ಅದಕ್ಕೆ ಶೈಬ್ಯ, ಸುಗ್ರೀವ, ವಲಾಹಕ, ಮೇಘಪುಷ್ಪಗಳೆಂಬ ವಾಯು ವೇಗವುಳ್ಳ ಕುದುರೆಗಳನ್ನು ಕಟ್ಟಿದ್ದರು.

ಯತ್ರ ಛತ್ರಂ ವರಂ ದಿವ್ಯಂ ಹೇಮದಂಡವಿರಾಜತೇ ।
ಯಸ್ಮಿನ್ ಶುಕ್ಲೇ ಚಾಮರೇ ದ್ವೇ ಯಸ್ಮಿನ್ ಕೀಲಾದಿರುಕ್ಮಜಂ ॥ ೭೨ ॥

ತಂ ರಥಂ ರಾಘವೋ ದೃಷ್ಟ್ವಾ ಜಾನಕೀಂ ವಾಕ್ಯಮಬ್ರವೀತ್ ।
ಸೀತೇ ಸ್ಥಿತ್ವಾ ಸ್ಯಂದನೇಽಸ್ಮಿನ್ ಜಹಿ ತ್ವಂ ಮೂಲಕಾಸುರಂ ॥ ೭೩ ॥

ತಥೇತಿ ರಾಮವಾಕ್ಯಾತ್ಸಾ ಛಾಯಾಸೀತಾಂ ಪ್ರಚೋದಯತ್ ।
ತಾಮಸೀ ಸಾಪಿ ತಂ ನತ್ವಾ ಪರಿಕ್ರಮ್ಯ ಪುನಃ ಪುನಃ ॥ ೭೪ ॥

ಆರುರೋಹ ರಥಂ ವೇಗಾತ್ ಘೋರಾ ಘರ್ಘರನಿಸ್ವನಾ ।
ಏತಸ್ಮಿನ್ನಂತರೇ ರಾಮಪ್ರೇರಿತಾ ವಾನರೋತ್ತಮಾಃ ॥ ೭೫ ॥

---

೭೨. ಆ ರಥದಲ್ಲಿ ಉತ್ತಮವಾದ ಶ್ವೇತ ಛತ್ರವು ಪ್ರಕಾಶಿಸುತ್ತಿರುವುದು. ಅದಕ್ಕೆ ಚಿನ್ನದ ಕಾವನ್ನು ಹಾಕಿ ನಿಲ್ಲಿಸಿರುವರು. ಅದರಲ್ಲಿ ಎರಡು ಬಿಳಿಯ ಚಾಮರಗಳನ್ನು ಕಟ್ಟಿದ್ದರು. ಅದರಲ್ಲಿ ಹಾಕಿದ್ದ ದೂರಿ ಮುಂತಾದುವೆಲ್ಲವೂ ಚಿನ್ನದವುಗಳೇ ಆಗಿದ್ದುವು.

೭೩. ಈರೀತಿಯಾಗಿ ಸಿದ್ಧಪಡಿಸಿರುವ ರಥವನ್ನು ರಾಮನು ನೋಡಿ ಜಾನಕಿಯನ್ನು ಕುರಿತು ಎಲೈ ಸೀತೆಯೆ ! ನೀನು ಈ ರಥದಲ್ಲಿ ಕುಳಿತುಕೊಂಡು ಆ ಮೂಲಕಾಸುರನನ್ನು ಕೊಂದುಹಾಕು ಎಂದು ಹೇಳಿದನು.

೭೪. ಆ ಸೀತೆಯು ರಾಮನ ಮಾತನ್ನು ಕೇಳಿ ಹಾಗೆಯೇ ಆಗಲೆಂದು ಹೇಳಿ ತಾನು ತನ್ನ ಛಾಯಾ ಸೀತೆಯನ್ನು ನಿರ್ಮಿಸಿ ಅವಳಿಗೆ ಮೂಲಕಾಸುರನನ್ನು ಕೊಲ್ಲುವಂತೆ ಹೇಳಲು ಛಾಯಾರೂಪಳಾದ ತಾಮಸೀ ಸೀತೆಯು ರಾಮನಿಗೆ ನಮಸ್ಕರಿಸಿ ರಥಕ್ಕೆ ಪ್ರದಕ್ಷಿಣೆಯನ್ನುಮಾಡಿ ಹತ್ತಿದಳು.

೭೫. ಒಡನೆಯೇ ಘೋರಾಕಾರವನ್ನು ತಾಳಿದಳು. ಕಠಿಣವಾಗಿಯೂ ಘೋರವಾಗಿಯೂ ಶಬ್ದಮಾಡಲು ಮೊದಲಿಟ್ಟಳು. ಇಷ್ಟರಲ್ಲಿಯೇ ಆ ರಾಮನು ವಾನರರಿಗೆ ಮುಂದೆ ಮಾಡಬೇಕಾದ ಕೆಲಸಗಳನ್ನು ಹೇಳಿ ಪ್ರೇರೇಪಿಸಿದ್ದನು.

ಲಂಕಾಂ ಗತ್ವಾ ಪೂರ್ವವಚ್ಚ ಹವನಾತ್ತಂ ಪ್ರಚಾಲಯನ್ |
ತತಸ್ತೇ ವಾನರಾಸ್ಸರ್ವೇ ಯಯುಃ ಶ್ರೀರಾಘವಂ ಪುನಃ ॥ ೭೬ ॥

ಯಯೌ ಸ್ಥಿತ್ವಾ ರಥೇ ಯೋದ್ಧುಂ ಕ್ರೋಧೇನ ಮೂಲಕಾಸುರಃ |
ಮಾರ್ಗೇ ಭುವಿ ಪಪಾತಾಸ್ಯ ಮುಕುಟಃ ಸ್ಖಲಿತೋ ಭುವಿ ॥ ೭೭ ॥

ಅನಿರ್ವತ್ಯಾಸುರೋ ಗರ್ವಾದ್ಯಯೌ ರಣಭುವಂ ಜವಾತ್ ।
ಸೀತಾಚ್ಛಾಯಾಪಿ ಸೈನ್ಯೇನ ಯಯೌ ಸಾ ಲಕ್ಷ್ಮಣಾದಿಭಿಃ ॥ ೭೮ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ರಾಜ್ಯಕಾಂಡೇ ಪೂರ್ವಾರ್ಧೇ ಸೀತಾವಿರಹೋ
ನಾಮ ಪಂಚಮಸ್ಸರ್ಗಃ

---

೭೬. ಅವರೆಲ್ಲರೂ ಲಂಕೆಗೆ ಹೋಗಿ ಇಂದ್ರಜಿತುವಿಗೆ ತೊಂದರೆಕೊಟ್ಟಂತೆ ತೊಂದರೆ ಕೊಟ್ಟು ಆ ಮೂಲಕಾಸುರನನ್ನು ಮಧ್ಯದಲ್ಲಿಯೇ ಹವನದಿಂದ ಎದ್ದು ಬರುವಂತೆ ಮಾಡಿದರು. ಅನಂತರ ಮತ್ತೆ ರಾಮನ ಬಳಿಗೆ ಬಂದರು.

೭೭. ಆಗ ಮೂಲಕಾಸುರನು ಕೋಪಗೊಂಡು ರಥದಲ್ಲಿ ಕುಳಿತು ಯುದ್ಧಕ್ಕೆ ಹೊರಟನು. ದಾರಿಯಲ್ಲಿ ಹೋಗುತ್ತಿರುವಾಗ ಅವನ ಕಿರೀಟವು ಅಲ್ಲಾಡಿ ನೆಲದ ಮೇಲೆ ಬಿದ್ದಿತು.

೭೮. ಆದರೂ ಕೂಡ ಅವನು ಹಿಂದಿರುಗದೆನೇ ಗರ್ವದಿಂದ ಬೇಗನೆ ಯುದ್ಧಭೂಮಿಗೆ ಹೋದನು. ಆಗ ಆ ಛಾಯಾ ಸೀತೆಯಾದ ತಾಮಸೀ ಸೀತೆಯು ಸೈನ್ಯದೊಡನೆಯೂ ಲಕ್ಷ್ಮಣಾದಿಗಳೊಡನೆಯೂ ಯುದ್ಧಕ್ಕೆಹೋದಳು.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಪೂರ್ವಾರ್ಧದಲ್ಲಿ
ಸೀತಾ ವಿರಹವೆಂಬ ಐದನೆಯ ಸರ್ಗವು.

॥ ಶ್ರೀಃ ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಐದನೆಯ ಸರ್ಗದ ಸಾರಾಂಶವು

ಗರುಡ ಹನುಮಂತರು ಅಯೋಧ್ಯೆಗೆ ಹೋದಾಗ ಆ ಸೀತೆಯು ಗಂಡನಿಗೆ ಮಂಗಳಕರವಾದ ವ್ರತಗಳನ್ನು ಆಚರಿಸುತ್ತಿದ್ದಳು. ಅದಕ್ಕೋಸ್ಕರ ಅನೇಕ ದಾನಗಳನ್ನು ಮಾಡುತ್ತಿದ್ದಳು.

ಗರುಡ ಹನುಮಂತರು ಬಂದು ರಾಮನ ಸಂದೇಶವನ್ನು ತಿಳಿಸಲು ಸೀತೆಯು ಗರುಡನಮೇಲೆ ಕುಳಿತು ಹನುಮಂತನ ರಕ್ಷಣೆಯಿಂದ ಹೊರಟು ರಾಮನನ್ನು ಸೇರಲು ಅವನು ಮಾರನೆಯದಿನ ಆ ಸೀತೆಗೆ ಅಸ್ತ್ರ, ಶಸ್ತ್ರ, ವಿದ್ಯೆಗಳನ್ನು ಕಲಿಸಿದನು. ಅನಂತರ ಉತ್ತಮವಾದ ರಥದಲ್ಲಿ ಕೂರಿಸಿ ಆ ಮೂಲಕಾಸುರನನ್ನು ಕೊಲ್ಲುವಂತೆಕಳುಹಿಸಿದನು. ಆಗ ಈ ಸೀತೆಯು ಲಂಕೆಯಲ್ಲಿ ಆ ಮೂಲಕಾಸುರನನ್ನು ಎದುರಿಸಿ ಯುದ್ಧಮಾಡಿದಳು.

|| ಶ್ರೀರಸ್ತು ||

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ

|| ಷಷ್ಠಸ್ಸರ್ಗಃ ||

|| ಶ್ರೀರಾಮದಾಸ ಉವಾಚ ||

ಅಥಚ್ಛಾಯಾ ಟಣತ್ಕೃತ್ಯ ಶಾರ್ಙ್ಗಂ ತಚ್ಚ ಮಹದ್ಧನುಃ |
ಯಯೌ ರಣಭುವಂ ವೇಗಾತ್ತಾಂ ದದರ್ಶಾಸುರೋಽಪಿ ಸಃ || ೧ ||

ಕರಾಲದಂಷ್ಟ್ರನಯನಾಂ ವಿದ್ಯುತ್ಪಿಂಗಶಿರೋರುಹಾಂ |
ತಾಲಜಂಘಾಂ ಶೂರ್ಪಪಾದಾಂ ದರಿವಕ್ತ್ರಾಂ ಘನಪ್ರಭಾಂ || ೨ ||

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ
ಆರನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು— ಅನಂತರ ಛಾಯಾ ರೂಪಿಣಿಯಾದ ತಾಮಸೀ ಸೀತೆಯು ದೊಡ್ಡ ಧನುಸ್ಸನ್ನು ತೆಗೆದುಕೊಂಡು ಅದನ್ನು ಠಣ ಎನ್ನಿಸಿ ಶಬ್ದ ಮಾಡುತ್ತ ರಣಭೂಮಿಗೆ ಹೋದಳು. ಹೀಗೆ ಬಂದ ಆ ಸೀತೆಯನ್ನು ಮೂಲಕಾಸುರನು ನೋಡಿದನು.

೨. ಅವಳು ಭಯಂಕರವಾದ ಕೋರೆದಾಡೆಗಳುಳ್ಳವಳಾಗಿ ಕಣ್ಣುಗಳು ಭಯಂಕರವಾಗಿರುವಂತೆ ಆಕಾರವನ್ನು ಹೊಂದಿದ್ದಳು. ಕಾಲುಗಳು ತಾಳೆಯ ಮರದಂತೆ ಉದ್ದವಾಗಿದ್ದುವು. ಕಾಲಿನ ಹೆಜ್ಜೆಗಳು ಮೊರದಂತೆ ಅಗಲವಾಗಿದ್ದುವು, ಬಾಯಿ ಗುಹೆಯಂತೆ ಆಳವಾಗಿದ್ದಿತು. ಮೇಘದಂತೆ ಕಪ್ಪಾಗಿದ್ದಳು.

ಲೋಮಶಾಂ ಪ್ರಲಲಜ್ಜಿಹ್ವಾಂ ವಿದೀರ್ಣಾಸ್ಯಾಂ ಮಹಚ್ಛಿರಾಂ ।
ತಾಂ ದೃಷ್ಟ್ವಾ ಕೌಂಭಕರ್ಣಿಸ್ಸ ಭೀತಃ ಪ್ರಾಹ ಸ್ಖಲದ್ಗಿರಾ ॥ ೩ ॥

ಕಾ ತ್ವಂ ಸಮಾಗತಾಸ್ಯತ್ರ ಕಿಮರ್ಥಂ ಯೋದ್ಧುಮಿಚ್ಛಸಿ ।
ಮಮ ಸರ್ವಂ ವದಸ್ವ ತ್ವಂ ಮದಗ್ರೇ ಮಾ ಸ್ಥಿರಾ ಭವ ॥ ೪ ॥

ಯದಿ ಜೀವಿತುಮಿಚ್ಛಾಸ್ತಿ ಸ ಮೇ ಸ್ತ್ರೀಷ್ವಸ್ತಿ ಪೌರುಷಂ ।
ಅಥ ಸಾ ರಾಮಸೀತಾಭ್ಯಾಂ ವಿಮಾನಾನ್ಮುಹುರೀಕ್ಷಿತಾ ॥ ೫ ॥

ತಮುವಾಚ ತದಾ ಛಾಯಾ ಗಿರಾ ನರ್ದಯತೀ ಗಿರೀನ್ ।
ಮೂಲಕಾಸುರ ತಾಂ ಸೀತಾಂ ಚಂಡಾಂ ಮಾಂ ವಿದ್ಧಿ ಚಂಡಿಕಾಂ ॥ ೬ ॥

---

೩. ಮೈಯ್ಯೆಲ್ಲೆಲ್ಲಾ ರೋಮವು ಬೆಳೆದಿದ್ದಿತು. ನಾಲಗೆಯು ತಟವಟ ಗುಟ್ಟುತ್ತಾ ಅಲ್ಲಾಡುತ್ತಿದ್ದಿತು. ಬಾಯನ್ನು ತೆರೆದುಕೊಂಡಿದ್ದಳು. ತಲೆಯು ದಪ್ಪವಾಗಿದ್ದಿತು. ಈರೀತಿ ಭಯಂಕರಳಾಗಿರುವ ಈಕೆಯನ್ನು ಕುಂಭಕರ್ಣನ ಮಗನಾದ ಮೂಲಕಾಸುರನು ನೋಡಿ ನೀನು ಯಾರೆಂಬುದಾಗಿ ಗದ್ಗದ ಧ್ವನಿಯಿಂದ ಇಂತೆಂದು ಕೇಳಿದನು.

೪. ಎಲೈ ಮಂಗಳಾಂಗಿಯೆ ! ನೀನಾರು ? ಇಲ್ಲಿಗೇಕೆ ಬಂದೆ ? ನೀನು ನನ್ನೊಡನೆ ಯುದ್ಧಮಾಡುವಿಕೆಯನ್ನು ಏತಕ್ಕೆಅಪೇಕ್ಷಿಸುತ್ತೀಯೆ ? ಅದೆಲ್ಲವನೂ ನನಗೆ ಹೇಳು ? ನನ್ನೆದುರಿಗೆ ನಿಲ್ಲಬೇಡ ?

೫. ನಿನಗೆ ಜೀವದ ಮೇಲೆ ಆಸೆಯಿದ್ದರೆ ಹೊರಟುಹೋಗು. ನಾನು ಹೆಂಗಸರಮೇಲೆ ಪೌರುಷವನ್ನು ತೋರಿಸುವುದಿಲ್ಲ ಎಂದನು. ಆಗ ರಾಮನೂ ಸ್ವಭಾವವಾದ ಸೀತೆಯೂ ಪುಷ್ಪಕದಿಂದ ನೋಡುತ್ತಿದ್ದರು.

೬. ಇದನ್ನು ಕೇಳಿ ಛಾಯಾ ಸೀತೆಯು ತನ್ನ ಧ್ವನಿಯಿಂದ ಬೆಟ್ಟಗಳನ್ನು ನಡುಗಿಸುತ್ತ ಇಂತೆಂದಳು. ಎಲೈ ಮೂಲಕಾಸುರನೇ ! ಯಾವ ಸೀತೆಯನ್ನು ಚಂಡೆಯೆಂದು ಹೇಳಿ ತಿರಸ್ಕರಿಸಿದೆಯೋ ಆ ಚಂಡೆಯೆಂದು ನನ್ನನ್ನು ತಿಳಿ.

ಯನ್ನಿಮಿತ್ತಾತ್ಕುಲಂ ನಷ್ಟಂ ತವ ಲಂಕಾ ಪ್ರಧರ್ಷಿತಾ ।
ಮತ್ಪಕ್ಷಪಾತಿನಂ ವಿಪ್ರಂ ಪೂರ್ವಂ ತ್ವಂ ಹತವಾನಸಿ ॥ ೭ ॥

ತಸ್ಯಾನೃಣ್ಯಂ ಗಮಿಷ್ಯಾಮಿ ಹತ್ವಾ ತ್ವಂ ವೈ ರಣಾಜಿರೇ ।
ಇತ್ಯುಕ್ತ್ವಾ ಚಾಪಮಾದಾಯ ಪಂಚಬಾಣೈಃ ಜಘಾನ ತಂ ॥ ೮ ॥

ತತಸ್ಸೋಽಪಿ ಧನುರ್ಧೃತ್ವಾ ಛಾಯಾಂ ಬಾಣಾನ್ಮುಮೋಚ ಹ ।
ತದ್ಯುದ್ಧಂ ಪಾರ್ಥಿವಾದ್ಯಾಸ್ತೇ ಜೀವಿತಾ ಯೇ ಹನೂಮತಾ ॥ ೯ ॥

ದದೃಶುರ್ವಾನರಾಸ್ಸರ್ವೇ ಪುಷ್ಪಕಾಟ್ಟಾಲಸಂಸ್ಥಿತಾಃ ।
ಸೀತಯಾ ರಘುವೀರಸ್ತು ಕಲ್ಪವೃಕ್ಷತಲೇ ಸ್ಥಿತಃ ॥ ೧೦ ॥

---

೭. ಯಾವ ಸೀತೆಯು ಕಾರಣದಿಂದ ನಿನ್ನ ಕುಲವು ನಷ್ಟವಾಯಿತೋ ಮತ್ತು ನಿನ್ನ ಲಂಕೆಯೂ ನಾಶವಾಯಿತೋ ಅವಳೇ ನಾನು. ನೀನು ಪೂರ್ವದಲ್ಲಿ ನನ್ನ ಪಕ್ಷವನ್ನು ವಹಿಸಿ ಮಾತನಾಡಿದ ಬ್ರಾಹ್ಮಣನನ್ನು ಕೊಂದು ಹಾಕಿದ್ದೀಯೆ.

೮. ನಿನ್ನನ್ನು ರಣಭೂಮಿಯಲ್ಲಿ ಕೊಂದು ಆ ಬ್ರಾಹ್ಮಣನ ಪಕ್ಷಪಾತಕ್ಕೆ ಇರುವ ಋಣವನ್ನು ತೀರಿಸಿಕೊಳ್ಳುತ್ತೇನೆ. ಹೀಗೆಂದು ಹೇಳುತ್ತ ಧನುಸ್ಸನ್ನು ತೆಗೆದುಕೊಂಡು ಐದು ಬಾಣಗಳನ್ನು ಬಿಟ್ಟು ಅವನನ್ನು ಹೊಡೆದಳು.

೯–೧೦. ಅನಂತರ ಮೂಲಕಾಸುರನೂ ಧನುಸ್ಸನ್ನು ತೆಗೆದುಕೊಂಡು ಆ ಛಾಯಾ ದೇವಿಯಮೇಲೆ ಬಾಣಗಳನ್ನು ಬಿಟ್ಟನು. ಆ ಯುದ್ಧವನ್ನು ಹನುಮಂತನಿಂದ ಜೀವಿತರಾದ ರಾಜರೂ, ಕಪಿಗಳೂ ನೋಡಿದರು. ಆಗ ಅವರೆಲ್ಲರೂ ಪುಷ್ಪಕದ ಮೇಲುಮುಹಡಿಯಲ್ಲಿ ನಿಂತಿದ್ದರು, ರಾಮನು ಕಲ್ಪವೃಕ್ಷದ ಬುಡದಲ್ಲಿ ಸೀತೆಯೊಡನೆ ಕುಳಿತಿದ್ದನು.

ರುಕ್ಮಮಾಣಿಕ್ಯಪರ್ಯಂಕೇ ದಾಸೀಭಿಃ ಪರಿವೀಜಿತಃ ।
ಉಪಬರ್ಹಣಪೃಷ್ಠಸ್ಸ ಧೃತಾಧೋಂಕೋಪಬರ್ಹಣಃ ॥ ೧೧ ॥

ಯುದ್ಧಂ ದದರ್ಶ ತಚ್ಛಾಯಾಮೂಲಕಾಸುರಯೋರ್ಮಹತ್ ।
ಮೂಲಕಾಸುರಸಂತ್ಯಕ್ತಾನ್ ಬಾಣಾಂಶ್ಛಾಯಾ ಸಮಾಗತಾನ್ ॥ ೧೨ ॥

ಛಿತ್ವಾ ಸ್ವಬಾಣಜಾಲೈಸ್ತಾನ್ ಪುನರ್ಬಾಣಾನ್ ಮುಮೋಚ ಸಾ ।
ಚತುರ್ಭಿಸ್ತುರಗಾನ್ ಹತ್ವಾ ಮುಕುಟಂ ಕವಚಂ ಧನುಃ ॥ ೧೩ ॥

ಸಾ ಬಿಭೇದ ತ್ರಿಭಿರ್ಬಾಣೈಸ್ತದಾ ಪದ್ಭ್ಯಾಂ ಮಹಾಸುರಃ ।
ಗತ್ವಾನ್ಯಂ ರಥಮಾರುಹ್ಯ ಛಾಯಾಂ ಯೋದ್ಧುಂ ಪುನರ್ಯಯೌ ॥ ೧೪ ॥

---

೧೧. ಚಿನ್ನದಿಂದಲೂ, ಮಾಣಿಕ್ಯದಿಂದಲೂ, ಕೂಡಿದ್ದ ಮಂಚದಲ್ಲಿ ಆ ರಾಮನು ಕುಳಿತಿರಲು ದಾಸಿಯರು ಅವನನ್ನು ಬೀಸುತ್ತಿದ್ದರು. ಕುಳಿತುಕೊಳ್ಳಲು ದಿಂಬುಗಳನ್ನು ಹಾಕಿಕೊಂಡು ಕುಳಿತಿದ್ದನು. ಮೇಲಿನಿಂದ ನೇತಾಡುತ್ತಿದ್ದ ಗುಚ್ಛನ್ನು ಹಿಡಿದಿದ್ದನು.

೧೨. ಹೀಗೆ ಕುಳಿತುಕೊಂಡು ಶ್ರೀರಾಮನು ಛಾಯಾ ಸೀತೆಗೂ, ಮೂಲಕಾಸುರನಿಗೂ ಆಗುತ್ತಿದ್ದ ಯುದ್ಧವನ್ನು ನೋಡುತ್ತಿದ್ದನು. ಮೂಲಕಾಸುರನು ಬಿಟ್ಟ ಬಾಣಗಳನ್ನು ಛಾಯಾ ಸೀತೆಯು ಕತ್ತರಿಸಿಹಾಕುತ್ತಿದ್ದಳು.

೧೩. ಮತ್ತು ಮತ್ತೆ ಮತ್ತೆ ಬಾಣಗಳನ್ನು ಬಿಡುತ್ತಲೇ ಇದ್ದಳು. ನಾಲ್ಕು ಬಾಣಗಳನ್ನು ಬಿಟ್ಟು ಅವನ ನಾಲ್ಕು ಕುದುರೆಗಳನ್ನೂ ಕತ್ತರಿಸಿ ಮೂರು ಬಾಣಗಳನ್ನು ಬಿಟ್ಟು ಒಂದೊಂದರಿಂದಲೂ ಆ ರಾಕ್ಷಸನ ಕಿರೀಟ, ಕವಚ, ಧನುಸ್ಸುಗಳನ್ನು ಕತ್ತರಿಸಿದಳು.

೧೪. ಅನಂತರ ಆ ರಾಕ್ಷಸನು ಕಾಲುಗಳಲ್ಲಿಯೇ ನಡೆದುಕೊಂಡು ಹೋಗಿ ಬೇರೆಯ ರಥದಲ್ಲಿ ಕುಳಿತು ಆ ಛಾಯಾ ಸೀತೆಯೊಡನೆ ಯುದ್ಧಮಾಡಲು ಮತ್ತೆ ಬಂದನು.

ತತಃ ಛಾಯಾಂ ಮುಮೋಚಾಸೌ ವಹ್ನ್ಯಸ್ತ್ರಂ ಮೂಲಕಾಸುರಃ ।
ಛಾಯಾ ಮುಮೋಚ ಮೇಘಾಸ್ತ್ರಂ ತದ್ವಹ್ನ್ಯಸ್ತ್ರಂ ನ್ಯವರ್ತಯತ್ ॥ ೧೫ ॥

ಪರ್ವತಾಸ್ತ್ರಂ ಕೌಂಭಕರ್ಣಿಸ್ತತಶ್ಛಾಯಾಂ ಮುಮೋಚ ಸಃ ।
ನ್ಯವಾರಯತ್ತಚ್ಛಾಯಾ ಸಾ ಪವನಾಸ್ತ್ರೇಣ ಪಾರ್ವತಂ ॥ ೧೬ ॥

ಪುನರ್ಮುಮೋಚ ವೇಗೇನ ಸರ್ಪಾಸ್ತ್ರಂ ಮೂಲಕಾಸುರಃ ।
ಗಾರುಡಾಸ್ತ್ರೇಣ ತಚ್ಛಾಯಾ ಚಕಾರ ವಿಫಲಂ ಕ್ಷಣಾತ್ ॥ ೧೭ ॥

ಏವಂ ತತ್ತುಮುಲಂ ಯುದ್ಧಂ ಬಭೂವ ದಿನಸಪ್ತಕಂ ।
ತದಾ ಛಾಯಾ ಮಹಾರೌದ್ರಾ ಚಂಡಿಕಾಸ್ತ್ರೇಣ ತಂ ರಿಪುಂ ॥ ೧೮ ॥

ಹಂತುಕಾಮಾ ಮಹಾಸ್ತ್ರಂ ತನ್ಮುಮೋಚ ಮೂಲಕಾಸುರಂ ।
ತದಾ ಚಚಾಲ ಜಗತೀ ಮರ್ಯಾದಾಮಬ್ಧಯಸ್ತದಾ ॥ ೧೯ ॥

---

೧೫. ಆಗ ಆ ಮೂಲಕಾಸುರನು ಛಾಯೆಯಮೇಲೆ ಆಗ್ನೇಯಾಸ್ತ್ರವನ್ನು ಬಿಟ್ಟನು. ಅದಕ್ಕೆ ಪ್ರತಿಯಾದ ಮೇಘಾಸ್ತ್ರವನ್ನು ಆ ಛಾಯೆಯು ಬಿಟ್ಟಳು. ಇದರಿಂದ ಆ ಆಗ್ನೇಯಾಸ್ತ್ರವು ಉಪಶಮನವಾಯಿತು.

೧೬. ಮೂಲಕಾಸುರನು ಆ ಛಾಯೆಯಮೇಲೆ ಪರ್ವತಾಸ್ತ್ರವನ್ನು ಪ್ರಯೋಗಿಸಿದನು. ಛಾಯೆಯು ವಾಯವ್ಯಾಸ್ತ್ರವನ್ನು ಬಿಟ್ಟು ಆ ಪರ್ವತಾಸ್ತ್ರವನ್ನು ನಾಶಮಾಡಿಳದು.

೧೭–೧೯. ಅನಂತರ ಮೂಲಕಾಸುರನು ಸರ್ಪಾಸ್ತ್ರವನ್ನು ಪ್ರಯೋಗಿಸಲು ಛಾಯೆಯು ಗಾರುಡಾಸ್ತ್ರದಿಂದ ಅದನ್ನು ಉಪಶಮಿಸಿದಳು. ಈರೀತಿಯಾಗಿ ಅವರಿಗೆ ಏಳು ದಿನಗಳವರೆಗೂ ತುಮುಲ ಯುದ್ಧವು ನಡೆಯಿತು. ಆಗ ಛಾಯಾ ಸೀತೆಗೆ ಬಹುವಾಗಿ ಕೋಪಬಂದು ಮೂಲಕಾಸುರನನ್ನು ವಧಿಸಲು ಚಂಡಿಕಾಸ್ತ್ರವನ್ನು ಆ ಮೂಲಕಾಸುರನಮೇಲೆ ಬಿಟ್ಟಳು. ಆಗ ಭೂಮಿಯು ಸ್ಥಳವನ್ನು ಬಿಟ್ಟು ಚಲಿಸಿತು. ಸಮುದ್ರಗಳು ಅಲ್ಲೋಲ ಕಲ್ಲೋಲವಾದುವು.

ಲಂಘಯಾಮಾಸ ರಜಸಾ ವ್ಯಾಪ್ತಾಶ್ಚಾಸಂಸ್ತದಾ ದಿಶಃ ।
ಚಂಡಿಕಾಸ್ತ್ರಂ ತು ಚಿಚ್ಛೇದ ಮೂಲಕಾಸುರಸಚ್ಛಿರಃ ॥ ೨೦ ॥

ಪಪಾತ ಕಾಯೋ ಲಂಕಾಯಾಂ ರಾಜದ್ವಾರಿ ಮಹಚ್ಛಿರಃ ।
ಹಾ ಹಾ ಕಾರೋ ಮಹಾನಾಸೀಲ್ಲಂಕಾಯಾಂ ರಕ್ಷಸಾಂ ತದಾ ॥ ೨೧ ॥

ನಿನೇದುರ್ದೇವವಾದ್ಯಾನಿ ದೇವಾಶ್ಚಾಕಾಶಸಂಸ್ಥಿತಾಃ ।
ವವರ್ಷುಃ ಕುಸುಮೈಃ ಛಾಯಾಂ ರಾಮಂ ಸೀತಾಂ ಮುಹುರ್ಮುಹುಃ೨೨

ತತೋ ನಿರ್ವರ್ತ್ಯ ಸಾ ಛಾಯಾ ಯಯೌ ಸೀತಾಂತಿಕಂ ಪುನಃ ।
ನತ್ವಾ ರಾಮಂ ಚ ಸೀತಾಂ ಚ ಸೀತಾದೇಹೇ ಲಯಂ ಯಯೌ ॥ ೨೩ ॥

---

೨೦. ದಿಕ್ಕುಗಳೆಲ್ಲವೂ ಧೂಳಿನಿಂದ ವ್ಯಾಪ್ತವಾದುವು. ಆ ಚಂಡಿಕಾಸ್ತ್ರವು ಹೋಗಿ ಮೂಲಕಾಸುರನ ತಲೆಯನ್ನು ಕತ್ತರಿಸಿತು.

೨೧. ಅವನ ದೇಹವು ಲಂಕೆಯೊಳಗೆ ಹೋಗಿ ಬಿದ್ದಿತು. ತಲೆಯು ಅರಮನೆಯ ಬಾಗಿಲಿನಲ್ಲಿ ಹೋಗಿ ಬಿದ್ದಿತು. ಅಗ ಲಂಕೆಯ ಆ ರಾಕ್ಷಸರೆಲ್ಲರೂ ಬಹುವಾಗಿ ಹಾಹಾಕಾರವನ್ನು ಮಾಡಿದರು.

೨೨. ದೇವದುಂದುಭಿಗಳು ಮೊಳಗಿದುವು. ದೇವತೆಗಳು ಆಕಾಶದಲ್ಲಿ ನಿಂತು ನೋಡುತ್ತಿದ್ದರು. ಅವರೆಲ್ಲರೂ ಆ ಸೀತಾರಾಮರ ಮೇಲೂ ಛಾಯಾ ಸೀತೆಯಮೇಲೂ ಹೂ ಮಳೆಯನ್ನು ಸುರಿಸಿದರು.

೨೩. ಅನಂತರ ಛಾಯಾ ಸೀತೆಯು ಹಿಂದಿರುಗಿ ಸೀತೆಯ ಬಳಿಗೆ ಬಂದಳು. ರಾಮನಿಗೂ ಸೀತೆಗೂ ನಮಸ್ಕರಿಸಿ ಸೀತೆಯ ದೇಹದಲ್ಲಿ ಅಡಗಿ ಕೊಂಡಳು.

ತದಾನಿನೇದುರ್ವಾದ್ಯಾನಿ ನನೃತುಶ್ಚಾಪ್ಸರೋಗಣಾಃ ।
ತುಷ್ಟುವುರ್ಮಾಗಧಾದ್ಯಾಶ್ಚ ಜಗುರ್ಗೀತಂ ನಟಾದಯಃ ॥ ೨೪ ॥

ತತಸ್ಸುರಗಣೈಸ್ಸರ್ವೈರ್ವೇಧಾಃ ಶ್ರೀರಾಘವಂ ಯಯೌ ।
ನತ್ವಾ ರಾಮಂ ಚ ಸೀತಾಂ ಚ ತುಷ್ಟಾವ ಜಾನಕೀಂ ಮುದಾ ॥ ೨೫ ॥

॥ ಬ್ರಹ್ಮೋವಾಚ ॥

ಜನಕಜಾತ್ಮಜೇ ರಾಘವಪ್ರಿಯೇ
ಕನಕಭಾಸುರೇ ಭಕ್ತಪಾಲಕೇ ।
ದಶರಥಾತ್ಮಜಪ್ರಾಣವಲ್ಲಭೇ
ತವ ಪದಾಂಬುದಾಳಿಶ್ಶಿರೋಽಸ್ತು ಮೇ ॥ ೨೬ ॥

---

೨೪. ಆಗ ದೇವದುಂದುಭಿಗಳು ಮೊಳಗಿದುವು. ಅಪ್ಸರ ಸ್ತ್ರೀಯರು ಕುಣಿದಾಡಿದರು. ವಂದಿಮಾಗಧರು ಹೊಗಳಿದರು. ನಟಾದಿಗಳು ಗೀತವನ್ನು ಹಾಡಿದರು.

೨೫. ಆಗ ಬ್ರಹ್ಮನು ದೇವತೆಗಳನ್ನು ಜೊತೆಯಲ್ಲಿ ಕರೆದುಕೊಂಡು ರಾಮನಬಳಿಗೆ ಬಂದನು. ಅವನು ರಾಮನಿಗೂ ಸೀತೆಗೂ ನಮಸ್ಕರಿಸಿ ಆ ಜಾನಕಿಯನ್ನು ಸಂತೋಷದಿಂದ ಸ್ತುತಿಸಿದನು.

೨೬, ಬ್ರಹ್ಮನು ಹೇಳಿದನು—ಜನಕರಾಜನ ಮಗಳೇ ! ರಾಘವನ ಪ್ರಿಯೆಯೇ ! ಸ್ವರ್ಣದಂತೆ ಬಣ್ಣವುಳ್ಳವಳೇ ! ಭಕ್ತರನ್ನು ಕಾಪಾಡುವಳೇ ! ದಶರಥನ ಮಗನಾದ ರಾಮನಿಗೆ ಪ್ರಾಣಪ್ರಿಯಳೇ ! ನಿನ್ನ ಪಾದಗಳಿಗೆ ನಮಸ್ಕಾರವು.

ಮೂಲಕಾಸುರಪ್ರಾಣಘಾತಕೇ
ರಾಮರಕ್ಷಿತೇ ರಾಮಸೇವಿತೇ ।
ರಾಮಮೋಹಿನಿ ಸ್ಯಂದನಸ್ಥಿತೇ
ತ್ವತ್ಪದಾಂಬುಜಾಳಿಶ್ಶಿರೋಽಸ್ತು ಮೇ ॥ ೨೭ ॥

ರಾಮಮಂಚಕಾಧಿಷ್ಠಿತೇ ರಮೇ
ರಾಮವೀಜಿತೇ ರಾಮಲಾಲಿತೇ ॥
ರಾಮಸಂಸ್ತುತೇ ರಾಮರಂಜಿತೇ
ತ್ವತ್ಪದಾಂಬುಜಾಳಿಶ್ಶಿರೋಽಸ್ತು ಮೇ ॥ ೨೮ ॥

ಲೋಕಪಾವನಿ ಶ್ರೀರಜೇ ವರೇ
ಭೂಮಿಕನ್ಯಕೇ ಲೋಕಪಾಲಿಕೇ ।
ಪದ್ಮಲೋಚನಸ್ಯಾತ್ಮಜೇ ವರೇ
ತ್ವತ್ಪದಾಂಬುಜಾಳಿಶ್ಶಿರೋಽಸ್ತು ಮೇ ॥ ೨೯ ॥

---

೨೭. ಮೂಲಕಾಸುರನ ಪ್ರಾಣಗಳನ್ನು ನಾಶಮಾಡಿದವಳೇ ! ರಾಮನನ್ನು ರಕ್ಷಿಸಿದವಳೇ ! ರಾಮನಿಂದ ಸೇವಿಸಲ್ಪಟ್ಟವಳೇ ! ರಾಮನನ್ನು ಮೋಹಿಸುವವಳೆ ! ರಥದಲ್ಲಿ ಕುಳಿತಿರುವವಳೆ ! ನಿನ್ನ ಪಾದಗಳಲ್ಲಿ ನನ್ನ ತಲೆಯು ಇರಲಿ.

೨೮. ರಾಮನ ಮಂಚದಲ್ಲಿಯೇ ಇರುವವಳೇ ! ರಮಾದೇವಿಯೇ ! ರಾಮನಿಂದ ಬೀಸಲ್ಪಟ್ಟವಳೇ ! ರಾಮನಿಂದ ಲಾಲಿತಳಾದವಳೇ ! ರಾಮನಿಂದ ಸ್ತುತಿಸಿ ಕೊಂಡವಳೆ ! ರಾಮನಿಂದ ಮನೋಹರವಾಗಿರುವವಳೇ ! ನಿನ್ನ ಪಾದಗಳಿಗೆ ನಮಸ್ಕಾರವು.

೨೯. ಲೋಕವನ್ನು ಪಾಪವನವನ್ನಾಗಿ ಮಾಡುವವಳೇ ! ಶ್ರೀದೇವಿಯೇ ! ಬ್ರಹ್ಮಸ್ವರೂಪಳೇ ! ಶ್ರೇಷ್ಠಳೇ ! ಭೂದೇವಿಯ ಮಗಳೇ ! ಲೋಕಪಾಲಕಳೇ ! ಪದ್ಮದಂತೆ ಕಣ್ಣುಳ್ಳವನ ಮಗಳೇ ! ನಿನಗೆ ನಮಸ್ಕಾರವು.

ಕಂಜಲೋಚನೇ ನಾಗಗಾಮಿನಿ
ಸ್ವೀಯಸತ್ಸುಖೇ ರಮ್ಯರೂಪಿಣಿ ।
ರುಕ್ಮಭೂಷಿತೇ ಮೌಕ್ತಿಕಾಂಕಿತೇ
ತ್ವತ್ಪದಾಂಬುಜಾಳಿಶ್ಶಿರೋಽಸ್ತು ಮೇ ॥ ೩೦ ॥

ಜಲರುಹಾನನೇ ಚಿತ್ರವಾಸಿನಿ
ತ್ವಮಸಿ ಸರ್ವದಾ ಸ್ವೀಯಸೇವಕರ್ತ್ರೀ ।
ಮುನಿರಿಪೂರ್ಣ ಸದಾ ದುಃಖದಾಯಕೇ
ತ್ವತ್ಪದಾಂಬುಜಾಳಿಶ್ಶಿರೋಽಸ್ತು ಮೇ ॥ ೩೧ ॥

ತ್ವನ್ಮುಖೇಕ್ಷಣಾದ್ರಕ್ಷಸಾಂ ಪತಿಃ
ಪ್ರಾಪ ಸಂಕ್ಷಯಂ ರಾಮಸತ್ಪ್ರಿಯೇ ।
ತ್ವದ್ದೃಗೀಕ್ಷಣಾಲ್ಲಜ್ಜಿತಾ ಮೃಗೀ
ತ್ವತ್ಪದಾಂಬುಜಾಳಿಶ್ಶಿರೋಽಸ್ತು ಮೇ ॥ ೩೨ ॥

---

೩೦. ಕಮಲಲೋಚನೆಯೇ ! ವಿಚಿತ್ರವಾದ ಬಟ್ಟೆಯುಳ್ಳವಳೇ ! ಗಜಗಮನೆಯೇ ! ಆತ್ಮಾರಾಮಳೇ ! ರಮ್ಯವಾದ ರೂಪುವುಳ್ಳವಳೇ ! ಚಿನ್ನದ ಒಡವೆಯುಳ್ಳವಳೇ ! ಮುತ್ತುಗಳಿಂದ ಕೂಡಿರುವವಳೇ ! ನಿನಗೆ ನಮಸ್ಕಾರವು.

೩೧. ಪಂಕಜಾನನೆಯೇ ! ವಿಚಿತ್ರವಾದ ಬಟ್ಟೆಯುಳ್ಳವಳೇ ! ನೀನು ಯಾವಾಗಲೂ ನಿನ್ನ ಸೇವಕರನ್ನು ಕಾಪಾಡುತ್ತೀಯೆ ! ಮುನಿಗಳ ಶತ್ರುಗಳಿಗೆ ನೀನು ಯಾವಾಗಲೂ ದುಃಖವನ್ನು ಕೊಡುತ್ತೀಯೆ ! ಇಂತಹ ನಿನಗೆ ನಮಸ್ಕಾರವು.

೩೨. ರಾಕ್ಷಸಾಧಿಪತಿಯಾದ ಮೂಲಕಾಸುರನು ನಿನ್ನನ್ನು ನೋಡಿದ ಮಾತ್ರಕ್ಕೆ ನಾಶವಾದನು. ರಾಮನ ಪ್ರಿಯಳೆ ! ನಿನ್ನ ಕಣ್ಣುಗಳನ್ನು ನೋಡಿದರೇನೇ ಜಿಂಕೆಯು ಲಜ್ಜೆಗೊಳ್ಳುತ್ತದೆ. ಅಂತಹ ನಿನಗೆ ನಮಸ್ಕಾರವು.

ಕುಶಲವಾಂಬಿಕೇ ಜಲರುಹಾನನೇ
ಜಲರುಹೇಕ್ಷಣೇ ಪಾಪದಾಹಕೇ ।
ಮಧುರಸುಸ್ವನೇ ನೂಪುರಸ್ವನೇ
ತ್ವತ್ಪದಾಂಬುಜಾಳಿಶ್ಶಿರೋಸ್ತು ಮೇ ॥ ೩೩ ॥

ಘ್ರಾಣಮುತ್ತಮಂ ತೇ ಸ್ಮಿತಾನನೇ
ತೇ ಧರಶ್ಶುಭೋ ಬಿಂಬಸನ್ನಿಭಃ ।
ಅದ್ಯ ವೈ ತ್ವಯಾ ಮೂಲಕಾಸುರೋ
ಮಾರಿತೋ ರಣೇ ತಾರಿತಾ ವಯಂ ॥ ೩೪ ॥

॥ ಶ್ರೀರಾಮದಾಸ ಉವಾಚ ॥

ಬ್ರಹ್ಮಣೇರಿತಂ ಸ್ತವನಮುತ್ತಮಂ
ಭಾಸ್ಕರೋದಯೇ ಪಠತಿ ಯಃ ಪುಮಾನ್ ।
ಸರ್ವವಾಂಛಿತಂ ಲಭತಿ ಸೋತ್ರ ನಾ
ಪ್ರಾಪ್ನುಯಾತ್ಸುಖಂ ರಾಮಸನ್ನಿಧಿಂ ॥ ೩೫ ॥

---

೩೩. ಕುಶಲವರಿಗೆ ತಾಯಿಯೇ ! ಜಲರುಹದಂತೆ ಮುಖವುಳ್ಳವಳೇ ! ಕಮಲದಂತೆ ಕಣ್ಣುಳ್ಳವಳೇ ! ಪಾಪನಾಶಕಳೇ ! ಮಧುರವಾದ ಧ್ವನಿಯುಳ್ಳವಳೇ ! ಕಾಲುಕಡಗದ ಶಬ್ದವುಳ್ಳವಳೇ ! ನಿನಗೆ ನಮಸ್ಕಾರವು.

೩೪. ಎಲೈ ಸೀತೆಯೇ ! ನಿನ್ನ ಮೂಗೇ ಚೆನ್ನಾಗಿದೆ. ಯಾವಾಗಲೂ ನಗುಮುಖವುಳ್ಳವಳು. ನಿನ್ನ ತುಟಿಗಳು ತೊಂಡೆಯ ಹಣ್ಣಿನಂತೆ ಚೆನ್ನಾಗಿರುವುದು. ಈಗ ನೀನು ಮೂಲಕಾಸುರನನ್ನು ಕೊಂದು ನಮ್ಮನ್ನು ಉದ್ಧಾರ ಮಾಡಿರುತ್ತೀಯೆ.

೩೫. ಶ್ರೀರಾಮದಾಸನು ಹೇಳಿದನು—ಬ್ರಹ್ಮನು ಹೇಳಿದ ಈ ಒಂಭತ್ತು ಶ್ಲೋಕಗಳ ರೂಪವಾದ ಸ್ತುತಿಯನ್ನು ಯಾವನು ಸೂರ್ಯೋದಯಕಾಲದಲ್ಲಿ ಹೇಳುತ್ತಾನೆಯೋ ಅವನ ಇಷ್ಟಾರ್ಥಗಳೆಲ್ಲವೂ ಫಲಿಸುತ್ತವೆ. ಅವನು ಸುಖವನ್ನು ಹೊಂದಿ ಕೊನೆಗೆ ರಾಮನ ಸನ್ನಿಧಿಗೆ ಹೋಗುವನು.

ಇತಿ ಸ್ತುತ್ವಾಮರೈರ್ಬ್ರಹ್ಮಾ ವಸ್ತ್ರಾಲಂಕಾರಮಂಡನೈಃ ।
ಸೀತಾಂ ರಾಮಂ ಚ ಸಂಪೂಜ್ಯ ರಾಘವೇಣಾಪಿ ಪೂಜಿತಃ ॥ ೩೬ ॥

ಪ್ರಯಯೌ ರಾಮಮಾಮಂತ್ರ್ಯ ಸತ್ಯಲೋಕಂ ಮನೋರಮಂ ।
ತತೋ ವಿಭೀಷಣಃ ಪ್ರಾಹ ಲಂಕಾಯಾಂ ನ ತ್ವಯಾ ಪುರಾ ॥ ೩೭ ॥

ಸಮಾಗತಮಿದಾನೀಂ ತ್ವಂ ಕೃತಾರ್ಥಂ ಕುರು ಮಾಂ ಪ್ರಭೋ ।
ತಥೇತಿ ಪ್ರತಿನಂದ್ಯಾಥ ತದ್ವಾಕ್ಯಂ ರಘುನಂದನಃ ॥ ೩೮ ॥

ವಿಮಾನೇನ ಯಯೌ ಲಂಕಾಂ ಮಧ್ಯೇ ಮಿತ್ರಗೃಹಂ ಪ್ರತಿ ।
ತತೋ ವಿಭೀಷಣಂ ರಾಜ್ಯೇ ಲಂಕಾಯಾಂ ತ್ವಭಿಷೇಚಯತ್ ॥ ೩೯ ॥

ತದಾ ಮಹೋತ್ಸವಶ್ಚಾಸೀಲ್ಲಂಕಾಯಾಂ ಪರಮಾದ್ಭುತಃ ।
ತತೋ ವಿಭೀಷಣೋ ರಾಮಂ ಸೀತಾಂ ತಾಂ ಲಕ್ಷ್ಮಣಾದಿಕಾನ್ ॥ ೪೦ ॥

---

೩೬. ಬ್ರಹ್ಮನು ದೇವತೆಗಳೊಡನೆ ಇಂತೆಂದು ಹೊಗಳಿ ಸೀತಾರಾಮರನ್ನು ವಸ್ತ್ರಾಲಂಕಾರಗಳಿಂದ ಪೂಜಿಸಿ ಗೌರವಿಸಿದನು. ರಾಮನೂ ಕೂಡ ಆ ದೇವತೆಗಳನ್ನು ಅವರಿಗೆ ಅನುಗುಣವಾಗಿ ಪೂಜಿಸಿದನು.

೩೭–೩೮. ಅನಂತರ ಆ ಬ್ರಹ್ಮನು ರಾಮನಿಗೆ ಹೇಳಿ ಮನೋಹರವಾದ ಸತ್ಯಲೋಕಕ್ಕೆ ಹೋದನು. ಆಗ ವಿಭೀಷಣನು ರಾಮನನ್ನು ಕುರಿತು ಎಲೈ ಪ್ರಭುವೇ ! ನೀನು ಪೂರ್ವದಲ್ಲಿ ನನ್ನ ಲಂಕೆಗೆ ಬರಲಿಲ್ಲ ಈಗಲಾದರೂ ಬಂದು ನನ್ನನ್ನು ಕೃತಾರ್ಥನನ್ನಾಗಿ ಮಾಡು ಎಂದನು. ರಾಮನೂ ಕೂಡ ವಿಭೀಷಣನ ಮಾತನ್ನು ಗೌರವಿಸಿ ಹಾಗೆಯೇ ಆಗಲೆಂದನು.

೩೯. ಅನಂತರ ರಾಮನು ಎಲ್ಲರೊಡನೆಯೂ ವಿಮಾನದಲ್ಲಿ ಕುಳಿತು ಲಂಕೆಯ ಮಧ್ಯದಲ್ಲಿರುವ ಮಿತ್ರನಾದ ವಿಭೀಷಣನ ಮನೆಗೆ ಹೋದನು. ಅಲ್ಲಿ ಆ ವಿಭೀಷಣನನ್ನು ಆ ಲಂಕಾ ರಾಜ್ಯದಲ್ಲಿ ಅಭಿಷೇಕಮಾಡಿದನು.

೪೦–೪೧. ಆಗ ಲಂಕೆಯಲ್ಲಿ ಅದ್ಭುತವಾದ ಆಶ್ಚರ್ಯಕರವಾದ ಕಾರ್ಯಗಳು ನಡೆದುವು. ವಿಧವಿಧವಾಗಿ ಅಲಂಕರಿಸಿದ್ದರು. ವಿಭೀಷಣನು ರಾಮ, ಸೀತೆ,

ವಸ್ತ್ರೈರಾಭರಣೈಃ ರತ್ನೈಃ ಪೂಜಯಾಮಾಸ ಸಾದರಂ ।
ಅರ್ಪಯಾಮಾಸ ಸರ್ವಸ್ವಂ ಸ್ವೀಯಂ ರಾಮಾಯ ರಾಕ್ಷಸಃ ॥ ೪೧ ॥

ತದಾ ಕಪಿಲವಾರಾಹಮೂರ್ತಿಂ ರಾವಣಪೂಜಿತಾಂ ।
ರಾಮಸ್ತಾಂ ರೋಚಯಾಮಾಸ ಸೋಽಪಿ ರಾಮಾಯ ತಾಂ ದದೌ ॥ ೪೨ ॥

ಮನಸಾ ಕಪಿಲೇನೈವ ಪುರಾ ಮೂರ್ತಿರ್ವಿನಿರ್ಮಿತಾ ।
ಚಿರಕಾಲಂ ತಮಾರಾಧ್ಯ ಲಬ್ಧಾ ಮಘವತಾ ತು ಯಾ ॥ ೪೩ ॥

ತಂ ಜಿತ್ವಾ ರಾವಣೇನೈವ ಸಮಾನೀತಾ ನಿಜಾಂ ಪುರೀಂ ।
ಯಾಂ ಸದಾ ಪೂಜಯಾಮಾಸ ಲಂಕಾಯಾಂ ರಾವಣಶ್ಚಿರಂ ॥ ೪೪ ॥

ಲಕ್ಷ್ಮಣ ಮುಂತಾದವರನ್ನು ವಸ್ತ್ರಗಳಿಂದಲೂ, ಆಭರಣಗಳಿಂದಲೂ, ರತ್ನಗಳಿಂದಲೂ ಸಂತೋಷದಿಂದ ಪೂಜಿಸಿದನು. ಕೊನೆಗೆ ತನ್ನದೆಲ್ಲವನ್ನೂ ಆ ವಿಭೀಷಣನು ಶ್ರೀರಾಮನಿಗೆ ಒಪ್ಪಿಸಿ ಕೃತಾರ್ಥನಾದನು.

೪೨. ಅಲ್ಲಿ ರಾವಣನು ಪೂಜಿಸುತ್ತಿದ್ದ ಕಪಿಲವರಾಹ ಮೂರ್ತಿಯನ್ನು ರಾಮನು ನೋಡಿ ತನಗೆ ಬೇಕೆನ್ನಲು ಅದನ್ನು ವಿಭೀಷಣನು ರಾಮನಿಗೆ ಕೊಟ್ಟನು.

೪೩. ಆ ಕಪಿಲವರಾಹಮೂರ್ತಿಯನ್ನು ಕಪಿಲಋಷಿಯು ಮನಸ್ಸಿನಿಂದಲೇ ಹಿಂದೆ ನಿರ್ಮಿಸಿದನು. ಆ ಮೂರ್ತಿಯನ್ನು ಇಂದ್ರನು ಆ ಕಪಿಲನನ್ನು ಪೂಜಿಸಿ ಅವನಿಂದ ತೆಗೆದುಕೊಂಡನು.

೪೪. ಆ ಇಂದ್ರನನ್ನು ರಾವಣನು ಜಯಿಸಿ ಆ ಮೂರ್ತಿಯನ್ನು ತನ್ನ ಪಟ್ಟಣಕ್ಕೆ ತಂದಿದ್ದನು. ಅದನ್ನು ರಾವಣನು ಬಹುಕಾಲದವರೆಗೂ ಲಂಕೆಯಲ್ಲಿ ಪೂಜಿಸುತ್ತಿದ್ದನು.

ವಿಭೀಷಣೇನ ಸಾ ದತ್ತಾ ರಾಘವಾಯ ದೃಷಣ್ಮಯೀ ।
ತಾಂ ಮೂರ್ತಿಂ ಸ್ಥಾಪಯಾಮಾಸ ವಿಮಾನೇ ರಘುನಂದನಃ ॥ ೪೫ ॥

ತತಸ್ಸೀತಾಥ ರಾಮೇಣ ದೇವರ್ಯೈರ್ಬಾಲಕೈರ್ಮುದಾ ।
ಅಶೋಕವನಿಕಾಂ ಗತ್ವಾ ಶಿಂಶುಪಾವೃಕ್ಷಮುತ್ತಮಂ ॥ ೪೬ ॥

ದರ್ಶಯಾಮಾಸ ರಾಮಾಯ ಯತ್ರ ಪೂರ್ವಂ ಸ್ಥಿತಾ ಸ್ವಯಂ ।
ತತೋ ವಾಮಕರೇಣೈವ ರಾಮಸ್ಯ ಹಿ ಕನಿಷ್ಠಿಕಾಂ ॥ ೪೭ ॥

ಧೃತ್ವಾ ದಕ್ಷಿಣಹಸ್ತಸ್ಯ ಸೀತಾ ಬಭ್ರಾಮ ತದ್ವನಂ ।
ಸ್ನಾನಾಸನಾದಿಕಂ ಪೂರ್ವಂ ಯತ್ರ ಯತ್ರ ಕೃತಂ ವನೇ ॥ ೪೮ ॥

---

೪೫. ಅದು ಶಿಲೆಯಿಂದ ಮಾಡಲ್ಪಟ್ಟುದು. ಅಂತಹ ಆ ಶಿಲಾಮೂರ್ತಿಯನ್ನು ವಿಭೀಷಣನು ರಾಮನಿಗೆ ಕೊಟ್ಟನು. ಆ ಮೂರ್ತಿಯನ್ನು ತೆಗೆದುಕೊಂಡು ರಾಮನು ವಿಮಾನದಲ್ಲಿಟ್ಟನು.

೪೬ ಅನಂತರ ಸೀತೆಯು ರಾಮನೊಡನೆಯೂ, ಮೈದುನರೊಡನೆಯೂ ಬಾಲಕರೊಡನೆಯೂ ಅಶೋಕವನಕ್ಕೆ ಹೋದಳು. ಅಲ್ಲಿ ತಾನು ಹಿಂದೆ ಕುಳಿತಿರುತ್ತಿದ್ದ ಶಿಂಶುಪಾವೃಕ್ಷವನ್ನು ತೋರಿಸಿದಳು.

೪೭–೪೮. ಅನಂತರ ಸೀತೆಯು ರಾಮನ ಎಡಗೈಯ್ಯಿನ ಕಿರುಬೆರಳನ್ನು ಹಿಡಿದುಕೊಂಡು ಆ ವನವನ್ನೆಲ್ಲಾ ಸುತ್ತಿದಳು ಅವಳು ಕುಳಿತುಕೊಳ್ಳುತ್ತಿದ್ದ ಜಾಗಗಳನ್ನೂ ಸ್ನಾನಮಾಡುತ್ತಿದ್ದ ಜಾಗಗಳನ್ನೂ ಎಲ್ಲವನ್ನೂ ನೋಡಿದಳು.

ರಾಮಂ ನೀತ್ವಾ ತತ್ರ ತತ್ರ ದರ್ಶಯಾಮಾಸ ಜಾನಕೀ ।
ತತಸ್ತಾಂ ತ್ರಿಜಟಾಂ ಸೀತಾ ವಸ್ತ್ರೈರಾಭರಣಾದಿಭಿಃ ॥ ೪೯ ॥

ಕೃತ್ವಾತಿತುಷ್ಟಾಂ ರಾಮಾಗ್ರೇ ಸರಮಾಂ ವಾಕ್ಯಮಬ್ರವೀತ್ ।
ಅನಯಾ ರಕ್ಷಿತಾ ಪೂರ್ವಂ ರಾಕ್ಷಸೀಗ್ರಹಭೀತಿಭಿಃ ॥ ೫೦ ॥

ಮತ್ತುಲ್ಯಾ ಮಾನನೀಯೇಯಂ ಸರ್ವದಾ ಸರಮೇ ತ್ವಯಾ ।
ಇತ್ಯುಕ್ತ್ವಾ ಸರಮಾಹಸ್ತೇ ತ್ರಿಜಟಾ ಕರಮರ್ಪಯತ್ ॥ ೫೧ ॥

ತತೋ ವಾಸಸ್ಥಲಂ ಸೀತಾ ಯಯೌ ರಾಮೇಣ ಸಾ ಶನೈಃ ।
ಏವಂ ನಿಕುಂಭಿಲಾದೀನಿ ದೃಷ್ಟ್ವಾ ನಾನಾಸ್ಥಲಾನಿ ಹಿ ॥ ೫೨ ॥

ಪುಷ್ಪಕಸ್ಥೋ ಯಯೌ ರಾಮೋ ವಿಭೀಷಣಸಮನ್ವಿತಃ ।
ವಿಭೀಷಣಸ್ಯ ಸಚಿವಂ ಲಂಕಾಯಾಂ ಸಂನ್ಯವೇಶಯತ್ ॥ ೫೩ ॥

೪೯–೫೦. ರಾಮನನ್ನು ಸೀತೆಯು ಆ ಜಾಗಗಳಿಗೆ ಕರೆದುಕೊಂಡು ಹೋಗಿ ತೋರಿಸಿದಳು. ಅನಂತರ ಸೀತೆಯು ತ್ರಿಜಟೆಗೆ ವಸ್ತ್ರಾಲಂಕಾರಗಳನ್ನು ಕೊಟ್ಟು ಸಂತೋಷಪಡಿಸಿದಳು. ಆ ರಾಮನ ಬಳಿಯಲ್ಲಿ ವಿಭೀಷಣನ ಹೆಂಡತಿಯಾದ ಸರಮೆಯನ್ನು ಕುರಿತು ಎಲೈ ಸರಮೆಯೇ? ಹಿಂದೆ ರಾಕ್ಷಸಿಯರ ಹೆದರಿಕೆಯಿಂದ ಈ ತ್ರಿಜಟೆಯು ನನ್ನನ್ನು ಕಾಪಾಡಿದಳು

೫೧. ಎಲೈ ಸರಮೆಯೆ! ನೀನು ಇವಳನ್ನು ಯಾವಾಗಲೂ ನನಗೆ ಸಮಾನಳನ್ನಾಗಿ ಗೌರವಿಸಬೇಕು. ಎಂದು ಹೇಳಿ ಸರಸಮೆಯ ಕೈಯ್ಯಲ್ಲಿ ತ್ರಿಜಟೆಯ ಕೈಯ್ಯನ್ನಿಟ್ಟಳು.

೫೨–೫೩. ಸೀತೆಯು ಅನಂತರ ಮೆಲ್ಲಗೆ ರಾಮನೊಡನೆ ತನ್ನ ವಾಸಸ್ಥಳಕ್ಕೆ ಹೋದಳು. ಇದೇ ರೀತಿಯಾಗಿ ನಿಕುಂಭಿಳೆಯೇ ಮುಂತಾದ ಸ್ಥಳಗಳನ್ನು ನೋಡಿದರು. ಆಯಾ ಸ್ಥಳಗಳಿಗೆಲ್ಲಾ ರಾಮನು ಪುಷ್ಪಕದಲ್ಲಿಯೇ ಕುಳಿತು ವಿಭೀಷಣನನ್ನೂ ಕರೆದುಕೊಂಡು ಹೋಗುತ್ತಿದ್ದನು. ವಿಭೀಷಣನು ಆಗಲೆಲ್ಲಾ ಮಂತ್ರಿಯನ್ನು ಲಂಕೆಯ ರಕ್ಷಣಾರ್ಥವಾಗಿಟ್ಟನು.

ತತೋ ರಾಮೋ ವಿಮಾನೇನ ಯಂತ್ರಾ ಶೀಘ್ರಂ ವಿಹಾಯಸಾ ।
ವಿಭೀಷಣಸ್ಯ ರಕ್ಷಾರ್ಥಂ ತಸ್ಯೈವಾನುಮತೇನ ಚ ॥ ೫೪ ॥

ರಾಮಃ ಕರೇ ಧನುರ್ಧೃತ್ವಾ ಲಂಕಾಯಾಃ ಪರಿತಸ್ತದಾ ।
ಪ್ರದಕ್ಷಿಣೋಪಮಂ ವೇಗಾದ್ಭ್ರಾಮಯಾಮಾಸ ಸಾದರಂ ॥ ೫೫ ॥

ತತೋ ವಿಭೀಷಣಂ ಪ್ರಾಹ ವರೇಣ ರಘುನಂದನಃ ।
ರಾಕ್ಷಸೇಂದ್ರ ಮಯಾ ಚಾಪೋ ರಕ್ಷಾರ್ಥಂ ಭ್ರಾಮಿತಸ್ತವ ॥ ೫೬ ॥

ಮಚ್ಚಾಪರೇಖಾಪ್ಯನ್ಯೇಷಾಂ ದುಃಖೋತ್ತೀರ್ಯಾ ಭವಿಷ್ಯತಿ ।
ಅಮುಂ ಬಾಣಂ ಮಯಾ ದತ್ತಂ ತ್ವಂ ಗೃಹಾಣ ವಿಭೀಷಣ ॥ ೫೭ ॥

ಮಮ ನಾಮ್ನಾಂಕಿತಂ ತೀಕ್ಷ್ಣಂ ತವ ಪ್ರಾಣಸ್ಯ ರಕ್ಷಕಂ ।
ಚಾಪರೇಖಾಬಾಣಹಸ್ತಂ ನೇಯಂ ತ್ವಾಂ ಧರ್ಷಯಿಷ್ಯತಿ ॥ ೫೮ ॥

೫೪–೫೫. ಅನಂತರ ರಾಮನು ಅಂತರಿಕ್ಷ ಮಾರ್ಗದಲ್ಲಿ ಹೊರಟು ವಿಭೀಷಣನ ರಕ್ಷಣೆಗೋಸ್ಕರ ಅವನ ಅನುಮತಿಯನ್ನು ಹೊಂದಿ ತನ್ನ ಕೈಯ್ಯಲ್ಲಿ ಧನುಸ್ಸನ್ನು ಹಿಡಿದುಕೊಂಡು ಲಂಕೆಯ ಸುತ್ತಲೂ ಪ್ರದಕ್ಷಿಣಾಕಾರವಾಗಿ ಗೀರನ್ನು ಎಳೆದು ಸುತ್ತಿಸಿದನು.

೫೬. ಆಗ ರಾಮನು ವರವನ್ನು ಕೊಡುತ್ತ ವಿಭೀಷಣನನ್ನು ಕುರಿತು ಇಂತೆಂದು ಹೇಳಿದನು. ಎಲೈ ರಾಕ್ಷಸೇಂದ್ರನೇ ! ನಿನ್ನ ರಕ್ಷೆಗೋಸ್ಕರವೇ ನಾನು ಈ ಲಂಕೆಯ ಸುತ್ತಲೂ ಧನುಸ್ಸನ್ನು ಸುತ್ತಿಸಿರುವೆನು.

೫೭. ನನ್ನ ಈ ಧನುಸ್ಸಿನ ರೇಖೆಯನ್ನು ಇತರರು ದಾಟುವುದು ಕಷ್ಟವಾಗುತ್ತದೆ. ಈ ಬಾಣವನ್ನು ನಿನಗೆ ನಾನು ಕೊಡುತ್ತೇನೆ. ನೀನು ತೆಗೆದುಕೋ

೫೮. ಇದು ನನ್ನ ಹೆಸರಿನಿಂದ ಅಂಕಿತವಾಗಿದೆ. ಬಹು ತೀಕ್ಷ್ಣವಾದುದು. ನಿನ್ನ ಪ್ರಾಣವನ್ನು ಕಾಪಾಡುತ್ತದೆ. ನನ್ನ ಚಾಪರೇಖೆಯನ್ನು ಯಾರೂ ದಾಟಲಾರರು. ನನ್ನ ಈ ಬಾಣವು ನಿನ್ನ ಕೈಯ್ಯಲ್ಲಿದ್ದರೆ ನಿನ್ನನ್ನು ಯಾರೂ ಜಯಿಸಲಾರರು.

ಮದ್ಬಾಣಹಸ್ತಂ ತ್ವಾಂ ಕಶ್ಚಿನ್ನರಿಪುರ್ಧರ್ಷಯಿಷ್ಯತಿ |
ಇತ್ಯುಕ್ತ್ವಾ ತಂ ದದೌ ಬಾಣಂ ವಿಭೀಷಣಕರೇ ಪ್ರಭುಃ || ೫೯ ||

ಪ್ರಣನಾಮ ರಾಮಮುದ್ರಾಂ ರಾಮಬಾಣಂ ವಿಭೀಷಣಃ |
ತತೋ ರಾಮೋ ವಿಮಾನೇನ ಪಶ್ಯನ್ ದೇಶಾನ್ ಮನೋರಮಾನ್ || ೬೦ ||

ಪೂಜಿತೋ ದಾಕ್ಷಿಣಾತ್ಯೈಶ್ಚ ನೃಪೈಃ ಸ್ವನಗರೀಂ ಯಯೌ |
ತದಾ ನಿನೇದುರ್ವಾದ್ಯಾನಿ ನನೃತುಶ್ಚಾಪ್ಸರೋಗಣಾಃ || ೬೧ ||

ಪ್ರತ್ಯುಜ್ಜಗಾಮ ಶ್ರೀರಾಮಂ ಯೂಪಕೇತುಸ್ಸನಾಗರಃ |
ಪ್ರಾಸಾದಶಿಖರಾರೂಢಾಃ ಪೌರನಾರ್ಯಸ್ಸಹಸ್ರಶಃ || ೬೨ ||

---

೫೯. ನನ್ನ ಬಾಣವು ನಿನ್ನ ಕೈಯ್ಯಲ್ಲಿದ್ದರೇ ಸಾಕು. ನಿನ್ನನ್ನು ಯಾರೂ ಏನೂ ಮಾಡಲಾರರು. ಇದರಮೇಲೆ ಚಾಪರೇಖೆಯು ಇದ್ದರೆ ಹೇಳಬೇಕಾದ್ದಿಲ್ಲ. ಹೀಗೆಂದು ಹೇಳಿ ರಾಮನು ತನ್ನ ಹೆಸರಿನಿಂದ ಅಂಕಿತವಾದ ಬಾಣವನ್ನು ತೆಗೆದು ವಿಭೀಷಣನ ಕೈಗೆ ಕೊಟ್ಟನು.

೬೦-೬೧. ಆಗ ರಾಮನ ಮುದ್ರೆಯಿರುವ ಆ ಬಾಣವನ್ನು ವಿಭೀಷಣನು ತೆಗೆದುಕೊಂಡು ಅದಕ್ಕೆ ನಮಸ್ಕರಿಸಿದನು. ಅನಂತರ ರಾಮನು ವಿಮಾನದಲ್ಲಿ ಹೊರಟು ನಾನಾ ದೇಶಗಳನ್ನು ನೋಡುತ್ತ ದಕ್ಷಿಣದೇಶದ ರಾಜರಿಂದ ಪೂಜಿಸಿಕೊಳ್ಳುತ್ತ ತನ್ನ ರಾಜಧಾನಿಗೆ ಹೋದನು. ಆಗ ವಾದ್ಯಗಳು ಮೊಳಗಿದುವು. ಅಪ್ಸರ ಸ್ತ್ರೀಯರು ಕುಣಿದರು.

೬೨-೬೩. ಆಗ ಯೂಪಕೇತುವು ಪಟ್ಟಣದವರೊಡನೆ ರಾಮನನ್ನು ಎದುರುಗೊಂಡನು. ರಾಮನು ಪಟ್ಟಣದೊಳಕ್ಕೆ ಸೀತೆಯೊಡನೆ ಬರುತ್ತಿರಲು

ಸೀತಾಂ ರಾಮಂ ನಿರೀಕ್ಷ್ಯಾಥ ವವರ್ಷುಃ ಪುಷ್ಪವೃಷ್ಟಿಭಿಃ ।
ತತೋ ವಿವೇಶ ಶ್ರೀರಾಮಸ್ಸಭಾಯಾಂ ಪಾರ್ಥಿವೈಸ್ಸಹ ॥ ೬೩ ॥

ವಿವೇಶ ಸ್ವೀಯಗೇಹಂ ಸಾ ಜಾನಕೀ ತುಷ್ಟಮಾನಸಾ ।
ಗೇಹೇ ಕಪಿಲವಾರಾಹಮೂರ್ತಿಂ ರಾಮೋ ನ್ಯವೇಶಯತ್ ॥ ೬೪ ॥

ಏಕದಾ ರಾಘವಸ್ತುಷ್ಟಶ್ಶತ್ರುಘ್ನಾಯ ಹಿ ತಾಂ ದದೌ ।
ಸೀತಾಪಿ ಸಾ ಪುರಾ ಯಾನೇ ಯಮಾಂಶ್ಚ ನಿಯಮಾದಿಕಾ ॥ ೬೫ ॥

ಸಂಕಲ್ಪಯಾಮಾಸ ಸರ್ವಾಂ ಸ್ತಾಂಶ್ಚಕಾರ ಯಥಾವಿಧಿ ।
ಉದ್ಯಾಪನಾನ್ಯನೇಕಾನಿ ಸರ್ವೇಷಾಂ ಸಾಕರೋನ್ಮುದಾ ॥ ೬೬ ॥

ಪಟ್ಟಣದ ಹೆಂಗಸರು ಮಹಡಿಯಮೇಲಿದ್ದುಕೊಂಡು ಸೀತಾರಾಮರನ್ನು ನೋಡುತ್ತ ಪುಷ್ಪವೃಷ್ಟಿಯನ್ನು ಸುರಿಸುತ್ತಿದ್ದರು. ಹೀಗೆ ಊರಿನ ಬೀದಿಯಲ್ಲಿ ರಾಮನು ಹೋಗುತ್ತ ತನ್ನೊಡನೆ ಬಂದಿರುವ ರಾಜರೊಡನೆ ಸಭೆಗೆಹೋದನು.

೬೪-೬೬. ಜಾನಕಿಯು ಸಂತೋಷದಿಂದ ತನ್ನ ಮನೆಗೆ ಹೋದಳು. ರಾಮನು ಆ ಕಪಿಲವಾರಾಹ ಮೂರ್ತಿಯನ್ನು ಮನೆಯಲ್ಲಿಟ್ಟನು. ಒಂದುಸಾರಿ ರಾಮನಿಗೆ ಬಹುವಾದ ಸಂತೋಷವು ಬರಲು ಆ ಮೂರ್ತಿಯನ್ನು ಶತ್ರುಘ್ನನಿಗೆ ಕೊಟ್ಟನು. ಸೀತೆಯು ತಾನು ಹಿಂದೆ ರಾಮನೂ, ಮಕ್ಕಳೂ ಲಂಕೆಗೆ ಹೋಗಿದ್ದಾಗ ಯಾವ ಯಾವ ಹರಕೆಗಳನ್ನು ಮಾಡಿಕೊಂಡಿದ್ದಳೋ, ಯಾವ ಯಾವ ವ್ರತಗಳನ್ನು ಸಂಕಲ್ಪಿಸಿಕೊಂಡಿದ್ದಳೋ, ಯಾವ ಯಾವ ಹರಕೆಗಳನ್ನು ಹೇಳಿಕೊಂಡಿದ್ದಳೋ, ಅವೆಲ್ಲವನ್ನೂ ಕ್ರಮವಾಗಿ ಶಾಸ್ತ್ರರೀತಿಯಂತೆ ಮಾಡಿ ಮುಗಿಸಿದಳು. ಅವೆಲ್ಲದಕ್ಕೂ ಉದ್ಯಾಪನೆಗಳನ್ನೂ ಕೂಡ ಕ್ರಮವಾಗಿ ಮಾಡಿದಳು.

ಏಕದಾ ಮುನಯಸ್ಸರ್ವೇ ಯಮುನಾತೀರವಾಸಿನಃ ।
ಆಜಗ್ಮೂ ರಾಘವಂ ದ್ರಷ್ಟುಂ ಭಯಾಲ್ಲವಣರಕ್ಷಸಃ ॥ ೬೭ ॥

ಕೃತ್ವಾಗ್ರೇ ತು ಮುನಿಶ್ರೇಷ್ಠಂ ಭಾರ್ಗವಂ ಚ್ಯವನಂ ದ್ವಿಜಾಃ ।
ಅಸಂಖ್ಯಾತಾಸ್ಸಶಿಷ್ಯಾಸ್ತೇ ರಾಮಾದಭಯಕಾಂಕ್ಷಿಣಃ ॥ ೬೮ ॥

ತಾನ್ ಪೂಜಯಿತ್ವಾ ಪರಯಾ ಭಕ್ತ್ಯಾ ರಘುಕುಲೋದ್ವಹಃ ।
ಉವಾಚ ಮಧುರಂ ವಾಕ್ಯಂ ಹರ್ಷಯನ್ ಮುನಿಮಂಡಲಂ ॥ ೬೯ ॥

ಕರವಾಣಿ ಮುನಿಶ್ರೇಷ್ಠಾಃ ಕಿಮಾಗಮನಕಾರಣಂ ।
ಧನ್ಯೋಽಸ್ಮಿ ಯದಿ ಯೂಯಂ ಮಾಂ ಪ್ರೀತ್ಯಾ ದ್ರಷ್ಟುಮಿಹಾಗತಾಃ ॥೭೦॥

---

೬೭. ಒಂದುಸಾರಿ ಯಮುನಾತೀರದಲ್ಲಿ ವಾಸಿಸುತ್ತಿದ್ದ ಮುನಿಗಳೆಲ್ಲರೂ ತಮಗೆ ಲವಣನೆಂಬ ರಾಕ್ಷಸನಿಂದ ಬಹು ತೊಂದರೆಯುಂಟಾಗಲು ಅದನ್ನು ಸರಿಪಡಿಸಿಕೊಳ್ಳಲು ರಾಮನನ್ನು ನೋಡಲು ಬಂದರು.

೬೮. ಅವರೆಲ್ಲರೂ ಭಾರ್ಗವನನ್ನೂ, ಚ್ಯವನನನ್ನೂ ಮುಂದು ಮಾಡಿಕೊಂಡು ಬಂದರು. ರಾಮನಿಂದ ಅಭಯವನ್ನು ಅಪೇಕ್ಷಿಸುವವರಾಗಿ ಅನೇಕ ಜನ ಶಿಷ್ಯರೊಂದಿಗೆ ಕೂಡಿಕೊಂಡು ಬಂದರು.

೬೯. ಶ್ರೀರಾಮನು ಅವರೆಲ್ಲರನ್ನೂ ಬಹು ಭಕ್ತಿಯಿಂದ ಪೂಜಿಸಿದನು. ಅನಂತರ ಆ ಮುನಿಗಳಿಗೆ ಸಂತೋಷಗೊಳಿಸುತ್ತ ಮಧುರವಾದ ಮಾತಿನಿಂದ ಇಂತೆಂದನು.

೭೦. ಎಲೈ ಮುನಿಗಳೇ ! ನೀವು ಏತಕ್ಕೋಸ್ಕರ ಬಂದಿರುವಿರಿ ? ಹೇಳಿ. ಅದನ್ನು ನಾನು ಮಾಡಿಕೊಡುತ್ತೇನೆ. ನೀವು ನನ್ನ ಮೇಲೆ ದಯೆಯಿಟ್ಟು ಇಲ್ಲಿಗೆ ಬಂದಿರುವುದರಿಂದ ನಾನು ಧನ್ಯನಾದೆನು.

ಸುದುಷ್ಕರಂ ವಃ ಯತ್ಕಾರ್ಯಂ ಭವತಾಂ ತತ್ಕರೋಮ್ಯಹಂ ।
ಆಜ್ಞಾಪಯಂತು ಮಾಂ ಭೃತ್ಯಂ ಬ್ರಾಹ್ಮಣಾ ದೈವತಂ ಹಿ ಮೇ ॥ ೭೧ ॥

ತಚ್ಛ್ರುತ್ವಾ ಸಹಸಾ ಹೃಷ್ಟಶ್ಚ್ಯವನೋ ವಾಕ್ಯಮಬ್ರವೀತ್ ।
ಮಧುನಾಮಾ ಮಹಾದೈತ್ಯಃ ಪುರಾ ರಾಮ ಕೃತೇ ಯುಗೇ ॥ ೭೨ ॥

ಆಸೀದತೀವ ಧರ್ಮಾತ್ಮಾ ದೇವಬ್ರಾಹ್ಮಣಪೂಜಕಃ ।
ತಸ್ಯ ತುಷ್ಟೋ ಮಹಾ ದೇವೋ ದದೌ ಶೂಲಮನುತ್ತಮಂ ॥ ೭೩ ॥

ತಂ ಪ್ರಾಹಾನೇನ ಯಂ ಹಂಸಿ ಸ ತು ಭಸ್ಮೀಭವಿಷ್ಯತಿ ।
ರಾವಣಸ್ಯಾನುಜಾ ತಸ್ಯ ಭಾರ್ಯಾ ಕುಂಭೀನಸೀ ಸ್ಮೃತಾ ॥ ೭೪ ॥

---

೭೧ ಆ ಕಾರ್ಯವು ಬಹು ಕಷ್ಟಸಾಧ್ಯವಾದರೂ ಅದನ್ನು ನಾನು ಮಾಡಿ ಕೊಡುತ್ತೇನೆ. ನಾನು ನಿಮಗೆ ಆಳಾಗಿದ್ದೇನೆ. ನಿಮಗೆ ಬೇಕಾದ ವಿಷಯವನ್ನು ಅಪ್ಪಣೆಮಾಡಿರಿ. ಬ್ರಾಹ್ಮಣರೇ ನನಗೆ ದೇವತೆಗಳು.

೭೨. ಅದನ್ನು ಕೇಳಿ ಚ್ಯವನನಿಗೆ ಬಹು ಸಂತೋಷವಾಯಿತು ಆಗ ಆತನು ಇಂತೆಂದು ಹೇಳಿದನು. ಎಲೈ ಪ್ರಭುವೇ ! ಪೂರ್ವದಲ್ಲಿ ಕೃತಯುಗದಲ್ಲಿ ಮಧುವೆಂಬ ಮಹಾದೈತ್ಯನೊಬ್ಬನಿದ್ದನು

೭೩. ಅವನು ಬಹು ಧರ್ಮಿಷ್ಠನು. ಅವನು ದೇವತೆಗಳನ್ನೂ, ಬ್ರಾಹ್ಮಣರನ್ನೂ, ಪೂಜಿಸುತ್ತಿದ್ದನು. ಅವನ ತಪಸ್ಸಿಗೆ ಸಂತುಷ್ಟವಾದ ಮಹಾದೇವನು ಅವನಿಗೆ ಒಂದು ಶೂಲವನ್ನು ಕೊಟ್ಟನು.

೭೪-೭೫. ಎಲೈ ಮಧುವೇ ! ನೀನು ಇದರಿಂದ ಯಾರನ್ನು ಹೊಡೆಯುತ್ತಿಯೋ ಅವನು ಭಸ್ಮವಾಗುತ್ತಾನೆ ಎಂದೂ ಹೇಳಿದನು. ರಾವಣನ ತಂಗಿಯಾದ ಕುಂಭೀನಸಿ ಎಂಬುವಳನ್ನು ಅವನು ಮದುವೆಯಾಗಿದ್ದನು. ಅವಳಲ್ಲಿ ಅವನಿಗೆ

ತಸ್ಯಾಂ ತು ಲವಣೋ ನಾಮ ರಾಕ್ಷಸೋ ಭೀಮವಿಕ್ರಮಃ |
ಆಸೀದ್ದುರಾತ್ಮಾ ದುರ್ಧರ್ಷೋ ದೇವಬ್ರಾಹ್ಮಣಹಿಂಸಕಃ || ೭೫ ||

ಮಧುಸ್ಸ ತವ ಹಸ್ತೇನ ಮೃತಃ ಪೂರ್ವಂ ಯತಸ್ತದಾ |
ಮಧುಸೂದನನಾಮಾಭೂನ್ಮಧುಘಾತಾದ್ರಘೂತ್ತಮ || ೭೬ ||

ಪೀಡಿತಾ ಲವಣೇನಾದ್ಯ ವಯಂ ತ್ವಾಂ ಶರಣಂ ಗತಾಃ |
ತಚ್ಛ್ರುತ್ವಾ ರಾಘವೋಪ್ಯಾಹ ಮಾ ಭೀರ್ವೋ ಮುನಿಪುಂಗವಾಃ || ೭೭ ||

ಲವಣಂ ನಾಶಯಿಷ್ಯಾಮಿ ಗಚ್ಛಂತು ವಿಗತಜ್ವರಾಃ |
ಇತ್ಯುಕ್ತ್ವಾ ಪ್ರಾಹ ರಾಮೋಽಪಿ ಶತ್ರುಘ್ನಂ ಸದಸಿ ಸ್ಥಿತಂ || ೭೮ ||

ಲವಣನೆಂಬ ಮಗನು ಹುಟ್ಟಿದನು, ಆ ಲವಣ ರಾಕ್ಷಸನು ಬಹು ಪರಾಕ್ರಮಿಯು. ದುಷ್ಟನು. ಮತ್ತೊಬ್ಬರೂ ಅವನನ್ನು ಜಯಿಸಲಾರರು. ಅವನು ದೇವತೆಗಳನ್ನೂ, ಬ್ರಾಹ್ಮಣರನ್ನೂ ಹಿಂಸಿಸುತ್ತಿರುವನು.

೭೬-೭೭. ಹಿಂದೆ ಮಧುರಾಕ್ಷಸನನ್ನು ನೀನೇ ಕೊಂದಿದ್ದೀಯೆ ಆದ್ದರಿಂದಲೇ ನಿನಗೆ ಮಧುಸೂದನನೆಂದು ಹೆಸರು ಬಂದಿತು. ಈಗ ಲವಣಾಸುರನು ನಮಗೆ ತೊಂದರೆಯನ್ನು ಕೊಡುತ್ತಿರುವನು. ಆದ್ದರಿಂದ ನಿನ್ನ ಬಳಿಗೆ ಬಂದಿದ್ದೇವೆ. ಎನ್ನಲು ಅದನ್ನು ರಾಮನು ಕೇಳಿ ಎಲೈ ಮುನಿಪುಂಗವರಿರಾ! ನೀವು ಹೆದರಬೇಡಿರಿ ಎಂದನು.

೭೮. ನೀವು ಸುಖವಾಗಿ ಹೋಗಿರಿ, ನಾನು ಆ ಲವಣಾಸುರನನ್ನು ಕೊಂದು ಹಾಕುತ್ತೇನೆ ಎಂಬುದಾಗಿ ಆ ಋಷಿಗಳಿಗೆ ರಾಮನು ಹೇಳಿ ಅನಂತರ ಸಭೆಯಲ್ಲಿ ಕುಳಿತಿದ್ದ ಶತ್ರುಘ್ನನನ್ನು ಕುರಿತು ಇಂತೆಂದನು.

ಅದ್ಯ ತ್ವಾಮಭಿಷೇಕ್ಷ್ಯಾಮಿ ಮಧುರಾರಾಜ್ಯಕಾರಣಾತ್ ।
ತದ್ರಾಮವಿಚನಂ ಶ್ರುತ್ವಾ ಶತ್ರುಘ್ನೋ ವಾಕ್ಯಮಬ್ರವೀತ್ ॥ ೭೯ ॥

ನಾಂಗೀಕರೋಮ್ಯಹಂ ರಾಜ್ಯಂ ತ್ವಂ ಮಾಂ ನಿಜಪದಾತ್ಪ್ರಭೋ ।
ನ ದೂರಂ ಕುರು ರಾಜೇಂದ್ರ ಪ್ರಾರ್ಥಯಾಮೀತಿ ತೇ ಮುಹುಃ ॥ ೮೦ ॥

ತತ್ತಸ್ಯ ವಚನಂ ಶ್ರುತ್ವಾ ಶತ್ರುಘ್ನಸ್ಯ ರಘೂತ್ತಮಃ ।
ತಥೈವ ಭರತಂ ಪ್ರಾಹ ನ ಸೋಽಪ್ಯಂಗೀಚಕಾರ ತತ್ ॥ ೮೧ ॥

ತತೋ ರಾಮಃ ಸುಬಾಹುಂ ಚ ಯೂಪಕೇತುಂ ದ್ವಿಜೈಃ ನೃಪೈಃ ।
ಅಭಿಷಿಚ್ಯಾಬ್ರವೀದ್ವಾಕ್ಯಂ ಶತ್ರುಘ್ನಂ ಪುರತಃ ಸ್ಥಿತಂ ॥ ೮೨ ॥

---

೭೯. ಎಲೈ ಶತ್ರುಘ್ನನೆ! ನಿನಗೆ ಮಧುರೆಯ ರಾಜ್ಯವನ್ನು ಕೊಟ್ಟು ಅದರಲ್ಲಿ ಈಗಲೇ ಇಲ್ಲಿಯೇ ಪಟ್ಟಾಭಿಷೇಕಮಾಡುವೆನು. ಎನ್ನಲು ರಾಮನ ಈ ಮಾತನ್ನು ಶತ್ರುಘ್ನನು ಕೇಳಿ ಇಂತೆಂದನು.

೮೦. ಎಲೈ ರಾಮಚಂದ್ರನೆ! ನಾನು ರಾಜ್ಯವನ್ನು ಅಂಗೀಕರಿಸುವುದಿಲ್ಲ. ನನಗೆ ಬೇಡ. ನೀನು ನನ್ನನ್ನು ನಿನ್ನ ಪಾದದ ಬಳಿಯಿಂದ ದೂರವಾಗಿ ಮಾಡಬೇಡ. ಇದನ್ನೇ ನಾನು ಬಾರಿಬಾರಿಗೂ ಕೇಳಿಕೊಳ್ಳುತ್ತೇನೆ ಎಂದನು.

೮೧. ರಾಮನು ಶತ್ರುಘ್ನನು ಹೇಳಿದ ಈ ಮಾತನ್ನು ಕೇಳಿ ಭರತನನ್ನು ಕುರಿತು ಶತ್ರುಘ್ನನಿಗೆ ಹೇಳಿದಂತೆ ಹೇಳಿದನು. ಅವನೂ ಕೂಡ ಶತ್ರುಘ್ನನಂತೆಯೇ ಹೇಳಿ ಅದನ್ನು ಅಂಗೀಕರಿಸದೆ ಹೋದನು.

೮೨. ಅನಂತರ ರಾಮನು ಸುಬಾಹುವನ್ನೂ ಯೂಪಕೇತುವನ್ನೂ ಆ ಮಧುರಾ ರಾಜ್ಯದಲ್ಲಿ ಬ್ರಾಹ್ಮಣರಿಂದಲೂ, ರಾಜರಿಂದಲೂ ಕೂಡಿಕೊಂಡು ಅಭಿಷೇಕಮಾಡಿ ಅಲ್ಲಿಯೇ ಎದುರಿಗೆ ನಿಂತಿದ್ದ ಶತ್ರುಘ್ನನನ್ನು ಕುರಿತು ಇಂತೆಂದನು.

ದತ್ವಾ ತಸ್ಮೈ ಶರಂ ದಿವ್ಯಂ ನಿಜನಾಮಾಂಕಿತಂ ಶುಭಂ |
ಅನೇನೈವ ಹಿ ಬಾಣೇನ ಲವಣಂ ಲೋಕಕಂಟಕಂ ‖ ೮೩ ‖

ಹನಿಷ್ಯಸಿ ಕ್ಷಣಾದೇವ ವೃತ್ರಂ ದೇವಪತಿರ್ಯಥಾ |
ಸ ತು ಸಂಪೂಜ್ಯ ತಂ ಶೂಲಂ ಗೇಹೇ ಗಚ್ಛತಿ ಕಾನನಂ ‖ ೮೪ ‖

ಭಕ್ಷಣಾರ್ಥಂ ಹಿ ಜಂತೂನಾಂ ಘಾತಂ ಕರ್ತುಂ ಸಮುದ್ಯತಃ |
ಸ ತು ನಾಯಾತಿ ಸದನಂ ಯಾವದ್ವನಚರೋ ಭವೇತ್ ‖ ೮೫ ‖

ತಾವದೇವ ಪುರದ್ವಾರಿ ತಿಷ್ಠ ತ್ವಂ ಧೃತಕಾರ್ಮುಕಃ |
ಯೋತ್ಸ್ಯತೇ ಸ ತ್ವಯಾ ಕ್ರುದ್ಧಸ್ತದಾ ಬಾಣೇನ ತಾಡಯ ‖ ೮೬ ‖

೮೩–೮೪. ಅವನ ಕೈಗೆ ತನ್ನ ಹೆಸರಿನಿಂದ ಅಂಕಿತವಾದ ಒಂದು ಬಾಣವನ್ನೂ ಕೊಟ್ಟು ಎಲೈ ಶತ್ರುಘ್ನನೆ! ಈ ಬಾಣದಿಂದ ಲೋಕಕಂಟಕನಾದ ಲವಣಾಸುರನನ್ನು ದೇವೇಂದ್ರನು ವೃತ್ರಾಸುರನನ್ನು ಕೊಂದಂತೆ ಕ್ಷಣಕಾಲದಲ್ಲಿಯೇ ಕೊಲ್ಲುತ್ತೀಯೆ ಈ ವಿಷಯದಲ್ಲಿ ನಾನು ಹೇಳುವುದನ್ನು ಕೇಳು. ಆ ಲವಣಾಸುರನು ಮನೆಯಲ್ಲಿ ಆ ಶೂಲವನ್ನಿಟ್ಟು ಪೂಜಿಸಿ ಕಾಡಿಗೆ ಹೋಗುವನು.

೮೫–೮೬. ಅಲ್ಲಿ ಜಂತುಗಳನ್ನು ಹುಡುಕಿಕೊಂಡು ತಿನ್ನುವುದಕ್ಕೋಸ್ಕರ ಕೊಲ್ಲಲು ಸುತ್ತುತ್ತಿರುವನು. ಅವನು ಮನೆಗೆ ಬಾರದೆ ಕಾಡಿನಲ್ಲಿರುವಷ್ಟರಲ್ಲಿಯೇ ನೀನು ಅವನ ರಾಜಧಾನಿಗೆ ಹೋಗಿ ಊರಿನ ಮುಂದೆ ಧನುಸ್ಸನ್ನು ಹಿಡಿದು ನಿಂತಿರು. ಅವನು ಕೋಪಗೊಂಡು ನಿನ್ನೊಡನೆ ಯುದ್ಧವನ್ನು ಮಾಡುವನು. ಆಗ ಈ ಬಾಣದಿಂದ ಅವನನ್ನು ಸಂಹರಿಸು.

ಅನೇನೈಕೇನ ಬಾಣೇನ ಕ್ಷಣಾದೇವ ಮರಿಷ್ಯತಿ ।
ತಂ ಹತ್ವಾ ಲವಣಂ ಕ್ರೂರಂ ತದ್ವಧೇ ಮಧುಸಂಜ್ಞಿತೇ ॥ ೮೭ ॥

ನಿವೇಶ್ಯ ಮಥುರಾನಾಮ್ನೀಂ ನಗರೀಂ ಯಮುನಾತಟೇ ।
ತಸ್ಯಾಂ ಸ್ಥಾಪ್ಯ ಸುಬಾಹುಂ ವೈ ಪತ್ನೀಭ್ಯಾಂ ಬಾಲಕೈಸ್ಸಹ ॥ ೮೮ ॥

ಯೂಪಕೇತುಂ ಚ ವಿದಿಶಾನಗರೇ ಶತ್ರುಸೂದನ ।
ಸಂಸ್ಥಾಪ್ಯ ದಯಿತಾಭ್ಯಾಂ ಚ ಸೈನ್ಯೇನ ಬಾಲಕೈಸ್ಸಹ ॥ ೮೯ ॥

ತತೋ ಮಮಾಂತಿಕಂ ಯಾಹಿ ಶೀಘ್ರಂ ಶತ್ರುನಿಷೂದನ ।
ಅಶ್ವಾನಾಂ ಪಂಚಸಾಹಸ್ರಂ ರಥಾನಾಂ ಚ ತದರ್ಧಕಂ ॥ ೯೦ ॥

ಗಜಾನಾಂ ಷಟ್ಶತಾನ್ಯೇವ ಪತ್ತೀನಾಮಯುತಾನಿ ಚ ।
ಆಗಮಿಷ್ಯತಿ ತ್ವತ್ಪಶ್ಚಾದಗ್ರೇ ಸಾಧಯ ರಾಕ್ಷಸಂ ॥ ೯೧ ॥

೮೭–೮೮. ಈ ಒಂದು ಬಾಣದಿಂದಲೇ ಅವನು ಕ್ಷಣಕಾಲದಲ್ಲಿಯೇ ಮರಣವನ್ನು ಹೊಂದುವನು. ಆ ಲವಣನನ್ನು ಕೊಂದು ಮಧುವೆಂಬ ಅವನ ವನವಿರುವ ಸ್ಥಳದಲ್ಲಿ ಮಥುರೆಯೆಂಬ ಹೆಸರಿನಿಂದ ಆ ಯಮುನಾ ನದಿಯ ದಡದಲ್ಲಿ ಊರನ್ನು ನಿರ್ಮಿಸು. ಅಲ್ಲಿ ಈ ಸುಬಾಹುವಿಗೆ ಪಟ್ಟಾಭಿಷೇಕವನ್ನು ಮಾಡು. ಅವನನ್ನು ಹೆಂಡತಿ ಮಕ್ಕಳೊಡನೆ ಅಲ್ಲಿ ನಿಲ್ಲಿಸು.

೮೯. ಯೂಪಕೇತುವಿಗೆ ವಿದಿಶಾನಗರದಲ್ಲಿ ಪಟ್ಟಾಭಿಷೇಕಮಾಡಿ ನಿಲ್ಲಿಸು. ಅಲ್ಲಿ ಅವನ ಹೆಂಡತಿಯರೂ ಮಕ್ಕಳೂ ಅವನನ್ನು ಅನುಸರಿಸಿ ಇರಲಿ.

೯೦–೯೧. ಅದೆಲ್ಲವನ್ನೂ ನೆರವೇರಿಸಿ ಅನಂತರ ಬೇಗನೆ ನನ್ನ ಬಳಿಗೆ ನೀನು ಉಳಿದ ಬಾಲಕರೊಡನೆಯೂ, ಸೈನ್ಯದೊಡನೆಯೂ ಬಂದು ಬಿಡು. ಐದು ಸಾವಿರ ಕುದುರೆಗಳ ಸೈನ್ಯವೂ, ಎರಡುಸಾವಿರದ ಐದುನೂರು ರಥಗಳೂ, ಆರುನೂರು ಆನೆಗಳೂ, ಒಂದುಸಾವಿರ ಭಟರೂ, ನಿನ್ನ ಹಿಂದೆ ಬರುತ್ತಾರೆ. ನೀನು ಹೋಗಿ ಆ ರಾಕ್ಷಸನನ್ನು ಕೊಂದು ಹಾಕು.

ಆಗತೇ ತ್ವಯಿ ಪಶ್ಚಾದ್ಧಿ ನೃಪಾನ್ ಜೇತುಂ ಪುನಸ್ತ್ವಹಂ ।
ಗಂತುಮಿಚ್ಛಾಮಿ ತಸ್ಮಾತ್ತ್ವಂ ಶೀಘ್ರಮಾಗಚ್ಛ ಮಾಂ ಪ್ರತಿ ॥ ೯೨ ॥

ಇತ್ಯುಕ್ತ್ವಾ ಮೂರ್ಧ್ನ್ಯವಘ್ರಾಯ ಶತ್ರುಘ್ನಂ ರಘುನಂದನಃ ।
ಪ್ರೇಷಯಾಮಾಸ ತೈರ್ವಿಪ್ರೈರಾಶೀರ್ಭಿರಭಿನಂದಿತಃ ॥ ೯೩ ॥

ಶತ್ರುಘ್ನೋಽಪಿ ನಮಸ್ಕೃತ್ಯ ರಾಮಂ ಮಧುವನಂ ಯಯೌ ।
ನಿನಾಯ ಪೂಜನಾರ್ಥಂ ತಾಂ ಮೂರ್ತಿಂ ಸೋಽಪ್ಯಾತ್ಮನಃ ಪ್ರಿಯಾಂ॥೯೪॥

ಅಗ್ರೇ ಸಂಪ್ರೇಷ್ಯ ಶತ್ರುಘ್ನಂ ತತಶ್ಚ ರಘುನಂದನಃ ।
ಸುಬಾಹುಯೂಪಕೇತೂ ತೌ ಸ್ವಸ್ವಸ್ತ್ರೀಭ್ಯಾಂ ಚ ಬಾಲಕೈಃ ॥ ೯೫ ॥

ಪ್ರೇಷಯಾಮಾಸ ಸೈನ್ಯೈಶ್ಚ ದಾಸೀದಾಸೈಶ್ಚ ಗೋಧನೈಃ ।
ಶತ್ರುಘ್ನೋಽಪಿ ತಥಾ ಚಕ್ರೇ ಯಥಾ ರಾಮೇಣ ಶಿಕ್ಷಿತಃ । ॥ ೯೬ ॥

---

೯೨. ನೀನು ಅಲ್ಲಿಂದ ಬಂದಮೇಲೆ ನಾನು ರಾಜರೆಲ್ಲರನ್ನೂ ಜಯಿಸಲು ಹೊರಡುತ್ತೇನೆ. ಆದ್ದರಿಂದ ನೀನು ನನ್ನ ಬಳಿಗೆ ಬೇಗನೆ ಬರಬೇಕು.

೯೩. ರಾಮನು ಹೀಗೆಂದು ಹೇಳಿ ಆ ಶತ್ರುಘ್ನನ ತಲೆಯನ್ನು ವಿಶ್ವಾಸದಿಂದ ಮೂಸಿನೋಡಿ ಆಶೀರ್ವದಿಸಿ ಆ ಬ್ರಾಹ್ಮಣರೊಡನೆ ಕಳುಹಿಸಿದನು.

೯೪. ಶತ್ರುಘ್ನನು ರಾಮನಿಗೆ ನಮಸ್ಕರಿಸಿ ಮಧುವನಕ್ಕೆ ಹೊರಟನು. ಆಗ ಆ ವರಾಹಮೂರ್ತಿಯನ್ನು ಪೂಜಿಸಲು ತನ್ನೊಡನೆ ತೆಗೆದುಕೊಂಡು ಹೋದನು.

೯೫–೯೬. ರಾಮನು ಮುನಿಗಳೊಡನೆ ಮೊದಲು ಆ ಶತ್ರುಘ್ನನನ್ನು ಕಳುಹಿಸಿ ಅವನ ಹಿಂದೆ ಸುಬಾಹುವನ್ನೂ ಯೂಪಕೇತುವನ್ನೂ ಅವರ ಹೆಂಡಿರನ್ನೂ ಅವರ ಬಾಲಕರನ್ನೂ ಹಿಂದಿನಿಂದ ಕಳುಹಿಸಿದನು. ಅವರ ಜೊತೆಯಲ್ಲಿ ಕೆಲವು ಸೈನ್ಯವನ್ನೂ, ದಾಸೀದಾಸರನ್ನೂ, ಗೋವುಗಳನ್ನೂ, ಕಳುಹಿಸಿದನು. ಅಲ್ಲಿ ಶತ್ರುಘ್ನನು ರಾಮನು ಹೇಳಿದಂತೆಯೇ ಮಾಡಿದನು.

ಹತ್ವಾ ತಂ ಲವಣಂ ವೇಗಾನ್ಮಥುರಾಮಕರೋತ್ಪುರೀಂ ।
ಸ್ಫೀತಾನ್ ಜನಪದಾಂಶ್ಚಕ್ರೇ ಮಾಥುರಾನ್ ದಾನಮಾನತಃ ॥ ೯೭ ॥

ಮಥುರಾಯಾಂ ಸುಬಾಹುಂ ತಂ ಸ್ಥಾಪ್ಯ ಸ್ತ್ರೀಭ್ಯಾಂ ಸುತಾದಿಭಿಃ ।
ಸ್ತ್ರೀಭ್ಯಾಂ ಪುತ್ರೈರ್ಯೂಪಕೇತುಂ ವಿದಿಶಾನಗರೇ ತಥಾ ॥ ೯೮ ॥

ಸಂಸ್ಥಾಪ್ಯ ಸೈನ್ಯೈಃ ಶತ್ರುಘ್ನೋ ಮಥುರಾಯಾಂ ಕಿಯದ್ದಿನಂ ।
ಸ್ಥಿತ್ವಾ ಸುಬಾಹವೇ ಮೂರ್ತಿಂ ತದಾ ತುಷ್ಟೋ ದದೌ ಸುಖಂ ॥ ೯೯ ॥

ಅದ್ಯಾಪಿ ಮಥುರಾಯಾಂ ಸಾ ಮೂರ್ತಿಸ್ತತ್ರೈವ ವರ್ತತೇ ।
ಶತ್ರುಘ್ನೋಽಪಿ ತತಸ್ಸೈನ್ಯೈಃ ಶೀಘ್ರಂ ರಾಮಾಂತಿಕಂ ಯಯೌ॥ ೧೦೦ ॥

---

೯೭. ಅಲ್ಲಿ ಆ ಲವಣಾಸುರನನ್ನು ಕೊಂದು ಮಧುವನದಲ್ಲಿ ಮಥುರೆಯನ್ನು ನಿರ್ಮಿಸಿದನು. ಅದನ್ನು ದೊಡ್ಡದಾಗಿ ವಿಸ್ತರಿಸಿದನು. ಜನರಿಗೆ ಬೇಕಾದಂತೆ ಧನವನ್ನು ಕೊಟ್ಟು ಗೌರವಿಸಿದನು.

೯೮. ಆ ಮಥುರೆಯಲ್ಲಿ ಸುಬಾಹುವನ್ನು ಅವನ ಮಕ್ಕಳು ಹೆಂಡತಿಯರೊಡನೆ ನಿಲ್ಲಿಸಿದನು. ಅದೇ ರೀತಿಯಲ್ಲಿ ಯೂಪಕೇತುವನ್ನು ವಿದಿಶಾನಗರದಲ್ಲಿ ಅವನ ಹೆಂಡತಿ ಮಕ್ಕಳೊಡನೆ ಇಟ್ಟನು.

೯೯. ಅನಂತರ ಶತ್ರುಘ್ನನು ಕೆಲವು ದಿನಗಳವರೆಗೂ ಸೈನ್ಯದೊಡನೆ ಆ ಮಥುರೆಯಲ್ಲಿದ್ದನು. ಆಗ ಆ ವರಾಹಮೂರ್ತಿಯನ್ನು ಸುಬಾಹುವಿಗೆ ಒಂದುಸಾರಿ ಸಂತೋಷಪಟ್ಟು ಕೊಟ್ಟನು.

೧೦೦. ಆ ಕಪಿಲವರಾಹಮೂರ್ತಿಯು ಈಗಲೂ ಕೂಡ ಮಥುರೆಯಲ್ಲಿದೆ. ಅನಂತರ ಶತ್ರುಘ್ನನು ಬೇಗನೆ ರಾಮನ ಬಳಿಗೆ ಸೈನ್ಯದೊಡನೆ ಬಂದು ಬಿಟ್ಟನು.

ಸರ್ವಂ ವೃತ್ತಂ ರಾಘವಾಯ ಕಥಯಾಮಾಸ ಸಾದರಂ ।
ಅಥೈಕದಾ ಸ ಭರತಃ ಕೈಕೇಯೀ ನಂದನೋ ಮುದಾ ॥ ೧೦೧ ॥

ಯುಧಾಜಿತಾ ಮಾತುಲೇನ ಸ್ವಾಹೂತೋಗಾತ್ಸಸೈನಿಕಃ ।
ರಾಮಾಜ್ಞಯಾ ಗತಸ್ತತ್ರ ಹತ್ವಾ ಗಂಧರ್ವನಾಯಕಾನ್ ॥ ೧೦೨ ॥

ತಿಸ್ರಃ ಕೋಟೀಃ ಪುರೇ ದ್ವೇ ತು ನಿವೇಶ್ಯ ರಘುನಂದನಃ ।
ಪುಷ್ಕರಂ ಪುಷ್ಕರಾವತ್ಯಾಂ ಪೂರ್ವಮೇವಾಭಿಷೇಚಿತಂ ॥ ೧೦೩ ॥

ಅಯೋಧ್ಯಾಯಾಂ ರಾಘವೇಣ ಸ್ಥಾಪಯಾಮಾಸ ಸೇನಯಾ ।
ಸ್ತ್ರೀಭ್ಯಾಂ ಪುತ್ರೈರ್ದಾಸದಾಸೀಜನಾದ್ಯೈಃ ಪರಿವೇಷ್ಟಿತಂ ॥ ೧೦೪ ॥

ತತೋ ಮುಹೂರ್ತೇ ಭರತಸ್ತಕ್ಷಂ ತಕ್ಷಶಿಲಾಹ್ವಯೇ ।
ನಗರೇ ಸ್ಥಾಪಯಾಮಾಸ ರಾಘವೇಣಾಭಿಷೇಚಿತಂ ॥ ೧೦೫ ॥

೧೦೧–೧೦೪. ಅಲ್ಲಿ ನಡೆದ ವಿಷಯವನ್ನೆಲ್ಲಾ ರಾಮನಿಗೆ ಸಾಂಗವಾಗಿ ಹೇಳಿದನು. ಒಂದುಸಾರಿ ಕೈಕೇಯಿಗೆ ಪ್ರೀತಿಪಾತ್ರನಾದ ಭರತನನ್ನು ಯುಧಾಜಿತುವು ಬರಹೇಳಲು ಅವನು ಸೈನ್ಯದೊಡನೆ ಸೋದರಮಾವನಾದ ಆ ಯುಧಾಜಿತುವಿನ ಮನೆಗೆ ಹೋದನು. ಅಲ್ಲಿದ್ದ ಗಂಧರ್ವನಾಯಕರನ್ನು ರಾಮನ ಅಪ್ಪಣೆಯಂತೆ ಕೊಂದು ಮೂರುಕೋಟಿ ಸೈನ್ಯವನ್ನೂ ನಾಶಪಡಿಸಿದನು. ಅಲ್ಲಿ ಎರಡು ಪಟ್ಟಣಗಳನ್ನು ನಿರ್ಮಿಸಿ ಅದರಲ್ಲಿ ಒಂದಾದ ಪುಷ್ಕರಾವತಿಯಲ್ಲಿ ರಾಜ್ಯವನ್ನಾಳುವಂತೆ ಅಯೋಧ್ಯೆಯಲ್ಲಿಯೇ ಪುಷ್ಕರನನ್ನು ಅಭಿಷೇಕಮಾಡಿದ್ದಂತೆ ಸೈನ್ಯದೊಡನೆ ಅವನನ್ನು ಅಲ್ಲಿಟ್ಟನು. ಮತ್ತು ಅನೇಕಜನ ದಾಸೀದಾಸರನ್ನು ಅವನಿಗೆ ಕೊಟ್ಟನು.

೧೦೫–೧೦೬. ತಕ್ಷನೆಂಬುವನನ್ನು ತಕ್ಷಶಿಲೆಯಲ್ಲಿ ಸ್ಥಾಪಿಸಿದನು ಅವನಿಗೂ ಕೂಡ ಪೂರ್ವದಲ್ಲಿ ಅಯೋಧ್ಯೆಯಲ್ಲಿಯೇ ಅಭಿಷೇಕವು ಈ ರಾಜ್ಯಕ್ಕೋಸ್ಕರ

ಅಯೋಧ್ಯಾಯಾಂ ಪೂರ್ವಮೇವ ಮಹಾಮಂಗಳಪೂರ್ವಕಂ ।
ಸ್ತ್ರೀಭ್ಯಾಂ ಪುತ್ರಾದಿಭಿಸ್ತಕ್ಷಸ್ತಸ್ಥೌ ತಕ್ಷಶಿಲಾಹ್ವಯೇ ॥ ೧೦೬ ॥

ಪುನರಾಗತ್ಯ ಭರತೋ ರಾಮಸೇವಾಪರೋಽಭವತ್ ।
ತತಃ ಪ್ರೀತೋ ರಘುಶ್ರೇಷ್ಠೋ ಲಕ್ಷ್ಮಣಂ ವಾಕ್ಯಮಬ್ರವೀತ್ ॥ ೧೦೭ ॥

ಉಭೌ ಕುಮಾರೌ ಸೌಮಿತ್ರೇ ಗೃಹೀತ್ವಾ ಪಶ್ಚಿಮಾಂ ದಿಶಂ ।
ಗತ್ವಾ ಮಲ್ಲಾನ್ವಿನಿರ್ಜಿತ್ಯ ದುಷ್ಟಾನ್ ಸರ್ವಾಪಕಾರಿಣಃ ॥ ೧೦೮ ॥

ದ್ವಾವಂಗದಚಿತ್ರಕೇತೂ ಮಹೋತ್ಸವಪರಾಕ್ರಮೌ ।
ಮಯಾಭಿಷೇಚಿತೌ ವೀರೌ ಸ್ತ್ರೀಭ್ಯಾಂ ಪುತ್ರಬಲೈರ್ಯುತೌ ॥ ೧೦೯ ॥

ನಡೆದಿದ್ದಿತು. ಆ ತಕ್ಷಕನು ತನ್ನ ಇಬ್ಬರು ಹೆಂಡತಿಯರೊಡನೆಯೂ, ಮಕ್ಕಳೊಡನೆಯೂ ಆ ತಕ್ಷಶಿಲೆಯಲ್ಲಿ ರಾಜ್ಯಭಾರ ಮಾಡುತ್ತಿದ್ದನು.

೧೦೭. ಅನಂತರ ಭರತನು ಮತ್ತೆ ಅಯೋಧ್ಯೆಗೆ ಬಂದು ರಾಮಸೇವೆಯಲ್ಲಿ ನಿಂತನು. ಇದರಿಂದ ರಾಮನಿಗೆ ಬಹು ಸಂತೋಷವಾಯಿತು. ಆಗ ರಾಮನು ಲಕ್ಷ್ಮಣನನ್ನು ಕುರಿತು ಇಂತೆಂದನು.

೧೦೮. ಎಲೈ ಸೌಮಿತ್ರಿಯೇ ! ಅಂಗದ, ಚಿತ್ರಕೇತುಗಳೆಂಬ ಈ ಇಬ್ಬರು ಮಕ್ಕಳನ್ನೂ, ಪಶ್ಚಿಮದಿಕ್ಕಿಗೆ ಕರೆದುಕೊಂಡು ಹೋಗಿ ಅಲ್ಲಿರುವ ಮಲ್ಲರನ್ನು ಸೋಲಿಸು. ಅವರು ದುಷ್ಟರು. ಎಲ್ಲರಿಗೂ ಅಪಕಾರಿಗಳು.

೧೦೯–೧೧೦. ಈ ಅಂಗದ ಚಿತ್ರಕೇತುಗಳಿಬ್ಬರೂ ಬಹು ಪರಾಕ್ರಮಿಗಳು. ಅವರಿಬ್ಬರನ್ನೂ ಅಲ್ಲಿಯ ರಾಜ್ಯಕ್ಕೋಸ್ಕರವಾಗಿ ನಾನು ಇಲ್ಲಿಯೇ ಅಭಿಷೇಕ ಮಾಡಿದ್ದೇನೆ. ಅವರಿಬ್ಬರಿಗೂ ಅಲ್ಲಿ ಎರಡು ನಗರಗಳನ್ನು ನಿರ್ಮಿಸಿ ಆನೆ,

ದ್ವಯೋರ್ದ್ವೇ ನಗರೇ ಕೃತ್ವಾ ಗಜಾಶ್ವಧನರತ್ನಕೇ ।
ಸ್ಥಾಪಯಿತ್ವಾ ತಯೋಃ ಪುತ್ರೌ ಶೀಘ್ರಮಾಗಚ್ಛ ಮಾಂ ಪುನಃ ॥ ೧೧೦ ॥

ರಾಮಾಜ್ಞಾಂ ಸ ಪುರಸ್ಕೃತ್ಯ ಗಜಾಶ್ವಬಲವಾಹನಃ ।
ಗತ್ವಾ ಹತ್ವಾ ರಿಪೂನ್ ಸರ್ವಾನ್ ಗಜಾಶ್ವೇಂಗದನಾಮಕಂ ॥ ೧೧೧ ॥

ಧನರತ್ನೇ ಚಿತ್ರಕೇತುಂ ಸ್ಥಾಪಯಾಮಾಸ ದೇಹಜೌ ।
ಸ್ವಸ್ವಸ್ತ್ರೀಭ್ಯಾಂ ಬಾಲಕೈಶ್ಚ ದಾಸೀದಾಸೈರ್ಬಲಾನ್ವಿತೌ ॥ ೧೧೨ ॥

ಸೌಮಿತ್ರಿಃ ಪುನರಾಗತ್ಯ ರಾಮಸೇವಾಪರೋಭವತ್ ।
ಅಥ ರಾಮಸ್ಸಮಾಹೂಯ ಗಣಕಾನ್ ಪರಿಪೂಜ್ಯ ಚ ॥ ೧೧೩ ॥

ಅವನೀಂ ಜೇತುಮುದ್ಯುಕ್ತೋ ಮುಹೂರ್ತಂ ತಾನಪೃಚ್ಛತ ।
ತತಸ್ತೈರ್ಗಣಕೈರ್ದತ್ತೋ ಮುಹೂರ್ತಃ ಪರಮಶ್ಶುಭಃ ॥ ೧೧೪ ॥

ಕುದುರೆ, ರಥ, ರತ್ನಗಳನ್ನು ಕೊಟ್ಟು ಅವರಿಬ್ಬರನ್ನೂ ಹೆಂಡಿರು ಮಕ್ಕಳೊಡನೆ ಅಲ್ಲಿಟ್ಟು ಬೇಗನೇ ನನ್ನ ಬಳಿಗೆ ಬಂದುಬಿಡು.

೧೧೧–೧೧೨. ಲಕ್ಷ್ಮಣನು ರಾಮನ ಅಪ್ಪಣೆಯನ್ನು ಶಿರಸಾವಹಿಸಿ ಆನೆ, ಕುದುರೆ, ರಥಗಳನ್ನು ತೆಗೆದುಕೊಂಡು ಹೋಗಿ ಆ ಶತ್ರುಗಳೆಲ್ಲರನ್ನೂ ನಾಶಪಡಿಸಿ ಗಜಾಶ್ವವೆಂದೂ, ಧನರತ್ನವೆಂದೂ ಎರಡು ಪಟ್ಟಣಗಳನ್ನು ನಿರ್ಮಿಸಿ ಗಜಾಶ್ವದಲ್ಲಿ ಅಂಗದನನ್ನೂ, ಧನರತ್ನದಲ್ಲಿ ಚಿತ್ರಕೇತುವನ್ನೂ ನಿಲ್ಲಿಸಿದನು. ಅವರ ಹೆಂಡಿರನ್ನೂ, ಮಕ್ಕಳನ್ನೂ, ಸೈನ್ಯಗಳನ್ನೂ ಅವರೊಡನೆಯೇ ನಿಲ್ಲಿಸಿದನು.

೧೧೩–೧೧೪. ಸೌಮಿತ್ರಿಯು ಮತ್ತೆ ಬಂದು ರಾಮ ಸೇನೆಯಲ್ಲಿ ನಿಂತನು. ಅನಂತರ ರಾಮನು ಜೋಯಿಸರನ್ನು ಕರೆಸಿ ಅವರನ್ನು ಗೌರವಿಸಿ ಭೂಮಿಯನ್ನು ಜಯಿಸಲು ಇಚ್ಛೆಯುಳ್ಳವನಾಗಿ ಸುಮುಹೂರ್ತವನ್ನು ನೋಡಿ ಹೇಳಬೇಕೆಂದು ಕೇಳಿದನು. ಅನಂತರ ಅವರು ಒಳ್ಳೆಯ ಶುಭಮುಹೂರ್ತವನ್ನು ನೋಡಿ ಹೇಳಿದರು.

ತಂ ಶ್ರುತ್ವಾ ತಾನ್ಪುನಃ ಪೂಜ್ಯ ಸರ್ವಾನ್ ರಾಮೋ ವ್ಯಸರ್ಜಯತ್ ।
ತತೋ ರಾಮೋಽಬ್ರವೀದ್ವಾಕ್ಯಂ ಲಕ್ಷ್ಮಣಂ ಪುರತಃ ಸ್ಥಿತಂ ॥ ೧೧೫ ॥

ಅವನಿಸ್ಥಾನ್ ನೃಪಾನ್ ಜೇತುಂ ಸೋಽಹಂ ಗಚ್ಛಾಮಿ ಪಾರ್ಥಿವೈಃ ।
ವಿಮಾನೇನೈವ ಗಚ್ಛಾಮಿ ಸೇನಾಂ ಚೋದಯ ಸತ್ವರಂ ॥ ೧೧೬ ॥

ನಾನಾಶಸ್ತ್ರಾಣಿ ಯಂತ್ರಾಣಿ ವಾಹನಾನಿ ಸಮಂತತಃ ।
ಸ್ಥಾಪಯಸ್ವ ವಿಮಾನೇಽದ್ಯ ಶತಘ್ನ್ಯಶ್ಚ ಶತಶೋ ವರಾಃ ॥ ೧೧೭ ॥

ಧನಧಾನ್ಯತೃಣಾದೀನಾಂ ಸಂಗ್ರಹಂ ಕುರು ಪುಷ್ಪಕೇ ।
ಪುರೀಂ ಗೋಪ್ತುಂ ಸುಮಂತ್ರೋಽಸ್ತು ಸೈನ್ಯೇನ ಪರಿವೇಷ್ಟಿತಃ ॥ ೧೧೮ ॥

---

೧೧೫. ರಾಮನು ಅದನ್ನು ಕೇಳಿ ಅವರನ್ನು ಮತ್ತೆ ಪೂಜಿಸಿ ಕಳುಹಿಸಿದನು. ಅನಂತರ ರಾಮನು ಎದುರಿಗೆ ನಿಂತಿದ್ದ ಲಕ್ಷ್ಮಣನನ್ನು ಕುರಿತು ಇಂತೆಂದನು.

೧೧೬. ಎಲೈ ಲಕ್ಷ್ಮಣನೇ ! ಭೂಮಿಯಲ್ಲಿರುವ ರಾಜರೆಲ್ಲರನ್ನೂ ಜಯಿಸಲು ಹೊರಡುತ್ತೇನೆ. ಈ ರಾಜರುಗಳೂ ನನ್ನೊಡನೆ ಬರುವರು. ವಿಮಾನದಲ್ಲಿಯೇ ಹೋಗುತ್ತೇನೆ. ಸೇನೆಯನ್ನು ಬೇಗನೆ ಸಿದ್ಧಪಡಿಸು.

೧೧೭. ಬಹುವಿಧವಾದ ಶಸ್ತ್ರಗಳನ್ನೂ, ಯಂತ್ರಗಳನ್ನೂ, ವಾಹನಗಳನ್ನೂ ಈ ಪುಷ್ಪಕದ ಎಲ್ಲಾ ಕಡೆಯಲ್ಲಿಯೂ ಇರಿಸು. ಅನೇಕ ವಿಧವಾದ ಫಿರಂಗಿಗಳನ್ನು ನೂರರಗಟ್ಟಲೆಯಲ್ಲಿ ಇಡಿಸು.

೧೧೮. ಧನ, ಧಾನ್ಯ, ಹುಲ್ಲು, ನೀರು ಮುಂತಾದುವನ್ನು ಪುಷ್ಪಕದಲ್ಲಿ ಸಮೃದ್ಧಿಯಾಗಿ ಇಡಿಸು. ಪಟ್ಟಣವನ್ನು ಕಾಪಾಡಲು ಸುಮಂತ್ರನು ಇಲ್ಲಿರಲಿ. ಅವನ ಜೊತೆಯಲ್ಲಿ ಸೈನ್ಯವೂ ಇರಲಿ.

ಏವಮಾಜ್ಞಾಪ್ಯ ಸೌಮಿತ್ರಿಂ ಶ್ರೀರಾಮೋ ಜಾನಕೀಗೃಹಂ ।
ಯಯೌ ಚಕಾರ ಸೌಮಿತ್ರಿರ್ಯಥಾ ರಾಮೇಣ ಶಿಕ್ಷಿತಃ　　　|| ೧೧೯ ||

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ರಾಜ್ಯಕಾಂಡೇ ಪೂರ್ವಾರ್ಧೇ ರಾಜ್ಯವಿಭಾಗೋ
ನಾಮ ಷಷ್ಠಸ್ಸರ್ಗಃ

---

೧೧೯. ಲಕ್ಷ್ಮಣನಿಗೆ ಇಂತೆಂದು ಆಜ್ಞಾಪಿಸಿ ರಾಮನು ಜಾನಕಿಯ ಮನೆಗೆ ಹೋದನು. ಇತ್ತ ಸೌಮಿತ್ರಿಯು ರಾಮನು ಹೇಳಿದಂತೆಯೇ ಎಲ್ಲವನ್ನೂ ಮಾಡಿದನು.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಪೂರ್ವಾರ್ಧದಲ್ಲಿ
ರಾಜ್ಯವಿಭಾಗವೆಂಬ ಆರನೆಯ ಸರ್ಗವು.

॥ ಶ್ರೀಃ ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಆರನೆಯ ಸರ್ಗದ ಸಾರಾಂಶವು

ಛಾಯಾ ಸೀತೆಯು ಧನುಸ್ಸನ್ನು ಠಂಕಾರಮಾಡುತ್ತ ರಣರಂಗಕ್ಕೆ ಹೋದಳು. ಮೂಲಕಾಸುರನು ಆಕೆಯನ್ನು ಎದುರಿಸುತ್ತಾ ಈಕೆಯ ಭಯಂಕರವಾದ ರೂಪವನ್ನು ನೋಡಿ ಹೆದರದಿದ್ದರೂ ಹೆಂಗಸನ್ನು ಕೊಲ್ಲಬಾರದೆಂಬ ಇಚ್ಛೆಯಿಂದ ಹೊರಟು ಹೋಗುವಂತೆ ಹೇಳಿದನು.

ಅದಕ್ಕೆ ಆಕೆಯು ನನ್ನಕಡೆಯ ಬ್ರಾಹ್ಮಣನನ್ನು ಕೊಂದುದಕ್ಕೆ ಪ್ರತೀಕಾರವನ್ನು ಮಾಡಲು ನಿನ್ನನ್ನು ಗೆಲ್ಲಬೇಕಾಗಿದೆ. ಎಂದು ಹೇಳುತ್ತ ಯುದ್ಧಕ್ಕೆ ಮೊದಲಿಟ್ಟಳು. ಬಹುಕಾಲದವರೆಗೂ ಯುದ್ಧವು ನಡೆಯುತ್ತಿರಲು ಕೊನೆಗೆ ತಾಮಸೀ ಸೀತೆಯು ಚಂಡಿಕಾಸ್ತ್ರವನ್ನು ಬಿಟ್ಟು ಆತನನ್ನು ಕೊಂದಳು. ಮತ್ತೆ ಹಿಂದಕ್ಕೆ ಬಂದು ಆ ಸೀತೆಯಲ್ಲಿಯೇ ಐಕ್ಯಳಾದಳು.

ಅನಂತರ ವಿಭೀಷಣನ ಮಾತಿನಂತೆ ರಾಮನು ಎಲ್ಲರನ್ನೂ ಕರೆದುಕೊಂಡು ಲಂಕೆಗೆ ಹೋಗಿ ಆ ವಿಭೀಷಣನಿಗೆ ರಾಜ್ಯಾಭಿಷೇಕವನ್ನು ಮಾಡಿದನು. ಅನಂತರ ರಾವಣನು ಪೂಜಿಸುತ್ತಿದ್ದ ಕಪಿಲವರಾಹ ಮೂರ್ತಿಯನ್ನು ರಾಮನು ತೆಗೆದುಕೊಂಡು ಅಲ್ಲಿನ ಎಲ್ಲಾ ಸ್ಥಳಗಳನ್ನೂ ನೋಡಿಕೊಂಡು ಹೊರಟು ಲಂಕೆಯ ಸುತ್ತಲೂ ಧನುಸ್ಸಿನ ರೇಖೆಯನ್ನು ಮಾಡಿ ಶತ್ರುಗಳು ಅದನ್ನು ದಾಟದಂತೆ ಮಾಡಿದನು. ಮತ್ತು ಆ ವಿಭೀಷಣನಿಗೆ ತನ್ನದೊಂದು ಬಾಣವನ್ನು ಕೊಟ್ಟನು. ಅಲ್ಲಿಂದ ಹೊರಟು ಅಯೋಧ್ಯೆಗೆ ಬಂದು ಸೇರಿದನು. ಮತ್ತು ಆ ಕಪಿಲಮೂರ್ತಿಯನ್ನು ಶತ್ರುಘ್ನನಿಗೆ ಕೊಟ್ಟನು.

ಒಂದುಸಾರಿ ಯಮುನೆಯ ತೀರದಲ್ಲಿದ್ದ ಮುನಿಗಳೆಲ್ಲರೂ ಲವಣಾಸುರನ ಬಯದಿಂದ ರಾಮನ ಬಳಿಗೆ ಬಂದು, ಲವಣಾಸುರನೆಂಬ ರಾಕ್ಷಸನು ತಮ್ಮನ್ನು ತೊಂದರೆಪಡಿಸುತ್ತಿರುವುದಾಗಿ ವಿಜ್ಞಾಪಿಸಿದರು. ಆಗ ರಾಮನು ಶತ್ರುಘ್ನನನ್ನು ಕಳುಹಿಸಿ ಅವನನ್ನು ಕೊಲ್ಲಿಸಿದನು. ಮತ್ತು ತನಗೆ ಕೊಟ್ಟಿದ್ದ ಆ ವರಹಾಮೂರ್ತಿಯನ್ನು ಮಧುರೆಯಲ್ಲಿ ಸ್ಥಾಪಿಸಿಸಿದನು. ಅನಂತರ ತನ್ನ ದೇಶವು ಭದ್ರವಾಗಿ ನಿಲ್ಲಲು ತಮ್ಮಂದಿರನ್ನೂ. ಮಕ್ಕಳನ್ನೂ ಒಂದೊಂದು ಕಡೆಯಲ್ಲಿ ಒಬ್ಬೊಬ್ಬರನ್ನು ಪ್ರತಿನಿಧಿಯನ್ನಾಗಿಟ್ಟನು. ಅನಂತರ ಪ್ರಪಂಚವನ್ನೇ ಜಯಿಸಲು ಉದ್ಯುಕ್ತನಾಗಿ ಲಕ್ಷ್ಮಣನಿಗೆ ಪುಷ್ಪಕದಲ್ಲಿ ಎಲ್ಲವನ್ನೂ ಸಿದ್ಧಮಾಡಿಡುವಂತೆ ಆಜ್ಞಾಪಿಸಿ ಸೀತೆಯ ಮನೆಗೆ ಹೋದನು.

|| ಶ್ರೀರಸ್ತು ||

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ

|| ಸಪ್ತಮಸ್ಸರ್ಗಃ ||

|| ಶ್ರೀರಾಮದಾಸ ಉವಾಚ ||

ಅಥ ರಾಮೋ ರಹಸ್ಸಿತಾಂ ಸ್ವೋದ್ಯೋಗಂ ಕಥಯಚ್ಛನೈಃ ।
ಅವನಿಸ್ಥಾನ್ ನೃಪಾನ್ ಜೇತುಂ ಪುತ್ರಾಭ್ಯಾಂ ಬಂಧುಭಿಃ ಸೃಪೈಃ || ೧ ||

ತದ್ರಾಮವಚನಂ ಶ್ರುತ್ವಾ ಜಾನಕೀ ಪ್ರಾಹ ಲಜ್ಜಿತಾ ।
ನಾಹಂ ತ್ವದ್ವಿರಹಂ ಸೋಢುಂ ಸಮರ್ಥಾ ರಘುನಂದನ || ೨ ||

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಏಳನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು—ರಾಮನು ಜಾನಕಿಯ ಮನೆಗೆ ಹೋಗಿ ತಾನು ಮಾಡಬೇಕೆಂದಿರುವ ಉದ್ಯೋಗವನ್ನು ನಿಧಾನವಾಗಿ ಹೇಳಿದನು. ಎಲೈ ಸೀತೆಯೇ ! ಭೂಮಿಯಲ್ಲಿರುವ ಎಲ್ಲಾ ರಾಜರನ್ನೂ ಜಯಿಸಲು ತಮ್ಮಂದಿರನ್ನೂ ಮಕ್ಕಳನ್ನೂ ಕರೆದುಕೊಂಡು ಹೋಗುತ್ತೇನೆ ಎಂದನು.

೨. ರಾಮನು ಹೀಗೆ ಹೇಳಿದುದನ್ನು ಕೇಳಿ ಜಾನಕಿಯು ಲಜ್ಜೆಗೊಂಡು ಇಂತೆಂದಳು. ಎಲೈ ರಾಮನೆ ! ನಿನ್ನ ವಿರಹವನ್ನು ಸಹಿಸಲು ನನಗಾಗುವುದಿಲ್ಲ.

ತ್ವಯಾಹಮವನೀಂ ದ್ರಷ್ಟುಂ ಯಾಸ್ಯಾಮಿ ಜಗತಾಂ ಪ್ರಭೋ ।
ತಥೇತ್ಯುಕ್ತ್ವಾ ರಘುಶ್ರೇಷ್ಠೋ ಲಾಲಯಾಮಾಸ ಜಾನಕೀಂ ॥ ೩ ॥

ಏತಸ್ಮಿನ್ನಂತರೇ ಸರ್ವಾ ಊರ್ಮಿಲಾದ್ಯಾ ಸ್ತ್ರಿಯಶ್ಚ ತಾಃ ।
ಕುಶಸ್ಯ ಚ ಲವಸ್ಯಾಪಿ ಪತ್ನ್ಯಃ ಶ್ರುತ್ವಾವನೇರ್ಜಯಂ ॥ ೪ ॥

ಕರ್ತುಂ ರಾಮಸಮುದ್ಯೋಗಂ ಪುತ್ರಾಭ್ಯಾಂ ಬಂಧುಭಿಃ ನೃಪೈಃ ।
ಜಾನಕೀಂ ಪ್ರಾರ್ಥಯಾಮಾಸ್ಯುರ್ಯಾಂಸುಮೋದ್ಯ ತ್ವಯಾ ಸಹಾ ॥ ೫ ॥

ಸ್ವಸ್ವಕಾಂತ ವಿಯೋಗಂ ಚ ಸೋಢುಂ ನೈವ ಕ್ಷಮಾ ವಯಂ ।
ತಾಸಾಂ ಸೀತಾ ವಚಃ ಶ್ರುತ್ವಾ ರಾಘವಂ ಶ್ರಾವ್ಯ ತದ್ವಚಃ ॥ ೬ ॥

---

೩. ನಾನೂ ದೇಶಗಳನ್ನು ನೋಡಲು ನಿನ್ನೊಡನೆಯೇ ಬರುತ್ತೇನೆ. ಎಂದೆನಲು ರಾಮನು ಹಾಗೆಯೇ ಆಗಲೆಂದು ಆಕೆಯ ಗುಣವನ್ನು ಶ್ಲಾಘಿಸಿದನು.

೪–೫. ಇಷ್ಟರೊಳಗೆ ರಾಮನು ತಮ್ಮಂದಿರೊಡನೆಯೂ ಮಕ್ಕಳೊಡನೆಯೂ ಪ್ರಪಂಚದ ಜಯಕ್ಕೆಹೊರಡುವನೆಂಬುದು ಊರ್ಮಿಲೆಯೇ ಮೊದಲಾದ ಹೆಂಗಸರಿಗೂ ಕುಶಲವರ ಹೆಂಡಿರಿಗೂ ಅವರವರ ಮಕ್ಕಳಿಂದಲೂ ಗಂಡಂದಿರಿಂದಲೂ ತಿಳಿಯಿತು. ಆಗ ಅವರು ನಾವೂ ನಿನ್ನ ಜೊತೆಯಲ್ಲಿ ಬರುತ್ತೇವೆಂದು ಜಾನಕಿಯನ್ನು ಪ್ರಾರ್ಥಿಸಿಕೊಂಡರು.

೬. ನಾವುಗಳೂ ಕೂಡ ನಮ್ಮ ನಮ್ಮ ಗಂಡಂದಿರ ವಿಯೋಗವನ್ನು ಸಹಿಸಲಾರೆವು. ಎಂದೆನಲು ಸೀತೆಯು ಅವರ ಮಾತನ್ನು ಕೇಳಿ ಆ ಮಾತನ್ನು ರಾಮನಿಗೆ ತಿಳಿಸಿದಳು.

ರಾಮಾಜ್ಞಯಾ ತದಾ ಸರ್ವಾ ಸ್ತ್ರೋಷಯಂತೀ ವಚೋಽಬ್ರವೀತ್ ।
ಆಗಂತವ್ಯಂ ಮಯಾ ಸಾಕಂ ಯುಷ್ಮಾಭಿರ್ನಿಶ್ಚಯೇನ ಹಿ ॥ ೭ ॥
ಗಚ್ಛಧ್ವಂ ಸ್ವೀಯಗೇಹಾನಿ ಸರ್ವಾಸ್ತುಷ್ಟಾ ಗತಜ್ವರಾಃ ।
ಏವಂ ಸೀತಾವಚಃ ಶ್ರುತ್ವಾ ತದಾ ತಾಃ ಕಂಜಲೋಚನಾಃ ॥ ೮ ॥
ಸೀತಾಂ ನತ್ವಾ ಯಯುಸ್ಸರ್ವಾಸ್ಸಂತುಷ್ಟಾ ಮುದಿತಾನನಾಃ ।
ಸ್ವಸ್ವಗೇಹಾನಿ ವೇಗೇನ ರುಕ್ಮನೂಪುರನಿಸ್ಸ್ವನಾಃ ॥ ೯ ॥
ಅಥ ರಾಮಸ್ತು ತಾಂ ರಾತ್ರಿಂ ನಿನಾಯ ಸೀತಯಾ ಸುಖಂ ।
ಬ್ರಾಹ್ಮೇ ಮುಹೂರ್ತೇ ಶ್ರುತ್ವಾ ಸ ವಂದಿಗೀತಂ ಮನೋರಮಂ ॥ ೧೦ ॥
ರಾಮಃ ಪ್ರಬುದ್ಧಸ್ತು ಜವಾತ್ಕೃತಶೌಚಾದಿಸತ್ಕ್ರಿಯಃ ।
ಸ್ನಾತ್ವಾ ನಿತ್ಯವಿಧಿಂ ಕೃತ್ವಾ ಕೃತ್ವಾ ಶಂಭೋಃ ಪ್ರಪೂಜನಂ ॥ ೧೧ ॥

---

೭. ರಾಮನು ಹಾಗೇ ಆಗಲೆಂದು ಹೇಳಲು ಅವನ ಅಪ್ಪಣೆಯಂತೆ ಸೀತೆಯು ಅವರೆಲ್ಲರನ್ನೂ ಸಂತೋಷಪಡಿಸುತ್ತ ನೀವೆಲ್ಲರೂ ನನ್ನ ಜೊತೆಯಲ್ಲಿಯೇ ಬನ್ನಿರಿ. ಈಗ ನಿಮ್ಮ ನಿಮ್ಮ ಮನೆಗಳಿಗೆ ಸುಖವಾಗಿ ಯೋಚಿಸದೆ ಹೋಗಿರಿ ಎಂದಳು.

೮-೯. ಆಗ ಅವರೆಲ್ಲರೂ ಸಂತೋಷದಿಂದ ದುಃಖವನ್ನು ಬಿಟ್ಟುಬಿಟ್ಟರು. ಸೀತೆಯು ಹೀಗೆ ಹೇಳಲು ಆ ಹೆಂಗಸರೆಲ್ಲರೂ ಅವಳಿಗೆ ನಮಸ್ಕರಿಸಿ ಸಂತೋಷಪಟ್ಟು ತಮ್ಮ ತಮ್ಮ ಮನೆಗಳಿಗೆ ಬೇಗ ಬೇಗನೆ ಕಾಲುಬಳೆಯನ್ನು ಸದ್ದು ಮಾಡುತ್ತ ಹೊರಟರು.

೧೦. ಆ ರಾತ್ರಿಯನ್ನು ರಾಮನು ಸೀತೆಯೊಡನೆ ಸುಖವಾಗಿ ಕಳೆದನು. ಬ್ರಾಹ್ಮಮುಹೂರ್ತದಲ್ಲಿ ವಂದಿಗಳು ತಮ್ಮನ್ನು ಹೊಗಳುತ್ತಿದ್ದುದನ್ನು ಕೇಳಿದನು.

೧೧. ಆಗ ರಾಮನು ಅದರಿಂದ ಎಚ್ಚರಗೊಂಡು ಬೇಗನೆ ಶೌಚಾದಿ ಕರ್ಮಗಳನ್ನು ಮಾಡಿಕೊಂಡನು. ಸ್ನಾನಮಾಡಿ ನಿತ್ಯವಿಧಿಗಳನ್ನು ಮಾಡಿ ಶಿವಪೂಜೆಯನ್ನೂ ಮಾಡಿದನು.

ಕಥಾಂ ಪೌರಾಣಿಕೀಂ ಶ್ರುತ್ವಾ ದತ್ವಾ ದಾನಾನ್ಯನೇಕಶಃ |
ಕೃತ್ವೋದ್ಯೋಗವಿಧಾನಂ ಚ ಸಂಪೂಜ್ಯ ಗಣನಾಯಕಂ || ೧೨ ||

ಕೃತ್ವಾಭ್ಯುದಯಿಕಂ ಶ್ರಾದ್ಧಂ ಘೃತಶ್ರಾದ್ಧಂ ಸವಿಸ್ತರಂ |
ಕಾಮಧೇನುಂ ಕಲ್ಪವೃಕ್ಷಂ ಪುಷ್ಪಕಂ ಚ ಸುರದ್ರುಮಂ || ೧೩ ||

ಮಣಿದ್ವಯಂ ಪೃಥಕ್ಪೂಜ್ಯ ಸರ್ವೈಃ ಕೃತ್ವಾ ತು ಭೋಜನಂ |
ಧೃತ್ವಾ ವಸ್ತ್ರಾಣಿ ಶಸ್ತ್ರಾಣಿ ಬಧ್ವಾ ಮಾತೄಃ ಪ್ರಣಮ್ಯ ಚ || ೧೪ ||

ಯಯೌ ಸ ಶಿಬಿಕಾರೂಢಃ ಪುಷ್ಪಕಂ ಬಂಧುಭಿಃ ನೃಪೈಃ |
ಪುತ್ರಾಭ್ಯಾಂ ಸಚಿವೈಸ್ಸೈನ್ಯೈಃ ಸೇವಕೈರ್ವಾಹನಾದಿಭಿಃ || ೧೫ ||

---

೧೨. ಅನಂತರ ಪುರಾಣಿಕನಿಂದ ಪುರಾಣದ ಕಥೆಯನ್ನು ಕೇಳಿದನು. ಆಮೇಲೆ ಬ್ರಾಹ್ಮಣರಿಗೆ ದಕ್ಷಿಣೆಗಳನ್ನು ಕೊಟ್ಟನು. ಅನಂತರ ಪ್ರಯಾಣದ ಸನ್ನಾಹಗಳನ್ನು ಮಾಡಿ ಗಣಪತಿಯ ಪೂಜೆಯನ್ನು ಮಾಡಿದನು.

೧೩–೧೪. ಅನಂತರ ನಾಂದೀಶ್ರಾದ್ಧವನ್ನು ಮಾಡಿದನು. ಆಮೇಲೆ ವಿಸ್ತಾರವಾಗಿ ಶ್ರಾದ್ಧವನ್ನು ಘೃತಶ್ರಾದ್ಧದ ವಿಧಿಯಿಂದ ಮಾಡಿದನು. ಆಮೇಲೆ ಕಾಮಧೇನು, ಕಲ್ಪವೃಕ್ಷ, ಪುಷ್ಪಕ, ಪಾರಿಜಾತ, ಚಿಂತಾಮಣಿ, ಕೌಸ್ತುಭಮಣಿ, ಇವೆಲ್ಲವನ್ನೂ ಬೇರೆ ಬೇರೆಯಾಗಿ ಪೂಜಿಸಿ ಅನಂತರ ಎಲ್ಲರೊಡನೆಯೂ ಕೂಡಿ ಉತ್ತಮವಾದ ಭೋಜನವನ್ನು ಮಾಡಿದನು. ಅನಂತರ ಯೋದ್ಧೃವಿನ ಬಟ್ಟೆಗಳನ್ನು ಧರಿಸಿಕೊಂಡು ಶಸ್ತ್ರಗಳೆಲ್ಲವನ್ನೂ ಕಟ್ಟಿಕೊಂಡನು. ಅಲ್ಲಿಂದ ಹೋಗಿ ತಾಯಿಯರಿಗೆ ನಮಸ್ಕರಿಸಿದನು.

೧೫–೧೬. ಅನಂತರ ಪಲ್ಲಕ್ಕಿಯಲ್ಲಿ ಕುಳಿತು ಪುಷ್ಪಕದ ಬಳಿಗೆ ಹೊರಟನು. ಅವನ ಸುತ್ತಲೂ ತಮ್ಮಂದಿರೂ, ಸಾಮಂತರಾಜರೂ, ಕುಶಲವರಾದ ಮಕ್ಕಳೂ, ಮಂಗಳಕರರಾದ ಸೇವಕರೂ, ಸೈನ್ಯ, ವಾಹನಗಳೂ,

ಯಾನವಾರುರುಹುಸ್ಸರ್ವಾಸ್ಸೀತಾದ್ಯಾಸ್ತಾಃ ಸ್ತ್ರಿಯಶ್ಶುಭಾಃ ॥ ೧೬ ॥

ಕೌಸಲ್ಯಾದ್ಯಾ ಮಾತರಶ್ಚ ತಸ್ಥುರ್ಯಾನೇ ಯಥಾಸುಖಂ ।
ಯಾತ್ರಾಕಾಂಡೇ ಯಥಾ ಶಿಷ್ಯ ವಿಮಾನರಚನಾ ಪುರಾ ॥ ೧೭ ॥

ತೇ ವರ್ಣಿತಾ ಮಯಾ ತದ್ವದಧುನಾಸೀಚ್ಛುಭಾ ಪುನಃ ।
ತದಾ ನಿನೇದುರ್ವಾದ್ಯಾನಿ ತುಷ್ಟುವುರ್ಮಾಗಧಾದಯಃ ॥ ೧೮ ॥

ನನೃತುರ್ವಾರನಾರ್ಯಶ್ಚ ನಟಾ ಗಾನಂ ಪ್ರಚಕ್ರಿರೇ ।
ಅಥ ರಾಮೋಽಬ್ರವೀದ್ಯಾನಂ ಗಚ್ಛ ಪೂರ್ವದಿಶಂ ಪ್ರತಿ ॥ ೧೯ ॥

ತಥೇತ್ಯುಕ್ತ್ವಾ ಪುಷ್ಪಕಂ ತದ್ಯಯಾವಾಕಾಶವರ್ತ್ಮನಾ ।
ನತ್ವಾ ರಾಮಂ ಸುಮಂತ್ರೋಽಪಿ ತಸ್ಥೌ ಪುರ್ಯಾಂ ಯಥಾಸುಖಂ ॥ ೨೦ ॥

ಇವರೆಲ್ಲರೂ ಆವರಿಸಿಕೊಂಡು ಆವನ ಸುತ್ತಲೂ ಹೊರಟರು. ಇತ್ತ ಸೀತೆಯೇ ಮೊದಲಾದ ಹೆಂಗಸರೂ ಯಾನದಲ್ಲಿ ಕುಳಿತರು.

೧೭. ಕೌಸಲ್ಯೆಯೇ ಮೊದಲಾದ ತಾಯಿಯರು ಕೂಡ ಅವರವರಿಗೆ ಅನುಕೂಲವಾದಂತೆ ಯಾನದಲ್ಲಿ ಕುಳಿತರು. ಎಲೈ ಶಿಷ್ಯನೇ ! ಯಾತ್ರಾಕಾಂಡದಲ್ಲಿ ವಿಮಾನದಲ್ಲಿ ಪರಸ್ಥಳಕ್ಕೆ ಹೋಗುವಾಗ ಮಾಡತಕ್ಕ ರಚನೆಗಳನ್ನು ಹೇಳಿದ್ದೇನೆ.

೧೮. ಅದೇ ರೀತಿಯಲ್ಲಿ ಈಗಲೂ ಕೂಡ ಆ ವಿಮಾನದಲ್ಲಿ ರಚನೆಯು ನಡೆಯಿತು. ರಾಮನು ಪುಷ್ಪಕವನ್ನು ಹತ್ತುತ್ತಲೂ ವಾದ್ಯಗಳು ಮೊಳಗಿದುವು. ವಂದಿಮಾಗಧರು ಹೊಗಳಿದರು.

೧೯. ವಾರಸ್ತ್ರೀಯರು ಕುಣಿಯುತ್ತಿದ್ದರು. ನಟರು ಗಾನಮಾಡುತ್ತಿದ್ದರು. ಆಗ ರಾಮನು ಎಲೈ ಪುಷ್ಪಕವೇ ! ಪೂರ್ವದಿಕ್ಕನ್ನು ಕುರಿತು ಹೊರಡು ಎಂದನು.

೨೦. ಪುಷ್ಪಕವು ಹಾಗೆಯೇ ಆಗಲೆಂದು ಹೇಳಿ ಆಕಾಶದ ದಾರಿಯಲ್ಲಿ ಹೊರಟಿತು. ಸುಮಂತ್ರನು ರಾಮನಿಗೆ ನಮಸ್ಕರಿಸಿ ಅಯೋಧ್ಯೆಯಲ್ಲಿ ಸುಖವಾಗಿ ನಿಂತನು.

ಪೂರ್ವದೇಶೇ ನೃಪಾಸ್ಸರ್ವೇ ಶ್ರುತ್ವಾ ರಾಮಂ ಸಮಾಗತಂ ।
ಪ್ರತ್ಯುಜ್ಜಗ್ಮೂ ರಾಘವೇಂದ್ರಂ ಪ್ರಬದ್ಧಕರಸಂಪುಟಾಃ ॥ ೨೧ ॥

ಪ್ರಣೇಮುಸ್ತೇ ರಮಾನಾಥಂ ನಾನೋಪಾಯನಪಾಣಯಃ ।
ಪೂಜಯಾಮಾಸುಃ ಶ್ರೀರಾಮಂ ನೀತ್ವಾ ರಾಜ್ಯಂ ನಿಜಂ ಸ್ವಯಂ ॥ ೨೨ ॥

ರಾಮಾಜ್ಞಯಾ ಸಸೈನ್ಯಾಶ್ಚ ತಸ್ಥುರ್ಯಾನೇ ನೃಪೋತ್ತಮಾಃ ।
ಸ್ವಕೋಶಾದೀನಿ ರಾಮಾಯ ಸಮರ್ಪ್ಯ ಸ್ಥಿರಮಾನಸಾಃ ॥ ೨೩ ॥

ಮಾಗಧಾನ್ ಸಮತಿಕ್ರಮ್ಯ ವಿಮಾನೇನ ರಘೂತ್ತಮಃ ।
ಪಶ್ಯನ್ನಾನಾವಿಧಾನ್ ದೇಶಾನ್ ಭೂರಿಕೀರ್ತೇಃ ಪುರಂ ಯಯೌ ॥ ೨೪ ॥

---

೨೧. ಪೂರ್ವದೇಶದ ರಾಜರು ರಾಮನು ಬರುತ್ತಿರುವುದನ್ನು ಕೇಳಿದರು. ಆಗ ಅವರೆಲ್ಲರೂ ಕೈಮುಗಿದುಕೊಂಡು ಆ ರಾಮನನ್ನು ಎದುರುಗೊಂಡರು.

೨೨. ಮತ್ತು ಅನೇಕ ಬಗೆಯಾದ ಕಪ್ಪಕಾಣಿಕೆಗಳನ್ನು ಕೊಟ್ಟು ಅವನಿಗೆ ನಮಸ್ಕರಿಸಿದರು. ಮತ್ತು ತಮ್ಮ ರಾಜ್ಯಗಳಿಗೆ ಕರೆದುಕೊಂಡು ಹೋಗಿ ಅವನಿಗೆ ಬಹುವಾದ ಧನವನ್ನೂ ಕೊಟ್ಟು ಪೂಜಿಸಿದರು.

೨೩. ಆಗ ರಾಮನು ಅವರನ್ನು ಸೈನ್ಯದೊಡನೆ ಪುಷ್ಪಕದಲ್ಲಿ ಕುಳಿತುಕೊಳ್ಳುವಂತೆ ಅಪ್ಪಣೆಮಾಡಲು ಆ ರಾಜರು ಅಂತೆಯೇ ಮಾಡಿದರು. ತಮ್ಮ ಬೊಕ್ಕಸಗಳನ್ನೂ ಆ ರಾಮನಿಗೆ ಸಮರ್ಪಿಸಿ ಸ್ವಸ್ಥಚಿತ್ತದಿಂದ ಪುಷ್ಪಕದಲ್ಲಿ ಕುಳಿತರು.

೨೪. ಅಲ್ಲಿಂದ ಹೊರಟು ರಾಮನು ಮಗಧರಾಜ್ಯವನ್ನು ದಾಟಿ ವಿಮಾನದಲ್ಲಿ ಕುಳಿತೇ ನಾನಾವಿಧವಾದ ದೇಶಗಳನ್ನೂ ನೋಡುತ್ತ ಭೂರಿಕೀರ್ತಿಯ ಪಟ್ಟಣಕ್ಕೆ ಬಂದನು.

ತೇನಾತಿಪೂಜಿತೋ ರಾಮಃ ಶನೈರ್ಯಾನೇನ ದಕ್ಷಿಣಂ ।
ಯಯಾವಬ್ಧಿತಟೇನೈವ ದ್ರಾವಿಡಂ ದೇಶಮುತ್ತಮಂ ॥ ೨೫ ॥

ಕೃಷ್ಣಾತೀರಪ್ರದೇಶಾಂಸ್ತಾನ್ ಪಶ್ಯನ್ ರಾಮಶ್ಶನೈಶ್ಶನೈಃ ।
ಕಾಂತಿಂ ಯಯೌ ವಿಮಾನೇನ ಕಂಬುಕಂಠೋಽಪಿ ರಾಘವಂ ॥ ೨೬ ॥

ಪೂಜಯಾಮಾಸ ವಿಧಿವತ್ಸ್ನೇಹಾದ್ಯೈಸ್ಸುಹೃದಂ ನಿಜಂ ।
ಆರವಾರಂ ಮಹಾದೇಶಂ ತಥಾ ತಚ್ಚೋಳಮಂಡಲಂ ॥ ೨೭ ॥

ಸಮತಿಕ್ರಮ್ಯ ಶ್ರೀರಾಮಸ್ತತ್ರಸ್ಥೈಃ ಪೂಜಿತೋ ನೃಪೈಃ ।
ಯಯೌ ಸ ಕೇರಲಾನ್ ದೇಶಾನಂಧ್ರಂ ಕರ್ಣಾಟಕಂ ಯಯೌ ॥ ೨೮ ॥

---

೨೫. ಆ ಭೂರಿಕೀರ್ತಿಯು ಅಲ್ಲಿ ರಾಮನನ್ನು ಪೂಜಿಸಲು ಅಲ್ಲಿಂದ ರಾಮನು ಹೊರಟು ನಿಧಾನವಾಗಿಯೇ ಸಮುದ್ರದ ದಡದಲ್ಲಿಯೇ ದಕ್ಷಿಣದಿಕ್ಕಿಗೆ ಹೋಗುತ್ತಾ ಉತ್ತಮವಾದ ದ್ರಾವಿಡದೇಶಕ್ಕೆ ಬಂದನು.

೨೬. ಅಲ್ಲಿ ಕೃಷ್ಣಾತೀರದಲ್ಲಿ ಹೊರಟು ಅಲ್ಲಿನ ದೇಶಗಳನ್ನು ನಿಧಾನವಾಗಿ ನೋಡುತ್ತ ಕಾಂತಿಪುರಿಗೆ ಬಂದನು. ಅಲ್ಲಿ ಕಂಬುಕಂಠನೆಂಬ ರಾಜನಿದ್ದನು.

೨೭. ಅವನು ಶ್ರೀರಾಮನಿಗೆ ಉತ್ತಮನಾದ ಸ್ನೇಹಿತನು. ಆ ಸ್ನೇಹಿತನಾದ ಕಂಬುಕಂಠನು ಶಾಸ್ತ್ರರೀತಿಯಿಂದ ರಾಮನನ್ನು ಪೂಜಿಸಿದನು. ಅಲ್ಲಿಂದ ಹೊರಟು ರಾಮನು ಆರವಾರದೇಶಕ್ಕೆ ಹೋಗಿ ಅಲ್ಲಿ ಗೌರವವನ್ನು ಹೊಂದಿ ಮುಂದೆ ಚೋಳಮಂಡಲಕ್ಕೆ ಹೋದನು.

೨೮. ಅಲ್ಲಿನ ರಾಜನು ರಾಮನನ್ನು ಬಹುವಾಗಿ ಗೌರವಿಸಿ ಪೂಜಿಸಿದನು. ಅಲ್ಲಿಂದ ಮುಂದೆ ಕೇರಳದೇಶಕ್ಕೆ ಹೋದನು. ಅಂತೆಯೇ ಹೊರಟು ಆಂಧ್ರದೇಶಕ್ಕೂ, ಕರ್ಣಾಟಕದೇಶಕ್ಕೂ ಹೋದನು.

ಪೂಜಿತೋ ವಿಜಯೇನಾಪಿ ವಿಜಯಾಪುರವಾಸಿನಾ ।
ಕೊಂಕಣಸ್ಥಾನ್ ನೃಪಾನ್ ಜಿತ್ವಾ ಮಹಾರಾಷ್ಟ್ರಂ ಯಯೌ ಪ್ರಭುಃ॥ ೨೯ ॥

ದುರ್ಗಂ ದೇವಗಿರಿಂ ನಾಮ ಚಕಾರ ಸ್ವವಶಂ ಕ್ಷಣಾತ್ ।
ತಥಾನ್ಯಾನ್ಯಪಿ ದುರ್ಗಾಣಿ ಸ್ವಾಧೀನಾನ್ಯಕರೋದ್ವಿಭುಃ ॥ ೩೦ ॥

ಗತ್ವಾ ವಿರಾಟದೇಶಂ ಚ ದೇಶಾನ್ ವಿಂಧ್ಯಾಚಲಾಶ್ರಿತಾನ್ ।
ಪಶ್ಯನ್ ಯಯೌ ಸ ರೇವಾಯಾಸ್ತೀರೇಣೋಂಕಾರವಿಶ್ವರಂ ॥ ೩೧ ॥

ಮಾಲವಸ್ಥಾನ್ನೃಪಾನ್ ಜಿತ್ವಾ ಯಯೌ ರಾಮಸ್ಸ ಉಜ್ಜಿನೀಂ ।
ಉಗ್ರಬಾಹುಂ ರಣೇ ಜಿತ್ವಾ ಗತ್ವಾ ಹೈಹಯಪತ್ತನಂ ॥ ೩೨ ॥

---

೨೯. ಅಲ್ಲಿ ವಿಜಯಪುರವಾಸಿಯಾದ ವಿಜಯನೆಂಬ ರಾಜನು ಆ ರಾಮನನ್ನು ಪೂಜಿಸಿದನು. ಅಲ್ಲಿಂದ ಮುಂದೆ ಹೊರಟು ಕೊಂಕಣದೇಶಕ್ಕೆ ಹೋಗಿ ಅಲ್ಲಿನ ರಾಜರನ್ನು ಜಯಿಸಿ ಮಹಾರಾಷ್ಟ್ರದೇಶಕ್ಕೆ ಹೋದನು.

೩೦. ಆ ಮಹಾರಾಷ್ಟ್ರದೇಶದಲ್ಲಿ ದೇವಗಿರಿಯೆಂಬ ದುರ್ಗವನ್ನು ಕ್ಷಣಕಾಲದಲ್ಲಿಯೇ ಸ್ವಾಧೀನಪಡಿಸಿಕೊಂಡನು. ಅಲ್ಲಿಯೇ ಇನ್ನೂ ಅನೇಕವಾದ ದುರ್ಗಗಳನ್ನೂ ತನ್ನ ಸ್ವಾಧೀನವನ್ನಾಗಿ ಮಾಡಿಕೊಂಡನು.

೩೧. ಅಲ್ಲಿಂದ ಮುಂದೆ ಹೊರಟು ವಿರಾಟದೇಶಕ್ಕೆ ಹೋದನು. ಅಲ್ಲಿ ಪೂಜಿತನಾಗಿ ಮುಂದೆ ಹೋಗಿ ವಿಂಧ್ಯಾಚಲದ ತಪ್ಪಲಲ್ಲಿರುವ ದೇಶಗಳನ್ನು ನೋಡುತ್ತ ರೇವಾನದಿಯ ತೀರದಲ್ಲಿ ಹೊರಟು ಓಂಕಾರೇಶ್ವರನ ಬಳಿಗೆ ಹೋದನು.

೩೨. ಮುಂದೆ ಮಾಲವದೇಶಕ್ಕೆ ಬಂದು ಅಲ್ಲಿ ಅವರನ್ನು ಜಯಿಸಿ ಅಲ್ಲಿಂದ ಮುಂದೆ ಉಜ್ಜಯಿನಿಗೆ ಹೋದನು. ಅಲ್ಲಿ ಉಗ್ರಬಾಹುವನ್ನು ಜಯಿಸಿ ಮುಂದೆ ಹೈಹಯಪಟ್ಟಣಕ್ಕೆ ಹೋದನು.

ಜಿತ್ವಾ ಪ್ರತೀಪಂ ಶ್ರೀರಾಮಃ ಸ ಯಯೌ ಹಸ್ತಿನಾ ಪುರಂ ।
ಏತಸ್ಮಿನ್ನಂತರೇ ಸೋಮವಂಶಜಾಸ್ತೇ ತ್ರಯೋ ನೃಪಾಃ ॥ ೩೩ ॥

ಪುರೂರವಾಸ್ತಥಾಗಚ್ಛ ಚ್ಛಾಲ್ಪಸೈನ್ಯೇನ ನೈ ಪುರಾತ್ ।
ರಾಮೇಣ ಸಂಗರಂ ಕರ್ತುಂ ನಾನಾವಾಹನಸಂಸ್ಥಿತಾಃ ॥ ೩೪ ॥

ಯಯುರ್ವವರ್ಷುಃಶಸ್ತ್ರಾಣಿ ಪುಷ್ಪಕಸ್ಥಂ ರಘೂತ್ತಮಂ ।
ಯುದ್ಧಂ ಬಭೂವ ತೈಸ್ಸಾಕಂ ತ್ರಿದಿನಂ ರೋಮಹರ್ಷಣಂ ॥ ೩೫ ॥

ತದಾಸೀದ್ರಕ್ತಪೂರ್ಣಾ ಸಾ ಜಾಹ್ನವೀ ಪಾಪನಾಶಿನೀ ।
ಚತುರ್ಥೇ ದಿವಸೇ ರಾಮಸ್ತಾನ್ ಜಿತ್ವಾ ತತ್ಪುರಂ ಯಯೌ ॥ ೩೬ ॥

೩೩–೩೪. ಅಲ್ಲಿದ್ದ ಪ್ರತೀಪನೆಂಬ ರಾಜನನ್ನು ಜಯಿಸಿ ಮುಂದಕ್ಕೆ ಹಸ್ತಿನಾಪಟ್ಟಣಕ್ಕೆ ಹೋದನು. ಅಲ್ಲಿ ಚಂದ್ರವಂಶದ ಮೂರುಜನ ರಾಜರೂ ಮತ್ತು ಪುರೂರವಸ್ಸೆಂಬುವನೂ ಸ್ವಲ್ಪ ಸೈನ್ಯವನ್ನು ತೆಗೆದುಕೊಂಡು ಅನೇಕ ವಿಧವಾದ ವಾಹನಗಳಲ್ಲಿ ಕುಳಿತು ರಾಮನೊಡನೆ ಯುದ್ಧಮಾಡಲು ಬಂದರು.

೩೫. ಅವರೆಲ್ಲರೂ ಪುಷ್ಪಕದಲ್ಲಿರುವ ರಾಮನಮೇಲೆ ಅನೇಕ ಬಗೆಯಾದ ಶಸ್ತ್ರಗಳನ್ನು ಪ್ರಯೋಗಿಸಿದರು. ಅವರೊಡನೆ ಮೂರು ದಿನಗಳವರೆಗೂ ಭಯಂಕರ ವಾದ ಯುದ್ಧವು ನಡೆಯಿತು.

೩೬. ಆ ಸಂದರ್ಭದಲ್ಲಿ ಪಾಪನಾಶಿನಿಯಾದ ಗಂಗೆಯು ರಕ್ತದಿಂದ ಪೂರ್ಣವಾಗಿ ಹರಿಯಿತು. ರಾಮನು ನಾಲ್ಕನೆಯದಿನದಲ್ಲಿ ಅವರನ್ನು ಜಯಿಸಿ ಅವರ ಪಟ್ಟಣಗಳನ್ನು ಸ್ವಾಧೀನಪಡಿಸಿಕೊಂಡನು.

ಸುಷೇಣಂ ವಾನರಾಣಾಂ ಚ ವೈದ್ಯಂ ವಾನರಸೈನ್ಯಯಾ ।
ಗಜಾಹ್ವಯೇ ಪುರೇ ಸ್ಥಾಪ್ಯ ತಾಂಸ್ತ್ರೀನ್ ಸೋಮಾನ್ವಯೋದ್ಭವಾನ್॥೩೭॥

ಕಾರಾಗೃಹಸ್ಥಿತಾನ್ ಕೃತ್ವಾ ಸುಗ್ರೀವಾದ್ಯೈ ರಘೂದ್ವಹಃ ।
ಯಯೌ ಸ ಮಥುರಾಂ ದ್ರಷ್ಟುಂ ಸುಬಾಹುಪರಿಪಾಲಿತಾಂ ॥ ೩೮ ॥

ದೃಷ್ಟ್ವಾ ಸುಬಾಹುಂ ರಾಜ್ಯಸ್ಥಂ ವಿದಿಶಾನಗರಂ ಯಯೌ ।
ಯೂಪಕೇತುಂ ತತ್ರ ದೃಷ್ಟ್ವಾ ರಾಜ್ಯಸ್ಥಂ ತೇನ ವಂದಿತಃ ॥ ೩೯ ॥

ಕುರುಕ್ಷೇತ್ರಂ ಪುಷ್ಕರಂ ಚ ದೃಷ್ಟ್ವಾ ರಾಮೋ ವಿಹಾಯುಸಾ ।
ಮರುದ್ದೇಶಮತಿಕ್ರಮ್ಯ ಯಯೌ ಗುರ್ಜರಮುತ್ತಮಂ ॥ ೪೦ ॥

---

೩೭. ವಾನರ ವೈದ್ಯನಾದ ಸುಷೇಣನನ್ನು ಅವರ ಪಟ್ಟಣವಾದ ಹಸ್ತಿನಾವತಿಯಲ್ಲಿ ನಿಲ್ಲಿಸಿ ಆ ಚಂದ್ರವಂಶದ ಮೂರುಜನ ರಾಜರನ್ನೂ ಕಾರಾಗೃಹದಲ್ಲಿಟ್ಟನು.

೩೮. ಅನಂತರ ಸುಗ್ರೀವನೇ ಮುಂತಾದವರೊಡನೆ ಮುಂದಕ್ಕೆ ಹೊರಟನು. ಸುಬಾಹುವು ರಕ್ಷಿಸುತ್ತಿರುವ ಮಥುರಾಪಟ್ಟಣವನ್ನು ನೋಡಲು ಅಲ್ಲಿಗೆ ಹೋದನು.

೩೯. ಅಲ್ಲಿ ಸುಬಾಹುವನ್ನು ನೋಡಿಕೊಂಡು ಅಲ್ಲಿಂದ ಮುಂದೆ ಹೊರಟು ವಿದಿಶಾಪಟ್ಟಣಕ್ಕೆ ಹೋದನು. ಅಲ್ಲಿರುವ ಯೂಪಕೇತುವನ್ನು ನೋಡಿ ಅವನಿಂದ ಗೌರವಿಸಲ್ಪಟ್ಟನು.

೪೦. ಅಲ್ಲಿಂದ ಮುಂದೆ ಕುರುಕ್ಷೇತ್ರಕ್ಕೆ ಹೋಗಿ ಮುಂದೆ ಪುಷ್ಕರಕ್ಕೂ ಹೋದನು. ಅನಂತರ ಮರುದ್ದೇಶದಮೇಲೆ ಹೊರಟು ಮುಂದೆ ಹೊರಟು ಗುರ್ಜರದೇಶಕ್ಕೂ ಹೋದನು.

ಪ್ರಭಾಸಂ ಚ ತತೋ ಗತ್ವಾ ಮಲ್ಲದೇಶಂ ಯಯೌ ತತಃ |
ಗಜಾಶ್ವನಗರೇ ದೃಷ್ಟ್ವಾಂಗದಂ ರಾಜ್ಯಪದಸ್ಥಿತಂ || ೪೧ ||

ಧನರತ್ನೇ ಚಿತ್ರಕೇತುಂ ದೃಷ್ಟ್ವಾ ರಾಜ್ಯಪದಸ್ಥಿತಂ |
ಆನರ್ತಂ ಸ ಯಯೌ ರಾಮಸ್ತತ್ರಸ್ಥೈಃ ಪರಿಪೂಜಿತಃ || ೪೨ ||

ಪ್ರಯಾಯೌ ಪುಷ್ಕರಂ ದ್ರಷ್ಟುಂ ರಾಜ್ಯಸ್ಥಂ ಪುಷ್ಕರಾವತೀಂ |
ತತೋ ರಾಮೋ ವಿಮಾನೇನ ಯಯೌ ತಕ್ಷಶಿಲಾಹ್ವಯೇ || ೪೩ ||

ತಕ್ಷಂ ದೃಷ್ಟ್ವಾ ಪದಸ್ಥಂ ತಂ ಯಯೌ ಭರತಮಾತುಲಂ |
ಯುಧಾಜಿತಾ ಪೂಜಿತಸ್ಸ ರಾಮೋ ರಾಜೀವಲೋಚನಃ || ೪೪ ||

---

೪೧. ಅಲ್ಲಿಂದ ಪ್ರಭಾಸಕ್ಕೆ ಹೋಗಿ ಅಲ್ಲಿಂದ ಮುಂದೆ ಮಲ್ಲದೇಶಕ್ಕೆ ಹೋದನು. ಅಲ್ಲಿ ಗಜಾಶ್ವನಗರದಲ್ಲಿರುವ ಅಂಗದನನ್ನು ನೋಡಿದನು.

೪೨. ಮುಂದೆ ಹೊರಟು ಧನರತ್ನನಗರದಲ್ಲಿರುವ ಚಿತ್ರಕೇತುವನ್ನು ನೋಡಿದನು. ಅಲ್ಲಿಂದ ಮುಂದೆ ಆನರ್ತದೇಶಕ್ಕೆ ಹೋಗಲು ಅಲ್ಲಿನ ರಾಜನು ರಾಮನನ್ನು ಪೂಜಿಸಿದನು.

೪೩. ರಾಮನು ಅಲ್ಲಿಂದ ಮುಂದೆ ಪುಷ್ಕರಾವತಿಯಲ್ಲಿರುವ ಪುಷ್ಕರನನ್ನು ನೋಡಲು ಹೊರಟನು. ಅಲ್ಲಿ ಆತನನ್ನು ನೋಡಿ ಆತನಿಂದ ಗೌರವಿತನಾದನು. ಅಲ್ಲಿಂದ ಮುಂದೆ ಹೊರಟು ವಿಮಾನದಲ್ಲಿ ತಕ್ಷಶಿಲೆಗೆ ಹೋದನು.

೪೪. ಅಲ್ಲಿ ರಾಜ್ಯವಾಳುತ್ತಿರುವ ತಕ್ಷನನ್ನು ನೋಡಿಕೊಂಡು ಅಲ್ಲಿ ಅವನಿಂದ ಗೌರವಿತನಾಗಿ ಭರತನ ಸೋದರಮಾವನಾದ ಯುಧಾಜಿತ್ತಿನ ಪಟ್ಟಣಕ್ಕೆ ಹೋದನು. ಅಲ್ಲಿ ಯುಧಾಜಿತ್ತುವು ರಾಮನನ್ನು ಗೌರವಿಸಿದನು.

ಯಯೌ ವಿಹಾಯಸಾ ಶೀಘ್ರಂ ಶಕದೇಶಂ ಮನೋರಮಂ ।
ಜಿತ್ವಾ ಯವನದೇಶಸ್ಥಾನ್ನೃಪಾನ್ ಸರ್ವಾನ್ ರಘೂತ್ತಮಃ ॥ ೪೫ ॥

ಪಶ್ಯನ್ನಾನಾವಿಧಾನ್ ದೇಶಾನ್ ತಾಮ್ರದೇಶಂ ಯಯೌ ತತಃ ।
ತತೋ ಮಾಯಾಪುರೀಂ ಗತ್ವಾ ಕಲಾಪಗ್ರಾಮಯಾಯಯೌ ॥ ೪೬ ॥

ನರನಾರಾಯಣೌ ದೃಷ್ಟ್ವಾ ಚೋಪಾಸ್ಯೌ ರಘುನಂದನಃ ।
ಉಪಾಸಕಂ ನಾರದಂ ಚ ವರ್ಷೇ ಭಾರತಸಂಜ್ಞಕೇ ॥ ೪೭ ॥

ತಾನ್ನತ್ವಾಚ್ಯ ರಘುಶ್ರೇಷ್ಠಸ್ತತ್ರಸ್ಥೈಃ ಪರಿಪೂಜಿತಃ ।
ಭಾರತೇಶಂ ರಣೇ ಹತ್ವಾ ತತ್ಪಥೇ ಸ್ಥಾಪ್ಯ ಸ್ವಾನುಗಂ ॥ ೪೮ ॥

---

೪೫. ಅಲ್ಲಿಂದ ಮುಂದೆ ಮನೋಹರವಾದ ಶಕದೇಶಕ್ಕೆ ಹೋದನು. ಅಲ್ಲಿದ್ದ ಯವನರಾಜರೆಲ್ಲರನ್ನೂ ಈ ರಾಮನು ಜಯಿಸಿದನು. ಅಲ್ಲಿ ಅವರಿಂದಲೂ ಪೂಜಿಸಲ್ಪಟ್ಟು ಗೌರವಿತನಾದನು.

೪೬. ವಿಮಾನದಲ್ಲಿ ಅಲ್ಲಿಂದ ಮುಂದಕ್ಕೆ ಹೊರಟು ನಾನಾದೇಶಗಳನ್ನು ನೋಡುತ್ತ ತಾಮ್ರದೇಶಕ್ಕೆ ಬಂದನು. ಅಲ್ಲಿಂದ ಹೊರಟು ಮಾಯಾಪುರಿಗೆ ಬಂದು ಅಲ್ಲಿಂದ ಹೊರಟು ಕಲಾಪಗ್ರಾಮಕ್ಕೆ ಬಂದನು.

೪೭. ಅಲ್ಲಿ ಪೂಜ್ಯರಾದ ನರನಾರಾಯಣಮೂರ್ತಿಗಳನ್ನು ದರ್ಶನಮಾಡಿ ಆ ನರನಾರಾಯಣರ ಉಪಾಸಕನಾದ ನಾರದಋಷಿಯ ದರ್ಶನವನ್ನು ಮಾಡಿದನು.

೪೮. ಇದು ಭಾರತವರ್ಷವೆಂಬ ಮಂಡಲವು. ಆ ಭಾರತವರ್ಷದಲ್ಲಿದ್ದ ನರನಾರಾಯಣರನ್ನೂ ಆ ನಾರದನನ್ನೂ ಪೂಜಿಸಿದನು. ಅಲ್ಲಿರುವವರು ರಾಮನನ್ನು ಗೌರವಿಸಿ ಪೂಜಿಸಿದರು. ಆದರೆ ಅಲ್ಲಿನ ಭಾರತೇಶನು ಯುದ್ಧಕ್ಕೆ ಬರಲು ಅವನನ್ನು ಯುದ್ಧದಲ್ಲಿ ಕೊಂದು ಅವನ ಸ್ಥಾನದಲ್ಲಿ ತನ್ನನ್ನು ಆಶ್ರಯಿಸಿದ್ದ ಮತ್ತೊಬ್ಬನನ್ನು ಸ್ಥಾಪಿಸಿದನು.

ಭಾರತಂ ಪೃಷ್ಠತಃ ಕೃತ್ವಾ ಪುಣ್ಯದೇಶಂ ಮನೋರಮಂ ।
ಯೋಜನಾನಾಂ ಸಹಸ್ರೈಶ್ಚ ನವಭಿಃ ಪರಿವಿಸ್ತೃತಂ ॥ ೪೯ ॥

ಅಗ್ರೇ ದದರ್ಶ ಶ್ರೀರಾಮೋ ಹಿಮಾಲಯಮಹಾಚಲಂ ।
ಯೋಜನಾನಾಂ ಸಹಸ್ರಾಭ್ಯಾಂ ರಮ್ಯಂ ವಿಪುಲಮುತ್ತಮಂ ॥ ೫೦ ॥

ತ್ರಿಸಪ್ತತಿಸಹಸ್ರೈಶ್ಚ ದೀರ್ಘಂ ಪ್ರೋಕ್ತಸ್ತು ಯೋಜನೈಃ ।
ತತ್ರ ನಾನಾ ಕೌತುಕಾನಿ ದದರ್ಶ ರಘುನಂದನಃ ॥ ೫೧ ॥

ದರ್ಶಯಾಮಾಸ ವೈದೇಹ್ಯೈ ವಿಮಾನಸ್ಥೋ ಮುದಾನ್ವಿತಃ ॥ ೫೨ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ರಾಜ್ಯಕಾಂಡೇ ಪೂರ್ವಾರ್ಧೇ ಭಾರತವರ್ಷಜಯೋ ನಾಮ ಸಪ್ತಮಸ್ಸರ್ಗಃ

೪೯-೫೧. ಅನಂತರ ಭಾರತವನ್ನು ಬಿಟ್ಟು ಮುಂದೆ ಹೊರಟು ಪುಣ್ಯ ದೇಶಕ್ಕೆ ಹೋದನು. ಅಲ್ಲಿ ಒಂಭತ್ತುಸಾವಿರ ಯೋಜನದಗಲವಿರುವ, ಒಂದು ಸಾವಿರ ಯೋಜನದಷ್ಟು ದಪ್ಪವಿರುವ, ಎಪ್ಪತ್ತಮೂರುಸಾವಿರ ಯೋಜನಗಳಷ್ಟು ಉದ್ದವಿರುವ ರಮ್ಯವಾದ ಹಿಮಾಲಯ ಪರ್ವತವನ್ನು ನೋಡಿದನು.

೫೨. ಆ ಹಿಮವತ್ಪರ್ವತದಲ್ಲಿ ಶ್ರೀರಾಮನು ಅನೇಕವಾದ ಕೌತುಕವನ್ನು ನೋಡುತ್ತ ಅದನ್ನು ಸೀತೆಗೂ ತೋರಿಸಿದನು. ಇಬ್ಬರೂ ಆ ವಿಮಾನದಲ್ಲಿ ನೋಡುತ್ತ ಆನಂದಿಸುತ್ತಿದ್ದರು.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಪೂರ್ವಾರ್ಧದಲ್ಲಿ ಭರತವರ್ಷದವಿಜಯವೆಂಬ ಏಳನೆಯ ಸರ್ಗವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ
॥ ಏಳನೆಯ ಸರ್ಗದ ಸಾರಾಂಶವು ॥

ರಾಮನು ಪ್ರಪಂಚವನ್ನೇ ಜಯಿಸಲು ಉದ್ಯುಕ್ತನಾಗಿ ಎಲ್ಲರನ್ನೂ ಕರೆದುಕೊಂಡು ಪುಷ್ಪಕದಲ್ಲಿ ಹೊರಟನು. ಸುಮಂತ್ರನನ್ನು ಅಯೋಧ್ಯೆಯನ್ನು ರಕ್ಷಿಸಲು ನಿಲ್ಲಿಸಿದನು.

ಹೀಗೆ ಹೊರಟ ರಾಮನು ಶರಣಾಗತರನ್ನು ರಕ್ಷಿಸುತ್ತಾ ದುಷ್ಟರನ್ನು ನಿಗ್ರಹಿಸುತ್ತಾ ವಶವರ್ತಿಗಳನ್ನು ಅನುಗ್ರಹಿಸುತ್ತ ಅಂಗ, ವಂಗ, ಮಗಧ, ಆಂಧ್ರ, ಕರ್ಣಾಟಕ, ಶಕ, ಕುರು, ಯವನ ದೇಶಗಳಲ್ಲೆಲ್ಲಾ ಸಂಚರಿಸಿ ಹಿಮಾಲಯದ ಬಳಿಗೆ ಬಂದು ನಿಂತನು. ಇಲ್ಲಿಗೆ ಭಾರತವರ್ಷವೆಂಬ ವರ್ಷವನ್ನೆಲ್ಲಾ ಸುತ್ತಿದಂತಾಯಿತು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ
॥ ಅಷ್ಟಮಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಅಥ ಹ ಸ ಕಿಂಪುರುಷಂ ನಾಮ ವರ್ಷಂ ನವಸಹಸ್ರಯೋಜನ ವಿಸ್ತೀರ್ಣಂ ಸ್ವೀಯಾನಾದಿಸಿದ್ಧರಾಮಮೂರ್ತಿ ದೇವತೋಪಾಸ್ಯ ವಿರಾಜಮಾನ ಪವನ ಸುತೋಪಾಸಕ ಸಮಧಿಷ್ಠಿತಮುಪಜಗಾಮ ॥ ೧ ॥

ತತ್ರ ಹ ವಾವದರ್ಶಿತ ನಾನಾಕೌತುಕಸ್ತದ್ವರ್ಷನೃಪಸಮೂಹ ಪರಿವೇಷ್ಟಿತಃ ಪುಷ್ಪಕೇಸಮಧಿಷ್ಠಿತೋ ನವವಾದ್ಯಸ್ವರಪುರಸ್ಸರಃ ಪುರತೋಽನುಸಸಾರ ॥ ೨ ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ
ಎಂಟನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು—ಅನಂತರ ಆ ರಾಮನು ಕಿಂಪುರುಷ ವರ್ಷವೆಂಬ ಭೂಖಂಡಕ್ಕೆ ಹೋದನು. ಅಲ್ಲಿ ತನ್ನ ಸಂಬಂಧವಾದ ರಾಮ ಮೂರ್ತಿಯೆಂಬ ದೇವತೆಯಿರುವುದು. ಅದನ್ನು ಹನುಮಂತನು ಪೂಜಿಸುತ್ತಿರುವನು. ಈ ಖಂಡವು ಒಂಭತ್ತುಸಾವಿರ ಯೋಜನಗಳಷ್ಟು ವಿಸ್ತಾರವಿರುವುದು.

೨. ಅಲ್ಲಿ ಅನೇಕ ಕೌತುಕಗಳನ್ನು ನೋಡುತ್ತ ಆ ದೇಶದ ರಾಜರಿಂದ ಕೂಡಿಕೊಂಡು ಪುಷ್ಪಕದಲ್ಲಿ ಕುಳಿತು ನವವಾದ್ಯಗಳನ್ನು ಧ್ವನಿಮಾಡಿಸಿಕೊಂಡು ಮುಂದಕ್ಕೆ ಹೊರಟನು.

ಅಥ ಹೇಮಕೂಟಂ ನಾಮ ಪರ್ವತಮತಿಕಮನೀಯಂ ದ್ವಿಸಹಸ್ರ ಯೋಜನವಿಪುಲಮೇಕಾಶೀತಿ ಸಹಸ್ರಯೋಜನ ದೀರ್ಘಂ ನಾನಾಧಾತು ವಿರಾಜಿತಂ ಸಮುನ್ನತ ಶಿಖರ ವಿರಾಜಮಾನಂ ಪುಷ್ಪಕಸಮಧಿಷ್ಠಿತೋ ರಘುನಾಥ ಉಪಜಗಾಮ ॥ ೩ ॥

ಅಥ ತೃತೀಯಂ ವರ್ಷಂ ಹರಿವರ್ಷಂ ನಾಮ ನವ ಸಹಸ್ರ ಯೋಜನ ಪರಿಮಿತಂ ನೃಸಿಂಹೋಪಾಸ್ಯ ಪ್ರಹ್ಲಾದೋಪಾಸಕವಿರಾಜಮಾನ ಮತಿಕಮನೀಯಂ ದಶರಥತನಯಸ್ಸಮನುಯಯೌ ॥ ೪ ॥

ತದ್ವರ್ಷವಾಸಿ ನೃಪವರ ವೃಂದ ತುಮುಲ ಸಂಗ್ರಾಮ ಸಂಪಾದಿತ ಜಯಶ್ರೀ ರಿಪುಕೋಶಾದಿ ಪೂಜಿತ ನೃಪದಯಿತಾರ್ತಿಕ ನೀರಾಜಿತ ಜನಕಜಾ ದರ್ಶಿತ ನಾನಾಕೌತುಕ ಧ್ವಜಪತಾಕಾ ತೋರಣ ಘಂಟಾ ಕಿಂಕಿಣೀ ವಿರಾಜಮಾನ ಪುಷ್ಪಕೆ ಸಮಧಿಷ್ಠಿತಃ ಶ್ರೀರಘುನಂದನ ಉಪಜಗಾಮ ॥ ೫ ॥

---

೩. ಅಲ್ಲಿ ಹೇಮಕೂಟವೆಂಬ ಪರ್ವತವಿದ್ದಿತು. ಅದು ಬಹು ಸುಂದರವಾದುದು. ಎರಡುಸಾವಿರ ಯೋಜನಗಳಷ್ಟು ದಪ್ಪವಾಗಿದ್ದಿತು. ಎಂಭತ್ತೊಂದು ಸಾವಿರ ಯೋಜನಗಳಷ್ಟು ಉದ್ದವಿದ್ದಿತು. ಅಲ್ಲಿ ಅನೇಕವಿಧವಾದ ಧಾತುಗಳಿದ್ದುವು. ಅದು ಬಹು ಎತ್ತರವಾದ ಶಿಖರಗಳಿಂದ ಕೂಡಿಕೊಂಡಿದ್ದಿತು. ರಾಮನು ಪುಷ್ಪಕದಲ್ಲಿ ಆ ಪರ್ವತಕ್ಕೆ ಬಂದನು.

೪. ಅಲ್ಲಿಂದ ಮುಂದಿರುವುದು ಮೂರನೆಯ ವರ್ಷವಾದ ಹರಿವರ್ಷವೆಂಬ ಭೂಭಾಗವು. ಅದು ಒಂಭತ್ತುಸಾವಿರ ಯೋಜನಗಳ ವಿಸ್ತೀರ್ಣವುಳ್ಳದ್ದು ಅಲ್ಲಿನ ದೇವತೆಯು ನೃಸಿಂಹಮೂರ್ತಿಯು. ಪ್ರಹ್ಲಾದನೇ ಉಪಾಸಕನು. ಇವರಿಂದ ವಿರಾಜಮಾನವಾಗಿ ಅತಿ ರಮಣೀಯವಾಗಿರುವುದು. ಇಂತಹ ಭೂಮಿಗೆ ಪುಷ್ಪಕದಲ್ಲಿ ಶ್ರೀರಾಮನು ಬಂದನು.

೫. ಅಲ್ಲಿದ್ದ ರಾಜರೆಲ್ಲರೂ ಸೇರಿಕೊಂಡು ಶ್ರೀರಾಮನಮೇಲೆ ತುಮುಲ ಯುದ್ಧವನ್ನು ಮಾಡಲು ರಾಮನು ಅವರೆಲ್ಲರನ್ನೂ ಗೆದ್ದು ಜಯವನ್ನು ಪಡೆದನು. ಅನಂತರ ಆ ರಾಜರೆಲ್ಲರೂ ಅವರವರ ಕೋಶಗಳನ್ನು ಒಪ್ಪಿಸಿ ಗೌರವಿಸಿದರು. ಅವರ ಹೆಂಡಿರು ಆರತಿಯನ್ನೆತ್ತಿದ್ದರು. ಅಲ್ಲಿ ಜನಕಜೆಗೆ ಅನೇಕ ಆಶ್ಚರ್ಯ ಸಂಗತಿಗಳನ್ನು ತೋರಿಸುತ್ತ ಧ್ವಜ, ಪತಾಕೆ, ತೋರಣ, ಘಂಟೆ, ಗೆಜ್ಜೆಗಳಿಂದ ಅಲಂಕೃತವಾದ ಪುಷ್ಪಕದಲ್ಲಿ ಕುಳಿತು ಮುಂದಕ್ಕೆ ಹೊರಟನು.

ಅಥ ನಿಷಧಂ ನಾಮ ಪರ್ವತಂ ದ್ವಿಸಹಸ್ರಯೋಜನವಿಪುಲಂ ನವತಿಸಹಸ್ರಯೋಜನದೀರ್ಘಮತಿಕಮನೀಯಂ ಸ ರಘುನಂದನೋ ನಯನಗೋಚರಂ ಚಕಾರ ॥ ೬ ॥

ಅಥ ಸುವರ್ಣಾದ್ರಿಸಮಂತತಶ್ಚತುರ್ದಿಕ್ಷು ಸಮಾನಮಾನ ಮಿಳಾವೃತಂ ನಾಮ ಚತುರ್ಥಂ ವರ್ಷಂ ಚತುಸ್ತ್ರಿಂಶತ್ಸಹಸ್ರಯೋಜನ ಪರಿಮಿತಂ ಸ ರಘುನಾಯಕ ಉಪಜಗಾಮ ॥ ೭ ॥

ತತ್ರ ಹ ನಾಮ ಮೇರೋರಾಶ್ರಯಭೂತೇ ಮೇರೋರ್ದಕ್ಷಿಣ ದಿಕ್ಸ್ಥಿತೇ ಮೇರುಮಂದರಪರ್ವತೇ ತಿವಿರಾಜಮಾನೇ ಸಮುನ್ನತಜಂಬೂ ವೃಕ್ಷಮತಿವಿಶಾಲಂ ಜಂಬೂದ್ವೀಪಾಖ್ಯಸೂಚಕಂ ಸಫಲಮಪೂರ್ವಮತಿ ಕಮನೀಯಂ ಸ ರಾಮಚಂದ್ರೋಽವನಿದುಹಿತಾಯೈ ದರ್ಶಯಾಮಾಸ॥ ೮ ॥

---

೬. ಮುಂದೆ ಬರಲು ಅಲ್ಲಿ ನಿಷಧವೆಂಬ ಪರ್ವತವು ಇದ್ದಿತು. ಅದು ಎರಡು ಸಾವಿರ ಯೋಜನಗಳಷ್ಟು ದಪ್ಪವಾಗಿಯೂ, ತೊಂಭತ್ತುಸಾವಿರ ಯೋಜನ ಗಳಷ್ಟು ಉದ್ದವಾಗಿಯೂ, ಸುಂದರವಾಗಿಯೂ ಇದ್ದಿತು. ಅದನ್ನು ರಾಮನು ನೋಡಿದನು.

೭. ಮೇರುಪರ್ವತದ ಸುತ್ತಲೂ ನಾಲ್ಕು ದಿಕ್ಕುಗಳಲ್ಲಿಯೂ ಸಮನಾದ ವಿಸ್ತಾರವುಳ್ಳ ಇಳಾವೃತವರ್ಷವೆಂಬ ನಾಲ್ಕನೆಯ ಭೂಭಾಗವಿರುವುದು. ಅದು ಮೂವತ್ತುನಾಲ್ಕುಸಾವಿರ ಯೋಜನಗಳಷ್ಟು ವಿಸ್ತಾರವಿರುವುದು. ಅಲ್ಲಿಗೆ ಈ ರಾಮನು ಹೋದನು.

೮ ಅಲ್ಲಿ ಮೇರುಪರ್ವತಕ್ಕೆ ಆಶ್ರಯಭೂತವಾದ ಆ ಮೇರುವಿನ ದಕ್ಷಿಣ ದಿಕ್ಕಿನಲ್ಲಿ ಮೇರುಮಂದರ ಪರ್ವತವೆಂಬ ಒಂದು ಪರ್ವತವು ಪ್ರಕಾಶಿಸುತ್ತಿರುವುದು. ಅಲ್ಲಿ ಒಂದು ಜಂಬೂವೃಕ್ಷವು (ನೇರಳೆಯ ಮರವು) ವಿಶಾಲವಾಗಿರುವುದು. ಆದು ಜಂಬೂದ್ವೀಪವೆಂಬ ಹೆಸರಿಗೆ ಸೂಚಕವಾಗಿರುವುದು. ಆ ಮರದಲ್ಲಿ ಯಾವಾಗಲೂ ಫಲವಿರುತ್ತಿರುವುದು. ಅದರಂತೆಯೇ ಆ ಜಂಬೂ ದ್ವೀಪವು ಬಹು ಫಲವತ್ತಾ ದುದು. ಅಪೂರ್ವವಾದುದು. ಬಹು ರಮಣೀಯವಾದುದು. ಇದನ್ನು ರಾಮನು ಸೀತೆಗೆ ತೋರಿಸಿದನು.

ತತೋ ಮೇರುಪಶ್ಚಿಮತೋ ಮೇರೋರಾಶ್ರಯಭೂತೇ ಸುಪಾರ್ಶ್ವಪರ್ವತೇ ವಿರಾಜಮಾನಕದಂಬವೃಕ್ಷಮತಿಸಮುನ್ನತ ಮತಿವಿಪುಲ ಮತಿಕಮನೀಯಂ ಪುಷ್ಪರಂಜಿತಂ ಸ ರಘುನಾಯಕೋ ನೇತ್ರವಿಷಯೀ ಚಕಾರ ॥ ೯ ॥

ಅಥ ಮೇರೋರುತ್ತರತಸ್ತಸ್ಯಾಶ್ರಯಭೂತೇ ಕುಮುದನಾಮ ಪರ್ವತೇ ವಿರಾಜಮಾನಮತಿಸಮುನ್ನತಂ ವಟವೃಕ್ಷಮತಿಕಮನೀಯಂ ಮತಿವಿಶಾಲಮತಿಸ್ಥೂಲಂ ಸ ಕೌಸಲ್ಯಾನಂದನೋ ನೃಪಸಮೂಹವಿರಾಜಿತೋ ಜನಕಜಾಯೈ ದರ್ಶಯಾಮಾಸ ॥ ೧೦ ॥

ಅಥ ಮೇರುಪೂರ್ವತಸ್ತಸ್ಯಾಶ್ರಯಭೂತೇ ಮಂದರಪರ್ವತೇ ವಿರಾಜಮಾನಮತಿವಿಶಾಲಮತಿಸಮುನ್ನತಮತಿಸ್ಥೂಲಂ ಸಹಕಾರವೃಕ್ಷ ಮತಿಕಮನೀಯಂ ಸುಪಕ್ವಮಧುರಘಟಿತುಲ್ಯಫಲಭಾರವಿನಮ್ರಂ ಪಶ್ಯನ್ಸ ರಘುವಂಶಭೂಷಣೋ ಜನಕಜಾಜಾನಿಃ ॥ ೧೧ ॥

---

೯. ಅನಂತರ ಮೇರುಪರ್ವತಕ್ಕೆ ಆಶ್ರಯವಾಗಿ ಅದರ ಪಶ್ಚಿಮಕ್ಕೆ ಸುಪಾರ್ಶ್ವವೆಂಬ ಪರ್ವತವಿರುವುದು. ಅಲ್ಲಿ ಕದಂಬವೃಕ್ಷವಿರುವುದು. ಅದರ ಕಾಡೇ ಅಲ್ಲಿರುವುದಲ್ಲದೇ ಅದು ಬಹು ಎತ್ತರವಾಗಿರುವುದು. ಸುಂದರವಾಗಿರುವುದು. ಅವುಗಳಲ್ಲಿ ಯಾವಾಗಲೂ ಹೂವಿರುತ್ತಿರುವುದು. ಇದನ್ನು ಶ್ರೀರಾಮನು ಹೋಗಿ ನೋಡಿದನು.

೧೦. ಅನಂತರ ಮೇರುವಿನ ಉತ್ತರಕ್ಕೆ ಆ ಮೇರುವಿಗೆ ಆಶ್ರಯಭೂತವಾದ ಕುಮುದವೆಂಬ ಒಂದು ಪರ್ವತವಿರುವುದು. ಅವರಲ್ಲಿ ಬಹು ಎತ್ತರವಾದ ಒಂದು ಆಲದ ಮರವಿರುವುದು. ಸುಂದರವಾಗಿ, ವಿಸ್ತಾರವಾಗಿರುವುದು. ಬಹು ದಪ್ಪವಾಗಿರುವುದು. ರಾಜರುಗಳ ಸಮೂಹದಿಂದ ಕೂಡಿಕೊಂಡಿದ್ದ ಆ ರಾಮನು ಇದನ್ನು ಸೀತೆಗೆ ತೋರಿಸಿದನು.

೧೧. ಅನಂತರ ಮೇರುವಿನ ಪೂರ್ವಕ್ಕೆ ಅದಕ್ಕೆ ಆಶ್ರಯಿಸಿಕೊಂಡಿರುವಂತೆ ಇರುವ ಮಂದರಪರ್ವತವಿರುವುದು. ಅದರಲ್ಲಿ ಒಂದು ಸಿಹಿಮಾವಿನ ಮರವಿರುವುದು. ಅದು ವಿಶಾಲವಾಗಿಯೂ, ಎತ್ತರವಾಗಿಯೂ ಇರುವುದು. ದಪ್ಪವಾಗಿಯೂ ಇರುವುದು. ಕಳಿತ ಹಣ್ಣುಗಳು ಅದರಲ್ಲಿ ಯಾವಾಗಲೂ ಇರುವುವು. ಅವು ಒಂದೊಂದೂ ಒಂದೊಂದು ಬಿಂದಿಗೆಯಷ್ಟು ದಪ್ಪವಾಗಿರುವುವು. ಇದನ್ನು ರಾಮನು ನೋಡಿ ಆನಂದಿಸಿ ಸೀತೆಗೂ ತೋರಿಸಿದನು.

ತತ್ರೇಲಾವೃತೇ ವಿರಾಜಮಾನಸಂಕರ್ಷಣೋಪಾಸ್ಯರುದ್ರೋಪಾಸಕೇ ಸ ರಘುನಾಯಕೋ ದಯಿತಾಸಹಾಯಶ್ಶಿರಸಾ ಪ್ರಣನಾಮ ೧೨

ತದ್ವರ್ಷವಾಸಿನೃಪಪ್ರಬದ್ಧಕರಕಮಲಶಿರೋವಂದಿತ ಪದಜಲರುಹದ್ವಂದ್ವಸ್ಸ ರಘುನಾಯಕಃ ಪೂರ್ವದಿಶಮನುಜಗಾಮ ॥ ೧೩ ॥

ಅಥ ಗಂಧಮಾದನಪರ್ವತಂ ದ್ವಿಸಹಸ್ರಯೋಜನವಿಪುಲಂ ಚತುಸ್ತ್ರಿಂಶ ತ್ಸಹಸ್ರಯೋಜನದೀರ್ಘಂ ನಯನಗೋಚರಂ ಚಕಾರ ॥ ೧೪ ॥

ಅಥ ಭದ್ರಾಶ್ವಂ ನಾಮ ಪಂಚಮಂ ವರ್ಷಮೇಕತ್ರಿಂಶತ್ಸಹಸ್ರಯೋಜನದೀರ್ಘಂ ಹಯಗ್ರೀವೋಪಾಸ್ಯಭದ್ರಾಶ್ವೋಪಾಸಕಸಮಧಿಷ್ಠಿತಂ ಸ ರಘುನಾಯಕ ಉಪಜಗಾಮ ॥ ೧೫ ॥

---

೧೨. ಅಲ್ಲಿಯೇ ಇಲಾವೃತ ವರ್ಷವೆಂಬ ಭೂಭಾಗವಿರುವುದು. ಅಲ್ಲಿ ಸಂಕರ್ಷಣ ಮೂರ್ತಿಯೆಂಬ ದೇವರಿರುವುದು. ಅದನ್ನು ರುದ್ರನು ಸೇವಿಸುತ್ತಿರುವನು. ಆ ದೇವರನ್ನು ರಾಮನು ಹೆಂಡತಿಯೊಡನೆ ನಮಸ್ಕರಿಸಿದನು.

೧೩. ಆ ಭೂಭಾಗದ ರಾಜರು ಕೈಮುಗಿದುಕೊಂಡು ಬಂದು ಆ ಶ್ರೀರಾಮನ ಪಾದಗಳಿಗೆ ವಂದಿಸಲು ಅವರಿಂದ ಗೌರವಿತನಾದ ರಾಮನು ಅಲ್ಲಿಂದ ಮುಂದೆ ಪೂರ್ವದಿಕ್ಕಿಗೆ ಹೊರಟನು.

೧೪. ಅಲ್ಲಿಂದ ಹೊರಟು ಎರಡುಸಾವಿರ ಯೋಜನಗಳಷ್ಟು ದಪ್ಪವಾಗಿಯೂ, ಮೂವತ್ತನಾಲ್ಕುಸಾವಿರ ಯೋಜನಗಳಷ್ಟು ಉದ್ದವಾಗಿಯೂ ಇರುವ ಗಂಧ ಮಾದನಪರ್ವತಕ್ಕೆ ಬಂದನು. ಅಲ್ಲಿ ಅದೆಲ್ಲವನ್ನೂ ನೋಡಿದನು.

೧೫. ರಾಮನು ಅಲ್ಲಿಂದ ಮುಂದೆ ಹೊರಟು ಭದ್ರಾಶ್ವವರ್ಷವೆಂಬ ಐದನೆಯ ಭೂಭಾಗಕ್ಕೆ ಬಂದನು. ಅದು ಮೂವತ್ತೊಂದುಸಾವಿರ ಯೋಜನಗಳಷ್ಟು ಉದ್ದವಿರುವುದು. ಅಲ್ಲಿ ಹಯಗ್ರೀವ ದೇವರಿರುವುದು. ಅದನ್ನು ಭದ್ರಾಶ್ವನೆಂಬ ಮುನಿಯು ಸೇವಿಸುತ್ತಿರುವನು.

ತತ್ರ ಕ್ವಚಿತ್ಸಂಗ್ರಾಮಸ್ತದ್ವರ್ಷನಿರಾಜಸಮಾನನೃಪಸಮೂಹೇಭ್ಯಃ ಕ್ವಚಿಚ್ಛರಣಾಗತಪ್ರಬದ್ಧಕರಯುಗಳಾವನಿಪತಿಭ್ಯಃ ಸ್ವಕರಭಾರಾನ್ಲಭಮಾನಃ ಸ ಜನಕಜಾಜಾನಿರುಪಯುಯೌ ಪರಿವೃತ್ಯ ಪಶ್ಚಿಮಾಭಿಮುಖಃ ॥

ಅಥ ಮೇರೋಃ ಪಶ್ಚಿಮದಿಕ್ಸ್ಥಿತಂ ಮಾಲ್ಯವಂತಂ ಪರ್ವತಂ ದ್ವಿಸಹಸ್ರಯೋಜನವಿಸ್ತೀರ್ಣಂ ಚತುಸ್ತ್ರಿಂಶತ್ಸಹಸ್ರಯೋಜನದೀರ್ಘಮತಿಕಮನೀಯಂ ಸ ಜನಕಜಾರಂಜನೋ ನಯನಗೋಚರಂ ಚಕಾರ ೧೭

ತತ್ಪಶ್ಚಿಮತಃ ಕೇತುಮಾಲಂ ನಾಮ ಷಷ್ಠಂ ವರ್ಷಂ ಏಕತ್ರಿಂಶತ್ಸಹಸ್ರಯೋಜನದೀರ್ಘಂ ಕಾಮದೇವೋಪಾಸ್ಯಲಕ್ಷ್ಮ್ಯುಪಾಸಿಕಾಸಮಧಿಷ್ಠಿತಮತಿಮನೋಹರಂ ಸ ರಾಮಚಂದ್ರೋಽನುಜಗಾಮ ॥ ೧೮ ॥

---

೧೬. ಅಲ್ಲಿಗೆ ಬಂದು ಶ್ರೀರಾಮನು ಅದನ್ನು ನೋಡಿದನು. ಅಲ್ಲಿ ಕೆಲವರು ರಾಜರು ಆ ರಾಮನಮೇಲೆ ಯುದ್ಧಮಾಡಿ ಸೋತರು. ಮತ್ತೆ ಕೆಲವರು ಕೈಮುಗಿದುಕೊಂಡು ಶರಣಾಗತರಾದರು. ಅವರೆಲ್ಲರಿಂದಲೂ ಶ್ರೀರಾಮನು ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಅಲ್ಲಿಂದ ಹಿಂದಿರುಗಿ ಪಶ್ಚಿಮಕ್ಕೆಹೊರಟನು.

೧೭. ಅನಂತರ ಮೇರುಪರ್ವತಕ್ಕೆ ಪಶ್ಚಿಮಕ್ಕೆ ಮಾಲ್ಯವಂತನೆಂಬ ಪರ್ವತವಿರುವುದು. ಅದು ಎರಡುಸಾವಿರ ಯೋಜನಗಳಷ್ಟು ಅಗಲವಾಗಿರುವುದು. ಮೂವತ್ತನಾಲ್ಕು ಸಾವಿರ ಯೋಜನಗಳಷ್ಟು ಉದ್ದವಾಗಿರುವುದು. ಬಹು ಸುಂದರವಾಗಿರುವುದು. ಇದನ್ನು ಶ್ರೀರಾಮನು ಜನಕಜೆಗೂ ತೋರಿಸುತ್ತ ತಾನೂ ನೋಡಿ ಸಂತೋಷಪಟ್ಟನು.

೧೮. ಅದಕ್ಕೆ ಪಶ್ಚಿಮದಲ್ಲಿ ಕೇತುಮಾಲವೆಂಬ ಆರನೆಯ ವರ್ಷವು ಎಂದರೆ ಭೂಭಾಗವು ಇರುವುದು. ಅದು ಮೂವತ್ತೊಂದುಸಾವಿರ ಯೋಜನದಷ್ಟು ಅಗಲವೂ, ಮುವತ್ತನಾಲ್ಕುಸಾವಿರ ಯೋಜನಗಳಷ್ಟು ಉದ್ದವೂ ಇರುವುದು. ಅಲ್ಲಿ ಕಾಮದೇವನೆಂಬ ದೇವರಿರುವುದು. ಲಕ್ಷ್ಮಿಯು ಅದನ್ನು ಸೇವಿಸುತ್ತಿರುವಳು. ಇದು ಅತಿಮನೋಹರವಾಗಿರುವುದು. ಇದನ್ನು ನೋಡುತ್ತ ಅಲ್ಲಿಗೆ ಶ್ರೀರಾಮನು ಬಂದನು.

ತದ್ವರ್ಷನೃಪಸಮೂಹಮುಕುಟಾವತಂಸಪರಾಗಪೂಜಿತಚರಣಾರವಿಂದಯುಗಳಃ ಸ ರಘುಕುಲದೀಪಕಃ ಸೀತಯಾ ಪುಷ್ಪಕಸ್ಥೋತಿಮುದಮವಾಪ ॥ ೧೯

ಅಥ ಮೇರೋರುತ್ತರತಃ ಸ ನೀಲಪರ್ವತಂ ದ್ವಿಸಹಸ್ರಯೋಜನವಿಸ್ತೀರ್ಣಂ ನವತಿಸಹಸ್ರಯೋಜನದೀರ್ಘಂ ರಘುಕುಲತಿಲಕೋ ನಯನವಿಷಯಂ ಚಕಾರ ॥ ೨೦॥

ಅಥ ರಮ್ಯಕಂ ನಾಮ ಸಪ್ತಮಂ ವರ್ಷಂ ನವಸಹಸ್ರಯೋಜನಪರಿಮಿತಂ ಮತ್ಸ್ಯೋಪಾಸ್ಯಮನೂಪಾಸಕ ಸಮಧಿಷ್ಠಿತಂ ವಿಮಾನಮಧಿಷ್ಠಿತಸ್ಸ ರಘುನಂದನ ಉಪಜಗಾಮ ॥ ೨೧ ॥

---

೧೯. ಅಲ್ಲಿಗೆ ಶ್ರೀರಾಮನು ಬರಲು ಅಲ್ಲಿನ ರಾಜರೆಲ್ಲರೂ ಅವನಿಗೆ ಕಪ್ಪಕಾಣಿಕೆಗಳನ್ನು ಕೊಟ್ಟು ನಮಸ್ಕರಿಸಿದರು. ಇದರಿಂದ ಆ ರಾಮನು ಬಹುವಾಗಿ ಸಂತೋಷಪಟ್ಟನು.

೨೦. ಅಲ್ಲಿಂದ ಹೊರಟು ಮೇರುಪರ್ವತಕ್ಕೆ ಉತ್ತರಕ್ಕಿರುವ ನೀಲಪರ್ವತವನ್ನು ಶ್ರೀರಾಮನು ಹೊಂದಿದನು. ಅದು ಎರಡುಸಾವಿರ ಯೋಜನದಗಲವೂ ತೊಂಭತ್ತುಸಾವಿರ ಯೋಜನಗಳ ಉದ್ದವೂ ಇರುವುದು.

೨೧. ಅಲ್ಲಿ ರಮ್ಯಕವರ್ಷವೆಂಬ ಭೂಭಾಗವಿರುವುದು. ಅದು ಏಳನೆಯ ವರ್ಷವು. ಅದು ಒಂಭತ್ತುಸಾವಿರ ಯೋಜನಗಳ ಪರಿಮಾಣವಿರುವುದು. ಅಲ್ಲಿ ಮತ್ಸ್ಯಮೂರ್ತಿಯ ದೇವರಿರುವುದು. ಮನುವೆಂಬ ಉಪಾಸಕನಿರುವನು. ಇದನ್ನು ವಿಮಾನದಲ್ಲಿ ಕುಳಿತು ಶ್ರೀರಾಮನು ನೋಡಿದನು.

ತತ್ರಸ್ಥೈರವನಿಪಾಲೈಃ ಸ್ವಕೋಶಾದಿಪೂಜಿತಃ ರಘುನಾಯಕಸ್ಸೀತಾಂ ರಂಜಯನ್ ಪುರತೋಽನುಸಸಾರ ॥ ೨೨ ॥

ತಸ್ಯೋತ್ತರತಃ ಶ್ವೇತಪರ್ವತಂ ದ್ವಿಸಹಸ್ರಯೋಜನವಿಸ್ತೀರ್ಣಮೇಕಾಶೀತಿಸಹಸ್ರಯೋಜನದೀರ್ಘಮತಿಕಮನೀಯಂ ಸ ಸ್ವಲೋಚನವಿಷಯಂ ಚಕಾರ ॥ ೨೩ ॥

ಅಥ ಹಿರಣ್ಮಯಂ ನಾಮಾಷ್ಟಮಂ ವರ್ಷಂ ನವಸಹಸ್ರಯೋಜನಪರಿಮಿತಂ ಕೂರ್ಮೋಪಾಸ್ಯಾರ್ಯಮೋಪಾಸಕಸಮಧಿಷ್ಠಿತಮತಿಕಮನೀಯಂ ಸ ಸಮನುಯುಯೌ ॥ ೨೪ ॥

---

೨೨. ರಾಮನು ಬಂದುದನ್ನು ಕೇಳಿ ಅಲ್ಲಿನ ರಾಜರೆಲ್ಲರೂ ಅವನಿಗೆ ತಮ್ಮ ಕಪ್ಪಕಾಣಿಕೆಗಳನ್ನು ಕೊಟ್ಟು ಗೌರವಿಸಿದರು. ಮತ್ತು ಕೋಶವನ್ನೂ ಅವನಿಗೆ ಒಪ್ಪಿಸಿದರು. ಅದನ್ನೆಲ್ಲಾ ತೆಗೆದುಕೊಂಡು ಶ್ರೀರಾಮನು ಸೀತೆಯೊಡನೆ ಮುಂದಕ್ಕೆ ಹೊರಟನು.

೨೩. ಅದಕ್ಕೆ ಉತ್ತರದಲ್ಲಿ ಶ್ವೇತಪರ್ವತವಿರುವುದು. ಅದು ಎರಡುಸಾವಿರ ಯೋಜನಗಳ ಅಗಲವೂ, ಎಂಭತ್ತೊಂದುಸಾವಿರ ಯೋಜನಗಳ ಉದ್ದವೂ ಇರುವುದು. ಬಹು ಮನೋಹರವಾದುದು. ಅಲ್ಲಿಗೆ ಬಂದು ರಾಮನು ನೋಡಿದನು.

೨೪. ಹಾಗೆಯೇ ಹಿರಣ್ಮಯವೆಂಬ ವರ್ಷಕ್ಕೆ ಬಂದನು. ಇದು ಎಂಟನೆಯ ವರ್ಷವು. ಇದು ಒಂಭತ್ತುಸಾವಿರ ಯೋಜನಗಳ ವಿಸ್ತಾರವಿರುವುದು. ಇಲ್ಲಿ ಕೂರ್ಮದೇವರಿರುವುದು. ಅದನ್ನು ಅರ್ಯಮನು ಸೇವಿಸುತ್ತಿರುವನು ಮನೋಹರವಾಗಿರುವುದು.

ತದ್ವರ್ಷವಾಸಿನೃಪದಯಿತಾಶಿರೋಭೂಷಣಮಣಿತೇಜೋದೀಪಿತ ಜಾನಕೀಚರಣಾರವಿಂದಯುಗಳವೀಕ್ಷಮಾಣಸ್ಸ ರಘುನಂದನೋಮುಮುದ ಮಹಾಪ || ೨೫ ||

ತಸ್ಯೋತ್ತರತಃ ಶೃಂಗವಂತಂ ಪರ್ವತಂ ದ್ವಿಸಹಸ್ರಯೋಜನ ವಿಸ್ತೀರ್ಣಂ ತ್ರಿಸಪ್ತತಿಸಹಸ್ರಯೋಜನದೀರ್ಘಂ ಸ ರಘುನಂದನೋ ದದರ್ಶ || ೨೬ ||

ಅಥೋತ್ತರಕುರುವರ್ಷಂ ನವಮಂ ನವಸಹಸ್ರಯೋಜನ ಪರಿಮಿತಂ ವರಾಹೋಪಾಸ್ಯಭೂಮ್ಯುಪಾಸಿಕಾಸಮಧಿಷ್ಠಿತಮತಿಮನೋಹರಂ ಸ ರಾಮಚಂದ್ರಸ್ತಮನುಯಯೌ || ೨೭ ||

---

೨೫. ಅಲ್ಲಿರುವ ರಾಜರೆಲ್ಲರೂ ಕಪ್ಪಕಾಣಿಕೆಗಳನ್ನು ಕೊಟ್ಟರು. ನಮಸ್ಕರಿಸಿದರು. ಆ ರಾಜರ ಹೆಂಡಿರು ಜಾನಕಿಗೆ ನಮಸ್ಕರಿಸಿದರು. ಇದೆಲ್ಲವನ್ನೂ ನೋಡುತ್ತ ಶ್ರೀರಾಮನು ಸಂತೋಷಪಟ್ಟನು.

೨೬. ಅದಕ್ಕೆ ಉತ್ತರದಲ್ಲಿ ಶೃಂಗವಂತವೆಂಬ ಪರ್ವತವಿರುವುದು. ಅದು ಎರಡುಸಾವಿರ ಯೋಜನಗಳಷ್ಟು ಅಗಲವಿರುವುದು. ಎಪ್ಪತ್ತಮೂರುಸಾವಿರ ಯೋಜನಗಳ ಉದ್ದವಿರುವುದು. ಇದನ್ನು ಶ್ರೀರಾಮನು ಬಂದು ನೋಡಿದನು.

೨೭. ಅನಂತರ ಉತ್ತರಕುರುವರ್ಷವೆಂಬ ಭೂಭಾಗವಿರುವುದು. ಇದು ಒಂಭತ್ತನೆಯ ವರ್ಷವು. ಅದು ಒಂಭತ್ತುಸಾವಿರ ಯೋಜನದಗಲವಿರುವುದು ಅಲ್ಲಿ ವರಾಹವೆಂಬ ದೇವರಿರುವುದು. ಅದನ್ನು ಭೂಮಿಯು ಸೇವಿಸುತ್ತಿರುವುದು. ಅದು ಬಹು ಮನೋಹರವಾಗಿರುವುದು. ಅಲ್ಲಿಗೆ ರಾಮನು ಹೋದನು.

ತದ್ವರ್ಷಚಾರಿರಣಕಂಪಿತಾವಯುವನೃಪಸಮೂಹಾವತಂಸಮಣಿ ಮುಕ್ತಾ ವಿರಾಜಿತ ಪದಜಲರುಹದ್ವಂದ್ವಃ ಸ ರಘುನಾಯಕೋ ಮುದಮವಾಪ ॥ ೨೮ ॥

ಅಥ ರಾಮೋ ಜಂಬೂದ್ವೀಪಪತಿಂ ದೀರ್ಘಬಾಹುಮುತ್ತರಕುರುವರ್ಷಸ್ಥಂ ರಣೇ ಹತ್ವಾಽಯೋಧ್ಯಾಂ ಗತ್ವಾ ಲವಂ ಜಂಬೂದ್ವೀಪಪತಿಂ ಕರಿಷ್ಯಾಮೀತಿ ನಿಶ್ಚಿತ್ಯ ಕಿಯದ್ದಿನಂ ತದಧಿಕಾರೇ ವಿಜಯಂ ನಾಮ ಸ್ವಮಂತ್ರಿಣಂ ಸ್ಥಾಪಯಾಮಾಸ ॥ ೨೯ ॥

ಏತೇಷಾಂ ಜಂಬೂದ್ವೀಪಾಂತರ್ಗತವರ್ಷಾಣಾಂ ತಥಾ ಸರ್ವದ್ವೀಪಾಂತರ್ಗತವರ್ಷಾಣಾಂ ಯಾನಿ ಯಾನಿ ನಾಮಾನಿ ತಾನಿ ಪ್ರಿಯವ್ರತನೃಪಪೌತ್ರನಾಮಸೂಚಿತಾನಿ ಸಂತಿ. ತೇಷು ಯೇ ಯೇ ನೃಪಾ ಜಾಯಂತೇ ತೇತದ್ವರ್ಷನಾಮಸೂಚಿತಾ ಏವ ಭವಂತಿ. ಅತಸ್ಸರ್ವೇಷಾಂ ಪೃಥಕ್ ನಾಮಾನಿ ಮಯಾತ್ರ ನೋಚ್ಯಂತೇ ॥ ೩೦ ॥

---

೨೮. ಅಲ್ಲಿ ಸಂಚರಿಸುತ್ತ ಅಲ್ಲಿನ ರಾಜರನ್ನು ಸೋಲಿಸಿ ಅವರಿಂದ ನಮಸ್ಕೃತನಾಗಿ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಕೋಶವನ್ನು ಸ್ವೀಕರಿಸಿ ಸಂತೋಷಗೊಂಡನು.

೨೯. ರಾಮನು ಜಂಬೂದ್ವೀಪದಲ್ಲಿ ಸಂಚರಿಸುತ್ತ ಅಲ್ಲಿಯ ರಾಜನಾದ ದೀರ್ಘಬಾಹುವನ್ನು ಯುದ್ಧದಲ್ಲಿ ಕೊಂದುಬಿಟ್ಟನು. ಅನಂತರ ಅಯೋಧ್ಯೆಗೆ ಹೋದಮೇಲೆ ಲವನನ್ನು ಜಂಬೂದ್ವೀಪಕ್ಕೆ ಅಧಿಪತಿಯನ್ನಾಗಿ ಮಾಡಬೇಕೆಂದು ಉದ್ದೇಶಿಸಿ ಕೆಲವು ದಿನಗಳವರೆಗೆ ವಿಜಯನೆಂಬ ಮಂತ್ರಿಗೆ ಅಲ್ಲಿರುವಂತೆ ಹೇಳಿ ಅವನನ್ನು ನಿಲ್ಲಿಸಿದನು.

೩೦. ಎಲೈ ವಿಷ್ಣುದಾಸನೇ ಕೇಳು ! ಈ ಜಂಬೂದ್ವೀಪದಲ್ಲಿರುವ ಭಾಗಗಳಿಗೂ ಅಂತೆಯೇ ಎಲ್ಲಾ ದ್ವೀಪಗಳ ಒಳಗೂ ಸೇರಿಕೊಂಡಿರುವ ವರ್ಷಗಳೆಂಬ ಭಾಗಗಳಿಗೂ ಹೆಸರುಗಳಿವೆ. ಅವುಗಳು ಪ್ರಿಯವ್ರತನೆಂಬ ರಾಜನ ಮೊಮ್ಮಗನಾದ ಮನುವಿನ ಹೆಸರಿನಿಂದ ಸೂಚಿತವಾಗಿವೆ. ಅವುಗಳಲ್ಲಿ ಯಾವ ಯಾವ ರಾಜರು ಹುಟ್ಟುವರೋ ಅವರ ಹೆಸರಿನಿಂದ ಅವನ್ನು ಕರೆಯುವರು. ಆದ್ದರಿಂದ ಅವನ್ನು ನಾನು ಇಲ್ಲಿ ಬೇರೆ ಬೇರೆಯಾಗಿ ಹೇಳಲಿಲ್ಲ.

ಏವಂ ಜಂಬೂದ್ವೀಪಂ ಪ್ರಮಾಣವಿಸ್ತೀರ್ಣಾಭ್ಯಾಂ ಲಕ್ಷಯೋಜನ ಪರಿಮಿತಮಧಿಕಮನೀಯಂ ಸಮವರ್ತುಲಂ ಪುಷ್ಕರಪತ್ರೋಪಮಂ ನವವರ್ಷಮಂಡಿತಂ ಸ ರಘುನಾಯಕಸ್ಸ್ವವಶಂ ಚಕಾರ || ೩೧ ||

ಮೇರುಪರ್ವತಾಗ್ರೇ ಅಷ್ಟಪುರ್ಯೋಽಷ್ಟದಿಕ್ಪಾಲಾನಾಂ ಸಂತಿ ತತ್ಪಾಲಕಾಃ ಸುರಾಧೀಶವಹ್ನಿಯಮನಿರೃತಿವರುಣವಾಯುಕುಬೇರೇಶಾಸ್ತೇ ಸರ್ವೇ ಮಮಾಜ್ಞಾಂ ಪರಿಪಾಲಯಂತ್ವಿತಿ ನಿಶ್ಚಿತ್ಯ ರಘುನಾಯಕಸ್ತಾಃ ಪ್ರತಿಜಗಾಮ || ೩೨ ||

ತಾ ಅಷ್ಟಪುರ್ಯಃ ಪೃಥಕ್ ಪೃಥಕ್ ಸಾರ್ಧದ್ವಿಸಹಸ್ರಯೋಜನ ಪರಿಮಾಣೇನಾಯಾಮವಿಸ್ತಾರತೋ ಜ್ಞಾತವ್ಯಾಃ || ೩೩ ||

---

೩೧. ಪ್ರಮಾಣ ಮತ್ತು ವಿಸ್ತಾರಗಳಲ್ಲಿ ಒಂದುಲಕ್ಷ ಯೋಜನಗಳಿರುವ ಬಹು ಸುಂದರವಾದ ಸಮವಾಗಿ ವರ್ತುಲಾಕಾರವಾದ ತಾವರೆಯ ಎಲೆಯಂತಿರುವ ನವವರ್ಷವೆಂಬ ಒಂಭತ್ತು ಭೂಭಾಗಗಳಿಂದ ಕೂಡಿದ ಈ ಜಂಬೂದ್ವೀಪವನ್ನು ರಘುರಾಮನು ತನ್ನ ಅಧೀನವನ್ನಾಗಿ ಮಾಡಿಕೊಂಡನು.

೩೨ ಮೇರುಪರ್ವತದಮೇಲೆ ಅಷ್ಟ ದಿಕ್ಪಾಲಕರ ಎಂಟು ಪಟ್ಟಣಗಳಿವೆ. ಇಂದ್ರ, ವಹ್ನಿ, ಯಮ, ನಿರ್‌ಋತಿ, ವರುಣ, ವಾಯು, ಕುಬೇರ, ಈಶಾನ ಇವರು ಅಲ್ಲಿದ್ದುಕೊಂಡಿರುವರು. ಅವರೂ ಕೂಡ ನನ್ನ ಆಜ್ಞೆಯನ್ನು ಪಾಲಿಸಲಿ ಎಂದು ರಾಮನು ನಿಶ್ಚಯಿಸಿಕೊಂಡು ಅವರಮೇಲೆಯೂ ದಂಡೆತ್ತಿಕೊಂಡು ಹೋದನು.

೩೩. ಅಷ್ಟ ದಿಕ್ಪಾಲಕರ ಎಂಟುಪಟ್ಟಣಗಳೂ ಕೂಡ ಒಂದೊಂದು ಎರಡು ಸಾವಿರದ ಐನೂರು ಯೋಜನದ ಅಗಲವೂ ಅಷ್ಟೇ ಉದ್ದವೂ ಇದ್ದು ವಿಸ್ತಾರ ವಾಗಿರುವುವು. ಎಂದು ತಿಳಿ.

ಮೇರುರ್ಲಕ್ಷಯೋಜನಸಮುನ್ನತೋ ಮೂರ್ಧ್ನಿ ದ್ವಾತ್ರಿಂಶತ್ಸಹಸ್ರ ಯೋಜನವಿತತೋ ಮೂಲೇ ಷೋಡಶಸಹಸ್ರಯೋಜನವಿತತಶ್ಚಾಥ ಷೋಡಶಸಹಸ್ರಯೋಜನಮಿತೋ ಭೂಮ್ಯಾ ಬಹಿಃ ಧತ್ತೂರಪುಷ್ಪವದ್ದೃಶ್ಯತೇ ॥ ೩೪ ॥

ತತ್ರಮೇರುಪರ್ವತಾಗ್ರೇಷ್ಟದಿಕ್ಪಾಲಪುರೀಣಾಂ ಮಧ್ಯೇ ಬ್ರಹ್ಮಪುರೀ ದಶಸಹಸ್ರಯೋಜನಾಯಾಮವಿಸ್ತಾರತೋ ಜ್ಞಾತವ್ಯಾ ॥೩೫॥

ಸರ್ವೇ ವರ್ಷಮರ್ಯಾದೀಭೂತಾಷ್ಟಪರ್ವತಾ ದಶಸಹಸ್ರ ಯೋಜನಸಮುನ್ನತಾ ಜ್ಞಾತವ್ಯಾಃ ॥ ೩೬ ॥

---

೩೪. ಮೇರುಪರ್ವತವು ಒಂದುಲಕ್ಷ ಯೋಜನಗಳಷ್ಟು ಎತ್ತರವಿರುವುದು. ತಲೆಯಮೇಲೆ ಮೂವತ್ತೆರಡುಸಾವಿರ ಯೋಜನದಗಲವಿದೆ. ಭೂಮಿಯಮೇಲೆ ಬುಡದಲ್ಲಿ ಹದಿನಾರುಸಾವಿರ ಯೋಜನಗಳಷ್ಟು ಪ್ರಮಾಣದಲ್ಲಿರುವುದು. ಕೆಳಗಡೆ ನೋಡಿದರೆ ಹದಿನಾರುಸಾವಿರ ಯೋಜನದಷ್ಟಿರುವುದು. ಆ ಪರ್ವತವನ್ನು ಭೂಮಿಯಮೇಲೆ ಹೊರಗಡೆ ನೋಡಿದರೆ ಎಂಭತ್ತನಾಲ್ಕುಸಾವಿರ ಯೋಜನದಷ್ಟು ಕಾಣುವುದು. ಇದನ್ನು ನೋಡಿದರೆ ಉಮ್ಮತ್ತದ ಹೂವಿನಂತಿರುವುದು.

೩೫. ಆ ಮೇರುಪರ್ವತದ ಮೇಲುಭಾಗದಲ್ಲಿ ಈ ಅಷ್ಟ ದಿಕ್ಪಾಲಕರ ಪಟ್ಟಣಗಳ ಮಧ್ಯದಲ್ಲಿ ಬ್ರಹ್ಮಪುರಿಯು ಇರುವುದು. ಅದು ಹತ್ತುಸಾವಿರ ಯೋಜನಗಳಷ್ಟು ವಿಸ್ತಾರವಿರುವುದೆಂದು ತಿಳಿ.

೩೬. ವರ್ಷಗಳೆಂದು ಹೆಸರುಳ್ಳ ಭೂಭಾಗಕ್ಕೆ ಮೇರೆಯಂತಿರುವ ಎಂಟು ಪರ್ವತಗಳೂ, ಹತ್ತುಸಾವಿರ ಯೋಜನಗಳಷ್ಟು ಎತ್ತರವಾಗಿವೆಯೆಂದು ತಿಳಿಯತಕ್ಕದ್ದು.

ವರ್ಷದೀರ್ಘತಾ ಪರ್ವತಸಮಾನಾ ಜ್ಞಾತವ್ಯಾ ॥ ೩೭ ॥

ಜಂಬೂದ್ವೀಪಸ್ಯೋಪದ್ವೀಪಾನಷ್ಟೌ ಹ್ಯೆಕ ಉಪದಿಶಂತಿ ॥ ೩೮ ॥

ಸಗರಾತ್ಮಜೈರಶ್ವಾನ್ವೇಷಣ ಇಮಾಂ ಮಹೀಂ ಪರಿತೋ ನಿಖನದ್ಭಿರುಪಕಲ್ಪಿತಾನ್ ॥ ೩೯ ॥

ತದ್ಯಥಾ ಸ್ವರ್ಣಪ್ರಸ್ಥಃ ಚಂದ್ರಶುಕ್ಲಃ ಅವರ್ತನಃ ರಮಣಕಃ ಮಂದರಹರಿಣಃ ಪಾಂಚಜನ್ಯಃ ಸಿಂಹಲಃ ಲಂಕಾ ಇತಿ ॥ ೪೦ ॥

ತೇಷು ಲಂಕಾಂ ವಿನಾ ಸಪ್ತಸು ಯದಾ ಯದ್ಯತ್ಸಮೀಪಂ ತದಾ ತತ್ರ ತತ್ರ ಗತ್ವಾ ತತ್ರಸ್ಥಾನುಪದ್ವೀಪಪಾಲಕಾನ್ ಶ್ರೀರಾಮಚಂದ್ರಃ ಸ್ವವಶಾಂಶ್ಚಕಾರ ॥ ೪೧ ॥

---

೩೭. ವರ್ಷವೆಂಬ ಭೂಭಾಗಗಳ ಉದ್ದವು ಪರ್ವತಗಳೆಷ್ಟೆಷ್ಟು ವಿಸ್ತಾರವಾಗಿವೆಯೋ ಅಷ್ಟಷ್ಟೆಂದು ತಿಳಿಯಬೇಕು.

೩೮. ಈ ಜಂಬೂದ್ವೀಪಕ್ಕೆ ಎಂಟು ಉಪದ್ವೀಪಗಳಿವೆ ಎಂದು ತಿಳಿದವರು ಹೇಳುತ್ತಾರೆ.

೩೯. ಯಾಗದ ಕುದುರೆಯನ್ನು ಹುಡುಕುತ್ತಾ ಭೂಮಿಯನ್ನು ಸುತ್ತಲೂ ಅಗೆಯುತ್ತಿರುವಾಗ ಸಗರನ ಮಕ್ಕಳಿಂದ ಅವು ಉಂಟಾದುವೆಂದು ಹೇಳುತ್ತಾರೆ

೪೦. ಅವಾವುವೆಂದರೆ ಸ್ವರ್ಣಪ್ರಸ್ಥ, ಚಂದ್ರಶುಕ್ಲ, ಆವರ್ತನ, ರಮಣಕ, ಮಂದರಹರಿಣ, ಪಾಂಚಜನ್ಯ, ಸಿಂಹಲ, ಲಂಕೆ ಎಂಬುದಾಗಿ ಅವು ಹೆಸರನ್ನು ಹೊಂದಿವೆ.

೪೧. ಇವುಗಳಲ್ಲಿ ಲಂಕೆಯೊಂದನ್ನು ಹೊರತಾಗಿ ಉಳಿದ ಏಳುದ್ವೀಪಗಳಲ್ಲಿ ಯಾವಾಗಲಾದರೂ ಎಲ್ಲಿಗಾದರೂ ಹೋಗಿದ್ದರೆ ಅಲ್ಲಿಗೆ ಯಾವುದು ಹತ್ತಿರವೋ ಅಲ್ಲಿಗೆ ಹೋಗಿ ರಾಮನು ಆಯಾಯ ಉಪದ್ವೀಪಪತಿಗಳನ್ನು ತನ್ನ ಅಧೀನರನ್ನಾಗಿ ಮಾಡಿಕೊಳ್ಳುತ್ತಿದ್ದನು.

ಭಾರತೇಲಾವೃತವರ್ಷಾಭ್ಯಾಂ ವಿನಾ ಸಪ್ತಸು ವರ್ಷೇಷ್ವ ಸಂಖ್ಯಾತಾ ನದ್ಯೋ ಗಿರಯಶ್ಚ ಸಂತಿ ತೇಷಾಂ ವಿಸ್ತಾರಂ ಕೋ ವಕ್ತುಂ ಕ್ಷಮಃ ॥ ೪೨ ॥

ಅಥೇಲಾವೃತಸಂಸ್ಥಿತಾ ಮುಖ್ಯನದ್ಯ ಏವೋಚ್ಯಂತೇ ॥ ೪೩ ॥

ಅರುಣೋದಾಜಂಬುನದೀಪಯೋದಧಿಘೃತಮಧುಗುಡಾನ್ನಾಂ ಬರಶಯ್ಯಾಸನಾಭರಣಸಂಜ್ಞಾ ನದಾಸ್ತಥಾ ಪಂಚಮಧುದಾರಾನದ್ಯಸ್ತಥಾ ಸೀತಾಲಕನಂದಾಚಕ್ಷುರ್ಭದ್ರೇತಿಮೇರೋರಧಶ್ಚತುರ್ದಿಕ್ಷು ಪತಿತಾ ಜಾಹ್ನ ವೀಭೇದಾಶ್ಚತ್ವಾರ ಏವಮಿಲಾವೃತನದ್ಯಃ ॥ ೪೪ ॥

---

೪೨. ಭಾರತವರ್ಷ, ಇಳಾವೃತವರ್ಷಗಳೆರಡನ್ನು ಬಿಟ್ಟು ಉಳಿದ ಏಳುವರ್ಷಗಳಲ್ಲಿಯೂ ಅಸಂಖ್ಯಾತವಾದ ನದಿಗಳೂ ಪರ್ವತಗಳೂ ಇವೆ. ಅವುಗಳ ವಿಸ್ತಾರವನ್ನು ಯಾವನೂ ಹೇಳಲಾರನು.

೪೩. ಈಗ ಇಲಾವೃತವರ್ಷದಲ್ಲಿರುವ ಮುಖ್ಯನದಿಗಳನ್ನು ಹೇಳುತ್ತೇನೆ.

೪೪. ಅರುಣೋದಕನದಿ, ಜಂಬುನದಿ, ಕ್ಷೀರನದಿ, ದಧಿನದಿ, ಘೃತನದಿ, ಮಧುರನದಿ, ಗುಡನದಿ, ಅನ್ನನದಿ, ಅಂಬರನದಿ, ಶಯ್ಯಾನದಿ, ಆಸನನದಿ, ಆಭರಣನದಿ, ಇದೇ ರೀತಿಯಾಗಿ ನದಗಳೂ, ಅಂತೆಯೇ ಮಧುರವಾದ ಪಂಚಧಾರಾನದಿಗಳೂ, ಸೀತಾನದಿ, ಅಲಕನಂದಾನದಿ, ಚಕ್ಷುರ್ನದಿ, ಭದ್ರಾನದಿ ಎಂಬ ಭೇದವುಳ್ಳ ನಾಲ್ಕುನದಿಗಳೂ ಮೇರುವಿನಿಂದ ಕೆಳಭಾಗಕ್ಕೆ ಬಿದ್ದು ಅಲ್ಲಿಂದ ನಾಲ್ಕುದಿಕ್ಕುಗಳಲ್ಲಿಯೂ ಹರಿಯುತ್ತಾ ಇರುತ್ತವೆ. ಇವು ಗಂಗಾನದಿಯ ಭೇದಗಳಾಗಿವೆ. ಇವು ಇಲಾವೃತದಲ್ಲಿ ಹರಿಯುವ ಪ್ರಸಿದ್ಧವಾದ ನದಿಗಳು.

ತಾಸು ಸೀತಾ ಪೂರ್ವಸಮುದ್ರಂ ಚಕ್ಷುಃ ಪಶ್ಚಿಮಸಮುದ್ರಂ ಭದ್ರೋತ್ತರಸಮುದ್ರಂ ಅಲಕನಂದಾ ದಕ್ಷಿಣಸ್ಯಾಂ ದಿಶಿ ಭಾರತೇ ವರ್ಷೇ ಜಲನಿಧಿಂ ಪ್ರವಿಶಂತಿ ॥ ೪೫ ॥

ಭಾರತೇಽಪ್ಯಸ್ಮಿನ್ ವರ್ಷೇ ಸರಿಚ್ಛೈಲಾಸ್ಸಂತಿ ಬಹವಃ ॥ ೪೬ ॥

ತದ್ಯಥಾ ಮಲಯೋ ಮಂಗಳಪ್ರಸ್ಥೋ ಮೈನಾಕಃ ತ್ರಿಕೂಟಃ ಋಷಭಃ ಕುಟಕಃ ಸಹ್ಯಃ ದೇವಗಿರಿಃ ಋಷ್ಯಮೂಕಃ ಶ್ರೀಶೈಲೋ ವೈಕುಂಠಃ ಮಹೇಂದ್ರೋ ವಾರಿಧಾರೋ ವಿಂಧ್ಯಶ್ಶಕ್ತಿಮಾನೃಕ್ಷಗಿರಿಃ ಪಾರಿಯಾತ್ರೋ ದ್ರೋಣಶ್ಚಿತ್ರಕೂಟೋ ಗೋವರ್ಧನೋ ರೈವತಕಃ

---

೪೫. ಅವುಗಳಲ್ಲಿ ಸೀತಾನದಿಯು ಪೂರ್ವಸಮುದ್ರವನ್ನೂ ಚಕ್ಷುರ್ನದಿಯು ಪಶ್ಚಿಮಸಮುದ್ರವನ್ನೂ ಭದ್ರಾನದಿಯು ಉತ್ತರಸಮುದ್ರವನ್ನೂ ಅಲಕನಂದೆಯು ದಕ್ಷಿಣಸಮುದ್ರವನ್ನೂ ಸೇರುತ್ತವೆ. ಈ ನದಿಗಳು ಅಲ್ಲಿಂದ ಹರಿಯುತ್ತ ಬಂದು ಈ ಭಾರತವರ್ಷದಲ್ಲಿ ಸಮುದ್ರವನ್ನು ಸೇರುತ್ತವೆ. (ಎಂದರೆ ಈ ನಾಲ್ಕು ನದಿಗಳೂ ಇಲಾವರ್ಷದಲ್ಲಿ ಹುಟ್ಟಿ ಭಾರತವರ್ಷದಲ್ಲಿ ಸಮುದ್ರಕ್ಕೆ ಸೇರುವುದರಿಂದ ಎರಡು ವರ್ಷಗಳಲ್ಲಿಯೂ ಇದ್ದಂತಾಯಿತು)

೪೬. ಈ ಭಾರತವರ್ಷದಲ್ಲಿಯೂ ಕೂಡ ಬಹುವಾಗಿ ನದಿಗಳೂ ಪರ್ವತಗಳೂ ಇವೆ.

೪೭. ಅವಾವುವೆಂದರೆ, ಮಲಯ, ಮಂಗಳಪ್ರಸ್ಥ ಮೈನಾಕ, ತ್ರಿಕೂಟ, ಋಷಭ, ಕುಟಕ, ಸಹ್ಯ, ದೇವಗಿರಿ, ಋಷ್ಯಮೂಕ, ಶ್ರೀಶೈಲ, ವೈಕುಂಠ, ಮಹೇಂದ್ರ, ವಾರಿಧಾರ, ವಿಂಧ್ಯ, ಶಕ್ತಿಮಂತ, ಋಕ್ಷಗಿರಿ, ಪಾರಿಯಾತ್ರ,

ಕಕುಭೋ ನೀಲೋ ಗೋಕಾಮುಖ ಇಂದ್ರಕೀಲಃ ಕಾಮಗಿರಿಶ್ಚೇತ್ಯನ್ಯೇ ಚ ಶತಸಹಸ್ರಶಃ ಶೈಲಾಸ್ತೇಷಾಂ ನಿತಂಬಪ್ರಭವಾ ಸದಾ ನದ್ಯಶ್ಚ ಸಂತ್ಯ ಸಂಖ್ಯಾತಾಃ || ೪೭ ||

ಚಂದ್ರವಶಾ ತಾಮ್ರಪರ್ಣೀ ಅವಟೋದಾ ಕೃತಮಾಲಾ ವೈಹಾಯಸೀ ಕಾವೇರೀ ವೇಣೀ ಭೀಮರಥೀ ಗೋದಾವರೀ ನಿರ್ವಿಂಧ್ಯಾ ಪಯೋಷ್ಣೀ ತಾಪೀ ಮಹೀ ಸುರಸಾ ನರ್ಮದಾ ಚರ್ಮಣ್ವತೀ ಸಿಂಧುಶ್ಚಾಂಧ್ರಃ ಶ್ಶೋಣಶ್ಚ ನದೌ ಮಹಾನದೀ ವೇದಸ್ಮೃತೀ ಋಷಿಕುಲ್ಯಾ ತ್ರಿಸಾಮಾ ಕೌಶಿಕೀ ಮಂದಾಕಿನೀ ಯಮುನಾ ಸರಸ್ವತೀ ದೃಷದ್ವತೀ ಗೋಮತೀ ಸರಯೂ ರೋಧಸ್ವತೀ ಸಪ್ತವತೀ ಸುಷೋಮಾ ಶತದ್ರುಶ್ಚಂದ್ರಭಾಗಾ ಮರುಧನ್ವಾ ವಿತಸ್ತಾ ಅಸಿಕ್ನೀ ವಿಶ್ವೇತಿ ಮಹಾನದ್ಯಃ || ೪೮ ||

ದ್ರೋಣಪರ್ವತ, ಚಿತ್ರಕೂಟ, ಗೋವರ್ಧನ, ರೈವತಕ, ಕಕುಭ, ನೀಲ, ಗೋಕಾಮುಖ, ಇಂದ್ರನೀಲ, ಕಾಮಗಿರಿ, ಇವುಗಳಲ್ಲದೆ ಇನ್ನು ನೂರಾರು ಬೆಟ್ಟಗಳಿವೆ. ಇವುಗಳ ಬುಡದಲ್ಲಿ ನದಗಳೂ, ನದಿಗಳೂ ಬಹುವಾಗಿ ಹುಟ್ಟುತ್ತವೆ.

೪೯. ಚಂದ್ರವಶೆ, ತಾಮ್ರಪರ್ಣಿ, ಅವಟೋದೆ, ಕೃತಮಾಲೆ, ವೈಹಾಯಸಿ, ಕಾವೇರಿ, ವೇಣಿ, ಪಯಸ್ವಿನೀ, ಶರ್ಕರಾವರ್ತ, ತುಂಗಭದ್ರೆ, ಕೃಷ್ಣ ಕೃಷ್ಣವೇಣೀ, ಭೀಮರಥಿ, ಗೋದಾವರಿ, ನಿರ್ವಿಂಧ್ಯೆ, ಪಯೋಷ್ಣಿ, ತಾಪಿ, ಭೀಮರಥಿ, ಗೋದಾವರಿ, ಮಹೀ, ಸುರಸೆ, ನರ್ಮದಾ, ಚರ್ಮಣ್ವತಿ, ಸಿಂಧು, ಆಂಧ್ರನದಿ, ವೇದಸ್ಮೃತಿನದಿ, ಋಷಿಕುಲ್ಯಾನದಿ, ತ್ರಿಸಾಮಾನದಿ, ಕೌಶಿಕಿ, ಮಂದಾಕಿನಿ, ಯಮುನೆ, ಸರಸ್ವತಿ, ದೃಷದ್ವತಿ, ಗೋಮತಿ, ಸರಯೂ, ರೋಧಸ್ವತಿ, ಸಪ್ತವತಿ, ಸುಷೋಮೆ, ಶತದ್ರು, ಚಂದ್ರಭಾಗೆ, ಮರುಧನ್ವಾನದಿ, ವಿತಸ್ತಾನದಿ, ಅಸಿಕ್ನೀ ವಿಶ್ವಾನದಿ, ಮೊದಲಾದುವುಗಳು ಮಹಾನದಿಗಳು.

ಏವಂ ಶಿಷ್ಯ ರಘುನಾಯಕೋ ನಾಯಕಃ ಸೋಪದ್ವೀಪಂ ಜಂಬುದ್ವೀಪಂ ಸ್ವವಶಂ ಕೃತ್ವಾ ಲಕ್ಷಯೋಜನವಿಸ್ತೀರ್ಣಂ ಲವಣಾರ್ಣವಂ ಜಂಬುದ್ವೀಪಪರಿಖೋಪಮಂ ಸಮುಲ್ಲಂಘ್ಯ ಪುಷ್ಪಕಸ್ಥಃಪ್ಲಕ್ಷಂ ನಾಮ ದ್ವಿತೀಯಂ ದ್ವೀಪಂ ದದರ್ಶ ॥ ೪೯ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ರಾಜ್ಯಕಾಂಡೇ ಪೂರ್ವಾರ್ಧೇ ಜಂಬೂದ್ವೀಪ ಜಯೋನಾಮ ಅಷ್ಟಮಸ್ಸರ್ಗಃ

---

೪೯. ಎಲೈ ಶಿಷ್ಯನೇ ! ಈ ರೀತಿಯಾಗಿ ಶ್ರೀರಾಮನು ಜಗದ್ರಕ್ಷಕನಾಗಿ ಚಕ್ರವರ್ತಿಯಾಗಿ ಉಪದ್ವೀಪಗಳಿಂದ ಕೂಡಿದ ಜಂಬೂದ್ವೀಪವನ್ನು ತನ್ನ ಅಧೀನದಲ್ಲಿರುವಂತೆ ಮಾಡಿಕೊಂಡು ಈ ಜಂಬೂದ್ವೀಪಕ್ಕೆ ಅಗಳಂತಿರುವ ಲಕ್ಷಯೋಜನಗಳ ವಿಸ್ತೀರ್ಣವುಳ್ಳ ಲವಣಸಮುದ್ರವನ್ನು ದಾಟಿ, ಪುಷ್ಪಕ ವಿಮಾನದಲ್ಲಿ ಕುಳಿತು ಹೊರಟು ಪ್ಲಕ್ಷವೆಂಬ ಎರಡನೆಯ ದ್ವೀಪವನ್ನು ನೋಡಿದನು.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಪೂರ್ವಾರ್ಧದಲ್ಲಿ ಜಂಬೂದ್ವೀಪಜಯವೆಂಬ ಎಂಟನೆಯ ಸರ್ಗವು

॥ ಶ್ರೀಃ ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಎಂಟನೆಯ ಸರ್ಗದ ಸಾರಾಂಶವು

ಶ್ರೀರಾಮನು ಭಾರತವರ್ಷವೇ ಮುಂತಾದ ವರ್ಷಗಳನ್ನು ಅವುಗಳೊಳಗಿರುವ ಸಾಮಂತರಾಜರುಗಳೊಡನೆ ಜಯಿಸಿ ಅನಂತರ ಜಂಬೂದ್ವೀಪಕ್ಕೆ ಹೋಗಿ ಅದನ್ನೂ ಜಯಿಸಿದನು. ವರ್ಷಗಳ ವಿಸ್ತಾರವೂ ಅವುಗಳಲ್ಲಿರುವ ಪರ್ವತಗಳೂ ನದಿಗಳೂ ದೇವತೆಗಳೂ ವರ್ಣಿತವಾಗಿರುವುವು.

ಹೀಗೆಯೇ ಎಲ್ಲರನ್ನೂ ಜಯಿಸುತ್ತ ಮೇರುಪರ್ವತದಮೇಲಿರುವ ಅಷ್ಟ ದಿಕ್ಪಾಲಕರ ಪಟ್ಟಣಗಳನ್ನೂ ಶ್ರೀರಾಮನು ನೋಡಿಕೊಂಡು ಬರುವನು.

ಆ ಮೇರುಪರ್ವತದಿಂದ ಹೊರಡುವ ಗಂಗಾನದಿಗೆ ಸಮವಾದ ಅನೇಕ ನದಿಗಳು ಇಲ್ಲಿ ವರ್ಣಿತವಾಗಿವೆ.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ

॥ ನವಮಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಅಥ ರಾಮೋ ಯಯೌ ಶ್ರೀಮಾನ್ ಪ್ಲಕ್ಷದ್ವೀಪಂ ಮನೋರಮಂ ।
ದ್ವಿಲಕ್ಷಯೋಜನಮಿತಂ ಸಪ್ತವರ್ಷಸಮನ್ವಿತಂ ॥ ೧ ॥

ಉಪಾಸ್ಯೋ ಯತ್ರ ವೈ ಸೂರ್ಯೋ ಬ್ರಾಹ್ಮಣಾಶ್ಚ ಹ್ಯುಪಾಸಕಾಃ ।
ದ್ವೀಪಾಖ್ಯಾಕೃಚ್ಚ ಯತ್ರಾಸ್ತಿ ಪ್ಲಕ್ಷವೃಕ್ಷೋ ಹಿರಣ್ಮಯಃ ॥ ೨ ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಒಂಭತ್ತನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು-ಶ್ರೀರಾಮನು ಲವಣಸಮುದ್ರವನ್ನು ದಾಟಿ ಮನೋಹರವಾದ ಪ್ಲಕ್ಷದ್ವೀಪಕ್ಕೆ ಹೋದನು. ಅದು ಎರಡುಲಕ್ಷ ಯೋಜನಗಳ ವಿಸ್ತಾರವಾಗಿರುವುದು. ಅದರಲ್ಲಿ ಏಳುವರ್ಷಗಳಿವೆ.

೨. ಅಲ್ಲಿ ಸೂರ್ಯನು ಉಪಾಸ್ಯದೇವತೆಯು. ಬ್ರಾಹ್ಮಣರೇ ಅವನ ಉಪಾಸಕರು. ಆ ಪ್ಲಕ್ಷದ್ವೀಪಕ್ಕೆ ಪ್ಲಕ್ಷದ್ವೀಪವೆಂದು ಹೆಸರು ಬಂದುದಕ್ಕೆ ಕಾರಣಭೂತವಾದ ಚಿನ್ನದ ಪ್ಲಕ್ಷವೃಕ್ಷವು ಅಲ್ಲಿರುವುದು. (ಪ್ಲಕ್ಷವೃಕ್ಷವೆಂದರೆ ಬಸುರಿಯ ಮರಕ್ಕೆ ಹೆಸರು)

ಯಥಾರಾಮಾದ್ಬಹಿರ್ಜ್ಞೇಯಾಃ ಪರಿಖಾಶ್ಚ ಸಮಂತತಃ ।
ಜಂಬುದ್ವೀಪಾಚ್ಚ ಕ್ಷಾರೋದಾದ್ಬಹಿರ್ದ್ವೀಪಸ್ತಥಾ ತ್ವಯಂ ॥ ೩ ॥

ಮೇರೋಃ ಪೂರ್ವದಿಶಾಯಾಂ ವೈ ತತ್ರ ವರ್ಷಂ ಶಿವಾಹ್ವಯಂ ।
ಆದೌ ಯಯೌ ರಾಮಚಂದ್ರಃ ಕ್ಷಣಾದೇವ ವಿಹಾಯಸಾ ॥ ೪ ॥

ನದೀ ಯತ್ರಾರುಣಾ ನಾಮ್ನೀ ಸರ್ವಪಾಪಪ್ರಣಾಶಿನೀ ।
ತಸ್ಯಾಂ ಸ್ನಾತ್ವಾ ರಘುಶ್ರೇಷ್ಠಃ ಶೀಘ್ರಂ ತದ್ವರ್ಷಪಂ ಯಯೌ ॥ ೫ ॥

ತೇನ ವರ್ಷಾಧಿಪೇನೈವ ಯುದ್ಧಮಾಸೀತ್ಸುದಾರುಣಂ ।
ತಂ ಜಿತ್ವಾ ಪಂಚಮಾಸೈಶ್ಚ ತೇನ ಪಾರ್ಥಿವಸತ್ತಮೈಃ ॥ ೬ ॥

---

೩. ತೋಟಕ್ಕೆ ಸುತ್ತಲೂ ಕಾಲುವೆಯು ಇರುವಂತೆ ಈ ಜಂಬೂದ್ವೀಪಕ್ಕೆ ಸುತ್ತಲೂ ಲವಣಸಮುದ್ರವು ಇರುವುದು. ಈ ಪ್ಲಕ್ಷದ್ವೀಪವು ಜಂಬೂದ್ವೀಪಕ್ಕಿಂತಲೂ ಆ ಲವಣಸಮುದ್ರಕ್ಕಿಂತಲೂ ಹೊರಗೆ ಇದ್ದುಕೊಂಡಿರುವುದು.

೪. ಮೇರುವಿನ ಪೂರ್ವದಿಕ್ಕಿನಲ್ಲಿ ಶಿವವರ್ಷವೆಂಬ ಭೂಪ್ರದೇಶವಿರುವುದು. ಅಲ್ಲಿಗೆ ಈ ಶ್ರೀರಾಮನು ಮೊದಲು ಆಕಾಶಮಾರ್ಗದಿಂದ ಪುಷ್ಪಕದಲ್ಲಿ ಹೋದನು.

೫. ಅಲ್ಲಿ ಪಾಪಗಳನ್ನೆಲ್ಲಾ ನಾಶಮಾಡುವ ಅರುಣಾನದಿಯು ಹರಿಯುತ್ತದೆ. ಶ್ರೀರಾಮನು ಮೊದಲು ಆ ಅರುಣಾನದಿಯಲ್ಲಿ ಸ್ನಾನವನ್ನು ಮಾಡಿ ಮುಂದೆ ಹೊರಟು ಆ ಶಿವವರ್ಷದ ರಾಜನಬಳಿಗೆ ಹೋದನು.

೬. ಅಲ್ಲಿ ಆ ರಾಜನೊಡನೆ ಘೋರವಾದ ಯುದ್ಧವು ನಡೆಯಿತು. ಅವನನ್ನು ಶ್ರೀರಾಮನು ಐದುತಿಂಗಳಕಾಲ ಯುದ್ಧಮಾಡಿ ಸೋಲಿಸಿದನು. ಅನಂತರ ಆ ರಾಜನು ಕಪ್ಪಕಾಣಿಕೆಗಳನ್ನು ಕೊಟ್ಟು ಗೌರವಿಸಿದನು.

ಪೂಜಿತೋ ರಘುನಾಥಸ್ತು ವಜ್ರಕೂಟಾಚಲಂ ಯಯೌ ।
ವಜ್ರಕೂಟಂ ಮಹಾಶ್ರೇಷ್ಠಂ ದ್ವಯೋಸ್ಸಾಗರಯೋಃ ಸ್ಥಿತಂ ॥ ೭ ॥

ಪರಸ್ಪರಂ ವರ್ಷಯೋಶ್ಚ ಸೀಮಾಭೂತಂ ದದರ್ಶ ಸಃ ।
ತಂ ಗಿರಿಂ ಪೃಷ್ಠತಃ ಕೃತ್ವಾ ವರ್ಷಂ ಯವಯಸಂ ಯಯೌ ॥ ೮ ॥

ನೃವಮ್ಣಾನದೀಜಲೇ ಸ್ನಾತ್ವಾ ಯಯೌ ಯವಯಸೇಶ್ವರಂ ।
ತೇನ ಸಂಪೂಜಿತೋ ರಾಮಸ್ತತಸ್ತದ್ವರ್ಷಪಾರ್ಥಿವೈಃ ॥ ೯ ॥

ಸಹಿತಃ ಪುಷ್ಪಕೇಣೇವಮುಪೇಂದ್ರಂ ಸೇನಪರ್ವತಂ ।
ದೃಷ್ಟ್ವಾ ಕೃತ್ವಾ ಪೃಷ್ಠತಸ್ತಂ ಸುಭದ್ರಂ ವರ್ಷಮಾಯಯೌ ॥ ೧೦ ॥

---

೭. ಹೀಗೆ ರಾಮನು ಅವರಿಂದ ಪೂಜಿತನಾಗಿ ವಜ್ರಕೂಟಾಚಲಕ್ಕೆ ಹೋದನು. ಈ ಭಾರತವರ್ಷಕ್ಕೂ, ಪ್ಲಕ್ಷವರ್ಷಕ್ಕೂ ಮೇರೆಗಳಾದ ಎರಡು ಸಾಗರಗಳ ನಡುವೆ ಈ ವಜ್ರಕೂಟಾಚಲವು ಇರುವುದು.

೮. ಈ ವಜ್ರಕೂಟಾಚಲವು ಭಾರತವರ್ಷಕ್ಕೂ ಪ್ಲಕ್ಷವರ್ಷಕ್ಕೂ ಮಧ್ಯದಲ್ಲಿರುವುದು. ಇದು ಎರಡು ವರ್ಷಗಳಿಗೂ ಮೇರೆಯಾಗಿರುವುದು. ಇದನ್ನು ಹಿಂದಕ್ಕೆ ಬಿಟ್ಟುಕೊಂಡು ಮುಂದೆ ಹೊರಟು ಯವಯಸವೆಂಬ ವರ್ಷಕ್ಕೆ ಹೋದನು.

೯. ಅಲ್ಲಿ ಹರಿಯುತ್ತಿದ್ದ ನೃವಮ್ಣಾನದಿಯಲ್ಲಿ ಸ್ನಾನಮಾಡಿ ಯವಯಸೇಶ್ವರನೆಂಬ ರಾಜನಬಳಿಗೆ ಹೋದನು. ಅವನು ರಾಮನನ್ನು ಗೌರವಿಸಿದನು.

೧೦. ಅನಂತರ ಆಯವಸೇಶ್ವರನೊಡನೆಯೂ ಮತ್ತಿತರರಾಜರೊಡನೆಯೂ ಪುಷ್ಪಕದಲ್ಲಿ ಕುಳಿತು ಹೊರಟು ಉಪೇಂದ್ರಸೇನಪರ್ವತಕ್ಕೆ ಹೋದನು. ಅಲ್ಲಿ ಆ ಪರ್ವತವನ್ನು ನೋಡಿಕೊಂಡು ಅಲ್ಲಿಂದ ಮುಂದೆ ಹೊರಟು ಸುಭದ್ರವರ್ಷಕ್ಕೆ ಹೋದನು.

ಆಂಗೀರಸೀನದೀತೋಯೇ ಸ್ನಾತ್ವಾ ಸ ರಘುನಾಯಕಃ ।
ವರ್ಷಾಧಿಪೇನ ಕೋಶೈಸ್ಸಂಪೂಜಿತಃ ಪಾರ್ಥಿವೈಸ್ಸಹ ॥ ೧೧ ॥

ಜ್ಯೋತಿಷ್ಮಂತಂ ಗಿರಿಂ ಗತ್ವಾ ತಂ ಕೃತ್ವಾ ಪೃಷ್ಠತಃ ಕ್ಷಣಾತ್ ।
ಶಾಂತಿವರ್ಷೇಥ ಸಾವಿತ್ರೀನದೀತೋಯೇ ವಿಗಾಹ್ಯ ಚ ॥ ೧೨ ॥

ತದ್ವರ್ಷೇಶಂ ನೃಪಂ ಜಿತ್ವಾ ತಥಾ ತದ್ವರ್ಷಸಂಸ್ಥಿತಾನ್ ।
ನೃಪಾನ್ ಜಿತ್ವಾ ಕ್ಷಣಾದೇವ ಸುವರ್ಣಂ ಪರ್ವತಂ ಯಯೌ ॥ ೧೩ ॥

ತತೋ ಗತ್ವಾ ಕ್ಷೇಮವರ್ಷೇ ಸುಪ್ರಭಾತಾನದೀಜಲೇ ।
ಸ್ನಾತ್ವಾ ರಾಮಃ ಕ್ಷೇಮಪೇಣ ಸ್ವಕೋಶೈಃ ಪರಿಪೂಜಿತಃ ॥ ೧೪ ॥

---

೧೧. ಅಲ್ಲಿ ಆಂಗೀರಸ ಎಂಬ ನದಿಯಲ್ಲಿ ಸ್ನಾನಮಾಡಿದನು. ಅನಂತರ ಅಲ್ಲಿನ ರಾಜನನ್ನು ನೋಡಲು ಅವನು ರಾಮನನ್ನು ಗೌರವಿಸಿ ಕಪ್ಪಕಾಣಿಕೆಗಳನ್ನು ಕೊಟ್ಟನು.

೧೨. ಅಲ್ಲಿಂದ ಮುಂದೆ ಜೋತಿಷ್ಮಂತವೆಂಬ ಪರ್ವತಕ್ಕೆ ಹೋದನು. ಅದನ್ನು ನೋಡಿಕೊಂಡು ಮುಂದೆ ಹೊರಟನು. ಮುಂದೆ ಶಾಂತಿವರ್ಷಕ್ಕೆ ಹೋದನು. ಅಲ್ಲಿ ಸಾವಿತ್ರೀನದಿಯು ಹರಿಯುತ್ತಿರುವುದು. ಅದರಲ್ಲಿ ಸ್ನಾನ ಮಾಡಿದನು.

೧೩. ಅಲ್ಲಿ ಆ ಶಾಂತಿವರ್ಷೇಶ್ವರನನ್ನು ನೋಡಲು ಅವನು ಯುದ್ಧಕ್ಕೆ ಬಂದನು. ಅವನನ್ನೂ ಆ ವರ್ಷದಲ್ಲಿರುವ ರಾಜರನ್ನೂ ರಾಮನು ಯುದ್ಧದಲ್ಲಿ ಜಯಿಸಿದನು. ಅವರಿಂದ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಮುಂದೆ ಹೊರಟು ಸುವರ್ಣಪರ್ವತಕ್ಕೆ ಹೋದನು.

೧೪. ಆ ಪರ್ವತವನ್ನು ನೋಡಿಕೊಂಡು ಅಲ್ಲಿಂದ ಹೊರಟು ಕ್ಷೇಮವರ್ಷಕ್ಕೆ ಹೋದನು. ಅಲ್ಲಿ ಸುಪ್ರಭಾತಾನದಿಯಿರುವುದು. ಅದರಲ್ಲಿ ಸ್ನಾನಮಾಡಿ ಅಲ್ಲಿನ ರಾಜನನ್ನು ನೋಡಲು ಆ ಕ್ಷೇಮವರ್ಷದ ರಾಜನು ರಾಮನಿಗೆ ಕಪ್ಪಕಾಣಿಕೆ ಕೊಟ್ಟು ಭಂಡಾರವನ್ನೂ ಕೊಟ್ಟು ಪೂಜಿಸಿದನು.

ಹಿರಣ್ಯಷ್ಠೀವನಾಮಾನಂ ಗಿರಿಂ ರಮ್ಯಂ ವಿಲಂಘ್ಯ ಚ ।
ವರ್ಷೇ ಮೃತೇ ತನ್ನೃಪೇಣ ಪಾರ್ಥಿವೈಃ ಪರಿಪೂಜಿತಃ ॥ ೧೫ ॥

ಋತಂಭರಾನದೀತೋಯೇ ಚಕಾರ ಸ್ನಾನಮಾದರಾತ್ ।
ಮೇಘಮಾಲಂ ಗಿರಿಂ ತ್ಯಕ್ತ್ವಾ ಪೃಷ್ಠತಃ ಪುಷ್ಪಕೇಣ ಹಿ ॥ ೧೬ ॥

ವರ್ಷೇಽಭಯೇ ತನ್ನೃಪತಿಂ ಕ್ಷಣಾಜ್ಜಿತ್ವಾ ರಣೇ ಪ್ರಭುಃ ।
ಸತ್ಯಂಭರಾನದೀತೋಯೇ ಸ್ನಾತ್ವಾ ಸ ರಘುಸತ್ತಮಃ ॥ ೧೭ ॥

ಸುಚಂದ್ರಾಖ್ಯಂ ನೃಪಂ ಪ್ಲಕ್ಷದ್ವೀಪೇಶಂ ತೀಕ್ಷ್ಣಸಂಗರೈಃ ।
ಕೃತ್ವಾ ವೈ ಸ್ವಪದಾಕ್ರಾಂತಂ ಸಮಂ ತದ್ದ್ವೀಪಪಾರ್ಥಿವೈಃ ॥ ೧೮ ॥

---

೧೫. ಅಲ್ಲಿಂದ ಮುಂದೆ ಹೊರಟು ಹಿರಣ್ಯಷ್ಠೀವನವೆಂಬ ಪರ್ವತಕ್ಕೆ ಹೋದನು. ಅದನ್ನು ನೋಡಿಕೊಂಡು ಅಮೃತವರ್ಷವೆಂಬ ಭಾಗಕ್ಕೆ ಹೋದನು. ಅಲ್ಲಿ ಅಮೃತವರ್ಷದ ರಾಜನೂ ಉಳಿದ ಸಾಮಂತರಾಜರೂ ರಾಮನನ್ನು ಪೂಜಿಸಿದರು.

೧೬. ಅಲ್ಲಿದ್ದ ಋತುಂಭರವೆಂಬ ನದಿಯಲ್ಲಿ ಸ್ನಾನಮಾಡಿ ಅಲ್ಲಿಂದ ಮುಂದೆ ಮೇಘಮಾಲೆಯೆಂಬ ಪರ್ವತಕ್ಕೆ ಹೋಗಿ ಅದನ್ನು ನೋಡಿಕೊಂಡು ಮುಂದಕ್ಕೆ ಹೋದನು.

೧೭. ಅಲ್ಲಿ ಅಭಯುವರ್ಷವುಸಿಕ್ಕಿತು. ಅದರ ರಾಜನು ಯುದ್ಧಕ್ಕೆ ಸಿದ್ಧನಾಗಿ ಬರಲು ರಾಮನು ಯುದ್ಧದಲ್ಲಿ ಅವನನ್ನು ಜಯಿಸಿದನು ಅವನಿಂದ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಅಲ್ಲಿರುವ ಸತ್ಯಂಭರಾನದಿಯಲ್ಲಿ ಸ್ನಾನ ಮಾಡಿದನು.

೧೮. ಮುಂದೆ ಹೊರಟು ಪ್ಲಕ್ಷದ್ವೀಪಕ್ಕೆ ಹೋದನು. ಆ ಪ್ಲಕ್ಷದ್ವೀಪಾಧಿಪತಿಯಾದ ಸುಚಂದ್ರನು ಯುದ್ಧಕ್ಕೆ ಬರಲು ಅವನೊಡನೆ ಘೋರವಾದ ಯುದ್ಧವು ನಡೆಯಿತು. ಅವನನ್ನು ಸೋಲಿಸಿ ಅವನಿಂದಲೂ ಉಳಿದ ರಾಜರಿಂದಲೂ ಕಪ್ಪಕಾಣಿಕೆಗಳನ್ನು ತೆಗೆದುಕೊಂಡನು.

ಮಣಿಕೂಟಂ ಗಿರಿವರಂ ಸಮುತಿಕ್ರಮ್ಯ ವೈ ಕ್ಷಣಾತ್ ।
ಇಕ್ಷುರಸೋದನಾಮಾನಂ ದ್ವಿಲಕ್ಷಯೋಜನಂ ಪರಂ ॥ ೧೯ ॥

ತೀರ್ತ್ವಾ ತಂ ಸಾಗರಂ ಭೀಮಂ ಪ್ಲಕ್ಷಸ್ಯ ಪರೀಖೋಪಮಂ ।
ಸ್ವಪಥಾ ಶಾಲ್ಮಲೀದ್ವೀಪಂ ಚತುರ್ಲಕ್ಷಮಿತಂ ಯಯೌ ॥ ೨೦ ॥

ದ್ವೀಪಾಖ್ಯಾಕೃಚ್ಚ ಯತ್ರಾಸ್ತಿ ಶಾಲ್ಮಲೀದ್ವೀಪಪಾದಪಃ ।
ಯತ್ರೋಪಾಸ್ಯಶ್ಚ ಸೋಮೋಸ್ತಿ ತತ್ರಸ್ಥಾಸ್ತದುಪಾಸಕಾಃ ॥ ೨೧ ॥

ವಿಸ್ತಾರದ್ವೀಪಮಾನಾನಿ ದೀರ್ಘತಾಯಾಃ ಸ್ಮೃತಾನಿ ಚ ।
ತತ್ರ ಕ್ರಮೇಣ ವರ್ಷಾಣಿ ಕಥ್ಯಂತೇ ಪೂರ್ವವನ್ಮಯಾ ॥ ೨೨ ॥

---

೧೯. ಅನಂತರ ಅಲ್ಲಿಂದ ಮುಂದಕ್ಕೆ ಹೊರಟು ಮಣಿಕೂಟವೆಂಬ ಪರ್ವತಕ್ಕೆ ಹೋಗಿ ಅದನ್ನು ನೋಡಿದನು. ಅಲ್ಲಿಂದ ಮುಂದೆ ಇಕ್ಷುಸಮುದ್ರವು ಸಿಕ್ಕಿತು. ಆದು ಎರಡುಲಕ್ಷ ಯೋಜನಗಳ ವಿಸ್ತಾರವುಳ್ಳದ್ದು.

೨೦. ಪ್ಲಕ್ಷದ್ವೀಪಕ್ಕೆ ಅಗಳಿನಂತಿರುವ ಇಕ್ಷುಸಮುದ್ರವನ್ನು ಕ್ಷಣಕಾಲದಲ್ಲಿ ದಾಟಿದನು. ಅಲ್ಲಿ ಶಾಲ್ಮಲೀದ್ವೀಪವು ಸಿಕ್ಕಿತು. ಅದು ನಾಲ್ಕುಲಕ್ಷ ಹರಿದಾರಿಗಳ ವಿಸ್ತೀರ್ಣವುಳ್ಳದ್ದು. ಅಲ್ಲಿಗೆ ಹೋದನು.

೨೧. ಆ ದ್ವೀಪಕ್ಕೆ ಶಾಲ್ಮಲಿಯೆಂಬ ಹೆಸರನ್ನು ಉಂಟುಮಾಡುತ್ತಿರುವ ಶಾಲ್ಮಲಿ (ಬೂರಗ)ಮರವು ಅಲ್ಲಿರುವುದು. ಅಲ್ಲಿ ಸೋಮನೆಂಬ ದೇವರಿರುವನು. ಆ ದ್ವೀಪದವರು ಅವನನ್ನು ಸೇವಿಸುವರು.

೨೨. ಆ ದ್ವೀಪವು ಉದ್ದದಲ್ಲಿಯೂ ಅಗಲದಲ್ಲಿಯೂ ಹಿಂದೆ ಹೇಳಿದ ದ್ವೀಪಗಳಂತೆ ವಿಸ್ತಾರವಾಗಿಯೇ ಇರುವುದು. ಇಲ್ಲಿರತಕ್ಕ ವರ್ಷಗಳನ್ನು ಹಿಂದಿನಂತೆಯೇ ಹೇಳುತ್ತೇನೆ.

ಮೇರೋಃ ಪೂರ್ವದಿಗಾರಭ್ಯ ಸರ್ವತ್ರ ಕ್ರಮ ಉಚ್ಯತೇ ।
ಸೂರೋಚನಂ ಸೌಮನಸ್ಯಂ ತಥಾ ರಮಣಕಂ ಶುಭಂ ॥ ೨೩ ॥

ದೇವವರ್ಷಂ ಪಾರಿಭದ್ರಮಾಪ್ಯಾಯನಮನುತ್ತಮಂ ।
ಅವಿಜ್ಞಾತಂ ಸಪ್ತಮಂ ಚ ಸಪ್ತವರ್ಷಾಣಿ ವೈ ಕ್ರಮಾತ್ ॥ ೨೪ ॥

ಅನೂಮತೀ ಸಿನೀವಾಲೀ ತಥೈವ ಚ ಸರಸ್ವತೀ ।
ಕುಹೂಶ್ಚ ರಜನೀನಂದಾರಾಕಾನದ್ಯಃ ಪ್ರಕೀರ್ತಿತಾಃ ॥ ೨೫ ॥

ಶತಶೃಂಗೋ ವಾಮದೇವೋ ಕುಂದಶ್ಚ ಕುಮುದಸ್ತಥಾ ।
ಪುಷ್ಪವರ್ಷಃ ಪಂಚಮಶ್ಚ ಸಹಸ್ರಶ್ರುತಿರುತ್ತಮಃ ॥ ೨೬ ॥

ಸ್ವರಸಃ ಪರ್ವತಾಸ್ಸಪ್ತ ಜ್ಞೇಯಾ ಸೀಮಾಸು ವೈ ಕ್ರಮಾತ್ ।
ಏತೇಷು ಸಪ್ತವರ್ಷೇಷು ವರ್ಷಪಾಲಾನ್ ವಿಜಿತ್ಯ ಸಃ ॥ ೨೭ ॥

೨೩–೨೪. ಮೇರುಪರ್ವತದ ಪೂರ್ವದಿಕ್ಕಿನಿಂದ ಮೊದಲು ಮಾಡಿಕೊಂಡು ಹೇಳುತ್ತೇನೆ. ಸುರೋಚನ, ಸೌಮನಸ್ಯ, ರಮಣಕ, ದೇವವರ್ಷ, ಪಾರಿಭದ್ರ, ಆಪ್ಯಾಯನ, ಅವಿಜ್ಞಾತ. ಎಂಬುದಾಗಿ ಏಳುಪ್ರದೇಶಗಳಿರುವುವು.

೨೫. ಅನೂಮತಿ, ಸಿನೀವಾಲಿ, ಸರಸ್ವತಿ, ಕುಹೂ. ರಜನೀ, ನಂದಾ, ರಾಕಾ ಎಂಬುದಾಗಿ ಏಳುನದಿಗಳು ಇವೆ. ಏಳರಲ್ಲಿ ಒಂದೊಂದೂ ಮಹತ್ತಾಗಿ ಪ್ರವಹಿಸುತ್ತವೆ.

೨೬–೨೮. ಶತಶೃಂಗ, ವಾಮದೇವ, ಕುಂದ, ಕುಮುದ, ಪುಷ್ಪವರ್ಷ, ಸಹಸ್ರಶ್ರುತಿ, ಸ್ವರಸ, ಇವೇಳೂ ಇಲ್ಲಿನ ಎಲ್ಲೆಯ ಪರ್ವತಗಳು. ರಾಮನು ಈ ಏಳು ವರ್ಷಗಳಲ್ಲಿಯೂ ಅಲ್ಲಿನ ರಾಜರನ್ನು ಗೆದ್ದನು. ಸುಬಾಹುವೆಂಬ ಆ ದ್ವೀಪದ

ಜಿತ್ವಾ ದ್ವೀಪೇಶ್ವರಂ ರಾಮಃ ಸುಬಾಹುಂ ಮುದಮಾಯಯೌ ।
ಸುರೋದಂ ಚ ಚತುರ್ಲಕ್ಷಮಿತಂ ತೀರ್ತ್ವಾ ಪಯೋನಿಧಿಂ ॥ ೨೮ ॥

ಕುಶದ್ವೀಪಮಷ್ಟಲಕ್ಷಮಿತಂ ರಾಮೋ ಯಯೌ ಕ್ಷಣಾತ್ ।
ತತ್ರೋಪಾಸ್ಯೋ ಜಾತವೇದಾಃ ಸರ್ವೇಷಾಂ ದ್ವೀಪವಾಸಿನಾಂ ॥ ೨೯ ॥

ದ್ವೀಪಾಖ್ಯಾಕೃಚ್ಚ ಯತ್ರಾಸ್ತಿ ಕುಶಸ್ತಂಭಸ್ಸುರೈಃ ಕೃತಃ ।
ತತ್ರ ಕ್ರಮೇಣ ವರ್ಷಾಣಿ ಕೀರ್ತ್ಯಂತೇ ಸಪ್ತ ವೈ ಮಯಾ ॥ ೩೦ ॥

ವಸುಂ ಚ ವಸುದಾನಂ ಚ ತಥಾ ದೃಢರುಚಿಂ ಶುಭಂ ।
ನಾಭಿಗುಪ್ತಂ ತಥಾ ಸತ್ಯವ್ರತಂ ವಿವಿಕ್ತಮುತ್ತಮಂ ॥ ೩೧ ॥

ವಾಮದೇವಂ ಸಪ್ತಮಂ ಚ ವರ್ಷಂ ಜ್ಞೇಯಂ ಕ್ರಮೇಣ ಹಿ ।
ರಸಕುಲ್ಯಾ ಮಧುಕುಲ್ಯಾ ಮಿತ್ರವಿಂದಾ ನದೀ ಶುಭಾ ॥ ೩೨ ॥

ಚಕ್ರೇಶ್ವರನನ್ನೂ ಗೆದ್ದನು. ಅವನಿಂದ ಕಪ್ಪಕಾಣಿಕೆಗಳನ್ನು ತೆಗೆದುಕೊಂಡನು. ಅಲ್ಲಿಂದ ಮುಂದೆ ಹೊರಟು ನಾಲ್ಕುಲಕ್ಷ ಯೋಜನಗಳ ವಿಸ್ತಾರವುಳ್ಳ ಸುರಾಸಮುದ್ರವನ್ನು ದಾಟಿದನು.

೨೯. ಮುಂದೆ ಕುಶದ್ವೀಪವು ಸಿಕ್ಕಿತು. ಅದು ಎಂಟುಲಕ್ಷ ಯೋಜನಗಳ ವಿಸ್ತೀರ್ಣವಿರುವುದು. ಅಲ್ಲಿಗೆ ಹೋದನು. ಅಲ್ಲಿನ ದೇವತೆಯು ಜಾತವೇದನು. (ಅಗ್ನಿಯು) ಆ ದ್ವೀಪದವರೆಲ್ಲರೂ ಆ ಸ್ವಾಮಿಯನ್ನು ಸೇವಿಸುವರು.

೩೦. ಆ ದ್ವೀಪಕ್ಕೆ ಕುಶದ್ವೀಪವೆಂದು ಹೆಸರು ಬರಲು ಕಾರಣವಾದ ಕುಶಸ್ತಂಬವು ಅಲ್ಲಿರುವುದು. ಅದನ್ನು ದೇವತೆಗಳೇ ಮಾಡಿರುವರು. ಆ ಕುಶದ್ವೀಪದಲ್ಲಿರುವ ಏಳುವರ್ಷಗಳನ್ನೂ ಹೇಳುತ್ತೇನೆ. ಕೇಳು.

೩೧–೩೩. ವಸು, ವಸುದಾನ, ದೃಢರುಚಿ, ನಾಭಿಗುಪ್ತ, ಸತ್ಯವ್ರತ, ವಿವಿಕ್ತ, ವಾಮದೇವ ಎಂಬಿವು ಅಲ್ಲಿರುವ ವರ್ಷಗಳ ನಾಮಗಳು. ರಸಕುಲ್ಯ,

ಶ್ರುತವಿಂದಾ ದೇವಗರ್ಭಾ ತಥಾ ಚೈವ ಘೃತಚ್ಯುತಾ ।
ಮಂತ್ರಮಾಲಾ ಕ್ರಮೇಣೈವ ನದ್ಯಸ್ಸಪ್ತಸು ವೈ ಕ್ರಮಾತ್ ॥ ೩೩ ॥

ಚತುಶ್ಶೃಂಗಶ್ಚ ಕಪಿಲಶ್ಚಿತ್ರಕೂಟೋ ಮನೋರಮಃ ।
ದೇವಾನೀಕ ಊರ್ಧ್ವರೋಮಾ ದ್ರವಿಣಶ್ಚಕ್ರ ಈರಿತಃ ॥ ೩೪ ॥

ಏತೇ ಸೀಮಾಸು ವರ್ಷಾಣಾಂ ಗಿರಯಸ್ಸಪ್ತ ವೈ ಕ್ರಮಾತ್ ।
ಏತೇಷು ಸಪ್ತವರ್ಷೇಷು ಸಂಸ್ಥಿತಾನ್ ಪಾರ್ಥಿವೋತ್ತಮಾನ್ ॥ ೩೫ ॥

ರಾಘವಸ್ಸಂಗರೇ ಜಿತ್ವಾ ಲಬ್ಧ್ವಾ ಕೀರ್ತಿಮನುತ್ತಮಾಂ ।
ಕುಶದ್ವೀಪಪತಿಂ ಜಿತ್ವಾ ಮಹಾಸೇನಂ ತುತೋಷ ಸಃ ॥ ೩೬ ॥

ಅಷ್ಟಲಕ್ಷಮಿತಂ ತೀರ್ತ್ವಾ ಘೃತೋದಂ ಸಾಗರೋತ್ತಮಂ ।
ಕ್ರೌಂಚದ್ವೀಪಂ ಯಯೌ ರಾಮಃ ಪುಷ್ಪಕೇಣಾತಿಭಾಸ್ವತಾ ॥ ೩೭ ॥

ಮಧುಕುಲ್ಯ, ಮಿತ್ರವಿಂದ, ಶ್ರುತವಿಂದ, ದೇವಗರ್ಭ, ಘೃತ ಚ್ಯುತ, ಮಂತ್ರಮಾಲೆ ಎಂಬ ಏಳುನದಿಗಳು ಆ ಏಳುವರ್ಷಗಳಲ್ಲಿಯೂ ಕ್ರಮವಾಗಿರುವುವು.

೩೪-೩೫ ಚತುಶ್ಶೃಂಗ, ಕಪಿಲ, ಚಿತ್ರಕೂಟ, ದೇವಾನೀಕ, ಊರ್ಧ್ವರೋಮ, ದ್ರವಿಣ, ಚಕ್ರ ಇವು ಏಳುಪರ್ವತಗಳೂ ಈ ಏಳುವರ್ಷಗಳಲ್ಲಿಯೂ ಸೀಮಾಪರ್ವತಗಳಾಗಿರುವುವು. ಬಲಿಷ್ಠರಾದ ರಾಜರು ಇವುಗಳಲ್ಲಿ ರಾಜ್ಯಭಾರ ಮಾಡುತ್ತಿದ್ದರು.

೩೬. ಆ ಏಳುವರ್ಷದ ರಾಜರೆಲ್ಲರನ್ನೂ ರಾಮನು ಯುದ್ಧದಲ್ಲಿ ಜಯಿಸಿ ಉತ್ತಮವಾದ ಕೀರ್ತಿಯನ್ನು ಹೊಂದಿದನು. ಆನಂತರ ಆ ಕುಶದ್ವೀಪಕ್ಕೆ ಚಕ್ರವರ್ತಿಯಾದ ಮಹಾಸೇನನನ್ನು ಜಯಿಸಿ ರಾಮನು ಬಹುವಾಗಿ ಸಂತುಷ್ಟನಾದನು.

೩೭. ಅಲ್ಲಿಂದ ಮುಂದೆ ಹೊರಡಲು ಘೃತಸಮುದ್ರವು ಸಿಕ್ಕಿತು. ಅದು ಎಂಟುಲಕ್ಷ ಯೋಜನಗಳ ವಿಸ್ತಾರವುಳ್ಳದ್ದು. ರಾಮನು ಅದನ್ನು ದಾಟಿ ಕ್ರೌಂಚದ್ವೀಪಕ್ಕೆ ಹೋದನು.

ಕುಶದ್ವೀಪಾಚ್ಚ ಯೋ ಜ್ಞೇಯೋ ದ್ವಿಗುಣೋ ದ್ವೀಪ ಉತ್ತಮಃ ।
ದ್ವೀಪಾಖ್ಯಾಕೃಚ್ಚ ಯತ್ರಾಸ್ತಿ ಕ್ರೌಂಚನಾಮಾ ಗಿರಿರ್ಮಹಾನ್ ॥ ೩೮ ॥

ಯತ್ರಾಸ್ತ್ಯಪೋಮಯೋ ದೇವೋ ಹರಿಸ್ತದ್ವೀಪವಾಸಿನಾಂ ।
ತತ್ರಾಪಿ ಸಪ್ತವರ್ಷಾಣಿ ಕಥ್ಯಂತೇಽತ್ರ ಕ್ರಮೇಣ ಹಿ ॥ ೩೯ ॥

ಆಮಂ ಮಧುರುಹಂ ಮೇಘಪೃಷ್ಠಂ ಚೈವ ಮನೋಹರಂ ।
ಸುಧಾಮಾನಂ ಚ ಭ್ರಾಜಿಷ್ಠಂ ಲೋಹಿತಾರ್ಣಂ ವನಸ್ಪತಿಂ ॥ ೪೦ ॥

ಏತಾನಿ ಸಪ್ತವರ್ಷಾಣಿ ಜ್ಞಾತವ್ಯಾನ್ಯುತ್ತಮಾನಿ ಹಿ ।
ವರ್ಧಮಾನೋ ಭೋಜನಶ್ಚ ತಥೋಪಬರ್ಹಣೋ ಮಹಾನ್ ॥ ೪೧ ॥

ನಂದಶ್ಚ ನಂದನಶ್ರೇಷ್ಠಃ ಸರ್ವತೋಭದ್ರ ಏವ ಚ ।
ಶುಕ್ಲಾಃ ಸಪ್ತಾಚಲಾಃ ಪ್ರೋಕ್ತಾಃ ಸೀಮಾಸು ಪರಮಾಶ್ಮಭಾಃ ॥ ೪೨ ॥

---

೩೮. ಆ ಕ್ರೌಂಚದ್ವೀಪವು ಕುಶದ್ವೀಪಕ್ಕಿಂತಲೂ ಎರಡರಷ್ಟು ವಿಸ್ತಾರವಾಗಿರುವುದು. ಎಂದರೆ ಹದಿನಾರುಲಕ್ಷ ಯೋಜನಗಳ ವಿಸ್ತಾರವಿರುವುದು. ಆ ದ್ವೀಪಕ್ಕೆ ಕ್ರೌಂಚದ್ವೀಪವೆಂದು ಹೆಸರಿಗೆ ಕಾರಣವಾದ ಕ್ರೌಂಚಮಹಾಪರ್ವತವು ಅಲ್ಲಿರುವುದು.

೩೯. ಆ ಕ್ರೌಂಚದ್ವೀಪದಲ್ಲಿ ಹರಿಯು ದೇವತೆಯು. ಅವನು ಅಲ್ಲಿ ನೀರಿನ ಸ್ವರೂಪದಿಂದಿರುವನು. ಅದನ್ನು ಆ ದ್ವೀಪವಾಸಿಗಳೆಲ್ಲರೂ ಸೇವಿಸುವರು ಅಲ್ಲಿಯೂ ಕೂಡ ಏಳುವರ್ಷಗಳು ಇರುವುವು. ಅದನ್ನು ಕ್ರಮವಾಗಿ ಹೇಳುತ್ತೇನೆ.

೪೦–೪೨. ಆಮ, ಮಧುರುಹ, ಮೇಘಪೃಷ್ಠ, ಸುಧಾಮಾನ ಭ್ರಾಜಿಷ್ಠ. ಲೋಹಿತಾರ್ಣ, ವನಸ್ಪತಿ, ಇವೇ ಕ್ರೌಂಚದ್ವೀಪದ ಏಳುವರ್ಷಗಳು. ವರ್ಧಮಾನ ಭೋಜನ, ಉಪಬರ್ಹಣ, ಮಹಾಪರ್ವತ, ನಂದ, ನಂದನಶ್ರೇಷ್ಠ, ಸರ್ವತೋಭದ್ರ ಇವು ಏಳು ಅಲ್ಲಿಯ ವರ್ಷಗಳ ಎಲ್ಲೆಯ ಪರ್ವತಗಳು. ಇವೆಲ್ಲವೂ

ಅಭಯಾ ಚಾಮೃತೌಘಾ ಚ ತಥಾ ಚೈವಾರ್ಯಕಾ ಶುಭಾ ।
ತಥಾ ತೀರ್ಥವತೀ ರಮ್ಯಾ ವೃತ್ತೀ ರೂಪವತೀ ತಥಾ ॥ ೪೩ ॥

ಪವಿತ್ರವತೀ ಪುಣ್ಯಾ ನ್ಯೈ ಶುಕ್ಲೇತಿ ಸಪ್ತಕೀರ್ತಿತಾಃ ।
ಸಪ್ತವರ್ಷೇಷು ಸದ್ಯಶ್ಚ ಸ್ನಾನಾತ್ಪಾತಕನಾಶನಾಃ ॥ ೪೪ ॥

ಏತೇಷು ಸಪ್ತವರ್ಷೇಷು ಪಾರ್ಥಿವೇಭ್ಯೋ ನಿಜಂ ಪ್ರಭುಃ ।
ಕರಭಾರಂ ಪೃಥಗ್ಲಬ್ಧ್ವಾ ಕೋಶಾದ್ಯೈಃ ಪರಿಪೂಜಿತಃ ॥ ೪೫ ॥

ಕ್ರೌಂಚದ್ವೀಪಪತಿಂ ಯುದ್ಧೇ ಜಿತ್ವಾ ತಂ ಕಂಜಲೋಚನಂ ।
ಹಸ್ತ್ಯಷ್ಟ್ರರಥತುರಗೈಃ ಕೋಶಾದ್ಯೈಃ ತೇನ ಪೂಜಿತಃ ॥ ೪೬ ॥

ಸ್ತುತೋ ಮಾಗಧವರ್ಯೈಶ್ಚ ನಿತರಾಂ ಮುದಮಾಪ ಸಃ ।
ತತಸ್ತೀರ್ತ್ವಾ ತು ಕ್ಷೀರೋದಂ ಕ್ರೌಂಚದ್ವೀಪಸಮಂ ಮುದಾ ॥ ೪೭ ॥

ಬೆಳ್ಳಗಿರುವುವು. ಅಭಯಾ, ಅಮೃತೌಘ, ಆರ್ಯಕೆ, ತೀರ್ಥವತಿ, ರೂಪವತಿ, ಪವಿತ್ರವತಿ ಶುಕ್ಲಾ ಎಂಬುದಾಗಿ ಆ ಏಳುವರ್ಷಗಳಲ್ಲಿಯೂ ಇರುವ ಏಳು ಪ್ರಸಿದ್ಧವಾದ ನದಿಗಳು. ಇವುಗಳಲ್ಲಿ ಸ್ನಾನಮಾಡಿದರೆ ಪಾಪಗಳೆಲ್ಲವೂ ನಾಶವಾಗುತ್ತದೆ.

೪೫. ಇಲ್ಲಿರುವ ಏಳುವರ್ಷಗಳ ರಾಜರಲ್ಲಿಯೂ ರಾಮನು ಬೇರೆ ಬೇರೆಯಾಗಿ ಕಪ್ಪಕಾಣಿಕೆಗಳನ್ನು ತೆಗೆದುಕೊಂಡನು. ಮತ್ತು ಅವರು ತಮ್ಮ ತಮ್ಮ ಭಂಡಾರಗಳನ್ನು ರಾಮನಿಗೆ ಒಪ್ಪಿಸಿದರು.

೪೬. ಕ್ರೌಂಚದ್ವೀಪಕ್ಕೆ ಚಕ್ರವರ್ತಿಯಾದ ಕಂಜಲೋಚನನೆಂಬ ಚಕ್ರವರ್ತಿಯನ್ನು ಜಯಿಸಿದನು. ಅವನು ರಾಮನಿಗೆ ಕಪ್ಪಕಾಣಿಕೆಗಳನ್ನು ಕೊಟ್ಟು ಆನೆ, ಕುದುರೆ, ಒಂಟೆ, ರಥಗಳನ್ನು ಅನೇಕವಾಗಿ ಕೊಟ್ಟು ಗೌರವಿಸಿದನು.

೪೭. ವಂದಿಗಳೂ ಮಾಗಧರೂ ಹೊಗಳಲು ರಾಮನು ಬಹು ಸಂತೋಷಗೊಂಡನು. ಅನಂತರ ಕ್ರೌಂಚದ್ವೀಪದಷ್ಟೆ ವಿಸ್ತಾರವುಳ್ಳ ಎಂದರೆ ಹದಿನಾರುಲಕ್ಷ ಯೋಜನಗಳ ವಿಸ್ತಾರಗಳುಳ್ಳ ಕ್ಷೀರಸಮುದ್ರವನ್ನು ಪುಷ್ಪಕದಲ್ಲಿ ದಾಟದನು.

ಶಾಕದ್ವೀಪಂ ಯಯೌ ರಾಮೋ ದ್ವಾತ್ರಿಂಶಲಕ್ಷಸಂಮಿತಂ ।
ದ್ವೀಪಾಖ್ಯಾಕೃಚ್ಚ ಯತ್ರಾಸ್ತಿ ಶಾಖವೃಕ್ಷೋತಿರಂಜನಃ ॥ ೪೮ ॥

ಯತ್ರೋಪಾಸ್ಯೋ ವಾಯುರೂಪೋ ಹರಿಸ್ತದ್ವೀಪವಾಸಿನಾಂ ।
ತತ್ರಾಪಿ ಸಪ್ತವರ್ಷಾಣಿ ಕಥ್ಯಂತೇ ಪೂರ್ವವನ್ಮಯಾ ॥ ೪೯ ॥

ಪುರೋಜವಂ ನಾಮ ವರ್ಷಂ ತಥಾ ತಚ್ಚ ಮನೋಜವಂ ।
ಪವಮಾನಂ ಮಹಚ್ಛ್ರೇಷ್ಠಂ ಧೂಮ್ರಾನೀಕಂ ಮನೋರಮಂ ॥ ೫೦ ॥

ಚಿತ್ರರೂಪಂ ಬಹುರೂಪಂ ವಿಶ್ವಾಧಾರಂ ತಥಾ ಸ್ಮೃತಂ ।
ಏವಂ ಸಪ್ತ ಸು ವರ್ಷಾಣಿ ನದ್ಯಶ್ಚಾಪಿ ಬ್ರವೀಮ್ಯಹಂ ॥ ೫೧ ॥

ಅನಘಾ ಚ ತಥಾಯುರ್ದಾ ಚೋಭಯಸೃಷ್ಟಿರೇವ ಚ ।
ತಥಾಪರಾಜಿತಾ ಪುಣ್ಯಾ ಶುಭಾ ಪಂಚನದೀ ಸ್ಮೃತಾ ॥ ೫೨ ॥

---

೪೮. ಮುಂದೆ ಹೋಗಲು ಶಾಕದ್ವೀಪವು ಸಿಕ್ಕಿತು. ಅದು ಮೂವತ್ತೆರಡುಲಕ್ಷ ಯೋಜನಗಳು ವಿಸ್ತಾರವಿರುವುದು. ಆ ದ್ವೀಪದ ಹೆಸರಿಗೆ ಕಾರಣವಾದ ಶಾಕವೃಕ್ಷವು ಅಲ್ಲಿರುವುದು. ಅದು ಬಹು ಮನೋಹರವಾದ ವೃಕ್ಷವು.

೪೯. ಅಲ್ಲಿನ ಜನರಿಗೆ ಉಪಾಸ್ಯದೇವತೆಯು ವಾಯುರೂಪನಾದ ಹರಿಯು. ಅಲ್ಲಿಯೂ ಕೂಡ ಏಳುವರ್ಷವಿಭಾಗಗಳಿವೆ. ಅವನ್ನು ಹಿಂದಿನಂತೆ ಹೇಳುತ್ತೇನೆ.

೫೦–೫೧. ಪುರೋಜವ, ಮನೋಜವ, ಪವಮಾನ, ಧೂಮ್ರಾನೀಕ ಚಿತ್ರರೂಪ, ಬಹುರೂಪ, ವಿಶ್ವಾಧಾರ, ಈ ರೀತಿಯಾಗಿ ಆ ಏಳುವರ್ಷಗಳ ಸೀಮಾಪರ್ವತಗಳಿರುವುವು. ನದಿಗಳನ್ನು ಹೇಳುತ್ತೇನೆ. ಕೇಳು.

೫೨–೫೩. ಅನಘಾ, ಆಯುರ್ದಾ, ಉಭಯಸೃಷ್ಟಿ, ಅಪರಾಜಿತೆ, ಪಂಚನದಿ

ಸಹಸ್ರಶ್ರುತಿರನ್ಯಾ ಸಾ ಪ್ರೋಕ್ತಾ ನಿಜಧೃತಿಸ್ತಥಾ ।
ಏವಂ ಸಪ್ತಸು ವರ್ಷೇಷು ಸಪ್ತನದ್ಯಶ್ಚ ಭಾವಹಾಃ ॥ ೫೩ ॥

ಊರುಶೃಂಗೋ ಬಲಭದ್ರಸ್ತಥಾನ್ಯಶ್ಶತಕೇಸರಃ ।
ಸಹಸ್ರಸ್ರೋತೋsನ್ಯಃ ಪ್ರೋಕ್ತೋ ದೇವಪಾಲೋ ಮಹಾಸನಃ ॥ ೫೪ ॥

ಈಶಾನಃ ಪರ್ವತಾಸ್ಸಪ್ತ ಸೀಮಾಸ್ವೇತೇ ಪ್ರಕೀರ್ತಿತಾಃ ।
ಏವಂ ಸಪ್ತಸು ವರ್ಷೇಷು ತತ್ರ ತತ್ರ ನೃಪೋತ್ತಮೈಃ ॥ ೫೫ ॥

ಪೂಜಿತೋ ರಘುನಾಥಸ್ಸ ಶಾಕದ್ವೀಪಪತಿಂ ರಣೇ ।
ಸುಂದರಾಖ್ಯಂ ನೃಪಂ ಯುದ್ಧೇ ಸಪ್ತಾಹೋಭಿರ್ಮಹಾಬಲಂ ॥ ೫೬ ॥

ಜಿತ್ವಾ ಸಂಪೂಜಿತಸ್ತೇನ ವಾದಯಾಮಾಸ ದುಂದುಭೀನ್ ।
ತೀರ್ತ್ವಾ ತಂ ದಧಿಮಂಡೋದಂ ದ್ವಾತ್ರಿಂಶಲ್ಲಕ್ಷಸಂಮಿತಂ ॥ ೫೭ ॥

ಸಹಸ್ರಶ್ರುತಿ, ನಿಜಧೃತಿ ಎಂಬದಾಗಿ ಏಳು ನದಿಗಳು ಇವೆ. ಈ ಏಳು ನದಿಗಳೂ ಏಳು ವರ್ಷಗಳಲ್ಲಿಯೂ ಹರಿಯುತ್ತವೆ.

೫೪-೫೫. ಊರುಶೃಂಗ ಬಲಭದ್ರ, ಶತಕೇಸರಿ, ಸಹಸ್ರಸ್ರೋತ, ದೇವಪಾಲ, ಮಹಾಸನ, ಈಶಾನ ಎಂಬುದಾಗಿ ಏಳು ಪರ್ವತಗಳಿರುವುವು. ಇವೆಲ್ಲವೂ ಏಳು ವರ್ಷಗಳಿಗೆ ಎಲ್ಲೆಯು ಪರ್ವತಗಳಾಗಿವೆ.

೫೬. ಈ ರೀತಿಯಾದ ಏಳು ವರ್ಷಗಳಲ್ಲಿಯೂ ಅಲ್ಲಲ್ಲಿರುವ ರಾಜರಿಂದ ಈ ರಾಮನು ಗೌರವಿತನಾದನು. ಮತ್ತು ಶಾಕದ್ವೀಪದ ಚಕ್ರವರ್ತಿಯಾದ ಸುಂದರನೆಂಬ ರಾಜನನ್ನು ಏಳುದಿನ ಯುದ್ಧಮಾಡಿ ಜಯಿಸಿದನು.

೫೭. ಅನಂತರ ಅವನಿಂದ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಗೌರವಿತನಾಗಿ ದುಂದುಭಿಗಳನ್ನು ಮೊಳಗಿಸಿದನು. ಅನಂತರ ಮುಂದೆ ಹೊರಟು ಮೂವತ್ತೆರಡುಲಕ್ಷ ಯೋಜನವುಳ್ಳ ಆ ದಧಿಮಂಡ ಸಮುದ್ರವನ್ನು ದಾಟಿದನು.

ಚತುಷ್ಷಷ್ಟಿಲಕ್ಷಮಿತಂ ಪುಷ್ಕರದ್ವೀಪಮಾಯಯೌ |
ಮೇಖಲಾವತ್ತಸ್ಯಮಧ್ಯೇ ಪರ್ವತಂ ಕಂಕಣೋಪಮಂ || ೫೮ ||

ಮಾನಸೋತ್ತರಾಚಲಾಖ್ಯಂ ತಂ ದದರ್ಶ ರಘೂದ್ವಹಃ |
ದ್ವೇ ವರ್ಷೆ ತತ್ರ ವೈ ಪ್ರೋಕ್ತೇ ಪೂರ್ವಂ ರಮಣಕಂ ಶುಭಂ || ೫೯ ||

ಅಪರಂ ತದ್ಧಾತಕೀತ್ಯಾಖ್ಯಾತಂ ತೇ ಕಂಕಣೋಪಮಂ |
ತದ್ವರ್ಷಪೌ ನೃಪೌ ಜಿತ್ವಾ ಜಿತ್ವಾ ದ್ವೀಪೇಶ್ವರಂ ಶುಭಂ || ೬೦ ||

ಉದಾರಾಂಗಾಹ್ವಯಂ ರಾಮಃ ಪರಾಂ ಮುದಮವಾಪ ಸಃ |
ದದರ್ಶ ಪುಷ್ಕರಂ ತತ್ರ ದ್ವೀಪಾಜ್ಯಾಕಾರಕಂ ವರಂ || ೬೧ ||

ಕಮಲಾಸನಾಸ್ಯ ಯಜ್ಜ್ಞೇಯಂ ಬ್ರಹ್ಮಣಃ ಪರಮಾಸನಂ |
ತತ್ರ ಕರ್ಮಮಯಂ ಲಿಂಗಂ ಬ್ರಹ್ಮಲಿಂಗಂ ಜನೋಽರ್ಚಯತ್ || ೬೨ ||

---

೫೮. ಮುಂದೆ ಬರಲು ಪುಷ್ಕರದ್ವೀಪವು ಸಿಕ್ಕಿತು. ಅಲ್ಲಿಗೆ ಬಂದನು. ಅದು ಅರವತ್ತನಾಲ್ಕುಲಕ್ಷ ಯೋಜನಗಳ ವಿಸ್ತಾರವಿರುವುದು. ಅದರಲ್ಲಿ ಕಂಕಣಾಕಾರವಾಗಿ ಮೇಖಲೆಯಂತೆ ಪ್ರಕಾಶಿಸುವ ಮಾನಸೋತ್ತರಾಚಲವೆಂಬ ಪರ್ವತವಿರುವುದು. ಅದನ್ನು ನೋಡಿದನು.

೫೯–೬೦. ಆ ಪುಷ್ಕರದ್ವೀಪದಲ್ಲಿ ಕಂಕಣಾಕಾರವಾದ ರಮಣಕ, ಧಾತಕಿ ಎಂಬ ಎರಡು ವರ್ಷಗಳಿರುವುವು. ರಾಮನು ಆ ವರ್ಷಗಳ ರಾಜರನ್ನು ಗೆದ್ದು ಅನಂತರ ಆ ಪುಷ್ಕರದ್ವೀಪದ ಚಕ್ರವರ್ತಿಯಾದ ಉದಾರಾಂಗನನ್ನೂ ಗೆದ್ದನು.

೬೧–೬೨. ಇದರಿಂದ ಅಪರಿಮಿತವಾದ ಸಂತೋಷವನ್ನು ಹೊಂದಿ ಆ ದ್ವೀಪಕ್ಕೆ ಆ ಹೆಸರು ಬರಲು ಕಾರಣವಾದ ಮಹಾಪುಷ್ಕರವನ್ನೂ ನೋಡಿದನು. ಪುಷ್ಕರವೆಂದರೆ ಕಮಲವು. ಇದು ಬ್ರಹ್ಮನಿಗೆ ಉತ್ತಮವಾದ ಆಸನವು. ಅಲ್ಲಿ ಕರ್ಮಮಯವೆಂಬ ಬ್ರಹ್ಮಲಿಂಗವನ್ನು ಜನಗಳು ಪೂಜಿಸುತ್ತಾರೆ.

ವರ್ಷಯೋರ್ಬಹುಲಾ ನದ್ಯಃ ಪಾಪನಿಕೃಂತನಕ್ಷಮಾಃ ।
ದಶಸಹಸ್ರಮಾನೇನ ಪ್ರಾಂಶುಃ ಜ್ಞೇಯಸ್ಸ ಪರ್ವತಃ ॥ ೬೩ ॥

ತಸ್ಮಿನ್ಗಿರೌ ಪೂರ್ವಭಾಗೇ ಪುರೀ ಮಘವತಶ್ಶುಭಾ ।
ದೇವಧಾನೀತಿ ನಾಮ್ನಾ ಸಾ ಮನೋಜ್ಞಾ ಜ್ವಲನಪ್ರಭಾ ॥ ೬೪ ॥

ಗಿರೌ ತಸ್ಮಿನ್ ದಕ್ಷಿಣಸ್ಯಾಂ ದಿಶಿ ಸ ಸಂಯಮಿನೀ ಪುರೀ ।
ಯಮರಾಜಸ್ಯ ಸಾಜ್ಞೇಯಾ ಮನೋಜ್ಞಾ ಜ್ವಲನಪ್ರಭಾ ॥ ೬೫ ॥

ಪಶ್ಚಿಮೇ ವರುಣಸ್ಯಾಥ ಪುರೀ ನಿಮ್ಲೋಚನೀ ಸ್ಮೃತಾ ।
ಉತ್ತರಸ್ಯಾಂ ತು ಕೌಬೇರೀ ಪುರೀ ಖ್ಯಾತಾ ವಿಭಾವರೀ ॥ ೬೬ ॥

ಭಿನ್ನಾಃ ಪುರ್ಯಸ್ತ್ವಿಮಾಜ್ಞೇಯಾ ಮೇರುಸ್ಥಾಭ್ಯಶ್ಶುಭಾವಹಾಃ ।
ಯಥಾ ನೃಪಸ್ಯ ಸ್ಥಾನಾನಿ ಹ್ಯನೇಕಾನಿ ತಥಾ ತ್ವಿಮಾಃ ॥ ೬೭ ॥

---

೬೩. ಈ ವರ್ಷದಲ್ಲಿ ಬಹಳ ನದಿಗಳು ಹರಿಯುತ್ತವೆ. ಅವೆಲ್ಲವೂ ಪಾಪಗಳನ್ನು ನಾಶಮಾಡುತ್ತವೆ. ಆ ಮಾನಸೋತ್ತರ ಪರ್ವತವು ಹತ್ತು ಸಾವಿರ ಯೋಜನಗಳ ಎತ್ತರವಾಗಿರುವುದು.

೬೪. ಆ ಮಾನಸೋತ್ತರ ಪರ್ವತದ ಪೂರ್ವಭಾಗದಲ್ಲಿ ಇಂದ್ರನ ಪಟ್ಟಣವಿರುವುದು. ಅದರ ಹೆಸರು ದೇವಧಾನವೆಂದು. ಬಹು ಮನೋಜ್ಞವಾಗಿರುವುದು. ಅಗ್ನಿಯಂತೆ ಪ್ರಕಾಶಮಾನವಾಗಿದೆ.

೬೫-೬೬. ಆ ಮಾನಸೋತ್ತರ ಪರ್ವತದ ದಕ್ಷಿಣದಲ್ಲಿ ಸಂಯಮನೀ ಎಂಬ ಯಮನ ಪಟ್ಟಣವಿರುವುದು. ಅದರ ಪಶ್ಚಿಮದಲ್ಲಿ ನಿಮ್ಲೋಚನೀ ಎಂಬ ವರುಣನ ಪಟ್ಟಣವಿರುವುದು ಉತ್ತರಕ್ಕೆ ಕುಬೇರನ ಪಟ್ಟಣವಾದ ವಿಭಾವರಿಯು ಇರುವುದು.

೬೭. ದಿಕ್ಪಾಲಕರಿಗೆ ಮೇರುವಿನಲ್ಲಿರುವ ಪಟ್ಟಣಗಳಲ್ಲದೆ ಇಲ್ಲಿಯೂ ಅನುಕೂಲಕ್ಕೋಸ್ಕರ ಅವರು ಇವನ್ನೂ ಕಟ್ಟಿಕೊಂಡಿರುವರು. ರಾಜರುಗಳು ತಮಗೆ ಅನುಕೂಲವಾದ ಎಡೆಗಳಲ್ಲಿ ಹೇಗೆ ಬೇರೆಬೇರೆ ಮನೆಗಳನ್ನು ಕಟ್ಟಿಕೊಳ್ಳುವರೋ ಹಾಗೆ ಇಲ್ಲಿಯೂ ಕಟ್ಟಿಕೊಂಡಿರುವರೆಂದು ತಿಳಿ.

ಸರ್ವೇ ಸೀಮಾಪರ್ವತಾಸ್ತೇ ವಿಸ್ತೀರ್ಣಾಶ್ಚ ಪೃಥಕ್ ಸ್ಮೃತಾಃ ।
ದ್ವಿಸಹಸ್ರಯೋಜನೈಶ್ಚ ಪ್ರೋಚ್ಯತಾಂ ತೇ ವದಾಮ್ಯಹಂ ॥ ೬೮ ॥

ಸರ್ವೇಷಾಂ ದಶಸಾಹಸ್ರೈರ್ಯೋಜನೈಃ ಪ್ರೋಚ್ಯತೇರಿತಾ ।
ತತಸ್ತೀರ್ತ್ವಾ ತು ಶುದ್ಧೋದಂ ಪುಷ್ಕರದ್ವೀಪಸಂಮಿತಂ ॥ ೬೯ ॥

ಸೀತಾಯಾಃ ಕೌತುಕಾರ್ಥಂ ಹಿ ಸ ಜಗಾಮ ರಘೂತ್ತಮಃ ।
ಉದ್ಧಾರಾರ್ಥಂ ಸ್ವಾವಲೋಕಾತ್ ತತ್ರ ಸ್ಥಾನಾಂ ನೃಣಾಮಪಿ ॥ ೭೦ ॥

ತತೋಗ್ರೇ ಭೂಮಿಂ ಸಾರ್ಧಸಪ್ತಲಕ್ಷೋತ್ತರಸಾರ್ಧಕೋಟಿಪರಿಮಿತಾಂ ಕ್ವಚಿತ್ಕ್ವಚಿತ್ಪ್ರಾಣಿಸಹಿತಾಂ ರಘುನಂದನೋ ದದರ್ಶ ॥ ೭೧ ॥

---

೬೮. ಇವೆಲ್ಲಕ್ಕೂ ಒಂದೊಂದು ಸೀಮಾ ಪರ್ವತಗಳಿರುವುವು. ಅವೆಲ್ಲವೂ ಒಂದೊಂದೂ ಎರಡುಸಾವಿರ ಯೋಜನಗಳ ವಿಸ್ತಾರವಾಗಿ ಇರುವುವು.

೬೯. ಅವೆಲ್ಲವೂ ಹತ್ತು ಸಾವಿರ ಯೋಜನಗಳಷ್ಟು ಎತ್ತರವಿರುವುವು. ಪುಷ್ಕರದ್ವೀಪದಷ್ಟು ಅಗಲವಿರುವ ಶುದ್ಧೋದಕವೆಂಬ ಸಮುದ್ರವನ್ನು ರಾಮನು ದಾಟಿದನು.

೭೦. ಸೀತೆಗೆ ಈ ಕೌತುಕಗಳನ್ನು ತೋರಿಸಲು ರಾಮನು ಮುಂದಕ್ಕೆ ಹೊರಟನು. ಇನ್ನೂ ಉತ್ತರಕ್ಕೆ ಅಲ್ಲಿನ ಜನಗಳನ್ನು ನೋಡಬೇಕೆಂದು ಹೊರಟನು. ಅಲ್ಲಿ ಅವರಿಗೆ ತನ್ನ ದರ್ಶನವನ್ನು ಕೊಟ್ಟು ಅವರನ್ನೂ ಕೃತಾರ್ಥರನ್ನಾಗಿ ಮಾಡಿದನು.

೭೧. ಇನ್ನು ಮುಂದೆ ಹೊರಡಲು ಆ ಪ್ರದೇಶವು ಒಂದುಕೋಟಿಯೂ ಐವತ್ತೇಳುಲಕ್ಷದ ಐವತ್ತುಸಾವಿರ ಯೋಜನಗಳಷ್ಟು ವಿಸ್ತಾರವಿರುವುದು. ಅಲ್ಲಿ ಕೆಲ ಕೆಲವು ಜಾಗದಲ್ಲಿ ಮಾತ್ರ ಪ್ರಾಣಿಗಳಿರುವುವು. ಇಂತಹ ಸ್ಥಳಗಳನ್ನು ರಾಮನು ನೋಡಿದನು.

ತೈಸ್ಸರ್ವೈರ್ಭೂಮಿನಿವಾಸಿಭಿಃ ಸಂಪೂಜಿತೋ ರಘುನಂದನೋ ವೈಥಿಲೀರಂಜನಾರ್ಥಮಗ್ರೇ ಜಗಾಮ ॥ ೭೨ ॥

ಸೈಕಚತ್ವಾರಿಂಶತ್ಸಹಸ್ರಸಪ್ತಲಕ್ಷೋತ್ತರಂ ಸಾರ್ಧ ಕೋಟಿ ಯೋಜನಪರಿಮಿತಂ ಮೇರುಮಾನಸೋತ್ತರಾಚಲಯೋರಂತರಾಲೇ ಮಾನಂ ಜ್ಞಾತವ್ಯಂ ॥ ೭೩ ॥

ತತೋಗ್ರೇ ಆದರ್ಶತಲೋಪಮಾಂ ಕಾಂಚನೀಂ ಭೂಮಿಂ ದೇವೈ ರಕ್ಷಿತಾಂ ಚೈಕೋನಚತ್ವಾರಿಂಶಲ್ಲಕ್ಷೋತ್ತರಕೋಟ್ಯಷ್ಟಪರಿಮಿತಾಂ ದೃಷ್ಟ್ವಾ ದೇವೈಸ್ಸಂಪೂಜಿತಃ ಶ್ರೀರಾಮಚಂದ್ರೋ ಮುದಮವಾಪ ॥೭೪॥

---

೭೨. ಅಲ್ಲಿರುವವರೆಲ್ಲರೂ ಈ ರಾಮನನ್ನು ಗೌರವಿಸಿದರು. ಹೀಗೆ ಗೌರವಿತನಾದ ರಾಮನು ಸೀತೆಗೆ ಮುಂದೆಯೂ ಹೋಗಿ ತೋರಿಸಬೇಕೆಂದು ಅಪೇಕ್ಷೆಯುಳ್ಳವನಾಗಿ ಹೊರಟನು.

೭೩. ಅದು ಮೇರುಮಾನುಸೋತ್ತರಾಚಲಗಳಿಗೆ ಮಧ್ಯದ ಪ್ರದೇಶವಾಗಿದ್ದಿತು. ಇದರ ವಿಸ್ತಾರವು ಒಂದು ಕೋಟಿಯೂ ಐವತ್ತೇಳು ಲಕ್ಷದ ನಾಲ್ವತ್ತೊಂದು ಸಾವಿರದ ಯೋಜನಗಳಿರುವುದು.

೭೪. ಇದನ್ನು ಅತಿಕ್ರಮಿಸಿ ಮುಂದೆ ಹೋಗಲು ಅಲ್ಲಿ ಕನ್ನಡಿಯಂತೆ ಇರುವ ಚಿನ್ನದ ಭೂಮಿಯನ್ನು ನೋಡಿದನು. ಅಲ್ಲಿ ದೇವತೆಗಳು ವಾಸಿಸುತ್ತಿದ್ದರು. ಅದರ ಪ್ರಮಾಣವು ಎಂಟು ಕೋಟಿಯೂ ಮೂವತ್ತೊಂಭತ್ತು ಲಕ್ಷ ಯೋಜನಗಳ ವಿಸ್ತಾರವಿರುವುದು. ಅಲ್ಲಿಗೆ ಹೋದನು. ಅಲ್ಲಿದ್ದ ದೇವತೆಗಳಿಂದ ಪೂಜೆಯನ್ನು ಹೊಂದಿ ಬಹು ಸಂತೋಷಗೊಂಡನು.

ತತೋಽಗ್ರೇ ಲೋಕಾಲೋಕಪರ್ವತಂ ಸಾರ್ಧದ್ವಾದಶಕೋಟಿ ಪರಿಮಿತಂ ವಿಸ್ತೀರ್ಣೋಚ್ಛ್ರತಯಾ ಭೂಮಿಪ್ರಾಕಾರೋಪಮಂ ಕೇನಾಪ್ಯ ವಿಲಂಘ್ಯಂ ಸ ರಘುನಂದನೋ ದದರ್ಶ ॥ ೭೫ ॥

ಯಸ್ಮಿನ್ ಅಷ್ಟದಿಕ್ಷು ದ್ವಿರದಪತಯಃ ಋಷಭಃ ಪುಂಡರೀಕಃ ಪುಷ್ಕರಚೂಡಃ ಕುಮುದೋ ವಾಮನಃ ಪುಷ್ಪದಂತೋಽಪರಾಜಿತಸ್ಸುಪ್ರತೀಕ ಇತ್ಯಷ್ಟ ದಿಗ್ಗಜಾಃ ಸಕಲಲೋಕಸ್ಥಿತಿಹೇತವಃ ॥ ೭೬ ॥

ತಸ್ಮಿನ್ನೇವ ಗಿರಿವರೇ ಭಗವಾನ್ ಪರಮಮಹಾಪುರುಷೋ ಮಹಾವಿಭೂತಿಪತಿಸ್ಸಕಲಲೋಕಹಿತಾಯ ಆಸ್ತೇ ॥ ೭೭ ॥

ತತಃ ಪರಸ್ತಾದ್ಯೋಗೇಶ್ವರಗತಿಂ ವಿಶುದ್ಧಾಮುದಾಹರಂತಿ॥ ೭೮ ॥

---

೭೫. ಅಲ್ಲಿಂದ ಮುಂದೆ ಹೋದರೆ ಲೋಕಾಲೋಕ ಪರ್ವತವಿರುವುದು. ಅದು ಭೂಮಿಗೆ ಕೋಟೆಯಂತಿರುವುದು. ಅದರ ವಿಸ್ತಾರವು ಹನ್ನೆರಡುವರೆ ಕೋಟಿಯೂ ಐವತ್ತು ಲಕ್ಷ ಯೋಜನಗಳಷ್ಟಿರುವುದು. ಅದನ್ನು ದಾಟಲು ಯಾರಿಗೂ ಸಾಧ್ಯವಿರುವುದಿಲ್ಲ. ಇದನ್ನು ಶ್ರೀರಾಮನು ನೋಡಿದನು.

೭೬. ಇದರ ಎಂಟು ದಿಕ್ಕುಗಳಲ್ಲಿಯೂ ಅಷ್ಟ ದಿಗ್ಗಜಗಳಾದ ಋಷಭ, ಪುಂಡರೀಕ, ಪುಷ್ಕರಚೂಡ, ಕುಮುದ, ವಾಮನ, ಪುಷ್ಪದಂತ, ಅಪರಾಜಿತ, ಸುಪ್ರತೀಕ ಎಂಬ ಆನೆಗಳಿರುವುವು. ಇವು ಪ್ರಪಂಚವೆಲ್ಲವನ್ನೂ ಹೊತ್ತುಕೊಂಡಿವೆ.

೭೭. ಆ ಪರ್ವತದಲ್ಲಿಯೇ ಭಗವಂತನೂ ಪರಮಪುರುಷನೂ, ಮಹಾಪುರುಷನೂ ಮತ್ತು ವಿಭೂತಿಯುಳ್ಳವನೂ ಆದ ಪರಮಾತ್ಮನುಎಲ್ಲ ಲೋಕಗಳಿಗೂ ಹಿತವನ್ನುಂಟುಮಾಡುತ್ತ ಸುಖದಿಂದ ಇರುವನು.

೭೮. ಅಲ್ಲಿಂದ ಮುಂದಕ್ಕೆ ಯೋಗೇಶ್ವರರು ಮಾತ್ರ ಹೋಗುವಂತಹ ಶುದ್ಧವಾದ ದಾರಿಯಿರುವುದೆಂದು ತಿಳಿದವರು ಹೇಳುತ್ತಾರೆ.

ಏವಂ ಪಂಚಾಶತ್ಕೋಟಿಗುಣಿತೋ ಭೂಗೋಳಕೋ ಜ್ಞೇಯಃ॥

ಏವಂ ಪಂಚವಿಂಶತಿಕೋಟಿಪರಿಮಿತಾಂ ಭೂಮಿಂ ಲೋಕಾಲೋಕಮಧ್ಯವರ್ತಿನೀಂ ಸ ರಘುನಂದನಃ ಸ್ವವಶಾಂ ಕೃತ್ವಾ ಆಕಾಶಪಥಾ ಪರಿವರ್ತ್ಯ ಸರ್ವಾನ್ ದ್ವೀಪಾನ್ ಪೂರ್ವವತ್ಸ್ಪರ್ಶ್ಯ ಜಂಬೂದ್ವೀಪೇ ಭಾರತವರ್ಷಮಧ್ಯಗತಾಂ ಸ್ವಾಂ ರಾಜಧಾನೀ ಮಯೋಧ್ಯಾಂ ಸಪ್ತದ್ವೀಪನೃಪಪರಿವೇಷ್ಟಿತೋಽನುಯಯೌ ॥ ೮೦ ॥

ತತೋ ರಾಮೋಽಯೋಧ್ಯಾನಿಕಟಂ ಗತ್ವಾ ದೂತೈಃ ಸ್ವಾಗಮನಂ ಸುಮಂತ್ರಂ ಸೂಚಯಾಮಾಸ ॥ ೮೧ ॥

ಸಮಯಾತಂ ರಾಮಚಂದ್ರಂ ಶ್ರುತ್ವಾ ಸ ಮಂತ್ರಿಸತ್ತಮಃ ।
ಅಯೋಧ್ಯಾಂ ಭೂಷಯಾಮಾಸ ಪತಾಕಾಧ್ವಜತೋರಣೈಃ ॥ ೮೨ ॥

---

೭೯ ಈ ರೀತಿಯಾಗಿ ಭೂಗೋಳವು ಐವತ್ತು ಕೋಟಿ ಯೋಜನಗಳ ಚದರವುಳ್ಳದ್ದೆಂದು ತಿಳಿಯಬೇಕು.

೮೦. ಲೋಕಾಪರ್ವತದ ಮಧ್ಯದಲ್ಲಿ ಇಪ್ಪತ್ತೈದು ಕೋಟಿ ವಿಸ್ತೀರ್ಣವುಳ್ಳ ಭೂಮಿಯನ್ನು ರಾಮನು ಸ್ವಾಧೀನವನ್ನಾಗಿ ಮಾಡಿಕೊಂಡನು. ಆಕಾಶಮಾರ್ಗದಿಂದಲೇ ಹಿಂದಿರುಗಿ ಎಲ್ಲಾ ದ್ವೀಪಗಳನ್ನೂ ಹಿಂದಿನಂತೆಯೇ ನೋಡುತ್ತ ಜಂಬೂದ್ವೀಪದಲ್ಲಿ ಭಾರತವರ್ಷದ ಮಧ್ಯದಲ್ಲಿರುವ ತನ್ನ ರಾಜಧಾನಿಯಾದ ಅಯೋಧ್ಯೆಯನ್ನು ಸಪ್ತದ್ವೀಪದ ರಾಜರುಗಳಿಂದ ಕೂಡಿಕೊಂಡು ಹೊಂದಿದನು.

೮೧. ರಾಮನು ಅಯೋಧ್ಯೆಯ ಹತ್ತಿರಕ್ಕೆ ಬಂದು ತಾನು ಬಂದಿರುವಿಕೆಯನ್ನು ದೂತರಿಂದ ಸುಮಂತ್ರನಿಗೆ ಸೂಚಿಸಿದನು.

೮೨. ರಾಮಚಂದ್ರನು ಬಂದುದನ್ನು ಕೇಳಿ ಆ ಸುಮಂತ್ರನು ಪತಾಕೆ, ಧ್ವಜ, ತೋರಣ ಮುಂತಾದುವುಗಳಿಂದ ಆ ರಾಜಧಾನಿಯಾದ ಅಯೋಧ್ಯೆಯನ್ನು ಶೃಂಗರಿಸಿದನು.

ನಾರಣೇಂದ್ರಂ ಪುರಸ್ಕೃತ್ಯ ಪೌರೈರ್ಜಾನಪದೈಸ್ಸಹ ।
ಪ್ರತ್ಯುದ್ಗಮ್ಯ ರಾಮಚಂದ್ರಂ ನತ್ವಾಯೋಧ್ಯಾಂ ನಿನಾಯ ಸಃ ॥ ೮೩ ॥

ತದಾ ನಿನೇದುರ್ವಾದ್ಯಾನಿ ನನೃತುಶ್ಚಾಪ್ಸರೋಗಣಾಃ ।
ತುಷ್ಟುವುರ್ಮಾಗಧಾದ್ಯಾಶ್ಚ ನಟಾ ಗಾನಂ ಪ್ರಚಕ್ರಿರೇ ॥ ೮೪ ॥

ರಾಮಾಗಮನಮಾಕರ್ಣ್ಯ ಪೌರನಾರ್ಯಸ್ಸುಭೂಷಿತಾಃ ।
ಪ್ರಾಸಾದಶಿಖರಾರೂಢಾ ವವರ್ಷುಃ ಪುಷ್ಪವೃಷ್ಟಿಭಿಃ ॥ ೮೫ ॥

ರಾಜದ್ವಾರಂ ವಿಮಾನೇನ ಶನೈಸ್ಸ ರಘುನಂದನಃ ।
ಗೃಹ್ಣನ್ ಪೌರೋಪಾಯನಾನಿ ಸ್ತ್ರೀಭಿರ್ನೀರಾಜಿತಃ ಪಥಿ ॥ ೮೬ ॥

ಯಯೌ ಯಾನಾದವರುಹ್ಯ ಸಭಾಯಾಂ ನಿಜ ಆಸನೇ ।
ತಸ್ಥೌ ಸಮಂತತಸ್ಸರ್ವೈಃ ನೃಪೈಶ್ಚ ಪರಿವೇಷ್ಟಿತಃ ॥ ೮೭ ॥

---

೮೩. ಅನಂತರ ಆನೆ ಅಂಬಾರಿಗಳೊಡನೆ ಪಟ್ಟಣದ ಜನರನ್ನು ಕರೆದುಕೊಂಡು ಆ ರಾಮನನ್ನು ಎದುರುಗೊಂಡು ನಮಸ್ಕರಿಸಿ ಅಯೋಧ್ಯೆಗೆ ಕರದುಕೊಂಡು ಹೋದನು.

೮೪. ಆಗ ವಾದ್ಯಗಳು ಮೊಳಗಿದುವು. ನರ್ತಕಿಯರು ಕುಣಿದರು. ವಂದಿ ಮಾಗಧರು ಹೊಗಳಿದರು. ನಟರು ಹಾಡಿದರು.

೮೫. ರಾಮನು ಬರುವುದನ್ನು ಕೇಳಿ ಆ ಪಟ್ಟಣದ ಹೆಂಗಸರು ಅಲಂಕರಿಸಿಕೊಂಡು ಮಹಡಿಯಮೇಲೆ ನಿಂತುಕೊಂಡು ಹೂಮಳೆಯನ್ನು ಕರೆದರು.

೮೬. ಆ ರಾಮನು ಬೀದಿಯಲ್ಲಿ ಹೊರಟು ನಿಧಾನವಾಗಿ ಬರುತ್ತ ಪಟ್ಟಣಿಗರಿಂದ ಉಪಾಯನಗಳನ್ನು ಸ್ವೀಕರಿಸುತ್ತ ಮುತ್ತೈದೆಯರಿಂದ ಆರತಿಯನ್ನೆತ್ತಿಸಿಕೊಳ್ಳುತ್ತ ಅರಮನೆಯ ಬಾಗಿಲಿಗೆ ಹೋದನು.

೮೭. ಅಲ್ಲಿ ಯಾನದಿಂದ ಇಳಿದು ಸಭೆಗೆ ಹೋಗಿ ಸಿಂಹಾಸನದಲ್ಲಿ ಕುಳಿತನು. ರಾಜರೂ ಪಟ್ಟಣಿಗರೂ ಸುತ್ತಲೂ ಕುಳಿತುಕೊಂಡರು.

ತತಃ ಸ್ಥಲಾನಿ ಸರ್ವೇಷಾಂ ವಸ್ತುಮಾಜ್ಞಾಪ್ಯ ಲಕ್ಷ್ಮಣಂ ।
ದಧಿಶ್ರಾದ್ಧಾದಿ ಸಂಪಾದ್ಯ ಕೃತಕಾರ್ಯಮಮನ್ಯತ ॥ ೮೮ ॥

ಆತ್ಮಾನಂ ಸಕಲಾನ್ ಪೃಥ್ವೀಸ್ಥಿತಾನ್ ಜಿತ್ವಾ ಸ ಉದ್ಧತಾನ್ ।
ತತಸ್ತೈಃ ಸಪ್ತದೀಪಸ್ಥೈಃ ಪಾರ್ಥಿವೈಃ ಪರಿಪೂಜಿತಃ ॥ ೮೯ ॥

ರಾಮಸ್ಸ್ವಭ್ರಾತರಂ ವಿಪ್ರೈಃ ಭರತಂ ಭರತಾಧಿಪಂ ।
ಚಕಾರ ಪಾರ್ಥಿವೈರ್ಯುಕ್ತೋ ಲಕ್ಷ್ಮಣಾನುಮತೇನ ಸಃ ॥ ೯೦ ॥

ಆದಾವೇವ ವಸಿಷ್ಠೇನ ಹ್ಯತೋ ಭರತನಾಮ ತತ್ ।
ವಿಚಿಂತ್ಯೇದಂ ಭಾವಿ ವೃತ್ತಂ ಜಾತಕರ್ಮಣಿ ನಿಶ್ಚಿತಂ ॥ ೯೧ ॥

---

೮೮. ಅನಂತರ ಅಲ್ಲಿಗೆ ಬಂದಿರುವ ರಾಜರಿಗೆಲ್ಲಾ ಬಿಡಾರವನ್ನು ಮಾಡಿಸುವಂತೆ ಲಕ್ಷ್ಮಣನಿಗೆ ರಾಮನು ಅಪ್ಪಣೆಮಾಡಿದನು. ಅನಂತರ ದಧಿ ಶ್ರಾದ್ಧವನ್ನು ಮಾಡಿ ಎಲ್ಲರಿಗೂ ಭೋಜನ ಮಾಡಿಸಿದನು ತಾನು ಕೈಗೊಂಡ ಕೆಲಸವು ಪೂರ್ತಿಯಾಯಿತೆಂದು ತಿಳಿದುಕೊಂಡನು.

೮೯. ಈ ರೀತಿಯಾಗಿ ರಾಮನು ಪ್ರಪಂಚವೆಲ್ಲವನ್ನೂ ಸುತ್ತಿ ಉದ್ಧತ ರಾದ ರಾಜರನ್ನು ಜಯಿಸಿ ಸಪ್ತದ್ವೀಪಗಳ ರಾಜರಿಂದಲೂ ಪೂಜಿತನಾದನು

೯೦. ಅನಂತರ ರಾಮನು ಲಕ್ಷ್ಮಣನ ಅನುಮತಿಯಮೇರೆಗೆ ಭರತನನ್ನು ಭಾರತಕ್ಕೆ ಚಕ್ರವರ್ತಿಯನ್ನಾಗಿ ಮಾಡಬೇಕೆಂದು ಯೋಚಿಸಿ ಬ್ರಾಹ್ಮಣರಿಂದಲೂ ರಾಜರಿಂದಲೂ ಆತನಿಗೆ ಚಕ್ರವರ್ತಿ ಪದವಿಯಲ್ಲಿ ಅಭಿಷೇಕ ಮಾಡಿದನು.

೯೧. ವಸಿಷ್ಠನು ಮುಂದೆ ಈ ಭರತನು ಭರತಖಂಡಕ್ಕೆ ಚಕ್ರವರ್ತಿಯಾ ಗುವನೆಂದು ತಿಳಿದೇ ಜಾತಕರ್ಮ ನಾಮಕರಣ ಮಾಡುವಾಗ ಈತನಿಗೆ ಭರತ ನೆಂದು ಹೆಸರಿಟ್ಟನು.

ಪೂರ್ವಮಾಜ್ಞಾಪಿತಂ ಸ್ವೀಯಸೇವಕಂ ಭಾರತಸ್ಯ ಚ ।
ರಕ್ಷಣೇ ತಂ ರಾಮಚಂದ್ರಃ ಕಾರ್ಯಾಂತರಮಕಲ್ಪಯತ್ ॥ ೯೨ ॥

ಜಂಬೂದ್ವೀಪಪತಿಂ ರಾಮಶ್ಚಕಾರ ಸ್ವಸುತಂ ಲವಂ ।
ಲವೋಽಪಿ ವಿಜಯಂ ಸ್ವೀಯಸಚಿವಂ ಚಾಕರೋನ್ಮುದಾ ॥ ೯೩ ॥

ನವಸ್ವಪಿ ಚ ವರ್ಷೇಷು ಯಾತಾಯಾತಂ ಪುನಃ ಪುನಃ ।
ಚಕಾರ ವಿಜಯೋಽನ್ಯೈವ ಪುನಃ ಕಾರ್ಯಾರ್ಥಮಾದರಾತ್ ॥ ೯೪ ॥

ಶತ್ರುಘ್ನೋ ಯೌವರಾಜ್ಯೇ ಸ್ವೇ ಭರತೇನಾಭಿಷೇಚಿತಃ ।
ಯೌವರಾಜ್ಯಪದೇ ಸ್ವೀಯೇ ಕೃತ್ವಾ ರಾಮಃ ಕುಶಂ ಸುತಂ ॥ ೯೫ ॥

---

೯೨ ರಾವಣನನ್ನು ಕೊಲ್ಲುವುದಕ್ಕೆ ಹೋಗುವುದಕ್ಕಿಂತಲೂ ಮೊದಲು ಆ ಭರತನನ್ನು ತನ್ನ ಸೇವಕನಾಗಿ ಭಾರತವನ್ನು ಆಳುವಂತೆ ನಿಯಮಿಸಿದ್ದನು. ಈಗ ಅದೇ ಭರತನನ್ನು ಭರತಖಂಡಕ್ಕೆ ಅಧಿಕಾರಿಯನ್ನಾಗಿ ಸ್ವತಂತ್ರನನ್ನಾಗಿಯೇ ಮಾಡಿದನು.

೯೩. ಅನಂತರ ರಾಮನು ಲವನನ್ನು ಜಂಬೂದ್ವೀಪಕ್ಕೆ ಅಧಿಕಾರಿಯನ್ನಾಗಿ ಮಾಡಿದನು. ಆ ಲವನು ರಾಮನ ಮಂತ್ರಿಯಾದ ವಿಜಯನೆಂಬುವನನ್ನೇ ತನ್ನ ಮಂತ್ರಿಯನ್ನಾಗಿ ಮಾಡಿಕೊಂಡನು.

೯೪. ಆ ವಿಜಯನು ಅಲ್ಲಿನ ನವವರ್ಷಗಳಲ್ಲಿಯೂ ಎಲ್ಲವನ್ನೂ ನೋಡಿಕೊಳ್ಳುತ್ತಲಿದ್ದನು. ಲವನು ತನ್ನ ಕಾರ್ಯಕ್ಕೋಸ್ಕರ ಅಯೋಧ್ಯೆಯಿಂದ ಹೋಗುವುದು ಬರುವುದು ಅಪ್ಪಣೆಮಾಡುವುದು ಎಲ್ಲವನ್ನೂ ಮಾಡುತ್ತಿದ್ದನು.

೯೫. ಭರತನು ತನ್ನ ರಾಜ್ಯದಲ್ಲಿ ಶತ್ರುಘ್ನನಿಗೆ ಯುವರಾಜಪದವನ್ನು ಕೊಟ್ಟು ಅಭಿಷೇಕ ಮಾಡಿದನು. ರಾಮನು ತನ್ನ ರಾಜ್ಯದಲ್ಲಿ ಕುಶನಿಗೆ ಯುವರಾಜ ಪಟ್ಟವನ್ನು ಕಟ್ಟಿದನು.

ಚಕಾರ ಲಕ್ಷ್ಮಣಂ ಮುಖ್ಯಂ ಸಚಿವೇಷು ಸುಮಂತ್ರಿಣಂ ।
ಸಪ್ತದ್ವೀಪಪತಿಃ ಶ್ರೀಮಾನ್ ಸ್ವಯಮಾಸೀದ್ರಘೂತ್ತಮಃ ॥ ೯೬ ॥

ಸ್ವಸ್ವಕಾರ್ಯೇಷು ಸರ್ವೇ ತೇ ಹ್ಯಾಸನ್ ತತ್ಪರಮಾನಸಾಃ ।
ತತಸ್ಸರ್ವಾನ್ ನೃಪಾನ್ ಪೂಜ್ಯ ದದಾವಾಜ್ಞಾಂ ರಘೂದ್ವಹಃ ॥ ೯೭ ॥

ತತಸ್ತೇ ರಾಘವಂ ನತ್ವಾ ಯಯುಃ ಸ್ವಂ ಸ್ವಂ ಸ್ಥಲಂ ಮುದಾ ।
ತತೋಽಭಾರತವರ್ಷಸ್ಯ ಪರಾಮರ್ಶಂ ಸದಾ ಮುದಾ ॥ ೯೮ ॥

ಚಕಾರ ಭರತಶ್ಶ್ರೀಮಾನ್ ಭಾರತಾಧಿಪತಿಃ ಪ್ರಭುಃ ।
ಜಂಬೂದ್ವೀಪಪರಾಮರ್ಶಂ ಸ ಚಕಾರ ಲವಸ್ತಥಾ ॥ ೯೯ ॥

---

೯೬. ಲಕ್ಷ್ಮಣನನ್ನು ಮಂತ್ರಿಗಳಲ್ಲಿ ಮುಖ್ಯನಾದವನನ್ನಾಗಿ ಮಾಡಿದನು. ಶ್ರೀರಾಮನು ತಾನು ಸಪ್ತದ್ವೀಪಗಳಿಗೂ ಒಡೆಯನಾಗಿ ಚಕ್ರವರ್ತಿಯಾಗಿ ಇದ್ದು ಕೊಂಡಿದ್ದನು.

೯೭. ಆಗ ಅವರೆಲ್ಲರೂ ಕೂಡ ತಮ್ಮ ತಮ್ಮ ಕೆಲಸಗಳಲ್ಲಿ ಆಸಕ್ತರಾಗಿರುತ್ತಿದ್ದರು. ಅನಂತರ ಶ್ರೀರಾಮನು ತನ್ನ ಜೊತೆಯಲ್ಲಿ ಬಂದಿದ್ದ ರಾಜರುಗಳನ್ನು ವಸ್ತ್ರಾಲಂಕಾರಗಳಿಂದ ಗೌರವಿಸಿ ಅವರನ್ನು ಅವರವರ ರಾಜ್ಯಕ್ಕೆ ಹೋಗುವಂತೆ ಅಪ್ಪಣೆ ಮಾಡಿದನು.

೯೮–೯೯. ಅವರೆಲ್ಲರೂ ರಾಮನಿಗೆ ನಮಸ್ಕರಿಸಿ ಅವರವರ ಸ್ಥಾನಗಳಿಗೆ ಸಂತೋಷದಿಂದ ಹೊರಟುಹೋದರು. ಆಗ ಭರತನೂ ಭರತವರ್ಷದ ವಿಷಯವನ್ನು ಪದೇ ಪದೇ ವಿಮರ್ಶೆ ಮಾಡುತ್ತ ನೋಡಿಕೊಳ್ಳುತ್ತಿದ್ದನು. ಜಂಬೂದ್ವೀಪವ ವಿಷಯ ವಿಮರ್ಶೆಯನ್ನು ಲವನು ಮಾಡಿಕೊಂಡು ನೋಡಿಕೊಳ್ಳುತ್ತಲಿದ್ದನು.

ಸಪ್ತದ್ವೀಪಪರಾಮರ್ಶಂ ರಾಮಚಂದ್ರಃ ಕುಶೇನ ಚ ।
ಲಕ್ಷ್ಮಣೇನ ಸಹೈವಾಪಿ ಸ್ವಯಮೇವಾಕರೋತ್ಪ್ರಭುಃ ॥ ೧೦೦ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ರಾಜ್ಯಕಾಂಡೇ ಪೂರ್ವಾರ್ಧೇ ಷಡ್ದ್ವೀಪಜಯ ವರ್ಣನಂ ನಾಮ ನವಮಸ್ಸರ್ಗಃ

---

೧೦೦. ರಾಮಚಂದ್ರನು ಕುಶನೊಡನೆ ಸಪ್ತದ್ವೀಪಗಳ ವಿಷಯ ವಿಮರ್ಶೆಯನ್ನು ತಾನು ಮಾಡುತ್ತಿದ್ದನು. ಮಂತ್ರಿಯಾದ ಲಕ್ಷ್ಮಣನ ನೆರವನ್ನು ತೆಗೆದುಕೊಳ್ಳುತ್ತಿದ್ದನು. ಈ ರೀತಿಯಾಗಿ ಒಂದೊಂದು ಕಡೆಗೂ ಒಬ್ಬೊಬ್ಬರನ್ನು ನಿಯಮಿಸಿ ಶ್ರೀರಾಮನು ಎಲ್ಲರ ಮೇಲ್ವಿಚಾರಣೆಯನ್ನೂ ನೋಡಿಕೊಳ್ಳುತ್ತಿದ್ದನು.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಪೂರ್ವಾರ್ಧದಲ್ಲಿ ಆರು ದ್ವೀಪಗಳ ಜಯವರ್ಣನವೆಂಬ ಒಂಭತ್ತನೆಯ ಸರ್ಗವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಒಂಭತ್ತನೆಯ ಸರ್ಗದ ಸಾರಾಂಶವು

ಶ್ರೀರಾಮನು ಮುಂದೆ ಪ್ಲಕ್ಷದ್ವೀಪಕ್ಕೂ ಹೋದನು. ಅಲ್ಲಿ ಸೂರ್ಯನೇ ದೇವತೆಯು. ಆ ದ್ವೀಪವನ್ನೂ ಅದರಲ್ಲಿರುವ ವರ್ಷಗಳನ್ನೂ ಜಯಿಸಿ ಮುಂದೆ ಹೊರಡುವನು. ಅಲ್ಲಿರುವ ಅನೇಕವಾದ ನದಿಗಳೂ ಪಟ್ಟಣಗಳೂ ಪರ್ವತಗಳೂ ವರ್ಣಿತವಾಗಿವೆ

ಈ ರೀತಿಯಾಗಿ ಪ್ರಪಂಚವನ್ನೇ ಜಯಿಸಿ ಕೊನೆಗೆ ಶ್ರೀರಾಮನು ಅಯೋಧ್ಯೆಗೆ ಬರುವನು.

ಅನಂತರ ಭರತನನ್ನು ಭರತವರ್ಷಕ್ಕೆ ಚಕ್ರವರ್ತಿಯನ್ನಾಗಿ ಮಾಡುವನು. ಜಂಬೂದ್ವೀಪಕ್ಕೆ ಲವನನ್ನು ಚಕ್ರವರ್ತಿಯನ್ನಾಗಿ ಮಾಡಿ ತಾನು ಸಪ್ತದ್ವೀಪಗಳಿಗೂ ಒಡೆಯನಾಗಿದ್ದುಕೊಂಡು ತನ್ನ ಯುವರಾಜ ಪದವಿಯಲ್ಲಿ ಕುಶನನ್ನು ಅಭಿಷೇಕ ಮಾಡುವನು.

ಲಕ್ಷ್ಮಣನನ್ನು ತನ್ನ ಮಂತ್ರಿಗಳಲ್ಲಿ ಮುಖ್ಯನನ್ನಾಗಿಯೂ ತನ್ನ ಮಂತ್ರಿಯಾಗಿದ್ದ ವಿಜಯನನ್ನೇ ಲವಕುಮಾರನಿಗೆ ಮಂತ್ರಿಯನ್ನಾಗಿಯೂ ಮಾಡಿ ಎಲ್ಲರೊಡನೆ ಸುಖವಾಗಿರುವನು.

|| ಶ್ರೀಃ ||

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ

|| ದಶಮಸ್ಸರ್ಗಃ ||

|| ಶ್ರೀರಾಮದಾಸ ಉವಾಚ ||

ಏಕದಾ ರಾಘವಸ್ಸಾರಮೇಯಂ ದೀರ್ಘರವಂ ಮುಹುಃ ।
ರಾಜದ್ವಾರಾದ್ಬಹಿಃ ಶ್ರುತ್ವಾ ಸಭಾಸ್ಥೋ ದೂತಮಬ್ರವೀತ್ || ೧ ||

ಕಥಂ ದೀರ್ಘಸ್ವರೇಣೈವ ಶ್ವಾದ್ಯ ಕ್ರೋಶತಿ ಪಶ್ಯತಾಂ ।
ತಥೇತಿ ರಾಮದೂತೋಪಿ ಗತ್ವಾ ರಾಜಸಭಾಬಹಿಃ || ೨ ||

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಹತ್ತನೆಯ ಸರ್ಗವು

೧. ಶ್ರೀ ರಾಮದಾಸನು ಹೇಳಿದನು–ಶ್ರೀರಾಮನು ಹೀಗೆ ರಾಜ್ಯಭಾರ ಮಾಡುತ್ತ ಸಭೆಯಲ್ಲಿ ಕುಳಿತಿರಲು ಒಂದುಸಾರಿ ಒಂದು ನಾಯಿಯು ಅರಮನೆ ಯಿಂದ ಹೊರಗಡೆಯಲ್ಲಿ ಬಗುಳುತ್ತಿದ್ದುದನ್ನು ಕೇಳಿ ದೂತರನ್ನು ಕರೆದು ಹೀಗೆ ಹೇಳಿದನು.

೨. ಎಲೈ ಚಾರರಿರಾ! ನಾಯಿಯು ಏತಕ್ಕೆ ಬಹು ದೀರ್ಘಸ್ವರದಿಂದ ಅಳುತ್ತಿದೆ? ನೋಡಿರಿ ಎನ್ನಲು ಇದನ್ನು ಕೇಳಿ ರಾಮದೂತರು ಹಾಗೆಯೇ ಆಗಲೆಂದು ಹೇಳಿ ರಾಜನ ಸಭೆಯಿಂದ ಹೊರಗೆ ಹೋಗಿ ನೋಡಿದರು.

ನ್ಯವಾರಯತ್ಸಾರಮೇಯಂ ರಾಜದ್ವಾರಾತ್ತ್ವಧರ್ಷಣ್ಯೈಃ ।
ರಾಮಂ ಗತ್ವಾಬ್ರವೀದ್ವಾಕ್ಯಂ ತೂಷ್ಣೀಂ ಶ್ವಾ ಕ್ರೋಶತಿ ಪ್ರಭೋ ॥ ೩ ॥

ಮಯಾ ನಿವಾರಿತೋ ದೂರಂ ಗತಸ್ಸ ರಾವಣಾಂತಕ ।
ತತೋ ದ್ವಿತೀಯದಿವಸೇ ತಚ್ಛಬ್ದಂ ರಘುವೋಽಶೃಣೋತ್ ॥ ೪ ॥

ದೂತೇನ ಪೂರ್ವವಚ್ಚಾಪಿ ಸಾರಮೇಯೋ ನಿವಾರಿತಃ ।
ತತಸ್ತೃತೀಯೇ ದಿವಸೇ ತದ್ರಾವಾನಶೃಣೋತ್ಪ್ರಭುಃ ॥ ೫ ॥

ತದಾತಿಚಕಿತಃ ಪ್ರಾಹ ಲಕ್ಷ್ಮಣಂ ಪುರತಃ ಸ್ಥಿತಂ ।
ಶ್ವಾಯಂ ದಿನತ್ರಯಂ ಬಂಧೋ ಕಥಂ ಕ್ರೋಶತಿ ಸಂತತಂ ॥ ೬ ॥

ಕಿಂ ದುಃಖಂ ಸಾರಮೇಯಾಯ ಪ್ರಷ್ಟವ್ಯಂ ಮತ್ಪುರಸ್ತ್ವಯಾ ।
ತಥೇತಿ ಲಕ್ಷ್ಮಣೋ ದೂತಾನಬ್ರವೀತ್ಸಂಭ್ರಮಾನ್ವಿತಃ ॥ ೭ ॥

---

೩. ಅವರು ಆ ನಾಯಿಯನ್ನು ಗದ್ದರಿಸಿ ಸುಮ್ಮನಿರುವಂತೆ ಮಾಡಿ ರಾಜದ್ವಾರದಿಂದ ದೂರಕ್ಕೆ ಓಡಿಸಿ ರಾಮನ ಬಳಿಗೆ ಬಂದು ಎಲೈ ಪ್ರಭುವೇ! ಆ ನಾಯಿಯು ಸುಮ್ಮನೆ ಕೂಗುತ್ತಿತ್ತು. ನಾವು ದೂರಕ್ಕೆ ಓಡಿಸಿ ಬಂದೆವು ಎಂದರು

೪-೫. ಮತ್ತೆ ಮರುದಿನದಲ್ಲಿಯೂ ಆ ನಾಯಿಯ ಶಬ್ದವನ್ನು ರಾಮನು ಅಂತೆಯೇ ಕೇಳಿದನು. ಆ ದಿನವೂ ದೂತನು ಹಿಂದಿನ ದಿನದಂತೆಯೇ ಓಡಿಸಿಬಿಟ್ಟನು. ಮತ್ತೆ ಮೂರನೆಯ ದಿನವೂ ಆ ನಾಯಿಯು ಅಂತೆಯೇ ಕೂಗುತ್ತಿರಲು ಆಗಲೂ ಅದನ್ನು ರಾಮನು ಕೇಳಿದನು.

೬-೭. ಆಗ ರಾಮನು ಬಹು ಆಶ್ಚರ್ಯಗೊಂಡು ಎದುರಿಗಿರುವ ಲಕ್ಷ್ಮಣನನ್ನು ಕುರಿತು ಎಲೈ ತಮ್ಮನೇ! ಈ ನಾಯಿಯು ಮೂರು ದಿನದಿಂದಲೂ ನಿತ್ಯವೂ ಕೂಗುತ್ತ ಅಳುತ್ತಿದೆ. ಆ ನಾಯಿಗೆ ಬಂದಿರುವ ದುಃಖವೇನು? ಎಂಬುದನ್ನು ಅದನ್ನು ಕರೆದುಕೊಂಡು ಬಂದು ನನ್ನೆದುರಿಗೆ ನೀನು ಕೇಳಬೇಕು. ಎಂದು ಹೇಳಲು ಒಡನೆಯೇ ಲಕ್ಷ್ಮಣನು ದೂತರನ್ನು ಕರೆದು ಅವಸರದಿಂದ ಇಂತೆಂದನು.

ಸಭಾಮಾಕಾರಣೀಯಃ ಶ್ವಾ ಯುಷ್ಮಾಭಿಸ್ತ್ವದ್ಯ ಸಾದರಂ ।
ತಥೇತಿ ರಾಮದೂತಾಸ್ತೇ ಸಾರಮೇಯಂ ವಚೋಽಬ್ರುವನ್ ॥ ೮ ॥

ಆಕಾರಿತೋಽಸಿ ರಾಮೇಣ ತ್ವಮೇಹಿ ರಾಘವಾಂತಿಕಂ ।
ತ್ವದ್ದೈವಂ ಫಲಿತಂ ಚಾದ್ಯ ಪೂರ್ವಪುಣ್ಯೋದಯೇನ ಹಿ ॥ ೯ ॥

ರಾಮದೂತವಚಃ ಶ್ರುತ್ವಾ ತುಷ್ಟಃ ಶ್ವಾ ತಾನ್ವಚೋಽಬ್ರವೀತ್ ।
ಹರೇರ್ಗೃಹೇ ಯಜ್ಞವಾಟೇ ಹೋಮಶಾಲಾಸು ವೈ ತಥಾ ॥ ೧೦ ॥

ಬೃಂದಾವನೇ ಸಭಾಯಾಂ ಚ ಮಠೇ ಪಾರ್ಥಿವಸದ್ಗೃಹೇ ।
ಗೋಷ್ಠೇ ಪುಣ್ಯಸ್ಥಲೇ ಪುಣ್ಯೇ ತೀರ್ಥೇ ದೇವಾಲಯೇಽಪಿ ಚ ॥ ೧೧ ॥

---

೮. ಎಲೈ ದೂತರಿರಾ! ಆ ನಾಯಿಯನ್ನು ಸಭೆಗೆ ಆದರದಿಂದ ಕರೆದು ಕೊಂಡು ಬನ್ನಿರಿ ಎನ್ನಲು ರಾಮದೂತರು ಹಾಗೆಯೇ ಆಗಲೆಂದು ಹೇಳಿ ನಾಯಿಯ ಬಳಿಗೆ ಹೋಗಿ ಇಂತೆಂದರು.

೯. ಎಲೈ ನಾಯಿಯೇ! ರಾಮನು ನಿನ್ನನ್ನು ಬರಹೇಳಿದ್ದಾನೆ. ನೀನು ರಾಮನ ಬಳಿಗೆ ಒಡನೆಯೇ ಬರಬೇಕು. ನಿನ್ನ ಪೂರ್ವಪುಣ್ಯದ ಫಲದಿಂದ ನಿನ್ನ ಅದೃಷ್ಟವು ಈಗ ಫಲಿಸಿರುವುದು. ಆದ್ದರಿಂದಲೇ ರಾಮನು ನಿನ್ನನ್ನು ಕರೆದಿರುವುದು ಎಂದರು.

೧೦-೧೨. ರಾಮದೂತರ ಈ ಮಾತನ್ನು ಕೇಳಿ ನಾಯಿಯು ಸಂತೋಷಗೊಂಡು ಇಂತೆಂದಿತು. ಎಲೈ ದೂತರಿರಾ! ನಾನು ನಾಯಿಯು. ನಾನು ಅಲ್ಲಿಗೆ ಬರಬಾರದು. ವಿಷ್ಣುಮಂದಿರ, ಯಜ್ಞಮಂಟಪ, ಹೋಮಶಾಲೆ, ಬೃಂದಾವನ, ಸಭೆ, ಮಠ, ಅರಮನೆ, ದನಗಳ ಕೊಟ್ಟಿಗೆ, ಪುಣ್ಯಸ್ಥಳಗಳು, ಪುಣ್ಯತೀರ್ಥಗಳು, ದೇವಸ್ಥಾನಗಳು, ಅಡಿಗೆಯ ಮನೆ, ಗಂಡಹೆಂಡಿರು ಮಲಗುವ

ಪಾಕಸ್ಥಾನೇ ರತಿಸ್ಥಾನೇ ಸ್ನಾನಸಂಧ್ಯಾಸ್ಥಲಾದಿಷು ।
ಗಂತುಂ ನಾರ್ಹಾ ವಯಂ ಪಾಪಯೋನಿಸ್ಥಾ ವಾಚ್ಯತಾಂ ಪ್ರಭುಃ ॥ ೧೨ ॥

ತತಸ್ತೇ ವಿಸ್ಮಯಾವಿಷ್ಟಾಸ್ತದ್ವಾಕ್ಯಂ ರಾಮಮಬ್ರುವನ್ ।
ಸರ್ವೈಃ ಶ್ರುತ್ವಾ ರಾಘವೋಽಪಿ ವಿಹಸ್ಯ ಸಂಭ್ರಮೇಣ ಚ ॥ ೧೩ ॥

ಆನೀಯತಾಂ ಪಾದುಕೇ ಮೇ ತ್ವಿತಿ ದೂತಾನ್ ವಚೋಽಬ್ರವೀತ್ ।
ತತಸ್ತೈರರ್ಪಿತೇ ದಿವ್ಯೇ ಪಾದುಕೇ ಕೃತ್ಯ ಪಾದಯೋಃ ॥ ೧೪ ॥

ರತ್ನದಂಡಂ ಕರೇ ಧೃತ್ವಾ ಶನೈಸ್ಸರ್ವೈಸ್ಸಮನ್ವಿತಃ ।
ಮುದ್ರಿಕಾ ರತ್ನಹಾರೇಣ ಮಣಿದ್ವಯವಿರಾಜಿತಃ ॥ ೧೫ ॥

ಮನೆ, ಸ್ನಾನದ ಮನೆ, ಸಂಧ್ಯಾಮಂಟಪ ಇವೇ ಮುಂತಾದ ಸ್ಥಳಗಳಿಗೆ ನಾವು ಹೋಗಬಾರದು. ನಾವು ಪಾಪಯೋನಿಯಲ್ಲಿ ಹುಟ್ಟಿದ್ದೇವೆ. ಎಂಬುದಾಗಿ ಆ ಪ್ರಭುವಿಗೆ ವಿಜ್ಞಾಪಿಸಿರಿ.

೧೩–೧೪. ಆ ದೂತರು ನಾಯಿಯ ಈ ಮಾತನ್ನು ಕೇಳಿ ಆಶ್ಚರ್ಯದಿಂದ ಆ ನಾಯಿಯು ಹೇಳಿದ ಮಾತನ್ನು ರಾಮನಿಗೆ ತಿಳಿಸಿದರು. ಅಲ್ಲಿಗೆ ಹೋಗಿದ್ದ ದೂತರೆಲ್ಲರೂ ಹೀಗೆ ಹೇಳಿದುದನ್ನು ಕೇಳಿ ರಾಮನು ನಕ್ಕು ಅವಸರವಸರದಿಂದ "ನನ್ನ ಪಾದುಕೆಗಳನ್ನು ಇಲ್ಲಿ ತನ್ನಿರಿ" ಎಂಬುದಾಗಿ ದೂತರಿಗೆ ಹೇಳಲು ಅವರು ಅಲ್ಲಿ ಪೂಜಿಸಿಟ್ಟಿದ್ದ ಪಾದುಕೆಗಳನ್ನು ತಂದು ಅವನ ಕಾಲಿಗೆ ಅಳವಡಿಸಿದರು.

೧೫–೧೭. ರಾಮನು ಆ ಪಾದುಕೆಗಳನ್ನು ಕಾಲಲ್ಲಿ ಹಾಕಿಕೊಂಡು ರತ್ನದ ಕೋಲನ್ನು ಕೈಯಲ್ಲಿ ಹಿಡಿದುಕೊಂಡು ಎಲ್ಲರೊಡನೆಯೂ ಕೂಡಿಕೊಂಡು ಅಲ್ಲಿಗೆ ಹೊರಟನು. ಮುದ್ರೆಯುಂಗುರಗಳು, ರತ್ನಹಾರಗಳು, ಕೌಸ್ತುಭ

ಮುಕುಟೇನಾವತಂಸೇನ ಕೇಯೂರಾಭ್ಯಾಂ ಸಮನ್ವಿತಃ ।
ನೂಪುರಾಭ್ಯಾಂ ಕಂಕಣಾಭ್ಯಾಂ ಕುಂಡಲಾಭ್ಯಾಂ ಸುಶೋಭಿತಃ ॥ ೧೬ ॥

ಪದಕೈಃ ಶೃಂಖಲಾಭಿಶ್ಚ ವರವಸ್ತ್ರೈರ್ವಿರಾಜಿತಃ ।
ರಾಜದ್ವಾರಾದ್ಬಹಿರ್ದೇಶೇ ಸಾರಮೇಯಾಂತಿಕಂ ಯಯೌ ॥ ೧೭ ॥

ಕೃತ್ವಾ ದಂಡಂ ಸ್ವಕಕ್ಷೇಥ ಕಿಂಚಿದ್ವಕ್ರಃ ಸ್ಥಿತಃ ಪ್ರಭುಃ ।
ಕೃತ್ವಾ ವಾಮುಜಾನ್ವಧಃ ಸ್ವಾಂ ಜಂಘಾಂ ರಾಮಸ್ಸದಕ್ಷಿಣಾಂ ॥ ೧೮ ॥

ಅಬ್ರವೀತ್ಸಾರಮೇಯಂ ತಂ ಕಿಂಚಿತ್ಕೃತ್ವಾ ಸ್ಮಿತಾನನಂ ।
ಮದಗ್ರೇ ವದ ಕಿಂ ದುಃಖಂ ಸಾರಮೇಯ ತವಾಸ್ತಿ ಯತ್ ॥ ೧೯ ॥

ಚಿಂತಾಮಣಿ ರತ್ನಗಳು, ಕಿರೀಟ, ಭುಜಕೀರ್ತಿ, ಕಾಲುಬಳೆ, ಕೈಬಳೆ, ಕುಂಡಲಗಳು, ಸರಪಣಿಗಳು, ಪದಕಗಳು, ಉತ್ತಮವಾದ ವಸ್ತ್ರಗಳು ರಾಜಯೋಗ್ಯವಾದ ಇವೆಲ್ಲದ ರಿಂದಲೂ ಅಲಂಕೃತನಾಗಿ ಪ್ರಕಾಶಿಸುತ್ತ ಅರಮನೆಯಿಂದ ಹೊರಟು ಹೊರಗಡೆ ಯಲ್ಲಿದ್ದ ಆ ನಾಯಿಯ ಬಳಿಗೆ ಹೋದನು.

೧೮. ಅಲ್ಲಿಗೆ ಹೋಗಿ ಶ್ರೀರಾಮನು ತನ್ನ ಕೈಯಲ್ಲಿದ್ದ ಕೋಲನ್ನು ಕಂಕುಳಿನಲ್ಲಿ ಇರುಕಿಕೊಂಡು ಸ್ವಲ್ಪ ವಕ್ರವಾಗಿ ಬಾಗಿಕೊಂಡು ನಿಂತನು. ಆ ವಕ್ರವಾಗಿ ನಿಂತಿರುವಾಗ ಎಡಗಾಲನ್ನು ಸರಿಯಾಗಿ ನಿಲ್ಲಿಸಿಕೊಂಡು ಅದರ ಮುಂದುಗಡೆಯಲ್ಲಿ ಬಲಗಾಲು ಡೊಂಕಾಗಿ ಬಂದು ಕೊನೆಯ ಬೆರಳುಗಳು ನೆಲದ ಮೇಲೆ ಊರಿಕೊಂಡಿರುವಂತೆ ನಿಂತನು.

೧೯. ಆಗ ಮುಗುಳು ನಗೆಯನ್ನು ನಗುತ್ತ ಆ ನಾಯನ್ನು ಕುರಿತು ಎಲೈ ನಾಯಿಯೇ! ನಿನಗೆ ಯಾವ ದುಃಖವು ಪ್ರಾಪ್ತವಾಗಿದೆ? ಅದನ್ನು ಈಗ ನನ್ನ ಎದುರಿಗೆ ಹೇಳು.

ಮದ್ರಾಜ್ಯೇ ಸಹಸಾ ಮಾಸ್ತು ದುಃಖಂ ಕೇಷಾಂ ಕದಾಪಿ ಚ |
ಇತಿ ರಾಮಗಿರಂ ಶ್ರುತ್ವಾ ಸಾರಮೇಯಃ ಪುನಃ ಪುನಃ || ೨೦ ||

ನಮಸ್ಕೃತ್ವಾ ರಾಘವೇಂದ್ರಂ ಭಿನ್ನಪಾದೋಽಬ್ರವೀನ್ಮುದಾ |
ಮದರ್ಥಂ ಶ್ರಮಿತೋಽಸ್ಯತ್ರ ಚಿರಂಜೀವ ದಯಾನಿಧೇ || ೨೧ ||

ನಿರಪರಾಧೋ ಯತಿನಾ ಗ್ರಾವ್ಣಾತ್ರಾಹಂ ಪ್ರತಾಡಿತಃ |
ಭಿನ್ನಪಾದೋಽಸ್ಮಿ ರಾಜೇಂದ್ರ ತ್ವಾಮದ್ಯ ಶರಣಂ ಗತಃ || ೨೨ ||

ತದ್ವಾಕ್ಯಂ ರಾಘವಃ ಶ್ರುತ್ವಾಽಽಕಾರಯಾಮಾಸ ದಂಡಿನಂ |
ರಾಮಾಜ್ಞಯಾ ಯತಿಶ್ಚಾಪಿ ವಿಹ್ವಲೋ ರಾಘವಂ ಯಯೌ || ೨೩ ||

---

೨೦. ನನ್ನ ರಾಜ್ಯದಲ್ಲಿ ಯಾವಾಗಲೂ ಯಾವನಿಗೂ ದುಃಖವೆಂಬುದೇ ಬರಕೂಡದು. ಎಂದು ಹೇಳಿದುದನ್ನು ಆ ನಾಯಿಯು ಕೇಳಿತು.

೨೧. ಆಗ ಆ ನಾಯಿಯು ರಾಮನಿಗೆ ಮತ್ತೆ ಮತ್ತೆ ನಮಸ್ಕರಿಸುತ್ತ ತನ್ನ ಮುರಿದುಹೋದ ಕಾಲನ್ನು ತೋರಿಸುತ್ತ ಇಂತೆಂದಿತು. ಎಲೈ ದಯಾನಿಧಿಯೇ ! ನನಗೋಸ್ಕರ ಇಲ್ಲಿಗೆ ಬಂದಿದ್ದೀಯೆ. ಇದಕ್ಕಾಗಿ ನಿನಗೆ ಬಹು ಶ್ರಮವಾಯಿತು.

೨೨. ನಾನು ಯಾವ ತಪ್ಪನ್ನೂ ಮಾಡಲಿಲ್ಲ. ನಿರಪರಾಧಿಯು. ಒಬ್ಬ ಯತಿಯು ಕಲ್ಲಿನಿಂದ ನನ್ನ ಕಾಲಿಗೆ ಹೊಡೆದನು. ಇದರಿಂದ ನನ್ನ ಕಾಲು ಮುರಿದುಹೋಯಿತು. ಆದ್ದರಿಂದ ನಿನ್ನನ್ನು ಶರಣುಹೊಂದಿದ್ದೇನೆ. ಎಂದಿತು.

೨೩. ನಾಯಿಯು ಹೇಳಿದ ಈ ಮಾತನ್ನು ರಾಮನು ಕೇಳಿ ಆ ಯತಿಯನ್ನು ಅಲ್ಲಿಗೆ ಕರೆಸಿದನು. ರಾಮನ ಅಪ್ಪಣೆಯಂತೆ ಆ ಯತಿಯು ದಿಗಿಲುಪಡುತ್ತ ಅವನಲ್ಲಿಗೆ ಬಂದನು.

ನತ್ವಾ ಯತಿಂ ತಂ ಶ್ರೀರಾಮಸ್ತದಾ ವಚನಮಬ್ರವೀತ್ ।
ಸ್ವಾಮಿನ್ ಕಿಮರ್ಥಂ ಯುಷ್ಮಾಭಿಃ ಭಿನ್ನಂ ಪಾದೋಽಸ್ಯ ವೈಶುನಃ ॥ ೨೪ ॥

ತದ್ರಾಮವಚನಂ ಶ್ರುತ್ವಾ ಯತಿಃ ಪ್ರಾಹ ರಘೂತ್ತಮಂ ।
ಭಿಕ್ಷಾರ್ಥಂ ಭ್ರಮತೋ ಮಾರ್ಗೇ ಭಿಕ್ಷಾನ್ನಂ ಸ್ಪರ್ಶಿತಂ ಮಮ ॥ ೨೫ ॥

ಶುನಾನೇನ ರಾಘವೇಂದ್ರ ಮಧ್ಯಾಹ್ನೇ ಕ್ಷುಧಿತಸ್ಯ ಚ ।
ಮಯಾತಃ ಕ್ರೋಧಚಿತ್ತೇನ ಶುನೇಸ್ಮೈ ಹ್ಯಪರಾಧಿನೇ ॥ ೨೬ ॥

ಧರ್ಷಿತುಂ ಚೋಪಲಃ ಕ್ಷಿಪ್ತಸ್ತೇನ ಭಿನ್ನಂ ಪದಂ ಶುನಃ ।
ತದ್ಯತೇರ್ವಚನಂ ಶ್ರುತ್ವಾ ಪುನಸ್ತಂ ಪ್ರಾಹ ರಾಘವಃ ॥ ೨೭ ॥

---

೨೪. ರಾಮನು ಒಡನೆಯೇ ಆ ಯತಿಗೆ ನಮಸ್ಕರಿಸಿ ಸ್ವಾಮಿ! ತಾವು ಈ ನಾಯಿಯ ಕಾಲನ್ನೇಕೆ ಮುರಿದಿರಿ? ದಯಮಾಡಿ ಹೇಳಿರಿ ಎಂದನು.

೨೫. ರಾಮನು ಇಂತೆಂದುದನ್ನು ಕೇಳಿ ಆ ಯತಿಯು ಇಂತೆಂದನು. ಎಲೈ ರಾಘವನೇ! ನಾನು ಭಿಕ್ಷಾನ್ನಕ್ಕೋಸ್ಕರ ಮನೆಮನೆಗೂ ಸುತ್ತುತ್ತಿರುವಾಗ ದಾರಿಯಲ್ಲಿ ನನ್ನ ಭಿಕ್ಷಾನ್ನವನ್ನು ಈ ನಾಯಿಯು ಮುಟ್ಟಿತು.

೨೬–೨೭. ಆಗಲೇ ಮಧ್ಯಾಹ್ನವಾಗಿದ್ದಿತು. ನನಗೆ ಹಸಿವು ಬಹುವಾಗಿದ್ದಿತು. ಆದ್ದರಿಂದ ನನಗೆ ಕೋಪಬಂದಿತು. ಆಗ ಇದರಮೇಲೆ ಇದನ್ನು ಹೆದರಿಸಲು ಒಂದು ಕಲ್ಲನ್ನು ಎಸೆದೆನು. ಆದರಿಂದ ಅದರ ಒಂದು ಕಾಲು ಮುರಿದು ಹೋಯಿತು. ಎಂಬುದಾಗಿ ಹೇಳಿದನು. ಯತಿಯ ಈ ಮಾತನ್ನು ಕೇಳಿ ರಾಮನು ಮತ್ತೆ ಆ ಯತಿಯನ್ನು ಕುರಿತು ಇಂತೆಂದನು.

ಜ್ಞಾನಹೀನಃ ಪಶುಶ್ಚಾಯಂ ಭಕ್ಷ್ಯಂ ಸ್ವೀಯಂ ನಿರೀಕ್ಷ್ಯ ಚ
ಸ್ಪರ್ಶಿತಸ್ತ್ವಾಂ ತಸ್ಯ ದೋಷೋ ನೈವಾಯಂ ವೇದ್ಮ್ಯಹಂ ಯತೇ ॥ ೨೮॥

ತ್ವಮೇವಾಸ್ಯಸ್ಯಾಪರಾಧೀ ತದ್ದಂಡಂ ಸೋಢುಮರ್ಹಸಿ ।
ಇತ್ಯುಕ್ತ್ವಾ ಸಾರಮೇಯಂ ತಂ ರಾಘವೋ ವಾಕ್ಯಮಬ್ರವೀತ್ ॥ ೨೯ ॥

ಯತಿಶ್ಚಾಯಂ ತೇಪರಾಧೀ ತವ ಹಸ್ತೇರ್ಪಿತೋ ಮಯಾ ।
ಯಂ ತ್ವಮಿಚ್ಛಸಿ ವೈ ಕರ್ತುಮಸ್ಮೈ ದಂಡಂ ಸುಖಂ ಕುರು ॥ ೩೦ ॥

ತದ್ರಾಮವಚನಂ ಶ್ರುತ್ವಾ ಸಾರಮೇಯೋಬ್ರವೀತ್ಪ್ರಭುಂ ।
ಶಿವಾಲಯಾಧಿಪತ್ಯೇ ಚ ಸ್ಥಾಪನೀಯೋ ಯತಿಃ ಪ್ರಭೋ ॥ ೩೧ ॥

---

೨೮. ಎಲೈ ಯತಿಯೇ! ಈ ನಾಯಿಯು ಜ್ಞಾನವಿಲ್ಲದ ಪಶುವು. ತಾನು ತಿನ್ನಲು ತಕ್ಕುದಾದ ತಿಂಡಿಯನ್ನು ನೋಡಿ ಮುಟ್ಟಿತು. ಅದು ಜ್ಞಾನವಿಲ್ಲದ ಪ್ರಾಣಿಯಾದುದರಿಂದ ಅದರಮೇಲೆ ದೋಷವಿಲ್ಲ. ಅದು ನಿರಪರಾಧಿಯೆಂದು ನಾನು ಎಣಿಸುತ್ತೇನೆ.

೨೯. ಆ ನಾಯಿಯನ್ನು ಹೊಡೆದುದರಿಂದ ನೀನೇ ಅದರ ವಿಷಯದಲ್ಲಿ ಅಪರಾಧಿಯಾಗಿದ್ದೀಯೆ. ಆದ್ದರಿಂದ ಈಗ ನಿನಗೆ ಶಿಕ್ಷೆಯು ಯೋಗ್ಯವಾಗಿದೆ ಎಂಬುದಾಗಿ ಆ ಯತಿಗೆ ಹೇಳಿ ರಾಮನು ನಾಯಿಯನ್ನು ಕುರಿತು ಇಂತೆಂದನು.

೩೦. ಎಲೈ ನಾಯಿಯೇ! ಈ ಯತಿಯು ನಿನ್ನ ವಿಷಯದಲ್ಲಿ ತಪ್ಪಿತಸ್ಥನು. ಇವನನ್ನು ನಿನ್ನ ವಶಕ್ಕೆ ಕೊಟ್ಟಿದ್ದೇನೆ. ನಿನಗೆ ಬೇಕಾದಂತಹ ಶಿಕ್ಷೆಯನ್ನು ನೀನು ಈತನಿಗೆ ವಿಧಿಸಬಹುದು. ಸಂದೇಹಪಡದೆ ಹಾಗೆ ಮಾಡು.

೩೧. ರಾಮನ ಈ ಮಾತನ್ನು ಕೇಳಿ ನಾಯಿಯು ಎಲೈ ಪ್ರಭುವೇ! ನೀನು ಈ ಯತಿಯನ್ನು ಶಿವಾಲಯದಲ್ಲಿ ಯಜಮಾನಿಕೆಯನ್ನು ಕೊಟ್ಟು ನಿಲ್ಲಿಸು ಎಂದಿತು.

ತಥೇತಿ ರಾಮಚಂದ್ರೋಽಪಿ ಶಿಬಿಕಾಯಾಂ ನ್ಯವೇಶ್ಯ ತಂ ।
ಸ್ರಗ್ವಸ್ತ್ರಚಂದನಾದ್ಯೈಶ್ಚ ಸಂಪೂಜ್ಯಾಥ ಯತಿಂ ಮುದಾ ॥ ೩೨ ॥

ವಾದ್ಯಘೋಷೈರ್ನರ್ತನಾದ್ಯೈರುತ್ಸವೈಶ್ಚ ಶಿವಾಲಯಂ ।
ನೀತ್ವಾ ಶಿವಾಲಯಸ್ಯಾಧಿಪತ್ಯೇ ಸಂಸ್ಥಾಪಯತ್ಪ್ರಭುಃ ॥ ೩೩ ॥

ತದಾಜ್ಞಾನಾದ್ಯತಿರ್ದೈವಂ ಫಲಿತಂ ಚೇತ್ಯಮನ್ಯತ ।
ತತೋ ರಾಮೋ ಜನೈರ್ಯುಕ್ತಃ ಸ್ವಾಂ ಸಭಾಂ ಸಂವಿವೇಶ ಹ ॥ ೩೪ ॥

ತತ್ಸರ್ವಂ ಕೌತುಕಂ ದೃಷ್ಟ್ವಾ ಪೌರಾಃ ಪ್ರೋಚೂ ರಘೂತ್ತಮಂ ।
ಕಥಂ ಶುನಾದ್ಯ ಯತಯೇ ಶಿಕ್ಷೇದೃಕ್ಸಾಧಿತಾ ಪ್ರಭೋ ॥ ೩೫ ॥

೩೨–೩೩. ರಾಮನು ಹಾಗೆಯೇ ಆಗಲೆಂದು ಹೇಳಿ ಆ ಯತಿಯನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಹೂವು, ವಸ್ತ್ರ, ಒಡವೆ ಮುಂತಾದುವುಗಳಿಂದ ಸತ್ಕರಿಸಿ ವಾದ್ಯಗಳ ಘೋಷಣೆಗಳಿಂದಲೂ ಸೂಳೆಯರ ನರ್ತನಗಳಿಂದಲೂ ಮೆರವಣಿಗೆ ಯನ್ನು ಮಾಡಿಸಿಕೊಂಡು ಶಿವಾಲಯಕ್ಕೆ ಕರೆದುಕೊಂಡು ಹೋಗಿ ಆ ಶಿವಾಲಯದ ಯಜಮಾನಿಕೆಯಲ್ಲಿ ಆತನನ್ನು ನಿಯಮಿಸಿದನು.

೩೪. ಇದರಿಂದ ಆ ಯತಿಯೂ ಕೂಡ ಆಗ ಅಜ್ಞಾನದಿಂದ ತಾನು ಮಾಡಿದ ಕೆಲಸವು ಪಾಪಕರವಾದುದಾದರೂ ಪೂರ್ವಜನ್ಮದ ಪುಣ್ಯವು ಫಲಿಸಿದ್ದು ದರಿಂದ ಈ ಮೂಲಕವಾಗಿ ದೈವವು ಫಲವನ್ನು ಕೊಟ್ಟಿತು ಎಂದು ತಿಳಿದುಕೊಂಡು ಸಂತೋಷಪಟ್ಟನು. ಇತ್ತ ರಾಮನು ತನ್ನವರೊಡನೆ ಸಭೆಗೆ ಹೊರಟುಹೋದನು.

೩೫. ಇದೆಲ್ಲವನ್ನೂ ಆ ಪಟ್ಟಣಿಗರು ನೋಡಿ ಆಶ್ಚರ್ಯಗೊಂಡು ರಾಮ ನನ್ನು ಕುರಿತು ಇಂತೆಂದರು. ಎಲೈ ಪ್ರಭುವೇ ! ನಾಯಿಯು ಯತಿಗೆ ಈ ರೀತಿ ಯಾದ ಶಿಕ್ಷೆಯನ್ನು ವಿಧಿಸಲು ಕಾರಣವೇನು ?

ಅನ್ನಾರ್ಥಂ ಭ್ರಮತಸ್ತಸ್ಯ ಯತೇರ್ದತ್ತಂ ಪದಂ ಮಹತ್ ।
ತೇನಾತಿಸೌಖ್ಯಂ ಸಂಜಾತಂ ಯತಯೇ ಶಿಕ್ಷಿತಂ ನ ತತ್ ॥ ೩೬ ॥

ತತ್ಪೌರವಚನಂ ಶ್ರುತ್ವಾ ರಾಘವಸ್ತಾನ್ ವಚೋಽಬ್ರವೀತ್ ।
ಪ್ರಷ್ಟವ್ಯಃ ಶ್ವಾ ತು ಯುಷ್ಮಾಭಿಃ ವಸ್ಸಂದೇಹಂ ಹರಿಷ್ಯತಿ ॥ ೩೭ ॥

ತಥೇತಿ ಸಾರಮೇಯಂ ತಂ ಪಪ್ರಚ್ಛುರ್ನಾಗರಾಶ್ಚ ತತ್ !
ತಾನ್ ಪ್ರೋವಾಚ ಸಾರಮೇಯಃ ಶೃಣುಧ್ವಂ ಯನ್ಮಯೋಚ್ಯತೇ ॥ ೩೮ ॥

ಕೃಷಿಸಂಜಾತಧಾನ್ಯೌಘಖಲಸನ್ಮಾನಕಾರಿಣಃ ।
ಶಿವಾಲಯಮಠಾರಾಮದಾನಗ್ರಾಮಾಧಿಕಾರಿಣಃ ॥ ೩೯ ॥

---

೩೬. ಅನ್ನಕ್ಕೋಸ್ಕರವಾಗಿ ಮನೆಮನೆಗೂ ತಿರುಗುತ್ತ ಕಷ್ಟಪಡುತ್ತಿದ್ದ ಆ ಯತಿಗೆ ಆ ಸುತ್ತುವಿಕೆಯು ತಪ್ಪುವಂತೆ ಮಾಡಿ ದೊಡ್ಡಸ್ಥಾನವನ್ನು ಕೊಟ್ಟಂತಿದೆ. ಇದರಿಂದ ಅವನಿಗೆ ಬಹು ಸೌಖ್ಯವಾಯಿತು. ಅದು ಶಿಕ್ಷೆಯಲ್ಲವೇ ಅಲ್ಲ.

೩೭. ರಾಮನು ಪಟ್ಟಣಿಗರ ಮಾತನ್ನು ಕೇಳಿ ಅವರನ್ನು ಕುರಿತು ನೀವು ಆ ನಾಯಿಯನ್ನೇ ಕೇಳಿರಿ. ಅದೇ ನಿಮ್ಮಗಳ ಸಂದೇಹವನ್ನು ಪರಿಹಾರ ಮಾಡುತ್ತದೆ ಎಂದು ಹೇಳಿದನು.

೩೮. ಅವರೆಲ್ಲರೂ ಹಾಗೆಯೇ ಆಗಲೆಂದು ರಾಮನಿಗೆ ಹೇಳಿ ನಾಯಿಯ ಬಳಿಗೆ ಬಂದು ರಾಮನನ್ನು ಕೇಳಿದಂತೆ ಅದನ್ನೇ ಕೇಳಿದರು. ಅದಕ್ಕೆ ಆ ನಾಯಿಯು ಎಲೈ ಪಟ್ಟಣಿಗರಿರಾ ! ನಾನು ಹೇಳುವುದನ್ನು ಕೇಳಿರಿ.

೩೯–೪೩. ಕೃಷಿಮಾಡಿ ಬೆಳೆದ ಧಾನ್ಯವನ್ನು ಕಣದಲ್ಲಿಯೇ ಅಳೆಯುವರು, ಶಿವಾಲಯದ ಅಧಿಕಾರಿಗಳು, ಮಠದ ಅಧಿಕಾರಿಗಳು. ತೋಟದ ಅಧಿಕಾರಿಗಳು, ದಾನಧರ್ಮಗಳ ಅಧಿಕಾರಿಗಳು, ಗ್ರಾಮಾಧಿಕಾರಿಗಳು, ದಿಕ್ಕಿಲ್ಲದ ಹೆಂಗಸರ ಮತ್ತು

ಅನಾಥಸ್ತ್ರೀಬಾಲವಿತ್ತಹಾರಿಣಃ ಕ್ರೂರನಿಸ್ಸ್ವನಾಃ ।
ಗೋವಿಪ್ರಶಿವವಿತ್ತಸ್ಯ ಹಾರಿಣೋನ್ಯಾಯಕಾರಿಣಃ ॥ ೪೦ ॥

ನೃಪಗೇಹೇ ಪ್ರವಿಷ್ಟಾನಾಂ ಯಾಚಕನಾಂ ನಿವಾರಿಣಃ ।
ಪರದ್ರವ್ಯಾಪಹರ್ತಾರಃ ಪ್ರಾಯಶ್ಚಿತ್ತಾಧಿಕಾರಿಣಃ ॥ ೪೧ ॥

ವಿಪ್ರಭೋಜನದ್ರವ್ಯಸ್ಯ ಹೋಮದ್ರವ್ಯಸ್ಯ ಹಾರಿಣಃ ।
ಬಹುದ್ರವ್ಯಾಪಹರ್ತಾರಶ್ಚೈತೇ ಸರ್ವೇಽನ್ಯಜನ್ಮನಿ ॥ ೪೨ ॥

ಗಚ್ಛಂತಿ ವೈ ಶುನೋ ಯೋನಿಂ ಸತ್ಯಮೇತದ್ದ್ವಿಜೋ ಮಮ ।
ಮಯಾ ಮಠಾಧಿಪತ್ಯೇನ ಲಬ್ಧಾ ಯೋನಿಃ ಶುನಃ ಸ್ವಯಂ ॥ ೪೩ ॥

ಅತೋ ಮಯಾದ್ಯ ಯತಯೇ ಶಿಕ್ಷಿತುಂ ಪದಮರ್ಪಿತಂ ।
ಇತಿ ತದ್ವಾಕ್ಯಮಾಕರ್ಣ್ಯ ನಾಗರಾಃ ಛಿನ್ನಸಂಶಯಾಃ ॥ ೪೪ ॥

ದಿಕ್ಕಿಲ್ಲದ ಮಕ್ಕಳ ಧನವನ್ನು ಅಪಹರಿಸುವವರು ಕ್ರೂರವಾದ ಮಾತನ್ನಾಡುವವರು ಗೋವಿನಸ್ವತ್ತು, ಬ್ರಾಹ್ಮಣಸ್ವತ್ತು, ಶಿವನಸ್ವತ್ತು, ಇವನ್ನು ಅಪಹರಿಸುವವರು ಅನ್ಯಾಯದಿಂದ ನಡೆಯುವವರು ರಾಜಮಂದಿರಕ್ಕೆ ಹೋಗುವ ಯಾಚಕರನ್ನು ತಡೆಯುವವರು ಪರರ ದ್ರವ್ಯವನ್ನು ಕದಿಯುವವರು ಪ್ರಾಯಶ್ಚಿತ್ತವನ್ನು ವಿಧಿಸುವವರು ಬ್ರಾಹ್ಮಣರ ಊಟಕ್ಕೆ ಏರ್ಪಡಿಸಿರುವ ಹಣವನ್ನು ಅಪಹರಿಸುವವರು ಹೋಮದ ಪದಾರ್ಥವನ್ನು ಕದಿಯುವವರು ಬಹುವಾದ ಹಣವನ್ನು ಅಪಹರಿಸುವವರು ಇವರೆಲ್ಲರೂ ಬೇರೆಯ ಜನ್ಮದಲ್ಲಿ ನಾಯಿಯ ಜನ್ಮವನ್ನು ಹೊಂದುತ್ತಾರೆ. ನನ್ನ ಈ ಮಾತು ನಿಶ್ಚಯವೆಂದು ತಿಳಿಯಿರಿ. ನಾನೂ ಕೂಡ ಮಠಾಧಿಪತಿಯಾಗಿದ್ದುದರಿಂದಲೇ ಈ ನಾಯಿಯ ಜನ್ಮವು ಬಂದಿತು.

೪೪. ಆದ್ದರಿಂದಲೇ ನಾನು ಆ ಯತಿಗೆ ಶಿಕ್ಷೆಯನ್ನು ವಿಧಿಸುವುದಕ್ಕೆ ಆ ಸ್ಥಾನವನ್ನು ಕೊಟ್ಟೆನು. ಎಂದೆನಲು ಈ ಮಾತನ್ನು ಕೇಳಿ ಆ ಪಟ್ಟಣಿಗರಿಗೆ ಸಂಶಯವು ಹೋಯಿತು.

ತೇ ಯಯುಃ ಸ್ವೀಯಗೇಹಾನಿ ಯಯೌ ಶ್ವಾಪಿ ನಿಜಸ್ಥಲಂ ।
ದೇಹಾಂತೇ ಸ ಯತಿರ್ಜಾತಃ ಶುನೋ ಯೋನೌ ಸ್ವ ಕಿಲ್ಬಿಷಾತ್ ॥ ೪೫ ॥

ಆಪ ಸ ಶ್ವಾ ಶುಭಾಂ ಮುಕ್ತಿಂ ಭುಕ್ತ್ವಾದೌ ಸ್ವೀಯಕಿಲ್ಬಿಷಂ ।
ನ ಜ್ಞೇಯೋಽಯಂ ಯತಿಶ್ಶಿಷ್ಯ ಸಾಕೇತೇ ತ್ರ ಮೃತಸ್ತ್ವಿತಿ ॥ ೪೬ ॥

ಸ್ಥಲಾಂತರೇ ಮೃತಶ್ಚಾಯಂ ಗತಃ ಕಾರ್ಯಾರ್ಥಮಾತ್ಮನಃ ।
ಅಯೋಧ್ಯಾಯಾಂ ಮೃತನಾಂ ಚ ಪುನರ್ಜನ್ಮ ನ ವಿದ್ಯತೇ ॥ ೪೭ ॥

ಕ್ವ ಯತಿಸ್ಸಾರಮೋಽಯತ್ವಂ ಕ್ವ ಸ ಶ್ವಾ ಕ್ವ ಗತಿಶ್ಚ ಸಾ ।
ಗಹನಾ ಕರ್ಮಣಶ್ಚಾತ್ರ ಗತಿಃ ಜ್ಞೇಯಾ ಮಹಾತ್ಮಭಿಃ ॥ ೪೮ ॥

---

೪೫. ಅನಂತರ ಅವರೆಲ್ಲರೂ ತಮ್ಮ ತಮ್ಮ ಮನೆಗೆ ಹೋದರು. ನಾಯಿಯೂ ಅದರ ಜಾಗಕ್ಕೆ ಹೋಯಿತು. ಈ ಶಿವಾಲಯದಲ್ಲಿ ಮಾಡಿದ ಪಾಪದಿಂದ ಆ ಯತಿಯು ಮುಂದಿನ ಜನ್ಮದಲ್ಲಿ ನಾಯಿಯಾಗಿ ಹುಟ್ಟಿದನು.

೪೬. ಆ ನಾಯಿಯು ತನ್ನ ಪಾಪವನ್ನು ಅನುಭವಿಸಿ ಆಮೇಲೆ ಒಳ್ಳೆಯ ಮುಕ್ತಿಯನ್ನು ಹೊಂದಿತು. ಎಲೈ ಶಿಷ್ಯನೇ ! ಯತಿಯು ಅಯೋಧ್ಯೆಯಲ್ಲಿ ಮರಣವನ್ನು ಹೊಂದಿದನೆಂದು ತಿಳಿಯಬೇಡ.

೪೭. ಇವನು ಒಂದುಸಾರಿ ಯಾವುದೋ ಕೆಲಸಕ್ಕೋಸ್ಕರ ಪರಸ್ಥಳಕ್ಕೆ ಹೋಗಿದ್ದಾಗ ಅಲ್ಲಿ ಸತ್ತುಹೋದನು. ಅಯೋಧ್ಯೆಯಲ್ಲಿ ಸತ್ತವರಿಗೆ ಪುನರ್ಜನ್ಮವು ಬರುವುದಿಲ್ಲ. ಆದ್ದರಿಂದಲೇ ಇಲ್ಲಿ ಆ ಯತಿಗೆ ಮರಣವು ಲಭಿಸಲಿಲ್ಲ.

೪೮. ಯತಿಯಾಗಿವದ್ದನು ನಾಯಾಗಿ ಹುಟ್ಟುವುದೆಂದರೇನು ! ನಾಯಿಯಾದುದು ಉತ್ತಮವಾದ ಮುಕ್ತಿಯನ್ನು ಹೊಂದುವುದು ಎಂದರೇನು ! ಇವು ಸಂಭವಿಸುವುದು ಬಹು ಆಶ್ಚರ್ಯಕರವು. ಆದ್ದರಿಂದ ಕರ್ಮಗತಿಯು ಬಹು ಗಹನವಾದದು. ಯಾರಿಂದಲೂ ತಿಳಿಯಲಾಗುವುದಿಲ್ಲ, ಮಹಾತ್ಮರಾದವರು ಮಾತ್ರ ತಿಳಿಯಬಹುದು.

ಕ್ವ ಯತಿಸ್ಸಾರಮೇಯಃ ಕ್ವ ನ್ಯಾಯಶ್ಚೇತ್ಥಂ ರಮಾಪತೇಃ ।
ಆಸೀತ್ಸಸ್ಸದೈವಾತ್ರ ನಾನ್ಯಾಯಸ್ತನ್ಮುಖೇಕ್ಷಣಾತ್ ॥ ೪೯ ॥

ಅಥೈಕದಾ ತು ಸಾಕೇತವಾಸಿನೋ ಭೂಸುರಸ್ಯ ಚ ।
ಪಂಚತ್ವಂ ಪಂಚ ವರ್ಷೀಯಃ ಪುತ್ರಃ ಪ್ರಾಪ್ತಶ್ಶಿಶುಃ ಪ್ರಿಯಃ ॥ ೫೦ ॥

ತದಾ ವಿಪ್ರಸ್ಸಪತ್ನೀಕಃ ತತ್ಪ್ರೇತಮರುಣೋದಯೇ ।
ರಾಜದ್ವಾರಂ ಸಮಾನೀಯ ರುರೋದೋಚ್ಚೈಃ ಸ್ವರೈಃ ಮುಹುಃ ॥ ೫೧ ॥

ಅಬ್ರವೀತ್ ಪುತ್ರಶೋಕೇನ ವ್ಯಥಿತಃ ಕ್ರೋಧಸಂಯುತಃ ।
ಸೀತಾಮಾಲಿಂಗ್ಯ ರಾಜೇಂದ್ರ ಕಥಂ ತ್ವಂ ನಿದ್ರಿತೋಽಸಿ ಹಿ ॥ ೫೨ ॥

---

೪೯. ಪೂಜ್ಯನಾದ ಯತಿಗೂ ನಿಂದ್ಯವಾದ ನಾಯಿಗೂ ಬಹುವಾದ ಹೆಚ್ಚುಕಡಿಮೆಗಳಿರುವುವು. ಆದರೂ ರಾಮನ ನ್ಯಾಯವು ಈ ರೀತಿಯಾಗಿ ಪಕ್ಷಪಾತವಿಲ್ಲದೆ ಇದ್ದಿತು. ಅವನಲ್ಲಿ ಯಾವಾಗಲೂ ಸತ್ಯವೇ ಇದ್ದಿತು. ಅವನ ಮುಖದರ್ಶನದಿಂದಲೇ ಅನ್ಯಾಯವು ನಾಶವಾಗುತ್ತಿದ್ದಿತು.

೫೦. ಒಂದುಸಾರಿ ರಾಮನು ರಾಜ್ಯಭಾರಮಾಡುತ್ತಿರುವಾಗ ಆ ಅಯೋಧ್ಯೆಯಲ್ಲಿ ವಾಸಮಾಡುತ್ತಿದ್ದ ಒಬ್ಬ ಬ್ರಾಹ್ಮಣನ ಐದುವರ್ಷದ ಬಹು ಪ್ರೀತಿಪಾತ್ರವಾದ ಗಂಡುಮಗುವು ಮರಣವನ್ನು ಹೊಂದಿತು.

೫೧. ಆಗ ಆ ಬ್ರಾಹ್ಮಣನು ಅರುಣೋದಯದ ವೇಳೆಯಲ್ಲಿ ಹೆಂಡತಿಯನ್ನು ಕರೆದುಕೊಂಡು ಆ ಹೆಣವನ್ನೂ ಎತ್ತಿಕೊಂಡು ಅರಮನೆಯ ಬಾಗಿಲಿಗೆ ಹೋಗಿ ಗಟ್ಟಿಯಾಗಿ ಅಳುವುದಕ್ಕೆ ಮೊದಲಿಟ್ಟನು.

೫೨. ಅವನಿಗೆ ಮಗನು ಸತ್ತುದರಿಂದ ಬಹುವಾದ ದುಃಖವೂ ಅದರಿಂದ ಕೋಪವೂ ಬಂದು ಎಲೈ ರಾಮನೇ ! ನೀನು ರಾಜ್ಯಮದದಿಂದ ಸೀತೆಯನ್ನು ಆಲಿಂಗಿಸಿಕೊಂಡು ಹೇಗೆ ತಾನೆ ಮಲಗಿದ್ದೀಯೇ ? (ವಿವೇಕಹೀನನಾಗಿದ್ದೀಯೆ ?)

ತ್ವದ್ರಾಜ್ಯೇಽಧರ್ಮತಃ ಕಸ್ಯ ಮೃತೋ ಮೇ ಬಾಲಕಃ ಪ್ರಿಯಃ ।
ತ್ವತ್ತೋಽಧರ್ಮೋಽಥವಾನ್ಯಾಚ್ಚ ಜಾತೋಽಧರ್ಮೋ ನ ವೇದ್ಮ್ಯಹಂ ೫೩

ನೃಪೇ ಪಾಪಿನಿ ಮ್ರಿಯಂತೇ ನರಾ ಅಲ್ಪಾಯುಷಃ ಶ್ರುತಂ ।
ಯಸ್ಯ ರಾಜ್ಯೇ ಜನೈಸ್ಸರ್ವೈಃ ಯೋಽಧರ್ಮಃ ಕುರುತೇ ಭುವಿ ॥ ೫೪ ॥

ಸೋಽಪಿ ಜ್ಞೇಯೋ ನೃಪಸ್ಯೈವ ಯತಸ್ತೇಷಾಂ ನ ಶಿಕ್ಷಿತಂ ।
ಅತಸ್ತೇಽಧರ್ಮಿಣೋ ರಾಜ್ಞೋ ರಾಜ್ಯೇ ಮೇಽಯಂ ಶಿಶುರ್ಮೃತಃ ॥ ೫೫ ॥

ಉಪಾಯಂ ಚಿಂತಯಸ್ವಾಸ್ಯ ಜೀವನೇಽದ್ಯ ಜವಾನ್ನೃಪ ।
ನೋ ಚೇದಾವಾಂ ಚಿತಿಂ ಚಾರುರೋಹಾವಸ್ತನಯೇನ ಹಿ ॥ ೫೬ ॥

---

೫೩. ನಿನ್ನ ರಾಜ್ಯದಲ್ಲಿ ಯಾವನ ಅಧರ್ಮದಿಂದಲೋ ನನ್ನ ಪ್ರೀತಿಪಾತ್ರನಾದ ಈ ಬಾಲಕನು ಸತ್ತುಹೋಗಿರುವನು. ಇದು ನಿನ್ನ ಅಧರ್ಮವೋ ಅಥವಾ ಮತ್ತಾವನ ಅಧರ್ಮವೋ ನನಗೆ ತಿಳಿಯದು.

೫೪–೫೫. ರಾಜನು ಪಾಪಕೆಲಸಗಳನ್ನು ಮಾಡಿದರೆ ಅಥವಾ ಅವನು ಪಾಪಿಯಾದರೆ ಅವನ ರಾಜ್ಯದಲ್ಲಿ ಜನರು ಅಲ್ಪಾಯುಸ್ಸಿನಲ್ಲಿಯೇ ಸಾಯುತ್ತಾರೆ ಎಂಬುದಾಗಿ ಶಾಸ್ತ್ರದಲ್ಲಿದೆ. ಯಾವ ರಾಜನ ರಾಜ್ಯದಲ್ಲಿ ಜನಗಳು ಅಧರ್ಮವನ್ನು ಮಾಡುವರೋ ಆ ಅಧರ್ಮಮಾಡಿದವರನ್ನು ಆ ರಾಜನು ಶಿಕ್ಷಿಸದಿದ್ದರೆ ಆ ಅಧರ್ಮವು ರಾಜನದೆಂದೇ ತಿಳಿಯಬೇಕು. ಧರ್ಮಿಷ್ಠನಾದ ರಾಜನ ರಾಜ್ಯದಲ್ಲಿ ನನ್ನ ಈ ಶಿಶುವು ಸತ್ತುಹೋಗಿರುವುದರಿಂದ ಪ್ರಜೆಗಳು ಅಧರ್ಮವನ್ನು ಮಾಡಿದ್ದರೂ ಅವರನ್ನು ರಾಜನು ಶಿಕ್ಷಿಸದಿರುವುದರಿಂದ ಆ ಪಾಪವನ್ನು ರಾಜನೇ ಮಾಡಿದಂತಾಯಿತು. ಈ ನನ್ನ ಮಗುವು ಅದರಿಂದಲೇ ಸತ್ತುಹೋಗಿರುವುದು ಆದ್ದರಿಂದ ಈ ತಪ್ಪು ರಾಜನದೇ ಆಗಿರುವುದು.

೫೬. ಎಲೈ ದೊರೆಯೇ! ಈ ಮಗುವು ಬದುಕುವುದಕ್ಕೆ ಬೇಗನೆ ಉಪಾಯವನ್ನು ಕಂಡುಹಿಡಿ. ಹಾಗೆ ಈ ಮಗುವು ಬದುಕದಿದ್ದರೆ ನಾವು ದಂಪತಿಗಳಿಬ್ಬರೂ ಆ ಮಗುವಿನ ಚಿತೆಯನ್ನೇರಿ ಸಾಯುವೆವು.

ಸ್ಮರ ವೃತ್ತಂ ಶ್ರಾವಣಸ್ಯ ಹೇತೋರ್ಯಜ್ಜನಕಾಯ ತೇ ।
ಜಾತಂ ಶಾಪಾದಿಕಂ ಪೂರ್ವಂ ತದ್ವದತ್ರಾಪಿ ತೇ ಭವೇತ್ ॥ ೫೭ ॥

ತತೋ ವಿಪ್ರಪ್ರಿಯಾ ಪ್ರಾಹ ಸೀತಾಂ ಪ್ರೋಚ್ಚಸ್ವರೇಣ ಹಿ ।
ಕಥಂ ತ್ವಂ ಪತಿಮಾಲಿಂಗ್ಯ ನಿದ್ರಿತಾಸಿ ಸುಖಂ ಶುಭೇ ॥ ೫೮ ॥

ತ್ವಮಪ್ಯಸಿ ಪುತ್ರವತೀ ಮೇ ದುಃಖಂ ಮಾತ್ಮನಃ ಕುರು ।
ಉಪಾಯಂ ಕಾರಯಸ್ವಾದ್ಯ ಭರ್ತ್ರಾಸ್ಯ ಜೀವನೇ ಶಿಶೋಃ ॥ ೫೯ ॥

ಇತಿ ತದ್ದಂಪತೀವಾಕ್ಯಂ ಶ್ರುತ್ವಾ ಸರ್ವೇ ಪುರೌಕಸಃ ।
ಆಸನ್ನವ್ಯಗ್ರಚಿತ್ತಾಸ್ತೇ ಪ್ರೇತಮಾವಾರ್ಯ ಸಂಸ್ಥಿತಾಃ ॥ ೬೦ ॥

---

೫೭. ಮತ್ತು ನೀನು ನಿನ್ನ ಹಿಂದಿನ ವಿಷಯವನ್ನು ಸ್ಮರಿಸಿಕೋ. ನಿನ್ನ ತಂದೆಗೆ ಶ್ರವಣನ ಕಾರಣದಿಂದ ಹಿಂದೆ ಶಾಪಾದಿಗಳು ಯಾವರೀತಿಯಾಗಿ ಸಂಭವಿಸಿದುವೋ ಅದೇ ರೀತಿಯಾಗಿ ಈಗಲೂ ನಿನಗೆ ಆಗುವುದು.

೫೮. ಅನಂತರ ಆ ಬ್ರಾಹ್ಮಣನ ಹೆಂಡತಿಯು ಸೀತೆಯನ್ನು ಕುರಿತು ಗಟ್ಟಿಯಾಗಿ ಕೂಗುತ್ತ ಇಂತೆಂದಳು. ಎಲೈ ಶುಭಕರಳಾದ ಸೀತೆಯೇ ! ನೀನು ಗಂಡನನ್ನು ಆಲಿಂಗಿಸಿಕೊಂಡು ಸುಖವಾಗಿ ಹೇಗೆ ತಾನೆ ಮಲಗಿದ್ದೀಯೆ ?

೫೯. ನೀನೂ ಕೂಡ ಮಕ್ಕಳನ್ನು ಹೆತ್ತವಳಷ್ಟೆ ! ನನ್ನ ದುಃಖವು ನಿನಗೆ ಬಾರದಿರುವಂತೆ ಮಾಡಿಕೋ. ಈ ಶಿಶುವು ಬದುಕುವಂತೆ ನಿನ್ನ ಗಂಡನಿಂದ ಉಪಾಯವನ್ನು ಮಾಡಿಸು.

೬೦. ಆ ಗಂಡಹೆಂಡಿರು ಹೀಗೆ ಹೇಳುತ್ತ ಅಳುತ್ತಿರುವುದನ್ನು ಆ ಪಟ್ಟಣದ ಜನರೆಲ್ಲರೂ ಕೇಳಿ ಆ ಹೆಣವನ್ನು ಸುತ್ತುವರಿದುಕೊಂಡು ದುಗುಡ ಮನಸ್ಸಿನಿಂದ ಕೇಳುತ್ತಿದ್ದರು.

ಸೀತಾರಾಮಾವಪಿ ತಯೋರ್ವಾಕ್ಯಂ ಶ್ರುತ್ವಾತಿವಿಹ್ವಲೌ ।
ವಿನಿರ್ಗತೌ ತೇತ್ಕಿಶಾಲಾಬಹಿಸ್ತದ್ದುಃಖ ದುಃಖಿತೌ ॥ ೬೧ ॥

ನಿವಾರ್ಯ ವಂದಿಗೀತಾನಿ ರಾಜದ್ವಾರಂ ತಯೋಃ ಪುರಃ ।
ವೇಗೇನ ಜಗ್ಮತುಃ ಪದ್ಭಿಃ ಸೀತಾರಾಮೌ ಗತಶ್ರಿಯೌ ॥ ೬೨ ॥

ದೃಷ್ಟ್ವಾ ಸೀತಾಂ ಚ ರಾಮಂ ಚ ತೌ ಶೋಕಂ ಚಕ್ರತುರ್ಮುಹುಃ ।
ತಾವಾಶ್ವಾಸ್ಯ ರಾಮಚಂದ್ರಸ್ತಬಾಹ ಗದ್ಗದಾಕ್ಷರಃ ॥ ೬೩ ॥

ಮಾ ಶೋಕಂ ಕುರುತಶ್ಶ್ಯೋಭೌ ಮದ್ವೀರ್ಯಂ ಶ್ರುಣುತಸ್ತ್ವಿತಿ ।
ಕೃತ್ವೋಪಾಯಂ ಹಿ ಯುವಯೋಃ ಪುತ್ರಂ ಸಂಜೀವಯಾಮ್ಯಹಂ ॥೬೪॥

---

೬೧. ಸೀತೆಯೂ ರಾಮನೂ ಕೂಡ ಅವರ ಮಾತನ್ನು ಕೇಳಿ ಬಹುವಾಗಿ ದುಃಖಗೊಂಡ ಮನಸ್ಸುಳ್ಳವರಾದರು. ಮತ್ತು ಆ ದಂಪತಿಗಳ ದುಃಖದಿಂದ ತಮಗೂ ದುಃಖಬಂದು ಆ ರತಿಶಾಲೆಯಿಂದ ಹೊರಗೆ ಬಂದರು.

೬೨. ಈ ಸೀತಾರಾಮರು ಬೆಳಗ್ಗೆ ಹೊಗಳುವ ಹೊಗಳುಭಟರ ಹೊಗಳಿಕೆಯನ್ನು ನಿಲ್ಲಿಸಿ ಅರಮನೆಯ ಬಾಗಿಲಿಗೆ ಕಾಲಿನಿಂದ ನಡೆದುಕೊಂಡೇ ಬಂದು ಕಾಂತಿಹೀನರಾಗಿ ಅವರಮುಂದೆ ನಿಂತರು.

೬೩. ಅವರು ಆ ರಾಮನನ್ನೂ ಸೀತೆಯನ್ನೂ ನೋಡಿದೊಡನೆಯೇ ದುಃಖವು ಹೆಚ್ಚಿತು. ಅದರಿಂದ ಬಹುವಾಗಿ ಅಳುವುದಕ್ಕೆ ಮೊದಲು ಮಾಡಿದರು. ಆಗ ರಾಮಚಂದ್ರನು ಅವರನ್ನು ಸಮಾಧಾನಮಾಡುತ್ತ ಗದ್ಗದ ಸ್ವರದಿಂದ ಇಂತೆಂದು ಹೇಳಿದನು.

೬೪. ಎಲೈ ದಂಪತಿಗಳಿರಾ! ನೀವು ದುಃಖಪಡಬೇಡಿರಿ. ನನ್ನ ಪರಾಕ್ರಮವನ್ನು ನೋಡಿರಿ. ಏನಾದರೂ ಉಪಾಯವನ್ನು ಮಾಡಿ ನಿಮ್ಮ ಮಗನನ್ನು ಬದುಕಿಸುತ್ತೇನೆ.

ನ ಜೀವಿತಶ್ಚೇದ್ಯುವಯೋಃ ಪುತ್ರಸ್ತರ್ಹ್ಯರ್ಪಯೇ ಕುಶಂ ।
ಗಿರಂ ಸತ್ಯಾಮಿಮಾಂ ಚೋಭೌ ಪಶ್ಯತಸ್ತ್ವಿಹ ನೋದ್ಯ ಹಿ ॥ ೬೫ ॥

ತತಸ್ಸೀತಾ ವಿಪ್ರಪತ್ನೀಮಾಶ್ವಾಸ್ಯಾಹ ಗಿರಂ ಶುಭಾಂ ।
ರಾಮೇಣ ತೇ ಪ್ರತಿಜ್ಞಾತಂ ಕುಶದಾನೇನ ಭಾಮಿನಿ ॥ ೬೬ ॥

ಅಹಮಪ್ಯದ್ಯ ತೇ ವಚ್ಮಿ ತವ ದುಃಖಸ್ಯ ಶಾಂತಯೇ ।
ನ ಜೀವಿತಶ್ಚೇದ್ರಾಮೇಣ ಮಯಾಯಂ ತ್ವಚ್ಛಿಶುಃ ಪ್ರಿಯಃ ॥ ೬೭ ॥

ತರ್ಹಿ ತ್ವದ್ದುಃಖಶಾಂತ್ಯರ್ಥಮರ್ಪಯೇಹಂ ಲವಂ ಪ್ರಿಯಂ ।
ತಾಭ್ಯಾಂ ಕುಶಲವಾಭ್ಯಾಂ ತ್ವಂ ಪುತ್ರದುಃಖಂ ತ್ಯಜಿಷ್ಯಸಿ ॥ ೬೮ ॥

ಭಜಿಷ್ಯಸಿ ತ್ವಂ ಮತ್ಸೌಖ್ಯಮತಶ್ಶೋಕಂ ಕುರುಷ್ವ ಮಾ ।
ತತಃ ಪ್ರಾಹ ದ್ವಿಜಂ ರಾಮಸ್ತ್ವಂ ಪತ್ನ್ಯಾತ್ರ ಸ್ಥಿರೋ ಭವ ॥ ೬೯ ॥

---

೬೫. ನಿಮ್ಮ ಮಗುವು ಬದುಕದಿದ್ದ ಪಕ್ಷದಲ್ಲಿ ನನ್ನ ಮಗನಾದ ಕುಶನನ್ನೇ ನಿಮಗೆ ಕೊಟ್ಟುಬಿಡುತ್ತೇನೆ. ಈ ಮಾತು ಸತ್ಯವಾದುದೆಂದು ನೀವಿಬ್ಬರೂ ನಿಶ್ಚಯವಾಗಿ ತಿಳಿಯಿರಿ.

೬೬. ಸೀತೆಯೂ ಕೂಡ ಆ ಬ್ರಾಹ್ಮಣನ ಹೆಂಡತಿಯನ್ನು ಕುರಿತು ಸಮಾಧಾನಪಡಿಸುತ್ತ ಇಂತೆಂದಳು. ಅಮ್ಮಾ! ರಾಮನು ನಿನ್ನ ಮಗನನ್ನು ಬದುಕಿಸುತ್ತಾನೆ. ಇಲ್ಲದಿದ್ದರೆ ತನ್ನ ಮಗನಾದ ಕುಶನನ್ನೇ ಕೊಡುತ್ತೇನೆ. ಎಂಬುದಾಗಿ ಪ್ರತಿಜ್ಞೆ ಮಾಡಿರುವನು.

೬೭–೬೮. ನಾನೂ ಕೂಡ ನಿನ್ನ ದುಃಖದ ಶಾಂತಿಗೋಸ್ಕರವಾಗಿ ಹೇಳುತ್ತೇನೆ. ಕೇಳು. ರಾಮನು ನಿನ್ನ ಮಗನನ್ನು ಬದುಕಿಸದಿದ್ದರೆ ನಾನು ನನಗೆ ಪ್ರಿಯನಾದ ಈ ಲವನನ್ನು ನಿನಗೆ ಕೊಟ್ಟುಬಿಡುತ್ತೇನೆ. ಆ ಕುಶಲವರನ್ನು ನಿನ್ನ ಮಕ್ಕಳನ್ನಾಗಿ ಮಾಡಿಕೊಂಡು ನಿನ್ನ ದುಃಖವನ್ನು ಬಿಟ್ಟುಬಿಡುವಿಯಂತೆ.

೬೯. ಆಗ ನೀನು ನನ್ನಂತೆಯೇ ಸುಖವಾಗಿರು ದುಃಖಮಾಡದೆ ಅದನ್ನು ಬಿಟ್ಟುಬಿಡು ಎಂದಳು. ರಾಮನೂ ಕೂಡ ಆ ಬ್ರಾಹ್ಮಣನನ್ನು ಕುರಿತು ಎಲೈ ಬ್ರಾಹ್ಮಣನೇ! ನೀನು ದುಃಖಿಸದೆ ಇಲ್ಲಿಯೇ ನಿನ್ನ ಹೆಂಡತಿಯೊಡನೆ ಇರು.

ಮಾ ಕುರುಷ್ವ ಮುಹುಃ ಖೇದಂ ತ್ವತ್ಪುತ್ರಂ ಜೀವಯಾಮ್ಯಹಂ ।
ಇತ್ಯುಕ್ತ್ವಾ ಲಕ್ಷ್ಮಣೇನೈವ ತೈಲದ್ರೋಣ್ಯಾಂ ಶವಂ ಶಿಶೋಃ ॥ ೭೦ ॥

ನಿಧಾಯ ಕ್ರಿಮಿದುರ್ಗಂಧಸ್ಫುರಣಸ್ಯಪ್ರಶಾಂತಯೇ ।
ಸ್ವಯಂ ಸ್ನಾತ್ವಾ ನಿತ್ಯವಿಧಿಂ ಚಾಕರೋತ್ಖಿನ್ನಮಾನಸಃ ॥ ೭೧ ॥

ತತಸ್ಸಭಾಸಂಸ್ಥಿತಸ್ಸ್ವ ವಸಿಷ್ಠಂ ಪ್ರಾಹ ರಾಘವಃ ।
ರಾಜ್ಯಂ ಶಾಸತಿ ಧರ್ಮೇಣ ತತ್ರಾಯಂ ನೈ ಶಿಶುಃ ಕಥಂ ॥ ೭೨ ॥

ಬಾಲ್ಯತ್ವೇ ಪಂಚತಾಂ ಪ್ರಾಪ್ತಸ್ತತ್ರೋಪಾಯಂ ವಿಚಿಂತ್ಯತಾಂ ।
ಇತಿ ಯಾವದ್ಗುರುಂ ರಾಮಃ ಪ್ರೋವಾಚ ತಾವದಂಬರಾತ್ ॥ ೭೩ ॥

---

೭೦. ಮತ್ತೆ ಮತ್ತೆ ಅಳುತ್ತಲೇ ಇರಬೇಡ. ನಿನ್ನ ಮಗನನ್ನು ನಾನು ಬದುಕಿಸುತ್ತೇನೆ. ಎಂದು ಹೇಳಿ ಲಕ್ಷ್ಮಣನಿಗೆ ಹೇಳಿ ಎಣ್ಣೆಯ ಕೊಪ್ಪರಿಗೆಯಲ್ಲಿ ಆ ಮಗುವಿನ ಶವವನ್ನು ಇಡಿಸಿದನು.

೭೧. ಹಾಗೆ ಎಣ್ಣೆಯಲ್ಲಿ ಶವವನ್ನಿಟ್ಟರೆ ಅದು ಹುಳುಬೀಳದೆ ಕೊಳೆಯದೆ ನಾತವೂ ಕೂಡ ಬರದಂತೆ ಇರುತ್ತದೆ. ಆದ್ದರಿಂದ ಹಾಗೆ ಇಡಿಸಿದನು. ಅನಂತರ ಖಿನ್ನವಾದ ಮನಸ್ಸುಳ್ಳವನಾಗಿ ರಾಮನು ಸ್ನಾನಮಾಡಿ ನಿತ್ಯವಿಧಿಯನ್ನು ಮುಗಿಸಿಕೊಂಡನು.

೭೨-೭೪. ಅನಂತರ ಸಭಾಸ್ಥಾನಕ್ಕೆ ಬಂದು ಕುಳಿತುಕೊಂಡು ವಸಿಷ್ಠನನ್ನು ಕುರಿತು ಇಂತೆಂದನು. ಎಲೈ ವಸಿಷ್ಠನೆ! ಧರ್ಮದಿಂದ ರಾಜ್ಯವನ್ನು ಆಳುತ್ತಿರುವೆನು. ಆದರೂ ಕೂಡ ಈ ಬ್ರಾಹ್ಮಣನ ಮಗುವು ಬಾಲ್ಯದಲ್ಲಿಯೇ ನನ್ನ ರಾಜ್ಯದಲ್ಲಿ ಮರಣಹೊಂದಿರುವುದಲ್ಲ! ಇದಕ್ಕೆ ಕಾರಣವೇನು ? ಇದನ್ನು ಬದುಕಿಸುವ ಉಪಾಯವನ್ನು ಯೋಚಿಸು. ಎಂಬುದಾಗಿ ಹೇಳುತ್ತಿರುವಾಗಲೇ

ನಾರದಃ ಪ್ರಯಯೌ ವೀಣಾಂ ರಣಯನ್ ತತ್ಸಭಾಂ ಜವಾತ್ ।
ಪ್ರತ್ಯುದ್ಗಮ್ಯಾಥ ತಂ ರಾಮಃ ಪರಿಪೂಜ್ಯ ಯಥಾವಿಧಿ || ೭೪ ||

ಸಂಶ್ರಾವ್ಯ ಸಕಲಂ ವೃತ್ತಂ ಪುನಃ ಪಪ್ರಚ್ಛ ತಂ ಮುನಿಂ ।
ತ್ವಯೋಪಾಯೋತ್ರ ವಕ್ತವ್ಯಃ ಶಿಶೋಃಶ್ಚಾಸ್ಯ ಪ್ರಜೀವನೇ || ೭೫ ||

ಪುತ್ರಾಭ್ಯಾಂ ಹಿ ಪ್ರತಿಜ್ಞಾತಂ ದ್ವಿಜಾಯ ಸೀತಯಾ ಮಯಾ ।
ಕಿಮರ್ಥಂ ಮಮ ರಾಜ್ಯೇಽರ್ಭೋ ಮೃತಸ್ತ್ವೀದೃಕ್ ನವೇದ್ಮ್ಯಹಂ || ೭೬ ||

ನಾರದಃ ರಾಘವಃ
ತದ್ರಾಮವಚನಂ ಶ್ರುತ್ವಾ ರಾಘವಂ ಪ್ರಾಹ ನಾರದಃ ।
ರಾಮ ತ್ವದ್ವಿಷಯೇಽಧರ್ಮಂ ನ ಕೋಽಪ್ಯಾಚರತೇ ಜನಃ || ೭೭ ||

ನಾರದನು ವೀಣೆಯನ್ನು ನುಡಿಸುತ್ತಾ ಅಂತರಿಕ್ಷಮಾರ್ಗದಿಂದ ಆ ರಾಮನ ಸಭೆಗೆ ಬಂದನು. ಆಗ ರಾಮನು ಆ ನಾರದನನ್ನು ಎದುರುಗೊಂಡು ಕ್ರಮವಾಗಿ ಅವನನ್ನು ಪೂಜಿಸಿದನು.

೭೫ ಆ ನಾರದನ ಕುಶಲಪ್ರಶ್ನೆಯನ್ನು ಕೇಳಿದಮೇಲೆ ತನಗೆ ಪ್ರಾಪ್ತವಾಗಿರುವ ತೊಂದರೆಯನ್ನು ವಿಶದವಾಗಿ ಅವನಿಗೆ ತಿಳಿಸಿದನು. ಅನಂತರ ಈ ಮಗುವು ಬದುಕುವುದಕ್ಕೆ ನೀನು ಉಪಾಯವನ್ನು ಹೇಳಬೇಕು.

೭೬. ನಾನೂ ಸೀತೆಯೂ ಕೂಡ ಆ ಬ್ರಾಹ್ಮಣನಿಗೆ ನಿನ್ನ ಮಗುವು ಬದುಕದಿದ್ದರೆ ನಮ್ಮ ಕುಶಲವರನ್ನು ಕೊಡುತ್ತೇವೆ. ಎಂದು ಪ್ರತಿಜ್ಞೆ ಮಾಡಿದ್ದೇವೆ. ಆದರೂ ನನ್ನ ರಾಜ್ಯದಲ್ಲಿ ಈ ಶಿಶುವು ಈ ರೀತಿಯಾಗಿ ಸಾಯಲು ಕಾರಣವೇನು ? ಎಂಬುದನ್ನು ನಾನು ತಿಳಿಯದವನಾಗಿದ್ದೇನೆ. ಎಂದು ಕೇಳಿದನು.

೭೭. ರಾಮನು ಇಂತೆಂದುದನ್ನು ನಾರದನು ಕೇಳಿ ಆದರದಿಂದ ಇಂತೆಂದನು. ಎಲೈ ರಾಮನೆ ! ನಿನ್ನ ರಾಜ್ಯದಲ್ಲಿ ಯಾವ ಮನುಷ್ಯನೂ ಕೂಡ ಅಧರ್ಮವನ್ನು ಆಚರಿಸುತ್ತಿರುವುದಿಲ್ಲ. ಅದು ನಿಶ್ಚಯವು.

ಭೂಮ್ಯಾಂ ಸರ್ವತ್ರ ದ್ರಷ್ಟವ್ಯಂ ತ್ವಯಾ ಗತ್ವಾದ್ಯ ಮದ್ಗಿರಾ ।
ಯದ್ಯಪ್ಯಹಂ ವಿಜಾನಾಮಿ ಭೂಮ್ಯಾಂ ವೃತ್ತಂ ಚ ಜ್ಞಾನಕಃ ॥ ೭೮ ॥

ತಥಾಪಿ ಜನಶಿಕ್ಷಾರ್ಥಂ ತ್ವಾಮೇವ ಪ್ರೇಷಯಾಮ್ಯಹಂ ।
ತ್ವಂ ದೃಷ್ಟ್ವಾಽಧರ್ಮನಿರತಂ ಜನಂ ಶಿಕ್ಷಯ ಸಾದರಂ ॥ ೭೯ ॥

ಅಧರ್ಮಚ್ಛೇದನೇನಾಯಂ ಜೀವಯಿಷ್ಯತಿ ವೈ ಶಿಶುಃ ।
ತಥೇತಿ ರಾಘವಶ್ಚೋಕ್ತ್ವಾ ವಿಸರ್ಜ್ಯ ನಾರದಂ ಮುನಿಂ ॥ ೮೦ ॥

ಸೀತಯಾ ನಾಗರೈಸ್ಸರ್ವೈಃ ಭ್ರಾತೃಭಿರ್ಗುರುಣಾ ಸಹ ।
ಪುತ್ರಾಭ್ಯಾಂ ಮಂತ್ರಿಭಿರ್ಯುಕ್ತಃ ಪುಷ್ಪಕಂ ಚಾರುರೋಹ ಸಃ ॥ ೮೧ ॥

---

೭೮. ಈಗ ನನ್ನ ಮಾತಿನಂತೆ ನೀನು ಹೊರಟು ಭೂಮಿಯಲ್ಲಿ ಎಲ್ಲಾ ಕಡೆಯಲ್ಲಿಯೂ ಸುತ್ತಿ ನೋಡು. ನಾನೇನೋ ಜ್ಞಾನದೃಷ್ಟಿಯಿಂದ ಭೂಮಿಯಲ್ಲಿ ನಡೆಯುವ ವಿಷಯಗಳನ್ನು ತಿಳಿಯಬಲ್ಲೆನು.

೭೯. ಆದರೂ ಕೂಡ ನಾನು ಜನರಿಗೆ ಉಪದೇಶಮಾಡಲು ನಿನ್ನನ್ನೇ ಕಳುಹಿಸುತ್ತೇನೆ. ನೀನೇ ಅಧರ್ಮದಲ್ಲಿ ಆಸಕ್ತನಾಗಿರುವ ಮನುಷ್ಯನನ್ನು ಕಂಡುಹಿಡಿದು ಅವನನ್ನು ಶಿಕ್ಷಿಸು.

೮೦. ನೀನು ಅಧರ್ಮಮಾಡುವವನನ್ನು ಶಿಕ್ಷಿಸಿದರೆ ಈ ಬಾಲಕನು ನಿಶ್ಚಯವಾಗಿಯೂ ಬದುಕುವನು. ಎನ್ನಲು ರಾಮನು ನಾರದನ ಈ ಮಾತನ್ನು ಕೇಳಿ ಅವನನ್ನು ಗೌರವಿಸಿ ಕಳುಹಿಸಿಬಿಟ್ಟನು.

೮೧. ಆಗ ರಾಮನು ಸೀತೆಯನ್ನೂ, ಪಟ್ಟಣಿಗರನ್ನೂ, ತಮ್ಮಂದಿರನ್ನೂ, ಗುರುಗಳನ್ನೂ, ಮಕ್ಕಳನ್ನೂ, ಮಂತ್ರಿಗಳನ್ನೂ, ಕರೆಸಿ ಪುಷ್ಪಕದ ವಿಮಾನದಲ್ಲಿ ಕೂರಿಸಿಕೊಂಡು ಅವರೊಡನೆ ಹೊರಟನು.

ಏತಸ್ಮಿನ್ನಂತರೇಽಗ್ರೇಭೂನ್ಮಹಾನ್ ಕೋಲಾಹಲಸ್ತದಾ ।
ತಂ ಶ್ರುತ್ವಾ ಚಕಿತೋ ರಾಮಸ್ಸ ದದರ್ಶ ಸಮಂತತಃ ॥ ೮೨ ॥

ತಾವದ್ದದರ್ಶ ಪುರತಃ ಪೌರೈಸ್ಸಂವೇಷ್ಟಿತಾಂ ಸ್ತ್ರಿಯಂ ।
ಶವಮುಪ್ಯಪರಂ ಶೃಂಗಬೇರತಶ್ಚ ಸಮಾಗತಂ ॥ ೮೩ ॥

ರಾಮಂ ದೃಷ್ಟ್ವಾ ಪುಷ್ಪಕಸ್ಥಂ ರುದತೀ ಬ್ರಾಹಣೀ ಪುರಃ ।
ಧೀರ್ಘಸ್ವರೇಣ ಪ್ರೋವಾಚ ಹಸ್ತಾಭ್ಯಾಂ ಹೃದಿ ತಾಡ್ಯ ಸಾ ॥ ೮೪ ॥

ರಾಮ ರಾಮ ಮಹಾಬಾಹೋ ತೇ ರಾಜ್ಯೇ ಗತಭರ್ತೃಕಾ ।
ಅಹಂ ಜಾತಾಸ್ಮಿ ತ್ವದ್ದೋಷಾನ್ಮಾಂ ದೃಷ್ಟ್ವಾ ತ್ವಂ ನ ಲಜ್ಜಸೇ ॥ ೮೫ ॥

---

೮೨. ಹೊರಟೊಡನೆಯೇ ರಾಮನು ಎದುರಿಗೇನೇ ಬಹುವಾದ ಕೋಲಾಹಲ ಧ್ವನಿಯಾಗುತ್ತಿರುವುದನ್ನು ಕೇಳಿದನು. ಒಡನೆಯೇ ಗಾಬರಿಗೊಂಡು ಸುತ್ತಲೂ ನೋಡಿದನು.

೮೩. ಆಗ ಪಟ್ಟಣದವರೆಲ್ಲರೂ ಒಬ್ಬ ಹೆಂಗಸನ್ನು ಸುತ್ತುಗಟ್ಟಿಕೊಂಡು ಬರುತ್ತಿದ್ದರು. ಮತ್ತು ಒಂದು ಶವವೂ ಕೂಡ ಶೃಂಗಬೇರಪುರದಿಂದ ಅಲ್ಲಿಗೆ ಅವರ ಜೊತೆಯಲ್ಲಿ ಬಂದಿದ್ದಿತು.

೮೪. ಅದು ಬ್ರಾಹ್ಮಣನ ಶವವಾಗಿದ್ದಿತು. ರಾಮನು ವಿಮಾನದಲ್ಲಿ ಕುಳಿತಿರುವುದನ್ನು ಈ ಬ್ರಾಹ್ಮಣನ ಹೆಂಡತಿಯು ನೋಡಿ ಅಳುತ್ತಾ ಕೈಯ್ಯಿಂದ ಎದೆಯನ್ನು ಬಡಿದುಕೊಳ್ಳುತ್ತಾ ಗಟ್ಟಿಯಾಗಿ ಕೂಗುತ್ತ ಇಂತೆಂದಳು.

೮೫. ಎಲೈ ಮಹಾಬಾಹುವಾದ ರಾಮನೆ! ನಿನ್ನ ರಾಜ್ಯದಲ್ಲಿ ನಾನು ಗಂಡನನ್ನು ಕಳೆದುಕೊಂಡು ಮುಂಡೆಯಾದೆನು. ಹೀಗೆ ನಾನು ಆಗುವುದಕ್ಕೆ ನಿನ್ನ ದೋಷವೇ ಕಾರಣವಾಗಿರುವುದು. ಈ ರೀತಿಯಾಗಿ ನಾನು ಆಗಿರುವುದನ್ನು ನೀನು ನೋಡುತ್ತಿದ್ದರೂ ನಿನಗೆ ನಾಚಿಗೆಯೇ ಉಂಟಾಗುತ್ತಿಲ್ಲವಲ್ಲ!

ಮದ್ಭರ್ತಾರಂ ಜೀವಯೈನಂ ನೋ ಚೇಚ್ಛಾಪಂ ದದಾಮಿ ತೇ ।
ಇತಿ ತಸ್ಯಾ ವಚಃ ಶ್ರುತ್ವಾ ರಾಘವಃ ಖಿನ್ನಮಾನಸಃ ॥ ೮೬ ॥

ಅಬ್ರವೀನ್ಮಧುರಂ ವಾಕ್ಯಂ ಬ್ರಾಹ್ಮಣೀಂ ತೋಷಯನ್ಮುಹುಃ ।
ಕ್ರೋಧಂ ಶಮಯ ರಂಭೋರು ತೇ ಭರ್ತಾರಂ ಪ್ರಜೀವಯೇ ॥ ೮೭ ॥

ಅಸ್ಯೈವ ಹೇತೋರ್ಗಚ್ಛಾಮಿ ತ್ವಂ ಮದ್ಗೇಹೇ ಸುಖಂ ವಸ ।
ಇತ್ಯುಕ್ತ್ವಾಽಽಶ್ವಾಸ್ಯ ತಾಂ ರಾಮಸ್ತಚ್ಛವಂ ಚಾಪಿ ಪೂರ್ವವತ್ ॥ ೮೮ ॥

ತೈಲದ್ರೋಣ್ಯಾಂ ಸ್ಥಾಪಯಿತ್ವಾ ಸುಮಂತ್ರಂ ವಾಕ್ಯಮಬ್ರವೀತ್ ।
ಆಗಮಿಷ್ಯಾಮ್ಯಹಂ ಯಾವತ್ತಾವತ್ಕಸ್ಯಾಪಿ ನೋ ಶವಮ್ ॥ ೮೯ ॥

ತ್ವಯಾ ವಹ್ನೌ ಜ್ವಾಲನೀಯಂ ರಕ್ಷಣೀಯಂ ಪ್ರಯತ್ನತಃ ।
ಸರ್ವಾನಪಿ ತ್ವಯಾ ಭೂಮ್ಯಾಂ ಶ್ರಾವ್ಯಂ ದುಂದುಭಿನಿಸ್ಸ್ವನೈಃ ॥ ೯೦ ॥

---

೮೬. ಸತ್ತಿರುವ ಈ ನನ್ನ ಗಂಡನನ್ನು ಬದುಕಿಸು. ಇಲ್ಲದಿದ್ದರೆ ನಾನು ನಿನಗೆ ಶಾಪವನ್ನು ಕೊಡುತ್ತೇನೆ. ಹೀಗೆಂದು ಆಕೆಯು ಹೇಳಲು ಅದನ್ನು ಕೇಳಿ ರಾಮನು ದುಃಖದಿಂದ ಕಳೆಗುಂದಿದನು.

೮೭. ಆ ಬ್ರಾಹ್ಮಣಸ್ತ್ರೀಗೆ ಸಂತೋಷವನ್ನುಂಟುಮಾಡುತ್ತ ಎಲೈ ಮಂಗಳಾಂಗಿಯೆ ! ದುಃಖಪಡಬೇಡ. ಕೋಪವನ್ನೂ ತಡೆದುಕೊ. ನಿನ್ನ ಗಂಡನನ್ನು ಈಗಲೇ ಬದುಕಿಸಿಕೊಡುತ್ತೇನೆ.

೮೮-೯೦. ನಾನೂ ಕೂಡ ಇದಕ್ಕೋಸ್ಕರವೇ ಹೋಗುತ್ತಿರುವೆನು. ನೀನು ನನ್ನ ಮನೆಗೆ ಹೋಗಿ ಸುಖವಾಗಿರು. ಎಂದು ಹೇಳುತ್ತಾ ಸಮಾಧಾನ ಪಡಿಸಿ ಆ ಶವವನ್ನೂ ಕೂಡ ಮೊದಲಿನ ಶವದಂತೆ ಎಣ್ಣೆಯ ಕೊಪ್ಪರಿಗೆಯಲ್ಲಿಡಿಸಿ ಸುಮಂತ್ರನನ್ನು ಕುರಿತು ಎಲೈ ಸುಮಂತ್ರನೇ ! ನಾನು ಮತ್ತೆ ಊರಿಗೆ ಬರುವವರೆಗೂ ಯಾರು ಸತ್ತರೂ ಯಾರೂ ಆ ಶವಗಳನ್ನು ಬೆಂಕಿಯಲ್ಲಿ ಸುಡಕೂಡದು. ಅವೆಲ್ಲವನ್ನೂ ಯಥಾಯೋಗ್ಯವಾಗಿ ರಕ್ಷಿಸು. ಅಲ್ಲದೆ ಲೋಕದಲ್ಲಿ ಎಲ್ಲರಿಗೂ ಈ ವಿಷಯವು ತಿಳಿಯುವಂತೆ ಡಂಗೂರವನ್ನು ಇಂತೆಂದು ಹೇಳಿ ಹೊಡೆಯಿಸು.

ನ ಕಸ್ಯಾಪಿ ಶವಂ ದಗ್ಧಂ ಕ್ವಾಪಿ ಕಾರ್ಯಂ ಜನೈಸ್ತ್ವಿತಿ ।
ತಥೇತಿ ರಾಘವಂ ಚೋಕ್ತ್ವಾ ದೂತೈಸ್ಸಂಶ್ರಾವ್ಯ ತದ್ವಚಃ ॥ ೯೧ ॥

ಸುಮಂತ್ರಸ್ಸಕಲಾಂ ಭೂಸ್ಥಾಂ ಸಾಕೇತೇ ನ್ಯವಸತ್ಸುಖಂ ।
ರಾಮೋಽಪಿ ಪುಷ್ಪಕೇನೈವ ಪಶ್ಚಿಮಾಂ ಚೋತ್ತರಾಂ ದಿಶಂ ॥ ೯೨ ॥

ಪೂರ್ವಾಮಪಿ ಶನೈಃ ಪಶ್ಯನ್ ದಕ್ಷಿಣಾಭಿಮುಖೋ ಯಯೌ ।
ಏತಸ್ಮಿನ್ನಂತರೇಽಯೋಧ್ಯಾಪುರ್ಯಾಂ ಪಂಚಶವಾನಿ ಹಿ ॥ ೯೩ ॥

ಸಮಾನೀತಾನಿ ತೈಲಸ್ಯ ದ್ರೋಣ್ಯಾಂ ತ್ಯಾನಪಿ ಪೂರ್ವವತ್ ।
ಸುಮಂತ್ರಃ ಸ್ಥಾಪಯಾಮಾಸ ಶ್ರೀರಾಮಸ್ಯಾಜ್ಞಯಾದರಾತ್ ॥ ೯೪ ॥

ತೇಷು ಪಂಚಶವೇಷ್ವೇಷ ಚೈಕಂ ಮಧುಪುರಿ ಸ್ಥಿತಂ ।
ಕ್ಷತ್ರಿಯಸ್ಯ ಚ ತತ್ ಜ್ಞೇಯಂ ಸಮಾನೀತಂ ಸುಹೃಜ್ಜನೈಃ ॥ ೯೫ ॥

೯೧–೯೨. ಭೂಮಿಯಲ್ಲಿ ಯಾರು ಸತ್ತರೂ ಆ ಶವವನ್ನು ಸುಡಕೂಡದು. ಎಂದು ಎಲ್ಲರಿಗೂ ತಿಳಿಯುವಂತೆ ಮಾಡು. ಎನಲು ಸುಮಂತ್ರನು ಹಾಗೆಯೇ ಆಗಲೆಂದು ಹೇಳಿ ದೂತರ ಕೈಯ್ಯಿಂದ ಡಂಗೂರವನ್ನು ಹೊಡೆಸಿ ಪ್ರಪಂಚದಲ್ಲಿ ಎಲ್ಲರಿಗೂ ತಿಳಿಯುವಂತೆ ಮಾಡಿ ತಾನು ಅಯೋಧ್ಯೆಯಲ್ಲಿ ಸುಖವಾಗಿದ್ದನು. ರಾಮನು ಮೊದಲು ಪಶ್ಚಿಮದಿಕ್ಕಿಗೂ ಆನಂತರ ಉತ್ತರದಿಕ್ಕಿಗೂ ಹೊರಟನು.

೯೩. ಅಲ್ಲೆಲ್ಲವೂ ನೋಡಿಕೊಂಡು ಪೂರ್ವದಿಕ್ಕಿಗೆ ಬಂದನು. ಅಲ್ಲಿಯೂ ನೋಡಿಕೊಂಡು ದಕ್ಷಿಣಕ್ಕೆ ತಿರುಗಿದನು. ಇಷ್ಟರವೇಳೆಗೆ ಅಯೋಧ್ಯೆಯಲ್ಲಿ ಐದು ಶವಗಳು ಬಂದು ಸೇರಿದುವು.

೯೪. ಅವೆಲ್ಲವನ್ನೂ ಸುಮಂತ್ರನು ಎಣ್ಣೆಯ ದೋಣಿಯಲ್ಲಿ ಕೆಡದಂತೆ ರಾಮನ ಅಪ್ಪಣೆಯ ಪ್ರಕಾರ ಇಡಿಸಿದನು.

೯೫. ಆ ಐದು ಶವಗಳಲ್ಲಿ ಒಂದು ಕ್ಷತ್ರಿಯ ಶವವಾಗಿದ್ದಿತು. ಅದನ್ನು ಮಧುವೆಂಬ ಪಟ್ಟಣದಿಂದ ಅಯೋಧ್ಯೆಗೆ ಅವನ ಸ್ನೇಹಿತರು ತಂದಿದ್ದರು.

ಪ್ರಯಾಗಸ್ಥಂ ದ್ವಿತೀಯಂ ಚ ಶವಂ ವೈಶ್ಯಸ್ಯ ತತ್ ಸ್ಮೃತಂ ।
ಪೂರ್ವೇ ವಯಸಿ ಪಂಚತ್ವಾತ್ಸಮಾನೀತಂ ಹಿ ತಜ್ಜನೈಃ ॥ ೯೬ ॥

ಹಸ್ತಿನಾಪುರಸಂಸ್ಥಂ ತತ್ತೃತೀಯಂ ಶವಮೀರಿತಂ ।
ತೈಲಕಾರಸ್ಯ ತತ್ ಜ್ಞೇಯಂ ಸಮಾನೀತಂ ಹಿ ತಜ್ಜನೈಃ ॥ ೯೭ ॥

ಶವಂ ಚತುರ್ಥಂ ತತ್ ಜ್ಞೇಯಂ ಹರಿದ್ವಾರಸ್ಥಿತಂ ದ್ವಿಜ ।
ಲೋಹಕಾರಸ್ನುಷಾಯಾಶ್ಚ ಸಮಾನೀತಂ ಹಿ ತಜ್ಜನೈಃ ॥ ೯೮ ॥

ಉಜ್ಜನೀಸ್ಥಂ ಪಂಚಮಂ ಚ ಶವಂ ಜ್ಞೇಯಂ ಮಹಾಮತೇ ।
ಚರ್ಮಕಾರದುಹಿತಾಯಾಃ ಸಮಾನೀತಂ ಹಿ ತಜ್ಜನೈಃ ॥ ೯೯ ॥

ಏವಂ ಪಂಚ ಶವಾನ್ಯಾರ್ಸ ಪೂರ್ವಂ ದ್ವೇ ಬ್ರಾಹ್ಮಣಸ್ಯ ಚ ।
ಸಪ್ತಾಯೋಧ್ಯಾಪುರೀಮಧ್ಯೇ ಶವಾನ್ಯೇವಂ ಸ್ಥಿತಾನಿ ಹಿ ॥ ೧೦೦ ॥

---

೯೬. ಮತ್ತೊಂದು ಶವವನ್ನು ಪ್ರಯಾಗದಿಂದ ತಂದಿದ್ದರು. ಅದು ವೈಶ್ಯನ ಶವವು. ಅವನು ಪೂರ್ವವಯಸ್ಸಿನಲ್ಲಿಯೇ ಮರಣಹೊಂದಿದುದರಿಂದ ಅದನ್ನು ಅವನ ಕಡೆಯವರು ಅಲ್ಲಿಗೆ ತಂದಿದ್ದರು.

೯೭-೯೮. ಹಸ್ತಿನಾಪುರದಿಂದ ಬಂದ ಶವವು ಮೂರನೆಯದಾಗಿದ್ದಿತು. ಅದು ಎಣ್ಣೆಮಾರುವವನದಾಗಿದ್ದಿತು. ಅದನ್ನು ಅವನಕಡೆಯಜನರು ತಂದಿದ್ದರು. ನಾಲ್ಕನೆಯ ಶವವನ್ನು ಹರಿದ್ವಾರದಿಂದ ತಂದಿದ್ದರು. ಅದು ಒಬ್ಬ ಕಂಚುಗಾರನ ಸೊಸೆಯದಾಗಿದ್ದಿತು. ಅದನ್ನು ಅವನಕಡೆಯುವರು ತಂದಿದ್ದರು.

೯೯. ಉಜ್ಜಯಿನಿಯಿಂದ ಒಂದು ಶವವು ಬಂದಿತು. ಅದು ಐದನೆಯದು. ಅದು ಚರ್ಮವನ್ನು ಹದಮಾಡುವವನ ಮಗಳದಾಗಿದ್ದಿತು. ಅದನ್ನು ಅವನ ಬಂಧುಗಳು ತಂದಿದ್ದರು.

೧೦೦. ಈ ರೀತಿಯಾಗಿ ಹೊಸದಾಗಿ ಐದು ಶವಗಳು ಬಂದಿದ್ದುವು. ಮೊದಲಿನ ಎರಡು ಬ್ರಾಹ್ಮಣರ ಶವಗಳಾಗಿದ್ದುವು. ಈ ರೀತಿಯಾಗಿ ಅಯೋಧ್ಯೆಯಲ್ಲಿ ಏಳು ಶವಗಳು ಬಂದು ಇದ್ದುವು.

ರಾಮೋಽಪಿ ದಂಡಕಂ ಪಶ್ಯನ್ ಸ ಬಭ್ರಾಮ ಸಮಂತತಃ ।
ಯಯೌ ವಿಂಧ್ಯಾಚಲಂ ಧೀಮಾನ್ ರೇವಾವಾರಿಪರಿಪ್ಲುತಂ ॥ ೧೦೧ ॥

ತತ್ರ ವೃಕ್ಷೇ ಲಂಬಮಾನಂ ಧೂಮ್ರಂ ಪಾತುಮಧೋಮುಖಂ ।
ಶೂದ್ರಂ ನಿರೀಕ್ಷ್ಯ ಸ್ವರ್ಗೇಚ್ಛಂ ತಂ ಹಂತುಂ ಸಮುಪಸ್ಥಿತಃ ॥ ೧೦೨ ॥

ತದಾ ತಂ ರಾಘವಃ ಪ್ರಾಹ ಭೋ ಶೂದ್ರ ಶ್ರುಣು ಮದ್ವಚಃ ।
ಬ್ರಾಹ್ಮಣಾದಿತ್ರಿಭಿರ್ವರ್ಣೈಸ್ತಪಃ ಕಾರ್ಯಂ ನ ಚೇತರೈಃ ॥ ೧೦೩ ॥

ಶೂದ್ರೈಶ್ಚ ದ್ವಿಜಶುಶ್ರೂಷಾ ಸದಾ ಕಾರ್ಯಾತಿಭಕ್ತಿತಃ ।
ದ್ವಿಜಕೃತ್ಯಂ ತ್ವಯಾ ಚಾತ್ರ ಕೃತಂ ಪಾಪಾತ್ಮನಾ ಜಡ ॥ ೧೦೪ ॥

---

೧೦೧. ಇತ್ತ ರಾಮನು ದಂಡಕಾರಣ್ಯವನ್ನು ನೋಡಿಕೊಂಡು ಅದರಲ್ಲಿ ಎಲ್ಲಾ ಕಡೆಯಲ್ಲಿಯೂ ಸುತ್ತುತ್ತಿದ್ದನು. ಹಾಗೆ ನೋಡುತ್ತ ಆ ರಾಮನು ರೇವಾನದಿಯು ಹರಿಯುತ್ತಿದ್ದ ವಿಂಧ್ಯಪರ್ವತದ ಬಳಿಗೆ ಹೋದನು.

೧೦೨. ಅಲ್ಲಿ ಒಬ್ಬನು ಮರಕ್ಕೆ ತಲೆಕೆಳಗಾಗಿ ನೇತುಹಾಕಿಕೊಂಡು ನೆಲದಮೇಲೆ ಬೆಂಕಿಯನ್ನು ಹಾಕಿ ಕೆಳಗಡೆಯಿಂದ ಹೊಗೆಯನ್ನು ಕುಡಿಯುತ್ತ ಸ್ವರ್ಗವನ್ನು ಹೊಂದಬೇಕೆಂಬ ಇಚ್ಛೆಯಿಂದ ತಪಸ್ಸನ್ನು ಮಾಡುತ್ತಿದ್ದನು. ಅವನನ್ನು ಶ್ರೀರಾಮನು ನೋಡಿ ಒಡನೆಯೇ ಕೊಲ್ಲಲು ಪ್ರಯತ್ನಪಟ್ಟು ಅವನ ಬಳಿಗೆ ಹೋದನು.

೧೦೩. ಆಗ ರಾಘವನು ಅವನನ್ನು ಕುರಿತು ಎಲೈ ಶೂದ್ರನೆ! ನಾನು ಹೇಳುವುದನ್ನು ಕೇಳು. ಬ್ರಹ್ಮ, ಕ್ಷತ್ರಿಯ, ವೈಶ್ಯರೆಂಬ ಮೂರುವರ್ಣದವರೇ ತಪಸ್ಸನ್ನು ಮಾಡಲು ಅರ್ಹರು. ಮಿಕ್ಕವರ್ಣದವರು ತಪಸ್ಸು ಮಾಡಕೂಡದು.

೧೦೪. ಶೂದ್ರನು ಬ್ರಹ್ಮ ಕ್ಷತ್ರಿಯ, ವೈಶ್ಯರೆಂಬ ದ್ವಿಜರ ಶುಶ್ರೂಷೆಯನ್ನು ಮಾಡುತ್ತ ಭಕ್ತಿಯಿಂದಿದ್ದುಕೊಂಡಿರಬೇಕು. ಆ ದ್ವಿಜರು ಮಾಡುವ ಕೆಲಸವನ್ನು ನೀನು ಈಗ ಮಾಡುತ್ತಿದ್ದೀಯೆ. ನಿನಗೆ ತಿಳಿವಳಿಕೆಯಿಲ್ಲ. ನೀನು ಪಾಪಿಯು.

ಇದಾನೀಂ ತ್ವಾಂ ಹನಿಷ್ಯಾಮಿ ಜೀವಯಿಷ್ಯಾಮಿ ತಾನ್ಮೃತಾರ್ನ್ ।
ತುಷ್ಟೋಽಹಂ ತ್ವಾಂ ತ್ವತ್ತಪಸಾ ವರಂ ವರಯ ವಾಂಛಿತಂ ॥ ೧೦೫ ॥

ಇತಿ ರಾಮವಚಃ ಶ್ರುತ್ವಾಽಧೋಮುಖೋ ರಾಮಪಾದಜಃ ।
ಉವಾಚ ಭಯಭೀತಸ್ಸನ್ನತ್ವಾ ರಾಮಂ ಮುಹುರ್ಮುಹುಃ ॥ ೧೦೬ ॥

ರಾಮ ರಾವಣದರ್ಪಘ್ನ ಯದಿ ತುಷ್ಟೋಽಸಿ ಮಾಂ ಪ್ರಭೋ ।
ತರ್ಹಿ ತೇ ವರಯಾಮ್ಯದ್ಯ ಯೇನ ಶೂದ್ರಗತಿರ್ಭವೇತ್ ॥ ೧೦೭ ॥

ಮಮಾಪಿ ಯೇನ ಕೀರ್ತಿಸ್ಸ್ಯಾತ್ತಂ ವರಂ ದಾತುಮರ್ಹಸಿ ।
ಇತಿ ಶೂದ್ರವಚಃ ಶ್ರುತ್ವಾ ರಾಮಸ್ತುಷ್ಟೋಽಬ್ರವೀದ್ವಚಃ ॥ ೧೦೮ ॥

---

೧೦೫. ಈ ಪಾಪಿಯಾದ ನಿನ್ನನ್ನು ಕೊಂದು ದೇಶದಲ್ಲಿ ಸತ್ತಿರತಕ್ಕ ಉಳಿದವರನ್ನು ಬದುಕಿಸುತ್ತೇನೆ. ನಿನ್ನ ತಪಸ್ಸಿಗೋಸ್ಕರ ನಾನು ಸಂತೋಷ ಗೊಂಡಿದ್ದೇನೆ. ನಿನಗೆ ಬೇಕಾದವರವನ್ನು ಕೇಳಿಕೊ. ಕೊಡುತ್ತೇನೆ. ಎಂದನು.

೧೦೬. ಆ ಶೂದ್ರನು ರಾಮನ ಮಾತನ್ನು ಕೇಳಿ ಭಯಗೊಂಡು ರಾಮನಿಗೆ ಅನೇಕಬಾರಿ ನಮಸ್ಕರಿಸಿ ಇಂತೆಂದು ಹೇಳಿದನು.

೧೦೭. ರಾವಣನ ದರ್ಪವನ್ನು ನಾಶಮಾಡಿದ ಎಲೈ ರಾಮನೆ ! ನೀನು ನನ್ನ ತಪಸ್ಸಿಗೆ ಸಂತೋಷಗೊಂಡಿದ್ದರೆ ಶೂದ್ರರಿಗೆ ಒಳ್ಳೆಯ ಗತಿಯು ಯಾವರೀತಿಯಾಗಿ ಬರಬೇಕೋ ಆದನ್ನು ನನಗೆ ಕೊಡು.

೧೦೮ ನಾನು ಆರೀತಿಯಾದ ವರವನ್ನು ಕೇಳುತ್ತೇನೆ. ಅದರಿಂದ ನನಗೆ ಕೀರ್ತಿಯೂ ಬರುವಂತೆ ಮಾಡು. ಅಂತಹ ವರವನ್ನು ಕೊಡಬೇಕು. ಎನ್ನಲು ರಾಮನು ಸಂತೋಷಗೊಂಡು ಇಂತೆಂದನು.

ಮಮ ರಾಮೇತಿ ಯನ್ನಾಮ ತಚ್ಛೂದ್ರೈಸ್ಸರ್ವದೈವ ಹಿ ।
ಜಪನೀಯಂ ಕೀರ್ತನೀಯಂ ಚಿಂತನೀಯಂ ಮುಹುರ್ಮುಹುಃ ॥ ೧೦೯ ॥

ಭವಿಷ್ಯತಿ ಗತಿಸ್ತೇಷಾಮನೇನ ಮತ್ಪದೋದ್ಭವ ।
ತವಾನೇನೋಪಕಾರೇಣ ಕೀರ್ತಿಶ್ಶೂದ್ರೇಷು ವೈ ಭವೇತ್ ॥ ೧೧೦ ॥

ಇತಿ ರಾಮವರಂ ಶ್ರುತ್ವಾ ಪುನಶ್ಶೂದ್ರೋಽಬ್ರವೀದ್ವಚಃ ।
ಶೂದ್ರಾಃ ಕಲೌ ಮಂದಧಿಯೋ ಭವಿಷ್ಯಂತಿ ರಘೂತ್ತಮ ॥ ೧೧೧ ॥

ವ್ಯಗ್ರಚಿತ್ತಾ ಭವಿಷ್ಯಂತಿ ಕೃಷಿಕರ್ಮಾದಿಭಿಃ ಪ್ರಭೋ ।
ತದಾ ತೇಷಾಂ ಕುತೋ ಬುದ್ಧಿರ್ಜಪಾದಿಷು ಭವಿಷ್ಯತಿ ॥ ೧೧೨ ॥

---

೧೦೯. ಎಲೈ ಶೂದ್ರನೇ ! ರಾಮ ಎಂಬ ನನ್ನ ನಾಮವನ್ನು ಶೂದ್ರರು ಯಾವಾಗಲೂ ಜಪಮಾಡುತ್ತಿರಬೇಕು. ಹೇಳುತ್ತಿರಬೇಕು. ಪದೇ ಪದೇ ಅದನ್ನು ಚಿಂತಿಸುತ್ತಿರಬೇಕು.

೧೧೦. ಅವರು ಹೀಗೆ ಮಾಡಿದರೆ ಅವರಿಗೆ ಉತ್ತಮವಾದ ಗತಿಯು ಬರುತ್ತದೆ. ನೀನು ವರವನ್ನು ಕೇಳಿ ಈರೀತಿ ಉಪಕಾರವನ್ನು ಮಾಡಿರುವುದರಿಂದ ನಿನ್ನ ಕೀರ್ತಿಯು ಶೂದ್ರರಲ್ಲೆಲ್ಲಾ ಹರಡಿಕೊಳ್ಳುತ್ತದೆ.

೧೧೧. ರಾಮನು ಈ ರೀತಿಯಾಗಿ ವರವನ್ನು ಕೊಡಲು ಅದನ್ನು ಕೇಳಿ ಆ ಶೂದ್ರನು ಮತ್ತೆ ಇಂತೆಂದನು. ಎಲೈ ರಘೂತ್ತಮನೆ ! ಶೂದ್ರರು ಕಲಿಯುಗದಲ್ಲಿ ಬಹುವಾಗಿ ದಡ್ಡರಾಗುತ್ತಾರೆ.

೧೧೨. ಕಲಿಯುಗದಲ್ಲಿ ಅವರು ಕೃಷಿಯೇ ಮುಂತಾದ ಕೆಲಸಗಳಲ್ಲಿ ಆಸಕ್ತರಾಗಿ ಅದರಲ್ಲಿಯೇ ಮನಸ್ಸನ್ನು ಇಟ್ಟಿರುತ್ತಾರೆ. ಆದ್ದರಿಂದ ಅವರಿಗೆ ಜಪದಲ್ಲಿ ಮನಸ್ಸು ಹುಟ್ಟುವುದೇ ಇಲ್ಲ.

ಅತಸ್ತದನುರೂಪೋದ್ಯ ವರೋ ದೇಯೋ ವಿಚಾರ್ಯ ಚ ।
ತತ್ತಸ್ಯ ವಚನಂ ಶ್ರುತ್ವಾ ರಾಮಸ್ತುಷ್ಟೋಬ್ರವೀತ್ಪುನಃ ॥ ೧೧೩ ॥

ಪರವಂದನಕಾಲೇಷು ರಾಮರಾಮೇತಿ ಸರ್ವದಾ ।
ಶೂದ್ರಾ ವದಂತು ಸರ್ವತ್ರ ತೇನ ತೇಷಾಂ ಗತಿರ್ಭವೇತ್ ॥ ೧೧೪ ॥

ತವಾಪೀಯಂ ಮಹಾಕೀರ್ತಿಃ ಸ್ಮರಿಷ್ಯಂತಿ ಮದಂಘ್ರಿಜಾಃ ।
ತ್ವಂ ಮಯಾ ನಿಹತಸ್ತ್ವದ್ಯ ವೈಕುಂಠಂ ಪ್ರತಿಯಾಸ್ಯಸಿ ॥ ೧೧೫ ॥

ಪುನರ್ಯಯಾಚ ಶ್ರೀರಾಮಂ ವರಮನ್ಯಂ ಸ್ವಕಾರಣಾತ್ ।
ಅಸ್ಮಿನ್ ಶೈಲೇ ಸದಾ ತಿಷ್ಠ ಸೀತಾಲಕ್ಷ್ಮಣಸಂಯುತಃ ॥ ೧೧೬ ॥

---

೧೧೩. ಆದ್ದರಿಂದ ನೀನು ಯೋಚಿಸಿ ಅದಕ್ಕೆ ಸರಿಯಾದ ವರವನ್ನು ಕೊಡು. ಎನ್ನಲು ಈ ಮಾತನ್ನು ಕೇಳಿ ಸಂತೋಷಗೊಂಡು ಆ ರಾಮನು ಮತ್ತೆ ಇಂತೆಂದನು.

೧೧೪–೧೧೫. ಎಲ್ಲೆಲ್ಲಿಯೂ ಶೂದ್ರರು ಇತರರಿಗೆ ನಮಸ್ಕರಿಸುವಾಗ ರಾಮ ರಾಮ ಎಂದು ಹೇಳಲಿ. ಅದರಿಂದ ಅವರಿಗೆ ಸದ್ಗತಿಯು ಬರುತ್ತದೆ. ಇದರಿಂದ ನಿನಗೂ ಮಹಾಕೀರ್ತಿಯು ಬರುತ್ತದೆ. ನಿನ್ನನ್ನು ಅವರು ಜ್ಞಾಪಿಸಿಕೊಳ್ಳುತ್ತಿರುತ್ತಾರೆ. ನಾನು ನಿನ್ನನ್ನು ಈಗ ಕೊಲ್ಲುತ್ತೇನೆ. ಅನಂತರ ನೀನು ವೈಕುಂಠಕ್ಕೆ ಹೋಗುತ್ತೀಯೆ.

೧೧೬. ಮತ್ತೆ ಆ ಶೂದ್ರಕನು ತನಗೋಸ್ಕರವಾಗಿ ಮತ್ತೊಂದು ವರವನ್ನು ಕೇಳಿಕೊಂಡನು. ಅದೇನೆಂದರೆ ಎಲೈ ರಾಮನೆ! ನೀನು ಸೀತಾಲಕ್ಷ್ಮಣರೊಡನೆ ಈ ಬೆಟ್ಟದಲ್ಲಿ ನಿನ್ನ ಅಂಶದಿಂದ ಯಾವಾಗಲೂ ಇರಬೇಕು.

ಅಂಶತಸ್ತೇ ಪೂರ್ವಮೇವ ದರ್ಶನಂ ಮಮ ಯೇ ನರಾಃ ।
ಕರಿಷ್ಯಂತಿ ತತಃ ಪಶ್ಚಾದ್ಯೇ ನರಾಸ್ತವ ದರ್ಶನಂ ॥ ೧೧೭ ॥

ಕುರ್ವಂತಿ ಸತತಂ ಭಕ್ತ್ಯಾ ಮೋಕ್ಷಮೇವ ವ್ರಜಂತಿ ತೇ ।
ಮದ್ದರ್ಶನಂ ವಿನಾ ಮರ್ತ್ಯಾಃ ತ್ವಾಂ ಪಶ್ಯಂತ್ಯವಿಚಾರತಃ ॥ ೧೧೮ ॥

ತೇಷಾಮುದ್ಧರಣಂ ರಾಮ ಕುರು ಮದ್ವಚನಂ ಪ್ರಭೋ ।
ತಥೋವಾಚ ತದಾ ರಾಮಃ ಭಕ್ತಿಂ ತಸ್ಯ ದದೌ ಹರಿಃ ॥ ೧೧೯ ॥

ಇತಿ ಕೃತ್ವಾ ಸುಸಂತುಷ್ಟಂ ಹತ್ವಾ ಶೂದ್ರಂ ರಘೂತ್ತಮಃ ।
ಜೀವಯಾಮಾಸ ವಿಪ್ರಾದೀನ್ ಸಪ್ತ ಸಾಕೇತಸಂಸ್ಥಿತಾನ್ ॥ ೧೨೦ ॥

೧೧೭–೧೧೯. ಅಂಶಭೂತನಾದ ನಿನ್ನನ್ನು ದರ್ಶನಮಾಡುವುದಕ್ಕೆ ಮೊದಲು ಜನರು ನನ್ನನ್ನು ದರ್ಶನಮಾಡಬೇಕು. ಅನಂತರ ನಿನ್ನ ದರ್ಶನವನ್ನು ಮಾಡಬೇಕು. ಹಾಗೆ ಮಾಡಿದರೆ ಅವರಿಗೇನೇ ಮೋಕ್ಷವು ಬರುವಂತೆ ವರವನ್ನು ಕೊಡಬೇಕು. ಯಾರು ತಿಳಿವಳಿಕೆ ಇಲ್ಲದೆ ನನ್ನ ದರ್ಶನವನ್ನು ಮಾಡದೆ ನಿನ್ನ ದರ್ಶನವನ್ನು ಮಾಡುವರೋ ಅವರಿಗೂ ನೀನು ಉದ್ಧಾರವನ್ನು ಮಾಡು. ಇದೇ ನಾನು ಕೇಳಿಕೊಳ್ಳುವುದು. ಎಂದೆನಲು ರಾಮನು ಹಾಗೆಯೇ ಆಗಲೆಂದು ಹೇಳಿ ಅವನಿಗೆ ತನ್ನಲ್ಲಿ ಭಕ್ತಿಯುಂಟಾಗುವಂತೆಯೂ ವರವನ್ನು ಕೊಟ್ಟನು.

೧೨೦. ಈ ರೀತಿಯಾಗಿ ಶೂದ್ರಋಷಿಗೆ ವರವನ್ನು ಕೊಟ್ಟು ಸಂತೋಷಪಡಿಸಿ ಅನಂತರ ಅವನನ್ನು ಕೊಂದನು. ಇದರಿಂದ ಆ ಅಯೋಧ್ಯೆಯಲ್ಲಿದ್ದ ಏಳು ಹೆಣಗಳು ಜೀವವನ್ನು ಹೊಂದಿ ಎದ್ದುವು. ಅವರನ್ನು ಈ ರೀತಿಯಾಗಿ ಬದುಕಿಸಿದನು.

ತದಾರಭ್ಯಾತ್ರ ಶೂದ್ರೈಸ್ತು ವಿಷ್ಣುದಾಸಾವನೀತಲೇ ।
ಪರವಂದನಕಾಲೇಷು ರಾಮರಾಮೇತಿ ಕೀರ್ತ್ಯತೇ ॥ ೧೨೧ ॥

ತಂ ಹತ್ವಾ ರಘುವೀರಸ್ಸ ಪರಿವರ್ತ್ಯ ಮುದಾನ್ವಿತಃ ।
ಸೀತಾಂ ನಾನಾಕೌತುಕಾನಿ ದರ್ಶಯನ್ ಸ್ವಪುರೀಂ ಯಯೌ ॥ ೧೨೨ ॥

ಏತಸ್ಮಿನ್ನಂತರೇ ಮಾರ್ಗೇ ಗೃಧ್ರೋಲೂಕೌ ನಿರೀಕ್ಷಿತೌ ।
ವಿವದಮಾನೌ ರಾಮೇಣ ಚಾತ್ಮಾನಂ ದ್ರಷ್ಟುಮಾಗತೌ ॥ ೧೨೩ ॥

ತಾವುವಾಚ ರಘುಶ್ರೇಷ್ಠಃ ಕಿಮರ್ಥಂ ಹಿ ಯುವಾಮುಭೌ ।
ವಿವದಮಾನೌ ಸಂಪ್ರಾಪ್ತೌ ಮಾಂ ಬ್ರೂತಸ್ತ್ವದ್ಯ ವಿಸ್ತರಾತ್ ॥ ೧೨೪ ॥

---

೧೨೧. ಎಲೈ ವಿಷ್ಣುದಾಸನೆ! ಅದು ಮೊದಲುಗೊಂಡು ಈ ಭೂಲೋಕದಲ್ಲಿ ಶೂದ್ರರು ಪರರನ್ನು ವಂದಿಸುವಾಗ ರಾಮ ರಾಮ ಎಂದೆನ್ನುತ್ತಾರೆ.

೧೨೨. ಆ ಶೂದ್ರಕನನ್ನು ಕೊಂದು ಶ್ರೀರಾಮನು ಸಂತೋಷದಿಂದ ಹಿಂದಿರುಗಿದನು. ಸೀತೆಗೆ ವಿಧ ವಿಧವಾದ ಆಶ್ಚರ್ಯಗಳನ್ನು ತೋರಿಸುತ್ತ ರಾಜಧಾನಿಗೆ ಬಂದನು.

೧೨೩. ಹಿಂದಿರುಗಿ ಬರುತ್ತಿರುವಾಗ ಒಂದು ಗೂಬೆಯೂ ಒಂದು ಹದ್ದೂ ಜಗಳವಾಡಿಕೊಂಡು ಶ್ರೀರಾಮನನ್ನು ನೋಡಲು ಬರುತ್ತಿದ್ದುವು. ರಾಮನು ದಾರಿಯಲ್ಲಿಯೇ ಸಿಕ್ಕಲು ಅವನ ಬಳಿಗೆ ಹೋದುವು.

೧೨೪. ಆಗ ಶ್ರೀರಾಮನು ಅವೆರಡನ್ನೂ ಕುರಿತು ನೀವಿಬ್ಬರೂ ಏತಕ್ಕೋಸ್ಕರ ಜಗಳವಾಡುತ್ತ ನನ್ನ ಬಳಿಗೆ ಬಂದಿರುವಿರಿ? ಅದನ್ನು ಈಗ ವಿಸ್ತಾರವಾಗಿ ಹೇಳಿರಿ. ಎಂದನು.

ತದ್ರಾಮವಚನಂ ಶ್ರುತ್ವಾ ತದೋಲೂಕೋಬ್ರವಿತ್ಪ್ರಭುಂ ।
ಮಯಾ ಪೂರ್ವಂ ಕೃತಂ ರಾಮ ನಗೋಪರಿ ಗೃಹಂ ವನೇ ॥ ೧೨೫ ॥

ತತ್ಕಾಲೇನ ಮಯಾ ತ್ಯಕ್ತಂ ತತ್ರ ಗೃಧ್ರೋಽಸ್ತಿ ಸಂಸ್ಥಿತಃ ।
ನಾನೇನ ದೀಯತೇ ಮಹ್ಯಂ ಮಮ ಗೇಹಂ ರಘೂತ್ತಮ ॥ ೧೨೬ ॥

ತದುಲೂಕವಚಃ ಶ್ರುತ್ವಾ ಗೃಧ್ರಮಾಹ ರಘೂದ್ವಹಃ ।
ಕಿಮರ್ಥಂ ದೀಯತೇ ನಾಸ್ಯ ತ್ವಯಾ ಗೃಧ್ರ ಗೃಹಂ ವದ ॥ ೧೨೭ ॥

ತದಾ ಗೃಧ್ರೋಽಬ್ರವೀದ್ವಾಕ್ಯಂ ರಾಘವಂ ದೀರ್ಘನಿಸ್ಸ್ವನಃ ।
ಮಯಾ ಪೂರ್ವಂ ಕೃತಂ ರಾಮ ನಗೋಪರಿ ಗೃಹಂ ವನೇ ॥ ೧೨೮ ॥

---

೧೨೫. ರಾಮನು ಹೀಗೆಂಬುದನ್ನು ಕೇಳಿ ಆಗ ಗೂಬೆಯು ಅವನನ್ನು ಕುರಿತು ಇಂತೆಂದಿತು. ಎಲೈ ರಾಮನೆ! ನಾನು ಪೂರ್ವದಲ್ಲಿಯೇ ಒಂದು ಮರದಮೇಲೆ ಕಾಡಿನಲ್ಲಿ ಗೂಡನ್ನು ಕಟ್ಟಿಕೊಂಡೆನು.

೧೨೬. ಕೆಲವು ಕಾಲದಮೇಲೆ ನಾನು ಬೇರೆ ಕೆಲಸಕ್ಕೋಸ್ಕರ ಹೋಗ ಬೇಕಾಗಿದ್ದುದರಿಂದ ಅದನ್ನು ಬಿಟ್ಟು ಹೋದೆನು. ಅಲ್ಲಿಗೆ ಈ ಹದ್ದು ಬಂದು ಸೇರಿಕೊಂಡಿರುವುದು. ಈಗ ಈ ಹದ್ದು ನನ್ನ ಮನೆಯನ್ನು ನನಗೆ ಕೊಡುವುದಿಲ್ಲ ವೆಂದೆನ್ನುತ್ತದೆ.

೧೨೭. ಗೂಬೆಯು ಹೀಗೆಂದುದನ್ನು ಕೇಳಿ ರಾಮನು ಎಲೈ ಹದ್ದೇ! ನೀನೇತಕ್ಕೆ ಈತನ ಮನೆಯನ್ನು ಬಿಟ್ಟುಕೊಡುವುದಿಲ್ಲವೆಂದೆನ್ನುತ್ತೀಯೆ ? ಹೇಳು ಎಂದನು.

೧೨೮. ಆಗ ಆ ಹದ್ದು ರಾಮನನ್ನು ಕುರಿತು ಗಟ್ಟಿಯಾಗಿ ಕೂಗುತ್ತ ಇಂತೆಂದಿತು. ಎಲೈ ರಾಮನೆ! ನಾನು ಈ ಕಾಡಿನಲ್ಲಿ ಮರದಮೇಲೆ ಪೂರ್ವದಲ್ಲಿಯೇ ಈ ಗೂಡನ್ನು ಕಟ್ಟಿಕೊಂಡೆನು.

ತತ್ಕಾಲೇನ ಮಯಾ ತ್ಯಕ್ತಂ ತತ್ರೋಲೂಕಃ ಕಿಯದ್ದಿನಂ ।
ಸ್ಥಿತಸ್ತೇನಾಪಿ ತತ್ತ್ಯಕ್ತಂ ತತ್ರಾಹಂ ಸಂಸ್ಥಿತಃ ಪುನಃ ॥ ೧೨೯ ॥

ವೃಥಾಯಂ ಸ್ಪರ್ಧತೇ ರಾಮ ಮತ್ವಾ ಗೇಹಂ ಮಮೇತಿ ಚ ।
ಮಾಽಧರ್ಮಂ ಕುರು ರಾಜೇಂದ್ರ ತ್ವದ್ವಂಶೇಭೂನ್ನ ಪಾತಕೀ ॥ ೧೩೦ ॥

ತಾವುವಾಚ ರಘುಶ್ರೇಷ್ಠಃ ಯುವಾಭ್ಯಾಂ ಹಿ ಯದಾ ಗೃಹಂ ।
ಕೃತಂ ತಸ್ಯಾತ್ರ ಕಸ್ಸಾಕ್ಷೀ ತದಾ ತೌ ನೇತಿ ಚೋಚತುಃ ॥ ೧೩೧ ॥

ವಿಮಾನಸ್ಥಾಂಸ್ತದಾ ಸರ್ವಾನ್ ರಾಘವಃ ಪ್ರಾಹ ಸಸ್ಮಿತಃ ।
ಇದಮಪ್ಯದ್ಯ ಸಂಪ್ರಾಪ್ತಂ ದುರ್ಘಟಂ ಮಾಂ ಪುರಸ್ತ್ವಿಹ ॥ ೧೩೨ ॥

---

೧೨೯. ಕೆಲವು ದಿನಗಳಮೇಲೆ ನಾನು ಅದನ್ನು ಸ್ವಲ್ಪದಿನಗಳವರೆಗೆ ಬಿಟ್ಟಿದ್ದೆನು. ಆಗ ಈ ಗೂಬೆಯು ಅಲ್ಲಿ ಕೆಲವು ದಿನಗಳವರೆಗೆ ಇದ್ದಿತು. ಆಮೇಲೆ ಅದು ಅದನ್ನು ಬಿಟ್ಟು ಬಿಟ್ಟಿತು ಈಗ ನಾನು ನನ್ನ ಮನೆಯಲ್ಲಿಯೇ ಸುಖವಾಗಿ ಇದ್ದೇನೆ.

೧೩೦. ಎಲೈ ರಾಮನೆ! ಈ ಗೂಬೆಯು ನನ್ನದು ನನ್ನದು ಎಂದು ಸುಳ್ಳನ್ನು ಹೇಳುತ್ತ ವ್ಯರ್ಥವಾಗಿ ಹೊಟ್ಟೆಗಿಚ್ಚುಪಡುತ್ತದೆ. ನೀನು ಧರ್ಮವನ್ನು ನಾಶಮಾಡಬೇಡ. ಅನ್ಯಾಯವನ್ನು ಮಾಡಬೇಡ. ನಿನ್ನ ವಂಶದಲ್ಲಿ ಪಾಪಿಗಳಾರೂ ಇರುವುದಿಲ್ಲ. ಧರ್ಮವನ್ನು ನಾಶಮಾಡಿ ನೀನು ಪಾಪಿಯಾಗಬೇಡ.

೧೩೧. ಆಗ ರಾಮನು ಅವೆರಡನ್ನೂ ಕುರಿತು ನೀವಿಬ್ಬರೂ ಈ ಮನೆಯನ್ನು ಯಾವಾಗ ಯಾವಾಗ ಕಟ್ಟಿಕೊಂಡಿರಿ ? ಅದಕ್ಕೆ ಸಾಕ್ಷಿಯಾರು ? ಎಂದು ಕೇಳಲು ಅವೆರಡೂ ಅದಕ್ಕೆ ಸಾಕ್ಷಿಯೇ ಇಲ್ಲವೆಂದು ಹೇಳಿದುವು.

೧೩೨. ಆಗ ರಾಮನು ವಿಮಾನದಲ್ಲಿ ಕುಳಿತಿರುವರನ್ನೆಲ್ಲಾ ಕುರಿತು ನಗುತ್ತ ಇಂತೆಂದನು. ಇಗೋ ನೋಡಿರಿ. ಇದೂ ಒಂದು ಈಗ ನನ್ನೆದುರಿಗೆ ಬಿಡಿಸಲಾಗದ ಸಮಸ್ಯೆಯು ನಿಂತಿದೆ. ಇದೂ ಒಂದು ಕಷ್ಟವೇ ಒದಗಿದೆ.

ಕಥಂ ನ್ಯಾಯೋತ್ರ ವೈ ಕಾರ್ಯಃ ಕಸ್ಮೈ ಗೇಹಂ ಪ್ರದೀಯತಾಂ ।
ತದ್ರಾಮವಚನಂ ಶ್ರುತ್ವಾಽಽ ಸರ್ವೇ ಸರ್ವೇಽತಿ ವಿಸ್ಮಿತಾಃ ॥ ೧೩೩ ॥

ತದುಲೂಕಂ ವಿಭುಃ ಪ್ರಾಹ ಕೃತಂ ಗೇಹಂ ತ್ವಯಾ ಕದಾ ।
ಉಲೂಕಃ ಪ್ರಾಹ ಭೂಶ್ಚೇಯಂ ಯದಾ ಜಾತಾ ತದಾ ಕೃತಂ ॥ ೧೩೪ ॥

ತದುಲೂಕವಚಃ ಶ್ರುತ್ವಾ ಗೃಧ್ರಂ ರಾಮೋಽವಲೋಕಯತ್ ।
ಗೃಧ್ರಃ ಪ್ರಾಹ ಯದಾ ನೇಯಂ ಮಹಾನೀರೇವನಿಸ್ತದಾ ॥ ೧೩೫ ॥

ಚೂತಪೃಷ್ಠೇ ಕೃತಂ ವಿದ್ಧಿ ಪುರಾ ಗೇಹಂ ಮಯಾ ವಿಭೋ ।
ತದ್ಗೃಧ್ರವಚನಂ ಶ್ರುತ್ವಾ ತದಾ ತಂ ಪ್ರಾಹ ರಾಘವಃ ॥ ೧೩೬ ॥

---

೧೩೩. ಈಗ ಈ ವಿಷಯದಲ್ಲಿ ನ್ಯಾಯವನ್ನು ಹೇಗೆ ತೀರ್ಮಾನಮಾಡಲಿ ? ಯಾವುದಕ್ಕೆ ಮನೆಯನ್ನು ಕೊಡಿಸಲಿ ? ಎಂದೆನಲು ರಾಮನ ಈ ಮಾತನ್ನು ಕೇಳಿ ಅವರೆಲ್ಲರೂ ಬಹುವಾಗಿ ಆಶ್ಚರ್ಯಗೊಂಡು ಸುಮ್ಮನಾದರು.

೧೩೪. ಆಗ ಗೂಬೆಯನ್ನು ಕುರಿತು ರಾಮನು ಎಲೈ ಗೂಬೆಯೇ ! ನೀನು ಈ ಮನೆಯನ್ನು ಯಾವಾಗ ಕಟ್ಟಿದೆ ? ಎಂದೆನಲು ಗೂಬೆಯು ಎಲೈ ರಾಮನೆ ! ಈ ಭೂಮಿಯು ಹುಟ್ಟಿದಾಗಲೇ ನಾನು ಆ ಗೂಡನ್ನು ಕಟ್ಟಿದೆನು. ಎಂದಿತು.

೧೩೫–೧೩೬. ಗೂಬೆಯು ಇಂತೆಂದುದನ್ನು ಕೇಳಿ ರಾಮನು ಹದ್ದಿನ ಮುಖವನ್ನು ನೋಡಿದನು. ಅದನ್ನು ಆ ಹದ್ದು ತಿಳಿದುಕೊಂಡು ನಾನು ಗೂಡನ್ನು ಕಟ್ಟಿದಾಗ ಈ ಭೂಮಿಯು ನೀರಿನಮೇಲೆ ಸೃಷ್ಟಿಯಾಗಿಯೇ ಇರಲಿಲ್ಲ. ನೀರಿನಲ್ಲಿ ಆಗಲೇ ಒಂದು ಮಾವಿನಮರದಮೇಲೆ ನಾನು ಆ ಮನೆಯನ್ನು ಕಟ್ಟಿದೆನು. ಎಂದಿತು. ಹದ್ದು ಹೀಗೆ ಹೇಳಿದುದನ್ನು ಕೇಳಿ ಅದನ್ನು ಕುರಿತು ರಾಮನು ಇಂತೆಂದನು.

ಕಥಂ ವಿನಾಶ್ರಯೇಣಾಸೀನ್ಮಹಾನೀರೇ ನಗಸ್ತದಾ ।
ನೋಽಕ್ಷೋಽ ಕ್ಷಯವಟಿಸ್ಸೋಽಪಿ ಚೂತವೃಕ್ಷಸ್ತ್ವಯಾ ಸ್ಮೃತಃ ॥ ೧೩೭ ॥

ತ ಸ್ಮಾದ್ವೃಥಾ ತ್ವಯಾ ಗೃಧ್ರ ಸ್ಪರ್ಧ್ಯತೇನೇನ ನಿಶ್ಚಿತಂ ।
ಮಯಾದ್ಯ ತವ ವಾಕ್ಯೇನ ಧಿಕ್ ತ್ವಾಂ ದುಷ್ಟಪತತ್ರಿಣಂ ॥ ೧೩೮ ॥

ಇತ್ಯುಕ್ತ್ವಾ ರಾಘವೋ ದೂತೈಸ್ತಂ ಗೃಧ್ರಂ ಪರ್ವತೋಪರಿ ।
ತ್ರಿಶೂಲಾಗ್ರೇಷು ಚಾರೋಪ್ಯ ಪ್ರೇಷಯಾಮಾಸ ಸ್ವಂ ಪದಂ ॥ ೧೩೯ ॥

ಧನ್ಯಸ್ಸಗೃಧ್ರೋ ವಿಜ್ಞೇಯೋ ರಾಮಾಗ್ರೇ ಯಸ್ಯ ವೈ ಮೃತಿಃ ।
ಅಭೂತ್ತದ್ದರ್ಶನಮಪಿ ಯಸ್ಯ ದೇಹವಿಸರ್ಜನೇ ॥ ೧೪೦ ॥

---

೧೩೭ ಎಲೈ ಗೃಧ್ರವೇ! ಆಶ್ರಯೀಭೂತವಾದ ಭೂಮಿಯಿಲ್ಲದೇನೇ ನೀರಿನೊಳಗೆ ಆ ಮಾವಿನಮರವು ಹೇಗೆ ತಾನೇ ಇದ್ದೀತು? ಮರದಲ್ಲಿ ಆಗ ಗೂಡನ್ನು ಕಟ್ಟಿದೆನೆಂದು ಹೇಳುತ್ತಿರುವೆಯಲ್ಲ! ಪ್ರಸಿದ್ಧವಾದ ಅಕ್ಷಯವಟವೇ ಆಗ ಇರಲಿಲ್ಲ. ನೀನು ಹೇಳುವ ಮಾವಿನಮರವು ಆಗ ಎಲ್ಲಿಂದ ಬಂದೀತು?

೧೩೮. ಎಲೈ ಹದ್ದೇ! ನೀನು ಇದರೊಡನೆ ವ್ಯರ್ಥವಾಗಿ ಜಗಳವಾಡುತ್ತಿರುತ್ತೀಯೆ. ಇದು ನಿಶ್ಚಯ. ನಿನ್ನ ಮಾತಿನಿಂದಲೇ ನೀನು ಸುಳ್ಳುಗಾರನೆಂದು ತಿಳಿಯಿತು. ನೀನು ಕೆಟ್ಟಪಕ್ಷಿಯು. ನಿನಗೆ ಧಿಕ್ಕಾರವಿರಲಿ.

೧೩೯. ರಾಮನು ಹೀಗೆಂದು ಆ ಪಕ್ಷಿಯನ್ನು ನಿಂದಿಸಿ ಅದನ್ನು ಆ ಪರ್ವತದಲ್ಲಿಯೇ ದೂತರ ಕೈಯಿಂದ ತ್ರಿಶೂಲದ ತುದಿಯಲ್ಲಿ ಚುಚ್ಚಿಸಿ ಎಂದರೆ ಶೂಲಕ್ಕೆ ಹಾಕಿ ಕೊಲ್ಲಿಸಿ ವೈಕುಂಠವನ್ನು ಕೊಟ್ಟನು.

೧೪೦. ರಾಮನ ಎದುರಿನಲ್ಲಿಯೇ ಆ ಹದ್ದಿಗೆ ಮರಣವು ಒದಗಿರುವುದರಿಂದ ಅದೇ ಧನ್ಯವಾಯಿತು. ಆ ಹದ್ದಿಗೆ ಸಾಯುವಾಗ ಆ ಸ್ವಾಮಿಯಾದ ರಾಮನ ದರ್ಶನವಾಯಿತಲ್ಲ!

ದತ್ವಾ ಗೇಹಮುಲೂಕಾಯ ಯಯೌ ರಾಮೋ ನಿಜಾಂ ಪುರೀಂ ।
ವಿವೇಶ ನಗರೀಂ ನೃತ್ಯವಾದ್ಯಗೀತಪುರಸ್ಸರಂ ॥ ೧೪೧ ॥

ಶಿಶುಂ ವಿಪ್ರಂ ಕ್ಷತ್ರಿಯಂ ಚ ವೈಶ್ಯಂ ಚಾಪಿ ಚತುರ್ಥಕಂ ।
ತೈಲಕಾರಂ ಪಂಚಮಂ ಚ ಲೋಹಕಾರಸ್ನುಷಾಂ ತಥಾ ॥ ೧೪೨ ॥

ಚರ್ಮಕಾರದುಹಿತರಂ ಸಪ್ತೈತಾನ್ ಹಿ ಸುಜೀವಿತಾನ್ ।
ದೃಷ್ಟ್ವಾ ರಾಮುಸ್ಸಮಾಯಾತಾನಾತ್ಮಾನಂ ದ್ರಷ್ಟುಮಾದರಾತ್ ॥ ೧೪೩ ॥

ತುತೋಷ ನಿತರಾಂ ಪತ್ನ್ಯಾ ತೈಸ್ಸರ್ವೈಸ್ಸಂಸ್ಥಿತೋ ಮುಹುಃ ।
ತತಸ್ಸಂಪೂಜ್ಯ ತಾನ್ಸರ್ವಾನ್ ವಿಸಸರ್ಜ ರಘೂದ್ವಹಃ ॥ ೧೪೪ ॥

---

೧೪೧. ಅನಂತರ ಶ್ರೀರಾಮನು ಆ ಗೂಡನ್ನು ಗೂಬೆಗೆ ಕೊಟ್ಟು ತಾನು ತನ್ನ ರಾಜಧಾನಿಗೆ ಹೊರಟು ಹೋದನು. ನೃತ್ಯಗೀತವಾದ್ಯಗಳೊಡನೆ ಅವನು ಪಟ್ಟಣಕ್ಕೆ ಪ್ರವೇಶಿಸಿ ಹೋದನು.

೧೪೨–೧೪೩. ಅಲ್ಲಿ ಆ ಶಿಶು, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರನಾದ ಎಣ್ಣೆಮಾರುವವನು, ಕಂಚುಗಾರನ ಸೊಸೆ, ಚರ್ಮಹದ ಮಾಡುವವನ ಮಗಳು ಇವರೇಳುಜನಗಳ ಹೆಣಗಳು ಜೀವವನ್ನು ಹೊಂದಿದ್ದುವು. ರಾಮನು ಬಂದುದನ್ನು ಕೇಳಿ ಅವರೆಲ್ಲರೂ ಆ ಸ್ವಾಮಿಯನ್ನು ನೋಡಲು ಬಂದಿದ್ದರು.

೧೪೪ ಆಗ ರಾಮನು ಅವರನ್ನು ನೋಡಿದನು. ಅವರೆಲ್ಲರೂ ಅವನನ್ನು ಹೊಗಳಿದರು. ರಾಮನೂ ಸೀತೆಯೂ ಅದರಿಂದ ಬಹು ಸಂತೋಷಗೊಂಡರು. ಮತ್ತು ಆ ಬದುಕಿ ಬಂದವರನ್ನು ಯಥೋಚಿತವಾಗಿ ಗೌರವಿಸಿ ಕಳುಹಿಸಿದನು.

ತದಾ ಮಹೋತ್ಸವಶ್ಚಾಸೀದಯೋಧ್ಯಾಯಾಂ ಸಮಂತತಃ ।
ಏವಂ ನಾನಾಚರಿತ್ರಾಣಿ ಚಕಾರ ರಘುನಂದನಃ ॥ ೧೪೫ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ರಾಜ್ಯಕಾಂಡೇ ಪೂರ್ವಾರ್ಧೇ ಯತಿಶೂದ್ರಗೃಧ್ರ ಶಿಕ್ಷೋಪಕರಣಂ ನಾಮ ದಶಮಸ್ಸರ್ಗಃ

---

೧೪೫. ಆಗ ಅಯೋಧ್ಯೆಯಲ್ಲಿ ಎಲ್ಲಾ ಕಡೆಯಲ್ಲಿಯೂ ಬಹು ಸಂತೋಷದಿಂದ ಉತ್ಸವಗಳನ್ನು ಮಾಡಿದರು. ಈ ರೀತಿಯಾಗಿ ಆ ರಘುರಾಮನು ಅನೇಕ ಬಗೆಯ ವಿಚಿತ್ರಗಳನ್ನು ಮಾಡಿದನು.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಪೂರ್ವಾರ್ಧದಲ್ಲಿ ಯತಿಶೂದ್ರಗೃಧ್ರರಿಗೆ ಶಿಕ್ಷೋಪಕರಣವೆಂಬ ಹತ್ತನೆಯ ಸರ್ಗವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಹತ್ತನೆಯ ಸರ್ಗದ ಸಾರಾಂಶವು

ಶ್ರೀರಾಮನು ಆ ಸ್ಥಾನಮಂಟಪದಲ್ಲಿ ಕುಳಿತು ನ್ಯಾಯವಿಮರ್ಶೆಯನ್ನು ಮಾಡುತ್ತಿರುವಾಗ ಒಂದು ನಾಯಿಯು ಹೊರಗಡೆ ಕೂಗುತ್ತಿದ್ದುದು ಕೇಳಿ ಬಂದಿತು. ರಾಮನು ದೂತರನ್ನು ಕಳುಹಿಸಲು ಅವರು ಅದನ್ನು ಓಡಿಸಿಬಿಟ್ಟರು. ಮರುದಿನವೂ ಆ ನಾಯಿಯು ಅಂತೆಯೇ ಕೂಗಲು ಅಂದೂ ಆ ದೂತರು ಓಡಿಸಿಬಿಟ್ಟರು. ಮೂರನೆಯ ದಿನವೂ ಕೂಗಿತು. ಆಗ ರಾಮನು ಅದನ್ನು ಕರೆದುಕೊಂಡು ಬರುವಂತೆ ಹೇಳಿ ಕಳುಹಿಸಲು ಆ ನಾಯಿಯು ತಾನು ಆ ಸ್ಥಾನಕ್ಕೆ ಬರಲು ಯೋಗ್ಯವಲ್ಲವೆಂದೂ ರಾಜನೇ ಅಲ್ಲಿಗೆ ಬರಬೇಕೆಂದೂ ಹೇಳಲು ರಾಮನು ಅಂತೆಯೇ ಅದರ ಬಳಿಗೆ ಹೋಗಿ ಅದರ ತೊಂದರೆಯನ್ನು ವಿಚಾರಿಸಿದನು. ಆಗ ನಾಯಿಯು ನಿರಪರಾಧಿಯಾದ ನನ್ನನ್ನು ಒಬ್ಬ ಯತಿಯು ಹೊಡೆದುದಾಗಿಯೂ ಅದರಿಂದ ಅದರ ಕಾಲು ಮುರಿದಿರುವುದಾಗಿಯೂ ಹೇಳಿತು. ಆಗ ರಾಮನು ಯತಿಯನ್ನು ಕರೆಸಿ ಕೇಳಲು ತಪ್ಪು ಅವನದಾಗಿದ್ದಿತು. ಅನಂತರ ನಾಯಿಯ ಮಾತಿನಂತೆ ಅವನಿಗೆ ಛತ್ರದ ಪಾರುಪತ್ತಿಗೆ ಕೆಲಸವನ್ನು ಕೊಡಿಸಿದನು. ಇದರಿಂದ ಅವನಿಗೆ ಮುಕ್ತಿಯನ್ನು ದೊರೆಕಿಸುವ ಅಯೋಧ್ಯೆಯಲ್ಲಿ ಮರಣವಿಲ್ಲದೆ ಮುಂದಿನ ಜನ್ಮದಲ್ಲಿ ನಾಯಿಯಾಗಿ ಹುಟ್ಟಿದನು.

ಒಂದುಸಾರಿ ಆ ಊರಿನಲ್ಲಿ ಒಬ್ಬ ಬ್ರಾಹ್ಮಣನ ಮಗನು ಸಾಯಲು ಅವನು ರಾಮನ ಬಳಿಗೆ ಬಂದು ನಿನ್ನ ಅಧರ್ಮದಿಂದ ನನ್ನಮಗನು ಸತ್ತಿರುವನೆಂದು ಹೇಳಲು ಆ ಅಧರ್ಮವು ಯಾವುದೆಂಬುದನ್ನು ನಾರದರಿಂದ ತಿಳಿದು ಸರಿಪಡಿಸಲು ಹೊರಟನು. ಇದೇ ಅಧರ್ಮದಿಂದ ಇನ್ನೂ ಹಲವರು ಸತ್ತರು. ರಾಮನು ಹೀಗೆ

ಸತ್ತವರ ಶವಗಳನ್ನು ನಾಶಪಡಿಸದೆ ಇಡಿಸಿದ್ದು ಶೂದ್ರಕನು ತಪಸ್ಸನ್ನು ಮಾಡುತ್ತಿರಲು ಅದೇ ಅಧರ್ಮವೆಂದು ತಿಳಿದು ಅವನ ತಪಸ್ಸಿಗೆ ವರವನ್ನು ಕೊಟ್ಟು ಅನಂತರ ಅವನನ್ನು ಕೊಂದು ಇಲ್ಲಿ ಆ ಅಧರ್ಮದಿಂದ ಸತ್ತವರನ್ನೆಲ್ಲಾ ಬದುಕಿಸಿದನು.

ಆ ಶೂದ್ರಕನನ್ನು ವಧಿಸಿ ಊರಿಗೆ ಬರುತ್ತಿರಲು ಗೂಬೆ ಹದ್ದುಗಳೆರಡು ಗೂಡಿಗೋಸ್ಕರ ಜಗಳವಾಡುತ್ತ ಬಂದು ರಾಮನನ್ನು ನೋಡಿದುವು. ಅವನು ಅವುಗಳ ಪೂರ್ವಾಪರಗಳನ್ನು ಕೇಳಿ ಗೂಬೆಗೆ ಗೂಡನ್ನು ಕೊಡಿಸಿ ಹದ್ದನ್ನು ಶೂಲಕ್ಕೇರಿಸಿ ಶಿಕ್ಷಿಸದನು.

ಇದನ್ನು ತಿಳಿದು ಪ್ರಜೆಗಳೆಲ್ಲರೂ ರಾಮನು ಪರಮಾತ್ಮನೆಂದು ತಿಳಿದು ಸಂತೋಷದಿಂದಿದ್ದರು. ರಾಮನೂ ಸುಖದಿಂದಿದ್ದನು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ

॥ ಏಕಾದಶಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಅಥೈತದಾ ರಾಮಚಂದ್ರೋ ಮೃಗಯಾರ್ಥಂ ವನಂ ಯಯೌ ।
ಸೀತಯಾ ಬಂಧುಭಿಸ್ಸೈನ್ಯೈಃ ಹಸ್ತ್ಯಶ್ವರಥಕೋಟಿಭಿಃ ॥ ೧ ॥

ಪಶ್ಯನ್ ವನಾನಿ ಸರ್ವಾಣಿ ಮೃಗಯಾರಸಿಕೋ ಭೃಶಂ ।
ಕೌತೂಹಲಸಮಾವಿಷ್ಟಃ ಆಚೇಟವ್ಯೂಹಸಂವೃತಃ ॥ ೨ ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಹನ್ನೊಂದನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು–ಶ್ರೀರಾಮಚಂದ್ರನು ಒಂದುಸಾರಿ ಬೇಟೆಗೋಸ್ಕರ ಕಾಡಿಗೆ ಹೋದನು. ಸೀತೆಯನ್ನೂ ತಮ್ಮಂದಿರನ್ನೂ ಸೈನ್ಯಗಳನ್ನೂ ಆನೆ, ಕುದುರೆ, ರಥಗಳನ್ನೂ ಜೊತೆಯಲ್ಲಿ ತೆಗೆದುಕೊಂಡು ಹೋದನು.

೨. ಬೇಟೆಯಲ್ಲಿ ಆಸಕ್ತನಾಗಿ ಆ ಕಾಡೆಲ್ಲವನ್ನೂ ನೋಡುತ್ತ ಹೊರಟನು. ಬೇಟೆಗಾರರ ಪಡೆಯನ್ನು ಕರೆದುಕೊಂಡು ಬಹುವಾದ ಆಸಕ್ತಿಯಿಂದ ಹೋಗುತ್ತಿದ್ದನು.

ಉಪಾನದ್ಗೂಢಪಾದಶ್ಚ ನೀಲೋಷ್ಣೀಷೀ ಹರಿಚ್ಛದಃ ।
ನೀಲಗೋಧಾಂಗುಲಿತ್ರಾಣೋ ಧನುಃಪಾಣಿಶ್ಶರೀ ನೃಪಃ ॥ ೩ ॥

ಅಶ್ವಾರೂಢಃ ಖಡ್ಗಚರ್ಮಧಾರೀ ಭೂಪೈಃ ಪದಾತಿಭಿಃ ।
ವೇಷ್ಟಿತಃ ಕವಚೀ ರಾಮೋ ವಿವೇಶ ಗಹನಂ ವನಂ ॥ ೪ ॥

ಸೀತಯಾ ಜಾಲರಂಧ್ರೈಶ್ಚ ವಾರಂ ವಾರಂ ನಿರೀಕ್ಷಿತಃ ।
ಸ ರಾಮೋ ಬಂಧುವರ್ಗೈಶ್ಚ ಪುತ್ರಾಭ್ಯಾಂ ನೃಪಸತ್ತಮೈಃ ॥ ೫ ॥

ಕ್ರೀಡಾಂ ಮುದಾಕರೋತ್ತತ್ರ ಕುಂಜೇಷು ಮೃಗಯನ್ ಮೃಗಾನ್ ।
ಹನ್ಯತಾಂ ಹನ್ಯತಾಮೇಷೋ ಮೃಗೋ ವೇಗಾತ್ಪಲಾಯತೇ ॥ ೬ ॥

---

೩. ಕಾಲುಗಳು ಮುಳ್ಳು ಚುಚ್ಚಿಕೊಳ್ಳದಂತೆ ಕೆರಗಳನ್ನು ಹಾಕಿಕೊಂಡಿದ್ದನು. ನೀಲಿಯ ಪಾಗನ್ನು ಕಟ್ಟಿಕೊಂಡಿದ್ದನು. ಹಸುರಾದ ಕಸೆಯಂಗಿಯನ್ನು ಹಾಕಿಕೊಂಡಿದ್ದನು. ನೀಲವಾದ ಉಡುವಿನ ಚರ್ಮದ ಕೈಚೀಲವನ್ನು ಹಾಕಿಕೊಂಡು ಇದ್ದನು. ಕೈಯ್ಯಲ್ಲಿ ಬಿಲ್ಲನ್ನು ಹಿಡಿದಿದ್ದನು. ಬೆನ್ನಿನಲ್ಲಿ ಬತ್ತಳಿಕೆಯೂ ಕೈಯಲ್ಲಿ ಬಾಣವೂ ಇದ್ದುವು.

೪. ಕುದುರೆಯಮೇಲೆ ಕುಳಿತಿದ್ದನು. ಕತ್ತಿಯನ್ನೂ ಚರ್ಮವನ್ನೂ ಧರಿಸಿದ್ದನು. ಸಾಮಂತರಾಜರೊಡನೆಯೂ ಪದಾತಿಗಳೊಡನೆಯೂ ಕೂಡಿಕೊಂಡಿದ್ದನು. ಕವಚವನ್ನೂ ಹಾಕಿಕೊಂಡು ರಾಮನು ಗಹನವಾದ ಒಂದು ಕಾಡಿಗೆ ನುಗ್ಗಿದನು.

೫. ಬೇಟೆಯಾಡುತ್ತಿರುವ ಶ್ರೀರಾಮನನ್ನು ಸೀತೆಯು ಜಾಲರಂಧ್ರದಿಂದ ನೋಡುತ್ತಿದ್ದಳು. ರಾಮನು ತಮ್ಮಂದಿರೊಡನೆಯೂ ಮಕ್ಕಳೊಡನೆಯೂ ಸಾಮಂತರಾಜರೊಡನೆಯೂ ಅಲ್ಲಿ ಬೇಟೆಯಾಡುತ್ತಿದ್ದನು.

೬. ಅಲ್ಲಿರುವ ಪೊದರುಗಳಲ್ಲಿ ಮೃಗಗಳನ್ನು ಹುಡುಕುತ್ತಾ ಸೋವು ಮಾಡುತ್ತಿದ್ದನು. ಮೃಗವು ಹೊರಟಾಗ "ಮೃಗವು ಹೊರಟಿತು. ವೇಗವಾಗಿ ಓಡುತ್ತ ಹೋಗುತ್ತಿದೆ. ಹೊಡೆಯಿರಿ" ಎಂದೆನ್ನುತ್ತಿದ್ದನು.

ಇತಿ ಜಲ್ಪನ್ ಸ್ವಭೃತ್ಯೇಷು ಸ್ವಯಮುತ್ಪತ್ಯ ಹಂತಿ ಚ ।
ಗಾಂಧಾರೇಷು ಚ ರಮ್ಯೇಷು ವನೇಷು ವಿಪುಲೇಷು ಚ ॥ ೭ ॥

ಉಲ್ಲಂಘಿತಮಹಾಸ್ರೋತಾ ಯುವಾ ಪಂಚಾಸ್ಯವಿಕ್ರಮಃ ।
ಇತಸ್ತತಃ ಪುನರ್ಯಾತಿ ಕ್ವಚಿತ್ಪಶ್ಯನ್ ವನಸ್ಥಲೀಂ ॥ ೮ ॥

ವಿಟಪೋಡ್ಡೀನಸಂತ್ರಸ್ತಲೀನಕೇಕಿಕುಲಾಕುಲಾಂ ।
ಹರಿಣೀಗಣಸಂತ್ರಸ್ತಾಂ ಧಾವಚ್ಛ್ವಾಪದದಿಙ್ಮುಖಾಂ ॥ ೯ ॥

ಕ್ವಚಿತ್ಫೇರವಫೂತ್ಕಾರತಾರಾರಾವವಿಭೀಷಿತಾಂ ।
ಖಡ್ಗಯೂಥೈಃ ಕ್ವಚಿಲ್ಲಕ್ಷ್ಮೀಂ ದಧಾನಾಮಿವ ದಂತಿನಾಂ ॥ ೧೦ ॥

೭-೮. ಹೀಗೆ ಆಳುಗಳಿಗೆ ಹೇಳುತ್ತ ತಾನೇ ನೆಗೆದುಹೋಗಿ ಹೊಡೆದು ಕೊಲ್ಲುತ್ತಿದ್ದನು. ಶ್ರೀರಾಮನು ಗಾಂಧಾರದೇಶದ ವಿಸ್ತಾರವಾದ ರಮ್ಯವಾದ ವನಗಳಲ್ಲಿ ಹೀಗೆ ಬೇಟೆಯಾಡುತ್ತ ಸಿಂಹಪರಾಕ್ರಮವುಳ್ಳ ಅವನು ಅಲ್ಲಿ ಸಿಕ್ಕಿದ ದೊಡ್ಡನದಿಗಳನ್ನು ದಾಟಿಬಿಡುತ್ತಿದ್ದನು. ಅಲ್ಲಲ್ಲಿ ಸಿಕ್ಕಿದ ವನಗಳಲ್ಲಿ ಬೇಟೆಯ ಮೃಗಗಳನ್ನು ಹುಡುಕುತ್ತಿದ್ದನು. ಹಿಂದಕ್ಕೂ, ಮುಂದಕ್ಕೂ, ಪಕ್ಕಗಳಿಗೂ, ಕಾಡುಪ್ರದೇಶವನ್ನು ನೋಡುತ್ತ ಹಿಂದುಮುಂದಕ್ಕೆ ಮತ್ತೆ ಮತ್ತೆ ಓಡಾಡುತ್ತಿದ್ದನು.

೯. ಈ ಬೇಟೆಯ ಕಾಲದಲ್ಲಿ ನವಿಲುಗಳು ಹೆದರಿ ಅಲ್ಲಲ್ಲೇ ಪೊದರುಗಳಲ್ಲಿ ಅವಿತುಕೊಳ್ಳುತ್ತಿದ್ದುವು. ಜಿಂಕೆಯ ಗುಂಪೆಲ್ಲವೂ ಹೆದರಿ ಓಡುತ್ತಿದ್ದುವು. ಕ್ರೂರಮೃಗಗಳಂತೂ ದಿಕ್ಕಾಪಾಲಾಗಿ ಓಡುತ್ತಿದ್ದುವು.

೧೦. ಆ ಕಾಡಿನಲ್ಲಿ ಒಂದು ಕಡೆಯಲ್ಲಿ ನರಿಯು ಭಯಂಕರವಾದ ಧ್ವನಿಯನ್ನು ಮಾಡುತ್ತಿದ್ದಿತು. ಕೆಲವುಕಡೆಗಳಲ್ಲಿ ಝಿಲ್ಲಿರಿ ಎಂಬ ಹುಳುವು ಝುಯ್ ಎನ್ನುತ್ತಿದ್ದಿತು. ಕೆಲವು ಕಡೆಗಳಲ್ಲಿ ಖಡ್ಗಮೃಗಗಳೂ ಮತ್ತೆ ಕೆಲವು ಕಡೆಗಳಲ್ಲಿ ಆನೆಗಳೂ ಇದ್ದು ಆ ಕಾಡಿನ ಅಂದವನ್ನು ಹೆಚ್ಚಿಸಿದ್ದುವು.

ಕ್ವಚಿತ್ಕೋಟರಸಂವಿಷ್ಟಶುಕನಾದವಿನಾದಿನೀಂ ।
ಮೃಗಾರಿಪದಮುದ್ರಾಭಿರ್ಮುದ್ರಿತಾಂ ಚ ಕ್ವಚಿತ್ಕ್ವಚಿತ್ ॥ ೧೧ ॥

ಶಾರ್ದೂಲನಖನಿರ್ಭಿನ್ನರೋಹಿದ್ರಕ್ತಾರುಣಾಂ ಕ್ವಚಿತ್ ।
ಪೀವರಸ್ತನ ಭಾರಾರ್ತಸುಸ್ನಿಗ್ಧಮಹಿಷೀಗಣೈಃ ॥ ೧೨ ॥

ಅವರೋಧಾಜಿರಶ್ರೋಣೀಂ ಸೂಚಯಂತೀಂ ಕ್ವಚಿತ್ ಕ್ವಚಿತ್ ।
ಕ್ವಚಿದ್ವೃಕ್ಷಘನಚ್ಛಾಯಾಂ ವನಪುಷ್ಪಸುಗಂಧಿನೀಂ ॥ ೧೩ ॥

ಕ್ವಚಿಲ್ಲತಾಗೃಹದ್ವಾರಿ ಭೃಂಗಮಂಡಲತೋರಣಾಂ ।
ಅರ್ಧನಿಸ್ಸೃತನಿರ್ಮೋಕನಾಗಭೀಮಮಹದ್ಬಿಲಾಂ ॥ ೧೪ ॥

---

೧೧. ಕೆಲವುಕಡೆ ಗಿಳಿಗಳು ಪೊಟ್ಟರೆಗಳಲ್ಲಿದ್ದು ಧ್ವನಿಮಾಡುತ್ತಿದ್ದುವು. ಕೆಲವು ಕಡೆಗಳಲ್ಲಿ ನೆಲವು ಹುಲಿಯ ಕಾಲು ಹೆಜ್ಜೆಗಳ ಗುರುತಿನಿಂದ ಕೂಡಿದ್ದಿತು.

೧೨. ಕೆಲವು ಕಡೆಯಲ್ಲಿ ಹುಲಿಯು ಜಿಂಕೆಯನ್ನು ಹೊಡೆದು ಅದರ ರಕ್ತವು ಕಾಲಿಗೆ ಅಂಟಿರಲು ಅದು ನೆಲದಮೇಲೆ ನಡೆದಾಗ ಹೆಜ್ಜೆ ಹೆಜ್ಜೆಯಾಗಿ ನೆಲದಮೇಲೆ ಅಂಟಿಕೊಂಡು ಕೆಂಪಾಗಿ ಕಾಣುತ್ತಿದ್ದಿತು. ಕೆಲವು ಕಡೆಯಲ್ಲಿ ದೊಡ್ಡ ಕೆಚ್ಚಲಿನ ಭಾರದಿಂದ ಕೂಡಿದ ಕಾಡೆಮ್ಮೆಗಳಿದ್ದುವು.

೧೩. ಈ ಎಮ್ಮೆಗಳು ಅಲ್ಲಿ ದೊಡ್ಡದಾದ ಸ್ತನಗಳನ್ನು ಹೊತ್ತುಕೊಂಡು ಓಡಾಡುವುದನ್ನು ನೋಡಿದರೆ ದೊಡ್ಡ ಸ್ತನಗಳನ್ನು ಹೊತ್ತುಕೊಂಡು ಓಡಾಡುವ ರಾಜಸ್ತ್ರೀಯರುಳ್ಳ ಅಂತಃಪುರದ ಸ್ಥಳದ ಜ್ಞಾಪಕವನ್ನು ತರುತ್ತಿದ್ದಿತು. ಕೆಲವುಕಡೆ ಮರಗಳು ಒತ್ತಾಗಿದ್ದೂ ನೆರಳೂ ಒತ್ತಾಗಿದ್ದಿತು. ಕೆಲವುಕಡೆ ಕಾಡುಹೂಗಳಿಂದ ಬಹು ಸುವಾಸನೆಯಾಗಿದ್ದಿತು.

೧೪. ಕೆಲವು ಜಾಗಗಳಲ್ಲಿ ಪೊದರುಗಳು ಲತಾಗೃಹಗಳಂತಿದ್ದು ಅದರ ಬಾಗಿಲಲ್ಲಿ ತೋರಣದಂತೆ ಜೇನು ನೊಣಗಳು ಸಾಲಾಗಿ ನೇತಾಡುತ್ತಿದ್ದುವು. ಕೆಲವು ಕಡೆಗಳಲ್ಲಿ ಹುತ್ತಗಳಿದ್ದು ಅದರ ಕೋವೆಯಲ್ಲಿ ಹಾವಿನ ಪೊರೆಯು ಅರ್ಧಭಾಗ ಈಚೆಗೆ ಕಾಣುತ್ತಿದ್ದುದರಿಂದ ಬಹು ಭಯಂಕರವಾಗಿದ್ದಿತು.

ವೃಕ್ತಾಸ್ಯಾಜಗರೈರ್ವ್ಯಾಪ್ತಾಂ ಕ್ವಚಿನ್ನಿರ್ಮುಕ್ತಸರ್ಪಿಣೀಂ ।
ಕ್ವಚಿದ್ದಾವಾನಲಜ್ವಾಲಾಶಿಖಾವ್ಯಾಪ್ತಮಹೀರುಹಾಂ ॥ ೧೫ ॥

ಜ್ವಲನ್ನಿಕುಂಜನಿರ್ಗಚ್ಛದ್ವ್ಯಕವ್ಯಾಘ್ರತ್ರಸದ್ಭಟಾಂ ।
ವ್ಯಮುಂಚತಿ ಶುನಾಂ ಯೂಥಂ ಶಶಕೇಷು ಕ್ವಚಿತ್ಕ್ವಚಿತ್ ॥ ೧೬ ॥

ಪಲ್ವಲೇಷು ಚ ವಿಶ್ರಾಂತಃ ಪುನರ್ಯಾತಿ ವನಾಂತರಂ ।
ತತೋ ಮಧ್ಯಾಹ್ನಸಮಯೇ ನಿವಾಸಂ ಸರಸಸ್ತಟೇ ॥ ೧೭ ॥

ಕಾರಯಾಮಾಸ ಸೇನಾಯಾಸ್ಸೀತಾಯಾಶ್ಚ ರಘೂತ್ತಮಃ ।
ಸ್ವಯಂ ಮುದಾಕರೋತ್ಕ್ರೀಡಾಮಾಖೇಟಪ್ರೌಹಸಂವೃತಃ ॥ ೧೮ ॥

---

೧೫. ಕೆಲವು ಕಡೆಗಳಲ್ಲಿ ಹೆಬ್ಬಾವುಗಳು ಬಾಯನ್ನು ತೆರೆದುಕೊಂಡು ಮಲಗಿದ್ದುವು. ಕೆಲವು ಜಾಗದಲ್ಲಿ ಅದೇ ತಾನೇ ಪರೆಯನ್ನು ಬಿಟ್ಟು ಬಹು ರೋಷದಿಂದ ಕೂಡಿದ ಹಾವುಗಳಿದ್ದುವು. ಕೆಲವು ಕಡೆ ಕಾಳ್ಗಿಚ್ಚು ವ್ಯಾಪಿಸಿ ಮರಗಳು ಹತ್ತಿಕೊಂಡು ಉರಿಯುತ್ತಿದ್ದುವು.

೧೬. ಕೆಲವು ಕಡೆಯಲ್ಲಿ ಪೊದರಿಗೆ ಬೆಂಕಿಬಿದ್ದಿರಲು ಅಲ್ಲಿಂದ ತೋಳಗಳೂ, ಹುಲಿಗಳೂ, ಹೊರಗೆ ಬರುತ್ತ ಭಟರನ್ನು ಹೆದರಿಸುತ್ತಿದ್ದುವು. ಕೆಲವುಕಡೆ ಪೊದರುಗಳಿಂದ ಮೊಲಗಳು ಓಡಿಬರುತ್ತಿರಲು ಆ ಭಟರು ಅವುಗಳಮೇಲೆ ನಾಯಿಗಳನ್ನು ಬಿಡುತ್ತಿದ್ದರು.

೧೭–೧೮. ಸಣ್ಣ ಸಣ್ಣ ನೀರಿನ ಸ್ಥಾನಗಳ ಬಳಿಯಲ್ಲಿ ಕೊಂಚಹೊತ್ತು ವಿಶ್ರಾಂತಿಯನ್ನು ಆ ರಾಮನು ಜೊತೆಯವರೊಡನೆ ಹೊಂದುತ್ತಿದ್ದನು. ಅನಂತರ ಮತ್ತೆ ಬೇಟೆಗೋಸ್ಕರ ಕಾಡಿನೊಳಕ್ಕೆ ನುಗ್ಗುತ್ತಿದ್ದನು. ಮಧ್ಯಾಹ್ನದ ಸಮಯವಾಗುತ್ತಲೂ ಸೇನೆಯೊಡನೆಯೂ ಸೀತೆಯೊಡನೆಯೂ ಅಲ್ಲಲ್ಲಿರುವ ಸರೋವರದ ಬಳಿಯಲ್ಲಿ ಬಿಡಾರವನ್ನು ಮಾಡುತ್ತಿದ್ದನು. ಈ ರೀತಿಯಾಗಿ ಆ ರಾಮನು ಬೇಟೆಗಾರರಿಂದ ಕೂಡಿಕೊಂಡು ಕಾಡಿನಲ್ಲಿ ಬೇಟೆಯಾಡುತ್ತಿದ್ದನು.

ದುದ್ರಾವ ಮೃಗಪೃಷ್ಠೇಷು ಮುಕ್ತ್ವಾ ಬಾಣಂ ಜಘಾನ ತಾನ್ ।
ಏವಂ ಖೇಲತಿ ರಾಜೇಂದ್ರೇ ವ್ಯಾಧವರ್ಗೇ ಪಲಾಯಿತೇ ॥ ೧೯ ॥

ತತ್ರ ಕೋಲಾಹಲತ್ರಸ್ತಪಂಚಾಸ್ಯೋ ನಿರ್ಗತೋ ವನಾತ್ ।
ಸ ಕೇಸರೀ ಮಹಾವೇಗಸ್ತೀಕ್ಷ್ಣದಂಷ್ಟ್ರೋ ಭಯಾವಹಃ ॥ ೨೦ ॥

ಸ್ಫುರದ್ವೇಗಸಮಾಕ್ರಾಂತದುರ್ಗಮಾರ್ಗಮಹೀತಲಃ ।
ಕದಾಚಿದ್ಗಗನಾರೂಢಃ ಕದಾಚಿದ್ಭೂಮಿಗಶ್ಚಲಃ ॥ ೨೧ ॥

ನರಾಣಾಂ ಲಕ್ಷ್ಯತಾಂ ಯಾತಿ ಧನ್ವಿನಾಂ ಪೃಷ್ಠಗಾಮಿನಾಂ ।
ಕ್ವಚಿದ್ದೃಷ್ಟಿಪಥಂ ಯಾತಿ ದರ್ಶನಾಗೋಚರಃ ಕ್ವಚಿತ್ ॥ ೨೨ ॥

---

೧೯. ಮೃಗಗಳು ಹೊರಟು ಓಡಿಹೋಗುತ್ತಿರಲು ರಾಮನು ಅವುಗಳ ಹಿಂದೆ ಓಡಿಹೋಗಿ ಬಾಣಗಳನ್ನು ಬಿಟ್ಟು ಕೊಲ್ಲುತ್ತಿದ್ದನು. ಈ ರೀತಿಯಾಗಿ ರಾಮನು ಮೃಗಗಳ ಹಿಂದೆ ಬಾಣಗಳನ್ನು ಬಿಟ್ಟುಕೊಂಡು ಕಾಡಿನಲ್ಲೆಲ್ಲಾ ಓಡಾಡುತ್ತಿದ್ದನು. ಬೇಟೆಗಾರರೆಲ್ಲರೂ ಬೇರೆ ಬೇರೆಯಾಗಿ ಬೇಟೆಯಾಡುತ್ತಿದ್ದರು.

೨೦. ಈ ಸಮಯದಲ್ಲಿ ಬೇಟೆಗಾರರ ಗದ್ದಲದಿಂದ ಒಂದು ಸಿಂಹವು ತನ್ನ ಸ್ಥಾನದಿಂದ ಹೊರ ಹೊರಟಿತು. ಅದು ಮಹಾ ವೇಗದಿಂದ ಓಡುತ್ತಲಿದ್ದು ನೋಡುವುದಕ್ಕೆ ಭಯಂಕರವಾಗಿದ್ದಿತು. ಕೋರೆಹಲ್ಲುಗಳು ಭಯಂಕರ ವಾಗಿದ್ದುವು.

೨೧. ಅದು ಬಹು ವೇಗದಿಂದ ಓಡುತ್ತಿದ್ದುದಲ್ಲದೆ ಹಳ್ಳತಿಟ್ಟಾದ ಇಕ್ಕಟ್ಟಾದ ಹೋಗಲಾಗದ ಸ್ಥಳಗಳಲ್ಲಿಯೇ ಓಡುತ್ತಿದ್ದಿತು. ಒಂದುಸಾರಿ ಆಕಾಶದಲ್ಲಿ ಓಡುವಂತೆ ನೆಗೆಯುತ್ತಿದ್ದಿತು. ಒಂದೊಂದುಸಾರಿ ನೆಲದಮೇಲೆಯೇ ವೇಗವಾಗಿ ಓಡುತ್ತಿದ್ದಿತು.

೨೨. ಒಂದೊಂದುಸಾರಿ ಹಿಂದೆ ಧನುಸ್ಸನ್ನು ಹಿಡಿದು ಅದನ್ನು ಹೊಡೆಯಲು ಓಡಿಸಿಕೊಂಡು ಹೋಗುತ್ತಿದ್ದವರಿಗೆ ಇನ್ನೇನು ಸಿಕ್ಕಿತು. ಹೊಡೆಯುತ್ತೇನೆ ಎನ್ನುವಂತೆ ಸಿಕ್ಕುತ್ತಿದ್ದಿತು. ಒಂದೊಂದುಸಾರಿ ಕಣ್ಣಿಗೆ ಕಾಣುತ್ತಿರಲಿಲ್ಲ. ಒಂದೊಂದುಸಾರಿ ಮತ್ತೆ ಕಾಣಿಸಿಕೊಳ್ಳುತ್ತಿದ್ದಿತು.

ವಕ್ರಸ್ರೋತೋತಿಗಂಭೀರಂ ಕಂಟಕೀದ್ರುಮಸಂಕುಲಂ ।
ವೃಕವ್ಯಾಘ್ರಸಮಾಕೀರ್ಣಂ ಪರ್ವತೈಶ್ಚ ಭಯಂಕರಂ ॥ ೨೩ ॥

ಪ್ರವಿಷ್ಟೋ ವಿಜನಾರಣ್ಯಂ ರಾಮಸ್ತಸ್ಯ ಪದಾನುಗಃ ।
ದೂರಾದ್ದೂರಂ ತತೋ ಗತ್ವಾ ದೇಶಾದ್ದೇಶಂ ಚ ನಿರ್ಜನಂ ॥ ೨೪ ॥

ಏಕಾಕೀ ಹಯಮಾರೂಢೋ ವಿವೇಶ ಗಿರಿಗಹ್ವರಂ ।
ಸರ್ವವ್ಯಾಧಾಶ್ಚ ದೂತಾಶ್ಚ ಲಕ್ಷ್ಮಣಾದ್ಯಾಶ್ಚ ಬಂಧವಃ ॥ ೨೫ ॥

ರಾಮಾದರ್ಶನಸಂಭ್ರಾಂತಾ ಬಭ್ರಮುಸ್ತ ಇತಸ್ತತಃ ।
ಅಥ ರಾಮಃ ಕೇಸರಿಣಂ ಜಘಾನ ಸಿತಪತ್ರಿಣಾ ॥ ೨೬ ॥

---

೨೩. ಕಡೆಗೆ ಆ ಸಿಂಹವು ಒಂದು ಕಾಡನ್ನು ಹೊಕ್ಕಿತು. ಅಲ್ಲಿ ಡೊಂಕು ಡೊಂಕಾಗಿ ಹರಿಯುವ ನದಿಗಳು ಅಡ್ಡವಾಗಿ ಸಿಕ್ಕುತ್ತಿದ್ದುವು. ಅಲ್ಲದೆ ಆ ನದಿಗಳು ದಾಟಲು ಕಷ್ಟವಾಗಿ ಆಳವಾಗಿದ್ದುವು. ಆ ಕಾಡಿನಲ್ಲಿ ಬಹುವಾಗಿ ಮುಳ್ಳಿನ ಗಿಡಗಳೂ ಇದ್ದುವು. ಭಯಂಕರವಾದ ತೋಳಗಳೂ ಹುಲಿಗಳೂ ಅನೇಕವಾಗಿದ್ದುವು. ಅಲ್ಲಿನ ಪರ್ವತಗಳು ಭಯವನ್ನುಂಟುಮಾಡುತ್ತಿದ್ದುವು.

೨೪. ಇಂತಹ ಭಯಂಕರವಾದ ಕಾಡನ್ನು ಆ ಸಿಂಹವು ಪ್ರವೇಶಿಸಿತು. ಇಂತಹ ಕಾಡಿನಲ್ಲಿ ರಾಮನೊಬ್ಬನೇ ಕುದುರೆಯಮೇಲೆ ಕುಳಿತು ಆ ಸಿಂಹವನ್ನು ಹಿಂಬಾಲಿಸಿ ಹೋಗುತ್ತಿದ್ದನು. ದೂರ ದೂರವಾಗಿ ಹೋಗುತ್ತ ಕೊನೆಗೆ ದೇಶದಿಂದ ದೇಶಕ್ಕೆ ಓಡಿ ಜನವಿಲ್ಲದ ಜಾಗವನ್ನು ಹೊಂದಿತು.

೨೫–೨೬. ರಾಮನೂ ಕೂಡ ಕುದುರೆಯನ್ನು ಅದರ ಹಿಂದೆ ಓಡಿಸುತ್ತ ಒಬ್ಬಂಟಿಗನಾಗಿಯೇ ಅಲ್ಲಿದ್ದ ಬೆಟ್ಟದ ತಪ್ಪಲನ್ನು ಹೊಂದಿದನು. ಆಗ ಬೇಟೆಗಾರರಾದ ಬೇಡರೂ ದೂತರೂ ಲಕ್ಷ್ಮಣನೇ ಮೊದಲಾದ ತಮ್ಮಂದಿರೂ ರಾಮನನ್ನು ಕಾಣದೆ ಕಳವಳಪಡುತ್ತ ಅಲ್ಲೆಲ್ಲವೂ ಸುತ್ತಾಡುತ್ತಾ ಇದ್ದರು. ಸಿಂಹವನ್ನು ಅನುಸರಿಸಿ ಹೋದ ಶ್ರೀರಾಮನು ಒಂದು ಚೂಪಾದ ಬಾಣದಿಂದ ಆ ಸಿಂಹವನ್ನು ಕೊಂದನು.

ತತಸ್ಸ ದಿವ್ಯರೂಪೇಣ ನತ್ವಾ ಪ್ರಾಹ ರಘೂತ್ತಮಂ ।
ಪುರಾ ವಿದ್ಯಾಧರಶ್ಚಾಹಂ ಮಯಾ ಭುಕ್ತಾ ಪತಿವ್ರತಾ ॥ ೨೭ ॥

ಮುನಿಪತ್ನೀ ಹಠೇನೈವ ತಯಾ ಶಪ್ತಸ್ತ್ವಹಂ ಕ್ರುಧಾ ।
ಸಿಂಹವನ್ನಿಗ್ರಹೋ ಯಸ್ಮಾತ್ತ್ವಯಾ ಮಯಿ ಕೃತೋದ್ಯ ಹಿ ॥ ೨೮ ॥

ಅತಸ್ತ್ವಂ ಮದ್ಗಿರಾ ಸಿಂಹೋ ಭವಾದ್ಯೈವ ಮಹಾವನೇ ।
ತದಾ ಮಯಾ ಪ್ರಾರ್ಥಿತಾ ಸಾ ಪುನರ್ಮಾಮಾಹ ರಾಘವ ॥ ೨೯ ॥

ಚಿರಾದ್ರಾಮಶರಸ್ಪರ್ಶಾಚ್ಛಾಪಾನ್ಮುಕ್ತಿರ್ಭವೇತ್ತವ ।
ಅತೋದ್ಯ ತ್ವಚ್ಛರಸ್ಪರ್ಶಾಚ್ಛಾಪಾನ್ಮುಕ್ತಿಶ್ಚಿರಾದಹಂ ॥ ೩೦ ॥

---

೨೭. ಒಡನೆಯೇ ಅದಕ್ಕೆ ದಿವ್ಯವಾದ ರೂಪವು ಬಂದಿತು. ಅದು ವಿಧ್ಯಾಧರನಾಗಿದ್ದಿತು. ಆಗ ಅವನು ರಾಮನಿಗೆ ನಮಸ್ಕರಿಸಿ ಇಂತೆಂದನು. ಎಲೈ ರಾಮನೇ ! ನಾನು ಪೂರ್ವದಲ್ಲಿ ಒಬ್ಬ ವಿಧ್ಯಾಧರನು. ನಾನು ಒಬ್ಬ ಪತಿವ್ರತಾಸ್ತ್ರೀಯನ್ನು ಅನುಭವಿಸಿದೆನು.

೨೮. ಆಕೆಯು ಒಬ್ಬ ಋಷಿಯ ಪತ್ನಿಯು. ಆಕೆಯು ಇಷ್ಟಪಡದಿದ್ದರೂ ನಾನು ಬಲಾತ್ಕಾರದಿಂದ ಅನುಭವಿಸಲು ಆಕೆಗೆ ಕೋಪವು ಬಂದಿತು. ಒಡನೆಯೇ ಆಕೆಯು ಎಲೈ ವಿದ್ಯಾಧರನೇ ! ನಾನು ಒಪ್ಪದಿದ್ದರೂ ನೀನು ಸಿಂಹದಂತೆ ನನ್ನಮೇಲೆ ಬಿದ್ದು ಹಿಡಿದುಕೊಂಡು ಅನುಭವಿಸಿದೆ.

೨೯. ಆದ್ದರಿಂದ ನೀನು ಸಿಂಹವಾಗಿ ಈ ವನದಲ್ಲಿರು. ಎಂದು ಶಪಿಸಿದಳು. ಆಗ ನಾನು ಆಕೆಯನ್ನು ಅನೇಕ ವಿಧದಲ್ಲಿ ಕ್ಷಮಿಸುವಂತೆ ಕೇಳಿಕೊಳ್ಳಲು ಆಕೆಯು ಇಂತೆಂದಳು.

೩೦. ಎಲೈ ವಿದ್ಯಾಧರನೇ ! ಬಹುಕಾಲದಮೇಲೆ ರಾಮನು ಇಲ್ಲಿಗೆ ಬರುವನು. ಅವನು ನಿನ್ನನ್ನು ಹೊಡೆಯಲು ಬರುವನು. ಅವನ ಬಾಣದ ಸ್ಪರ್ಶವು ನಿನಗಾದೊಡನೆಯೇ ನಿನಗೆ ಈ ಶಾಪದಿಂದ ಮುಕ್ತಿಯು ಬರುತ್ತದೆ. ಎಂದು ಹೇಳಿದ್ದಳು. ಅದರಂತೆ ಈದಿನ ನಿನ್ನ ಬಾಣದ ಸ್ಪರ್ಶದಿಂದ ಬಹುದಿವಸದಿಂದ ಅನುಭವಿಸುತ್ತಿದ್ದ ಈ ಶಾಪದಿಂದ ಇಂದು ಮುಕ್ತನಾದೆನು.

ಇತ್ಯುಕ್ತ್ವಾ ರಾಮಮಾಮಂತ್ರ್ಯ ಸ ಸ್ವರ್ಗಂ ಪ್ರಯಯೌ ಮುದಾ ।
ತತಸ್ಸ ರಾಮಚಂದ್ರೋಽಪಿ ತುರಗಸ್ಥೋ ಮುದಾನ್ವಿತಃ ॥ ೩೧ ॥

ತತ್ರ ತಸ್ಥೌ ಕ್ಷಣಂ ಯಾವತ್ತಾವತ್ಸ ಗಿರಿಗಹ್ವರೇ ।
ಗುಹಾದ್ವಾರಿ ಶಿಲಾಮೇಕಾಂ ದದರ್ಶ ಯೋಜನಾಯತಾಂ ॥ ೩೨ ॥

ಮಹತೀಂ ತಾಂ ಶಿಲಾಂ ದೃಷ್ಟ್ವಾ ರಾಮೋ ವಿಸ್ಮಿತಮಾನಸಃ ।
ಧನುಷ್ಕೋಟ್ಯಾಕ್ಷಿಪದ್ದೂರಂ ಗುಹಾಯಾಂ ಸಂವಿವೇಶ ಹ ॥ ೩೩ ॥

ಕಿಯದ್ದೂರಂ ತತೋ ಗತ್ವಾ ಗ್ರೇ ಪ್ರಕಾಶಂ ದದರ್ಶ ಸಃ ।
ತತ್ರ ದ್ರೋಣ್ಯಾಂ ಪರ್ವತಸ್ಯ ತಪಸ್ಯಂತೀ ಸ್ತ್ರಿಯಃ ಪ್ರಭುಃ ॥ ೩೪ ॥

---

೩೧. ಹೀಗೆಂದು ಆ ವಿದ್ಯಾಧರನು ಹೇಳಿ ಸಂತೋಷದಿಂದ ಸ್ವರ್ಗಕ್ಕೆ ಹೊರಟು ಹೋದನು. ಅನಂತರ ಕುದುರೆಯಮೇಲೆ ಕುಳಿತುಕೊಂಡು ರಾಮನು ಕ್ಷಣಕಾಲ ಅಲ್ಲಿದ್ದನು.

೩೨. ಆ ಕಾಲದಲ್ಲಿ ಅತ್ತಿತ್ತ ನೋಡುತ್ತಿರುವಾಗ ಬೆಟ್ಟದ ತಪ್ಪಲಲ್ಲಿ ಒಂದು ಗುಹೆಯಿದ್ದಿತು. ಅದರಮುಂದೆ ಒಂದು ಯೋಜನದಗಲವಿರುವ ಒಂದು ಬಂಡೆಯಿದ್ದಿತು. ಅದನ್ನು ಶ್ರೀರಾಮನು ನೋಡಿದನು.

೩೩. ಆ ಕಲ್ಲನ್ನು ನೋಡಿದಕೂಡಲೇ ರಾಮನು ಬಹು ಆಶ್ಚರ್ಯಗೊಂಡನು. ಅದರ ಬಳಿಗೆ ಹೋಗಿ ತನ್ನ ಧನುಸ್ಸಿನ ತುದಿಯಿಂದ ಆ ಬಂಡೆಯನ್ನು ದೂರಕ್ಕೆ ಬಿಸಾಡಿದನು. ಆನಂತರ ದಾರಿಯು ಕಾಣಲು ಅದರಿಂದ ಆ ಗುಹೆಯೊಳಕ್ಕೆ ಹೋದನು.

೩೪. ಆ ಗುಹೆಯಲ್ಲಿ ಸ್ವಲ್ಪದೂರ ಒಳಕ್ಕೆ ಹೋಗಲು ಅಲ್ಲಿ ಬೆಳಕು ಕಾಣಿಸಿತು. ಆ ಪರ್ವತದ ತಪ್ಪಲಿನ ದೋಣಿಯಂತಿರುವ ಭಾಗದಲ್ಲಿ ತಪಸ್ಸು ಮಾಡುತ್ತಿದ್ದ ಹೆಂಗಸರನ್ನು ಕಂಡನು.

ದದರ್ಶ ರಾಮುಶ್ಚತ್ವಾರಃ ಕಿಂಚಿದಂತರಸಂಸ್ಥಿತಾಃ ।
ಅಸ್ಥಿಚರ್ಮಾವಶಿಷ್ಟೈಶ್ಚ ದೇಹೈಃ ದೃಗ್ಗೋಚರೀಕೃತಾಃ ॥ ೩೫ ॥

ಶ್ವಾಸೈಸ್ಸಂಜೀವಿತಾಶ್ಚೇತಿ ಜ್ಞಾತವಾರ್ನ ತಾ ರಘೂತ್ತಮಃ । ॥ ೩೬ ॥

ನಿಜರೂಪಾಣಿ ಚತ್ವಾರಿ ಕೃತ್ವಾದೌ ತತ್ಪುರಃ ಸ್ಥಿತಃ ।
ಅಬ್ರವೀನ್ಮಧುರಂ ವಾಕ್ಯಂ ಭಿನ್ನರೂಪೇಣ ತಾಃ ಪೃಥಕ್ ॥ ೩೭ ॥

ವರಯಧ್ವಂ ವರಾನ್ನಾರ್ಯಃ ಪ್ರಸನ್ನೋಽಹಂ ರಘೂತ್ತಮಃ ।
ತತಸ್ತಾ ರಾಮುಸಂಸ್ಪರ್ಶಾನ್ಮಾಂಸರಕ್ತಾದಿಧಾತುಭಿಃ ॥ ೩೮ ॥

ಪೂರಿತಾನಿ ಸ್ವದೇಹಾನಿ ದದೃಶುರ್ನಯನೈಃ ನಿಜೈಃ ।
ಶ್ರುತ್ವಾ ತದ್ರಾಮುವಾಕ್ಯಂ ತಾ ಮುದಾ ಸ್ವಪುರತೋಽಕ್ಷಿಭಿಃ ॥ ೩೯ ॥

---

೩೫. ಅವಳಿಗಿಂತ ಮುಂದಕ್ಕೆ ಸ್ವಲ್ಪ ಸ್ವಲ್ಪ ದೂರದಲ್ಲಿ ಇರುತ್ತಿರುವ ಮೂರುಜನ ಹೆಂಗಸರನ್ನು ಕಂಡನು. ಅವರಿಗೆ ಮೂಳೆಚರ್ಮಗಳು ಮಾತ್ರ ಇದ್ದುವು. ರಕ್ತಮಾಂಸಗಳೇ ಇರಲಿಲ್ಲ. ಅವರನ್ನು ನೋಡಿದನು.

೩೬–೩೭. ಅವರು ಉಸಿರಾಡುತ್ತಿದ್ದುದರಿಂದ ಇವರು ಜೀವಂತ ರಾಗಿದ್ದಾರೆ ಎಂಬುದಾಗಿ ರಾಮನು ತಿಳಿದುಕೊಂಡನು. ಆಗ ಆ ರಾಮನು ನಾಲ್ಕು ರೂಪುಗಳನ್ನು ಹೊಂದಿ ಆ ನಾಲ್ಕುಜನರ ಎದುರಿಗೆ ನಿಂತುಕೊಂಡನು. ಆ ಬೇರೆ ಬೇರೆಯ ರೂಪಿನಿಂದಲೇ ಅವರನ್ನು ಕುರಿತು ಬೇರೆ ಬೇರೆಯಾಗಿ ಹೀಗೆಂದು ಕೇಳಿದನು.

೩೮–೪೧. ಎಲೈ ನಾರಿಯರಿರಾ! ವರವನ್ನು ಕೇಳಿಕೊಳ್ಳಿರಿ. ನಾನು ರಘೂತ್ತಮನು. ನಿಮಗೆ ಪ್ರಸನ್ನನಾಗಿ ಬಂದಿದ್ದೇನೆ. ಎಂದು ಹೇಳಿ ಅವರನ್ನು ಮುಟ್ಟಲು ಅವನ ಸ್ಪರ್ಶದಿಂದಲೇ ರಕ್ತಮಾಂಸಧಾತುಗಳಿಂದ ಅವರ ದೇಹವು ತುಂಬಿಕೊಂಡಿತು. ಇದನ್ನು ತಾವೇ ತಮ್ಮ ಕಣ್ಣಿನಿಂದಲೇ ನೋಡಿದರು. ರಾಮನ ಈ ಮಾತನ್ನು ಕೇಳಿ ಅವರೆಲ್ಲರೂ ಸಂತೋಷಪಟ್ಟು ತಮ್ಮ ತಮ್ಮ

ನಾರ್ಯೋ ವಿಲೋಕಯಾಮಾಸುಃ ಸರ್ವಾಃ ಶ್ರೀರಘುನಾಯಕಾನ್ ।
ಕೋಟಿಸೂರ್ಯಪ್ರತೀಕಾಶಾಂಶ್ಚಾಪಬಾಣಾಸಿಧಾರಿಣಃ ॥ ೪೦ ॥

ಹಯಾರೂಢಾನ್ನೃವೇಷೇಣ ಸರ್ವಾಸಾಂ ಪುರತಃ ಸ್ಥಿತಾನ್ ।
ಚತುರ್ಮೂರ್ತಿಶ್ಚೈಕರೂಪಾಂಸ್ತಾ ದೃಷ್ಟ್ವಾ ಕಂಜಲೋಚನಾಃ ॥ ೪೧ ॥

ಅತಿವಿಸ್ಮಯಮಾಪನ್ನಾಸ್ತದೋಚುಸ್ತಾನ್ ಪೃಥಕ್ ಪೃಥಕ್ ।
ಕೇ ಯೂಯಂ ವಾಜಿಸಂಸ್ಥಾ ಹಿ ಕುತಸ್ಸರ್ವೇ ಸಮಾಗತಾಃ ॥ ೪೨ ॥

ಯೂಯಂ ದೇವಾ ದಾನವಾ ವಾ ಗಮ್ಯತೇ ಕ್ವಾಧುನಾ ಪುರಃ ।
ಅಸ್ಮಾಕಂ ಕಥ್ಯತಾಂ ಸರ್ವಂ ಕಿಮರ್ಥಂ ಭಾಷಿತಾ ವಯಂ ॥ ೪೩ ॥

ಎದುರಿನಲ್ಲಿರುವ ಶ್ರೀರಾಮುನನ್ನು ನೋಡಿದರು. ಆ ರಾಮರೆಲ್ಲರೂ ಕೋಟಿಜನ ಸೂರ್ಯರಂತೆ ಪ್ರಕಾಶಮಾನವಾಗಿದ್ದರು. ಚಾಪ, ಬಾಣ, ಕತ್ತಿಗಳನ್ನು ಧರಿಸಿದ್ದರು. ನರರರೂಪದಿಂದಿದ್ದು ಅವರೆಲ್ಲರೂ ಕುದುರೆಯಮೇಲೆ ಕುಳಿತಿದ್ದರು. ಈ ರೀತಿಯ ರಾಮರನ್ನು ಅವರೆಲ್ಲರೂ ನೋಡಿದರು. ನಾಲ್ಕುಜನ ರಾಮರೂ ಒಂದೇ ರೀತಿಯಾಗಿರುವುದನ್ನು ನೋಡಿ ಅವರು ಆಶ್ಚರ್ಯಗೊಂಡರು.

೪೨. ಆಗ ಅವರೆಲ್ಲರೂ ಬಹುವಾಗಿ ಆಶ್ಚರ್ಯಪಡುತ್ತಾ ತಮ್ಮ ತಮ್ಮ ಮುಂದಿದ್ದ ಮೂರ್ತಿಗಳನ್ನು ಕುರಿತು ಬೇರೆ ಬೇರೆಯಾಗಿ ನೀವು ಯಾರು? ಕುದುರೆಯಮೇಲೆ ಕುಳಿತಿರುವರಲ್ಲ? ಎಲ್ಲಿಂದ ಬಂದಿರಿ?

೪೩. ನೀವು ದೇವತೆಗಳೇ? ಅಥವಾ ದಾನವರೇ? ಮುಂದೆ ಎಲ್ಲಿಗೆ ಹೋಗುತ್ತಿರುವಿರಿ? ನಮಗೆ ಅದೆಲ್ಲವನ್ನೂ ಹೇಳಿರಿ. ನಮ್ಮನ್ನು ನೀವೇತಕ್ಕೆ ಮಾತನಾಡಿಸಿದಿರಿ?

ಅಸ್ಮಾಕಂ ಶುಷ್ಕದೇಹಾನಿ ಕಮನೀಯಾನಿ ವೈ ಕಥಂ ।
ಜಾತಾನ್ಯದ್ಯ ಮಹಾದೈತ್ಯೋ ದುಂದುಭಿಸ್ತೋಽಸ್ತಿ ವಾ ಮೃತಃ ॥ ೪೪ ॥

ಇತಿ ತಾಸಾಂ ವಚಃ ಶ್ರುತ್ವಾ ರಾಘವಸ್ತಾ ವಚೋಽಬ್ರವೀತ್ ।
ಅಹಂ ಚತುರ್ಭಿರ್ದೇಹೈಶ್ಚ ರಾಮಸ್ತ್ವೇಕೋ ನ ಸಂಶಯಃ ॥ ೪೫ ॥

ಸಪ್ತದ್ವೀಪಪತಿಃ ಶ್ರೀಮಾನ್ ಸೂರ್ಯವಂಶಸಮುದ್ಭವಃ ।
ಮೃಗಯಾರ್ಥಂ ಸಮಾಯಾತಃ ಕೇಸರಿರ್ನಿಹತೋ ವನೇ ॥ ೪೬ ॥

ಧನುಷ್ಕೋಟ್ಯಾ ಶಿಲಾಂ ತ್ಯಕ್ತ್ವಾ ಯುಷ್ಮದಂತಿಕಮಾಗತಃ ।
ಸ್ವಕರಸ್ಪರ್ಶಮಾತ್ರೇಣ ದೇಹಾನ್ಯಪಿ ಶುಭಾನಿ ಹಿ ॥ ೪೭ ॥

---

೪೪. ನಮ್ಮ ದೇಹವೆಲ್ಲವೂ ಒಣಗಿಹೋಗಿತ್ತಲ್ಲ! ಇವೆಲ್ಲವೂ ಚೆನ್ನಾಗಿ ಆಗಲು ಕಾರಣವೇನು? ಆ ಮಹಾ ದೈತ್ಯನಾದ ದುಂದುಭಿಯು ಈಗಲೂ ಇರುವನೇ? ಅಥವಾ ಸತ್ತುಹೋದನೇ?

೪೫. ಅವರೆಲ್ಲರೂ ಹೀಗೆಂದು ಕೇಳಿದುದನ್ನು ಕೇಳಿ ರಾಮನು ಅವರನ್ನು ಕುರಿತು ಇಂತೆಂದನು. ನಾನು ಶ್ರೀರಾಮನು. ನಾಲ್ಕು ದೇಹಗಳನ್ನು ಧರಿಸಿದ್ದೇನೆ. ಸಂಶಯುವನ್ನು ಪಡಬೇಡಿರಿ.

೪೬. ಸಪ್ತದ್ವೀಪಗಳಿಗೂ ಒಡೆಯನಾಗಿರುವೆನು. ಶ್ರೀಮಂತನು. ಸೂರ್ಯವಂಶದಲ್ಲಿ ಹುಟ್ಟಿರುವೆನು. ಬೇಟೆಗೋಸ್ಕರ ಕಾಡಿಗೆ ಬಂದೆನು. ಈ ಕಾಡಿನಲ್ಲಿ ಒಂದು ಸಿಂಹವನ್ನು ಕೊಂದೆನು.

೪೭. ಗುಹೆಯ ಬಾಗಿಲಲ್ಲಿದ್ದ ದೊಡ್ಡ ಬಂಡೆಯನ್ನು ನೋಡಿ ಅದನ್ನು ಧನುಸ್ಸಿನ ತುದಿಯಿಂದ ತಳ್ಳಿ ನಿಮ್ಮ ಬಳಿಗೆ ಬಂದಿದ್ದೇನೆ. ನಾನು ನಿಮ್ಮನ್ನು ಕೈಯ್ಯಿಂದ ಮುಟ್ಟಿದ ಮಾತ್ರಕ್ಕೆ ನಿಮ್ಮ ದೇಹಗಳು ಈ ರೀತಿಯಾದ ರಕ್ತಮಾಂಸಗಳಿಂದ ತುಂಬಿ ಮನೋಹರವಾದುವು. ಈ ರೀತಿಯಾಗಿ ನಾನು ಮಾಡಿದೆನು.

ಮಯಾ ಕೃತಾನಿ ಯುಷ್ಮಾಕಂ ವಾಲಿನಾ ದುಂದುಭಿರ್ಹತಃ ।
ಸ ಮಯಾ ನಿಹತೋ ವಾಲೀ ರಾವಣಸ್ಯಾಂತಕಾರಿಣಾ ॥ ೪೮ ॥

ಸಂಭಾಷಿತಾ ವರಾನ್ ದಾತುಂ ಯೂಯಂ ಸರ್ವಾ ಮಯಾದ್ಯ ಹಿ ।
ನಾಗ್ರೇಸ್ತಿ ಮಮ ಕಾರ್ಯಂ ಹಿ ಪರಿವರ್ತ್ಯ ಪುರೀಂ ವ್ರಜೇ ॥ ೪೯ ॥

ಯತ್ಪೃಷ್ಟಂ ತನ್ಮಯಾ ಚೋಕ್ತಂ ಕಾ ಯೂಯಂ ಕಥ್ಯತಾಂ ಮಮ ।
ಕಿಮರ್ಥಂ ದುಂದುಭಿಃ ಪೃಷ್ಟಃ ಕಾ ವಾಂಛಾ ವ್ರಿಯತಾಂ ವರಾನ್ ॥ ೫೦ ॥

ತದ್ರಾಮವಚನಂ ಶ್ರುತ್ವಾ ದುಂದುಭಿರ್ನಿಹತಸ್ತ್ವಿತಿ ।
ಶಿಲಾಂ ನಿಷ್ಕಾಸಿತಾಂ ಚಾಪಿ ಸರ್ವಾಸ್ತುಷ್ಟಿಂ ಪರಂ ಯಯುಃ ॥ ೫೧ ॥

---

೪೮. ನೀವು ಕೇಳುತ್ತಿರುವ ಆ ಮಹಾದೈತ್ಯನಾದ ದುಂದುಭಿಯನ್ನು ವಾಲಿಯು ಕೊಂದನು. ಅಂತಹ ವಾಲಿಯನ್ನು ನಾನು ಕೊಂದಿರುವೆನಲ್ಲದೆ ಪ್ರಪಂಚಕಂಟಕನಾದ ರಾವಣನನ್ನೂ ಕೊಂದಿದ್ದೇನೆ.

೪೯. ನಿಮಗೆ ವರವನ್ನು ಕೊಡಲು ನಾನು ನಿಮ್ಮನ್ನು ಮಾತನಾಡಿಸಿದೆನು. ಮುಂದೆ ನನಗೆ ಯಾವ ಕೆಲಸವೂ ಇಲ್ಲ. ನಾನು ಹೋಗುವುದೂ ಇಲ್ಲ. ಹಿಂದಿರುಗಿ ಪಟ್ಟಣಕ್ಕೆ ಹೋಗುತ್ತೇನೆ.

೫೦. ನೀವು ಕೇಳಿದ ಪ್ರಶ್ನೆಗೆ ಉತ್ತರವನ್ನು ಹೇಳಿದ್ದೇನೆ. ನೀವುಗಳು ಯಾರೆಂಬುದನ್ನು ಹೇಳಿರಿ. ದುಂದುಭಿಯ ವಿಷಯವನ್ನೇಕೆ ಕೇಳಿದಿರಿ ? ನಿಮಗೆ ಬೇಕಾದುದೇನು ? ಬೇಕಾದ ವರವನ್ನು ಕೇಳಿಕೊಳ್ಳಿರಿ.

೫೧. ದುಂದುಭಿಯನ್ನು ಕೊಂದುಹಾಕಿದೆನೆಂದೂ ಬಾಗಿಲಿನ ಬಂಡೆಯನ್ನು ದೂರಕ್ಕೆ ಎಸೆದಿರುವೆನೆಂದೂ ರಾಮನು ಹೇಳಿದುದನ್ನು ಕೇಳಿ ಅವರೆಲ್ಲರೂ ಬಹಳವಾಗಿ ಸಂತೋಷಪಟ್ಟರು.

ಊಚುಸ್ಸರ್ವಾಸ್ತದಾ ರಾಮಮಾನಂದೋತ್ಫುಲ್ಲಲೋಚನಾಃ ।
ವಯಂ ಬ್ರಾಹ್ಮಣಪುತ್ರ್ಯಶ್ಚ ಚತ್ವಾರಸ್ತ್ವಥ ಷೋಡಶ ॥ ೫೨ ॥

ಸಹಸ್ರಾಣಿ ನೃಪಾಣಾಂ ಚ ವೈಶ್ಯಾನಾಂ ಕನ್ಯಕಾಃ ಪುರಾ ।
ಸಮಾನೀತಾ ಬಲಾದೇವ ತೇನ ದುಂದುಭಿನಾ ಪ್ರಭೋ ॥ ೫೩ ॥

ಲಕ್ಷಸ್ತ್ರೀಭಿರ್ವಿವಾಹಾಂಶ್ಚ ಸರ್ವಾನೇಕದಿನೇ ತ್ವಹಂ ।
ಕರೋಮೀತಿ ಮನ್ಯಮಾನಃ ಸ್ತ್ರೀರತ್ನಾನಿ ಜಹಾರ ಸಃ ॥ ೫೪ ॥

ಯಾನಿ ಯಾನಿ ಜಹಾರ ಸ್ತ್ರೀರತ್ನಾನಿ ರಘುನಂದನ ।
ಅಸ್ಯಾಂ ದ್ರೋಣ್ಯಾಂ ಸ್ಥಾಪ್ಯ ತಾನಿ ದತ್ವಾ ದ್ವಾರಿ ಶಿಲಾಂ ವರಾಂ ॥ ೫೫ ॥

೫೨–೫೩. ಆಗ ಅವರೆಲ್ಲರೂ ಆನಂದದಿಂದ ಕಣ್ಣುಗಳನ್ನು ಅರಳಿಸುತ್ತ ಎಲೈ ಪ್ರಭುವೇ! ನಾವು ನಾಲ್ಕುಜನರೂ ಬ್ರಾಹ್ಮಣ ಕನ್ಯೆಯರು. ಇನ್ನು ಹದಿನಾರುಸಾವಿರ ಕ್ಷತ್ರಿಯ ಕನ್ಯೆಯರಿದ್ದಾರೆ. ಅಲ್ಲದೆ ಇನ್ನೂ ಅನೇಕಜನ ವೈಶ್ಯ ಕನ್ಯೆಯರೂ ಇದ್ದಾರೆ. ಇವರೆಲ್ಲರನ್ನೂ ಬಲಾತ್ಕಾರದಿಂದ ಆ ದುಂದುಭಿಯು ತಂದಿರುವನು.

೫೪. ಒಂದುಲಕ್ಷಜನ ಕನ್ನಿಕೆಯರನ್ನು ತಂದು ಎಲ್ಲರನ್ನೂ ಒಂದೇ ದಿನ ತಾನು ಮದುವೆಯಾಗಬೇಕು. ಎಂಬುದಾಗಿ ಯೋಚಿಸಿಕೊಂಡು ಚೆನ್ನಾಗಿರತಕ್ಕ ಸ್ತ್ರೀರತ್ನಗಳನ್ನೆಲ್ಲಾ ಕದ್ದು ಬಲಾತ್ಕರಿಸಿ ತರುತ್ತಿದ್ದನು.

೫೫. ಅವನು ಯಾವ ಯಾವ ಸ್ತ್ರೀರತ್ನವನ್ನು ಕದ್ದು ತರುವನೋ ಅವರನ್ನೆಲ್ಲಾ ಈ ದೋಣಿಯಂತಿರುವ ಕಿಬ್ಬಿಯಲ್ಲಿಟ್ಟು ಬಾಗಿಲಿನಲ್ಲಿ ಆ ದಪ್ಪ ಬಂಡೆಯನ್ನು ಇಟ್ಟು ಹೊರಟು ಹೋಗುತ್ತಿದ್ದನು.

ಅಚಲಾಂ ತ್ವದ್ವಿನಾನ್ಯೈಶ್ಚ ಸ್ತ್ರೀಸ್ಸಮಾನೇತುಮಾದರಾತ್ ।
ಪುನಶ್ಚಿರಂ ಗತೋ ದೈತ್ಯೋ ವಯಮತ್ರೈವ ಸಂಸ್ಥಿತಾಃ ॥ ೫೬ ॥

ವರ್ತಂತೇಗ್ರೇ ನೃಪಾಣಾಂ ಚ ವೈಶ್ಯಾನಾಂ ಬಾಲಿಕಾಃ ಪ್ರಭೋ ।
ವಾಯುಪರ್ಣಾಶನಾಸ್ಸರ್ವಾಃ ಶ್ರೀವಿಷ್ಣ್ವರ್ಪಿತಮಾನಸಾಃ ॥ ೫೭ ॥

ತತ್ತಾಸಾಂ ವಚನಂ ಶ್ರುತ್ವಾ ಭಿನ್ನರೂಪೈಃ ಪುನಃ ಪುನಃ ।
ತಾ ಉವಾಚ ಸ್ತ್ರಿಯಸ್ಸೋಽಹಂ ವಿಷ್ಣುರೇವ ನ ಸಂಶಯಃ ॥ ೫೮ ॥

ತದ್ರಾಮವಚನಂ ಶ್ರುತ್ವಾ ಪುನಸ್ತಾ ರಾಮಮಬ್ರುವನ್ ।
ದರ್ಶಯಸ್ವ ನಿಜಂ ವಿಷ್ಣುರೂಪಂ ಚೇತ್ಸತ್ಯವಾಗಸಿ ॥ ೫೯ ॥

---

೫೬. ಈ ಬಂಡೆಯೋ ಅಲ್ಲಾಡಿಸುವುದಕ್ಕೂ ಆಗುವುದಿಲ್ಲ. ನೀನು ಮಾತ್ರ ಇದನ್ನು ಅಲ್ಲಾಡಿಸಿದೆಯೇ ಹೊರತು ಮತ್ತಾರೂ ಅಲ್ಲಾಡಿಸಲಾರರು. ಇದನ್ನು ಹೀಗೆ ಬಾಗಿಲಿಗಿಟ್ಟು ಬೇರೆ ಇನ್ನೂ ಹೆಂಗಸರನ್ನು ತರಲು ಹೋದನು. ಅವನು ಹೋಗಿ ಬಹುಕಾಲವಾಯಿತು. ನಾವಾದರೋ ಇಲ್ಲಿಯೇ ಇದ್ದೇವೆ.

೫೭. ಮುಂದಕ್ಕೆ ಹೋಗಿ ನೋಡು. ಅಲ್ಲಿ ಆ ಕ್ಷತ್ರಿಯರ ಮತ್ತು ವೈಶ್ಯರ ಕನ್ಯೆಯರೆಲ್ಲರೂ ಇರುವರು. ಅವರೆಲ್ಲರೂ ವಾಯುವನ್ನು ಸೇವಿಸುತ್ತಾ ಎಲೆಗಳನ್ನು ತಿನ್ನುತ್ತಾ ವಿಷ್ಣುವನ್ನು ಒಂದೇ ಮನಸ್ಸಿನಿಂದ ಧ್ಯಾನಿಸುತ್ತಿರುವರು.

೫೮. ರಾಮನು ಇವರ ಮಾತನ್ನು ಕೇಳಿ ಬೇರೆ ಬೇರೆಯ ರೂಪಿನಿಂದಲೇ ಮತ್ತೆ ಅವರನ್ನು ಕುರಿತು ಎಲೈ ಸ್ತ್ರೀಯರಿರಾ! ನಾನೇ ವಿಷ್ಣುವು. ಅದರಲ್ಲಿ ಸಂಶಯವಿಲ್ಲ ಎಂದನು.

೫೯. ರಾಮನ ಈ ಮಾತನ್ನು ಕೇಳಿ ಅವರು ಅವನನ್ನು ಕುರಿತು ಇಂತೆಂದರು. ಎಲೈ ರಾಮನೇ ! ನೀನು ಹೇಳುವ ಮಾತು ಸತ್ಯವಾದುದೇ ಆದರೆ ನಿನ್ನ ಆ ವಿಷ್ಣುವಿನ ರೂಪವನ್ನು ತೋರಿಸು ಎಂದರು.

ತತಾಸ್ತ್ರಾ ದರ್ಶಯಾಮಾಸ ವಿಷ್ಣುರೂಪಂ ನಿಜಂ ಪ್ರಭುಃ ।
ತಾನಿ ಚತ್ವಾರಿ ರೂಪಾಣಿ ಸಮಾಸಾದ್ಯ ರಘೂತ್ತಮಃ ॥ ೬೦ ॥

ತತಸ್ತಾಃ ಪುರತೋ ವಿಷ್ಣುಂ ದೃಷ್ಟ್ವಾ ನೇಮುಃ ಸ್ವಮಸ್ತಕೈಃ ।
ತತೋ ವಿಷ್ಣುಸ್ಸ ತಾಃ ಪ್ರಾಹ ವಸ್ಸಂದೇಹೋ ಗತೋ ನ ವಾ ॥ ೬೧ ॥

ತಾ ಊಚುರ್ದರ್ಶನಾತ್ತೇದ್ಯ ಭವಕ್ಲೇಶಾ ಗತಾ ಹಿ ನಃ ।
ಕಿಯಾಂಸ್ತು ತತ್ರ ಸಂದೇಹಸ್ತ್ವಜ್ಞಾನಜನಿತಃ ಪ್ರಭೋ ॥ ೬೨ ॥

ತತಃ ಪುನಃ ಕ್ಷಣಾದ್ರಾಮೋ ರೂಪಂ ತಾ ದರ್ಶಯನ್ಮುದಾ ।
ಏಕನೇವ ಹಿ ಸರ್ವಾಸಾಂ ಮಧ್ಯೇ ಜನಕಜಾಪತಿಃ ॥ ೬೩ ॥

---

೬೦. ಆಗ ರಾಮನು ಅವರಿಗೆ ತನ್ನ ವಿಷ್ಣುವಿನ ರೂಪವನ್ನು ತೋರಿಸಿದನು. ಅವರು ನಾಲ್ವರ ಎದುರಿಗೂ ಇದ್ದ ಆ ನಾಲ್ಕುಜನ ರಾಮರೂ ವಿಷ್ಣುವಾದರು.

೬೧. ಆಗ ಅವರು ಎದುರಿಗೆ ವಿಷ್ಣುವನ್ನು ನೋಡಿ ತಲೆಬಗ್ಗಿಸಿ ನಮಸ್ಕರಿಸಿದರು. ಆಗ ವಿಷ್ಣುವು ಅವರನ್ನು ಕುರಿತು ನಿಮ್ಮ ಸಂದೇಹವು ಹೋಯಿತೇ ಇಲ್ಲವೇ ? ಎಂದು ಕೇಳಿದನು.

೬೨. ಆಗ ಅವರು ಎಲೈ ವಿಷ್ಣುವೇ ? ಈಗ ನಮಗೆ ಜನನಮರಣ ರೂಪವಾದ ಸಂಸಾರದ ಕ್ಲೇಶವೇ ಹೋಯಿತು. ಹೀಗಿರುವಲ್ಲಿ ಅಜ್ಞಾನದಿಂದ ಹುಟ್ಟಿದ ಸಂದೇಹವು ಎಷ್ಟರದು ? ಅದೂ ಹೋಯಿತು. ಎಂದರು.

೬೩. ಅನಂತರ ರಾಮನು ತಾನು ಮೊದಲು ತೋರಿಸಿದ ಹಿಂದಿನ ರಾಮರ ರೂಪವನ್ನೇ ಹೊಂದಿದನು. ಹಿಂದಿನಂತೆಯೇ ಅವರೆಲ್ಲರ ಮುಂದೆಯೂ ಒಂದೇ ರೂಪದಿಂದ ಇದ್ದನು. ಅನಂತರ ಅವರಮುಂದೆ ನಾಲ್ಕುಜನ ರಾಮರೂ ಹೋಗಿ ಕೊನೆಗೆ ಒಬ್ಬನೇ ಶ್ರೀರಾಮನು ನಿಂತನು.

ತತೋ ರಾಮೋಽಬ್ರವೀತ್ತಾಸ್ಸ ವರಂ ವರಯತಾಮಿತಿ ।
ತಾ ಊಚುಃ ಕಾಮಬಾಣೇನ ಪೀಡಿತಾ ರಾಘವಂ ಮುದಾ ॥ ೬೪ ॥

ಭವ ಭರ್ತಾ ತ್ವಮೇವಾದ್ಯ ಗಾಂಧರ್ವವಿಧಿನಾ ವನೇ ।
ಅಸ್ಮಾಭಿಸ್ತ್ವಂ ಕುರುಷ್ವಾತ್ರ ಸುಖಂ ಕ್ರೀಡಾಂ ಚಿರಂ ಪ್ರಭೋ ॥ ೬೫ ॥

ತತೋ ನಯ ಪುರೀಂ ಸ್ವೀಯಾಂ ನಸ್ತ್ವಂ ಮಾನ್ಯದ್ವಿಚಿಂತಯ ।
ತತ್ತಾಸಾಂ ವಚನಂ ಶ್ರುತ್ವಾ ರಾಘವೋ ವಾಕ್ಯಮಬ್ರವೀತ್ ॥ ೬೬ ॥

ಏಕಪತ್ನೀವ್ರತಂ ಮೇಽಸ್ತಿ ನ ವಾಕ್ಯಂ ಮಮ ವೈ ವೃಷಾ ।
ತತಸ್ತಾ ವಿಹ್ವಲಾ ಭೂತ್ವಾ ನಿಪೇತುರ್ಜಗತೀ ತಲೇ ॥ ೬೭ ॥

---

೬೪. ಆಗ ಆ ರಾಮನು ಅವರನ್ನು ನೀವು ಬೇಕಾದ ವರವನ್ನು ಕೇಳಿಕೊಳ್ಳಿರಿ ಎಂದನು. ಅವರೆಲ್ಲರೂ ಶ್ರೀರಾಮನನ್ನು ನೋಡಿ ಕಾಮಬಾಣದಿಂದ ಪೀಡಿತರಾಗಿ ಅವನನ್ನು ಕುರಿತು ಇಂತೆಂದರು.

೬೫. ಎಲೈ ರಾಮನೇ ! ಈ ವನದಲ್ಲಿ ಗಾಂಧರ್ವ ವಿವಾಹಮಾಡಿಕೊಂಡು ನೀನೇ ನಮಗೆ ಗಂಡನಾಗು. ನೀನೇ ನಮ್ಮೊಡನೆ ಬಹುಕಾಲ ಸುಖಿಸುತ್ತಿರು.

೬೬. ಅನಂತರ ನಮ್ಮನ್ನು ನಿನ್ನ ಪಟ್ಟಣಕ್ಕೆ ಕರೆದುಕೊಂಡು ಹೋಗು. ಬೇರೆ ರೀತಿಯಾಗಿ ಯೋಚಿಸಲೇ ಬೇಡ. ಎಂಬುದಾಗಿ ಅವರು ಹೇಳಲು ಆ ಮಾತನ್ನು ಕೇಳಿ ರಾಮನು ಇಂತೆಂದನು.

೬೭. ನಾನು ಈ ಜನ್ಮದಲ್ಲಿ ಏಕಪತ್ನೀವ್ರತಸ್ಥನು. ನನ್ನ ಮಾತು ಸುಳ್ಳಾಗುವುದೇ ಇಲ್ಲ. ಅದನ್ನು ನಾನು ಅನುಸರಿಸಿಯೇ ತೀರಬೇಕು. ಈ ಮಾತನ್ನು ಅವರು ಕೇಳಿ ಖೇದಗೊಂಡು ನೆಲದಮೇಲೆ ಬಿದ್ದುಬಿಟ್ಟರು.

ಪುನಸ್ತಾಃ ಪ್ರಾಹ ರಾಮಸ್ಸ ಶ್ರುಣುಧ್ವಂ ವಚನಂ ಮಮ ।
ದ್ವಾಪರೇ ಕೃಷ್ಣರೂಪೇಣ ಯೂಯಂ ಕ್ರೀಡಾಂ ಭಜಿಷ್ಯಥ ॥ ೬೮ ॥

ಮಿತ್ರವಿಂದಾನಾಗ್ನಜಿತೀಮದ್ರಾನ್ಯಾ ಲಕ್ಷ್ಮಣಾಹ್ವಯಾ ।
ಏವಂ ನಾಮಾನಿ ಯುಷ್ಮಾಕಂ ಭವಿಷ್ಯಂತಿ ತದಾ ಮಯಾ ॥ ೬೯ ॥

ಭವಿಷ್ಯಂತಿ ವಿವಾಹಾಶ್ಚ ಸರ್ವಾಸಾಂ ನಾತ್ರ ಸಂಶಯಃ ।
ತದಾ ನಾನಾವಿಧಾನ್ ಭೋಗಾನ್ ಭಜಧ್ವಂ ವೈ ಮಯಾ ಸಹ ॥ ೭೦ ॥

ತದ್ರಾಮವಚನಂ ಶ್ರುತ್ವಾ ಕಿಂಚಿತ್ತುಷ್ಟಮನಾಃ ಸ್ತ್ರಿಯಃ ।
ರಾಮಂ ಪ್ರೋಚುಃ ಪುನರ್ವಾಕ್ಯಂ ತ್ವಮಗ್ರೇ ಗಂತುಮರ್ಹಸಿ ॥ ೭೧ ॥

ತಾಭಿಶ್ಚನ್ಯೈಸ್ತತೋ ರಾಮೋ ಯಯೌ ತುರಗಸಂಸ್ಥಿತಃ ।
ಯೋಜನೋಪರಿ ತಾಸ್ಸರ್ವಾಸ್ಸಹಸ್ರಂ ಷೋಡಶಾತ್ಮಕಾಃ ॥ ೭೨ ॥

---

೬೮ ಆಗ ರಾಮನು ಮತ್ತೆ ಎಲೈ ಸ್ತ್ರೀಯರಿರಾ! ನನ್ನ ಮಾತನ್ನು ಕೇಳಿರಿ. ದ್ವಾಪರಯುಗದಲ್ಲಿ ಕೃಷ್ಣಾವತಾರವನ್ನು ಮಾಡುತ್ತೇನೆ. ಆಗ ನೀವೆಲ್ಲರೂ ನನ್ನೊಡನೆ ರಮಿಸಿರಿ.

೬೯–೭೦. ಮಿತ್ರವಿಂದೆ, ನಾಗ್ನಜಿತ, ಮದ್ರೆ, ಲಕ್ಷ್ಮಣೆ ಎಂಬದಾಗಿ ನಿಮಗೆ ಹೆಸರುಗಳು ಬರುತ್ತವೆ. ಆಗ ನನ್ನೊಡನೆ ನಿಮ್ಮ ಮದುವೆಯಾಗುತ್ತದೆ. ಸಂಶಯವಿಲ್ಲ ಆಗ ನೀವು ನನ್ನೊಡನೆ ನಾನಾ ಭೋಗಗಳನ್ನು ಅನುಭವಿಸಿರಿ ಎಂದನು.

೭೧. ಈ ಮಾತಿನಿಂದ ಅವರಿಗೆ ಸ್ವಲ್ಪ ಸಂತೋಷವಾಯಿತು. ಆಗ ಅವರು ಎಲೈ ರಾಮನೇ ! ನೀನು ಹೀಗೆಯೇ ಮುಂದಕ್ಕೆ ಹೋಗು ಎಂದರು.

೭೨. ಆಗ ರಾಮನು ಕುದುರೆಯಮೇಲೆ ಕುಳಿತುಕೊಂಡು ಆ ಹೆಂಗಸರೊಡನೆ ನಿಧಾನವಾಗಿ ಮುಂದೆ ಹೋದನು. ಒಂದು ಯೋಜನ ದೂರದಷ್ಟು ಹೋದಮೇಲೆ ಆ ರಾಮನು ಹದಿನಾರುಸಾವಿರಜನ ಕ್ಷತ್ರಿಯರ ಕನ್ನಿಕೆಯರನ್ನು ನೋಡಿದನು.

ದದರ್ಶ ಗಂಡಕೀತೀರೆ ವೃಕ್ಷಖಂಡೇ ರಘೂದ್ವಹಃ ।
ನಿಮೀಲಿತದೃಶಶ್ಯುಷ್ಕಾಸ್ತಪಸಾ ದಗ್ಧಯೌವನಾಃ ॥ ೭೩ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ರಾಜ್ಯಕಾಂಡೇ ಪೂರ್ವಾರ್ಧೇ ದ್ವಿಜಕನ್ಯಾಚತುಷ್ಟಯ ವರದಾನಂ ನಾಮೈಕಾದಶಸ್ಸರ್ಗಃ

---

೭೩. ಅಲ್ಲಿ ಗಂಡಕಿ ಎಂಬ ನದಿಯು ಹರಿಯುತ್ತಿದ್ದಿತು. ಅದರ ದಡದಲ್ಲಿ ಮರದ ತೋಪಿನಲ್ಲಿ ಅವರು ಅಲ್ಲಲ್ಲಿ ಕುಳಿತಿದ್ದರು. ಅವರೆಲ್ಲರೂ ಕಣ್ಣನ್ನು ಮುಚ್ಚಿಕೊಂಡಿದ್ದರು. ಒಣಗಿ ಹೋಗಿದ್ದರು. ತಪಸ್ಸಿನಿಂದ ಅವರ ಯೌವನ ವೆಲ್ಲವೂ ಕ್ಷೀಣಿಸಿ ವ್ಯರ್ಥವಾಗಿದ್ದಿತು

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಪೂರ್ವಾರ್ಧದಲ್ಲಿ ನಾಲ್ಕು ಜನ ಬ್ರಾಹ್ಮಣ ಕನ್ಯೆಯರಿಗೆ ವರದಾನವೆಂಬ ಹನ್ನೊಂದನೆಯ ಸರ್ಗವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ
॥ ಹನ್ನೊಂದನೆಯ ಸರ್ಗದ ಸಾರಾಂಶವು ॥

ಒಂದುಸಾರಿ ಶ್ರೀರಾಮನು ಬೇಟೆಗೆ ಕಾಡಿಗೆ ಹೋದನು. ಜೊತೆಯಲ್ಲಿ ಸೀತೆಯೇ ಮೊದಲಾಗಿ ಎಲ್ಲರೂ ಹೋದರು. ಬಹು ಹೊತ್ತಿನವರೆಗೂ ಬೇಟೆಯಾಡಿ ಮಧ್ಯಾಹ್ನದಲ್ಲಿ ವಿಶ್ರಮಿಸಿಕೊಂಡು ಮತ್ತೆ ಬೇಟೆಗೆ ಹೊರಟನು. ಆಗ ಬೇಟೆಯಾಡುತ್ತಿರಲು ಒಂದು ಸಿಂಹವು ಕಾಣಿಸಿಕೊಂಡು ಕಂಡ ಹಾಗೂ ಕಾಣದ ಹಾಗೂ ಓಡುತ್ತ ಬಹು ದೂರಕ್ಕೆ ಈತನು ಹೋಗುವಂತೆ ಮಾಡಿ ಕೊನೆಗೆ ಬಾಣದ ಏಟನಿಂದ ಸತ್ತಿತು. ಒಬ್ಬ ಗಂಧರ್ವನಿಗೆ ಶಾಪದಿಂದ ಆ ಸಿಂಹದ ರೂಪವು ಬಂದಿದ್ದಿತು. ಅವನು ಅದೆಲ್ಲವನ್ನೂ ರಾಮನಿಗೆ ಹೇಳಿ ವಂದಿಸಿ ಹೊರಟು ಹೋದನು.

ಇತ್ತ ರಾಮನು ಒಂದು ಗುಹೆಯನ್ನು ಕಂಡು ಅದರ ಬಾಗಿಲಿನ ಕಲ್ಲನ್ನು ತೆಗೆದು ಒಳಗೆ ಹೋಗಲು ಅಲ್ಲಿ ನಾಲ್ವರು ಹೆಂಗಸರು ಕಂಡು ಬಂದರು. ಅವರನ್ನು ವಿಚಾರಿಸಲು ತಮ್ಮನ್ನು ದುಂದುಭಿಯೆಂಬ ರಾಕ್ಷಸನು ಅಲ್ಲಿಟ್ಟಿರುವುದಾಗಿ ಹೇಳಿದರು. ಮತ್ತು ಅವರೆಲ್ಲರೂ ರಾಮನನ್ನು ಮದುವೆಮಾಡಿಕೊಳ್ಳುವಂತೆ ಕೇಳಲು ಅವನು ಕೃಷ್ಣಾವತಾರದವರೆಗೂ ಕಾದಿರುವುದಾಗಿ ಹೇಳಿ ಅವರ ಮಾತಿನಂತೆ ಮುಂದೆ ಹೋಗಿ ಅಲ್ಲಿ ತಪಸ್ಸಿನಿಂದ ಕ್ಷೀಣರಾಗಿದ್ದ ಹದಿನಾರು ಸಾವಿರಜನ ಹೆಣ್ಣುಮಕ್ಕಳನ್ನು ನೋಡಿದನು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ

॥ ದ್ವಾದಶಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಅಥ ರಾಮಶ್ಚನ್ಯೈಸ್ಸರ್ವಾಃ ಸ್ಪೃಷ್ಟ್ವಾ ನಿಜಕರೇಣ ತಾಃ ।
ಕೃತ್ವಾ ತಾರುಣ್ಯಪೂರೌಘಪೂರಿತಾಃ ಪ್ರಾಹ ಸಾದರಂ ॥ ೧ ॥

ಪೂರ್ವವತ್ಸಕಲಂ ವೃತ್ತಂ ಸರ್ವಾಸ್ಸಂಶ್ರಾವ್ಯ ವಿಸ್ತರಾತ್ ।
ವರಂ ವರಯತಾಂ ಶೀಘ್ರಮಿತ್ಯುಕ್ತ್ವಾ ಚ ರಘೂತ್ತಮಃ ॥ ೨ ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ

ಹನ್ನೆರಡನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು-ಅಲ್ಲಿಗೆ ಹೋಗಿ ರಾಮನು ಅವರೆಲ್ಲರನ್ನೂ ಒಬ್ಬೊಬ್ಬರನ್ನಾಗಿ ತನ್ನ ಕೈಯ್ಯಿಂದ ಮುಟ್ಟಿದನು. ಇದರಿಂದ ಅವರೆಲ್ಲರೂ ರಕ್ತಮಾಂಸಧಾತುಗಳಿಂದ ತುಂಬಿದವರಾಗಿ ತಾರುಣ್ಯದಿಂದ ಕೂಡಿಕೊಂಡರು.

೨. ತನ್ನ ಚರಿತ್ರೆಯನ್ನು ಹಿಂದಿನವರಿಗೆ ಹೇಳಿದಂತೆಯೇ ವಿಸ್ತಾರವಾಗಿ ಹೇಳಿದನು. ಅನಂತರ ಆ ರಾಮನು ಎಲೈ ಸ್ತ್ರೀಯರಿರಾ ! ನಿಮಗೆ ಬೇಕಾದ ವರವನ್ನು ಕೇಳಿಕೊಳ್ಳಿರಿ ಎಂದನು.

ಹತಂ ತಂ ದುಂದುಭಿಂ ಶ್ರುತ್ವಾ ಹರ್ಷೋತ್ಫುಲ್ಲಾನನಾಃ ಸ್ತ್ರಿಯಃ ।
ಪೂರ್ವವದ್ವಿಷ್ಣುರೂಪಾಣಿ ಸಹಸ್ರಾಣಿ ಹಿ ಷೋಡಶ ॥ ೩ ॥

ಸಂದರ್ಶಿತಾನಿ ರಾಮೇಣ ತಾವಂತಿ ಚ ಸ್ಥಿತಾನಿ ಚ ।
ರಾಮರೂಪೇಣ ತಾ ದೃಷ್ಟ್ವಾ ಜ್ಞಾತ್ವಾ ವಿಷ್ಣುಂ ಪರಾತ್ಪರಂ ॥ ೪ ॥

ತಂ ವರಾನ್ವರಯಾಮಾಸುಸ್ತ್ವನ್ನೋ ಭರ್ತಾ ಭವ ಪ್ರಭೋ ।
ತತೋ ರಾಮಮುಖಾತ್ ಶ್ರುತ್ವಾ ಚೈಕಪತ್ನೀವ್ರತಸ್ಥಿತಂ ॥ ೫ ॥

ಪರಸ್ಪರಂ ತಾಸ್ಸಮ್ಮಂತ್ರ್ಯ ಪ್ರೋಚುಸ್ಸರ್ವಾ ಮೃಗೀದೃಶಃ ।
ಮಯಾ ವೃತಸ್ತ್ವಯಾ ಚಾಯಂ ತ್ವಯಾ ವೃತಸ್ತಥಾ ಮಯಾ ॥ ೬ ॥

---

೩. ದುಂದುಭಿಯನ್ನು ಕೊಂದುಹಾಕಿದೆನೆಂಬುದನ್ನು ಆ ಹೆಂಗಸರು ಕೇಳಿ ಬಹುವಾಗಿ ಸಂತೋಷಗೊಂಡರು. ಹಿಂದೆ ಆ ನಾಲ್ವರೂ ನೋಡಿದಂತೆ ಈ ಹದಿನಾರುಸಾವಿರಜನರೂ ಬೇರೆ ಬೇರೆಯಾಗಿ ಆ ರಾಮನ ವಿಷ್ಣುರೂಪವನ್ನು ನೋಡಿದರು.

೪. ರಾಮನು ಅವರೆಲ್ಲರಿಗೂ ಹದಿನಾರುಸಾವಿರ ಒಂದೇ ರೂಪವಾದ ರಾಮನ ಆಕಾರಗಳನ್ನು ಬೇರೆ ಬೇರೆಯಾಗಿ ತೋರಿಸಿದನು. ಅನಂತರ ಒಂದನ್ನಾಗಿಯೂ ತೋರಿಸಿದನು. ಇದರಿಂದ ಅವರೆಲ್ಲರೂ ಇವನೇ ಸನಾತನನಾದ ವಿಷ್ಣುವೆಂದು ತಿಳಿದುಕೊಂಡರು.

೫. ಅವರೆಲ್ಲರೂ ಎಲೈ ಸ್ವಾಮಿಯೇ ! ನೀನು ನಮಗೆಲ್ಲ ಗಂಡನಾಗು. ಎಂದು ವರವನ್ನು ಕೇಳಿಕೊಂಡರು. ಅನಂತರ ಆ ರಾಮನು ತಾನು ಏಕಪತ್ನೀ ವ್ರತದಲ್ಲಿರುವೆನು ಎಂಬುದನ್ನು ಹೇಳಿದನು.

೬. ಆಗ ಅವರೆಲ್ಲರೂ ಒಟ್ಟಾಗಿ ಸೇರಿ ಒಬ್ಬರಿಗೊಬ್ಬರು ಮಾತನಾಡಿ ಕೊಂಡು ನಾನು ಮೊದಲು ವರಿಸಿದ್ದೇನೆ. ತಾನು ಮೊದಲು ವರಿಸಿದ್ದೇನೆ. ನೀನು ಮೊದಲು ವರಿಸಿದ್ದೀಯೆ. ಇವಳು ಮೊದಲು ವರಿಸಿದ್ದಾಳೆ.

ಏವಂ ತಾಸು ಚ ಸರ್ವಾಸು ವದಂತೀಷು ರಘೂತ್ತಮಃ ।
ಶ್ರುತ್ವಾ ತದ್ವಚನಂ ಶಿಷ್ಯ ತದಾ ಚಿತ್ತೇ ವಿಚಾರಯತ್ ॥ ೭ ॥

ಇಮಾ ವದಂತಿ ಕಿಂ ಸರ್ವಾ ಮಾಂ ಶ್ರುತ್ವಾಪಿ ವ್ರತಸ್ಥಿತಂ ।
ಬಲಾತ್ಕಾರೇಣ ಮಾಂ ಭೋಕ್ತುಂ ಮಂತ್ರಯಂತಿ ಪರಸ್ಪರಂ ॥ ೮ ॥

ಬ್ರಂಹ್ಮರುದ್ರಮಘವಾದಯಸ್ಸುರಾ
ಯೇ ಚ ಸಿದ್ಧಮುನಯಃ ಪುರಾತನಾಃ ।
ತೇಪಿ ಯೋಗಬಲಿನೋ ವಿಮೋಹಿತಾ
ಲೀಲಯಾ ತದಬಲಾಭಿರದ್ಭುತಂ ॥ ೯ ॥

---

೭. ಎಂದು ಕೂಗಿಯಾಡಲು ಮೊದಲುಮಾಡಿದರು. ಹೀಗೆ ಕೂಗಿಯಾಡುವುದನ್ನು ಕೇಳಿ ಆಗ ರಾಮನು ತನ್ನ ಮನಸ್ಸಿನಲ್ಲಿಯೇ ಇಂತೆಂದು ಯೋಚಿಸಿದನು.

೮. ಇದೇಕೆ ಇವರೆಲ್ಲರೂ ನಾನು ಏಕಪತ್ನೀವ್ರತದಲ್ಲಿದ್ದೇನೆಂಬುದನ್ನು ಕೇಳಿಯೂ ಹೀಗೆ ಕೂಗಿಯಾಡುತ್ತಿರುವರು. ಇವರೆಲ್ಲರೂ ಬಲಾತ್ಕಾರದಿಂದ ನನ್ನಲ್ಲಿ ರಮಿಸಬೇಕೆಂದು ಹೀಗೆ ಒಬ್ಬರಿಗೊಬ್ಬರು ಆಲೋಚಿಸಿಕೊಂಡಿರುವಂತೆ ಕಾಣುತ್ತದೆ.

೯. ಬ್ರಹ್ಮ, ರುದ್ರ, ಇಂದ್ರ ಮೊದಲಾದ ದೇವತೆಗಳೂ, ಸಿದ್ಧರೂ, ಯೋಗಿಗಳೂ ಪೂರ್ವಕಾಲದಲ್ಲಿ ಇನ್ನೂ ಅನೇಕರೂ ಯೋಗದಿಂದ ಮನಸ್ಸನ್ನು ಧೃಡಮಾಡಿಕೊಂಡಿದ್ದರೂ ಹೆಂಗಸರ ಲೀಲೆಯಿಂದ ಕ್ಷಣಕಾಲದಲ್ಲಿಯೇ ಮೋಹಗೊಂಡರು ಇದು ಬಹು ಆಶ್ಚರ್ಯವು.

ಯೋಷಿತಾಂ ನಯನತೀಕ್ಷ್ಣಸಾಯಕೈಃ
ಭ್ರೂಲತಾಸುದೃಢಚಾಪನಿರ್ಗತೈಃ ।
ಧನ್ವಿನಾ ಮಕರಕೇತುನಾ ಹತಃ
ಕಸ್ಯ ನೋ ಪತತಿ ನೋ ಮನೋಮೃಗಃ ॥ ೧೦ ॥

ತಾವದೇವ ದೃಢಚಿತ್ತತಾ ನೃಣಾಂ
ತಾವದೇವ ಗಣನಾ ಕುಲಸ್ಯ ಚ ।
ತಾವದೇವ ತಪಸಃ ಪ್ರಗಲ್ಭತಾ
ತಾವದೇವ ನಿಯಮವ್ರತಾದಯಃ ॥ ೧೧ ॥

ಯಾವದೇವ ವನಿತೋತ್ಸವಾಸವೈಃ
ಮಾದ್ಯತಿ ದ್ರುತಮದೇನ ಪೂರುಷಃ ।
ಮೋಹಯಂತು ಮದಯಂತು ರಾಗಿಣಂ
ಯೋಷಿತಃ ಸ್ವಚರಿತ್ರೈಃ ಮನೋಹರೈಃ ॥ ೧೨ ॥

---

೧೦. ಬಿಲ್ಲಾಳಿಯಾದ ಮನ್ಮಥನು ಹೆಂಗಸರ ಕಣ್ಣುಹುಬ್ಬೆಂಬ ಗಟ್ಟಿಯಾದ ಧನುಸ್ಸಿನಿಂದ ಬಿಟ್ಟ ಆ ಹೆಂಗಸಿನಕಡೆಗಣ್ಣೆಂಬ ಮೊನೆಯಾದ ಬಾಣಗಳಿಂದ ಏಟುತಿಂದ ಕಾಮಿಯಾದ ಯಾವನು ತಾನೇ ಅವರವಶಕ್ಕೆ ಬಿದ್ದುಹೋಗುವುದಿಲ್ಲ! ಎಲ್ಲರೂ ಅವರ ಅಧೀನರಾಗುತ್ತಾರೆ.

೧೧-೧೨. ಮನುಷ್ಯನು ಎಲ್ಲಿಯವರೆಗೆ ಹೆಂಗಸರ ಬಿಂಕವೆಂಬ ಮದ್ಯ ಪಾನದಿಂದ ಮತ್ತನಾಗುವುದಿಲ್ಲವೋ ಅಲ್ಲಿಯವರೆಗೆ ಅವನು ಧೃಡವಾದ ಮನಸ್ಸುಳ್ಳವನಾಗಿರುವನು. ಅಲ್ಲಿಯವರೆಗೆ ಅವನು ಕುಲವನ್ನು ಲೆಕ್ಕಿಸುವನು. ಅಲ್ಲಿಯವರೆಗೆ ಅವನ ತಪಸ್ಸಿನ ಮಹಿಮೆಯು ಇರುವುದು. ಅಲ್ಲಿಯವರೆಗೆ ಅವನ ನಿಯಮವ್ರತ ಎಲ್ಲವೂ ನಡೆಯುವುವು. ಆ ಮದ್ಯಪಾನವನ್ನು ಮಾಡಿದೊಡನೆಯೇ ಎಲ್ಲವೂ ಒಂದೇಸಾರಿ ನಾಶವಾಗುವುವು. ಆ ಹೆಂಗಸರು ಮನೋಹರವಾದ ತಮ್ಮ ಲೀಲೆಗಳಿಂದಲೂ ಚರಿತ್ರೆರೂಪವಾದ ಮಾತುಗಳಿಂದಲೂ ಕಾಮಿಯಾದವನನ್ನು ಮೋಹಗೊಳಿಸಿ ಮದಬರುವಂತೆ ಮಾಡುವರು.

ಮೋಹಯಂತಿ ಮದಯಂತಿ ಮಾಮಿಮಾ
ಧರ್ಮರಕ್ಷಣಪರಂ ಹಿ ಕೈರ್ಗುಣೈಃ ।
ಮಾಂಸರಕ್ತಮಲಮೂತ್ರಪೂರಿತೇ
ಯೋಷಿತಾಂ ವಪುಷಿ ನಿರ್ಗುಣೇಽಶುಚೌ ॥ ೧೩ ॥

ಕಾಮಿನಸ್ತು ಪರಿತಲ್ಪ್ಯ ಚಾರುತಾಂ
ಮಾರಯಂತಿ ಸುವಿಮೂಢಚೇತಸಃ ।
ದಾರುಣೋ ಹಿ ಪರಿಕೀರ್ತಿತೋಂಗನಾ
ಸನ್ನಿಧಿರ್ವಿಮಲಬುದ್ಧಿವರ್ತಿಭಿಃ ॥ ೧೪ ॥

ಯಾವದೇವ ನ ಸಮೀಪಮಾಗತಾ
ಸ್ತಾವದೇವ ಹಿ ವ್ರಜಾಮ್ಯದೃಶ್ಯತಾಂ ।
ತರ್ಹಿ ಮೇ ವ್ರತಮಿದಂ ಸುನಿರ್ಮಲಂ
ನಾನ್ಯಥಾ ಕಥಮಹಂ ಕರೋಮ್ಯಹಂ ॥ ೧೫ ॥

---

೧೩. ನಾನು ಧರ್ಮವನ್ನು ರಕ್ಷಿಸುವುದರಲ್ಲಿ ಬಹು ಆಸಕ್ತನಾಗಿರುವೆನು. ನನ್ನನ್ನು ಇವರು ತಮ್ಮ ಯಾವ ಗುಣದಿಂದ ತಾನೇ ಮೋಹಗೊಳಿಸುವರು ? ಅಥವಾ ಮದಬರುವಂತೆ ಮಾಡುವರು ? ಯಾವುದರಿಂದಲೂ ಮಾಡಲಾರರು. ಈ ಹೆಂಗಸರ ದೇಹವೆಂಬುದು ಮಾಂಸ, ರಕ್ತ, ಅಮೇಧ್ಯ, ಮಲ, ಮೂತ್ರಗಳಿಂದಲೇ ತುಂಬಿರುವುದು. ಗುಣವೆಂಬುದೇ ಅದರಲ್ಲಿಲ್ಲ. ಅಶುಚಿಯಾದುದು.

೧೪. ಇಂತಹ ದೇಹವನ್ನು ನೋಡಿ ಕಾಮಿಗಳು ಅದರಲ್ಲಿ ಸೌಂದರ್ಯವನ್ನು ಕಲ್ಪಿಸಿಕೊಂಡು ತಾವು ವಿಚಾರಮಾಡದೆ ಮೂಢರಾಗಿ ತಮ್ಮನ್ನು ತಾವೇ ನಾಶಮಾಡಿಕೊಳ್ಳುತ್ತಾರೆ. ಹೆಂಗಸು ಎಂಬ ಪದಾರ್ಥವು ಬಹು ಕೆಟ್ಟದ್ದೆಂದು ಶಾಸ್ತ್ರಗಾರರೆಲ್ಲರೂ ಹೇಳಿರುವರು. ಅಂತಹ ಹೆಂಗಸರ ಹತ್ತಿರದಲ್ಲಿರುವಿಕೆಯು ಬಹು ಕೆಟ್ಟದ್ದೆಂದು ಪರಿಶುದ್ಧವಾದ ಬುದ್ಧಿಯುಳ್ಳವರು ಹೇಳಿರುವರು.

೧೫. ಇವರೆಲ್ಲರೂ ತಮ್ಮೊಳಗೆ ತಾವು ಯೋಚಿಸಿಕೊಂಡು ನನ್ನ ಹತ್ತಿರಕ್ಕೆ ಬರುವುದರೊಳಗೇನೇ ನಾನು ಇವರಿಗೆ ಕಾಣದಂತೆ ಹೊರಟು ಹೋಗಬೇಕು. ಹಾಗೆ ಮಾಡಿದರೆ ನನ್ನ ಈ ಏಕಪತ್ನಿವ್ರತವು ನಿರ್ಮಲವಾಗಿರುವುದು. ಹಾಗೆ ಮಾಡದಿದ್ದರೆ ಮತ್ತಾವ ರೀತಿಯಿಂದಲೂ ನಾನು ಈ ವ್ರತವನ್ನು ಸಾಧಿಸಿ ಕೊಳ್ಳಲು ಸಾಧ್ಯವೇ ಆಗುವುದಿಲ್ಲ.

ಅಥವಾ ಕಿಂ ಕರಿಷ್ಯಂತಿ ಮಾಮೇಕದಯಿತಾಪ್ರಿಯಂ ।
ಇತಿ ನಿಶ್ಚಿತ್ಯ ಶ್ರೀರಾಮಸ್ತತ್ರ ತೂಷ್ಣೀಂ ಸ್ಥಿರೋಽಭವತ್ ॥ ೧೬ ॥

ಏತಸ್ಮಿನ್ನಂತರೇ ಸರ್ವಾಸ್ತದಾ ಪ್ರೋಚುಃ ನೃಪೋತ್ತಮಂ ।
ವೃತಸ್ತ್ವಂ ನೂನಮಸ್ಮಾಭಿರ್ನಾತ್ರ ಕಾರ್ಯಾ ವಿಚಾರಣಾ ॥ ೧೭ ॥

ಏಕಪತ್ನೀವ್ರತಂ ಕಿಂ ತೇ ಪಾರ್ಥಿವಸ್ಯ ರಘೂತ್ತಮ ।
ಅಸ್ತಿ ಚೇತ್ಪೂರ್ಣತಾಂ ಪ್ರಾಪ್ತಂ ತತ್ಫಲಂ ಭೋಕ್ತುಮರ್ಹಸಿ ॥ ೧೮ ॥

ಇತ್ಯುಕ್ತ್ವಾ ತಾಸ್ತದಾ ಸರ್ವಾ ಗತ್ವಾ ತತ್ಸನ್ನಿಧಿಂ ಜವಾತ್ ।
ಸವ್ಯಾಪಸವ್ಯ ಬಂಧೇನ ಭುಜಪಾಶಾ ಪ್ರಚಕ್ರಿರೇ ॥ ೧೯ ॥

---

೧೬. ಇರಲಿ ನನ್ನನ್ನು ಇವರು ಏನುಮಾಡುವರು ನೋಡಿಯೇ ಬಿಡುವೆನು. ನಾನು ಏಕಪತ್ನೀವ್ರತದಲ್ಲಿಯೇ ಇರುವುದು ಸಹಜವಾಗಿಯೇ ಇರುವುದು. ಎಂಬದಾಗಿ ಆ ರಾಮನು ನಿಶ್ಚಯಿಸಿಕೊಂಡು ಅಲ್ಲಿಯೇ ಸುಮ್ಮನೆ ನಿಂತು ಬಿಟ್ಟನು.

೧೭. ಆಗ ಆ ಹೆಂಗಸರೆಲ್ಲರೂ ಆ ರಾಮನನ್ನು ಕುರಿತು ಇಂತೆಂದರು. ನಾವು ಖಂಡಿತವಾಗಿಯೂ ನಿನ್ನನ್ನು ವರಿಸಿದ್ದೇವೆ. ಈ ವಿಷಯದಲ್ಲಿ ಸಂದೇಹವೇ ಬೇಡ.

೧೮. ಎಲೈ ರಘೂತ್ತಮನೇ ! ರಾಜನಾದ ನಿನಗೆ ಏಕಪತ್ನೀವ್ರತ ವೆಂದರೇನು ? ಅದೇತಕ್ಕೆ ? ಒಂದುವೇಳೆ ಆ ವ್ರತವಿದ್ದರೆ ಅದು ಪೂರ್ಣ ವಾಯಿತು. ಎಂದು ತಿಳಿ. ಅದರ ಫಲವನ್ನು ನೀನು ಈಗ ಅನುಭವಿಸುತ್ತೀಯೆ.

೧೯. ಅವರು ಹೀಗೆಂದು ಹೇಳುತ್ತ ಎಲ್ಲರೂ ಬೇಗನೆ ಅವನ ಬಳಿಗೆ ಹೋಗಿ ಒಬ್ಬರಿಗೊಬ್ಬರು ಎಡಗೈಗೆ ಬಲಗೈಯನ್ನೂ, ಬಲಗೈಗೆ ಎಡಗೈಯನ್ನೂ ಬೆರಳಿನಿಂದ ಸೇರಿಸಿದಂತೆ ಬಿಗಿಮಾಡಿಕೊಂಡು ಅವನ ಸುತ್ತಲೂ ಕೈಕಟ್ಟಿಕೊಂಡು ನಿಂತುಕೊಂಡರು.

ತದ್ದೃಷ್ಟ್ವಾ ರಾಘವಃ ಪ್ರಾಹ ಶೃಣುಧ್ವಂ ವಚನಂ ಮಮ ।
ಯುಷ್ಮಾಭಿರುಚ್ಯತೇ ಭದ್ರಮನುಕೂಲಂ ಪ್ರಿಯಂ ವಚಃ ॥ ೨೦ ॥

ವ್ರತಿನಸ್ತನ್ನ ಯೋಗ್ಯಂ ಮೇ ಮಾ ಖೇದಂ ಗಂತುಮರ್ಹಥ ।
ಆಕರ್ಣ್ಯ ರಾಮವಾಕ್ಯಾನಿ ತಮೂಚುಸ್ತಾಸ್ಸಮಂತತಃ ॥ ೨೧ ॥

ಸಕಾಮಧ್ವನಿನೋತ್ಕಂಠಾಃ ಕೋಕಿಲಾ ಇವ ಮಾಧವೇ ।
॥ ಷೋಡಶಸಹಸ್ರಸ್ತ್ರಿಯ ಊಚುಃ ॥
ಧರ್ಮಾದರ್ಥೋಽರ್ಥತಃ ಕಾಮಃ ಕಾಮಾದ್ಧರ್ಮಫಲೋದಯಃ ॥ ೨೨ ॥

ಇತ್ಯೇವಂ ನಿಶ್ಚಯಂ ಶಾಸ್ತ್ರೇ ವರ್ಣಯಂತಿ ವಿಪಶ್ಚಿತಃ ।
ಸ ಕಾಮೋ ವ್ರತಬಾಹುಲ್ಯಾತ್ಪುರಸ್ತೇ ಸಮುಪಸ್ಥಿತಃ ॥ ೨೩ ॥

---

೨೦. ಇದನ್ನು ನೋಡಿ ಆ ರಾಮನು ಅವರನ್ನು ಕುರಿತು ‘ ಎಲೈ ಹೆಂಗಸರಿರಾ! ನನ್ನ ಮಾತನ್ನು ಕೇಳಿರಿ! ನೀವು ಹೇಳುವುದೇನೋ ಒಳ್ಳೆಯದು. ನನಗೆ ಅನುಕೂಲವೂ ಪ್ರಿಯವೂ ಆದ ಮಾತೇ ಆಗಿರುವುದು.

೨೧. ಆದರೆ ವ್ರತವನ್ನು ಅನುಸರಿಸುತ್ತಿರುವ ನನಗೆ ಅದು ಯೋಗ್ಯವಲ್ಲ. ನೀವು ಇದಕ್ಕೋಸ್ಕರ ದುಃಖಪಡಬೇಡಿರಿ. ರಾಮನು ಹೀಗೆ ಹೇಳಿದುದನ್ನು ಕೇಳಿ ಅವರೆಲ್ಲರೂ ಎಲ್ಲಾ ಕಡೆಯಿಂದಲೂ ಕೂಗುತ್ತ ಇಂತೆಂದರು.

೨೨. ಕಾಮಬಾಣದಿಂದ ನೊಂದ ಆ ಕಾಮಿನಿಯರು ಬಹುವಾಗಿ ಕಾತರರಾಗಿ ವಸಂತಋತುವಿನಲ್ಲಿ ಕೋಗಿಲೆಗಳು ಕೂಗುವಂತೆ ಕೂಗುವ ಧ್ವನಿಯಿಂದ ಇಂತೆಂದರು. ಹದಿನಾರುಸಾವಿರ ಹೆಂಗಸರು ಹೇಳಿದರು.— ಧರ್ಮದಿಂದ ಅರ್ಥವು ಬರುವುದು. ಅರ್ಥದಿಂದ ಕಾಮವು ಬರುವುದು. ಕಾಮದಿಂದ ಧರ್ಮದ ಫಲವೂ ಬರುತ್ತದೆ.

೨೩. ಹೀಗೆಂದೇ ಶಾಸ್ತ್ರಗಳಲ್ಲಿ ಪಂಡಿತರು ನಿರ್ಣಯಿಸಿದ್ದಾರೆ. ನೀನು ವ್ರತವನ್ನು ಅತ್ಯಧಿಕವಾದ ಶ್ರದ್ಧೆಯಿಂದ ಆಚರಿಸಿರುವುದರಿಂದ ಈ ಕಾಮರೂಪವಾದ ಧರ್ಮವು ನಿನ್ನ ಎದುರಿಗೆ ಫಲರೂಪವಾಗಿ ಬಂದು ನಿಂತುಕೊಂಡಿರುತ್ತದೆ.

ಸೇವ್ಯತಾಂ ವಿವಿಧೈರ್ಭೋಗೈಃ ಸ್ವರ್ಗಭೂಮಿರಿಯಂ ತತಃ ।
ಶ್ರುತ್ವಾ ತದ್ವಚನಂ ತಾಸಾಂ ರಾಮಸ್ತಾಃ ಪ್ರಾಹ ಸಸ್ಮಿತಃ ॥ ೨೪ ॥

॥ ಶ್ರೀರಾಮ ಉವಾಚ ॥

ವರಾನ್ದಾಸ್ಯಾಮಿ ಯುಷ್ಮಾಕಂ ನಾನ್ಯಂ ಶ್ರೋಷ್ಯಾಮಿ ಕಿಂಚನ ।
ಇತ್ಯುಕ್ತಾಃ ಪುನರೂಚುಸ್ತಾಃ ಕಿಂ ತ್ವಂ ವದಸಿ ರಾಘವ ॥ ೨೫ ॥

ದಿವ್ಯೌಷಧಂ ಬ್ರಹ್ಮಧಿಯೋ ರಸಾಯನಂ
ಸಿದ್ಧಿರ್ನಿಧೀಸ್ಸಾಧುಕಲಾ ವರಂಗನಾಃ ।
ಮಂತ್ರಸ್ತಥಾ ಹ್ಯನ್ನಜಲೇ ಚ ಧರ್ಮತೋ
ನೇಮೋ ನಿಷೇಧ್ಯಾಸ್ಸುಧಿಯಾ ಸಮಾಗತಾಃ ॥ ೨೬ ॥

---

೨೪. ಆದ್ದರಿಂದ ಕಾಮವನ್ನು ಅನೇಕ ವಿಧವಾದ ಭೋಗಗಳಿಂದ ಸೇವಿಸು. ಇದು ಸ್ವರ್ಗದ ಭೂಮಿಯೂ ಆಗಿರುವುದು. ಎಂದೆನಲು ಆ ಮಾತನ್ನು ಕೇಳಿ ರಾಮನು ನಗುತ್ತ ಅವರನ್ನು ಕುರಿತು ಇಂತೆಂದನು.

೨೫. ಶ್ರೀರಾಮನು ಹೇಳಿದನು–ಎಲೈ ಸ್ತ್ರೀಯರಿರಾ! ನಿಮಗೆ ವರಗಳನ್ನು ಕೊಡುತ್ತೇನೆ. ನೀವು ಮತ್ತೇನನ್ನು ಹೇಳಿದರೂ ಅದನ್ನು ನಾನು ಕೇಳುವುದಿಲ್ಲ. ಎಂದೆನಲು ಅವರು ಆದಕ್ಕೆ ಮತ್ತೆ ಎಲೈ ರಾಘವನೇ! ನೀನು ಬುದ್ಧಿಯಿಲ್ಲದಂತೆ ಏನನ್ನು ಹೇಳುತ್ತೀಯೆ.

೨೬. ಮಹೌಷಧಿಯು, ಬ್ರಹ್ಮಜ್ಞಾನವು, ರಸಾಯನವು, ಸಿದ್ಧಿಯು, ನಿಧಿಯು, ಉತ್ತಮವಿದ್ಯೆಯು ಉತ್ತಮರಾದ ಸ್ತ್ರೀಯರು, ಮಂತ್ರವು, ಅನ್ನವು, ನೀರು, ಇವು ಧರ್ಮದ ರೀತಿಯಿಂದ ಬಂದರೆ ಬುದ್ಧಿವಂತರು ಅವನ್ನು ಬೇಡವೆಂದು ಹೇಳಬಾರದು.

ಕಾರ್ಯಂ ತು ದೈವಾದ್ಯದಿ ಸಿದ್ಧಿಮಾಗತಂ
ತಸ್ಮಿನ್ನುಪೇಕ್ಷಾಂ ನ ಚ ಯಾಂತಿ ನೀತಿಗಾಃ ।
ಯಸ್ಮಾದುಪೇಕ್ಷಾ ನ ಪುನಃ ಫಲಪ್ರದಾ
ತಸ್ಮಾನ್ನ ದೀರ್ಘೀಕರಣಂ ಪ್ರಶಸ್ಯತೇ ॥ ೨೭ ॥

ಸಾಂದ್ರಾನುರಾಗಾಃ ಕುಲಜನ್ಮನಿರ್ಮಲಾಃ
ಸ್ನೇಹಾರ್ದ್ರಚಿತ್ತಾಃ ಸುಗಿರಃ ಸ್ವಯಂವರಾಃ ।
ಕನ್ಯಾಃ ಸುರೂಪಾಃ ಪರಿಪೂರ್ಣಯೌವನಾ
ಧನ್ಯಾ ಲಭಂತೇತ್ರ ನರಾಸ್ತು ನೇತರಾಃ ॥ ೨೮ ॥

ಕ್ವೇದಂ ಸುಂದರ ಸೌಂದರ್ಯಂ ಕ್ವೈಕಪತ್ನೀವ್ರತಂ ತವ ।
ತಸ್ಮಾದಸ್ಮಾನಿದಾನೀಂ ತು ಮಾ ನಿರಾಕರ್ತುಮರ್ಹಸಿ ॥ ೨೯ ॥

---

೨೭. ಕಾರ್ಯವು ದೈವಾಧೀನದಿಂದ ಸಿದ್ಧಿಸುತ್ತ ಬಂದಾಗ ನೀತಿವಂತರು ಆದರ ವಿಷಯದಲ್ಲಿ ಉಪೇಕ್ಷೆಯನ್ನು ತೋರಿಸಬಾರದು. ಸಿದ್ಧಿಸಿ ಬಂದುದನ್ನು ಉಪೇಕ್ಷಿಸಿದರೆ ಮತ್ತೆ ಅದು ಫಲಿಸುವುದಿಲ್ಲ. ಆದ್ದರಿಂದ ಅದನ್ನು ಬಹುಕಾಲದ ವರೆಗೆ ನಿರೀಕ್ಷಿಸುವುದು ಯೋಗ್ಯವಲ್ಲ.

೨೮. ತನ್ನಲ್ಲಿ ಪೂರ್ಣವಾದ ಅನುರಾಗವುಳ್ಳ ಕುಲವು ಜನ್ಮವೂ ಪರಿಶುದ್ಧವಾಗಿರುವ ತನ್ನಲ್ಲಿ ಸ್ನೇಹವುಳ್ಳ ಮನಸ್ಸಿನಿಂದ ಇರುವ ಒಳ್ಳೆಯ ಮಾತುಗಳನ್ನು ಆಡುತ್ತಿರುವ ತಾವಾಗಿಯೇ ವರಿಸಿಬಂದಿರುವ ಇನ್ನೂ ಕನ್ಯೆಯರಾಗಿರುವ ನಿನಗೆ ಅನುರೂಪರಾಗಿರುವ ಯೌವನದಿಂದ ಪೂರ್ಣವಾಗಿರುವ ಕನ್ಯೆಯರನ್ನು ಧನ್ಯರಾದವರು ಹೊಂದುತ್ತಾರೆ. ಧನ್ಯರಲ್ಲದವರು ಹೊಂದುವುದೇ ಇಲ್ಲ. (ಇಂತಹವರನ್ನು ಪುಣ್ಯವಂತರು ಹೊಂದುತ್ತಾರೆ. ಪಾಪಿಗಳು ಹೊಂದಲಾರರು)

೨೯. ಎಲೈ ಸುಂದರನೇ ! ಅಪ್ಸರಸ್ತ್ರೀಯರಂತೆ ಸುಂದರರಾಗಿರುವ ನಾವು ಎಂದರೇನು ! ನೀನು ಈ ಏಕಪತ್ನಿವ್ರತದಲ್ಲಿದ್ದೇನೆ ಎಂದು ಹೇಳುವುದೇನು ? ಎಷ್ಟರದು ? ಒಂದಕ್ಕೊಂದಕ್ಕೆ ಅನುರೂಪ್ಯವಿಲ್ಲವಲ್ಲ ! ಆದ್ದರಿಂದ ನೀನು ಏಕಪತ್ನಿವ್ರತದ ಕಾರಣವನ್ನು ಹೇಳಿ ಸುಂದರಿಯರಾದ ನಮ್ಮನ್ನು ನಿರಾಕರಿಸಬೇಡ.

ಗಾಂಧರ್ವೇಣ ವಿವಾಹೇನ ನಾನ್ಯಥಾ ನೋಽಸ್ತು ಜೀವಿತಂ |
ಶ್ರುತ್ವಾ ವಾಕ್ಯಂ ತು ತತ್ತಾಸಾಂ ರಾಘವಃ ಪ್ರಾಹ ತಾಃ ಪುನಃ ॥ ೩೦ ॥

॥ ಶ್ರೀರಾಮ ಉವಾಚ ॥

ಭೋ ಮೃಗಾಕ್ಷ್ಯಃ ಕಥಂ ತ್ಯಾಜ್ಯೋ ಧರ್ಮೋ ಧರ್ಮವಿಚಕ್ಷಣೈಃ ।
ಧರ್ಮಶ್ಚಾರ್ಥಶ್ಚ ಕಾಮಶ್ಚ ಮೋಕ್ಷಶ್ಚೈತಚ್ಚತುಷ್ಟಯಂ ॥ ೩೧ ॥

ಯಥೋಕ್ತಂ ಸಫಲಂ ಜ್ಞೇಯಂ ವಿಪರೀತಂ ತು ನಿಷ್ಫಲಂ ।
ತಸ್ಮಾನ್ಮಯೋಕ್ತಂ ಯತ್ಪೂರ್ವಂ ಏಕಪತ್ನೀವ್ರತಂ ನಿಜಂ ॥ ೩೨ ॥

ಅಸ್ಮಿನ್ ಜನ್ಮನಿ ತನ್ನಾಹಂ ತ್ಯಕ್ತುಮಿಚ್ಛಾಮಿ ಭೋ ಸ್ತ್ರಿಯಃ ।
ಏವಂ ಶ್ರುತ್ವಾ ಶಯಂ ತಸ್ಯ ತಾಸ್ಸಮೀಕ್ಷ್ಯ ಪರಸ್ಪರಂ ॥ ೩೩ ॥

---

೩೦. ನಮ್ಮನ್ನು ಗಾಂಧರ್ವವಿವಾಹದ ರೀತಿಯಿಂದ ಪರಿಗ್ರಹಿಸಿ ಕೃತಾರ್ಥರನ್ನಾಗಿ ಮಾಡು. ಇಲ್ಲದಿದ್ದರೆ ನಾವು ಬದುಕುವಂತೆಯೇ ಇಲ್ಲ. ಎಂದೆನಲು ರಾಮನು ಇವರ ಮಾತನ್ನು ಕೇಳಿ ಮತ್ತೆ ಅವರನ್ನು ಕುರಿತು ಇಂತೆಂದನು.

೩೧-೩೨. ಶ್ರೀರಾಮನು ಹೇಳಿದನು-ಎಲೈ ಮೃಗಾಕ್ಷಿಯರಿರಾ ! ಧರ್ಮವನ್ನು ಬಲ್ಲವರು ಧರ್ಮವನ್ನು ಹೇಗೆತಾನೆ ಬಿಟ್ಟುಬಿಡಲು ಸಾಧ್ಯವಾದೀತು ? ಧರ್ಮ, ಅರ್ಥ, ಕಾಮ, ಮೋಕ್ಷ ಇವುಗಳನ್ನು ಶಾಸ್ತ್ರದಲ್ಲಿ ಹೇಳಿರುವ ರೀತಿಯಲ್ಲಿ ಸೇವಿಸಿದರೆ ಅವು ಫಲವನ್ನು ಕೊಡುತ್ತವೆ. ಅದನ್ನು ವ್ಯತ್ಯಾಸಮಾಡಿದರೆ ಫಲವಿಲ್ಲದೆ ಹೋಗುವುವು. ಆದ್ದರಿಂದಲೇ ನಾನು ಮೊದಲೇ ನಿಮಗೆ ಏಕಪತ್ನೀವ್ರತಸ್ಥನೆಂದು ಹೇಳಿದೆನು.

೩೩. ಎಲೈ ಸ್ತ್ರೀಯರಿರಾ ! ಆದ್ದರಿಂದ ಈ ಏಕಪತ್ನೀವ್ರತವನ್ನು ನಾನು ಈ ಜನ್ಮದಲ್ಲಿ ಬಿಟ್ಟು ಬಿಡಲು ಅಪೇಕ್ಷೆಪಡುವುದಿಲ್ಲ. ಎನ್ನಲು ಆ ಸ್ತ್ರೀಯರು ರಾಮನ ಈ ಅಭಿಪ್ರಾಯವನ್ನು ತಿಳಿದು ಸೊರಗಿದವರಾಗಿ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು.

ಕರಾತ್ಕರಾನ್ ಪ್ರಮುಚ್ಯಾಶು ಸರ್ವಾ ಜಗ್ರಹತುಸ್ತದಾ ।
ಅನ್ಯೋನ್ಯಮಂಘ್ರಿಂ ರಾಮಸ್ಯ ಭುಜೌ ಜಗ್ರಹತುಶ್ಚ ತಾಃ ॥ ೩೪ ॥

ಏವಂ ತಾಭಿರ್ವೇಷ್ಟಮಾನಮಾತ್ಮಾನಂ ವೀಕ್ಷ್ಯ ರಾಘವಃ ।
ಅಂತರ್ಧಾನಮಗಾತ್ತತ್ರ ತಾಸಾಂ ಮಧ್ಯೇ ಕ್ಷಣಾತ್ ಪ್ರಭುಃ ॥ ೩೫ ॥

ಕಿಂ ಕುರ್ವಂತಿ ಸ್ತ್ರಿಯಾಸ್ಸರ್ವಾಃ ಹ್ಯಂತರ್ಧಾನಂ ಗತೇ ಮಯಿ ।
ಏವಂ ತಾಸಾಂ ಕೌತುಕಂ ಹಿ ಗುಪ್ತರೂಪೋ ದದರ್ಶ ಸಃ ॥ ೩೬ ॥

ಅದೃಷ್ಟ್ವಾ ರಾಘವಂ ಸರ್ವಾಸ್ತತ್ ಕ್ಷಣಾತ್ಪ್ರಮದೋತ್ತಮಾಃ ।
ದೃಷ್ಟ್ವಾ ತದದ್ಭುತಂ ಕರ್ಮ ವಿಸ್ಮಯಾವಿಷ್ಟಮಾನಸಾಃ ॥ ೩೭ ॥

---

೩೪. ಆಮೇಲೆ ತಾವು ಕೈಕೈಗಳನ್ನು ಹಿಡಿದುಕೊಂಡಿದ್ದುದನ್ನೆಲ್ಲಾ ಬಿಟ್ಟು ಬಿಟ್ಟರು. ಅನಂತರ ಅವರೆಲ್ಲರೂ ಆ ರಾಮನ ಕಾಲನ್ನು ಹಿಡಿದುಕೊಂಡರು. ಅವನ ಭುಜವನ್ನೂ ಹಿಡಿದುಕೊಂಡರು.

೩೫. ರಾಮನು ಅವರೆಲ್ಲರೂ ಹೀಗೆ ಸುತ್ತಿಕೊಂಡು ತನ್ನನ್ನು ಹಿಡಿದಿರುವುದನ್ನು ನೋಡಿ ಅವರು ಹಿಡಿದಿರುವಂತೆಯೇ ಕ್ಷಣಕಾಲದಲ್ಲಿಯೇ ಅವರ ಮಧ್ಯದಲ್ಲಿದ್ದರೂ ಅವರಿಗೆ ಕಾಣದಂತೆ ಅಂತರ್ಧಾನವನ್ನು ಹೊಂದಿದನು.

೩೬. ನಾನು ಅಂತರ್ಧಾನವನ್ನು ಹೊಂದಿದಮೇಲೆ ಇವರೆಲ್ಲರೂ ಏನುಮಾಡುವರು ? ನೋಡಬೇಕೆಂಬುದಾಗಿ ಅವರಿಗೆ ಕಾಣದಂತೆ ಇದ್ದುಕೊಂಡು ಅವರು ಮಾಡುತ್ತಿದ್ದ ಕೆಲಸಗಳನ್ನು ನಿರೀಕ್ಷಿಸುತ್ತಿದ್ದನು.

೩೭. ಆ ರಾಘವನು ಮರೆಯಾದೊಡನೆಯೇ ಅವನನ್ನು ಕಾಣದೆ ಆ ಹೆಂಗಸರೆಲ್ಲರೂ ಅವನು ಅದೃಶ್ಯನಾದ ಆ ಅದ್ಭುತಕಾರ್ಯವನ್ನು ನೋಡಿ ಬಹುವಾಗಿ ಆಶ್ಚರ್ಯಗೊಂಡರು.

ವಿತ್ರಸ್ತಹೃದಯಾಸ್ಸರ್ವಾಃ ಕುರಂಗ್ಯ ಇವ ಕಾತರಾಃ ।
ಸಂಭ್ರಾಂತನಯನಾ ದೀನಾ ಇತ್ಯೂಚುಸ್ತಾಃ ಪರಸ್ಪರಂ ॥ ೩೮ ॥

ವ್ಯಾಪ್ತಂ ಚ ಹೃದಯಂ ತಾಸಾಂ ತದೈವ ವಿರಹಾಗ್ನಿನಾ ।
ಜ್ವಲಜ್ಜ್ವಾಲಾನಲೇನೈವ ಸುಸ್ನಿಗ್ಧಂ ಸಾಂದ್ರಕಾನನಂ ॥ ೩೯ ॥

॥ ಸ್ತ್ರೀಯಃ ಊಚುಃ ॥

ತ್ಯಜೇಂದ್ರಜಾಲಿಕಾಂ ಮಾಯಾಂ ಕಾಂತ ದರ್ಶಯ ಸತ್ವರಂ ।
ಸ್ವಾತ್ಮಾನಂ ನರ್ಮಣಾ ಯುಕ್ತಂ ಪ್ರಾಗ್ಗ್ರಾಸೇ ಮಕ್ಷಿಕೋಪಮಂ॥ ೪೦ ॥

ಹಾ ಕಷ್ಟಂ ದರ್ಶಿತಃ ಕಸ್ಮಾದ್ಧಾತ್ರಾ ಕಿಂ ರಚಿತಂ ತ್ವಿದಂ ।
ಜ್ಞಾತಂ ಮಹತ್ತಮಂ ತಾಪಂ ಕರ್ತುಂ ನಸ್ತ್ವಂ ಸಮಾಗತಃ ॥ ೪೧ ॥

---

೩೮. ಅವರ ಮನಸ್ಸೆಲ್ಲವೂ ಕಲಕಿಹೋಯಿತು. ಆದ್ದರಿಂದ ಅವರು ಜಿಂಕೆಗಳಂತೆ ಬೆದರಿದರು. ಕಣ್ಣುಗಳಿಂದ ತಮ್ಮ ಕಾತರತೆಯನ್ನು ತೋರಿಸುತ್ತ ದೀನರಾಗಿ ಅವರು ಒಬ್ಬರಿಗೊಬ್ಬರು ಇಂತೆಂದುಕೊಂಡರು.

೩೯. ಅವರ ಹೃದಯವೆಲ್ಲವೂ ಒಡನೆಯೇ ವಿರಹಾಗ್ನಿಯಿಂದ ಕೂಡಿಕೊಂಡಿತು. ಇದರಿಂದ ಬಿರುಸಾದ ಕಾಳ್ಗಿಚ್ಚಿನಿಂದ ಮನೋಹರವಾಗಿ ಒತ್ತಾಗಿ ಬೆಳೆದಿರುವ ಆರಣ್ಯವು ಬೆಂದುಹೋಗುವಂತೆ ಬೆಂದು ಹೋದರು.

೪೦. ಹೆಂಗಸರು ಹೇಳಿದರು–ಎಲೈ ಕಾಂತನೇ ! ಈ ಇಂದ್ರಜಾಲದ ರೂಪವಾದ ಮಾಯೆಯನ್ನು ಬಿಟ್ಟು ಬಿಡು. ನಿನ್ನ ಸ್ವರೂಪವನ್ನು ಬೇಗನೆ ತೋರಿಸು. ನಿನ್ನ ದರ್ಶನವು ಊಟಕ್ಕೆ ಕುಳಿತಾಗ ಮೊದಲನೆಯ ತುತ್ತಿನಲ್ಲಿಯೇ ನೊಣವು ಸಿಕ್ಕಿದಂತಾಯಿತಲ್ಲ !

೪೧. ಅಯ್ಯೋ ! ಕಷ್ಟವು ಬಂದಿತಲ್ಲ ! ಬ್ರಹ್ಮನು ಇವನನ್ನು ಏತಕ್ಕೆತಾನೆ ತೋರಿಸಿದನು ? ಹಾಗೆ ತೋರಿಸಿ ಇದೇನನ್ನು ಮಾಡಿಬಿಟ್ಟನು ? ಓಹೋ ! ಗೊತ್ತಾಯಿತು. ನಮಗೆ ಮಹತ್ತರವಾದ ತಾಪವನ್ನುಂಟುಮಾಡಲು ಅವನು ನಮ್ಮ ಕಣ್ಣಿಗೆ ಕಾಣಿಸಿಕೊಂಡನು.

ಕಚ್ಚಿತ್ತೇ ನಿರ್ದಯಂ ಚೇತಃ ಕಚ್ಚಿದಸ್ಮಾನ್ ಪರೀಕ್ಷಸಿ ।
ಕಚ್ಚಿತ್ಕೃಷ್ಟೋಽಸಿ ಹೇ ಕಾಂತ ಕಚ್ಚಿನ್ಮುಷ್ಣಾಸಿ ನೋ ಮನಃ ॥ ೪೨ ॥

ಕಚ್ಚಿನ್ನೋ ಪ್ರತ್ಯಯೋಽಸ್ಮಾಸು ಕಚ್ಚಿದಸ್ಮಾಸು ನೋ ರತಿಃ ।
ಕಚ್ಚಿದ್ವಿನೋದಯಸಿ ನಃ ಕಚ್ಚಿನ್ಮಾಯಾವಿಶಾರದಃ ॥ ೪೩ ॥

ಕಚ್ಚಿಚ್ಚಿತ್ತೇ ಪ್ರವೇಷ್ಟುಂ ತ್ವಂ ವೇತ್ಸಿ ವಿಜ್ಞಾನಲಾಘವಂ ।
ಕಚ್ಚಿದ್ವಿನಾಪರಾಧಂ ಹಿ ತ್ವಮಸ್ಮಾಸು ಪ್ರಕುಪ್ಯಸಿ ॥ ೪೪ ॥

ಕಚ್ಚಿದ್ದುಃಖಂ ನ ಜಾನಾಸಿ ಪರೇಷಾಂ ವಿಪ್ರಲಂಭಜಂ ।
ತ್ವದ್ದರ್ಶನಂ ವಿನಾ ನೂನಂ ಹೃದಯೇಶ್ವರ ಸಾಂಪ್ರತಂ ॥ ೪೫ ॥

---

೪೨. ಎಲೈ ಕಾಂತನೇ ! ನಿನ್ನ ಮನಸ್ಸೇ ನಿರ್ದಯವಾದುದೆ ? ಅಥವಾ ನಮ್ಮನ್ನು ಪರೀಕ್ಷಿಸುತ್ತಿರುವೆಯಾ ? ಅಥವಾ ನಿನ್ನನ್ನು ಯಾರಾದರೂ ಎಳೆದು ಕೊಂಡು ಹೋದರೋ ? ನಮ್ಮ ಮನಸ್ಸನ್ನೇನಾದರೂ ಕದ್ದುಕೊಂಡಿರುವೆಯಾ ?

೪೩. ನಮ್ಮ ವಿಷಯದಲ್ಲಿ ನಿನಗೇನಾದರೂ ನಂಬಿಕೆಯಿಲ್ಲವೇ ? ಇಲ್ಲದಿದ್ದರೆ ನಿನಗೆ ನಮ್ಮಲ್ಲಿ ಮೋಹವೇ ಇಲ್ಲವೋ ? ನಮ್ಮನ್ನೇನಾದರೂ ತಮಾಷೆಮಾಡುತ್ತಿರುವೆಯಾ ? ಅಥವಾ ನೀನು ಮಾಯೆಯಲ್ಲಿ ಪಂಡಿತನೋ ?

೪೪. ಎಲೈ ಕಾಂತನೇ ! ನೀನು ಮನಸ್ಸಿನೊಳಗೆ ಪ್ರವೇಶಿಸುವಷ್ಟು ಸಣ್ಣದಾಗುವಿಕೆಯನ್ನು ತಿಳಿದಿರುವೆಯಾ ? ನಾವು ತಪ್ಪುಮಾಡದಿದ್ದರೂ ನಮ್ಮಮೇಲೆ ಏಕೆ ಕೋಪಗೊಂಡಿರುವೆ ?

೪೫. ಎಲೈ ಕಾಂತನೇ ! ಪ್ರಿಯನು ಹೊರಟು ಹೋಗುವುದರಿಂದ ಪ್ರಿಯೆಗೆ ಉಂಟಾಗುವ ದುಃಖವು ನಿನಗೆ ಗೊತ್ತಾಗಿರುವುದಿಲ್ಲವೇ ? ಎಲೈ ಹೃದಯೇಶ್ವರನೇ ! ಈಗ ನೀನು ದರ್ಶನವನ್ನು ಕೊಡದಿದ್ದರೆ ಖಂಡಿತವಾಗಿಯೂ ನಾವು ಬದುಕುವುದೇ ಇಲ್ಲ.

ನ ಜೀವಾಮೋಥ ಜೀವಾಮಃ ಪುನಸ್ತ್ವದ್ದರ್ಶನಾಶಯಾ ।
ಅಸ್ಮಾಂಸ್ತತ್ರ ನಯ ತ್ವಂ ಹಿ ಯತ್ರ ನಾಥ ಗತೋ ಹ್ಯಸಿ ॥ ೪೬ ॥

ಸರ್ವಥಾ ದರ್ಶನಂ ದೇಹಿ ಕಾರುಣ್ಯಂ ಭಜ ಸರ್ವಥಾ ।
ಪರ್ಯಂತಂ ನ ಹಿ ಪಶ್ಯಂತಿ ಕಸ್ಯಚಿತ್ಸಜ್ಜನಾ ಜನಾಃ ॥ ೪೭ ॥

ಇತ್ಥಂ ವಿಲಪ್ಯ ತಾಸ್ಸರ್ವಾಃ ಪ್ರತೀಕ್ಷ್ಯ ಚ ಬಹುಕ್ಷಣಂ ।
ರಾಮಂ ದ್ರಷ್ಟುಂ ವನೇ ಸರ್ವಾ ಬಭ್ರಮುಸ್ತಾ ಇತಸ್ತತಃ ॥ ೪೮ ॥

ವೃಕ್ಷಾನ್ ವನೇಚರಾನ್ ರಾಮೋ ದೃಷ್ಟೋಽಸ್ಮಾಕಂ ಪತಿರ್ನ ವಾ ।
ಏವಂ ಸರ್ವಾಸ್ತು ಪಪ್ರಚ್ಛೂ ರಾಮವಿಶ್ಲೇಷಸಜ್ವರಾಃ ॥ ೪೯ ॥

---

೪೬. ಅಥವಾ ನಾವು ಕಷ್ಟಪಟ್ಟು ಬದುಕಿದ್ದರೂ ಮತ್ತೆ ನಿನ್ನ ದರ್ಶನವು ಆಗಬಹುದೆಂಬ ಆಸೆಯಿಂದ ಬದುಕಬೇಕಾಗಿದೆ. ಎಲೈ ನಾಥನೇ! ನೀನು ಎಲ್ಲಿಗೆ ಹೋಗಿರುವೆಯೋ ಅಲ್ಲಿಗೆ ನಮ್ಮನ್ನೂ ಕರೆದುಕೊಂಡು ಹೋಗು.

೪೭. ನೀನು ಖಂಡಿತವಾಗಿಯೂ ನಮಗೆ ದರ್ಶನವನ್ನು ಕೊಡು. ಹೇಗಾದರೂ ಮಾಡಿ ದಯೆಯನ್ನು ತೋರಿಸು. ಸಜ್ಜನರಾದವರು ಮತ್ತೊಬ್ಬರು ಸಾಯುತ್ತಿರುವುದನ್ನು ನೋಡಲಾರರು.

೪೮. ಆ ಹೆಂಗಸರೆಲ್ಲರೂ ಹೀಗೆ ದುಃಖಪಡುತ್ತ ಬಹು ಹೊತ್ತಿನವರೆಗೂ ಅವನನ್ನು ನಿರೀಕ್ಷಿಸಿ ನೋಡಿದರು. ಅವನು ಬರದಿರಲು ಆ ಕಾಡಿನಲ್ಲಿ ಅವರೆಲ್ಲರೂ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಹುಡುಕುತ್ತಾ ಓಡಾಡುತ್ತಿದ್ದರು.

೪೯. ಬಹು ಹೊತ್ತಾದರೂ ರಾಮನು ಸಿಕ್ಕದಿದ್ದುದರಿಂದ ಅವರೆಲ್ಲರೂ ಮದನ ಜ್ವರವನ್ನು ಹೊಂದಿ ಆ ಕಾಡಿನಲ್ಲಿರುವ ಕಾಡುಮರಗಳನ್ನೂ ಕಾಡು ಪ್ರಾಣಿಗಳನ್ನೂ "ನೀವು ರಾಮನನ್ನು ನೋಡಿದಿರಾ! ಅವನು ನಮ್ಮ ಪತಿಯು. ನೀವು ಕಂಡಿದ್ದರೆ ಹೇಳಿರಿ" ಎಂಬುದಾಗಿ ಕೇಳುತ್ತಿದ್ದರು.

ರೇ ರೇ ಪಿಪ್ಪಲ ವೃಕ್ಷಾಣಾಮಧಿಪಸ್ತ್ವಂ ಬ್ರವೀಹಿ ನಃ ।
ರಾಮೋ ದೃಷ್ಟೋಽಥವಾ ನೈವ ವಯಂ ತ್ವಾಂ ಶರಣಂ ಗತಾಃ ॥ ೫೦ ॥

ಭೋ ಭೋ ತುಲಸಿ ನೋ ನಾಥಸ್ತ್ವಯಾ ರಾಮೋ ನಿರೀಕ್ಷಿತಃ ।
ವದ ಶಾಖಾಮೃಗ ತ್ವನ್ನೋ ವನೇ ರಾಮೋ ನಿರೀಕ್ಷಿತಃ ॥ ೫೧ ॥

ತ್ವಂ ಕೋಕಿಲ ಸದಾ ಶಬ್ದಾನ್ ಕರೋಷಿ ಪರಮಾನ್ ಶುಭಾನ್ ।
ವದಾದ್ಯ ಜಾನಕೀಕಾಂತಸ್ತ್ವಯಾರಣ್ಯೇ ನಿರೀಕ್ಷಿತಃ ॥ ೫೨ ॥

ಭೋ ಕದಂಬ ವದಸ್ವ ತ್ವಂ ತವ ಪೃಚ್ಛಾಮಹೇ ವಯಂ ।
ದೀನನಾಥೋ ರಮಾನಾಥಸ್ಸೀತಾನಾಥಸ್ತ್ವಯೇಕ್ಷಿತಃ ॥ ೫೩ ॥

---

೫೦. ಎಲೈ ಅರಳಿಮರವೇ! ನೀನು ಮರಗಳಿಗೆಲ್ಲಾ ಒಡೆಯನು. ನೀನು ನಮಗೆ ಹೇಳು. ರಾಮನನ್ನು ನೋಡಿದೆಯಾ ಅಥವಾ ಇಲ್ಲವೇ? ನಾವು ನಿನ್ನನ್ನು ಶರಣುಹೊಂದಿದ್ದೇವೆ. ದಯವಿಟ್ಟು ನಮಗೆ ತಿಳಿಸು.

೫೧. ಎಲೈ ತುಲಸಿಯೇ! ನಮ್ಮ ಪತಿಯಾದ ರಾಮನನ್ನು ನೀನು ನೋಡಲಿಲ್ಲವೇ? ಎಲೈ ಶಾಖಾಮೃಗವಾದ ಕಪಿಯೇ! ನೀನು ರಾಮನನ್ನು ನೋಡಿದೆಯಾ? ದಯವಿಟ್ಟು ನಮಗೆ ಹೇಳು.

೫೨. ಎಲೈ ಕೋಗಿಲೆಯೇ! ನೀನು ಯಾವಾಗಲೂ ಚೆನ್ನಾಗಿ ಕೂಗುತ್ತಿರುತ್ತೀಯೆ. ನೀನು ಆ ಜಾನಕೀಕಾಂತನಾದ ರಾಮಚಂದ್ರನನ್ನು ನೋಡಿದೆಯಾ?

೫೩. ಎಲೈ ಕಡಹದಮರವೇ! ನೀನು ಹೇಳು. ನಿನ್ನನ್ನು ಕುರಿತು ನಾವೆಲ್ಲರೂ ಕೇಳಿಕೊಳ್ಳುತ್ತಿದ್ದೇವೆ. ದೀನರಿಗೆ ನಾಥನೂ ರಮಾನಾಥನೂ ಸೀತಾನಾಥನೂ ಆದ ರಾಮನನ್ನು ನೋಡಿದೆಯಾ?

ಪಿಕ ತ್ವಮುತ್ತರಂ ದೇಹಿ ಸದಾ ಶಬ್ದಾನ್ ಕರೋಷಿ ಹಿ ।
ಪತಿರ್ನಃ ಶ್ರೀಪತಿಸ್ಸೀತಾಪತಿರ್ದೃಷ್ಟೋಽಥವಾ ನ ವಾ ॥ ೫೪ ॥

ಭೋ ವಾರಣ ಮದೋನ್ಮತ್ತ ನೃಪವಾರಣರಾಘವಃ ।
ಸಪ್ತದ್ವೀಪಪತಿಃ ಶ್ರೀಮಾನ್ ರಾಮೋಽರಣ್ಯೇ ನಿರೀಕ್ಷಿತಃ ॥ ೫೫ ॥

ಶುಕ ನಃ ಕಥಯಾದ್ಯ ತ್ವಂ ಪ್ರಭುಃ ದೃಷ್ಟೋಽಥವಾ ನ ವಾ ।
ವದ ಪುಣ್ಯೇ ಸರಿತ್ ಶ್ರೇಷ್ಠೇ ಕಿಂ ತೂಷ್ಣೀಂ ಸಂಸ್ಥಿತಾಧುನಾ ॥ ೫೬ ॥

ನಃ ಪ್ರಭುಸ್ಸಪ್ತದ್ವೀಪಾನಾಂ ಪ್ರಭುರತ್ರ ನಿರೀಕ್ಷಿತಃ ।
ಭೋ ವಾಯೋ ಕಥಯಾದ್ಯ ತ್ವಂ ಸೀತಾರಾಮೋ ನಿರೀಕ್ಷಿತಃ ॥ ೫೭ ॥

---

೫೪. ಎಲೈ ಕೋಗಿಲೆಯೇ! ನೀನು ಉತ್ತರವನ್ನು ಕೊಡು. ಯಾವಾಗಲೂ ಶಬ್ದಮಾಡುತ್ತಿರುವೆಯಲ್ಲ! ಶ್ರೀಪತಿಯೂ ಸೀತಾಪತಿಯೂ ಆದ ರಾಮನು ನಮಗೆ ಗಂಡನಾಗಿರುವನು. ಅವನನ್ನು ನೋಡಿದೆಯಾ? ಅಥವಾ ನೋಡಲಿಲ್ಲವೇ?

೫೫. ಎಲೈ ಮದೋನ್ಮತ್ತನಾದ ಆನೆಯೇ! ರಾಜಶ್ರೇಷ್ಠನಾದ ಸಪ್ತದ್ವೀಪಾಧಿಪತಿಯಾದ ಶ್ರೀಮಂತನಾದ ರಾಮನನ್ನು ನೀನು ಅರಣ್ಯದಲ್ಲಿ ನೋಡಿದೆಯಾ?

೫೬. ಎಲೈ ಗಿಳಿಯೇ! ಈಗ ನೀನು ನಮಗೆ ಹೇಳು. ಪ್ರಭುವಾದ ರಾಮನನ್ನು ನೋಡಿದೆಯಾ? ಅಥವಾ ಇಲ್ಲವೆ! ಎಲೈ ಪುಣ್ಯಕರವಾದ ನದಿಯೇ! ಏತಕ್ಕೆ ಸುಮ್ಮನಿದ್ದೀಯೆ? ನೀನಾದರೂ ಹೇಳಬಾರದೆ?

೫೭. ಸಪ್ತದ್ವೀಪಾಧಿಪತಿಯಾದ ನಮ್ಮ ಗಂಡನಾದ ರಾಮನನ್ನು ನೋಡಿದೆಯಾ? ಎಲೈ ವಾಯುವೇ! ನೀನಾದರೂ ಹೇಳು. ಸೀತಾರಾಮನನ್ನು ಕಂಡೆಯಾ?

|| ರಾಮದಾಸ ಉವಾಚ ||

ಏವಂ ತಾ ರಾಮವಿಶ್ಲೇಷಸಂಭ್ರಾಂತಾಃ ಶುಶುಚುರ್ವನೇ ।
ತತಸ್ತಾ ಗಂಡಕೀತೀರಂ ಗತ್ವಾ ಗೀತಂ ಪ್ರಚಕ್ರಿರೇ || ೫೮ ||

|| ಸ್ತ್ರೀಯ ಊಚುಃ ||

ಕಿಂ ಪ್ರಭೋ ತ್ವಯಾ ಜಾನಕೀ ಯದಾ
ತೇನ ರಕ್ಷಸಾಽರಣ್ಯಮುಧ್ಯತಃ ।
ಸ್ವಸ್ಥಲಂ ಹೃತಾ ಗೌತಮೀತಟಾತ್
ತತ್ಕೃತೇ ತ್ವಯಾ ನೈವ ಶೋಚಿತಂ || ೫೯ ||

ತ್ವದ್ವಿಯೋಗತಃ ತಪ್ತಮಾನಸಾಃ
ಸರ್ವತೋ ವನೇ ಶೋಕಮಾಗತಾಃ ।
ಏಕದಾ ಪ್ರಭೋ ದೇಹಿ ದರ್ಶನಂ
ದೇಹಿ ನೋ ವರಾ ಮಾಸ್ತು ನೈ ರತಿಃ || ೬೦ ||

---

೫೮. ರಾಮದಾಸನು ಹೇಳಿದನು–ಆ ಹೆಂಗಸರೆಲ್ಲರೂ ರಾಮನನ್ನು ಕಾಣದುದರಿಂದ ದಿಕ್ಕು ತಿಳಿಯದೆ ಆ ಕಾಡಿನಲ್ಲೆಲ್ಲಾ ಅಳುತ್ತ ಅಲೆಯುತ್ತಿದ್ದರು. ಆಗ ಅವರೆಲ್ಲರೂ ಗಂಡಕೀನದಿಯ ದಡದಲ್ಲಿ ಕುಳಿತುಕೊಂಡು ಈ ರೀತಿಯಾಗಿ ಗೀತಗಳನ್ನು ಹಾಡಿದರು.

೫೯. ಹೆಂಗಸರು ಹೇಳಿದರು–ಎಲೈ ಪ್ರಭುವೇ ! ನೀನು ಕಾಡಿನಲ್ಲಿರುವಾಗ ಆ ರಾವಣನೆಂಬ ರಾಕ್ಷಸನು ಸೀತೆಯನ್ನು ಅಪಹರಿಸಿಕೊಂಡು ಲಂಕೆಗೆ ತೆಗೆದುಕೊಂಡು ಹೋಗಿದ್ದನಷ್ಟೆ ? ಆಗ ನೀನು ಅವಳಿಗೋಸ್ಕರ ಶೋಕಪಡಲಿಲ್ಲವೇ ?

೬೦. ನಾವೂ ಅದೇ ರೀತಿಯಲ್ಲಿ ನಿನ್ನ ವಿಯೋಗದಿಂದ ಮನನೊಂದವರಾಗಿ ದುಃಖಿಸುತ್ತ ಈ ಕಾಡಿನಲ್ಲೆಲ್ಲಾ ಅಲೆಯುತ್ತಿದ್ದೇವೆ. ಎಲೈ ಪ್ರಭುವೇ ! ಒಂದುಸಾರಿ ಯಾದರೂ ದರ್ಶನವನ್ನು ಕೊಡು. ನಮಗೆ ವರವನ್ನು ಕೊಡುತ್ತೇನೆಂದೆಯಲ್ಲ ! ಅದನ್ನೇ ಕೊಡು. ನಮಗೆ ರತಿಯು ಬೇಡ.

ನೋ ವಾಂಛಾವೋ ರಾಘವ ತ್ವತ್ತೋ ರತಿಮದ್ಯ
ಯದ್ವದ್ದತ್ತಂ ಭೂಸುರಜಾಭ್ಯೋ ವರದಾನಂ ।
ತದ್ವನ್ನಸ್ತ್ವಂ ಪೂರಯ ಕಾಮಾನ್ ವರದಾನೈಃ
ವಾಂಛಾಮಸ್ತೇ ಸೇವನಮಗ್ರ್ಯೇ ಜನನೇಪಿ ॥ ೬೧ ॥

ಅಸ್ಮಾಭಿರ್ಯಚ್ಚಂಚಲಭಾವಾದಪರಾದ್ಧಂ
ತತ್ಸರ್ವಂ ತ್ವಂ ಮಾ ಸ್ಮರ ಪೂರ್ವಂ ಕರುಣಾತಃ ।
ನಃ ಪ್ರಾಣಾಸ್ತೇ ದರ್ಶನಹೇತೋಸ್ತನುಮಧ್ಯೇ
ತಿಷ್ಠಂತಿ ತ್ವಾಂ ಪಲ್ಲವಯಾಚ್ಞಾ ಕ್ರಿಯತೇದ್ಯ ॥ ೬೨ ॥

ಭೋ ಭೋ ರಾಘವ ಮಾ ರುಷ್ಟ ತ್ವಂ
ಕ್ರೋಧಂ ಮಾ ಭಜ ದಾಸೀಷ್ವದ್ಯ ।
ಪರ್ಯಂತಂ ನ ಹಿ ಪಶ್ಯಂತೀತ್ಥಂ
ವಾಂಛಾಮೋ ನ ಹಿ ತ್ವತ್ತಃ ಕಾಮಂ ॥ ೬೩ ॥

---

೬೧. ಎಲೈ ರಾಮನೇ! ನಿನ್ನಿಂದ ಈಗ ನಾವು ರತಿಯನ್ನು ಅಪೇಕ್ಷಿಸುತ್ತಿಲ್ಲ. ನೀನು ಆ ರಾಜಪುತ್ರಿಯರಿಗೆ ವರದಾನಮಾಡಿದಂತೆ ವರವನ್ನು ನಮಗೂ ಕೊಟ್ಟು ನಮ್ಮ ಮನೋರಥವನ್ನು ಪೂರ್ತಿಮಾಡು. ನಿನ್ನ ಸಂಗಮವು ಮುಂದಿನ ಜನ್ಮದಲ್ಲಿಯಾದರೂ ಸಿಕ್ಕಲಿ.

೬೨. ನಾವು ಮನಶ್ಚಂಚಲತೆಯಿಂದ ಕೂಡಿ ಮಾಡಿದ ಅಪರಾಧವನ್ನು ಕರುಣೆಯನ್ನು ತೋರಿಸಿ ಅದೆಲ್ಲವನ್ನೂ ಕ್ಷಮಿಸು. ನಿನ್ನ ದರ್ಶನವನ್ನು ಮಾಡಬೇಕೆಂಬ ಆಸೆಯಿಂದ ನಮ್ಮ ದೇಹದಲ್ಲಿ ನಮ್ಮ ಪ್ರಾಣಗಳು ನಿಂತಿವೆ. ಆದ್ದರಿಂದಲೇ ನಿನ್ನ ಪಾದಕಮಲಗಳ ದರ್ಶನವನ್ನು ಯಾಚಿಸುತ್ತಿದ್ದೇವೆ.

೬೩ ಎಲೈ ರಾಘವನೇ! ನೀನು ಕೋಪಗೊಳ್ಳಬೇಡ. ದಾಸಿಯರಾದ ನಮ್ಮಲ್ಲಿ ಕೋಪವು ಯೋಗ್ಯವಲ್ಲ. ನಮಗೆ ಕೊನೆಗಾಲವನ್ನು ನೀನು ನಿರೀಕ್ಷಿಸಬೇಡ. ನಾವು ನಿನ್ನಿಂದ ಈಗ ರತಿಯನ್ನು ಅಪೇಕ್ಷಿಸುವುದಿಲ್ಲ.

ದೇಹಿ ತ್ವಂ ನಿಜದರ್ಶನಲಾಭಂ
ಜನ್ಮಾಗ್ರ್ಯೇಽರ್ಪಯ ನೋ ವರದಾನಂ ।
ಪಾಹಿ ತ್ವಂ ಶರಣಂ ಹ್ಯುಪಯಾತಾಃ
ಸರ್ವಾಸ್ತಾರಯ ನಃ ಪ್ರಣಮಾಮಃ ॥ ೬೪ ॥

ರಾಮ ತ್ವಂ ಕಿಂ ನಿರ್ದಯಹೃದಯಸ್ತ್ವಸಿ ನಃ ಕಿಂ
ನಾಯಾತ್ಯದ್ಯ ಸ್ತ್ರೀಜನಕರುಣಾಹೃದಯೇ ತೇ ।
ಇತ್ಥಂ ಕ್ರೋಧಂ ತ್ವತ್ಪದಯುಗಳೇ ಪತಿತಾಸು
ಕರ್ತುಂ ವಿಷ್ಣೋ ನಾರ್ಹಸಿ ವರದೋ ಭವ ನೋದ್ಯ ॥ ೬೫ ॥

ಬಾಲೇ ದೀನೇ ಸ್ತ್ರೀಜನವಿಮಲೇ ತನಯೇ ಸ್ವೇ
ನೋ ಕುರ್ವಂತೀತ್ಥಂ ಬಹುವಿಮಲಾ ಮತಿಮಂತಃ ।
ಕ್ರೂರಂ ಕೋಪಂ ತ್ವಂ ತ್ಯಜ ವರದೋ ಭವ ನೋದ್ಯ
ವಾರಂ ವಾರಂ ಕರಕಮಲೈಸ್ತ್ವಾಂ ಪ್ರಣಮಾಮಃ ॥ ೬೬ ॥

---

೬೪. ನಿನ್ನ ದರ್ಶನಲಾಭವನ್ನು ಈಗ ನಮಗೆ ಕೊಡು. ಮುಂದಿನ ಜನ್ಮಕ್ಕಾದರೂ ರತಿಯನ್ನು ಕೊಡುವ ವರದಾನವನ್ನು ಮಾಡು. ನಿನ್ನನ್ನು ಶರಣುಹೊಂದಿದ್ದೇವೆ ನಮ್ಮನ್ನು ಕಾಪಾಡು. ನಮ್ಮೆಲ್ಲರನ್ನೂ ಈಗ ಕೃತಾರ್ಥರನ್ನಾಗಿ ಮಾಡು. ನಿನಗೆ ಈಗ ನಮಸ್ಕರಿಸುತ್ತೇವೆ

೬೫. ಎಲೈ ರಾಮನೇ! ನೀನೇಕೆ ನಮ್ಮಲ್ಲಿ ನಿರ್ದಯಹೃದಯನಾಗಿದ್ದೀಯೆ ? ಸ್ತ್ರೀಜನರಲ್ಲಿ ನಿನಗಿನ್ನೂ ಕರುಣೆಯೆಂಬುದು ಬರಲಿಲ್ಲವೇ ? ನಿನ್ನ ಪಾದಪದ್ಮಗಳಲ್ಲಿ ಶರಣುಬಂದಿರುವ ನಮ್ಮಮೇಲೆ ಕೋಪವನ್ನು ಬಿಟ್ಟುಬಿಡು. ಹಾಗೆ ಕೋಪಮಾಡಬಾರದು. ನಮಗೆ ಬೇಕಾದ ವರವನ್ನು ಕೊಡು.

೬೬. ಬಾಲಕರಲ್ಲಿಯೂ ದೀನರಲ್ಲಿಯೂ ಸ್ತ್ರೀಜನರಲ್ಲಿಯೂ ಪರಿಶುದ್ಧರಾದವರಲ್ಲಿಯೂ ತನ್ನ ಮಕ್ಕಳಲ್ಲಿಯೂ ಕೂಡ ಬುದ್ಧಿವಂತರಾದವರು ಈ ರೀತಿಯಾಗಿ ಉದಾಸೀನವನ್ನು ಮಾಡುವುದಿಲ್ಲ. ಕ್ರೂರವಾದ ಕೋಪವನ್ನು ಬಿಟ್ಟುಬಿಡು. ನಮಗೆ ಈಗ ವರವನ್ನು ಕೊಡು .ಕೈಮುಗಿದುಕೊಂಡು ನಮಸ್ಕರಿಸುತ್ತ ನಿನ್ನನ್ನು ಬಾರಿ ಬಾರಿಗೂ ಕೇಳಿಕೊಳ್ಳುತ್ತೇವೆ.

ಹೇ ನಾಥ ರಾಘವ ರಮೇಶ್ವರ ರಾವಣಾರೇ
ಸೀತಾಪತೇ ರಿಪುನಿಷೂದನ ಕಂಜನೇತ್ರ |
ತ್ವಂ ದೇಹಿ ರಾಮ ನಿಜದರ್ಶನಮದ್ಯ ವಿಷ್ಣೋ
ದುಃಖಾರ್ಣವಾತ್ಪರತಟಂ ನಯ ಕಾಮಿನೀರ್ನಃ ॥ ೬೭ ॥

ತ್ವತ್ಪಾದಪದ್ಮವರಸೇವನಮರ್ಥಯಾಮೋ
ಜನ್ಮಾಂತರೇ ಕುರು ದಯಾಂ ಕರುಣಾಸಮುದ್ರ |
ನೋ ಚೇತ್ತವಾದ್ಯ ವಿರಹಾನ್ನಿಜಜೀವಿತಾನಿ
ತ್ಯಕ್ಷ್ಯಾಮ ಏವ ನಿಯತಂ ಸಹಸಾದ್ಯ ನದ್ಯಾಂ ॥ ೬೮ ॥

॥ ರಾಮದಾಸ ಉವಾಚ ॥

ನಾರೀಗೀತಂ ರಾಘವಶ್ಚಾಪಿ ಶ್ರುತ್ವಾ
ಪ್ರತ್ಯಕ್ಷೋಽಭೂತ್ಕಾಮಿನೀನಾಮಥಾಗ್ರೇ |
ದೃಷ್ಟ್ವಾ ರಾಮಂ ತಾಃ ಸ್ತ್ರಿಯಶ್ಚಾತಿತುಷ್ಟಾಃ
ಪ್ರೋತ್ಫುಲ್ಲಾಸ್ಯಸ್ತಾಂ ಪ್ರಣೇಮುಶ್ಶಿರೋಭಿಃ ॥ ೬೯ ॥

---

೬೭. ಎಲೈ ನಾಥನೇ ! ರಾಘವನೇ ! ರಮಾಪತಿಯೇ ! ರಾವಣಾರಿಯೇ ! ಸೀತಾಪತಿಯೇ ! ರಿಪುನಿಷೂದನನೇ ! ಕಂಜನೇತ್ರನೇ ! ರಾಮನೇ ! ಈಗ ನೀನು ನಿನ್ನ ದರ್ಶನವನ್ನು ಕೊಡು. ಈ ದುಃಖವೆಂಬ ಸಮುದ್ರದಿಂದ ನಮ್ಮನ್ನು ದಾಟಿಸಿ ಆಚೆಯ ದಡವನ್ನು ಹೊಂದಿಸು.

೬೮. ಈಗ ನಾವು ನಿನ್ನ ಪಾದಪದ್ಮಗಳ ಸೇವನೆಯನ್ನು ಮಾತ್ರ ಅಪೇಕ್ಷಿಸುತ್ತಿರುವೆವು. ಜನ್ಮಾಂತರದಲ್ಲಿಯಾದರೂ ದಯೆಯನ್ನು ತೋರಿಸುವ ಉತ್ತಮವಾದ ಮನಸ್ಸನ್ನು ಮಾಡು. ಎಲೈ ಕರುಣಾಸಾಗರನೇ ! ನೀನು ಹಾಗೂ ಮಾಡದಿದ್ದರೆ ಈಗ ಉಂಟಾಗಿರುವ ನಿನ್ನ ವಿರಹದಿಂದ ನಮ್ಮ ಪ್ರಾಣಗಳನ್ನು ಬಿಟ್ಟು ಬಿಡುತ್ತೇವೆ. ಇದು ನಿಶ್ಚಯವು. ನಿನ್ನ ಪಾದಕಮಲಗಳ ದರ್ಶನವನ್ನು ಮಾಡಿ ಒಡನೆಯೇ ಪ್ರಾಣವನ್ನು ಬಿಟ್ಟು ಈ ಅಪಯಶಸ್ಸನ್ನು ಕಳೆದುಕೊಳ್ಳುತ್ತೇವೆ.

೬೯. ರಾಮದಾಸನು ಹೇಳಿದನು—ಆ ನಾರಿಯರ ಈ ಗೀತವನ್ನು ಕೇಳಿ ರಾಘವನೂ ಕೂಡ ಪ್ರತ್ಯಕ್ಷನಾಗಿ ಎದುರಿಗೆ ಬಂದನು. ಆಗ ಆ ರಾಮನನ್ನು ನೋಡಿ ಆ ಹೆಂಗಸರು ಸಂತೋಷಗೊಂಡು ಸಂತೋಷದಿಂದ ಕಣ್ಣುಗಳನ್ನು ಅಗಲವಾಗಿ ಬಿಡುತ್ತ ತಲೆಯನ್ನು ತಗ್ಗಿಸಿ ಅವನಿಗೆ ನಮಸ್ಕರಿಸಿದರು.

ನಾರೀಗೀತಂ ಮಾನವಶ್ಚಾಪಿ ಶ್ರುತ್ವಾ
ಸರ್ವಾನ್ ಕಾಮಾನ್ ಪ್ರಾಪ್ನುಯಾನ್ನಿಶ್ಚಯೇನ ।
ತಸ್ಮಾದೇತಸ್ಸರ್ವದಾ ಕೀರ್ತನೀಯಂ
ಶ್ಲೋಕಾರ್ಕೀಯಂ ಪ್ರಾಪರ್ತ ಛಂದಚಿತ್ರಂ ॥ ೨೦ ॥

ಅಥ ರಾಮೋ ದದೌ ತಾಭ್ಯೋ ವರಾಂಸ್ತಾಸ್ತೋಷಯನ್ ಪ್ರಭುಃ ।
ಯೂಯಂ ಶೃಣುಧ್ವಂ ಭೋ ನಾರ್ಯಃ ಪುರಾ ವ್ಯಾಸಾಗ್ರತೋ ಮಯಾ ॥

ಬಹುಸ್ತ್ರೀಹೇತುನಾ ರುಕ್ಮಮೂರ್ತಯಷ್ಷೋಡಶಾರ್ಪಿತಾಃ ।
ತಾಸಾಂ ದಾನೇನ ಸಂತುಷ್ಟಾಸ್ತೇ ವಿಪ್ರಾ ಮಾಂ ತದಾಬ್ರುವನ್ ॥ ೨೨ ॥

ಫಲಂ ಸಹಸ್ರಗುಣಿತಂ ತವಾಸ್ತು ರಘುನಂದನ ।
ಅತಸ್ತತ್ಫಲತಶ್ಚಾಹಂ ದ್ವಾಪರೇ ಕೃಷ್ಣರೂಪಧೃಕ್ ॥ ೨೩ ॥

---

೨೦. ಈ ನಾರೀಗೀತವನ್ನು ಕೇಳಿದ ಮನುಷ್ಯನು ಎಲ್ಲಾ ಇಷ್ಟಗಳನ್ನೂ ಹೊಂದುವನು. ಇದು ನಿಶ್ಚಯವು. ಆದ್ದರಿಂದ ಚಿತ್ರ ಚಿತ್ರವಾದ ಛಂದಸುಳ್ಳ ಈ ಹನ್ನೆರಡು ಶ್ಲೋಕಗಳನ್ನು ಯಾವಾಗಲೂ ಹೇಳುತ್ತಿರಬೇಕು.

೨೧-೨೨. ಅನಂತರ ರಾಮನು ಅವರಿಗೆ ಸಂತೋಷವನ್ನುಂಟುಮಾಡುತ್ತ ಇಂತೆಂದು ವರಗಳನ್ನು ಕೊಟ್ಟನು. ಎಲೈ ನಾರಿಯರಿರಾ ! ಕೇಳಿರಿ. ನಾನು ಬಹು ಸ್ತ್ರೀಯರನ್ನು ರಮಿಸಬೇಕೆಂಬ ಇಚ್ಛೆಯಿಂದಲೇ ವ್ಯಾಸನ ಎದುರಿಗೆ ಪೂರ್ವದಲ್ಲಿ ಹದಿನಾರು ಚಿನ್ನದ ಸ್ತ್ರೀಪ್ರತಿಮೆಗಳನ್ನು ದಾನಮಾಡಿದೆನು. ಆ ದಾನದಿಂದ ಸಂತೋಷಗೊಂಡ ಆ ಬ್ರಾಹ್ಮಣರು ಆಗ ನನ್ನನ್ನು ಕುರಿತು ಇಂತೆಂದರು.

೨೩-೨೪. ಎಲೈ ರಘುನಂದನನೇ ? ಇದಕ್ಕೆ ಫಲವು ಸಾವಿರದಷ್ಟು ಹೆಚ್ಚಾಗಿ ನಿನಗೆ ಬರಲಿ. ಎಂಬುದಾಗಿ ಹೇಳಿದ್ದರಿಂದ ಆದರ ಫಲವನ್ನು ನಾನು ದ್ವಾಪರಯುಗದಲ್ಲಿ ಕೃಷ್ಣಾವತಾರವನ್ನು ಮಾಡಿ ದ್ವಾರಕಾಪಟ್ಟಣದಲ್ಲಿ

ಕರೋಮಿ ಪಾಣಿಗ್ರಹಣಂ ಯುಷ್ಮಾಕಂ ದ್ವಾರಕಾಪುರಿ ।
ಯೂಯಂ ನಾನಾನೃಪಾಣಾಂ ಚ ಭವಧ್ವಂ ಬಾಲಿಕಾಸ್ತದಾ ॥ ೭೪ ॥

ಭೌಮಾಸುರಸ್ತದಾಯಂ ವೈ ದುಂದುಭಿಸ್ತು ಭವಿಷ್ಯತಿ ।
ಭೌಮಾಸುರಶ್ಚ ಯುಷ್ಮಾಕಂ ಪೂರ್ವವತ್ಸಂಹರಿಷ್ಯತಿ ॥ ೭೫ ॥

ತದಾ ಸರ್ವಾ ಮೋಚಯಾಮಿ ಹತ್ವಾ ತಂ ಜಗತೀಸುತಂ ।
ತತೋ ಮಯಾ ಸುಖೇನೈವ ಕ್ರೀಡಧ್ವಂ ಹಿ ಯಥಾರುಚಿ ॥ ೭೬ ॥

ಏವಂ ತಾ ರಾಮವಾಕ್ಯಂ ತತ್ ಶ್ರುತ್ವಾ ಪ್ರಮುದಿತಾನನಾಃ ।
ಆನಂದೋತ್ಫುಲ್ಲನಯನಾಸ್ಸುಖಮಾಪುರ್ವರಾಂಗನಾಃ ॥ ೭೭ ॥

ಏತಸ್ಮಿನ್ನಂತರೇ ರಾಮಂ ಪಶ್ಯಂತೋ ಲಕ್ಷ್ಮಣಾದಯಃ ।
ಶನೈಸ್ತತ್ರಾಯಯುಶ್ಚಾಶ್ವಪದಾಂಕಿತಪಥಾ ಪ್ರಭುಂ ॥ ೭೮ ॥

ನಿಮ್ಮೆಲ್ಲರನ್ನೂ ಮದುವೆಯಾಗುತ್ತೇನೆ. ಆಗ ನೀವು ಅಲ್ಲಲ್ಲಿರುವ ರಾಜರ ಮಕ್ಕಳಾಗಿ ಹುಟ್ಟುತ್ತೀರಿ.

೭೫. ಆ ದುಂದುಭಿರಾಕ್ಷಸನು ಆಗ ಭೌಮಾಸುರನಾಗಿ ಅವತರಿಸುವನು. ಆಗಲೂ ಅದೇ ಭೌಮಾಸುರನು ನಿಮ್ಮೆಲ್ಲರನ್ನೂ ಕದ್ದುಕೊಂಡು ಹೋಗುತ್ತಾನೆ.

೭೬. ಆಗ ಆ ಭೂಮಿಪುತ್ರನಾದ ಭೌಮಾಸುರನನ್ನು ಕೊಂದು ನಿಮ್ಮೆಲ್ಲರನ್ನೂ ಬಿಡುಗಡೆಮಾಡುತ್ತೇನೆ. ಆಗ ನೀವೆಲ್ಲರೂ ಸುಖವಾಗಿ ನಿಮಗೆ ಇಷ್ಟಬಂದ ರೀತಿಯಲ್ಲಿ ನನ್ನೊಡನೆ ಕ್ರೀಡಿಸಿರಿ.

೭೭. ರಾಮನು ಹೀಗೆ ಹೇಳಿದುದನ್ನು ಕೇಳಿ ಅವರೆಲ್ಲರೂ ಸಂತೋಷಗೊಂಡರು. ಆನಂದದಿಂದ ಅವರ ಕಣ್ಣುಗಳು ಅರಳಿದುವು. ಮನಸ್ಸಿಗೆ ಶಾಂತಿಯುಂಟಾಯಿತು.

೭೮. ಇಷ್ಟರವೇಳೆಗೆ ರಾಮನನ್ನು ಹುಡುಕುತ್ತ ಲಕ್ಷ್ಮಣನೇ ಮುಂತಾದವರು ರಾಮನ ಕುದುರೆಯ ಹೆಜ್ಜೆಯ ದಾರಿಯನ್ನು ನೋಡಿ ಅದನ್ನು ಅನುಸರಿಸಿಕೊಂಡು ಅದೇ ದಾರಿಯಲ್ಲಿ ಅಲ್ಲಿಗೆ ಬಂದರು.

ಷೋಡಶಸ್ತ್ರೀ ಸಹಸ್ರಾಣಾಂ ಮಧ್ಯೇ ದೃಷ್ಟ್ವಾ ರಘೂತ್ತಮಂ ।
ಪರಂ ವಿಸ್ಮಯಮಾಪುಸ್ತೇ ಪ್ರಣೇಮುರ್ಜಗದೀಶ್ವರಂ ॥ ೭೯ ॥

ಶ್ರುತ್ವಾ ರಾಮಮುಖಾತ್ಸರ್ವಂ ಯಥಾವೃತ್ತಂ ಸವಿಸ್ತರಂ ।
ಸರ್ವೇ ಸಂತುಷ್ಟಮನಸಃ ತಸ್ಥುಃ ಶ್ರೀರಾಘವಾಗ್ರತಃ ॥ ೮೦ ॥

ತತೋ ರಾಮಾಜ್ಞಯಾ ದೂತಾಃ ಶತಶೋಥ ಸಹಸ್ರಶಃ ।
ವಾಹನಾನ್ಯಾನಯಾಮಾಸುಃ ಸೇನಾವಾಸಸ್ಥಲಾನ್ಮುದಾ ॥ ೮೧ ॥

ತೇಷು ತಾಃ ಸ್ತ್ರೀಸ್ಸುಸಂಸ್ಥಾಪ್ಯ ವಾಹನೇಷು ರಘೂತ್ತಮಃ ।
ಶನೈಸ್ಸೇನಾನಿವಾಸೇ ಸ ಯಯೌ ಸೀತಾಂತಿಕಂ ಪ್ರಭುಃ ॥ ೮೨ ॥

ತತಸ್ತಾ ಜಾನಕೀಂ ನೇಮುಃ ಸೀತಾಂ ವೃತ್ತಂ ರಘೂತ್ತಮಃ ।
ಯಥಾವೃತ್ತಂ ತಥಾ ಸರ್ವಂ ಕಥಯಾಮಾಸ ಕೌತುಕಾತ್ ॥ ೮೩ ॥

---

೭೯ ಅವರು ಆ ಹದಿನಾರುಸಾವಿರಜನ ಹೆಂಗಸರ ಮಧ್ಯದಲ್ಲಿ ಆ ರಾಮನಿರುವುದನ್ನು ನೋಡಿ ಬಹು ಆಶ್ಚರ್ಯಗೊಂಡರು. ಮತ್ತು ಅವನ ಬಳಿಗೆ ಹೋಗಿ ನಮಸ್ಕರಿಸಿದರು.

೮೦. ಆಗ ಆ ರಾಮನು ಅವರೆಲ್ಲರಿಗೂ ಅಲ್ಲಿನ ವಿಷಯಗಳನ್ನು ವಿಸ್ತಾರವಾಗಿ ಹೇಳಿದನು. ಅವರಿಗೆಲ್ಲರಿಗೂ ಸಂತೋಷವಾಯಿತು. ಅಂತೆಯೇ ಅವರೆಲ್ಲರೂ ಆ ರಾಮನ ಮುಂದೆಯೇ ನಿಂತುಕೊಂಡರು.

೮೧-೮೨. ಒಡನೆಯೇ ರಾಮನು ಅಪ್ಪಣೆಮಾಡಲು ಅವನ ಅಪ್ಪಣೆಯಂತೆ ದೂತರು ಸೇನೆಯು ನಿಂತಿರುವ ಶಿಬಿರದಿಂದ ನೂರಾರು ವಾಹನಗಳನ್ನು ತಂದರು. ಅದರಲ್ಲಿ ಆ ಹೆಂಗಸರನ್ನು ಕೂರಿಸಿಕೊಂಡು ಆ ರಾಮನು ನಿಧಾನವಾಗಿ ಸೇನೆಯ ಶಿಬಿರದಲ್ಲಿರುವ ಸೀತೆಯ ಸಮೀಪಕ್ಕೆ ಹೋದನು.

೮೩. ಅಲ್ಲಿಗೆ ಹೋದಮೇಲೆ ಆ ಹೆಂಗಸರೆಲ್ಲರೂ ಆ ಸೀತೆಗೆ ನಮಸ್ಕರಿಸಿದರು. ಅನಂತರ ರಾಮನು ಸೀತೆಗೆ ಅಲ್ಲಿ ನಡೆದಂತೆಯೇ ಎಲ್ಲಾ ವಿಷಯಗಳನ್ನೂ ಆಶ್ಚರ್ಯಪಡುತ್ತ ವಿಸ್ತಾರವಾಗಿ ಹೇಳಿದನು.

ತತಸ್ತಾಃ ಪೂಜಯಾಮಾಸ ವಸ್ತ್ರೈರಾಭರಣೈ ರಮಾ ।
ತತೋ ರಾಮಸ್ಸ ಕಾಸಾರಂ ಸೇನಾವಾಸಸ್ಥಲಾಂತಿಕೇ ॥ ೮೪ ॥

ದದರ್ಶ ಸುಮಹಾಶ್ರೇಷ್ಠಂ ಸ್ಪರ್ಧಯಂತಮಪಾಂ ಪತಿಂ ।
ಘನಪಾದಪಮಧ್ಯಸ್ಥಂ ಸುತೀರ್ಥಸಲಿಲಂ ಶುಭಂ ॥ ೮೫ ॥

ವಿಶಾಲಂ ವಿಕಚಾಂಭೋಜಮಧುಮತ್ತಮಧುವ್ರತಂ ।
ಪದ್ಮಿನೀ ಪತ್ರಸಂಯುಕ್ತಂ ಛನ್ನಂ ಮರಕತೈರಿವ ॥ ೮೬ ॥

ಸ್ವಚ್ಛಂದಮುಚ್ಚಲನ್ಮತ್ಸ್ಯಂ ಸ್ವಚ್ಛಂ ಸಾಧುಮನೋ ಯಥಾ ।
ಚಲಜ್ಜಲಚರೋದ್ಭಿನ್ನವೀಚೀರಾಜಿವಿರಾಜಿತಂ ॥ ೮೭ ॥

---

೮೪. ಅನಂತರ ಸೀತೆಯು ಆ ಹೆಂಗಸರಿಗೆಲ್ಲರಿಗೂ ವಸ್ತ್ರಗಳನ್ನೂ ಆಭರಣಗಳನ್ನೂ ಕೊಟ್ಟು ಗೌರವಿಸಿದಳು. ಅನಂತರ ರಾಮನು ಅಲ್ಲಿ ತಿರುಗುವಾಗ ಆ ಶಿಬಿರದ ಹತ್ತಿರದಲ್ಲಿಯೇ ಒಂದು ಸರೋವರವನ್ನು ಕಂಡನು.

೮೫. ಆ ಸರೋವರವು ಶ್ರೇಷ್ಠವಾಗಿದ್ದಿತು. ಅಲ್ಲದೆ ಸಮುದ್ರದೊಡನೆ ಹೋರಾಡುವಂತಿದ್ದಿತು. ಎಂದರೆ ಸಮುದ್ರದ ಹಾಗೆ ದೊಡ್ಡದಾಗಿದ್ದಿತು. ಅದು ಮರಗಳ ತೋಪುಗಳ ಮಧ್ಯದಲ್ಲಿದ್ದಿತು. ನೀರು ನಿರ್ಮಲವಾಗಿ ಚೆನ್ನಾಗಿದ್ದಿತು.

೮೬. ಅದು ವಿಶಾಲವಾಗಿದ್ದಿತು. ಅದರಲ್ಲಿದ್ದ ಕಮಲಗಳು ಅರಳಿದ್ದುವು. ಆ ಹೂವುಗಳಲ್ಲಿದ್ದ ಮಕರಂದವನ್ನು ಕುಡಿದು ಜೇನುನೊಣಗಳು ಮದಿಸಿದ್ದುವು. ಕಮಲದ ಎಲೆಗಳಿಂದ ಕೂಡಿಕೊಂಡು ಹಸುರಾಗಿ ಕಾಣುತ್ತಲಿದ್ದುದನ್ನು ನೋಡಿದರೆ ಮರಕತ ಮಣಿಯಿಂದ ಆ ಸರೋವರವು ಮುಚ್ಚಿಕೊಂಡಿರುವಂತಿದ್ದಿತು.

೮೭. ಮೀನುಗಳೆಲ್ಲವೂ ಯಾವುದರ ಆತಂಕವೂ ಇಲ್ಲದೆ ಮನಬಂದಂತೆ ಓಡಾಡುತ್ತಿದ್ದುವು. ಸಾಧುಗಳ ಮನಸ್ಸಿನಂತೆ ಕಲ್ಮಷವಿಲ್ಲದೆ ಅದರ ನೀರು ಸ್ವಚ್ಛವಾಗಿದ್ದಿತು. ನೀರಿನಲ್ಲಿ ಓಡಾಡುವ ಪ್ರಾಣಿಗಳಿಂದ ಹುಟ್ಟಿದ ಅಲೆಗಳ ಸಾಲುಗಳಿಂದ ಮನೋಹರವಾಗಿದ್ದಿತು.

ಅಂತರ್ಗ್ರಾಹಗಣಕ್ರೂರಂ ಖಲಾನಾಮಿವ ಮಾನಸಂ ।
ಕ್ವಚಿಚ್ಛೈವಾಲದುರ್ಗಮ್ಯಂ ಕೃಪಣಸ್ಯೇವ ಮಂದಿರಂ ॥ ೮೮ ॥

ನಾನಾವಿಹಂಗಸರ್ವಾರ್ತಿಂ ಶಮಯಂತಂ ದಿವಾನಿಶಂ ।
ಉದಾರಮಿವ ಸರ್ವಸ್ವೈರಾಪನ್ನಾರ್ತಿಹರಂ ಮಹತ್ ॥ ೮೯ ॥

ತರ್ಪಯಂತಂ ಹಿಮಾಂಭೋಭಿಃ ಶ್ವಾಪದಾನ್ ಸ್ವಪಿತೄನಿವ ।
ಹರಂತಂ ಸರ್ವಸಂತಾಪಂ ಹಿಮಾಂಶುಮಿವ ಚಾಹ್ನಿಕಂ ॥ ೯೦ ॥

ತಂ ದೃಷ್ಟ್ವಾಭೂತ್ಸುಸಂತುಷ್ಟಸ್ಸೀತಯಾ ರಘುನಂದನಃ ।
ತತ್ರ ಸ್ನಾತ್ವಾ ಸುಖಂ ರಾಮಃ ಕೃತಮಾಧ್ಯಾಹ್ನಿಕಕ್ರಿಯಃ ॥ ೯೧ ॥

---

೮೮. ಒಳಗಡೆಯಲ್ಲಿ ಮೊಸಳೆಗಳಿದ್ದುದರಿಂದ ದುಷ್ಟರ ಮನಸ್ಸಿನಂತೆ ಕ್ರೂರವಾಗಿದ್ದಿತು. ಲೋಭಿಯಮನೆಗೆ ಹೋಗಲು ಬಾಗಿಲುಹಾಕಿಕೊಂಡು ಒಳಗೆ ಹೋಗದಂತೆ ಮಾಡುವ ಹಾಗೆ ಪಾಚಿಗಳಿರುವುದರಿಂದ ಆ ಸರೋವರವು ಮುಚ್ಚಿಕೊಂಡು ಇತರರು ಒಳಹೋಗಲು ಆಗದಂತಿದ್ದಿತು.

೮೯. ಅನೇಕ ವಿಧವಾದ ಪಕ್ಷಿಗಳ ದುಃಖವನ್ನೆಲ್ಲಾ ಹಗಲೂ ರಾತ್ರಿಯೂ ನಾಶಮಾಡುತ್ತ ಉದಾರಪುರುಷನು ತನ್ನ ಸರ್ವಸ್ವವನ್ನೂ ಕೊಟ್ಟು ಕಷ್ಟದಲ್ಲಿರುವವರನ್ನು ಕಾಪಾಡುತ್ತಿರುವಂತೆ ಇದ್ದಿತು.

೯೦. ಮನುಷ್ಯನು ತನ್ನ ಪಿತೃಗಳನ್ನು ನೀರಿನಿಂದ ತೃಪ್ತಿಪಡಿಸುವಂತೆ ವ್ಯಾಘ್ರಾದಿ ಕ್ರೂರಮೃಗಗಳನ್ನು ತಣ್ಣಗಿರುವ ನೀರಿನಿಂದ ತೃಪ್ತಿಪಡಿಸುತ್ತಿದ್ದಿತು. ಪ್ರಾಣಿಗಳಿಗೆ ಹಗಲಿನಿಂದ ಉಂಟಾದ ತಾಪವನ್ನು ಚಂದ್ರನಂತೆ ಪರಿಹರಿಸುತ್ತಿದ್ದಿತು.

೯೧. ಇಂತಹ ಸರೋವರವನ್ನು ನೋಡಿ ಸೀತೆಯೊಡನೆ ಆ ರಾಮನು ಸಂತೋಷಪಟ್ಟನು. ಅಲ್ಲಿಯೇ ಸ್ನಾನಮಾಡಿ ಮಧ್ಯಾಹ್ನದ ಸಂಧ್ಯಾವಂದನೆಯನ್ನೂ ಮಾಡಿದನು

ಭುಕ್ತ್ವಾ ಬಂಧುಜನೈಸ್ಸರ್ವೈರಾಖೇಟಿಗಣಸಂವೃತಃ ।
ಉವಾಸ ಸರಸಸ್ತೀರೇ ರಮ್ಯಾಸ್ಸಂಕಥಯರ್ನ ಕಥಾಃ ॥ ೯೨ ॥

ತತಶ್ಚರಾಸನೇ ಬಾಣಂ ಕೃತ್ವಾ ರಾತ್ರೌ ಸ್ಥಿತಸ್ತರೌ ।
ವ್ಯಾಧಾಸ್ಸಂಧಾನಮಾಸ್ಥಾಯ ರುರುಧುಃ ಕಕುಭಾಂ ಪಥಃ ॥ ೯೩ ॥

ಏವಂ ಸ್ಥಿತೇಷು ವೀರೇಷು ವನೇ ವಿಸ್ತಾರ್ಯ ವಾಗುರಾಃ ।
ನಿಶಾರ್ಧೇ ನಿರ್ಗತಂ ಯೂಥಂ ಸೂಕರಾಣಾಂ ಸರಸ್ತಟೇ ॥ ೯೪ ॥

ಚರಿತ್ವಾ ಸರಸೀಕಂದಾರ್ನ ಪಪಾತ ವ್ಯಾಧಸಂಕುಲೇ ।
ರಾಜ್ಞಾ ವಿದ್ಧಾಸ್ತದಾ ಕ್ರೋಡಾ ವ್ಯಾಧೈಶ್ಚ ಬಹವೋ ಹತಾಃ ॥ ೯೫ ॥

---

೯೨. ಬಂಧು ಜನಗಳೊಡನೆ ಊಟವನ್ನು ಮಾಡಿ ತನ್ನ ಕೂಡ ಬಂದಿದ್ದ ಬೇಟೆಗಾರರೊಡನೆ ಬಗೆ ಬಗೆಯಾದ ಮಾತುಗಳನ್ನಾಡುತ್ತ ಆ ಸರೋವರದ ತೀರದಲ್ಲಿಯೇ ಇದ್ದನು.

೯೩. ರಾತ್ರಿಯಾಗಲು ಈ ರಾಮನು ಧನುಸ್ಸಿಗೆ ಬಾಣವನ್ನು ಹೂಡಿ ಒಂದು ಮರದಮೇಲೆ ಬೇಟೆಗೋಸ್ಕರ ಕುಳಿತನು. ವ್ಯಾಧರು ಬಲೆ ಮುಂತಾದುವುಗಳನ್ನು ಹಾಕಿಕೊಂಡು ಎಲ್ಲ ಕಡೆಯಲ್ಲಿಯೂ ದಾರಿಯನ್ನು ಅಡ್ಡಗಟ್ಟಿಕೊಂಡು ನಿಂತರು.

೯೪. ಆ ವನದಲ್ಲಿ ಬಲೆಗಳನ್ನು ಬೀಸಿಕೊಂಡು ವೀರರು ಈರೀತಿ ತಡೆದಿರುತ್ತಿರಲು ಅರ್ಧರಾತ್ರಿಯ ಸಮಯದಲ್ಲಿ ಆ ಸರೋವರದ ದಡದಿಂದ ಹೋಗಲು ಒಂದು ಹಂದಿಯ ಗುಂಪು ಬಂದಿತು.

೯೫. ಆ ಸರೋವರದ ತೀರದಲ್ಲಿ ಗೆಡ್ಡೆಗೆಣಸುಗಳನ್ನು ತಿಂದು ಮುಂದೆ ಹೋಗುವಾಗ ವ್ಯಾಧರ ಗುಂಪಿನಲ್ಲಿ ಸಿಕ್ಕಿಬಿದ್ದಿತು. ರಾಮನೂ ಕೂಡ ಅನೇಕ ಹಂದಿಗಳನ್ನು ಕೊಂದನು. ವ್ಯಾಧರೂ ಬಹಳ ಹಂದಿಗಳನ್ನು ಕೊಂದರು.

ಕ್ಷಣೇನೈವ ವರಾಹಾಸ್ತೇ ವಿದ್ಧಾಃ ಪೇತುರ್ಮಹೀತಲೇ ।
ತಾನ್ ಹತ್ವಾ ತುಮುಲಂ ನಾದಂ ಚಕ್ರುರ್ವ್ಯಾಧಾಸ್ಸುದರ್ಪಿತಾಃ ॥ ೯೬ ॥

ಧಾವಂತೋಽಪಿ ಮುದಾ ಯುಕ್ತಾಃ ಮಿಲಿತಾ ಯತ್ರ ಭೂಪತಿಃ ।
ತಾನಾದಾಯ ಭಟೈರ್ಭೂಪಸ್ಸೇನಾವಾಸಂ ಯಯೌ ಪುನಃ ॥ ೯೭ ॥

ಏವಂ ಸಪ್ತದಿನಾನ್ಯೇವ ಸ್ಥಿತ್ವಾ ರಾಮೋ ವನೇ ಸುಖಂ ।
ಭುಕ್ತ್ವಾ ನಾನಾವಿಧಾನ್ ಭೋಗಾನ್ ಸಿತಯಾ ಸ್ವಪುರೀಂ ಯಯೌ ॥೯೮॥

ತತೋ ವಿಪ್ರಾನ್ ನೃಪಾನ್ ವೈಶ್ಯಾನ್ ಸಮಾಹೂಯ ರಘೂತ್ತಮಃ ।
ಯಾ ಯಸ್ಯ ದುಹಿತಾ ನಾರೀ ಯಾ ಯಸ್ಯ ಪುತ್ರಪುತ್ರಿಕಾ ॥ ೯೯ ॥

ತಸ್ಮೈ ತಸ್ಮೈ ದದೌ ತಾಂ ತಾಮೇವಂ ಸರ್ವಾನ್ ವಿಸರ್ಜಯತ್ ।
ವಸ್ತ್ರಾಲಂಕಾರಭೂಷಾದ್ಯೈಶ್ಶೋಭಯಿತ್ವಾ ಪೃಥಕ್ ಪೃಥಕ್ ॥ ೧೦೦ ॥

---

೯೬. ಅವರು ಒಂದು ಕ್ಷಣಕಾಲದಲ್ಲಿಯೇ ಅಲ್ಲಿ ಬಂದಿದ್ದ ಹಂದಿಗಳನ್ನು ಕೊಂದು ನೆಲದಮೇಲೆ ಕೆಡಗಿದರು. ಅವೆಲ್ಲವನ್ನೂ ಕೊಂದನಂತರ ಆ ವ್ಯಾಧರು ಹೆಮ್ಮೆಯಿಂದ ತುಮುಲಧ್ವನಿಯನ್ನು ಮಾಡಿದರು.

೯೭. ಅವರೆಲ್ಲರೂ ಆ ಸತ್ತ ಹಂದಿಗಳನ್ನು ತೆಗೆದುಕೊಂಡು ಸಂತೋಷದಿಂದ ಹೋಗಿ ರಾಮನ ಬಳಿಯಲ್ಲಿ ಗುಂಪು ಸೇರಿದರು. ಆ ರಾಮನು ಅವೆಲ್ಲವನ್ನೂ ಅವರ ಕೈಯಲ್ಲಿ ತೆಗೆಸಿಕೊಂಡು ಸೇನೆಯ ಶಿಬಿರಕ್ಕೆ ಹೋದನು.

೯೮. ಹೀಗೆ ರಾಮನು ಏಳುದಿನಗಳು ಆ ಕಾಡಿನಲ್ಲಿ ಸುಖವಾಗಿದ್ದು ಸೀತೆಯೊಡನೆ ನಾನಾಭೋಗಗಳನ್ನು ಹೊಂದಿ ಹಿಂದಿರುಗಿ ರಾಜಧಾನಿಗೆ ಹೋದನು.

೯೯-೧೦೦. ಆ ರಾಜಧಾನಿಯಲ್ಲಿ ರಾಮನು ಬ್ರಾಹ್ಮಣರನ್ನೂ ಕ್ಷತ್ರಿಯರನ್ನೂ ವೈಶ್ಯರನ್ನೂ ಕರೆಸಿದನು. ತನ್ನ ಜೊತೆಯಲ್ಲಿ ಬಂದಿದ್ದ ಆ ಕನ್ಯೆಯರಲ್ಲಿ ಯಾವಳು ಯಾರ ಮಗಳೋ ಯಾವಳು ಯಾರ ಮೊಮ್ಮಗಳೋ ಅವರವರನ್ನು ಅವರವರಿಗೆ ಕೊಟ್ಟು ಅವರೆಲ್ಲರನ್ನೂ ಕಳುಹಿಸಿಬಿಟ್ಟನು. ಹೋಗುವಾಗ ಅವರೆಲ್ಲರಿಗೂ ಬೇರೆ ಬೇರೆಯಾಗಿ ಒಡವೆಗಳನ್ನೂ ಬಟ್ಟೆಗಳನ್ನೂ ಕೊಟ್ಟನು.

ತೇ ವಿಪ್ರಾದ್ಯಾಃ ಪುನರ್ಜ್ಞಾತಾ ಮೇನಿರೇ ನಿಜಬಾಲಿಕಾಃ ।
ತತಃ ಸ್ವಂ ಸ್ವಂ ಪುರಂ ನೀತ್ವಾ ನೃಪಾ ವೈಶ್ಯಾಃ ಪ್ರಭೋರ್ಗಿರಾ ॥ ೧೦೧ ॥

ನೃಪಪುತ್ರ್ಯೈರ್ವೈಶ್ಯಪುತ್ರ್ಯೈಸ್ತಾಸಾಂ ಚಕ್ರುಃ ಸುಮಂಗಲಂ ।
ರಾಮಪ್ರಸಾದಾತ್ತಾಃ ಪ್ರಾಪುಃ ಪತಿಸಂಗಸುಖಂ ಸ್ತ್ರಿಯಃ ॥ ೧೦೨ ॥

ತಾಶ್ಚಾಪಿ ದ್ವಿಜಪುತ್ರ್ಯೈಸ್ತು ಪಿತೄಣಾಮೇವ ಸದ್ಮಸು ।
ನಿನ್ಯುಃ ಸ್ವೀಯಾಯುಷಂ ತತ್ರ ವ್ರತಚರ್ಯಾದಿಭಿಸ್ಸುಖಂ ॥ ೧೦೩ ॥

ವಿವಾಹಕಾಲಾತಿಕ್ರಮಣಾನ್ನತಾ ಉದ್ವಾಹಿತಾ ದ್ವಿಜೈಃ ।
ಜನ್ಮಾಂತರೇಣ ತಾಃ ಸರ್ವಾಃ ಕೃಷ್ಣಃ ಪತ್ನೀಃ ಕರಿಷ್ಯತಿ ॥ ೧೦೪ ॥

---

೧೦೧. ಆ ಬ್ರಾಹ್ಮಣರೇ ಮುಂತಾದವರು ತಮ್ಮ ತಮ್ಮ ಹೆಣ್ಣು ಮಕ್ಕಳನ್ನು ಮತ್ತೆ ಹುಟ್ಟಬಂದರೆಂದು ತಿಳಿದುಕೊಂಡರು. ರಾಜನ ಮಾತಿನಂತೆ ಅವರೆಲ್ಲರೂ ಅವರೆಲ್ಲರನ್ನೂ ತಮ್ಮ ತಮ್ಮ ಊರಿಗೆ ಕರೆದುಕೊಂಡು ಹೋದರು.

೧೦೨. ಅವರೆಲ್ಲರೂ ಆ ಹೆಣ್ಣುಮಕ್ಕಳನ್ನು ಅವರವರ ಜಾತಿಯವರಿಗೆ ಕೊಟ್ಟು ಮದುವೆಯನ್ನು ಮಾಡಿದರು. ಈ ರೀತಿಯಾಗಿ ರಾಮನ ಅನುಗ್ರಹದಿಂದ ಆ ಹೆಂಗಸರು ಪತಿಯ ಸುಖವನ್ನು ಪಡೆದರು.

೧೦೩. ಆ ಸಾಲ್ವರು ಬ್ರಾಹ್ಮಣ ಕನ್ನಿಕೆಯರು ಮಾತ್ರ ತಮ್ಮ ತಂದೆಗಳ ಮನೆಯಲ್ಲಿಯೇ ಇದ್ದುಕೊಂಡು ವ್ರತಾದಿಗಳನ್ನು ಮಾಡಿಕೊಂಡಿರುತ್ತ ತಮ್ಮ ಆಯುಷ್ಯವನ್ನು ಸುಖವಾಗಿ ಕಳೆದರು.

೧೦೪. ಅವರಿಗೆ ವಿವಾಹದ ಕಾಲವು ಮೀರಿಹೋದುದರಿಂದ ಅವರನ್ನು ಅವರ ಜನಗಳಾರೂ ಮದುವೆಮಾಡಿಕೊಳ್ಳಲಿಲ್ಲ. ಜನ್ಮಾಂತರದಲ್ಲಿ ಅವರುಗಳು ಕೃಷ್ಣನಿಗೆ ಹೆಂಡತಿಯರಾಗುತ್ತಾರೆ.

ಅಥ ರಾಮಸ್ಸುಬಾಹೋಶ್ಚ ಪುತ್ರಸ್ಯ ಮಧುರಾಂ ಪುರೀಂ ।
ವಿವಾಹಾರ್ಥಂ ಸೀತಯಾ ಸ ಪೌರೈರ್ಜಾನಪದೈರ್ಯಯೌ ॥ ೧೦೫ ॥

ತತ್ರ ವೈವಾಹಿತಂ ಕರ್ಮ ಸಂಪಾದ್ಯ ರಘುನಂದನಃ ।
ತಸ್ಥೌ ತತ್ರ ಕಿಯತ್ಕಾಲಂ ಮಧುರಾಯಾಂ ಯಥಾಸುಖಂ ॥ ೧೦೬ ॥

ಏಕದಾ ಜಾನಕೀವಾಕ್ಯಾತ್ಕಾಳಿಂದ್ಯಾಸ್ಸೈಕತೇ ಶುಭೇ ।
ನಿಶಾಯಾಂ ಹೇಮಪರ್ಯಂಕೇ ಸುಖಂ ಸುಷ್ವಾಪ ರಾಘವಃ ॥ ೧೦೭ ॥

ಏತಸ್ಮಿನ್ನಂತರೇ ದಾಸೀರ್ದಾಸಾನ್ ದೃಷ್ಟ್ವಾ ವಿನಿದ್ರಿತಾನ್ ।
ಸ್ತ್ರೀರೂಪೇಣಾಥ ಕಾಳಿಂದೀ ರಾಮಾಘ್ರಿಂ ಸಂಸ್ಪೃಶಚ್ಛನೈಃ ॥ ೧೦೮ ॥

ತತೋ ರಾಮಃ ಪ್ರಬುದ್ಧೋಽಭೂದ್ದದರ್ಶ ಪುರತಃ ಸ್ಥಿತಾಂ ।
ಸೂರ್ಯಸ್ಯ ತನಯಾಂ ಪುಣ್ಯಾಂ ಕಾಳಿಂದೀಂ ಕಂಜಲೋಚನಾಂ ॥ ೧೦೯ ॥

---

೧೦೫. ಒಂದುಸಾರಿ ರಾಮನು ಸುಬಾಹುವಿದ್ದ ಮಧುರೆಗೆ ಆ ಸುಬಾಹುವಿನ ಮಗನ ಮದುವೆಗೋಸ್ಕರ ಸೀತೆಯೊಡನೆಯೂ ಪಟ್ಟಣಿಗರೊಡನೆಯೂ ಹೋದನು.

೧೦೬. ಅಲ್ಲಿ ತಾನು ಹೋಗಿದ್ದ ಮದುವೆಯ ಕಾರ್ಯವು ನೆರವೇರಿತು. ಆದರೂ ಕೆಲವು ಕಾಲಗಳವರೆಗೆ ಅಲ್ಲಿಯೇ ಸುಖವಾಗಿದ್ದನು.

೧೦೭. ಒಂದುಸಾರಿ ಜಾನಕಿಯ ಮಾತಿನಂತೆ ಕಾಳಿಂದೀ ನದಿಯ ಮರಳಿನಮೇಲೆ ರಾತ್ರಿಯಲ್ಲಿ ಚಿನ್ನದ ಮಂಚವನ್ನು ಹಾಕಿಸಿಕೊಂಡು ಸುಖವಾಗಿ ನಿದ್ರಿಸುತ್ತಿದ್ದನು.

೧೦೮. ಆ ಕಾಲದಲ್ಲಿ ದಾಸಿಯರೂ ದಾಸರೂ ಮಲಗಿರುವಾಗ ಕಾಳಿಂದೀ ನದಿಯು ಹೆಂಗಸಿನ ಆಕಾರವನ್ನು ಹೊಂದಿ ರಾಮನ ಪಾದಗಳನ್ನು ಮೆತ್ತಗೆ ಮುಟ್ಟಿದಳು.

೧೦೯. ಆಗ ರಾಮನು ಎಚ್ಚರಗೊಂಡು ಎದುರಿಗೆ ನಿಂತಿರುವ ಪುಣ್ಯಮೂರ್ತಿಯೂ ಸೂರ್ಯನ ಮಗಳೂ ಆದ ಕಾಳಿಂದಿಯನ್ನು ನೋಡಿದನು.

ದಿವ್ಯಾಲಂಕಾರವಸ್ತ್ರಾಢ್ಯಾಂ ದಿವ್ಯನೂಪುರಗರ್ಜಿತಾಂ ।
ನೀಲೋತ್ಪಲದಳಶ್ಯಾಮಾಂ ಹೇಮಕುಂಭಪಯೋಧರಾಂ ॥ ೧೧೦ ॥

ಸ್ಮಿತಾನನಾಂ ಸುರಂಭೋರುಂ ಕಿಂಕಿಣೀಜಾಲಮಾಲಿಕಾಂ ।
ಕೇಯೂರಕುಂಡಲಾಢ್ಯಾಂ ತಾಂ ಪ್ರೋತ್ತುಂಗಜಘನಾಂ ವರಾಂ ॥೧೧೧॥

ತಾಂ ತಾದೃಶಾಂ ಪ್ರಭುರ್ದೃಷ್ಟ್ವಾ ಕ್ಷಣಂ ತೂಷ್ಣೀಂ ವ್ಯಚಿಂತಯತ್ ।
ಧನ್ಯೋ ವಿಧಾತಾ ಯೇನೇಯಂ ಕಾಳಿಂದೀ ರಚಿತಾ ಪುರಾ ॥ ೧೧೨ ॥

ಇತ್ಯಾಶ್ಚರ್ಯಮನಾ ಭೂತ್ವಾ ತತ್ಸೌಂದರ್ಯಂ ವ್ಯಲೋಕಯತ್ ।
ಅಥ ರಾಮಸ್ಸ ತಾಂ ಪ್ರಾಹ ಮದಾಗಮನಕಾರಣಂ ॥ ೧೧೩ ॥

---

೧೧೦. ದಿವ್ಯವಾದ ಅಲಂಕಾರಗಳನ್ನು ತೊಟ್ಟಿದ್ದಳು. ಉತ್ತಮವಾದ ವಸ್ತ್ರಗಳನ್ನು ಧರಿಸಿದ್ದಳು. ಹೊಳಪಾದ ನೂಪುರಗಳನ್ನೂ ಹಾಕಿಕೊಂಡಿದ್ದಳು. ನೀಲೋತ್ಪಲದಂತೆ ಕಪ್ಪಾಗಿದ್ದಳು. ಚಿನ್ನದ ಕಲಶಗಳಂತಿರುವ ಸ್ತನಗಳನ್ನು ಧರಿಸಿದ್ದಳು.

೧೧೧. ಮುಗುಳುನಗೆಯನ್ನು ಬೀರುತ್ತಿದ್ದಳು. ಬಾಳೆಯಕಂಬಗಳಂತೆ ತೊಡೆಗಳು ವರ್ತುಳವಾಗಿದ್ದುವು. ಉಡಿಗೆಜ್ಜೆಗಳನ್ನು ಧರಿಸಿದ್ದಳು. ಭುಜಕೀರ್ತಿಗಳನ್ನು ಓಲೆಗಳನ್ನೂ ಹೊಂದಿದ್ದಳು. ಉನ್ನತವಾದ ಜಘನಗಳಿದ್ದುವು.

೧೧೨. ಪ್ರಭುವಾದ ರಾಮನು ಈ ರೀತಿಯಾಗಿ ಬಂದಿರುವ ಆ ಕಾಳಿಂದಿಯನ್ನು ನೋಡಿದನು. ಕ್ಷಣಕಾಲ ಯೋಚಿಸುತ್ತ ಸುಮ್ಮನಿದ್ದನು. ಈ ಸುಂದರಿಯಾಗಿ ಕಾಳಿಂದಿಯನ್ನು ರಚಿಸಿದ ಆ ಬ್ರಹ್ಮನು ಧನ್ಯನಾಗಿರುವನು.

೧೧೩. ಹೀಗೆ ಆಶ್ಚರ್ಯಪಡುತ್ತಾ ರಾಮನು ಆಕೆಯ ಸೌಂದರ್ಯವನ್ನು ನೋಡುತ್ತಿದ್ದನು. ಅನಂತರ ರಾಮನು ಆಕೆಯು ಬರಲು ಕಾರಣವೇನೆಂಬುದನ್ನು ಕೇಳಿದನು.

ಸಾ ಪ್ರಾಹ ತಂ ವಿಲಜ್ಜಂತೀ ಸರ್ವಂ ತ್ವಂ ವೇತ್ಸಿ ರಾಘವ ।
ತತೋ ರಾಮೋಽಬ್ರವೀದ್ವಾಕ್ಯಂ ಚೈಕಪತ್ನೀವ್ರತಂ ಮಮ　　|| ೧೧೪ ||

ಇಹ ಜನ್ಮನಿ ಕಾಳಿಂದಿ ತ್ವಂ ಯಾಹಿ ಸ್ವಸ್ಥಲಂ ಜವಾತ್ ।
ಯಾವತ್ಸೀತಾ ಪ್ರಬುದ್ಧಾ ನ ಜಾತೇಯಂ ತಾವದೇವ ಹಿ　　|| ೧೧೫ ||

ಸಾ ರಾಮವಾಕ್ಯರೇಣ್ಯೈವ ಭಿನ್ನಮರ್ಮಸ್ಥಲಾ ನದೀ ।
ಮೂರ್ಛಾಮವಾಪ ತತ್ರೈವ ತಾಂ ದೃಷ್ಟ್ವಾ ಸೋಽಬ್ರವೀತ್ಪುನಃ || ೧೧೬ ||

ಉತ್ತಿಷ್ಠೋತ್ತಿಷ್ಠ ಕಾಳಿಂದಿ ಶೃಣು ತ್ವಂ ವಚನಂ ಮಮ ।
ದ್ವಾಪರೇ ಕೃಷ್ಣರೂಪೇಣ ತ್ವಾಂ ಕರಿಷ್ಯಾಮಹಂ ಸ್ತ್ರಿಯಂ　　|| ೧೧೭ ||

ವಿವಾಹೇನೈವ ಗಚ್ಛಾದ್ಯ ತದಾ ಭೋಕ್ಷ್ಯಸಿ ಮತ್ಸುಖಂ ।
ಇತಿ ಶ್ರುತ್ವಾ ರಾಮವಾಕ್ಯಂ ಕಿಂಚಿತ್ತುಷ್ಟಮನಾ ನದೀ　　|| ೧೧೮ ||

---

೧೧೪. ಆಕೆಯು ಲಜ್ಜೆಪಡುತ್ತಾ ರಾಮನನ್ನು ಕುರಿತು ಎಲೈ ರಾಮನೇ ! ನೀನು ಸರ್ವಜ್ಞನಾದುದರಿಂದ ನಿನಗೆಲ್ಲವೂ ತಿಳಿದೇ ಇದೆ. ಎಂದಳು. ಅನಂತರ ರಾಮನು ಇಂತೆಂದನು. ನನಗೆ ಈ ಜನ್ಮದಲ್ಲಿ ಏಕಪತ್ನೀವ್ರತವಿರುವುದರಿಂದ ನಿನ್ನ ಇಷ್ಟವು ನೆರವೇರುವಂತಿಲ್ಲ. ನೀನು ಬೇಗನೆ ನಿನ್ನ ಸ್ಥಳಕ್ಕೆ ಹೋಗು.

೧೧೫–೧೧೬. ಸೀತೆಯು ಎಚ್ಚೆತ್ತು ನಿನ್ನನ್ನು ನೋಡುವುದರೊಳಗೆ ಬೇಗ ಇಲ್ಲಿಂದ ಹೊರಡು ಎಂದನು. ಆಕೆಯು ರಾಮನ ಈ ನಿರಾಕರಣದಿಂದ ಬಹು ನೊಂದವಳಾಗಿ ಅಲ್ಲಿಯೇ ಮೂರ್ಛೆಹೋದಳು. ಅನಂತರ ಪ್ರಭುವು ಇಂತೆಂದನು.

೧೧೭. ಎಲೈ ಕಾಳಿಂದಿಯೇ ! ಏಳು ! ಏಳು ! ನನ್ನ ಮಾತನ್ನು ಕೇಳು. ದ್ವಾಪರಯುಗದಲ್ಲಿ ಕೃಷ್ಣಾವತಾರವನ್ನು ಮಾಡುತ್ತೇನೆ. ಆಗ ನಾನು ನಿನ್ನನ್ನು ಮದುವೆಮಾಡಿಕೊಳ್ಳುತ್ತೇನೆ.

೧೧೮. ಆಗ ನಿನ್ನನ್ನು ಮದುವೆಯಾಗಿ ಪತ್ನಿಯನ್ನಾಗಿ ಪರಿಗ್ರಹಿಸುತ್ತೇನೆ. ಆಗ ನೀನು ನನ್ನೊಡನೆ ಸುಖಪಡುತ್ತೀಯಂತೆ. ಈ ರೀತಿಯಾಗಿ ರಾಮನು ಹೇಳಿದುದನ್ನು ಕೇಳಿ ಆಕೆಗೆ ಸ್ವಲ್ಪ ಸಮಾಧಾನವು ಬಂದಿತು.

ನತ್ವಾ ರಾಮಂ ಯಯೌ ತೂಷ್ಣೀಂ ರಾಮಧ್ಯಾನಪರಾಭವತ್ ।
ತತೋ ರಾಮೋಽಪಿ ಸೈನ್ಯೇನ ಸೀತಯಾ ಸ್ವಪುರೀಂ ಯಯೌ ॥ ೧೧೯ ॥

ಏವಂ ಸಾಕೇತನನರೇ ರಾಮಸ್ತ್ರೀಬಂಧುದೇಹಜೈಃ ।
ಚರಿತಾನ್ಯಕರೋನ್ನಾನಾಪಾಪಘ್ನಾನಿ ಶ್ರವಾದಿನಾಃ ॥ ೧೨೦ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ರಾಜ್ಯಕಾಂಡೇ ಪೂರ್ವಾರ್ಧೇ ಷೋಡಶ
ಸಹಸ್ರಾಧಿಕ ಕಾಳಿಂದ್ಯಾದಿ ಪಂಚಸ್ತ್ರೀ ವರದಾನಂ
ನಾಮ ದ್ವಾದಶಸ್ಸರ್ಗಃ

---

೧೧೯. ಆಗ ರಾಮನಿಗೆ ಆಕೆಯು ನಮಸ್ಕರಿಸಿ ಹೊರಟು ಹೋದಳು. ಮತ್ತು ಯಾವಾಗಲೂ ರಾಮನ ಧ್ಯಾನವನ್ನೇ ಮಾಡುತ್ತಿದ್ದಳು. ಅನಂತರ ರಾಮನು ಸೀತೆಯೊಡನೆಯೂ ಸೈನ್ಯದೊಡನೆಯೂ ತನ್ನ ರಾಜಧಾನಿಗೆ ಹೊರಟು ಹೋದನು.

೧೨೦. ರಾಮನು ಅಯೋಧ್ಯೆಯಲ್ಲಿ ಸುಖದಿಂದಿರುತ್ತ ಶ್ರವಣದಿಂದಲೇ ಪಾಪಹಾರಕವಾದ ಅನೇಕ ಕೆಲಸಗಳನ್ನು ಸೀತೆಯೊಡನೆಯೂ ಮಕ್ಕಳೊಡನೆಯೂ ತಮ್ಮಂದಿರೇ ಮುಂತಾದವರೊಡನೆಯೂ ಮಾಡಿರುವನು.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಪೂರ್ವಾರ್ಧದಲ್ಲಿ ಹದಿನಾರು
ಸಾವಿರ ಜನ ಹೆಂಗಸರಿಗೂ ಕಾಳಿಂದ್ಯಾದಿ ಐದು ಜನ ಹೆಂಗಸರಿಗೂ
ವರದಾನವೆಂಬ ಹನ್ನೆರಡನೆಯ ಸರ್ಗವು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ

॥ ಹನ್ನೆರಡನೆಯ ಸರ್ಗದ ಸಾರಾಂಶವು ॥

ಶ್ರೀರಾಮನು ಅಲ್ಲಿದ್ದ ಆ ಹದಿನಾರುಸಹಸ್ರಜನ ಹೆಂಗಸರನ್ನು ನೀವಾರೆಂದು ಕೇಳಲು ಅವರು ತಮ್ಮನ್ನು ದುಂದುಭಿ ರಾಕ್ಷಸನು ಇಲ್ಲಿಗೆ ತಂದು ಸೆರೆಯಲ್ಲಿಟ್ಟಿರುವುದಾಗಿಯೂ ತಮ್ಮೆಲ್ಲರನ್ನೂ ಏಕಕಾಲದಲ್ಲಿ ಮದುವೆಯಾಗುತ್ತಾನೆಂಬುದಾಗಿಯೂ ಹೇಳಿದರು.

ಇದನ್ನು ಕೇಳಿ ಅವರೆಲ್ಲರನ್ನೂ ಸಮಾಧಾನಪಡಿಸಿ, ಅವರನ್ನು ಕೈಯಿಂದ ಮುಟ್ಟಿ ಯುವತಿಯರಾಗುವಂತೆ ಮಾಡಿ ಹಿಂದಿನ ನಾಲ್ವರು ಹೆಂಗಸರ ಚರಿತ್ರೆಯನ್ನೂ ತಿಳಿಸಿದನು.

ಅನಂತರ ಇವರೆಲ್ಲರೂ ಅವನಲ್ಲಿ ಮೋಹಿತರಾಗಲು ತನ್ನ ಏಕಪತ್ನೀವ್ರತದ ನಿಯಮವನ್ನು ತಿಳಿಸಿ, ಕೃಷ್ಣಾವತಾರದಲ್ಲಿ ಅವರೆಲ್ಲರನ್ನೂ ಮದುವೆಯಾಗುತ್ತೇನೆಂದು ತಿಳಿಸಿದನು.

ಅನಂತರ ಇವರೆಲ್ಲರನ್ನೂ ಸೇನೆಯಿರುವ ಶಿಬಿರದ ಬಳಿಗೆ ಕರೆದುಕೊಂಡು ಹೋಗಿ ಅಲ್ಲಿ ಸೀತೆಗೆ ಇವರ ವಿಷಯವೆಲ್ಲವನ್ನೂ ತಿಳಿಸಿದನು. ಮತ್ತು ಅವರುಗಳನ್ನು ಅವರವರ ಪಾಲಕರ ಮನೆಗಳಿಗೂ ಕಳುಹಿಸಿದನು.

ಶ್ರೀರಾಮನು ಒಂದುಸಾರಿ ಮಥುರೆಗೆ ಹೋಗಿದ್ದಾಗ ಕಾಳಿಂದಿಯು ಮರಳಿನ ಮೇಲೆ ರಾತ್ರಿಯಲ್ಲಿ ವಿನೋದವಾಗಿ ಮಲಗಿರಲು ಕಾಳಿಂದಿಯು ಹೆಂಗಸಿನ ರೂಪವನ್ನು ಹೊಂದಿ ರಾಮನ ಬಳಿಗೆ ಬಂದು ರಮಿಸುವಂತೆ ಕೇಳಿಕೊಂಡಳು. ಆದಕ್ಕೆ ರಾಮನು ತಾನು ಈಗ ಏಕಪತ್ನೀವ್ರತದಲ್ಲಿರುವಂತೆ ಹೇಳಿ ಮುಂದಿನ ಕೃಷ್ಣಾವತಾರದಲ್ಲಿ ನಿನ್ನನ್ನು ಮದುವೆಯಾಗಿ ಸುಖವನ್ನನುಭವಿಸುತ್ತೇನೆ ಎನ್ನಲು ಆಕೆಯು ಹೊರಟುಹೋದಳು.

ಶ್ರೀರಾಮನು ಅಯೋಧ್ಯೆಯಲ್ಲಿದ್ದಾಗಲೂ ಇಂತಹ ಅನೇಕ ವಿಧವಾದ ಕೌತುಕಗಳನ್ನು ತೋರಿಸಿದನು. ಅವೆಲ್ಲವೂ ಪಾಪಹಾರಕವಾದ ಚರಿತ್ರೆಗಳಾಗಿವೆ.

ಶ್ರೀಮದಾನಂದರಾಮಾಯಣೇ ಸಪ್ತಮಃ ರಾಜ್ಯಕಾಂಡೇ ಪೂರ್ವಾರ್ಧಃ
ಸಂಪೂರ್ಣಃ



ಶ್ರೀಮದಾನಂದರಾಮಾಯಣದಲ್ಲಿ ಏಳನೆಯದಾದ ರಾಜ್ಯಕಾಂಡದ
ಪೂರ್ವಾರ್ಧವು ಮುಗಿದುದು

॥ ಶ್ರೀರಾಮಾಯ ನಮಃ ॥



ಮೈಸೂರು ಶಿವರಾಂಪೇಟೆಯಲ್ಲಿರುವ ಶ್ರೀ ಹನುಮಾನ್ ಪವರ್ ಪ್ರೆಸ್ಸಿನಲ್ಲಿ
ಪ್ರೊಪ್ರೈಟರ್ ಎನ್. ನಾರಾಯಣರಾಜುರವರಿಂದ ಮುದ್ರಿಸಲ್ಪಟ್ಟಿತು. ತಾ॥ 10-2-48.